ಸರೂರು ಹಾಲುಮತ ಸಂಪ್ರದಾಯ: ಸಾಂಸ್ಕೃತಿಕ ಅಧ್ಯಯನ

(ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಸಣ್ಣಪಾಲಯ್ಯ ಎಸ್.ಎಂ.

ಮಾರ್ಗದರ್ಶಕರು

ಡಾ. ಎಫ್.ಟಿ. ಹಳ್ಳಿಕೇರಿ

ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾನಿಕಾಯ

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ- ೫೮೩ ೨೭೬

೨೦೧೬

ಸರೂರು ಹಾಲುಮತ ಸಂಪ್ರದಾಯ: ಸಾಂಸ್ಕೃತಿಕ ಅಧ್ಯಯನ

(ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಸಣ್ಣಪಾಲಯ್ಯ ಎಸ್.ಎಂ.

ಮಾರ್ಗದರ್ಶಕರು
ಡಾ. ಎಫ್.ಟಿ. ಹಳ್ಳಿಕೇರಿ
ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾ ನಿಕಾಯ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೬

ಪ್ರಮಾಣ ಪತ್ರ

ಸರೂರು ಹಾಲುಮತ ಸಂಪ್ರದಾಯ: ಸಾಂಸ್ಕೃತಿಕ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ. ಎಫ್.ಟಿ. ಹಳ್ಳಿಕೇರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಭಾಷಾ ನಿಕಾಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ :

ಸಣ್ಣಪಾಲಯ್ಯ ಎಸ್ ಎಂ

ದೃಢೀಕರಣ ಪತ್ರ

ಸಣ್ಣಪಾಲಯ್ಯ ಎಸ್ ಎಂ ಇವರು **ಸರೂರು ಹಾಲುಮತ ಸಂಪ್ರದಾಯ: ಸಾಂಸ್ಕೃತಿಕ ಅಧ್ಯಯನ** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ :

ಡಾ. ಎಫ್.ಟಿ. ಹಳ್ಳಿಕೇರಿ

ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ ಹಾಗೂ ಅಧ್ಯಯನ ಸಮೀಕ್ಷೆ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ ಹಾಗೂ ಅಧ್ಯಯನ ಸಮೀಕ್ಷೆ

ಭಾರತವು ಅನೇಕ ಧರ್ಮ ಮತ್ತು ಜನಸಮುದಾಯಗಳನ್ನು ಹೊಂದಿದ ದೇಶ. ಇಲ್ಲಿ ಯಾವುದೇ ಜನಸಮುದಾಯವಾಗಲಿ, ತನ್ನದೆ ಆದ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುತ್ತದೆ. ಈ ಹಿನ್ನೆಲೆಯಲ್ಲಿ ಕುರುಬ ಸಮುದಾಯವು ಒಂದಾಗಿದೆ. ಇದು ಚಾರಿತ್ರಿಕ ಮತ್ತು ಸಾಂಸ್ಕೃತಿಕವಾಗಿ ಬಹುದೊಡ್ಡ ಪರಂಪರೆಯನ್ನು ಹೊಂದಿದೆ. ಮೂಲತಃ ದ್ರಾವಿಡ ಸಂಸ್ಕೃತಿಯವರಾದ ಕುರುಬರು ಪ್ರಾಚೀನ ಕಾಲದಿಂದಲೂ ಕುರಿಸಾಕಾಣಿಕೆ, ಕಂಬಳಿನೆಯ್ಗೆ ಹಾಗೂ ಕೃಷಿಯನ್ನು ಪ್ರಧಾನ ಉದ್ಯೋಗವನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಇವರು ಇಂದಿಗೂ ನಡೆಯುವ ಹಬ್ಬ, ಆಚರಣೆ, ಉತ್ಸವ, ನಂಬಿಕೆ ಮತ್ತು ಸಂಪ್ರದಾಯಗಳನ್ನು ಕಾಲಕ್ಕೆ ಅನುಗುಣವಾಗಿ ಆಚರಿಸಿಕೊಂಡು ಬರುತ್ತಿದ್ದಾರೆ. ಆದ್ದರಿಂದ ತಮ್ಮ ಸಂಸ್ಕೃತಿಯ ಮೂಲ ಸೊಗಡನ್ನು, ಜೀವನ ಪದ್ಧತಿಯನ್ನು ಪರಂಪರಾಗತವಾಗಿ ಇಂದಿಗೂ ಉಳಿಸಿ, ಬೆಳೆಸಿಕೊಂಡು ಬಂದಿದ್ದಾರೆ. ಹೀಗೆ ಈ ಎಲ್ಲ ಆಚರಣೆ ಸಂಪ್ರದಾಯಗಳ ವಿಧಿವಿಧಾನಗಳನ್ನು ಸುಗಮವಾಗಿ ನಡೆಸಬೇಕೆಂದರೆ ಪುರೋಹಿತ ವರ್ಗವೊಂದು ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಜನಾಂಗಕ್ಕೂ ಗುರುವರ್ಗವೊಂದು ಇರುವಂತೆ ಕುರುಬ ಜನಾಂಗದವರಿಗೂ ಅವರದೇ ಆದ 'ಒಡೆಯರು' ಎಂಬ ಪ್ರಾಚೀನ ಪುರೋಹಿತ ವರ್ಗವಿರುವುದು ಕಂಡುಬರುತ್ತದೆ. ಇವರು ಕುರುಬರಲ್ಲಿ ಒಂದು ಪ್ರತ್ಯೇಕವಾದ ಉಪಪಂಗಡವಾಗಿ ಕಂಡುಬರುತ್ತಾರೆ.

ವಿಶೇಷವೆಂದರೆ ಒಡೆಯರೆಲ್ಲರೂ ಸ್ವಗೋತ್ರದವರಾಗಿದ್ದು, ಅಣ್ಣ-ತಮ್ಮಂದಿರೆಂಬ ನಂಬಿಕೆಯಿದೆ. ಆದ್ದರಿಂದ ಇವರಲ್ಲಿ ಕೊಡುಕೊಳ್ಳುವಿಕೆಯಿದ್ದರೆ, ಅದು ಕುರುಬರಲ್ಲಿ ಮಾತ್ರ. ಹೀಗಾಗಿ ಕುರುಬರ ಗುರುಪರಂಪರೆಯಲ್ಲಿ ಒಡೆಯರಿಗೆ ಅಗ್ರಸ್ಥಾನವಿದೆ. ಇವರು ಕುರುಬರ ಜನನ, ನಾಮಕರಣ, ಮದುವೆ, ಮರಣದಂಥ ಎಲ್ಲ ಕಾರ್ಯಗಳಲ್ಲಿ ಲಿಂಗಾಯತ ಜಂಗಮರಂತೆ ನಿಂತು ಪೌರೋಹಿತ್ಯವನ್ನು

ನಡೆಸಿಕೊಡುತ್ತಾರೆ. ಆದ್ದರಿಂದ ಒಡೆಯರಿಗೆ ಕುರುಬ ಸಮುದಾಯದಲ್ಲಿ ಉನ್ನತವಾದ ಗೌರವಸ್ಥಾನವಿದೆ. ಹೀಗೆ ಕುರುಬರಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿದ ಗುರುಒಡೆಯರು ರೇವಣಸಿದ್ಧ, ಸಿದ್ಧರಾಮೇಶ್ವರ ಮತ್ತು ಅಮೋಘಸಿದ್ಧನ ಪರಮ ಆರಾಧಕರಾಗಿ ಕಂಡುಬರುತ್ತಾರೆ.

ಈ ಗುರುಒಡೆಯರ ಪರಂಪರೆಯಲ್ಲಿ ಆದ್ಯ ಗುರುವಾಗಿ ಶಾಂತಮುತ್ತಯ್ಯ ಕಂಡುಬರುತ್ತಾರೆ. ಇವರ ಕ್ಷೇತ್ರ ಸರೂರಾಗಿದೆ. ಈ ಗ್ರಾಮದಲ್ಲಿ ಶಾಂತೊಡೆಯರು ಮತ್ತು ಮಂಕೊಡೆಯ ಪರಂಪರೆಯ ಅನುಯಾಯಿಗಳಿದ್ದು, ಇವರು ತಮ್ಮದೇ ಆದ ಸಾಂಸ್ಕೃತಿಕ ಗುರುಪರಂಪರೆಯನ್ನು ವಿಸ್ತರಿಸಿ, ಉಳಿಸಿಕೊಂಡು ಬಂದಿದ್ದಾರೆ. ಹೀಗಾಗಿ ಈ ಪರಂಪರೆಯ ನೆಲೆಗಳು ಕರ್ನಾಟಕದಾದ್ಯಂತ ಹಾಗೂ ಆಂಧ್ರ, ಮಹಾರಾಷ್ಟ್ರ ಮತ್ತು ತಮಿಳುನಾಡುಗಳಲ್ಲಿ ಚದುರಿದ ರೂಪದಲ್ಲಿರುವುದು ಕಂಡುಬರುತ್ತದೆ. ಇಂತಹ ವಿಸ್ತಾರವಾದ ಗುರುಪಂರಂಪರೆಯನ್ನು ಹೊಂದಿದ ಸಮುದಾಯದ ಬಗ್ಗೆ ಕೆಲವು ಅಧ್ಯಯನಗಳು ನಡೆದಿದ್ದು, ಆದರೆ ಸರೂರ ಸಂಪ್ರದಾಯದ ಗುರುಒಡೆಯರ ಪರಂಪರೆಯ ಬಗ್ಗೆ ಅಧ್ಯಯನಗಳು ನಡೆದಿರುವುದಿಲ್ಲ. ಹಾಗಾಗಿ ಈ ಗುರುಪರಂಪರೆಯ ಬಗೆಗಿನ ಅಧ್ಯಯನದ ಕೊರತೆಯನ್ನು ನೀಗಿಸುವ ಸಲುವಾಗಿ ಮತ್ತು ಈ ಸಂಪ್ರದಾಯದ ಒಡೆಯರು ಕರ್ನಾಟಕ ಮತ್ತು ಆಂಧ್ರಪ್ರದೇಶದ ಗಡಿಭಾಗದಲ್ಲಿ ವಾಸವಿದ್ದ ನೆಲೆಗಳನ್ನು ಕುರಿತು ಮತ್ತು ಸರೂರಿನ ವಿಶೇಷತೆಯನ್ನು ಹೇಳುವುದರ ಮೂಲಕ ಒಡೆಯರ ಮೂಲ ನೆಲೆಯನ್ನು ತಿಳಿಸಲಾಗಿದೆ. ಹಾಗೆಯೇ ಈ ಒಡೆಯರ ಪರಂಪರೆಯು ಸಾಮಾಜಿಕ ಮತ್ತು ಧಾರ್ಮಿಕವಾಗಿ ಆಚರಿಸುವ ಸಂಪ್ರದಾಯಗಳು, ಅವರ ಜೀವನ ಪದ್ಧತಿ, ಹೀಗೆ ಅವರ ಒಟ್ಟಾರೆ ಸಾಂಸ್ಕೃತಿಕ ಬದುಕಿನ ಪ್ರಸ್ತುತತೆಯನ್ನು ಕುರಿತು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನವು ಸರೂರ ಹಾಲುಮತ ಸಂಪ್ರದಾಯದ ಸಾಂಸ್ಕೃತಿಕ ಅಧ್ಯಯನವಾಗಿದ್ದು, ಹಲವು ಉದ್ದೇಶಗಳನ್ನು ಹೊಂದಿದೆ. ಕುರುಬ ಜನಾಂಗದಲ್ಲಿ ಉಪಪಂಗಡವಾಗಿರುವ ಇವರನ್ನು ಪ್ರಾದೇಶಿಕವಾಗಿ ಅಯ್ನೋರು, ಗುರುವಿನವರು, ಗುರುವಲಯ್ಯ ಎಂದೆಲ್ಲ ಕರೆಯುವರು. ಇವರು ತಮ್ಮದೇ ಆದ ಸಾಂಸ್ಕೃತಿಕ ಬದುಕನ್ನು ಕಟ್ಟಿ ಬೆಳೆಸಿಕೊಂಡು ಬಂದಿದ್ದಾರೆ. ಇವರು ಲಿಂಗಧಾರಿಗಳು, ಕಟ್ಟಾ ಸಸ್ಯಾಹಾರಿಗಳಾಗಿದ್ದಾರೆ. ಕುರುಬರ ಎಲ್ಲ ಕಾರ್ಯಗಳನ್ನು ಇವರೇ ಮುಂದೆ ನಿಂತು ನೆರವೇರಿಸಿಕೊಡುತ್ತಾರೆ. ಇಂತಹ ವಿಶಿಷ್ಟವಾದ ಸ್ಥಾನವನ್ನು ಹೊಂದಿದ ಗುರುವರ್ಗಕ್ಕೆ ಮೂಲಕೇಂದ್ರ ಸರೂರಾಗಿದೆ. ಹೀಗಾಗಿ ಅವರ ಸಾಂಸ್ಕೃತಿಕ ಗುರುಪರಂಪರೆಯ ಚಿತ್ರಣವನ್ನು ಅನಾವರಣಗೊಳಿಸುವ ಉದ್ದೇಶವನ್ನು ಹೊಂದಿದೆ.

ಈ ಸಂಪ್ರದಾಯದ ಗುರುಪರಂಪರೆಯ ಬಗ್ಗೆ ಕೆಲವು ಆಕರಗಳು ದೊರೆಯುತ್ತವೆ. ತಗರಪವಾಡ, ಸಿದ್ಧಮಂಕಚರಿತೆ, ರಸ್ತಾಪುರ ಭೀಮಕವಿಯ ಹಾಲ್ಮತೋತ್ತೇಜಕ ಪುರಾಣ, ಚನ್ನಬಸವ ಕವಿಯ

ಹಾಲುಮತ ಪುರಾಣವು, ಬಸವಣೆಪ್ಪ ನೀಲಪ್ಪ ಹಳವಳ್ಳಿ ಅವರ ಹಾಲುಮತ ಪುರಾಣ, ಹಾಗೆಯೇ ಶಿರವಾಳ ಶಾಸನ, ತುರುವೇಕೆರೆ ತಾಮ್ರಶಾಸನ ಮತ್ತು ಸರೂರಿನ ಎರಡು ಶಾಸನಗಳು ಲಭ್ಯವಿದ್ದು, ಕೆಲವು ದಾಖಲೆ ಪತ್ರಗಳು ದೊರೆತಿವೆ. ಈ ಎಲ್ಲಾ ಆಕರಗಳನ್ನು ಇಟ್ಟುಕೊಂಡು ಪ್ರಸ್ತುತ ಅಧ್ಯಯನವನ್ನು ಸಿದ್ಧಪಡಿಸಲಾಗಿದೆ. ಹಾಗೆಯೇ ಗುರುಒಡೆಯರ ಪರಂಪರೆಯಲ್ಲಿ ರೇವಣಸಿದ್ಧ ಪರಂಪರೆ, ಸಿದ್ಧರಾಮನ ಪರಂಪರೆ ಮತ್ತು ಅಮೋಘಸಿದ್ಧನ ಪರಂಪರೆ ಎಂದು ಮೂರು ಗುರುಪರಂಪರೆಗಳು ಕಂಡು ಬರುತ್ತಿದ್ದು, ಸರೂರ ಸಂಪ್ರದಾಯದ ಗುರುಒಡೆಯರೆಂದೇ ಹೇಳಿಕೊಂಡು ರೇವಣಸಿದ್ಧನ ಅನುಯಾಯಿಗಳಾಗಿ ಶಾಂತೊಡೆಯರು ಕಂಡುಬಂದರೆ, ಸಿದ್ಧರಾಮನ ಅನುಯಾಯಿಗಳಾಗಿ ಮಂಕೊಡೆಯರು ಕಂಡುಬರುತ್ತಾರೆ. ಈ ಪರಂಪರೆಯ ಒಡೆಯರು ತಮ್ಮ ಗುರುಪರಂಪರೆಯ ಮುಂದುವರಿಕೆಯಾಗಿ ಅನೇಕ ಶಾಖಾಮಠಗಳಾಗಿ ವಿಂಗಡಿಸಿಕೊಂಡು ಕರ್ನಾಟಕದಾದ್ಯಂತ ಮತ್ತು ಆಂಧ್ರದ ಗಡಿಭಾಗ ಪ್ರದೇಶದಲ್ಲಿ ನೆಲೆಸಿದ್ದಾರೆ. ಹಾಗೆಯೇ ಈ ಒಡೆಯರ ಪರಂಪರೆಯಲ್ಲಿ ಹೆಚ್ಚು ಪ್ರಚಲಿತಗೊಂಡವರ್ಯಾರು, ಅವರ ನೆಲೆಗಳು ಹಾಗೂ ಅವರ ಜೀವನ ಕ್ರಮವನ್ನು ಭೌಗೋಳಿಕ ಹಿನ್ನೆಲೆಯಲ್ಲಿ ಗುರುತಿಸಿ ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಗುರುಒಡೆಯರಿಗೆ ಕುರುಬರು ನೀಡಿದ ಸ್ಥಾನಮಾನಗಳು ಹಾಗೂ ಅವರ ನಡುವಿನ ಕೊಡು ಕೊಳ್ಳುವಿಕೆಯ ಸಂಬಂಧ ಮತ್ತು ಅನನ್ಯತೆಯನ್ನು ಗುರುತಿಸುವುದು, ಹಾಗೆಯೇ ಬದಲಾಗುತ್ತಿರುವ ಜೀವನಕ್ರಮಕ್ಕೆ ಹೊಂದಿಕೊಂಡಿರುವ ಗುರುಪರಂಪರೆಯ ಸಾಂಸ್ಕೃತಿಕ ಅನನ್ಯತೆಯ ಅಂಶಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಿ ವಿಶ್ಲೇಷಿಸಲಾಗಿದೆ.

ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಕರ್ನಾಟಕದಾದ್ಯಂತ ಹಾಗೂ ಆಂಧ್ರ ಗಡಿ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಕೈಗೊಳ್ಳುವುದರ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅಧ್ಯಯನಕ್ಕೆ ಕ್ಷೇತ್ರಕಾರ್ಯ ಒಂದು ಭಾಗವಾಗಿದ್ದು, ಅವಲೋಕನ, ಸಂದರ್ಶನ, ಪ್ರಶ್ನಾವಳಿ, ಸಹಭಾಗಿತ್ವ ಹಾಗೂ ಗುಂಪು ಚರ್ಚೆ ಮಾಡುತ್ತಾ ಜಾತ್ರೆ ಉತ್ಸವಗಳಲ್ಲಿ ಭಾಗವಹಿಸಿ ಮಾಹಿತಿಯನ್ನು ಕಲೆಹಾಕಲಾಗಿದೆ. ಇದರ ಜೊತೆಗೆ ಸಂಶೋಧನ ವಿಷಯಕ್ಕೆ ಸಂಬಂಧಿಸಿದಂತೆ, ಲಿಖಿತ ಮತ್ತು ಮೌಖಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಹಾಗೆಯೇ ಅಧ್ಯಯನಕ್ಕೆ ಪೂರಕವಾದ ಆಕರಗಳನ್ನು ಬಳಸಿಕೊಂಡು ಅಧ್ಯಯನ ವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ವ್ಯಾಪ್ತಿ

'ಸರೂರ ಹಾಲುಮತ ಸಂಪ್ರದಾಯ : ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯದ ಅಧ್ಯಯನವು ವಿಜಯಪುರ ಜಿಲ್ಲೆಯ 'ಸರೂರು' ಪರಿಸರಕ್ಕೆ ಸೀಮಿತವಾಗದೇ ಹಾಲುಮತಸ್ಥರ ಆರಾಧ್ಯ ದೈವಗಳಾದ

ರೇವಣಸಿದ್ಧ-ಶಾಂತಮುತ್ತಯ್ಯ-ಶಾಂತೊಡೆಯರು, ಸಿದ್ಧರಾಮೇಶ್ವರ-ಮಂಕಸಿದ್ಧ-ಮಂಕೊಡೆಯರ ಪರಂಪರೆಯು ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ ವ್ಯಾಪಿಸಿದೆ. ಹಾಗಾಗಿ ಅಧ್ಯಯನದ ದೃಷ್ಟಿಯಿಂದ ಕರ್ನಾಟಕ ಹಾಗೂ ಆಂಧ್ರದ ಗಡಿ ಪ್ರದೇಶಕ್ಕೆ ವ್ಯಾಪ್ತಿಯನ್ನು ಮಿತಿಗೊಳಿಸಿಕೊಂಡಿದ್ದು, ಕರ್ನಾಟಕದಲ್ಲಿ ಹೈದ್ರಬಾದ್ ಕರ್ನಾಟಕ, ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ ಎಂದು ರೇವಣಸಿದ್ಧನ ನೆಲೆಗಳ ಹಿನ್ನಲೆಯಲ್ಲಿ ವರ್ಗಿಕರಿಸಿಕೊಳ್ಳಲಾಗಿದೆ. ಹಾಗೆಯೇ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ರಾಯದುರ್ಗಂ, ಕಲ್ಯಾಣದುರ್ಗಂ, ಬೆಳಗುಪ್ಪ, ಕುಂದುರ್ಪಿ, ಬ್ರಹ್ಮಸಮುದ್ರಂ, ಡಿ.ಹಿರೇಹಾಳ್, ವಜ್ರಕರೂರು, ಬೊಮ್ಮನಹಾಳ್ ಹಾಗೂ ಹಿಂದೂಪುರ ಮಂಡಲಗಳನ್ನು ಮತ್ತು ಕರ್ನೂಲ್ ಜಿಲ್ಲೆಯ ಆದೋನಿ, ಗುಂತಕಲ್ಲು, ಹಾಲಹರವಿ, ಆಲೂರು ಮಂಡಲ ಈ ಎಲ್ಲಾ ಪ್ರದೇಶಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿದೆ.

ಅಧ್ಯಯನದ ಸ್ವರೂಪ

'ಸರೂರು ಹಾಲುಮತ ಸಂಪ್ರದಾಯ: ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯದ ಅಧ್ಯಯನವು ಒಟ್ಟು ಎಂಟು ಅಧ್ಯಾಯಗಳನ್ನು ಹೊಂದಿದೆ. ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ ಹಾಗೂ ಅಧ್ಯಯನ ಸಮೀಕ್ಷೆಯನ್ನು ಒಳಗೊಂಡಿದೆ.

ಎರಡನೆಯ ಅಧ್ಯಾಯವು ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಆಕರಗಳಾದ ಲಿಖಿತ ಸಾಹಿತ್ಯ, ದಾಖಲು ಸಾಹಿತ್ಯ ಹಾಗೂ ಮೌಖಿಕ ಸಾಹಿತ್ಯ ಎಂದು ವಿಂಗಡಿಸಿದ್ದು, ಲಿಖಿತ ಸಾಹಿತ್ಯ ಆಕರಗಳಲ್ಲಿ ಕಾವ್ಯ, ಪುರಾಣಗಳು, ಕೃತಿ, ಲೇಖನಗಳು, ಶಾಸನಗಳು ಹಾಗೂ ದಾಖಲೆ ಪತ್ರಗಳಾಗಿ ವರ್ಗೀಕರಿಸಿಕೊಂಡು ಅವುಗಳ ಸ್ವರೂಪವನ್ನು ಅವಲೋಕಿಸಲಾಗಿದೆ.

ಮೂರನೆಯ ಅಧ್ಯಾಯವು ಸರೂರ ಹಾಲುಮತ ಸಂಪ್ರದಾಯದ ಸಮುದಾಯಗಳು ಎಂಬುದಾಗಿದ್ದು, ಈ ಅಧ್ಯಾಯದಲ್ಲಿ ಸರೂರಿನಲ್ಲಿ ನೆಲೆಸಿರುವ ಕುರುಬ ಸಮುದಾಯದ ಉಪ ಪಂಗಡವಾದ ಗುರುಒಡೆಯರ ಪರಂಪರೆಯನ್ನು ಹೇಳುವುದರ ಮೂಲಕ ಸರೂರು ಯಾವ ಪರಂಪರೆಯ ಗ್ರಾಮ ಎಂಬುದನ್ನು ಗುರುತಿಸಲಾಗಿದೆ. ಈ ಒಡೆಯರ ಪರಂಪರೆಯಲ್ಲಿ ಮಂಕಸಿದ್ಧ ಪರಂಪರೆ, ರೇವಣಸಿದ್ಧ ಪರಂಪರೆ ಹಾಗೂ ಅಮೋಘಸಿದ್ಧ ಪರಂಪರೆ ಈ ಮೂರು ಪರಂಪರೆಗಳನ್ನು ಗುರುತಿಸಲಾಗಿದೆ. ಹಾಗೆಯೇ ರೇವಣಸಿದ್ಧ ಮತ್ತು ಶಾಂತಮುತ್ತಯ್ಯನಿಗಿರುವ ವಿಶೇಷತೆ ಹಾಗೂ ವೈರುಧ್ಯಗಳ ಕುರಿತು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಸರೂರ ಹಾಲುಮತ ಸಂಪ್ರದಾಯವು ಕರ್ನಾಟಕ ಮತ್ತು ಆಂಧ್ರ ಗಡಿ ಪ್ರದೇಶದ ವ್ಯಾಪ್ತಿಯನ್ನು ಒಳಗೊಂಡಂತೆ ರೇವಣಸಿದ್ಧನ ಮಠ/ದೇವಾಲಯಗಳ ರೂಪದಲ್ಲಿ ವಿವಿಧ ಶಾಖಾಮಠಗಳಾಗಿ ವಿಸ್ತರಿಸಿಕೊಂಡು ಕಾಲಕ್ಕೆ ಅನುಗುಣವಾಗಿ ಆಯಾ ಮಠಗಳು

ರೂಢಿಸಿಕೊಂಡು ಬಂದ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳನ್ನು ವಿವರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಇವುಗಳ ಭೌಗೋಳಿಕ ವ್ಯಾಪ್ತಿಯ ನೆಲೆಗಳನ್ನು ಈ ಅಧ್ಯಾಯದಲ್ಲಿ ಗುರುತಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಸರೂರು ಹಾಲುಮತ ಸಮುದಾಯವು ರೇವಣಸಿದ್ಧನಿಗೆ ಸಂಬಂಧಿಸಿದ ಆಚರಣೆ, ಉತ್ಸವ, ಜಾತ್ರೆ ಸಂಪ್ರದಾಯಗಳು, ಹೇಳಿಕೆಗಳು, ಪವಾಡಗಳು, ನಾಮಕರಣ, ಋತುಮತಿ, ಮದುವೆ, ಶವಸಂಸ್ಕಾರ ಮತ್ತು ಒಡೇಯರಮ್ಮನಿಗೆ ನೀಡಿದ ಸ್ಥಾನಮಾನ ಹೀಗೆ ಎಲ್ಲಾ ಸಂಗತಿಗಳನ್ನು ಸಾಮಾಜಿಕ ಮತ್ತು ಧಾರ್ಮಿಕ ಎಂದು ವರ್ಗೀಕರಿಸಿಕೊಂಡು ಸಾಂಸ್ಕೃತಿಕವಾಗಿ ಚರ್ಚಿಸಲಾಗಿದೆ.

ಆರನೆಯ ಅಧ್ಯಾಯವು ಸರೂರ ಹಾಲುಮತ ಸಂಪ್ರದಾಯದ ಸಾಹಿತ್ಯವಾಗಿದ್ದು, ಈ ಸಂಪ್ರದಾಯಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಲಿಖಿತ ಸಾಹಿತ್ಯ ಮತ್ತು ದಾಖಲು ಸಾಹಿತ್ಯವೆಂದು ವಿಂಗಡಿಸಿಕೊಂಡು, ಲಿಖಿತ ಸಾಹಿತ್ಯದಲ್ಲಿ ತಗರ ಪವಾಡ, ಸಿದ್ಧಮಂಕಚರಿತೆ, ಭೀಮಕವಿಯ ಹಾಲುಮತೋತ್ತೇಜಕ ಪುರಾಣ, ಹಾಲುಮತಪುರಾಣ, ಚನ್ನಬಸವಕವಿಯ ಹಾಲುಮತ ಪುರಾಣಗಳನ್ನು ಹಾಗೆಯೇ ದಾಖಲು ಸಾಹಿತ್ಯದಲ್ಲಿ ಶಾಸನಗಳು, ದಾಖಲೆ ಪತ್ರಗಳು, ಭಾಷಣ ಮತ್ತು ವರದಿಗಳನ್ನು ಕುರಿತು ವಿವರಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ರೇವಣಸಿದ್ಧನ ದೇವಾಲಯಗಳ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳ ಬಗ್ಗೆ ಚರ್ಚಿಸಲಾಗಿದ್ದು, ಕರ್ನಾಟಕ ಮತ್ತು ಆಂಧ್ರ ಗಡಿಭಾಗ ಪರಿಸರದಲ್ಲಿ ದೊರೆತ ರೇವಣಸಿದ್ಧನ ದೇವಾಲಯಗಳನ್ನು ಗುರುತಿಸಿ, ಅವುಗಳ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳ ಬಗ್ಗೆ ವಿವರಿಸಲಾಗಿದೆ. ಹಾಗೆಯೇ ಈ ದೇವಾಲಯಗಳು ಯಾರ ಆಳ್ವಿಕೆಯಲ್ಲಿ ಕಂಡುಬರುತ್ತವೆ, ಅವು ಯಾವ ಶೈಲಿಯಲ್ಲಿವೆ ಎಂಬುದನ್ನು ಗುರುತಿಸಲಾಗಿದೆ. ರೇವಣಸಿದ್ಧನ ಮೂರ್ತಿಶಿಲ್ಪಗಳು ಎಲ್ಲೆಲ್ಲಿ ಕಂಡುಬರುತ್ತವೆ ಅವುಗಳ ಲಕ್ಷಣಗಳನ್ನು ಹಾಗೆಯೇ ರೇವಣಸಿದ್ಧನ ಉದ್ಭವಲಿಂಗದ ಮೂರ್ತಿಗಳು ಕಂಡು ಬಂದ ಕಾಲಘಟ್ಟ ಇಂಥ ಅನೇಕ ಸಂಗತಿಗಳನ್ನು ಚರ್ಚೆಗೊಳಪಡಿಸಲಾಗಿದೆ.

ಏಂಟನೆಯ ಅಧ್ಯಾಯವು ಸಮಾರೋಪವಾಗಿದ್ದು, ಅಧ್ಯಯನದ ಫಲಿತಗಳನ್ನು ವಿವರಿಸಲಾಗಿದೆ. ಅನುಬಂಧದಲ್ಲಿ ಶಾಸನಪಠ್ಯ, ವಕ್ತೃವಿವರ, ಪರಾಮರ್ಶನ ಗ್ರಂಥಗಳ ಸೂಚಿ ಹಾಗೂ ಛಾಯಾ ಚಿತ್ರಗಳನ್ನು ನೀಡಲಾಗಿದೆ.

ಅಧ್ಯಯನ ಸಮೀಕ್ಷೆ ಮತ್ತು ಅನನ್ಯತೆ

'ಸರೂರ ಹಾಲುಮತ ಸಂಪ್ರದಾಯ: ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯವನ್ನು ಸಂಶೋಧನೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರಸ್ತುತ ಸಂಶೋಧನ ವಿಷಯಕ್ಕೆ ಸಂಬಂಧಿಸಿದಂತೆ ಪೂರಕವಾಗಿ ಬಂದಿರುವ ಸರೂರು ಸಂಪ್ರದಾಯದ ಗುರುಒಡೆಯರ ಪರಂಪರೆಯನ್ನು ಇಲ್ಲಿ ಸಮೀಕ್ಷೆಗೆ ಒಳಪಡಿಸಲಾಗಿದೆ.

ಸರೂರು ಗುರುಪರಂಪರೆಯ ಬಗ್ಗೆ ಕೆಲವೊಂದಿಷ್ಟು ಬಿಡಿ ಬಿಡಿ ಬರಹ ಮತ್ತು ಲೇಖನಗಳು ಮಾತ್ರವೇ ಬಂದಿದ್ದು, ಇಡಿಯಾಗಿ ಕಟ್ಟಿಕೊಡುವ ಪ್ರಯತ್ನ ನಡೆದಿಲ್ಲ. ಆದಾಗ್ಯೂ ಈ ಅಧ್ಯಯನಕ್ಕೆ ಪೂರಕವಾಗಿ ಇದುವರೆಗೂ ಬಂದಿರುವ ಬರಹಗಳನ್ನು ಚರ್ಚಿಸಲಾಗಿದೆ.

೧. ಕೃತಿಗಳು

ಸರೂರಿನ ಹಾಲುಮತ ಸಂಪ್ರದಾಯದ ಒಡೆಯರ ಪರಂಪರೆಯನ್ನು ಪರಿಚಯಿಸುವ ಎರಡು ಕೃತಿಗಳೆಂದರೆ ತಗರ ಪವಾಡ ಮತ್ತು ಸಿದ್ಧಮಂಕ ಚರಿತೆ.

ತಗರ ಪವಾಡ: ಈ ಕಾವ್ಯವನ್ನು ಎಂ.ಎಂ. ಕಲಬುರ್ಗಿ, ಸಿ.ಕೆ. ಪರಶುರಾಮಯ್ಯ, ಎಫ್.ಟಿ. ಹಳ್ಳಿಕೇರಿ ಅವರು ಸಂಪಾದಿಸಿದ್ದಾರೆ. ಇದು ಸರೂರ ಹಾಲುಮತ ಸಂಪ್ರದಾಯದ ಗುರುಒಡೆಯರ ಪರಂಪರೆ ಮತ್ತು ಇದರ ನಾಯಕನಾದ ಶಾಂತಮುತ್ತಯ್ಯ ಆತನ ಮುಖೇನ ಕುರುಬ ಸಮುದಾಯವು ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸಿಕೊಂಡಿರುವ ವಿಷಯಗಳನ್ನು ಒಳಗೊಂಡಿದೆ.

ಸಿದ್ಧಮಂಕ ಚರಿತೆ: ಎಂ.ಎಂ. ಕಲಬುರ್ಗಿ, ವೈ.ಸಿ. ಭಾನುಮತಿ ಅವರು ಸಂಪಾದಿಸಿರುವ ಈ ಕಾವ್ಯವು ಸರೂರ ಗುರುಪರಂಪರೆಯಲ್ಲಿ ಬರುವ ಮಂಕೊಡೆಯರ ಗುರುಪರಂಪರೆಯ ನಾಯಕನಾದ ಮರುಳಸಿದ್ಧ, ಮಂಕಸಿದ್ಧನ ಕುರಿತು ತಿಳಿಸುತ್ತದೆ. ಜೊತೆಗೆ ಶರಣರ ಸಮ್ಮುಖದಲ್ಲಿ ಕುರುಬಕುಲಕ್ಕೆ ಗುರುವಾಗುವ ಜೊತೆಗೆ ಸಮುದಾಯ ಭಂಡಾರ ಸಂಸ್ಕೃತಿಯಿಂದ ವಿಭೂತಿ ಸಂಸ್ಕೃತಿಯತ್ತ ಸಾಗಿಬಂದಿರುವ ಸಂಗತಿಗಳನ್ನು ಅಭಿವ್ಯಕ್ತಗೊಳಿಸುತ್ತದೆ. ಆದರೆ ಈ ಎರಡೂ ಕಾವ್ಯಗಳು ಒಂದೇ ವಸ್ತುವನ್ನು ಒಳಗೊಂಡಿದ್ದರೂ ವಿಭಿನ್ನವಾದ ನೆಲೆಯಲ್ಲಿ ಪರಂಪರೆಯನ್ನು ಗುರುತಿಸುವಲ್ಲಿ ಯಶಸ್ವಿಯಾಗಿವೆ. ಏಕೆಂದರೆ ಇಲ್ಲಿ ಬಸವಾದಿ ಪ್ರಭುತರ ಸಮ್ಮುಖದಲ್ಲಿ ಮೃತ ತಗರನ್ನು ಬದುಕಿಸಿ ಪವಾಡವನ್ನು ಮೆರೆದ ಶಾಂತಮುತ್ತಯ್ಯ ಒಂದು ಕಡೆಯಾದರೇ ಮತ್ತೊಂದು ಕಡೆ ಮರುಳಮಂಕ ಉಗ್ರ ತಪಸ್ಸನ್ನು ಮಾಡಿ ಸಕಲ ಶರಣರ ಮನ್ನಣೆಯನ್ನು ಗಳಿಸಿ ಕುರುಬ ಕುಲವನ್ನು ಉದ್ದರಿಸಿದ್ದು, ಕಂಡುಬರುತ್ತದೆ.

ಹಾಲುಮತ ಗುರು ಸರೂರು ಶಾಂತಮುತ್ತಯ್ಯ: ಕೃತಿಕಾರರಾದ ರಾಜಶ್ರೀ ಪಾಟೀಲ ಅವರು ಕುರುಬರ ಗುರುಒಡೆಯರ ಪರಂಪರೆಯ ಶಾಂತಮುತ್ತಯ್ಯನ ಇತಿವೃತ್ತದ ಬಗ್ಗೆ ಹಾಗೂ ಆತನ ಸುತ್ತ ನಡೆಯುವ ಆಚರಣೆ ಉತ್ಸವ ಮತ್ತು ಸಂಪ್ರದಾಯಗಳನ್ನು ಗುರುತಿಸಿದ್ದಾರೆ. ಜೊತೆಗೆ ಸರೂರಿನ ರೇವಣಸಿದ್ದೇಶ್ವರ ಜಾತ್ರೆಯ ಸಂದರ್ಭದಲ್ಲಿ ಶಾಂತಮುತ್ತಯ್ಯನ ಅನುಯಾಯಿಗಳಾದ ಶಾಂತೊಡೆಯರ ಹೇಳಿಕೆಗಳು ಅಲ್ಲಿನ ಸಂಪ್ರದಾಯ ಆಚರಣೆಗಳನ್ನು ಸಂಕ್ಷಿಪ್ತವಾಗಿ ಕಟ್ಟಿಕೊಟ್ಟಿದೆ. ಹೀಗೆ ಈ ಕೃತಿಗಳ ಹೆಚ್ಚಿನ ಮಾಹಿತಿಯನ್ನು ಅಧ್ಯಾಯ ಆರರಲ್ಲಿ ಚರ್ಚಿಸಲಾಗಿದೆ.

೨. ಲೇಖನಗಳು

ಎಂ.ಎಂ. ಕಲಬುರ್ಗಿ ಅವರ "ಕುರುಬರ ಗುರು ಶಾಂತಮುತ್ತಯ್ಯ" ಎಂಬ ಲೇಖನದಲ್ಲಿ ಸರೂರಿನ ಗುರುಒಡೆಯರ ಪರಂಪರೆಯಲ್ಲಿ ಕುರುಬರ ಕುಲಗುರು ಶಾಂತಮುತ್ತಯ್ಯ ಪರಮಗುರು ರೇವಣಸಿದ್ಧ ಕಂಡುಬರುವುದನ್ನು ಚರ್ಚಿಸುತ್ತ ಶಾಸನಗಳ ಆಧಾರದ ಮೇಲೆ ಶಾಂತಮುತ್ತಯ್ಯನ ಶಿಷ್ಯ ರೇವಣಸಿದ್ಧನೆಂದೂ ಅಥವಾ ತಂದೆ ಮಗನೆಂದೂ ತಿಳಿಸದೇ ಪ್ರಶ್ನೆಯಾಗಿಯೇ ಉಳಿಸಿದ್ದಾರೆ. ಅಂದರೆ ಅದು ಮುಂದಿನ ಸಂಶೋಧನೆಗೆ ದಾರಿಮಾಡಿಕೊಡುವ ರೀತಿಯಲ್ಲಿ ಚರ್ಚಿಸಿರುವುದು ಗಮನರ್ಹವಾಗಿದೆ.

ಬಿ.ಜಿ. ಬಿರಾದಾರ ಅವರು "ಕುರುಬರ ಮೂಲಗುರು ಪೀಠ ಶ್ರೀಕ್ಷೇತ್ರ ಸರೂರು" ಎಂಬ ಲೇಖನವನ್ನು ಕುರುಬರ ಗುರುಒಡೆಯರ ಶಾಖಾಮಠಗಳನ್ನು ಕರ್ನಾಟಕದಾದ್ಯಂತ ಸ್ಥಾಪಿಸಿ ಕೊಂಡಿದ್ದರೂ ಸರೂರೇ ಮೂಲ ಗುರುಪೀಠವಾಗಿದ್ದು, ಕುರುಬರ ಮೊದಲ ಸಿಂಹಾಸನಾಧಿಪತಿ ಸರೂರ ಶಾಂತಮುತ್ತಯ್ಯನೇ ಎಂಬುದನ್ನು ಗುರುತಿಸಿದ್ದಾರೆ. ಜೊತೆಗೆ ಈ ಊರಿನ ಗುರುವರ್ಗದ ಪರಂಪರೆಯ ಬಗ್ಗೆ ಪ್ರಾಚೀನ ಕಾಲದಿಂದಲೂ ಜೋಪನವಾಗಿ ಕಾಪಾಡಿಕೊಂಡು ಬಂದಿರುವ ಸುರುಳಿಪತ್ರ, ತಾಮ್ರ ಪತ್ರ ಇನ್ನೂ ಮುಂತಾದ ದಾಖಲೆಗಳ ಮುಖೇನ ಈ ಊರಿನ ಐತಿಹಾಸಿಕತೆಯನ್ನು ವಿವರಿಸಿದ್ದಾರೆ.

ರು.ಮ. ಷಡಕ್ಷರಯ್ಯ ಅವರ "ಮುದ್ದೇಬಿಹಾಳ ತಾಲೂಕಿನ ಸರೂರಿನ ಶಿಲ್ಪಗಳಲ್ಲಿ ಮುನಿ ಭಕ್ತರು" ಎಂಬ ಲೇಖನದಲ್ಲಿ ಸರೂರಿನ ರೇವಣಸಿದ್ಧೇಶ್ವರನ ಗುಡಿಯ ಒಳ–ಹೊರಗಡೆ ಇರುವ ಶಿಲ್ಪಗಳು, ಅವುಗಳ ಶೈಲಿ, ವಿನ್ಯಾಸ ಕಾಲಘಟ್ಟ ಮತ್ತು ಅವುಗಳ ಲಕ್ಷಣಗಳನ್ನು ಹೇಳುವುದರ ಮೂಲಕ ಸರೂರಿನ ಗುರುಒಡೆಯರ ಪರಂಪರೆಯ ಪ್ರಾಚೀನತೆಯನ್ನು ತಿಳಿಸಲು ಪ್ರಯತ್ನಿಸಿದ್ದಾರೆ.

ಬಸವರಾಜ ಎಸ್. ಮಠ ಅವರ "ಮುದ್ದೇಬಿಹಾಳ ಪ್ರದೇಶದ ಗ್ರಾಮ ನಾಮಗಳು" ಎಂಬ ಲೇಖನದಲ್ಲಿ ಸರವೂರು ಎಂಬುದು ಸರೂರಾಗಲು ಕಾರಣಗಳೇನು, ಇದಕ್ಕೂ ಮೊದಲು ಈ ಊರಿಗೆ ಇದ್ದ ಹೆಸರೇನು ಎಂಬ ವಿಚಾರಗಳನ್ನು ಇಲ್ಲಿ ಚರ್ಚಿಸಿದ್ದಾರೆ.

ಸಿದ್ಧಯ್ಯ ಎಚ್. ಗುರುವಿನ ಅವರ "ಸರೂರ ಶ್ರೀ ರೇವಣಸಿದ್ಧೇಶ್ವರರ ಕ್ಷೇತ್ರ ಪರಿಚಯ" ಎಂಬ ಲೇಖನದಲ್ಲಿ ಗಮನಿಸಿರುವಂತೆ ಸರೂರಿನಲ್ಲಿ ಆಚರಿಸುವ ಜಾತ್ರೆಯ ವಿಶೇಷತೆಯೇನು? ಹಾಗೂ ಈ ಜಾತ್ರೆಯ ಸಂದರ್ಭದಲ್ಲಿ ಒಡೆಯರು ಅಥವಾ ಪೂಜಾರಿಗಳು ರೇವಣಸಿದ್ಧನಿಗೆ ಮಾಡುವ ಪೂಜೆಯ ವಿಧಾನ ಮತ್ತು ಈ ದೇವಾಲಯದ ಇತಿಹಾಸವನ್ನು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ.

ಈ ಎಲ್ಲ ಕೃತಿ ಲೇಖನಗಳು ಪ್ರಸ್ತುತ ಸಂಶೋಧನಾ ವಿಷಯಕ್ಕೆ ಪೂರಕವಾಗಿದ್ದು. ಈ ಬರಹಗಳು ಸರೂರಿನ ಹಾಲುಮತ ಸಂಪ್ರದಾಯದ ಗುರುಒಡೆಯರ ಪರಂಪರೆಯನ್ನು ತಿಳಿಯಲು

ಸಹಾಯಕವಾಗಿವೆ. ಈ ಸಂಪ್ರದಾಯದ ಸಾಂಸ್ಕೃತಿಕ ನಾಯಕರಾದ ರೇವಣಸಿದ್ಧ, ಸಿದ್ಧರಾಮ, ಶಾಂತಮುತ್ತಯ್ಯ, ಮರುಳಮಂಕರ ಬಗ್ಗೆ ಮಾಹಿತಿ ದೊರೆಯುತ್ತದೆ. ಸರೂರೇ ಕುರುಬರಿಗೆ ಮೂಲ ಗುರುಪರಂಪರೆಯ ಕ್ಷೇತ್ರವಾಗಿದೆ. ಈ ಗುರುಪರಂಪರೆಗೆ ಕಾರಣ ಕರ್ತರ್‍ಯಾರು? ಒಡೆಯ ಅಥವಾ ಕುರುಬರ ಕುಲಗುರು ಎಂದು ಶಾಂತಮುತ್ತಯ್ಯನಿಗೆ ಲಿಂಗದೀಕ್ಷೆ ನೀಡಿದವರ್‍ಯಾರು? ಈ ಗುರುಒಡೆಯರ ಪರಂಪರೆ ಹೇಗೆ ಹುಟ್ಟಿಕೊಂಡಿತು ಎಂಬುದನ್ನು ತಿಳಿಯಲು ಸಹಕಾರಿಯಾಗಿವೆ. ಈ ಪರಂಪರೆಯನ್ನು ಕುರಿತು ಇದುವರೆಗೂ ದೊರೆತ ಪೂರಕ ಆಕರಗಳನ್ನು ಸಂಕ್ಷಿಪ್ತವಾಗಿ ನೋಡಿದಾಗ ಈ ಹಾಲುಮತ ಸಮುದಾಯದಲ್ಲಿ ಸರೂರಿನ ಗುರುಒಡೆಯರ ಪರಂಪರೆಯು ಇತರೆ ಗುರುಪರಂಪರೆಗಳಿಗಿಂತ ಹೇಗೆ ಭಿನ್ನವಾಗಿದೆ. ಎಂಬುದನ್ನು ಗುರುತಿಸುವುದರ ಜೊತೆಗೆ ಈ ಪರಂಪರೆಯ ಸಾಂಸ್ಕೃತಿಕ ಅನನ್ಯತೆಗಳಾದ ಸಂಪ್ರದಾಯ-ಆಚರಣೆಗಳನ್ನು ಗುರುತಿಸುವುದು, ಕುರುಬರಿಗೂ ಒಡೆಯರಿಗೂ ಇರುವ ವ್ಯತ್ಯಾಸವೇನು? ಇವರ ನಡುವಿನ ಕೊಡುಕೊಳ್ಳುವಿಕೆಯ ಸಂಬಂಧ ಎಂಥದ್ದು? ಕುರುಬ ಸಮುದಾಯವು ಗುರುಒಡೆಯರಿಗೆ ನೀಡಿದ ಸ್ಥಾನಮಾನ ಯಾವುದು ಮತ್ತು ಕುರುಬರು ಆಚರಿಸುವ ಧಾರ್ಮಿಕ ಕಾರ್ಯಗಳಲ್ಲಿ ಒಡೆಯರ ಪಾತ್ರವೇನು? ಎಂಬ ಅನೇಕ ಸಂಗತಿಗಳನ್ನು ತಿಳಿಸುತ್ತವೆ.

ಈ ಸರೂರ ಸಂಪ್ರದಾಯದ ಒಡೆಯರ ಪರಂಪರೆಯನ್ನು ಕುರಿತು ಸಮಗ್ರವಾದ ಅಧ್ಯಯನ ನಡೆದಿಲ್ಲ. ಹಾಗಾಗಿ ಪ್ರಸ್ತುತ ಅಧ್ಯಯನವು ಈ ಮೇಲಿನ ಎಲ್ಲಾ ವಿಚಾರಗಳನ್ನು ಒಳಗೊಂಡಂತೆ ಇನ್ನೂ ವಿಸ್ತಾರವಾಗಿ, ಮುಂದುವರಿಕೆಯಾಗಿ ಮತ್ತು ವಿಭಿನ್ನವಾಗಿ ಇವರ ಸಂಸ್ಕೃತಿಯನ್ನು ಸಾಂಸ್ಕೃತಿಕವಾಗಿ ಕಟ್ಟಿಕೊಡುವ ಹಿನ್ನಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು ಮಾಡಲಾಗಿದೆ.

ಅಂದರೆ ಇಲ್ಲಿ ಇದುವರೆಗೂ ಸರೂರ ಸಂಪ್ರದಾಯದ ಗುರುಒಡೆಯರ ಪರಂಪರೆಯನ್ನು ಕುರಿತು ಚರ್ಚಿಸಿರುವ ವಿಚಾರಗಳನ್ನು ಹೊರತುಪಡಿಸಿ ನೋಡಿದಾಗ ಪ್ರಸ್ತುತ ಅಧ್ಯಯನವು ಯಾವುದರಲ್ಲಿ ಹೇಗೆ? ಏಕೆ? ಭಿನ್ನವಾಗಿದೆ. ಎಂಬುದನ್ನು ಚರ್ಚಿಸಲಾಗುತ್ತದೆ. ಸರೂರಿನ ಹಾಲುಮತ ಸಂಪ್ರದಾಯದ ಗುರುಒಡೆಯರ ಪರಂಪರೆಯನ್ನು ಮೂಲವಾಗಿಟ್ಟುಕೊಂಡು ಈ ಸಂಪ್ರದಾಯದ ಒಡೆಯರು ಸಾಂಸ್ಕೃತಿಕವಾಗಿ ಆಚರಿಸುವಂತಹ ಆಚರಣೆಗಳೇನು? ಅವುಗಳನ್ನು ಸಂಪ್ರದಾಯಬದ್ಧವಾಗಿ ಯಾವ ವಿಧಾನದಲ್ಲಿ ಆಚರಿಸುತ್ತಾರೆ.

ಇವರು ರೂಢಿಸಿಕೊಂಡು ಬಂದಿರುವ ಆಚರಣೆಗಳ ವೈಶಿಷ್ಟ್ಯತೆಯೇನು? ಎಂಬುದನ್ನು ಈ ಅಧ್ಯಯನದಲ್ಲಿ ಗುರುತಿಸಿಕೊಳ್ಳಲಾಗಿದೆ. ಹಾಗೆಯೇ ಕರ್ನಾಟಕದಾದ್ಯಂತ ಮತ್ತು ಆಂಧ್ರಪ್ರದೇಶದ ಗಡಿಭಾಗದಲ್ಲಿ ಆಚರಿಸುವ ಸಂಪ್ರದಾಯಗಳಿಗೂ ಸರೂರಿನಲ್ಲಿ ರೂಢಿಸಿಕೊಂಡು ಬಂದ ಗುರು ಪರಂಪರೆಗೆ ಸಾಮ್ಯತೆ ಇದಿಯೇ ಅಥವಾ ಇಲ್ಲವೇ ಇದ್ದರೆ ಅದು ಯಾವ ರೀತಿಯಾಗಿದೆ, ಎಂಬುದರ ಅನೇಕ ವ್ಯತ್ಯಾಸಗಳನ್ನು ಕಂಡುಕೊಳ್ಳಲಾಗಿದೆ. ಜೊತೆಗೆ ಈ ಪರಂಪರೆಯದ ಒಡೆಯರು

ಕುರುಬರ ನಡುವಿನ ಬಂಧುತ್ವ ಹಾಗೂ ಕೊಡುಕೊಳ್ಳುವಿಕೆಯು ಹೇಗಿದೆ ಎಂಬುದನ್ನು ಗುರುತಿಸಲಾಗಿದೆ. ನಮಗೆ ತಿಳಿಯುವುದೇನೆಂದರೆ ಪ್ರಮುಖವಾಗಿ ಈ ಸಂಪ್ರದಾಯದ ಒಡೆಯರಲ್ಲಿ ರೇವಣಸಿದ್ಧನನ್ನು ಪೂಜಿಸಿಕೊಂಡು ಇವರ ಅನುಯಾಯಿಗಳಾಗಿ ಶಾಂತೊಡೆಯರು ಕಂಡುಬಂದರೆ ಸಿದ್ಧರಾಮನನ್ನು ಆರಾಧಿಸಿಕೊಂಡು ಈತನ ಅನುಯಾಯಿಗಳಾಗಿ ಮಂಕೊಡೆಯರು ಕಂಡುಬರುತ್ತಾರೆ. ಈ ಎರಡೂ ಪರಂಪರೆಗಳಲ್ಲಿ ಹೆಚ್ಚಾಗಿ ಯಾವ ಪರಂಪರೆಯದ ಒಡೆಯರು ಕಂಡುಬರುತ್ತಾರೆ. ಎಂಬುದನ್ನು ಗುರುತಿಸಲಾಗಿದೆ.

ಈ ಪರಂಪರೆಯ ಒಡೆಯರು ತಮ್ಮ ಹಾಲುಮತ ಸಮುದಾಯವು ಎಲ್ಲೆಲ್ಲಿ ಹೆಚ್ಚಾಗಿ ಕಂಡುಬರುತ್ತಾರೋ ಅಲ್ಲೆಲ್ಲ ಒಂದೊಂದು ಮಠ ಅಥವಾ ದೇವಾಲಯಗಳನ್ನು ನಿರ್ಮಿಸಿ ಅವುಗಳಿಗೆ ಈ ಮೂಲ ಪೀಠದಿಂದಲೇ ಒಡೆಯರನ್ನು ನೇಮಿಸುತ್ತಿದ್ದರು ಎಂಬುದನ್ನು ಗಮನಿಸಲಾಗಿದೆ.

ಹೀಗಾಗಿ ಈ ಪರಂಪರೆಯದ ಒಡೆಯರು ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರಗಳಲ್ಲಿ ಹರಡಿಕೊಂಡಿರುವುದು ತಿಳಿದುಬರುತ್ತದೆ. ಆದರೆ ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಕರ್ನಾಟಕ ಮತ್ತು ಆಂಧ್ರದ ಗಡಿಭಾಗ ಪ್ರದೇಶದಲ್ಲಿ ಕಂಡುಬರುವ ಮಠಗಳು ಮತ್ತು ಅಲ್ಲಿನ ಗುರುಒಡೆಯರನ್ನು ಆಯ್ದುಕೊಂಡು ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಾಯ ಎರಡು

ಸರೂರು ಹಾಲುಮತ ಸಂಪ್ರದಾಯ: ಅಧ್ಯಯನದ ಆಕರಗಳು

ಅಧ್ಯಾಯ ಎರಡು

ಸರೂರು ಹಾಲುಮತ ಸಂಪ್ರದಾಯ: ಅಧ್ಯಯನದ ಆಕರಗಳು

ಸರೂರ ಹಾಲುಮತ ಸಂಪ್ರದಾಯದ ಗುರುಒಡೆಯರಿಗೆ ಸಂಬಂಧಿಸಿದಂತೆ ಅನೇಕ ಲಿಖಿತ ಮತ್ತು ಮೌಖಿಕ ಆಕರಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಂಡ ಆಕರಗಳು ಪ್ರಮುಖವಾಗಿ ಸರೂರ ಹಾಲುಮತ ಸಂಪ್ರದಾಯದ ಗುರುಪರಂಪರೆ, ದೈವಗಳು, ಆಚರಣೆ, ನಂಬಿಕೆ ಸಂಪ್ರದಾಯಗಳನ್ನು ಪ್ರತಿನಿಧಿಸುವ ಮೂಲಕ ಆ ಸಮುದಾಯದಲ್ಲಿ ಬರುವ ಸಾಂಸ್ಕೃತಿಕ ವೀರರನ್ನು ಗುರುತಿಸುವ ಮತ್ತು ಒಟ್ಟಾರೆಯಾಗಿ ಅವರ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ಕಟ್ಟಿಕೊಡುವಂತಹ ಆಕರಗಳು ದೊರೆಯುತ್ತವೆ. ಅವುಗಳನ್ನು ಲಿಖಿತ ಆಕರಗಳು ಮತ್ತು ಮೌಖಿಕ ಆಕರಗಳೆಂದು ವರ್ಗೀಕರಿಸಲಾಗಿದೆ.

ಲಿಖಿತ ಆಕರಗಳು

೧. ಕಾವ್ಯ–ಪುರಾಣಗಳು

೨. ಕೃತಿ

೩. ಲೇಖನಗಳು

೪. ಶಾಸನಗಳು

೫. ದಾಖಲೆ ಪತ್ರಗಳು

೧. ಕಾವ್ಯ ಪುರಾಣಗಳು

ಪ್ರಸ್ತುತ ಸರೂರ ಹಾಲುಮತ ಸಂಪ್ರದಾಯದ ಗುರುಒಡೆಯರ ಅಧ್ಯಯನಕ್ಕೆ ಸಂಬಂಧಿಸಿದಂತೆ ಕಾವ್ಯಪುರಾಣಗಳು ಪ್ರಮುಖ ಆಕರಗಳಾಗಿವೆ. ಇವು ರೇವಣಸಿದ್ಧ, ಸಿದ್ಧರಾಮ, ಶಾಂತಮುತ್ತಯ್ಯ,

ಮರುಳಸಿದ್ಧ ಮುಂತಾದ ಗುರುಪರಂಪರೆಯನ್ನು ತಿಳಿಸಿಕೊಡುತ್ತವೆ. ಅವುಗಳನ್ನು ಸಂಕ್ಷಿಪ್ತವಾಗಿ ಅವಲೋಕಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

೧. ತಗರ ಪವಾಡ

ಸರೂರ ಹಾಲುಮತ ಸಂಪ್ರದಾಯದ ಗುರುಒಡೆಯರ ಪರಂಪರೆಯನ್ನು ಗುರುತಿಸುವ ಆಕರಗಳಲ್ಲಿ ತಗರ ಪವಾಡವು ಒಂದಾಗಿದೆ. ಇದು ಸಿದ್ಧಮಂಕ ಚರಿತೆಯ ನಂತರದ ಕಾವ್ಯವೆಂದು ಸಂಪಾದಕರು ಅಭಿಪ್ರಾಯಿಸಿದ್ದಾರೆ.

ಇದರ ಸಂಪಾದಕರು ಎಂ.ಎಂ. ಕಲಬುರ್ಗಿ, ಸಿ.ಕೆ. ಪರುಶುರಾಮಯ್ಯ, ಎಫ್.ಟಿ. ಹಳ್ಳಿಕೇರಿ. ಈ ಕಾವ್ಯವು ೨೦೦೪ರಲ್ಲಿ ಗದುಗಿನ ವಿದ್ಯಾನಿಧಿ ಪ್ರಕಾಶನದಿಂದ ಪ್ರಕಟಗೊಂಡಿದೆ. ಸಾಂಗತ್ಯ ಕೃತಿಯಾದ ಇದು ಎಂಟು ಸಂಧಿಗಳನ್ನು ಹೊಂದಿದೆ. ಮೊದಲ ಪದ್ಯ ವೃತ್ತ, ನಂತರ ಕಂದ, ಆನಂತರ ಉಳಿದ ಪದ್ಯಗಳೆಲ್ಲ ಸಾಂಗತ್ಯ ಲಕ್ಷಣದಿಂದ ಕೂಡಿವೆ. ಕುರುಬರು ಕಲ್ಯಾಣದಲ್ಲಿ ಕುರಿಮಾಂಸ ಮಾರಿದ ವಿಷಯವನ್ನಾಧರಿಸಿ ಈ ಕೃತಿ ಹುಟ್ಟಿಕೊಂಡಿದೆ.

ಇದು ಪ್ರಮುಖವಾಗಿ ಕುರುಬರ ಗುರು ಶಾಂತಮುತ್ತಯ್ಯನ ಚರಿತ್ರೆಯನ್ನು ಹೇಳುವುದರ ಮೂಲಕ, ಕುರುಬರು ಗುರುಒಡೆಯರಿಗೆ ಕೊಟ್ಟ ಸ್ಥಾನಮಾನವನ್ನು ತಿಳಿಸುತ್ತದೆ. ಇದು ಸಣ್ಣ-ಸಣ್ಣ ಉಪ ಕಥೆಗಳನ್ನು ಹೇಳುವುದರ ಮುಖೇನ ಶಾಂತಮುತ್ತಯ್ಯನ ಪರಂಪರೆಯನ್ನು ಹೇಳುತ್ತದೆ. ಪ್ರಸ್ತುತ ಕೃತಿಯು ಈ ಪರಂಪರೆಯ ಅನುಯಾಯಿಗಳಾದ ಶಾಂತೊಡೆಯರನ್ನು ಗುರುತಿಸುತ್ತದೆ. ಒಟ್ಟಾರೆ ತಗರ ಪವಾಡವು ಕುರುಬರ ಮತ್ತು ಅವರ ಗುರುವರ್ಗದ ಬಗ್ಗೆ ಹಲವಾರು ಚಾರಿತ್ರಿಕ ಅಂಶಗಳನ್ನು ಅನಾವರಣಗೊಳಿಸುತ್ತದೆ.

೨. ಸಿದ್ಧಮಂಕ ಚರಿತೆ

ಇದು ೧೭ನೇ ಶತಮಾನದಲ್ಲಿ ರಚನೆಯಾಗಿರಬಹುದು. ಸರೂರಿನ ಹಾಲುಮತಸ್ಥರಿಗೆ ಸಂಬಂಧಿಸಿದ ಶಿಷ್ಟಸಾಹಿತ್ಯದ ಅಧ್ಯಯನದಲ್ಲಿ ಸಿದ್ಧಮಂಕ ಚರಿತೆಯು ಒಂದಾಗಿದೆ. ಇದನ್ನು ಎಂ.ಎಂ. ಕಲಬುರ್ಗಿ ಮತ್ತು ವೈ.ಸಿ. ಭಾನುಮತಿ ಅವರು ಏಕೈಕ ಹಸ್ತಪ್ರತಿಯಿಂದ ಪರಿಷ್ಕರಿಸಿ ಸಂಪಾದಿಸಿದ್ದಾರೆ. ಇದು ೨೦೦೪ರಲ್ಲಿ ಗದುಗಿನ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಲಿಂಗಾಯತ ಅಧ್ಯಯನ ಸಂಸ್ಥೆಯಿಂದ ಪ್ರಕಟಗೊಂಡಿದೆ. ಇದು ನಾಲ್ಕು ಸಂಧಿಗಳಿಂದ ಕೂಡಿದ್ದು, ೧೭ ಪುಟಗಳ ಪ್ರಸ್ತಾವನೆಯನ್ನು ಒಳಗೊಂಡಿದೆ. ಇದು ಕುರುಬರ ಜನಾಂಗವನ್ನು ಪ್ರತಿನಿಧಿಸುವ ರೇವಣಸಿದ್ಧ, ಸಿದ್ಧರಾಮ, ಮಂಕಯ್ಯ ತಂದೆ, ಹೆಗ್ಗಗೌಡರು ಮತ್ತು ಲಿಂಗಾಯತ ಸಮಾಜವನ್ನು ಪ್ರತಿನಿಧಿಸುವ ಬಸವಾದಿ ಶರಣರು ಏಕೀಕರಣಗೊಳ್ಳುವ ಕ್ರಿಯೆ ಇಲ್ಲಿ ಕಥೆಯಾಗಿ ಬೆಳೆದಿದೆ. ಏಕೆಂದರೆ ಬಸವ, ಸಿದ್ಧರಾಮ, ರೇವಣಸಿದ್ಧರ ಸಮ್ಮುಖದಲ್ಲಿ ಕುರುಬ ಕುಲಕ್ಕೆ ಗುರುವಾಗಿ ನೇಮಕಗೊಂಡಿರುವುದನ್ನು ಈ ಕೃತಿಯು ಅತ್ಯಂತ

ವಿಸ್ತೃತವಾಗಿ ನಿರೂಪಿಸುತ್ತದೆ. ಇದು ಪ್ರಮುಖವಾಗಿ ಭಂಡಾರ ಸಂಸ್ಕೃತಿಯ ಹಾಲುಮತಸ್ಥರು ಶರಣ ಸಂಪ್ರದಾಯಕ್ಕೆ ಅಂದರೆ ವಿಭೂತಿ ಸಂಸ್ಕೃತಿಗೆ ಹೊರಳುವ ಚಿತ್ರಣವನ್ನು ಅಭಿವ್ಯಕ್ತಗೊಳಿಸುವ ಮೂಲಕ ಸಿದ್ಧರಾಮನ ಅನುಯಾಯಿಗಳಾದ ಸರೂರ ಸಂಪ್ರದಾಯದ ಮಂಕೊಡೆಯರನ್ನು ಗುರುತಿಸುತ್ತದೆ.

೩. ಹಾಲುಮತ ಪುರಾಣವು

ಚನ್ನಬಸವ ಕವಿಯ ಹಾಲುಮತ ಪುರಾಣವು ೧೫ ಸಂಧಿ, ೧೭೭೯ ಪದ್ಯಗಳನ್ನೊಳಗೊಂಡಿದೆ. ಇದು ೧೯೫೦ರಲ್ಲಿ ಬರೆಯಲ್ಪಟ್ಟಿದ್ದು, ೧೯೯೯ರಲ್ಲಿ ದಾವಣಗೆರೆ ತಾಲೂಕಿನ ಚಿಕ್ಕ ಬೂದಿಹಾಳು ಗ್ರಾಮದ ಶ್ರೀ ಮದಭಿನವ ರೇಣುಕ ಗುರುಕುಲಾಶ್ರಮದಿಂದ ಪ್ರಕಟಗೊಂಡಿದೆ. ಈ ಕಾವ್ಯವು ಸಾಂಗತ್ಯ ರೂಪದಲ್ಲಿ ರಚನೆಯಾಗಿದೆ. ಇದರ ಎರಡನೆಯ ಸಂಧಿಯಲ್ಲಿ ಸರೂರ ಶಾಂತಮುತ್ತಯ್ಯನ ಬಗ್ಗೆ ಕೆಲವು ವಿಚಾರಗಳಿವೆ. ಅಂದರೆ ರೇವಣಸಿದ್ಧ, ಶಾಂತಮುತ್ತಯ್ಯನಿಗೆ ದೀಕ್ಷೆಕೊಟ್ಟು ಕುರುಬ ಕುಲಕ್ಕೆ ಅಧ್ಯಕ್ಷರನ್ನಾಗಿ ಮಾಡಿದ್ದು ಹಾಗೂ ಕುರುಬ ಕುಲಕ್ಕೆ ಗುರುತನವು ದೊರಕಿರುವುದರ ಕುರುಹಾಗಿ ಬಸವಣ್ಣನವರಿಂದ ಮೂರುಣ್ಣೆಕಂಥೆಯನ್ನು ಚೆನ್ನಬಸವ ಕಾಣಿಕೆಯಾಗಿ ಪಡೆದಿರುವಂತಹದ್ದು ಹೀಗೆ ಅನೇಕ ವಿಚಾರಗಳು ಈ ಪುರಾಣದಲ್ಲಿ ಅಡಕವಾಗಿವೆ.

೪. ಹಾಲುಮತ ಪುರಾಣ

ಬಂಕಾಪುರದ ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ ಈ ಪುರಾಣವನ್ನು ತಾಡೋಲೆಯಿಂದ ಅಭ್ಯಾಸ ಮಾಡಿ ಬರೆದಿರುವುದಾಗಿ ಹೇಳಿಕೊಂಡಿದ್ದಾರೆ. ಇದನ್ನು ೧೯೧೦ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಗೆ ಕವಿ 'ಹಾಲುಮತ ಪುರಾಣ' ಎಂದು ಕರೆದರೆ, ಕಾವ್ಯದ ಕೊನೆಯಲ್ಲಿ ಮರುಳಸಿದ್ಧನ ಸಂಗತಿಯನ್ನು ಗಮನಿಸಬಹುದು. ಇದು ಸಿದ್ಧಮಂಕ ಚರಿತೆಯ ಪ್ರತಿಕೃತಿಯಂತಿದ್ದು, ಸರೂರ ಸಂಪ್ರದಾಯದ ಸಿದ್ಧರಾಮನ ಅನುಯಾಯಿಗಳಾದ ಮಂಕೊಡೆಯರನ್ನು ಗುರುತಿಸುತ್ತದೆ. ಒಟ್ಟಾರೆ ಸಿದ್ಧರಾಮನ ಶಿಷ್ಯನಾದ ಮರುಳಸಿದ್ಧನ ಇತಿವೃತ್ತವನ್ನು ಸ್ಥೂಲವಾಗಿ ನಿರೂಪಿಸುತ್ತದೆ. ಜೊತೆಗೆ ಸಿದ್ಧಮಂಕ, ಮರುಳಮಂಕ, ಮಂಕಯ್ಯ ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗಿರುವ ವ್ಯಕ್ತಿ ಒಬ್ಬನೇ ಎಂಬ ವಿಚಾರವನ್ನು ಸ್ಪಷ್ಟಪಡಿಸುತ್ತದೆ. ಹೀಗಾಗಿ ಸಿದ್ಧಮಂಕ ಚರಿತೆ ಹಾಗೂ ಮರುಳಸಿದ್ಧೇಶ್ವರನ ಚರಿತೆ ಒಂದೇ ಪರಂಪರೆಯ ಕೃತಿಗಳಾಗಿವೆ.

೫. ಹಾಲುಮತೋತ್ತೇಜಕ ಪುರಾಣ

ಪುರಾಣಗಳು ಕುಲಮೂಲ ಸಂಸ್ಕೃತಿಯನ್ನು ಹೇಳುವುದರ ಮೂಲಕ ಭಿನ್ನ ಭಿನ್ನ ಆಲೋಚನೆಗಳಿಗೆ ಎಡೆ ಮಾಡಿಕೊಡುತ್ತವೆ. ಇಂತಹ ಅಂಶಗಳು ಹಾಲುಮತೋತ್ತೇಜಕ ಪುರಾಣದಲ್ಲಿ ಕಂಡುಬರುತ್ತವೆ.

ಇದನ್ನು ರಸ್ತಾಪುರ ಭೀಮಕವಿಯು ೧೯೧೨ರಲ್ಲಿ ರಚಿಸಿದ್ದಾರೆ. ಈ ಪುರಾಣವು ೯ ಸಂಧಿ, ೫೯೮ ವಾರ್ಧಕ ಷಟ್ಪದಿಯ ಪದ್ಯಗಳನ್ನು ಒಳಗೊಂಡಿದೆ. ಇದರಲ್ಲಿ ಪ್ರಮುಖವಾಗಿ ರೇವಣಸಿದ್ಧ, ಶಾಂತಮುತ್ತಯ್ಯ, ಶಿವಪದ್ಮ ಬೀರೇಶ್ವರ ಹಾಗೂ ಶಾಂತಮುತ್ತಯ್ಯನ ಮಕ್ಕಳ ಹೆಸರುಗಳನ್ನಲ್ಲದೆ ಮುಂತಾದವರ ಹೆಸರುಗಳನ್ನು ವಿವರಿಸಿದ್ದಾರೆ. ಪ್ರತಿಸಂಧಿಯ ಮೊದಲನೇ ಪದ್ಯದಲ್ಲಿ ಕವಿಯು ಶಿವನನ್ನು ನಾನಾ ರೀತಿಯಾಗಿ ಸ್ತುತಿಸಿರುವ ಸಂಗತಿಗಳನ್ನು ನೋಡಬಹುದು. ಒಟ್ಟಾರೇ ಈ ಕೃತಿಯಲ್ಲಿ ಬಂದಿರುವ ವಿವರಗಳನ್ನು ಗಮನಿಸಿದಾಗ ಮೂಲತಃ ಕುರುಬನೂ, ಭಕ್ತನೂ ಆಗಿರುವ ಶಾಂತಮುತ್ತಯ್ಯನವರಿಗೆ ಗುರು ರೇವಣಸಿದ್ಧರು ಸರೂರಿನಲ್ಲಿ ಲಿಂಗದೀಕ್ಷೆಯನ್ನು ಕೊಟ್ಟು ಕುರುಬ ಕುಲಕ್ಕೆ ಗುರುಒಡೆಯನನ್ನಾಗಿ ಮಾಡಿದ ಸಂಗತಿಯನ್ನು ಈ ಕೃತಿ ಸ್ಪಷ್ಟಪಡಿಸುತ್ತದೆ. ಜೊತೆಗೆ ತಗರ ಪವಾಡದ ಮುಂದುವರಿಕೆಯ ಭಾಗವಾಗಿದೆ.

೬. ಜನಪದ ಹಾಲುಮತ ಮಹಾಕಾವ್ಯ

ಮೌಖಿಕ ರೂಪದಲ್ಲಿ ದೊರೆತ ಈ ಕೃತಿ ಒಂದು ಜನಪದ ಪುರಾಣ ಕೃತಿಯಾಗಿದೆ. ಇದು ಸಂಪೂರ್ಣವಾಗಿ ಡೊಳ್ಳಿನ ಹಾಡಿನ ರೂಪದಲ್ಲಿರುವ ಪದ್ಯ ಕೃತಿ. ಇದನ್ನು ಜಾನಪದ ವಿದ್ವಾಂಸರಾದ ವೀರಣ್ಣದಂಡಿ ಅವರು ಸಂಗ್ರಹಿಸಿ, ಸಂಪಾದಿಸಿದ್ದಾರೆ. ಈ ಕಾವ್ಯವನ್ನು ೨೦೦೦ದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಕಟಿಸಲಾಗಿದೆ. ಇದು ಹಾಲುಮತ ಸಮುದಾಯದ ಬಗ್ಗೆ ಮಾಹಿತಿಯನ್ನು ತಿಳಿಸುತ್ತದೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಆದಿಶಕ್ತಿಯ ಗರ್ಭದಿಂದ ರಕ್ಕಸರ ಜನನವಾಗುತ್ತದೆ. ಬ್ರಹ್ಮ, ವಿಷ್ಣು, ರುದ್ರ ಈ ತ್ರಿಮೂರ್ತಿಗಳ ಜೊತೆಗೆ ಶಾಂತಮುತ್ತಯ್ಯನ ಜನನವಾಯಿತು ಎಂಬ ವಿಚಾರಗಳನ್ನು ಇದರಲ್ಲಿ ಅಭಿವ್ಯಕ್ತಿಪಡಿಸಿದೆ.

೨. ಕೃತಿಗಳು

ಸರೂರ ಹಾಲುಮತ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಕೆಲವು ಕೃತಿಗಳು ದೊರಕಿವೆ. ಅವುಗಳನ್ನು ಈ ಮುಂದಿನಂತೆ ಸಂಕ್ಷಿಪ್ತವಾಗಿ ಪರಿಚಯಿಸಲಾಗಿವೆ.

೧. ಹಾಲುಮತ ಗುರು ಸರೂರ ಶಾಂತಮುತ್ತಯ್ಯ

ಇದನ್ನು ರಾಜಶ್ರೀ ಪಾಟೀಲ ಅವರು ೨೦೦೯ರಲ್ಲಿ ಎಂ.ಫಿಲ್. ಪದವಿಗಾಗಿ ಸಿದ್ಧಪಡಿಸಿದ ಸಂಪ್ರಬಂಧವಾಗಿದೆ. ಇದನ್ನು ೨೦೧೧ರಲ್ಲಿ ವಿಕಾಸ ಪ್ರಕಾಶನ ಹೊಸಪೇಟೆಯಿಂದ ಪ್ರಕಟಗೊಳಿಸಲಾಗಿದೆ. ಇದು ಸರೂರ ಹಾಲುಮತ ಕುಲಗುರುವಾದ ಶಾಂತಮುತ್ತಯ್ಯನ ಬಗ್ಗೆ ಪರಿಚಯವನ್ನು ಮಾಡಿಕೊಡುತ್ತದೆ. ಈ ಕೃತಿಯು ಐದು ಅಧ್ಯಾಯಗಳನ್ನು ಒಳಗೊಂಡಿದೆ. ಶಾಂತಮುತ್ತಯ್ಯನ ತಂದೆ-ತಾಯಿ, ಬಾಲ್ಯ, ಯೌವ್ವನ, ಮದುವೆ ಹೀಗೆ ಆತನ ಇತಿವೃತ್ತವನ್ನು ತಿಳಿಸುತ್ತದೆ. ಸರೂರು

ನಾಮದ ಬಗ್ಗೆ ಹಾಗೂ ರೇವಣಸಿದ್ಧ ನೀಡಿದ ಲಿಂಗದೀಕ್ಷೆಯನ್ನು ಕುರಿತು ಮತ್ತು ಗುರುಪರಂಪರೆಯ ವಿವರಗಳನ್ನು ತಿಳಿಸಿಕೊಡುತ್ತದೆ. ಶಾಂತಮುತ್ತಯ್ಯನನ್ನು ಕುರಿತು ಬಂದ ಕಾವ್ಯ ಪುರಾಣಗಳನ್ನು ಈ ಕೃತಿಯಲ್ಲಿ ಚರ್ಚಿಸಲಾಗಿದೆ. ಅದೇ ರೀತಿ ಸರೂರ ಹಾಲುಮತ ಗುರುಪರಂಪರೆಯು ರೂಢಿಸಿಕೊಂಡು ಬಂದ ಆಚರಣೆಗಳಾದ ಜಾತ್ರೆ, ಪಲ್ಲಕ್ಕಿ ಉತ್ಸವ, ಮದುವೆ, ಶವಸಂಸ್ಕಾರ, ಒಡೆಯರ ಹೇಳಿಕೆಗಳು ಹೀಗೆ ಅನೇಕ ವಿಚಾರಗಳನ್ನು ಈ ಕೃತಿಯಲ್ಲಿ ಚರ್ಚಿಸಲಾಗಿದೆ.

೨. ಶಾಂತಮುತ್ತಯ್ಯ ಮತ್ತು ಸಿದ್ಧರ ಪವಾಡಗಳು

ಶಿಕ್ಷಕರಾದ ಉಮೇಶ ಹ. ಹೊಸ್ಕೇರಿ ಅವರು ಈ ಕೃತಿಯನ್ನು ರಚಿಸಿದ್ದಾರೆ. ಇದನ್ನು ೨೦೦೮ರಲ್ಲಿ ಪೂಜಾ ಪ್ರಿಂಟರ್ಸ್, ವಿಜಯಪುರದಿಂದ ಪ್ರಕಟಿಸಿದ್ದಾರೆ. ಈ ಕೃತಿಗೆ ಹಾಲುಮತದ ಕಾವ್ಯ–ಪುರಾಣಗಳು ಹಾಗೂ ಚಾರಿತ್ರಿಕ ಕೃತಿಗಳು ಪ್ರಮುಖ ಆಕರಗಳಾಗಿದ್ದು ೩೭ ಪುಟಗಳನ್ನು ಒಳಗೊಂಡ ಚಿಕ್ಕ ಕೃತಿಯಾಗಿದೆ. ಇದರಲ್ಲಿ ಸರೂರ ಸಂಪ್ರದಾಯದ ಗುರುಒಡೆಯರ ಪರಂಪರೆಯು ಮೆರೆದು ತನ್ನತನವನ್ನು ಉಳಿಸಿಕೊಂಡು ಬಂದ ಸಂಗತಿಗಳನ್ನು ತಿಳಿಸುತ್ತದೆ. ಜೊತೆಗೆ ಪಂಚಪೀಠಗಳ ಉತ್ಪತ್ತಿ, ರೇವಣಸಿದ್ಧನ ಜನನ, ಶಾಂತಮುತ್ತಯ್ಯನಿಗೆ ಕೊಟ್ಟ ದೀಕ್ಷೆ, ಕಲ್ಲಿನಕೆರೆಗೆ 'ಸರೂರು' ಎಂಬ ನಾಮ ಹೇಗೆ ಬಂತು ಎಂಬುವುದಲ್ಲದೇ, ಸರೂರಿನಲ್ಲಿ ಆಚರಿಸುವ ಜಾತ್ರೆ, ಪಲ್ಲಕ್ಕಿ ಉತ್ಸವ, ಸಿದ್ಧರಪವಾಡ, ಗುರುಮಠದವರ ಕಾರ್ಯಗಳು ಇನ್ನೂ ಅನೇಕ ಸಂಗತಿಗಳನ್ನು ಈ ಕೃತಿ ಮೈಗೂಡಿಸಿಕೊಂಡಿದೆ.

೩. ಕುರುಬರ ಗುರುಒಡೆಯರು

ಇದು ಎಫ್.ಟಿ. ಹಳ್ಳಿಕೇರಿ ಅವರ ಸಂಪಾದನ ಕೃತಿಯಾಗಿದೆ. ವಿಜಯಪುರದಲ್ಲಿ ೧೫.೫.೨೦೦೫ರಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಅನೇಕ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಗುಚ್ಚವಾಗಿದೆ. ಇದನ್ನು ೨೦೦೭ರಲ್ಲಿ ಹೊಸಪೇಟೆ ವಿಕಾಸ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಇದು ೯ ಪ್ರಬಂಧಗಳನ್ನು ಒಳಗೊಂಡಿದೆ. ಪ್ರಸ್ತುತ ಸರೂರ ಹಾಲುಮತ ಸಂಪ್ರದಾಯಕ್ಕೆ ಅನುಗುಣವಾಗಿ ಕುರುಬರ ಗುರುಒಡೆಯರ ಶಾಖೆಗಳು, ಒಡೆಯರ ಶಾಖೆಯ ಮಹಾಪುರುಷರು, ಒಡೆಯರ ಭೌಗೋಳಿಕ ವ್ಯಾಪ್ತಿ, ಒಡೆಯರ ಸಂಪ್ರದಾಯ ಆಚರಣೆಗಳು ಹಾಗೂ ಅವರ ಹೇಳಿಕೆಗಳು ಇನ್ನೂ ಮುಂತಾದ ಹಾಲುಮತ ಒಡೆಯರಿಗೆ ಸಂಬಂಧಿಸಿದ ವಿಚಾರಗಳನ್ನು ಒಳಗೊಂಡಿದೆ.

೪. ಕುರುಬರ ಗುರುಒಡೆಯರು: ಸಾಂಸ್ಕೃತಿಕ ಅಧ್ಯಯನ

ಇದು ಬಿ.ಜಿ. ಬಿರಾದಾರ ಅವರು ೨೦೦೮ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧವಾಗಿದೆ. ೨೦೧೦ರಲ್ಲಿ ಹೊಸಪೇಟೆಯ ವಿಕಾಸ ಪ್ರಕಾಶನದಿಂದ ಪ್ರಕಟಗೊಂಡಿದೆ. ಇದು '೮' ಅಧ್ಯಾಯಗಳನ್ನು ಒಳಗೊಂಡಿದೆ. ಇದರಲ್ಲಿ 'ಗುರುಒಡೆಯರ ಪರಂಪರೆಗಳು' ಎಂಬ

ಅಧ್ಯಾಯದಲ್ಲಿ ಕುರುಬರ ಗುರುಪರಂಪರೆಯನ್ನು ಚರ್ಚಿಸಿದ್ದಾರೆ. ಅಂದರೆ ರೇವಣಸಿದ್ಧನ ಅನುಯಾಯಿಗಳಾದ ಶಾಂತಮುತ್ತಯ್ಯ, ಶಾಂತೊಡೆಯರು ಸಿದ್ಧರಾಮನ ಅನುಯಾಯಿಗಳಾದ ಸಿದ್ಧಮಂಕ, ಮಂಕೊಡೆಯರು, ಅಮೋಘಸಿದ್ಧೇಶ್ವರ, ಅಮೋಘೊಡೆಯರು ಇತ್ಯಾದಿ ವಿಚಾರಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಿದ್ದಾರೆ. ಅದೇ ರೀತಿ ಕುರುಬರ ಗುರುಒಡೆಯರ ಭೌಗೋಳಿಕ ಪ್ರಸಾರ ಹಾಗೂ ಗುರುಪರಂಪರೆಯ ಒಡೆಯರು ಕರ್ನಾಟಕದಾದ್ಯಂತ ನೆಲೆಸಿರುವ ಸಂಗತಿಗಳನ್ನು ಈ ಮಹಾಪ್ರಬಂಧದಲ್ಲಿ ಪಟ್ಟಿ ಮಾಡಿದ್ದಾರೆ. ಕುರುಬರ ಗುರುಒಡೆಯರ ಸಾಂಸ್ಕೃತಿಕ ಅಧ್ಯಯನ ಎಂಬ ಅಧ್ಯಾಯದಲ್ಲಿ ಗುರುಒಡೆಯರು ಆಚರಿಸುವಂತಹ ಸಾಂಸ್ಕೃತಿಕ ಸಂಗತಿಗಳನ್ನು ಚರ್ಚಿಸಿದ್ದಾರೆ.

೫. ಹಾಲುಮತ ಅಧ್ಯಯನದ ಆಕರಗಳು, ಸ್ವರೂಪ ಮತ್ತು ವಿಶ್ಲೇಷಣೆ

ಈ ಕೃತಿಯು ಅನ್ನಪೂರ್ಣ ಗೋಸ್ಬಾಳ ಅವರ ಸಂಶೋಧನಾ ಮಹಾಪ್ರಬಂಧವಾಗಿದೆ. ಇದು ೨೦೧೨ರಂದು ವಿದ್ಯಾನಿಧಿ ಪ್ರಕಾಶನ ಗದಗದಿಂದ ಪ್ರಕಟವಾಗಿದೆ. ಇದು ಸರೂರ ಹಾಲುಮತ ಗುರುಒಡೆಯರ ಪರಂಪರೆಗೆ ಪ್ರಮುಖ ಆಕರವಾಗಿದೆ. ಇದು ೭ ಅಧ್ಯಾಯಗಳನ್ನು ಒಳಗೊಂಡಿದೆ. ಸರೂರು ಸಂಪ್ರದಾಯವನ್ನು ಪ್ರತಿನಿಧಿಸುವಂತಹ ಕಾವ್ಯ-ಪುರಾಣಗಳನ್ನು ಅಧ್ಯಾಯ ಎರಡರಲ್ಲಿ ಚರ್ಚಿಸಲಾಗಿದೆ. ಅದೇ ರೀತಿ ಅಧ್ಯಾಯ ಮೂರರಲ್ಲಿ ಸರೂರ ಹಾಲುಮತ ಸಮುದಾಯಕ್ಕೆ ಸಂಬಂಧಿಸಿದ ಶಾಸನಗಳನ್ನು ವಿಶ್ಲೇಷಿಸಿದ್ದಾರೆ. ಪ್ರಸ್ತುತ ಸರೂರಿನಲ್ಲಿರುವ ಒಡೆಯರನ್ನು ಮೂಲವಾಗಿಟ್ಟುಕೊಂಡು ಗುರುಒಡೆಯರ ಪರಂಪರೆಯನ್ನು ಗುರುತಿಸಿದ್ದಾರೆ. ಹಾಗೆಯೇ ಹಾಲುಮತ ಅಧ್ಯಯನಕ್ಕೆ ನೀಡಿದ ವಿವಿಧ ವಿದ್ವಾಂಸರ ಕೊಡುಗೆಯನ್ನು ಸಹ ಗಮನಿಸಬಹುದು. ಅದರಲ್ಲಿಯೂ ಸರೂರ ಸಂಪ್ರದಾಯದ ಒಡೆಯರ ಬಗ್ಗೆ ವಿ.ಆರ್. ಹನುಮಂತಯ್ಯ, ಎಂ.ಎಂ. ಕಲಬುರ್ಗಿ, ಎಫ್.ಟಿ. ಹಳ್ಳಿಕೇರಿ ಇನ್ನೂ ಮೊದಲಾದವರು ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಒದಗಿಸಿಕೊಟ್ಟಿದ್ದಾರೆ.

೬. ರೇವಣಸಿದ್ಧ ಪರಂಪರೆ(ಹಾಲುಮತ ವ್ಯಾಸಂಗ-೫)

ಇದು ಎಫ್.ಟಿ. ಹಳ್ಳಿಕೇರಿ ಅವರು ಸಂಪಾದಿಸಿರುವ ಕೃತಿಯಾಗಿದೆ. ಹಾಲುಮತ ಅಧ್ಯಯನ ಪೀಠವು ೨೨, ೨೩ ಮಾರ್ಚ್ ೨೦೧೨ರಂದು ಗಂಗಾವತಿಯಲ್ಲಿ ನಡೆದ ಐದನೆಯ ಹಾಲುಮತ ಸಂಸ್ಕೃತಿ ಸಮ್ಮೇಳನದಲ್ಲಿ ಅನೇಕ ವಿದ್ವಾಂಸರು ಮಂಡಿಸಿದ ಪ್ರಬಂಧಗಳನ್ನು ಒಳಗೊಂಡ ಸಂಪುಟವಾಗಿದೆ. ಈ ಕೃತಿಯು ೨೦೧೪ರಲ್ಲಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟ ಗೊಂಡಿದೆ. ಇದು ಏಳು ಭಾಗಗಳನ್ನು ಒಳಗೊಂಡಿದೆ. ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಇದರಲ್ಲಿ ಎರಡು-ಮೂರು ಮತ್ತು ನಾಲ್ಕನೆಯ ಭಾಗಗಳು ರೇವಣಸಿದ್ಧನ ಅಧ್ಯಯನದ ಆಕರಗಳು ಚರಿತ್ರೆ ಹಾಗೂ ನೆಲೆಗಳಿಗೆ ಸಂಬಂಧಿಸಿವೆ. ರೇವಣಸಿದ್ಧನನ್ನು ಕುರಿತು ಸೃಷ್ಟಿಯಾದ ಕಾವ್ಯ-ಪುರಾಣಗಳು,

ಶಾಸನಗಳು, ಮೌಖಿಕ ಸಾಹಿತ್ಯ ಮತ್ತು ಮಠ ಮಂದಿರ, ದೇವಾಲಯ, ವಾಸ್ತುಶಿಲ್ಪ, ಮೂರ್ತಿಶಿಲ್ಪಗಳಂಥ ಆಕರಗಳನ್ನು ಕ್ಷೇತ್ರ ಕಾರ್ಯಧಾರಿತ ಹಿನ್ನೆಲೆಯಲ್ಲಿ ವಿದ್ವಾಂಸರು ಶೋಧಿಸಿ ವಿಶ್ಲೇಷಿಸಿದ್ದಾರೆ. ಅಂದರೆ ಪ್ರಸ್ತುತ ಸರೂರ ಹಾಲುಮತ ಸಂಪ್ರದಾಯದ ಗುರುಪೀಠವೇ ಮೂಲ ಪೀಠ. ಈ ಪೀಠದಿಂದ ಕರ್ನಾಟಕದಾದ್ಯಂತ ರೇವಣಸಿದ್ಧೇಶ್ವರ ಮಠ ಅಥವಾ ದೇವಾಲಯಗಳ ರೂಪದಲ್ಲಿ ಹಾಲುಮತ ಗುರುಒಡೆಯರ ಪರಂಪರೆಯು ವಿಸ್ತರಿಸಿರುವುದು ತಿಳಿದುಬರುತ್ತದೆ. ಕರ್ನಾಟಕದಲ್ಲಿ ಮಾತ್ರವಲ್ಲದೆ ಆಂಧ್ರದಲ್ಲಿಯೂ ಸಹ ಸರೂರ ಸಂಪ್ರದಾಯದ ನೆಲೆಗಳು ದೊರೆಯುತ್ತವೆ ಎಂಬುದನ್ನು ಈ ಸಂಪಾದನ ಕೃತಿಯಿಂದ ತಿಳಿದುಬರುತ್ತದೆ.

೭. ಹಾಲುಮತ ಸಂಸ್ಕೃತಿ–೧

ಇದು ಎಫ್.ಟಿ. ಹಳ್ಳಿಕೇರಿ ಅವರ ಸಂಶೋಧನಾ ಪ್ರಬಂಧಗಳ ಕೃತಿಯಾಗಿದೆ. ೨೦೧೧ರಲ್ಲಿ ವಿಕಾಸ ಪ್ರಕಾಶನ ಹೊಸಪೇಟೆಯಿಂದ ಪ್ರಕಟಗೊಂಡಿದೆ. ಇಂದಿನ ಸರೂರ ಹಾಲುಮತ ಸಂಪ್ರದಾಯದ ಗುರುಒಡೆಯರ ಪರಂಪರೆಗೆ ಅತಿ ಮುಖ್ಯವಾದ ಮಾಹಿತಿಯನ್ನು ರವಾನಿಸುವ ಕೃತಿಯಾಗಿದೆ. ಇದರಲ್ಲಿ ಒಡೆಯರಿಗೆ ಸಂಬಂಧಿಸಿದಂತೆ ತುರುವೇಕೆರೆ ಶಾಸನ, ರೇವಣಸಿದ್ಧ ಪರಂಪರೆಯ ಮಠಗಳು, ಅಲಿಖಿತ ಆಕರಗಳಲ್ಲಿ ರೇವಣಸಿದ್ಧೇಶ್ವರ, ಅದೇ ರೀತಿ ಸಿದ್ಧರಾಮನ ಅನುಯಾಯಿಗಳಾದ ಮಂಕಸಿದ್ಧ, ಮಂಕೊಡೆಯರ ಪರಂಪರೆ, ಭೌಗೋಳಿಕವಾಗಿ ವಿಸ್ತರಿಸಿಕೊಂಡ ಹಾಲುಮತ ಮಠಗಳು ಹಾಗೂ ಈ ಗುರುಪರಂಪರೆಯಲ್ಲಿ ಮರುಳಸಿದ್ಧೇಶ್ವರ ಹಾಲುಮತ ಸಂಸ್ಕೃತಿಯ ದೃಷ್ಟಿಯಿಂದ ನೋಡಿದ ಸಿದ್ಧಮಂಕ ಚರಿತೆ, ಶಾಂತಮುತ್ತಯ್ಯನ ಚರಿತ್ರೆ, ಹೀಗೆ ಸರೂರ ಗುರುಪೀಠದ ಹಿನ್ನೆಲೆಯಲ್ಲಿ ಅನೇಕ ಪ್ರಬಂಧಗಳು ರಚನೆಯಾದ ಸಂಗತಿಯಗಳನ್ನು ಈ ಕೃತಿಯಲ್ಲಿ ನೋಡಲಾಗಿದೆ.

೮. ಕುರುಬರ ಕುರುಹುಗಳು

ಇದು ಹೆಚ್. ಚಂದ್ರಪ್ಪ ಅಜ್ಜಂಪುರ ಅವರ ಕೃತಿಯಾಗಿದ್ದು, ೨೦೧೧ರಲ್ಲಿ ವಿದ್ಯಾನಿಧಿ ಪ್ರಕಾಶನ ಗದಗದಿಂದ ಪ್ರಕಟಗೊಂಡಿದೆ. ಈ ಕೃತಿಯಲ್ಲಿ ಸರೂರ ಗುರುಒಡೆಯರಿಗೆ ಪೂರಕವಾದ ಕೆಲವು ವಿಚಾರಗಳನ್ನು ಗಮನಿಸಲಾಗಿದೆ. ಒಡೆಯರು, ಒಡೇರಮ್ಮ, ಕಾಲಿಲ್ದ ಐನೋರು ಎಂಬುದು ಅಂದರೆ ಕುರುಬರ ಧಾರ್ಮಿಕ ಕಾರ್ಯಗಳಿಗೆ ಒಡೆಯರು ಆ ಸಂದರ್ಭದಲ್ಲಿ ಇರಲೇಬೇಕು. ಒಂದು ವೇಳೆ ಇಲ್ಲ ಎಂದಾಗ ಕಾಲಿಲ್ದ ಐನೋರನ್ನು ಕರೆತನ್ನಿ ಎನ್ನುತ್ತಾರೆ(ಕಾಲಿಲ್ದ ಐನೋರು ಎಂದರೆ, ಒಡೆಯರು ಮಂತ್ರಿಸಿ ಕೊಟ್ಟ ವಿಭೂತಿ ಉಂಡೆ). ರೇವಣಸಿದ್ಧರನ್ನು ಕುರಿತು ಮತ್ತು ಟಗರ ಪವಾಡ– ಇದು ಸರೂರಿನ ಶಾಂತೊಡೆಯರನ್ನು ತಿಳಿಸುವಂತಹದ್ದು. ರಸ್ತಾಪುರದ ಭೀಮಕವಿಯು ಬರೆದ ಹಾಲುಮತ ಪುರಾಣ ಈ ಎಲ್ಲಾ ವಿಚಾರಗಳನ್ನು ಈ ಕೃತಿಯಲ್ಲಿ ಚರ್ಚಿಸಿದ್ದಾರೆ.

೯. ಕುರುಬರ ಹೆಜ್ಜೆಗಳು: ಒಂದು ಅಧ್ಯಯನ

ಇದನ್ನು ಚಂದ್ರಕಾಂತ ಬಿಜ್ಜರಗಿ ಅವರು ೨೦೦೭ರಲ್ಲಿ ತೈಲಚಂದ್ರ ಪ್ರಕಾಶನ ವಿಜಾಪುರದಿಂದ ಪ್ರಕಟಗೊಳಿಸಿದ್ದಾರೆ. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಕುರುಬರ ಪೂಜ್ಯಗುರುವಾದ ರೇವಣಸಿದ್ಧನ ಇತಿವೃತ್ತದ ಬಗ್ಗೆ ಹಾಗೂ ಅವನ ಪವಾಡ ವಿಚಾರಗಳ ಬಗ್ಗೆ ಇನ್ನೂ ಮುಂತಾದ ವಿಚಾರಗಳನ್ನು ಈ ಕೃತಿಯಲ್ಲಿ ಚರ್ಚಿಸಿದ್ದಾರೆ.

೧೦. ಹಾಲುಮತದ ಚರಿತ್ರೆ(ಯಲ್ಲನಗೌಡ ಫ. ಅತ್ತಿಕೊಳ್ಳ)

ಇದು ಅನ್ನಪೂರ್ಣ ಗೋಸ್ಬಾಳ ಅವರ ಸಂಪಾದನ ಕೃತಿಯಾಗಿದೆ. ಇದನ್ನು ೨೦೧೨ರಲ್ಲಿ ಹಾಲುಮತ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ ಹೊಸಪೇಟೆಯಿಂದ ಪ್ರಕಟಗೊಂಡಿದೆ. ಇದು ಸಿದ್ಧರಾಮನ ಬಾಲ್ಯವನ್ನು ತಿಳಿಸುತ್ತದೆ. ಸಿದ್ಧರಾಮನ ಶಿಷ್ಯನಾದ ಮರುಳಸಿದ್ಧನ ತಪಸ್ಸು ಮತ್ತು ಆತನು ಮಾಡಿದ ಪವಾಡ ಹಾಗೂ ಹಾಲುಮತಕ್ಕೆ ಗುರು ಯಾರು ಎಂಬ ಹಲವು ಸಂಗತಿಗಳನ್ನು ತಿಳಿಸುವುದರ ಮೂಲಕ ಇಂದಿನ ಸಂಶೋಧನೆಗೆ ಪೂರಕವಾಗಿದೆ. ಏಕೆಂದರೆ ಸರೂರ ಪರಿಸರದ ತೂಗುಡ್ಡವು ಮರುಳಸಿದ್ಧನ ತಪಸ್ಸು ಮಾಡಿದ ಸ್ಥಳವಾಗಿದೆ. ಹೀಗಾಗಿ ಈ ಕೃತಿಯು ಆ ಊರಿನ ಮಂಕೊಡೆಯರ ಪರಂಪರೆಯನ್ನು ಗುರುತಿಸುತ್ತದೆ.

೧೧. ಟಗರು ಪವಾಡ(ನಾಟಕ)

ಇದು ಹೆಚ್. ಚಂದ್ರಪ್ಪ ಅಜ್ಜಂಪುರ ಅವರ ಸಂಗೀತ ನಾಟಕವಾಗಿದೆ. ೨೦೧೦ರಲ್ಲಿ ವಿದ್ಯಾನಿಧಿ ಪ್ರಕಾಶನ ಗದಗದಿಂದ ಪ್ರಕಟಗೊಂಡಿದೆ. ಇದಕ್ಕೆ ಮೂಲ ಆಕರ ೧೭ನೆಯ ಶತಮಾನದಲ್ಲಿ ರಚನೆಯಾದ 'ತಗರ ಪವಾಡ'ವಾಗಿದೆ. ಇದು ಒಂದು ಜನಾಂಗದ ಆದ್ಯ ಪುರುಷನ ಬಗೆಗಿನ ಕಥೆ. ಕುರುಬ ಜನಾಂಗದ ಒಡೆಯ ಶಾಂತಯ್ಯನವರ ಮೂಲಕ ಶ್ರೀ ರೇವಣಸಿದ್ಧರು ಪವಾಡ ಮಾಡಿದ ಘಟನೆಯನ್ನು ಒಳಗೊಂಡಿದೆ. ಒಟ್ಟಾರೇ ಈ ನಾಟಕದ ಕಥೆ ಉಪಕಥೆಗಳ ಮೂಲಕ ಶಾಂತಮುತ್ತಯ್ಯನ ಚರಿತ್ರೆಯನ್ನು ಹೇಳುವುದರ ಜೊತೆಗೆ ಕುರುಬರ ಇತಿಹಾಸ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ.

೧೨. ಹಾಲುಮತ ಚರಿತ್ರೆಗಳ ವಿಮರ್ಶೆ

ಶ್ರೀ ಅಡಿವೆಪ್ಪ ಮಹಾರಾಯರು ಈ ವಿಮರ್ಶಾ ಕೃತಿಯನ್ನು ಬರೆದಿದ್ದಾರೆ. ಇದು ೨೦೧೪ರಂದು ಬಿ.ಎಸ್.ಎ. ಪ್ರಕಾಶನ ಅಡವಿ ಸೋಮಾಪುರ ಗದಗದಿಂದ ಮುದ್ರಣಗೊಂಡಿದೆ. ಈ ವಿಮರ್ಶ ಕೃತಿಯೂ ಹಾಲುಮತ ಸಮುದಾಯದ ಸಾಂಸ್ಕೃತಿಕ ವೀರರ ಬಗ್ಗೆ ಅವರ ಆಚಾರ-ವಿಚಾರಗಳನ್ನು ಒಳಗೊಂಡಿದೆ. ಇಂದಿನ ಸಂಶೋಧನೆಗೆ ಸಂಬಂಧಿಸಿದಂತೆ ಕುರುಬರ ಗುರುಒಡೆಯರು, ಹಾಲುಮತದ

ಸಿದ್ಧರಾಮ, ಹಾಲುಮತ ಗುರು ಸರೂರ ಶಾಂತಮುತ್ತಯ್ಯ ಎಂಬ ಅಂಶಗಳನ್ನು ಇಟ್ಟುಕೊಂಡು ಈ ಕೃತಿಯಲ್ಲಿ ಚರ್ಚಿಸಿದ್ದಾರೆ.

೧೩. ಹಾಲುಮತ ವ್ಯಾಸಂಗ–೧

ಎಫ್.ಟಿ. ಹಳ್ಳಿಕೇರಿ ಅವರ ಸಂಪಾದನ ಕೃತಿಯಾಗಿದೆ. ೨೦೦೯ರಲ್ಲಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ಪ್ರಕಟಗೊಂಡಿದೆ. ಇದು ೨೦ ಲೇಖನಗಳನ್ನು ಒಳಗೊಂಡಿದೆ. ಇದರಲ್ಲಿ ಪ್ರಮುಖವಾಗಿ ಕಾವ್ಯ ಪುರಾಣಗಳು– ಕೆ. ರವೀಂದ್ರನಾಥ, ದಾಖಲೆಗಳು ಎಫ್.ಟಿ. ಹಳ್ಳಿಕೇರಿ, ರೇವಣಸಿದ್ಧೇಶ್ವರ ಹಾಗೂ ಸಿದ್ಧರಾಮೇಶ್ವರ ಎಂಬ ಎರಡು ಲೇಖನಗಳನ್ನು ಬಿ.ಜಿ. ಬಿರಾದಾರ ಅವರು ಬರೆದಿದ್ದಾರೆ. ಈ ಪ್ರಬಂಧಗಳ ವಿಚಾರಗಳು ಈ ಸಮುದಾಯದ ಅಧ್ಯಯನಕ್ಕೆ ಪ್ರಮುಖವೆನಿಸಿವೆ.

೧೪. ಹಾಲುಮತ ಸಾಂಸ್ಕೃತಿಕ ಕಥನ

ಈ ಕೃತಿಯನ್ನು ಚಂದ್ರಪ್ಪ ಸೋಬಟ್ಟಿ ಅವರು ೨೦೧೩ರಲ್ಲಿ ವಿದ್ಯಾನಿಧಿ ಪ್ರಕಾಶನ ಗದಗದಿಂದ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಹಾಲುಮತದ ಸಾಂಸ್ಕೃತಿಕ ಕಥನಗಳನ್ನು ಕುರಿತು ಚರ್ಚಿಸುವುದರ ಜೊತೆಗೆ, ಗುರುಒಡೆಯರ ಸ್ಥಿತಿಗತಿಯ ಬಗ್ಗೆ ತಿಳಿಸಿರುವುದು ಸಂಶೋಧನೆಗೆ ಪೂರಕವಾದ ಮಾಹಿತಿಯಾಗಿದೆ.

೧೫. ಹಾಲುಮತ ಕಂಥಾಧಾರಣೆ ಒಂದು ಆಚರಣೆ

ಈ ಕೃತಿಯನ್ನು ಕಣ್ಣಯ ಸಿ. ಗುರುಮೂರ್ತಿ ಕೊಟಿಗೆ ಮನೆ ಅವರು ಸಂಪಾದನೆ ಮಾಡಿದ್ದಾರೆ. ಇದನ್ನು ೨೦೧೪ರಂದು ಶ್ರೀಮದ್ ಜಗದ್ಗುರು ರೇವಣಸಿದ್ಧೇಶ್ವರ ಸಿಂಹಾಸನ ಬೆಂಗಳೂರು ವಿಭಾಗ ಶಾಖಾಮಠ, ಹೊಸದುರ್ಗದಿಂದ ಪ್ರಕಟಗೊಳಿಸಿದ್ದಾರೆ. ಇದು ಸುಮಾರು ಹನ್ನೊಂದು ಲೇಖನಗಳನ್ನು ಒಳಗೊಂಡಿದೆ. ಕುರುಬರ ಗುರುಪರಂಪರೆಯಲ್ಲಿ ಮೂಲ ಧಾರ್ಮಿಕ ಸಂಪ್ರದಾಯಗಳನ್ನು ಪಾಲಿಸಿಕೊಂಡು ಬರುತ್ತಿರುವ ಆಚರಣೆಗಳಲ್ಲಿ ಕಂಥೆಧಾರಣೆಯೂ ಒಂದಾಗಿದೆ. ಇಂದಿಗೂ ಸಿದ್ಧ ಪರಂಪರೆಯವರು ಕಂಥೆಯನ್ನು ದೇವರೆಂದು ನಂಬಿಕೊಂಡು ಬಂದಿದ್ದಾರೆ ಈ 'ಕಂಥೆ' ಭಿನ್ನವಾದಾಗ ನೂತನ ಕಂಥೆಯನ್ನು ತಯಾರಿಸಿ ಲಿಂಗಕ್ಕೆ ಧಾರಣೆ ಮಾಡುತ್ತಾರೆ. ಈ ಕಂಥಾಧಾರಣೆ ಮಾಡುವ ಸಂದರ್ಭದಲ್ಲಿ ತಮ್ಮ ಬಂಧು–ಬಳಗ, ನೆಂಟರರನ್ನೆಲ್ಲ ಕರೆಸಿಕೊಂಡು ಜಾತ್ರೆಯ ರೂಪದಲ್ಲಿ ವಿಜೃಂಭಣೆಯಿಂದ ಮಾಡುವ ಸಾಂಸ್ಕೃತಿಕ ಆಚರಣೆಯೇ ಈ ಕಂಥಾಧಾರಣೆ ಜಾತ್ರೆ. ಧರ್ಮದ ಭಾಗವಾಗಿರುವ ಈ ಜಾತ್ರೆ ಒಂದು ಧಾರ್ಮಿಕ ಆಚರಣೆಯಾಗಿದೆ. ಇಂತಹ ಆಚರಣೆಯನ್ನು ತುಂಬಾ ಅದ್ದೂರಿಯಾಗಿ ಮಾಡುವ ಚಿಕ್ಕನಾಯಕನಹಳ್ಳಿ ಪಟ್ಟಣದ ಶ್ರೀ ಗುರು ರೇವಣಸಿದ್ಧೇಶ್ವರ,

ಶ್ರೀಗುರು ಸಿದ್ಧೇಶ್ವರ, ಶ್ರೀಗುರು ಸಿದ್ಧರಾಮೇಶ್ವರ ಈ ಮೂರು ಮಠಗಳು ಜೊತೆಗೂಡಿ ಆಚರಿಸುತ್ತಿರುವ ಕಂಥೆಧಾರಣೆಯ ಪದ್ಧತಿಯನ್ನು ದಾಖಲಿಸುವ ಸಲುವಾಗಿ ಹಾಲುಮತ ಕಂಥಾಧಾರಣೆ ಒಂದು ಆಚರಣೆ ಎಂಬ ಪುಸ್ತಕವನ್ನು ಹೊರತರಲಾಗಿದೆ. ಈ ಕೃತಿಯಲ್ಲಿ ಕುರುಬರ ಗುರುಒಡೆಯರ ಸಂಪ್ರದಾಯಗಳು, ಗುರುಮಠಗಳು, ಇತಿಹಾಸದಲ್ಲಿ ಕಂಥಾಧಾರಣಾ ಸಂಭ್ರಮ, ಶ್ರೀ ಗುರು ಸಿದ್ಧರಾಮೇಶ್ವರ ಮಠ, ಗುರುಸಿದ್ಧೇಶ್ವರ ಹಾಗೂ ಗುರು ರೇವಣಸಿದ್ಧೇಶ್ವರ ಮಠಗಳ ಒಂದು ಸಂಕ್ಷಿಪ್ತವಾದ ಪಕ್ಷಿನೋಟ ಇದಾಗಿದೆ. ಗುರುಮಠಗಳಲ್ಲಿ ಆಡಳಿತ ವ್ಯವಸ್ಥೆ, ಅದೇ ರೀತಿ ಕಂಬಳಿ ನೇಯ್ಗೆಯ ಸಂದರ್ಭದಲ್ಲಿ ಬಳಸುವ ಸಲಕರಣೆಗಳು ಈ ಎಲ್ಲಾ ವಿಚಾರಗಳನ್ನು ಇಟ್ಟುಕೊಂಡು ಕಂಥಾಧಾರಣೆಯ ಕೃತಿಯನ್ನು ಪ್ರಕಟಿಸಲಾಗಿದೆ.

೧೬. ಹಾಲುಮತ ಅಧ್ಯಯನ–೧

ಇದನ್ನು ಎಫ್.ಟಿ. ಹಳ್ಳಿಕೇರಿ ಅವರು ಸಂಪಾದನೆ ಮಾಡಿದ್ದಾರೆ. ೨೦೧೦ರಲ್ಲಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಗೊಂಡಿದೆ. ಈ ಕೃತಿಯು ಎರಡು ಭಾಗಗಳಲ್ಲಿ ೧೩ ಪ್ರಬಂಧಗಳನ್ನು ಒಳಗೊಂಡಿದೆ. ಮೊದಲನೆಯ ಭಾಗದಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಹಾಲುಮತ ಕಾವ್ಯ ಪುರಾಣಗಳನ್ನು ಚರ್ಚಿಸಿದ್ದಾರೆ. ತಗರಪವಾಡ–ಸಿ.ಕೆ. ಪರುಶುರಾಮ, ಜನಪದ ಹಾಲುಮತ ಮಹಾಕಾವ್ಯ– ಎನ್.ಬಿ. ವಿರೂಪಾಕ್ಷಿ, ಸಿದ್ಧಮಂಕ ಚರಿತೆ– ಕೆ. ರವೀಂದ್ರನಾಥ, ರಸ್ತಾಪುರ ಭೀಮಕವಿಯ ಹಾಲುಮತೊತ್ತೇಜಕ ಪುರಾಣ– ಬಿ. ಹುಲಿಗೇಮ್ಮ, ಚನ್ನಬಸವ ರಚಿತ ಹಾಲುಮತ ಪುರಾಣ– ಅನ್ನಪೂರ್ಣ ಗೋಸ್ಬಾಳ ಹೀಗೆ ಹಲವು ಕಾವ್ಯ ಪುರಾಣಗಳನ್ನು ವಿವರಿಸಿದ್ದಾರೆ. ರೇವಣಸಿದ್ಧ, ಸಿದ್ಧರಾಮ, ಶಾಂತಮುತ್ತಯ್ಯ, ಸಿದ್ಧಮಂಕ ಇವರ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ಇಲ್ಲಿ ಕಟ್ಟಿಕೊಡಲಾಗಿದೆ. ಆದ್ದರಿಂದ ಈ ಕೃತಿ ಪ್ರಸ್ತುತಕ್ಕೆ ಪ್ರಮುಖ ಆಕರವಾಗಿದೆ.

೧೭. ಹಾಲುಮತ ಕಿರಣ

ಇದನ್ನು ಅನ್ನಪೂರ್ಣ ಗೋಸ್ಬಾಳ ಅವರು ಬರೆದಿದ್ದಾರೆ. ೨೦೧೪ರಲ್ಲಿ ಹಾಲುಮತ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ ಹೊಸಪೇಟೆಯಿಂದ ಪ್ರಕಟಣೆಗೊಂಡಿದೆ. ಈ ಕೃತಿಯಲ್ಲಿ ಪ್ರಮುಖವಾಗಿ ರೇವಣಸಿದ್ಧನ ಇತಿವೃತ್ತ ಹಾಗೂ ಆತನ ಬಗ್ಗೆ ದೊರೆತ ದಾಖಲೆಗಳು, ಅದೇ ರೀತಿ ಸರೂರು ಹಾಲುಮತ ಸಂಪ್ರದಾಯದ ಗುರುಒಡೆಯರ ಪರಂಪರೆಗಳನ್ನು ಚಿತ್ರಿಸುವಂತಹ ಕೃತಿಗಳಾದ ತಗರ ಪವಾಡ, ಸಿದ್ಧಮಂಕ ಚರಿತೆಯು ತೌಲನಿಕವಾದ ವಿಚಾರಗಳನ್ನು ಒಳಗೊಂಡಿದೆ. ಚನ್ನಬಸವ ಕವಿಯ ಹಾಲುಮತ ಪುರಾಣ, ಹಾಲುಮತ ಸಮುದಾಯದ ಆಚರಣೆಗಳು ಹೀಗೆ ಅನೇಕ ಸಂಗತಿಗಳನ್ನು ಕುರಿತು ಈ ಕೃತಿಯಲ್ಲಿ ಚರ್ಚಿಸಿದ್ದಾರೆ.

೩. ಬಿಡಿ ಲೇಖನಗಳು

ಸರೂರ ಹಾಲುಮತ ಸಂಪ್ರದಾಯದ ಅಧ್ಯಯಕ್ಕೆ ಸಂಬಂಧಿಸಿದಂತೆ ಕಾವ್ಯ-ಪುರಾಣಗಳ ಜೊತೆಗೆ ಬಿಡಿ ಲೇಖನಗಳ ಪ್ರಮುಖ ಆಕರಗಳಾಗಿವೆ.

೧. ಕುರುಬರ ಗುರು ಶಾಂತಮುತ್ತಯ್ಯ(ಮಾರ್ಗ-೦೪, ೨೦೦೪)

ಪ್ರಸ್ತುತ ಸಂಶೋಧನಾ ಲೇಖನವನ್ನು ಎಂ.ಎಂ. ಕಲಬುರ್ಗಿಯವರು ಪ್ರಕಟಿಸಿದ್ದಾರೆ. ಈ ಲೇಖನದಲ್ಲಿ ಪ್ರಮುಖವಾಗಿ ರೇವಣಸಿದ್ಧ ಶಾಂತಮುತ್ತಯ್ಯನ ಗುರುವೆಂಬುದನ್ನು ವಿರೋಧಿಸಿರುವಂತಹದ್ದು. ಏಕೆಂದರೆ ಶಾಸನಗಳ ಪ್ರಕಾರ ಶಾಂತಮುತ್ತಯ್ಯನ ಶಿಷ್ಯ ರೇವಣಸಿದ್ಧನೆಂದೂ ಅಥವಾ ತಂದೆ ಮಕ್ಕಳೆಂದೂ ಸಂಶಯಕ್ಕೆ ಆಸ್ಪದವಾಗಿದೆ. ಆದ್ದರಿಂದ ರೇವಣಸಿದ್ಧನು ಶಿಷ್ಯನೋ, ಮಗನೋ ಎಂಬ ಸಂಗತಿಯು ಪ್ರಶ್ನೆಯಾಗಿಯೇ ಉಳಿದುಕೊಂಡು ಬಂದಿದೆ ಎಂಬ ವಿಚಾರಗಳನ್ನು ಈ ಲೇಖನದಲ್ಲಿ ಅಭಿಪ್ರಾಯಿಸಿದ್ದಾರೆ.

೨. ರೇವಣಸಿದ್ಧ(ಮಾರ್ಗ-೦೪, ೨೦೦೪)

ಈ ಸಂಶೋಧನಾ ಲೇಖನವನ್ನು ಎಂ.ಎಂ. ಕಲಬುರ್ಗಿಯವರು ರಚಿಸಿದ್ದಾರೆ. ಇಲ್ಲಿ ರೇವಣಸಿದ್ಧನ ಇತಿವೃತ್ತವನ್ನು ಚರ್ಚಿಸಿದ್ದಾರೆ. ಈತನು ಚಾಲುಕ್ಯ, ವಿಕ್ರಮಾದಿತ್ಯ, ತೈಲಪ, ಕಲಚೂರಿ ಬಿಜ್ಜಳನವರೆಗೆ ಬಾಳಿಬದುಕಿದ ಸಂಗತಿಗಳನ್ನು ಶಾಸನ ಮತ್ತು ಕಾವ್ಯಗಳಿಂದ ತಿಳಿಸಿಕೊಟ್ಟಿದ್ದಾರೆ.

೩. ಕುರುಬರ ಗುರುಪರಂಪರೆಗೆ ಸಂಬಂಧಿಸಿದ ತುರುವೇಕೆರೆ ಶಾಸನ(ಹಾಲುಮತ ಸಂಸ್ಕೃತಿ-೧)

ಎಫ್.ಟಿ. ಹಳ್ಳಿಕೇರಿ ಅವರು ಪ್ರಸ್ತುತ ಲೇಖನವನ್ನು ಬರೆದಿದ್ದಾರೆ. ಇದರಲ್ಲಿ ಹಾಲುಮತ ಜನಾಂಗದ ಕುರುಬರಿಗೆ ಗುರುಗಳು ಯಾರು ಎಂಬ ವಾದವಿವಾದಗಳಿವೆ. ಈ ವಾದದಲ್ಲಿ ಶಾಂತಮುತ್ತಯ್ಯನು ಮಂಕಯ್ಯನವರನ್ನು ಗೆದ್ದು ಸೆರೆಹಾಕಿದ ಪ್ರಸ್ತಾಪವಿದೆ. ತುರುವೇಕೆರೆ ಪರಿಸರದಲ್ಲಿ ಒಡೆಯರ ಎರಡು ಪಂಗಡಗಳಿದ್ದು, ಇವರಲ್ಲಿ ರೇವಣಸಿದ್ಧೇಶ್ವರರ ಪರಂಪರೆಯ ಶಾಂತೊಡೆಯರೇ ಹಾಲುಮತದ ಕುರುಬರಿಗೆ ಗುರುಗಳು ಎಂಬುದನ್ನು ಈ ಶಾಸನದಿಂದ ಸ್ಪಷ್ಟಪಡಿಸಿದ್ದಾರೆ.

೪. 'ಒಡೆಯರು'(ಹಾಲುಮತ ವ್ಯಾಸಂಗ-೨, ೨೦೧೧)

ಕೆ. ರವೀಂದ್ರನಾಥ ಅವರ ಈ ಲೇಖನವು ಪ್ರಸ್ತುತ 'ಒಡೆಯರು' ಎಂದರೆ ಯಾರು, ಒಡೆಯರಿಗೆ ಇರುವ ಪರ್ಯಾಯ ಪದಗಳೇನು? ಅವರ ಸ್ಥಾನವೇನು? ಇನ್ನೂ ಮುಂತಾದ ಸಂಗತಿಗಳನ್ನು ಚರ್ಚೆ ಮಾಡುತ್ತ, ಗುರುಒಡೆಯರ ಪರಂಪರೆಯಲ್ಲಿ ಮೂರು ಸಂಪ್ರದಾಯಗಳಿವೆ ಎಂಬುದನ್ನು ವಿಂಗಡಿಸಿದ್ದಾರೆ. ಮೊದಲನೆಯದಾಗಿ ರೇವಣಸಿದ್ಧೇಶ್ವರನ ಪೀಠಾಧಿಕಾರಿಗಳಾಗಿ ಶಾಂತೊಡೆಯರು ಕಂಡುಬರುತ್ತಾರೆ. ಎರಡನೆಯದಾಗಿ ಸಿದ್ಧರಾಮೇಶ್ವರ ಪೀಠಾಧಿಕಾರಿಗಳಾಗಿ ಮಂಕೊಡೆಯರು ಬರುತ್ತಾರೆ.

ನಂತರ ಮೂರನೆಯದಾಗಿ ಅಮೋಘ ಒಡೆಯರು ಇಲ್ಲವೆ ಅಮುಗೊಡೆಯರು ಕಂಡುಬರುತ್ತಾರೆ. ಈ ಮೂರು ಸಂಪ್ರದಾಯದ ಗುರುಒಡೆಯರ ಪರಂಪರೆಯನ್ನು ತಮ್ಮ ತಮ್ಮ ಮಕ್ಕಳು, ಮೊಮ್ಮಕ್ಕಳು ಬೆಳೆಸಿಕೊಂಡು ಬಂದಿರಬೇಕು. ಅವರು ಯಾರು, ಹೇಗೆ ಎಂಬ ವಿಚಾರಗಳನ್ನು ಇದರಲ್ಲಿ ವಿಂಗಡಿಸಿದ್ದಾರೆ.

೫. ಸರೂರ ಶ್ರೀ ರೇವಣಸಿದ್ಧೇಶ್ವರರ ಕ್ಷೇತ್ರ ಪರಿಚಯ

ಈ ಲೇಖನವನ್ನು ಸಿದ್ಧಯ್ಯ ಎಚ್. ಗುರುವಿನ ಅವರು ರಚಿಸಿದ್ದಾರೆ. ಇದನ್ನು ಬೆಳ್ಳಿಹಬ್ಬದ ಸ್ಮರಣ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. ಬೆಳ್ಳಿಯ ಮೂಲನೆಲೆ ಸರೂರಾಗಿದೆ ಇದು ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲೂಕಿನಲ್ಲಿ ಬರುತ್ತದೆ. ಈ ಊರಲ್ಲಿ ಆಚರಿಸುವ ರೇವಣಸಿದ್ಧೇಶ್ವರನ ಜಾತ್ರೆಯ ವಿಶೇಷತೆಯನ್ನು ತಿಳಿಸಿದ್ದಾರೆ. ಅದಕ್ಕೂ ಮೊದಲು ರೇವಣಸಿದ್ಧೇಶ್ವರನ ಗುಡಿಯನ್ನು ಏಳು ಗುಡಿಯೆಂದು ಕರೆಯುತ್ತಾರೆ. ಈ ದೇವಾಲಯದ ಇತಿಹಾಸ ಮತ್ತು ಈ ದೇವಾಲಯದಲ್ಲಿ ಪೂಜಾರಿಗಳು ಅಂದರೆ ಒಡೆಯರು ರೇವಣಸಿದ್ಧೇಶ್ವರನಿಗೆ ಮಾಡುವ ಪೂಜೆಯ ವಿಧಾನವನ್ನು ಕುರಿತು ಬರೆದಿದ್ದಾರೆ. ಹೀಗೆ ಸರೂರನ್ನು ಕುರಿತು ಸಂಕ್ಷಿಪ್ತವಾಗಿ ಮಾಹಿತಿಯನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

೬. 'ಸರೂರ'(ಹಾಲುಮತ ವ್ಯಾಸಂಗ-೩, ೨೦೧೧)

ರಾಜಶ್ರೀ ಪಾಟೀಲ ಅವರು ಸರೂರ ಲೇಖನವನ್ನು ಬರೆದಿದ್ದಾರೆ. ಈ 'ಸರೂರು' ಎಂಬುದು ಕುರುಬರ ಗುರುಒಡೆಯರ ಮೂಲಕೇಂದ್ರವಾಗಿದೆ. ಇದರ ಮೂಲಪುರುಷ ಶಾಂತಮುತ್ತಯ್ಯ. ಈತನ ಸಾಂಸ್ಕೃತಿಕ ಚಿತ್ರಣ, ರೇವಣಸಿದ್ಧನ ಜಾತ್ರೆ, ಪಲ್ಲಕ್ಕಿ-ಉತ್ಸವ, ಊರಿನ ಸ್ಥಳನಾಮದ ಬಗ್ಗೆ, ಆಚರಣೆ-ಸಂಪ್ರದಾಯಗಳ ಬಗ್ಗೆ, ಗುರುಪರಂಪರೆ, ದೇವಾಲಯ, ವಾಸ್ತುಶಿಲ್ಪ, ಹೇಳಿಕೆಗಳು ಒಟ್ಟಾರೆ ಸರೂರಿನ ಹಾಲುಮತ ಗುರುಒಡೆಯರ ಪರಂಪರೆಯನ್ನು ಸಂಕ್ಷಿಪ್ತವಾಗಿ ವಿವರಿಸಿದ ಸಂಗತಿಗಳು ಈ ಲೇಖನದಲ್ಲಿ ಕಂಡುಬರುತ್ತವೆ.

೭. ರೇವಣಸಿದ್ಧ: ಚರಿತ್ರೆಯ ಎರಡು ಸಂಪ್ರದಾಯಗಳು(ಲಿಂಗಾಯತ-೩, ೧೨)

ಪ್ರಸ್ತುತ ಲೇಖನವನ್ನು ಎಂ.ಎಂ. ಕಲಬುರ್ಗಿ ಅವರು ರಚಿಸಿದ್ದಾರೆ. ಲೇಖನವನ್ನು ಗಮನಿಸಿದಾಗ ರೇವಣಸಿದ್ಧ, ಸಿದ್ಧರಾಮ ಮೂಲತಃ ಜಾತಿಯಿಂದ ಕುರುಬರು, ಪಂಥದಿಂದ ಸಿದ್ಧರು, ಇವರಲ್ಲಿ ದೀಕ್ಷೆ ಹೊಂದಿ ಸಿದ್ಧರಾಮ ಶರಣಧರ್ಮವನ್ನು, ಅವನ ಸಿದ್ಧ ಪಂಥಿಯರು ಭಕ್ತಿ ಪ್ರಜ್ಞೆಯಿಂದ ಶುದ್ಧ ಶೈವರು ಆಚಾರ ಪ್ರಜ್ಞೆಯಿಂದ ಚಿತ್ರಿಸುವ ಪ್ರಯತ್ನ ನಡೆಸಿದರು. ಇದರಿಂದ ಸಿದ್ಧರಾಮನಿಗೂ ಮತ್ತು ರೇವಣಸಿದ್ಧನಿಗೂ ಇರುವ ಸಂಬಂಧದ ಸ್ಪಷ್ಟತೆಯನ್ನು ತಿಳಿಸಿದ್ದಾರೆ.

೮. 'ರೇವಣಸಿದ್ಧೇಶ್ವರ'(ಹಾಲತೊರೆ-೨, ೨೦೦೩)

ಪ್ರಸ್ತುತ ಲೇಖನವನ್ನು ಸುಧಾಕರ ಅವರು ರಚಿಸಿದ್ದು, ಈ ಲೇಖನದಲ್ಲಿ ರೇವಣಸಿದ್ಧ ಮತ್ತು ಶಾಂತಮುತ್ತಯ್ಯರ ಸಂಬಂಧ ವಿಭಿನ್ನವಾಗಿದೆ. ಅಂದರೆ ಇಲ್ಲಿ ಕಾವ್ಯ-ಪುರಾಣ, ಡೊಳ್ಳಿನ ಹಾಡುಗಳ ಪ್ರಕಾರ ಶಾಂತಮುತ್ತಯ್ಯನ ಗುರು ರೇವಣಸಿದ್ಧನೆಂದು ಕರೆಯುತ್ತಾರೆ. ಈ ಎಲ್ಲಾ ವಿಚಾರಗಳು ಈ ಪ್ರಬಂಧದಲ್ಲಿ ಚರ್ಚಿಸಿದ್ದಾರೆ. ಜೊತೆಗೆ ನಾಲ್ಕನೆಯ ಮಗ ಶಾಂತಯ್ಯ ಅವನ ಮಗ ರೇವಣಸಿದ್ಧ ಎಂಬ ಭಿನ್ನವಾದ ಅಭಿಪ್ರಾಯವನ್ನು ಹೊಂದಿರುವ ಸಂಗತಿಗಳನ್ನು ಇದರಲ್ಲಿ ಚರ್ಚಿಸಿದ್ದಾರೆ.

೯. ರೇವಣಸಿದ್ಧ ಪರಂಪರೆಯ ಹಾಲುಮತ ಮಠಗಳು(ಇತಿಹಾಸ ದರ್ಶನ ಸಂಪುಟ-೨೦, ೨೦೦೫)

ಈ ಲೇಖನವನ್ನು ಎಫ್.ಟಿ. ಹಳ್ಳಿಕೇರಿ ಅವರು ರಚಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ಚರ್ಚಿಸಿರುವಂತೆ ರೇವಣಸಿದ್ಧ, ಶಾಂತಮುತ್ತಯ್ಯ ಮತ್ತು ಅಮೋಘಸಿದ್ಧರ ಸಂಪ್ರದಾಯಗಳನ್ನು ತಿಳಿಸಿದ್ದಾರೆ. ಈ ಗುರುಪರಂಪರೆಯ ಮಠಗಳು ಭೌಗೋಳಿಕವಾಗಿ ದೊರೆಯುವ ಜಿಲ್ಲೆ ತಾಲೂಕುಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಇನ್ನೂ ಮುಂದುವರೆದು ಒಡೆಯರ ಹೇಳಿಕೆಗಳು, ಅವರ ಸ್ಥಿತಿಗತಿಗಳು ಹೀಗೆ ಅನೇಕ ಸಂಗತಿಗಳ ಬಗ್ಗೆ ಈ ಲೇಖನದಲ್ಲಿ ಹೇಳಿದ್ದಾರೆ.

ಹೀಗಾಗಿ ಪ್ರಸ್ತುತ ಅಧ್ಯಯನಕ್ಕೆ ರೇವಣಸಿದ್ಧನ ಮಠ ಅಥವಾ ದೇವಾಲಯಗಳ ರೂಪದಲ್ಲಿ ಕರ್ನಾಟಕದಲ್ಲಿ ಸಿಗುವ ಭೌಗೋಳಿಕ ವ್ಯಾಪ್ತಿಯನ್ನು ತಿಳಿಯಲು ಉಪಯುಕ್ತವಾಗಿದೆ.

೧೦. "ಅಲಿಖಿತ ಆಕರಗಳಲ್ಲಿ ರೇವಣಸಿದ್ಧ"(ಇತಿಹಾಸ ದರ್ಶನ ಸಂಪುಟ-೨೫, ೨೦೦೫)

ಪ್ರಸ್ತುತ ಲೇಖನದಲ್ಲಿ ಎಫ್.ಟಿ. ಹಳ್ಳಿಕೇರಿ ಅವರು ಮೌಖಿಕ ಕಥೆ, ಡೊಳ್ಳಿನ ಹಾಡು, ಜಾನಪದ ಹಾಡು, ಟಗರ, ಜೋಗಿಗಳ ಕಥೆ ಇತ್ಯಾದಿ ಅಲಿಖಿತ ಆಕರಗಳ ಮೂಲಕ ರೇವಣಸಿದ್ಧನನ್ನು ಗುರುತಿಸಿದ್ದಾರೆ. ಈತನ ಇತಿವೃತ್ತ ವಿಚಾರ, ಭೌಗೋಳಿಕ ನೆಲೆ, ಮೌಖಿಕ ಆಕರಗಳಲ್ಲಿ ಮೂಡಿಬಂದ ರೇವಣಸಿದ್ಧನ ಚಿತ್ರಣವನ್ನು ಕಾಣಬಹುದು. ಈತನ ಪರಂಪರೆಯ ಅನುಯಾಯಿಗಳಾದ ಶಾಂತೊಡೆಯರ ಸಂಪ್ರದಾಯ, ಮಠಗಳು ಹಾಗೂ ಒಡೆಯರುಗಳ ಇಂದಿನ ಸ್ಥಿತಿಗತಿಗಳನ್ನು ತಿಳಿಸುವುದರ ಮೂಲಕ ಪ್ರಸ್ತುತ ಅಧ್ಯಯನಕ್ಕೆ ಗಮನಾರ್ಹ ವಿಚಾರಗಳನ್ನು ಒದಗಿಸಿದೆ.

೧೧. 'ಶ್ರೀ ಸಿದ್ಧರಾಮ'(ಗುರುವಂದನ, ೨೦೦೭)

ಚಂದ್ರಕಾಂತ ಬಿಜ್ಜಳಗಿ ಅವರು ಪ್ರಸ್ತುತ ಲೇಖನದಲ್ಲಿ ಅವಲೋಕಿಸಿರುವಂತೆ ಸಿದ್ಧರಾಮನ ಇತಿವೃತ್ತವನ್ನು ಹೇಳುತ್ತ, ಕವಿ ಚರಿತ್ರಾಕಾರರು ಸಿದ್ಧರಾಮನ ಕಾಲವನ್ನು ಕ್ರಿ.ಶ. ೧೧೬೦ ಎಂದು ಹೇಳುತ್ತಾರೆ. ಇವನು ಅಲ್ಲಮ, ಬಸವಣ್ಣ, ರೇವಣಸಿದ್ಧ, ಮರುಳಸಿದ್ಧ, ಶಾಂತಮುತ್ತಯ್ಯನ ಸಮಕಾಲೀನನಾಗಿದ್ದಾನೆ. ಮರುಳಸಿದ್ಧ ಸಿದ್ಧರಾಮನನ್ನು ಸರೂರಿಗೆ ಕರೆಯಿಸಿಕೊಂಡು ಕುರುಬರಿಗೆ

ಆದ ಅನ್ಯಾಯವನ್ನು ವಿರೋಧಿಸುತ್ತ ಕಲ್ಯಾಣ ಪಟ್ಟಣಕ್ಕೆ ಮುತ್ತಿಗೆ ಹಾಕುತ್ತಾರೆ. ಸಿದ್ಧರಾಮನ ನೇತೃತ್ವದಲ್ಲಿ ಸಂಧಾನ ನಡೆದು ಹಂಡೆಕುರುಬರಿಗೆ ಪಟ್ಟಣದಲ್ಲಿ ಮರುಪ್ರವೇಶ ದೊರೆಯುತ್ತದೆ. ಇದರಿಂದ ಹಂಡೆ ಕುರುಬರು ಸಿದ್ಧರಾಮನ ಪರಮ ಶಿಷ್ಯರಾಗುತ್ತಾರೆ. ಸಿದ್ಧರಾಮನ ಕ್ಷೇತ್ರಗಳು ಕುರುಬರ ನೆಲೆಯಲ್ಲಿ ಇರುವುದನ್ನು ಎಲ್ಲರೂ ಗಮನಿಸಿರಬಹುದು. ಹೀಗೆ ಸಿದ್ಧರಾಮನನ್ನು ಕುರಿತು ಅನೇಕ ವಿಚಾರಗಳನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

೧೨. ಹಾಲುಮತ ಸಂಸ್ಕೃತಿಯ ವಿಶಿಷ್ಟ ಕೃತಿ ಸಿದ್ಧಮಂಕ ಚರಿತೆ(ಗುರುವಂದನ–೨೦೦೭)

ಪ್ರಸ್ತುತ ಲೇಖನವನ್ನು ಎಫ್.ಟಿ. ಹಳ್ಳಿಕೇರಿ ಅವರು ರಚಿಸಿದ್ದಾರೆ. ಈ ಪ್ರಬಂಧವನ್ನು ಗಮನಿಸಿದಾಗ, ಸರೂರ ಹಾಲುಮತಸ್ಥರಿಗೆ ಸಂಬಂಧಿಸಿದ ಶಿಷ್ಟ ಸಾಹಿತ್ಯದ ಅಧ್ಯಯನದಲ್ಲಿ ಸಿದ್ಧಮಂಕ ಚರಿತೆಯು ಒಂದಾಗಿದೆ. ಹಾಲುಮತ ಸಮುದಾಯವನ್ನು ಕಲ್ಯಾಣದಿಂದ ಹೊರಹಾಕಲಾಯಿತು. ಆಗ ತೂಗುಡ್ಡದಲ್ಲಿ, ಮಂಕಸಿದ್ಧ ತಪವಿದ್ದು ಸಿದ್ಧರಾಮನನ್ನೇ ಅಲ್ಲಿಗೆ ಕರೆಸಿಕೊಂಡ ಸಂಗತಿಗಳು ಈ ಕೃತಿಯಲ್ಲಿ ಕಂಡುಬರುತ್ತವೆ. ಅಂದರೆ ಕುರುಬ ಸಮುದಾಯದ ಒಳಿತಿಗಾಗಿ ಹೋರಾಡಿದ ವಿಚಾರಗಳನ್ನು ಇದರಲ್ಲಿ ಕಾಣಬಹುದು. ಹೀಗೆ ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಸರೂರ ಹಾಲುಮತ ಸಂಪ್ರದಾಯದ ಸಿದ್ಧಮಂಕನ ಅನುಯಾಯಿಗಳಾದ ಮಂಕೊಡೆಯರ ಸಂಪ್ರದಾಯವನ್ನು ಸಾಂಸ್ಕೃತಿಕ ಹಿನ್ನೆಲೆಯಾಗಿ ಕಟ್ಟಿಕೊಡುವ ಪ್ರಯತ್ನವಾಗಿದೆ.

೧೩. ಕುರುಬರ ಗುರುಒಡೆಯರು(ಕಾಯಕ ಯೋಗಿ– ೨೦೦೨)

ಸಿ.ಆರ್. ಗುರುಸಿದ್ಧಯ್ಯ ಒಡೆಯರ ಅವರ ಈ ಲೇಖನವು ಈಗಿನ ಸಂಶೋಧನೆಗೆ ಪೂರಕವಾದ ಮಾಹಿತಿಯನ್ನು ಒದಗಿಸುತ್ತದೆ. ಕುರುಬ ಜನಾಂಗದಲ್ಲಿ ತಮ್ಮವರೇ ಆದ ಕುರುಬರ ಗುರುಒಡೆಯರು ಇರುವುದು ಕಂಡುಬರುತ್ತದೆ. ಈ ಒಡೆಯರ ಗುರುಪರಂಪರೆಯು ಪ್ರತಿಯೊಂದು ಧಾರ್ಮಿಕ ಕಾರ್ಯಗಳಿಗೆ ಅತಿ ಮುಖ್ಯವಾದ ಸಂಗತಿಯಾಗಿದೆ. ಈ ಗುರುಪರಂಪರೆಯಲ್ಲಿ ಒಡೆಯರು ಸತ್ತ ನಂತರ ಆತನ ಹೆಂಡತಿಗೆ ಪಟ್ಟಕಟ್ಟುತ್ತಾರೆ. ಅಂದರೆ ಯಜಮಾನಿಕೆತನವನ್ನು ಕೊಟ್ಟು, ಆಕೆಯನ್ನು ಒಡೇರಮ್ಮ ಎಂದು ಕರೆಯುತ್ತಾರೆ. ಇವರು ಯಾವುದೇ ಮಾಂಗಲ್ಯಧಾರವನ್ನು ತೆಗೆಯುವಂತಿಲ್ಲ. ಈ ರೀತಿಯಾದ ಒಂದು ವಿಶಿಷ್ಟ ಮತ್ತು ವಿಶೇಷವಾದ ಸಂಪ್ರದಾಯವನ್ನು ಗುರುಒಡೆಯರು ರೂಢಿಸಿಕೊಂಡು ಬಂದಿದ್ದಾರೆ. ಚಾರಿತ್ರಿಕ ತಳಹದಿಯ ಮೇಲೆ ರೂಪಿತವಾದ ಕುರುಬರ ಗುರುಪರಂಪರೆಗೆ ಇಂದಿಗೂ ಗೌರವವಿದೆ ಎಂಬ ಹಲವು ವಿಚಾರಗಳನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

೧೪. ಮುದ್ದೇಬಿಹಾಳ ಪ್ರದೇಶದ ಗ್ರಾಮ ನಾಮಗಳು(ಮುದ್ದೇಬಿಹಾಳ ತಾಲೂಕಿನ ಇತಿಹಾಸ ದರ್ಶನ(ಡೋಣಿಸಿರಿ) ೨೦೧೪)

ಪ್ರಸ್ತುತ ಲೇಖನವನ್ನು ಬಸವರಾಜ ಎಸ್. ಮಠ ಅವರು ರಚಿಸಿದ್ದಾರೆ. ಈ ಲೇಖನದಲ್ಲಿ ಮುದ್ದೇಬಿಹಾಳ ತಾಲೂಕಿನಲ್ಲಿ ಬರುವ ಗ್ರಾಮಗಳ ಸ್ಥಳನಾಮಗಳು ಯಾವ ರೀತಿಯಾಗಿ ಬಂದವು ಎಂಬುದನ್ನು ಇಲ್ಲಿ ಚರ್ಚಿಸಿದ್ದಾರೆ.

ಸರ>ಊರು = ಸರವೂರು, ಸರೂರು. ಈ ಊರಿ ಮುಂದಿನ ದೊಡ್ಡಹಳ್ಳ ಬಹುಕಾಲ ಹಿಂದೆ ಕೃಷ್ಣಾನದಿ ಚಿಕ್ಕ ಶಾಖೆಯಾಗಿತ್ತೆಂದು, ಊರ ಪಕ್ಕದಲ್ಲಿರುವ ಗುಡ್ಡವು ನೀರಿನಲ್ಲಿ ನಿಂತಿರುವುದರಿಂದ ಅದಕ್ಕೆ ತೊಯ್ದುಗುಡ್ಡವೆಂಬ ಹೆಸರು ಬಂದಿತೆಂದು ಇತಿಹಾಸದ ಕುರುಹುಗಳುಂಟು. ಈ ಹಳ್ಳಕ್ಕೆ ಕಟ್ಟಿದ ಅಗಳೀಕೆಯಿಂದ ನೀರಾವರಿ ನಡೆಯುತ್ತಿದೆಂದು ಸರೂರ ಶಾಸನ(೧೨೧೫) ಹೇಳುತ್ತದೆ. ಇವುಗಳ ಆಧಾರದ ಮೇಲೆ ಸರೂರು ಎಂಬ ಹೆಸರು ಬಂದಿರುವುದೆಂದು ಇದರಲ್ಲಿ ತಿಳಿಯಲಾಗಿದೆ.

೧೫. ಮುದ್ದೇಬಿಹಾಳ ತಾಲೂಕಿನ ಸರೂರಿನ ಶಿಲ್ಪಗಳಲ್ಲಿ ಮುನಿ-ಭಕ್ತರು(ಮುದ್ದೇಬಿಹಾಳ ತಾಲೂಕಿನ ಇತಿಹಾಸ ದರ್ಶನ(ಡೋಣಿಸಿರಿ)-೨೦೧೪)

ಈ ಲೇಖನವನ್ನು ರು.ಮ. ಷಡಕ್ಷರಯ್ಯ ಅವರು ಬರೆದಿದ್ದಾರೆ. ಇದರಲ್ಲಿ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಸಿಂಪಗಿಯ ಶಿಲ್ಪಗಳನ್ನು ಪ್ರಥಮ ಬಾರಿಗೆ ಡಾ. ಅ. ಸುಂದರ ಅವರು ಅಂಗ ವಿನ್ಯಾಸ ಭಂಗಿ, ವಸ್ತ್ರಾಭರಣಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ಅವುಗಳನ್ನು ಯತಿ ಉಪಾಸಕ, ಉಪಾಸಕಿಯರೆಂದು ಪ್ರತ್ಯೇಕಿಸಿರುವರು. ಅವುಗಳ ಮೂಲ ನಾಮಾಂಕಿತ ತಿಳಿದಿಲ್ಲ. ಇಂತಹ ಶಿಲ್ಪಗಳಿಗೆ ಸರೂರು ಗ್ರಾಮದ ರೇವಣಸಿದ್ಧೇಶ್ವರ ದೇವಾಲಯ ಹೆಸರಾಗಿದೆ. ಇದರಲ್ಲಿ ಒಟ್ಟು ಎರಡು ಶಿಲ್ಪ ಶಾಸನಗಳು ದೊರಕಿವೆ. ನೂರಾರು ಚಿಕ್ಕ ಪುಟ್ಟ ನಾಗ ಶಿಲ್ಪಗಳಿವೆ. ದೇವಾಲಯದ ಒಳಗಡೆ ಶೈವ ಯತಿಗಳ, ಉಪಾಸಕ, ಉಪಾಸಕಿಯರ, ದಂಪತಿಗಳ ಮತ್ತು ರಾಶಿ-ಚಕ್ರ ಫಲಕ ಶಿಲ್ಪಗಳಿವೆ. ಇವಲ್ಲದೆ ನಾಗ, ವಿಷ್ಣು, ನಂದಿ, ವಿಗ್ರಹಗಳಿವೆ. ಹೀಗೆ ಸರೂರಿನ ದೇವಾಲಯದಲ್ಲಿರುವ ಶಿಲ್ಪಗಳ ಬಗ್ಗೆ ಈ ಲೇಖನದಲ್ಲಿ ಸಂಕ್ಷಿಪ್ತವಾಗಿ ಅವಲೋಕಿಸಿದ್ದಾರೆ

೧೬. ಕುರುಬರ ಗುರುಪರಂಪರೆಯಲ್ಲಿ ಒಡೇರಮ್ಮ(ಹಾಲುಮತ ಮಹಿಳಾ ಸಾಧಕರು, ಪು. ೨೨, ೨೦೧೫)

ಪ್ರಸ್ತುತ ಲೇಖನವನ್ನು ಬಿ.ಜಿ. ಬಿರಾದಾರ ಅವರು ರಚಿಸಿದ್ದಾರೆ. ಈ ಲೇಖನವನ್ನು ಗಮನಿಸಿದಾಗ ಗುರುಒಡೆಯರ ಪರಂಪರೆಯಲ್ಲಿ ಒಡೆಯರು ಮರಣ ಹೊಂದಿದಾಗ ಆ ಸ್ಥಾನವನ್ನು ಅವರ ಹಿರಿಯ ಮಗನಾಗಲೀ, ಮಗಳಾಗಲೀ ಸ್ವೀಕರಿಸುವುದಿಲ್ಲ. ಆ ಒಡೆಯರ ಹೆಂಡತಿ ಆತನ ಎಲ್ಲ ಕಾರ್ಯಗಳಿಗೆ ಒಡತಿ ಅಥವಾ ಒಡೇರಮ್ಮಳಾಗುತ್ತಾಳೆ. ಆದ್ದರಿಂದ ಈ ಲೇಖನದಲ್ಲಿ ಒಡೇರಮ್ಮಳ

ಕರ್ತವ್ಯವೇನು, ಧಾರ್ಮಿಕವಾಗಿ, ಸಾಮಾಜಿಕವಾಗಿ ಅವಳಿಗೆ ಕುರುಬ ಸಮುದಾಯದಲ್ಲಿ ನೀಡುತ್ತಿರುವ ಗೌರವವೇನು ಎಂಬ ಅನೇಕ ವಿಚಾರಗಳನ್ನು ಈ ಲೇಖನದಲ್ಲಿ ಚಿತ್ರಿಸಿದ್ದಾರೆ.

೪. ಶಾಸನಗಳು

ಸರೂರ ಹಾಲುಮತ ಗುರುಪರಂಪರೆಗೆ ಸಂಬಂಧಿಸಿದ ಕೆಲವು ಶಾಸನಗಳು ದೊರಕಿದ್ದು ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿವೆ. ಅವುಗಳನ್ನು ಈ ಮುಂದಿನಂತೆ ಪರಿಚಯಿಸಲಾಗಿದೆ.

೧. ತುರುವೇಕೆರೆ ಶಾಸನ

ಇದು ಮೂರು ತಾಮ್ರ ಪತ್ರಗಳಲ್ಲಿ ದೊರಕ್ಕಿದ್ದು, ೮೭ ಸಾಲುಗಳಿಂದ ಬರೆಯಲ್ಪಟ್ಟಿದೆ. ಇದರಲ್ಲಿರುವ ವಸ್ತು ಇಷ್ಟೇ, ಹಾಲುಮತ ಕುರುಬರಿಗೆ ಗುರುಗಳು ಯಾರು ಎಂಬ ವಾದವಿವಾದದ ಮೂಲಕ ಸರೂರ ಶಾಂತಮುತ್ತಯ್ಯನೇ ಕುರುಬರಿಗೆ ಗುರು ಎಂಬ ವಿಚಾರವಿದೆ. ಆದ್ದರಿಂದ ಈ ಶಾಸನವು ಕುರುಬರ ಗುರುವಿನ ಸ್ಪಷ್ಟತೆಯನ್ನು ತಿಳಿಸುತ್ತದೆ.

೨. ಶಿರವಾಳ ಶಾಸನ

ಈ ಶಾಸನವನ್ನು ೧೧೭೮ರ ಹೊತ್ತಿಗೆ ಹೊರಡಿಸಲಾಗಿದ್ದು, ಶಾಂತಿಮಯ್ಯ ಹಾಗೂ ಅವನ ಮಗ ರೇವಣದೇವಯ್ಯನ ಪವಾಡಗಳನ್ನು ಹೇಳುತ್ತದೆ. ಜೊತೆಗೆ ಈ ಶಾಂತಮುತ್ತಯ್ಯನನ್ನು ಕುರಿತು ಶಿರವಾಳ ಕೆಲ್ಲೂರು, ಹೊತಗಲ್ಲಿ ಸಿರವಾಳ ಹೀಗೆ ನಾಲ್ಕು ಶಾಸನಗಳು ದೊರೆಯುತ್ತವೆ. ಇವು ಸಿರವಾಳದಲ್ಲಿ ಪ್ರಸಿದ್ಧವಾದ ಸಿದ್ಧ ಶಾಂತೇಶ್ವರ ದೇವರ ಪೂಜೆಗಾಗಿ ಅವರ ಪುತ್ರ ರೇವಣ ದೇವನಿಗೆ ದಾನ ನೀಡಿರುವುದನ್ನು ಹೇಳುತ್ತವೆ.

೩. ಸರೂರಿನ ಎರಡು ಶಾಸನಗಳು

ಈ ಎರಡೂ ಶಾಸನಗಳು ಮಂಕಯ್ಯ ಎಂಬುವವನನ್ನು ಉಲ್ಲೇಖಿಸುತ್ತವೆ. ಜೊತೆಗೆ ಮಲ್ಲಿಕಾರ್ಜುನ ದೇವರನ್ನು ಹಾಗೂ ಆ ದೇವರಿಗೆ ಭೂಮಿ, ಬಂಗಾರ, ಮನೆ, ನಿವೇಶನವನ್ನು ದತ್ತಿ ಕೊಟ್ಟಿರುವ ಸಂಗತಿಗಳನ್ನು ತಿಳಿಸುತ್ತವೆ. ಹೀಗಾಗಿ ಪ್ರಸ್ತುತ ಸರೂರ ಹಾಲುಮತ ಗುರುಒಡೆಯರ ಪರಂಪರೆಯಲ್ಲಿ ಸಿದ್ಧಮಂಕ ಅನುಯಾಯಿಗಳಾದ ಮಂಕೊಡೆಯರನ್ನು ಗುರುತಿಸುತ್ತದೆ.

೫. ದಾಖಲೆ ಪತ್ರಗಳು

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ಪರಂಪರೆಗೆ ಸಂಬಂಧಿಸಿದ ಕೆಲವು ದಾಖಲೆ ಪತ್ರಗಳು ದೊರಕಿವೆ. ಅವುಗಳನ್ನು ನೋಡುವುದಾದರೆ;

೧. ಕ್ರಿ.ಶ. ೧೯೧೪ರಲ್ಲಿ ಮಹಾಸಂಧಿ ಸಂಸ್ಥಾನದವರು ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕುರುಬ ಮಹಾಮಂಡಳಿಯವರಿಗೆ ಬರೆದ ದಾಖಲೆ ಪತ್ರ ಸಿಕ್ಕಿವೆ. ಇದು ಅಕ್ರಮ ಸ್ತ್ರೀ ಮೊಕದ್ದಮೆ

ನಡೆಸಿದ ಸದರಿ ಒಡೆಯರು ಲಾಕೋಫನ್ನು ಅನುಭವಿಸಿದ ಕಾರಣಕ್ಕೆ ಒಡೆತನದಿಂದ ತೆಗೆದು ಹಾಕಿರುವ ಸಂಗತಿಗಳು ಈ ಪತ್ರದಿಂದ ತಿಳಿದುಬರುತ್ತದೆ.

೨. ಕ್ರಿ.ಶ. ೧೯೨೯ರಲ್ಲಿ ಚನ್ನರಾಯಪಟ್ಟಣ ತಾಲೂಕು ಹಾಗೂ ಹೊಳೇನರಸಿಪುರ ತಾಲೂಕಿನ ಮುಖ್ಯಸ್ಥರು ಮೈಸೂರು ಸೀಮೆಯ ಕುರುಬ ಮಂಡಳಿಯವರಿಗೆ ಬರೆಸಿದ ಪತ್ರವಾಗಿದೆ. ಇದು ಹಾಲುಮತ ಜನಾಂಗವು ದಿನೇ ದಿನೆ ಕೇವಲ ಸ್ಥಿತಿಗೇರುತ್ತದೆ. ಈ ಮತಕ್ಕೆ ವಿರೋಧವಾದ ಚಟುವಟಿಕೆಗಳನ್ನು ಮಾಡುತ್ತದೆ. ಆದ್ದರಿಂದ ಅವರಿಗೆ ಒಳ್ಳೆಯ ಸೂಚನೆ ನೀಡಬೇಕೆಂಬ ವಿಚಾರಗಳನ್ನು ಈ ಪತ್ರ ತಿಳಿಸುತ್ತದೆ.

೩. ಕ್ರಿ.ಶ. ೧೯೩೧ರಲ್ಲಿ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕು ಬರಗೂರಲ್ಲಿ ತೀರ್ಮಾನವಾದ ದಾಖಲೆ ಪತ್ರ ಸಿಕ್ಕಿದೆ. ಇದರಲ್ಲಿ ಶಿಕ್ಷಣದ ಬಗ್ಗೆ ಹೆಚ್ಚು ಕಾಳಜಿ ವಹಿಸಿರುವಂತಹದ್ದು ಹಾಗೂ ವಧುದಕ್ಷಿಣೆಯನ್ನು ವಿರೋಧಿಸುವಂತಹದ್ದು ಮತ್ತು ವಿಶೇಷವಾಗಿ ಕುರುಬರು ಸರೂರ ಶಾಖಾ ಗುರುಗಳಿಗೆ ಹೊರತು ಅನ್ಯಜಾತಿಯ ಗುರುಗಳಿಗೆ ನಡೆದುಕೊಳ್ಳಬಾರದು ಎಂಬ ಸಂಗತಿಗಳನ್ನು ಈ ಸಭೆಯಲ್ಲಿ ತೀರ್ಮಾನಿಸಲಾಗಿರುವ ವಿಚಾರಗಳನ್ನು ಗಮನಿಸಬಹುದು.

೪. ಕ್ರಿ.ಶ. ೧೯೮೦ರಲ್ಲಿ ಅನಂತಪುರ ಜಿಲ್ಲೆಯ ಕಲ್ಯಾಣದುರ್ಗ ತಾಲೂಕಿನಲ್ಲಿ ಶೀರ್ಪಿ ಗ್ರಾಮವಿದೆ. ಇಲ್ಲಿ ಸುಮಾರು ಎಂಟುನೂರ ವರ್ಷಗಳ ಇತಿಹಾಸವಿರುವ ಸಿದ್ಧೇಶ್ವರಸ್ವಾಮಿಯ ದೇವಸ್ಥಾನವಿದೆ. ಅದು ಸರ್ಕಾರಿ ಅಧೀನದಲ್ಲಿರುವ ಭೂಮಿಯಲ್ಲಿದೆ. ಅದಕ್ಕೆ ಅಲ್ಲಿನ ಗುರುಒಡೆಯರು ಸೇರಿ ಸರ್ಕಾರಕ್ಕೆ ಪತ್ರ ಬರೆದಿರುವುದು ತಿಳಿದುಬರುತ್ತದೆ.

ಈ ರೀತಿಯಾದ ದಾಖಲೆ ಪತ್ರಗಳಿಂದ ಕುರುಬರ ಗುರುಒಡೆಯರು ಅಂದಿನ ಕಾಲದಲ್ಲಿಯೇ ಗುರುವಿನ ಒಡೆತನದಲ್ಲಾಗಲಿ, ಆಚರಣೆಯಲ್ಲಾಗಲೀ, ಶಿಕ್ಷಣದ ತಿಳಿವಳಿಕೆಯಲ್ಲಾಗಲೀ ವಿಶಿಷ್ಟತೆಯನ್ನು ಬೆಳೆಸಿಕೊಂಡು ಬಂದಿರುವುದು ತಿಳಿದುಬರುತ್ತದೆ. ಇಂತಹ ಪರಂಪರೆಯನ್ನು ತಿಳಿಸುವ ದಾಖಲೆ ಪತ್ರಗಳಿಂದ ಸರೂರ ಗುರುಒಡೆಯರ ಪರಂಪರೆಯನ್ನು ತಿಳಿದುಕೊಳ್ಳಲು ಉಪಯುಕ್ತವಾದ ಮಾಹಿತಿ ಸಾಮಗ್ರಿಗಳಾಗಿವೆ.

ಮೌಖಿಕ ಆಕರಗಳು

ಪ್ರಸ್ತುತ ಅಧ್ಯಯನಕ್ಕೆ ಲಿಖಿತ ಆಕರಗಳ ಜೊತೆಗೆ ಮೌಖಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಹಾಲುಮತ ಸಮುದಾಯದಲ್ಲಿ ಆಚಾರ-ವಿಚಾರ ಸಂಸ್ಕೃತಿ ಹೆಚ್ಚಾಗಿ ಉಳಿದುಕೊಂಡು ಬಂದಿರುವುದು ಈ ಮೌಖಿಕ ಪರಂಪರೆಯಲ್ಲಿ ಈ ಸಮುದಾಯದ ಕಥೆ, ಐತಿಹ್ಯ, ಪುರಾಣ, ಡೊಳ್ಳಿನ ಹಾಡು ಮುಂತಾದ ಆಕರಗಳು ಹೇರಳವಾಗಿ ದೊರೆಯುತ್ತವೆ. ಇವು ಸರೂರ ಹಾಲುಮತ ಸಂಪ್ರದಾಯದ ಗುರುಪರಂಪರೆಯನ್ನು ಗುರುತಿಸುತ್ತವೆ. ಗುರುಪರಂಪರೆಯ ಮಹಾಪುರುಷರಾದ ರೇವಣಸಿದ್ಧ,

ಸಿದ್ಧರಾಮ ಹಾಗೂ ಕುರುಬರ ಕುಲಗುರುಗಳಾದ ಶಾಂತಮುತ್ತಯ್ಯ, ಮರುಳಸಿದ್ಧ ಇವರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಸಂಗತಿಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಹೀಗೆ ಮೌಖಿಕವಾಗಿ ದೊರೆಯುವಂತಹ ಆಕರಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಮುಖ್ಯವಾಗಿ ಈ ಮಹಾಪ್ರಬಂಧಕ್ಕೆ ಕಾವ್ಯ-ಪುರಾಣ ಶಾಸನ ಮತ್ತು ದಾಖಲೆಗಳನ್ನು ಪ್ರಮುಖ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ. ಜೊತೆಗೆ ಅನೇಕ ಸಾಂದರ್ಭಿಕ ಗ್ರಂಥಗಳನ್ನು ಅನುಷಂಗಿಕ ಆಕರಗಳಾಗಿ ಬಳಸಿಕೊಳ್ಳಲಾಗಿದೆ.

ಅಧ್ಯಾಯ ಮೂರು

ಸರೂರು ಹಾಲುಮತ ಸಮುದಾಯಗಳು

ಅಧ್ಯಾಯ ಮೂರು

ಸರೂರು ಹಾಲುಮತ ಸಮುದಾಯಗಳು

ಕರ್ನಾಟಕದಾದ್ಯಂತ ಅನೇಕ ಸಮುದಾಯಗಳು ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಂಡು ತಮ್ಮದೇ ಆದ ವಿಶಿಷ್ಟತೆಯನ್ನು ಪಸರಿಸುತ್ತಾ ಬಂದಿವೆ. ಸಂಪ್ರದಾಯದ ಹಿನ್ನಲೆಯಲ್ಲಿ ಬಂದಿರುವ ಹಲವು ಸಂಗತಿಗಳು ನಮ್ಮ ಕಣ್ಣಮುಂದೆ ಕಂಡುಬರುತ್ತವೆ. ಸಂಪ್ರದಾಯದ ಬದುಕನ್ನು ರೂಢಿಸಿಕೊಂಡು ಬಂದಿರುವ ಬಹುದೊಡ್ಡ ಸಮುದಾಯಗಳ ಪರಂಪರೆಯಲ್ಲಿ ಹಾಲುಮತ ಪರಂಪರೆಯೂ ಒಂದಾಗಿದೆ. ಈ ಸಮುದಾಯವು ತನ್ನದೇ ಆದ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಹಾಲುಮತ ಸಮುದಾಯಕ್ಕೆ ಮೂಲ ಗುರುಪೀಠ ಸರೂರು ಗ್ರಾಮ. ಇಂದಿನ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ನಾಲತವಾಡ ಹೋಬಳಿಯಲ್ಲಿ ಬರುವ ಪ್ರಾಚೀನವಾದ ಪರಂಪರೆಯನ್ನು ಹೊಂದಿದ ಗ್ರಾಮ.

ಹಾಲುಮತ ಸಮುದಾಯದ ಗುರುಒಡೆಯರಿಗೆ ಇದು ಮೂಲನೆಲೆಯಾಗಿದೆ. ಈ ಊರು ಸಾಂಸ್ಕೃತಿಕ ಚಿತ್ರಣವನ್ನು ಹಿಂದಿನಿಂದ ಪ್ರಸ್ತುತದವರೆಗೂ ರೂಢಿಸಿಕೊಂಡು, ಉಳಿಸಿಕೊಂಡು ಬಂದಿರುವ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಲ್ಲಿ ಲಿಂಗಾಯತರು, ಜೈನರು, ರೆಡ್ಡಿಗಳು, ಪಂಚಮಶಾಲಿಗರು, ಕುರುಬರ ಗುರುಒಡೆಯರು, ಬೇಡರು, ಮುಸ್ಲಿಮರು, ಮಾದಿಗರು ಈ ಎಲ್ಲಾ ಸಮುದಾಯದ ಜನರು ಸರೂರಲ್ಲಿ ವಾಸವಾಗಿದ್ದಾರೆ. ಈ ಸಮುದಾಯಗಳಲ್ಲಿ ಹಾಲುಮತ ಸಮುದಾಯದ ಜನರು ಹೆಚ್ಚಾಗಿ ವಾಸವಾಗಿದ್ದಾರೆ. ಊರಿನ ಜನಸಂಖ್ಯೆಯ ಸುಮಾರು ಶೇ. ೮೦ರಷ್ಟು ಜನ ಕುರುಬ ಸಮುದಾಯ ದವರೇ ಇರುವುದು ಕಂಡುಬರುತ್ತದೆ.

ಹೀಗಾಗಿ ಇವರು ತಮ್ಮದೇ ಆದ ಬದುಕನ್ನು ರೂಪಿಸಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಸಾಮಾಜಿಕ, ಧಾರ್ಮಿಕವಾಗಿ ನಡೆಯುವ ಸಾಂಸ್ಕೃತಿಕ ಕಾರ್ಯಗಳಿಗೆ ಉನ್ನತ ಸ್ಥಾನಮಾನ ನೀಡುವಲ್ಲಿ ಸರೂರು ಪ್ರಮುಖ ಪಾತ್ರವಹಿಸಿದೆ. ಮೊದಲು ಈ ಗ್ರಾಮವನ್ನು ಕಲ್ಲುಕೆರೆ-ಕಲ್ಲಿನಕೆರೆ

ಎಂದು ಕರೆಯುತ್ತಿದ್ದರು. ಕಲ್ಲಿನಕೆರೆಗೆ ಸರೂರು ಎಂಬ ಹೆಸರು ಏಕೆ ಬಂತು? ಹೇಗೆ ಬಂತು? ಈ ರೀತಿ ಕರೆಯಲು ಕಾರಣಗಳೇನು? ಎಂಬುದರ ಬಗ್ಗೆ ತಿಳಿಯಲು ಐತಿಹ್ಯಗಳು, ಸೃಷ್ಟಿಮೂಲ ಕತೆಗಳು, ಕೆಲವು ಸಂಶೋಧನೆಯ ಬರಹಗಳು ಹಾಗೂ ಹಿರಿಯರ ವಿಚಾರಗಳ ಮೂಲಕ ತಿಳಿಯುವ ಪ್ರಯತ್ನ ಮಾಡಲಾಗಿದೆ. ಶಾಂತಮುತ್ತಯ್ಯನವರು ಶಿವನ ಮೇಲಿದ್ದ ಅಪಾರವಾದ ಭಕ್ತಿಗೆ ಶಿವ ಮೆಚ್ಚಿಕೊಂಡು ಸರ್ವೇಶ್ವರ ಲಿಂಗಕ್ಕೆ ಹೂವಿನ ಸರವನ್ನು ಕೈಲಾಸದಿಂದ ಏಕಾಕಾರವಾಗಿ ಬಿಟ್ಟ ಕಾರಣದಿಂದ ಕಲ್ಲಿನಕೆರೆಗೆ ಹೊಸ ನಾಮವಾಗಿ 'ಸರೂರ' ಎಂದು ಕರೆಯುವುದುಂಟು. ಹಾಗೆಯೇ ಉಂಡಾಡು ಪದ್ಮಣ್ಣನ ಮಗ ಒಬ್ಬ ಮಹಾನ್ ಶಿವಭಕ್ತ. ಸಿದ್ಧಪುರುಷ ಒಂದು ಕರಗ ಅಂಬಲಿಯಲ್ಲಿ ಒಂಬತ್ತು ಜಂಗಮರಿಗೆ ಪ್ರಸಾದವನ್ನು ನೀಡುತ್ತಿದ್ದ. ಚಕೋರಿ ಹೊಳೆಯಲ್ಲಿ ನಿಂತು ಶಿವಧ್ಯಾನ ಮಾಡುವುದಕ್ಕೆ ಆರಂಭಿಸಿದ. ಆಗ ರಾಕ್ಷಸರು ಬಂಡಿಗಳಲ್ಲಿ ಬಂದು ತಪಸ್ಸನ್ನು ಭಂಗಗೊಳಿಸುವುದಕ್ಕೆ ಆರಂಭಿಸಿದರು. ಉಂಡಾಡು ಪದ್ಮಣ್ಣ ಅವುಗಳನ್ನೆಲ್ಲಾ ನುಚ್ಚುನೂರಾಗಿಸುತ್ತಿದ್ದ ಮತ್ತು ಅವುಗಳನ್ನೆಲ್ಲಾ ಒಂದಾಗಿಸಿ ಬಂಡಿಯಾಕಾರದಿಂದ ಶಿವನಿಗೆ ಅರ್ಪಿಸುತ್ತಿದ್ದ. ಈ ಭಕ್ತಿಗೆ ಮೆಚ್ಚಿದ ಶಿವ ಕರಿಯ ಮಲ್ಲಿಗೆಯ ಸರವ ರೂಪದಲ್ಲಿ ಸುರಿದವು. ಆ ವಿಚಾರದಿಂದ ಕಲ್ಲಿಕೆರೆಗೆ ಸರೂರ ಎಂದು ಕರೆಯಲಾಗಿದೆ.

ಇದೇ ರೀತಿಯಲ್ಲಿರುವ ಮತ್ತೊಂದು ಸಂಗತಿಯೆಂದರೆ, ತಂದೆ ಪದ್ಮಣ್ಣನಿಂದ ಬೇರೆಯಾಗಿ ಹೆಂಡತಿಯೊಂದಿಗೆ ಕುರಿಹಿಂಡು ಸಹಿತ ಹೊರಟ ಶಾಂತಯ್ಯನಿಗೆ ಭಕ್ತಿ ಕಾಣಿಕೆಯಾಗಿ "ಚಕ್ಕೊರಿ ಹೊಳೆಯ" ತೀರದಲ್ಲಿ ದೇವಾಲಯ ನಿರ್ಮಿಸಲಾಯಿತೆಂದೂ, ಇಲ್ಲಿ ಶಿವನಿಂದ ಶಾಂತಯ್ಯನಿಗೆ ದೀಕ್ಷೆ ಪ್ರಾಪ್ತವಾಯಿತೆಂದೂ, ಆಗ ದೇವಲೋಕದಿಂದ ಸುರಿದ ಕರಿಯ ಮಲ್ಲಿಗೆಯಿಂದಾಗಿ 'ಸರೂರ' ಎಂಬ ಗ್ರಾಮ ನಾಮಕರಣವಾಗಿ ರೂಢಿಗೆ ಬಂತು ಎಂಬ ವಿಚಾರವಿದೆ. ಹಾಗೆಯೇ ಮತ್ತೊಂದು ವಿಚಾರ ಏನೆಂದರೆ, ಅಲ್ಲಿನ ಹಿರಿಯರು ಹೇಳುವಂತೆ ಈ ಊರಿಗೆ ಮೊದಲು ಕಲ್ಲಿಕೆರೆ ಎಂಬ ಹೆಸರಿತ್ತು. ಹಿಂದೆ ಒಂದು ಸಾರಿ ಭೀಕರ ಬರಗಾಲ ಬಂದಿತ್ತು. ಜೊತೆಗೆ 'ಪಿಡುಗು' ಎಂಬ ಮಾರಕ ರೋಗ ಕಾಣಿಸಿಕೊಂಡಿತ್ತು. ಆ ಸಮಯಕ್ಕಾಗಲೇ ಕಲ್ಲಿಕೆರೆಯಿಂದ ಎರಡು-ಮೂರು ಫರ್ಲಾಂಗ ದೂರದ ಅರಣ್ಯದಲ್ಲಿ ಶಾಂತಯ್ಯ ನೆಲಸಿದ್ದ. ಶಿವರೂಪಿಯಾದ ಶಾಂತಯ್ಯನ ಭಕ್ತಿಗೆ ಮೆಚ್ಚಿ ಶಿವನು ಹೂವಿನ ಸರಮಾಲೆಯನ್ನು ಸುರಿದನು. ಹಾಗಾಗಿ ಕಲ್ಲಿಕೆರೆಗೆ ಸರೂರ ಎಂಬ ಹೆಸರು ಬಂತು.

'ಸರೂರು' ಆಧ್ಯಾತ್ಮಿಕ ನೆಲೆಯಾಗಿ ಹುಟ್ಟಿತೆಂದು ಪುರಾಣಗಳಲ್ಲಿ ವೇದ್ಯವಾಗಿದೆ. ಶಾಂತ ಮುತ್ತಯ್ಯನು ರೇವಣಸಿದ್ಧರಿಂದ ಲಿಂಗದೀಕ್ಷೆಯನ್ನು ಪಡೆದುಕೊಳ್ಳುವನು. ಲಿಂಗದೀಕ್ಷೆಗೆ ನಾಲ್ಕು ಕಲಶಗಳನ್ನು ನಾಲ್ಕು ದಿಕ್ಕಿಗೆ ಇಟ್ಟು, ಗುರುಕಲಶವನ್ನು ಮಧ್ಯದಲ್ಲಿಟ್ಟು ಪೂಜೆಗೆ ಅಣಿಯಾದರು. ಈ ಲಿಂಗದೀಕ್ಷೆಗೆ ಪಂಡಿತಾರಾಧ್ಯ, ರೇವಣಾರಾಧ್ಯ, ಏಕೋರಾಮ, ದಂಡಿಗ್ರ ಮರುಳಸಿದ್ಧಯ್ಯರು ನಾಲ್ಕು

ದಿಕ್ಕಿನಿಂದ ಕಲಶ ತರುವರು. ಆಗ ನೇಮದಂತೆ ಲಿಂಗದೀಕ್ಷೆಗೆ ಕರಿಯ ಮಲ್ಲಿಗೆ ಪುಷ್ಪವನ್ನು ಇವರು ಕೇಳುತ್ತಾರೆ. ಆಗ ಶಾಂತಯ್ಯನು ಶಿವನ ಚರಣಕ್ಕೆ ನಮಿಸಿ ಕರಿಯ ಮಲ್ಲಿಗೆ ಹೂವನ್ನು ತರಲು ಕೈಲಾಸಕ್ಕೆ ತೆರಳುವನು. ಅಲ್ಲಿ ಶಿವನು ನಿರಾಕರಿಸಿದಾಗ ಶಾಂತಮುತ್ತಯ್ಯನು ಚಂದ್ರಾಯುದದಿಂದ ಶಿರವನ್ನು ಹರಿಯಲು ಮುಂದಾಗುವನು. ಅದನ್ನು ತಿಳಿಸುವ ಪದ್ಯವೊಂದರಲ್ಲಿರುವಂತೆ;

"ಕೊರಲಿಗೆ ಖಡ್ಗವನೊತ್ತಿ ಅರಿವಿತಿರೆ
ಸುರಿದವು ಕರಿಯ ಮಲ್ಲಿಗೆಯು
ಸರಸರಗಳು ಸಾಲುಗೊಳಿಸಿ ಬೀಳಲು ಕಂಡು
ಹರಹರ ಜಯವೆಂದರಾಗ"[೧]

ಹೀಗೆ ದೇವಲೋಕದಿಂದ ಕರಿಯ ಮಲ್ಲಿಗೆ ಹೂಗಳು ಸರಸರ ಸಾಲಾಗಿ ಬೀಳುವುದನ್ನು ಕಂಡ ಜನರು ದೇವತೆಗಳು ಕಲ್ಲಿನಕೆರೆಯನ್ನು 'ಸರೂರ' ಎಂದು ಕರೆದಿದ್ದಾರೆಂದು ಪುರಾಣಗಳು ತಿಳಿಸುತ್ತವೆ. ಹೀಗೆ ಮುಂದುವರೆದು ಈ ಕಥನಗಳಿಗೆ ಪೂರಕವಾಗುವಂತೆ 'ತಗರ ಪವಾಡ' ಕಾವ್ಯದ ಮೂರನೆಯ ರೂಪದಲ್ಲಿ ಒಂದು ಪದ್ಯ ಈ ರೀತಿಯಾಗಿದೆ.

"ಹರನ ಪುರದಲಿಂದ ಕರಿಯ ಮಲ್ಲಿಗೆ ಹೂವು
ಗುರುವು ರೇವಣ್ಣನಂಪ್ರಿಯೊಳು
ಶರಣ ಶಾಂತನ ಮೇಲೆ ಬೀಳಲು ಜನ ಮೆಚ್ಚಿ
ಸರವೂರುಯೆಂಬ ರಾಪುರವ"[೨]

ಎಂಬ ಸಂಗತಿಯನ್ನು ಗಮನಿಸಬಹುದಾಗಿದೆ. ಹೀಗೆ ಅನೇಕ ವಿಚಾರಗಳಿಂದ ಸರೂರಿನ ನಾಮದ ಬಗ್ಗೆ ತಿಳಿಯಲು ಸಾಧ್ಯವಿದೆ. ಆದರೆ ಕಲ್ಲಿನಕೆರೆಗೂ ಮತ್ತು ಸರೂರಿಗೂ ಪದ ನಿಷ್ಪತ್ತಿಯಾಗಲೀ, ಪರ್ಯಾಯ ಪದವಾಗಲೀ ಇರುವುದಿಲ್ಲ. ಅದು ಸ್ಥಳಾಂತರವಾಗಿರಬಹುದು. ಏಕೆಂದರೆ ಕಲ್ಲಿನ ಕೆರೆಯಲ್ಲಿರುವ ಜನರು ಶಾಂತಯ್ಯನ ಭಕ್ತಿಗೆ, ಅವನಲ್ಲಿರುವ ಒಳ್ಳೆಯ ಸ್ವಭಾವದಿಂದ ಹಾಗೂ ಅವನಿಗೆ ಶಿವನ ದರ್ಶನವಾಗುವುದರಿಂದ ಅಲ್ಲಿನ ಜನರು ಆಕರ್ಷಿತರಾಗಿರಬಹುದು, ಇಲ್ಲವೇ ಅಲ್ಲಿನ ಜನಪದರು ಹೇಳುವಂತೆ ಬರಗಾಲ ಬಂದಿತು, ಜೊತೆಗೆ 'ಪಿಡುಗು' ಎಂಬ ಮಾರಕ ರೋಗವೂ ಕೂಡ ತಗಲಿತ್ತು. ಆಗ ಅನಿವಾರ್ಯವಾಗಿ ಆ ಸ್ಥಳದಿಂದ ಬೇರೆ ಹೋಗಬೇಕಾಗಿ ಬಂದಿರಬಹುದು. ಹಾಗೆಯೇ ಇನ್ನೊಂದು ವಿಚಾರವೇನೆಂದರೆ ಶಾಂತಯ್ಯ ಕುರಿಗಳನ್ನು ಕಾಯುತ್ತ ಊರಿಂದ ಹೊರಗಿದ್ದು ಅಂದರೆ ಕುರಿಗಳಿಗೆ ಒಳ್ಳೆಯ ಫಲವತ್ತತೆಯ ಮೇವು, ನೀರು, ವಸತಿ ಒಟ್ಟಾರೇ ಸೌಲಭ್ಯ ಸಿಗುವ ಸ್ಥಳದಲ್ಲಿದ್ದು ದಾರಿಹೋಕರಿಗೆ ಹಸಿವಿನಿಂದ ಬಂದವರಿಗೆ ಕುರಿಯ

ಹಾಲನ್ನು ಕೊಟ್ಟು ಹಸಿವಿನ ದಾಹವನ್ನು ನೀಗಿಸುತ್ತಿದ್ದನು ಎಂಬ ಸಂಗತಿಯಿದೆ. ಇದಕ್ಕೆ ಪೂರಕವಾಗಿ ರಸ್ತಾಪುರ ಭೀಮಕವಿಯ "ಹಾಲ್ಮತ್ತೋಜಕ ಪುರಾಣದಲ್ಲಿ

"ತುರುಗಳಂ ಪಾಲಿಸುತ್ತುಲ್ಲಾಸದಿಂದ ಸಂ
ಚರಿಸಿ ಕಲ್ಲಿನ ಕೆರೆಯ ಭಾಗದಲ್ಲಿ ನಿಲಯಮಂ
ವಿರಚಿಸುತ ಪ್ರೇಮದಿಂಚರರಿಂಗೆ ಪನ್ನೆರಡು ಕಂಬಿ ಪಾಲ್ಗೊಟ್ಟು ಸತತ
ಹರುಷದಿಂದಿರಲಲ್ಲಿ ಗಭವಸುತ ಸಿದ್ಧೇಂದ್ರ
ನಿರದೆ ಬಂದಮೃತವಂ ನೀಡೆಂದು ಸಮ್ಮೋಹ
ವೆರಸಿ ನಿಲ್ಲಲು ಶಾಂತಮುತ್ತಯ್ಯ ಕಂಡು ಪದಪದ್ಮಕಭಿವಂದಿಸಿದನು"[೩]

ಹೀಗೆ ಶಾಂತಮುತ್ತಯ್ಯ ಪ್ರತಿದಿನ ಹನ್ನೆರಡು ಕಂಬಿ ಹಾಲನ್ನು ಹಿಂಡಿ ಬೇಡಿದವರಿಗೆ ದಾನವನ್ನು ಮಾಡುತ್ತಾ ಸಂತೋಷದಿಂದ ಕಾಲ ಕಳೆಯುತ್ತಿರುತ್ತಾನೆ. ಈ ಸಂದರ್ಭದಲ್ಲಿ ದೇಶ ಸಂಚಾರಿಯಾದ ರೇವಣಸಿದ್ಧನು ಸರೂರಿಗೆ ಬಂದಾಗ ಅವರ ಯೋಗಕ್ಷೇಮ ವಿಚಾರಿಸಿ ಅವರನ್ನು ಸತ್ಕರಿಸಿದಾಗ ಶಾಂತಮುತ್ತಯ್ಯನ ಸದ್ಗುಣಕ್ಕೆ ಮೆಚ್ಚಿ ರೇವಣಸಿದ್ಧರು ಆಶೀರ್ವಾದ ಮಾಡಿದರು ಎಂಬ ವಿಚಾರವಿದೆ. ಈ ಎಲ್ಲಾ ಸಂಗತಿಗಳ ಹಿನ್ನೆಲೆಯಿಂದ ಆ ಊರು ಸರೂರು ಎಂದು ಹೆಸರನ್ನು ಹೊಂದಿದೆ ಎಂದು ಹೇಳಬಹುದು.

ಹೀಗೆ ಸರೂರಿನ ನಾಮದ ಬಗ್ಗೆ ಐತಿಹ್ಯ, ಪುರಾಣಗಳು ಒಂದು ಕಡೆ ಹೇಳಿದರೆ ಮತ್ತೊಂದು ಕಡೆ ಕುರುಹುಗಳ ಮೂಲಕ ಇದರ ಸ್ಥಳದ ಬಗ್ಗೆ ಆಕರಗಳು ಸಿಗುತ್ತವೆ. 'ಸರೂರ' ಎಂಬ ಪದ ಹೇಗೆ ಬಂತು ಎಂಬುದಕ್ಕೆ ಮುಂಚಿತವಾಗಿ ಅದರ ಸುತ್ತಮುತ್ತಲಿನ ಊರುಗಳನ್ನು ಗಮನಿಸುವುದಾದರೆ ಮುದ್ದೇಬಿಹಾಳ ತಾಲೂಕಿನಲ್ಲಿ ಬರುವ ಊರುಗಳಲ್ಲಿ ಕೆಲವನ್ನು ಚರ್ಚಿಸುವುದಾದರೆ "ಅಮರಗೋಳ– ಇದು ಅಮರ+ಕೊಳ್ಳ, ತಂಗಡಗಿ ಮತ್ತು ಅಮರಗೋಳ ಮಧ್ಯದ ಕೊಳ್ಳದ ಪ್ರದೇಶದಲ್ಲಿ ಬಿಜ್ಜಳ ಮತ್ತು ಶಿವಶರಣರಿಗೆ ಯುದ್ಧ ನಡೆಯುತ್ತೆಂದೂ ಅನೇಕ ಶರಣರು ಹತರಾದ ಕಾರಣ ಆ ಕೊಳ್ಳಕ್ಕೆ ಅಮರ ಕೊಳ್ಳ ಎಂದು ಹೇಳುವುದು ವಾಡಿಕೆಯಾಗಿದೆ. ಕುಂಟೋಜಿ–ಕುಂಟೇ–ನೀರಿನ ಸಂಗ್ರಹ, ಈ–ಜೆ–ಜಯ್–ಚಿಯ್–ಕೆಯ್–ಸಾಗುವಳಿ ಮಾಡುವುದು, ನೀರಾವರಿಯಿಂದ ಭೂ ಸಾಗುವಳಿ ಮಾಡುವುದು ಈ ಪ್ರದೇಶದಲ್ಲಿನ ಕುಂಟೋಜಿ ಎಂದು ಕರೆಯುವರು.

"ನೆರೆಬೆಂಚಿ–ಬೆಂಚಿ ಎಂದರೆ ಕೆರೆ, ಕೆರೆಯ ಊರು ನೆರೆ ಅಂದರೆ ಕೆರೆಯ ಪಕ್ಕದಲ್ಲಿರುವುದರಿಂದ ಪಕ್ಕದ ಕೆರೆ ಹೀಗಾಗಿ ನೆರೆಬೆಂಚಿ ಎಂದು ಕರೆಯುತ್ತಾರೆ. ಇವುಗಳ ಹಿನ್ನೆಲೆಯನ್ನಿಟ್ಟುಕೊಂಡು ಅಥವಾ ಈ ರೀತಿಯಾದ ಕುರುಹುಗಳ ಆಧಾರದ ಮೇಲೆ ಸರೂರನ್ನು ಗಮನಿಸಿದಾಗ "ಸರೂರ–

ಸರೋವರ ಇರುವ ಊರು ಸರವೂರು>ಸರೂರು ಎಂದಾಗಿದೆ. ಆದರೆ ಈ ಊರು ಮುಂದಿನ ದೊಡ್ಡಹಳ್ಳ ಬಹುಕಾಲ ಹಿಂದೆ ಕೃಷ್ಣಾನದಿ ಚಿಕ್ಕ ಶಾಖೆಯಾಗಿತ್ತೆಂದು ಊರಪಕ್ಕದಲ್ಲಿರುವ, ಗುಡ್ಡವು ನೀರಿನಲ್ಲಿ ನಿಂತಿರುವುದರಿಂದ ಅದಕ್ಕೆ ತೊಯ್ದು ಗುಡ್ಡವೆಂಬ ನಾಮ ಬಂದಿತೆಂದು ಇತಿಹಾಸದ ಕುರುಹುಗಳುಂಟು. ಈ "ಹಳ್ಳಕ್ಕೆ ಕಟ್ಟಿದ ಅಗಳೀಕೆರೆಯಿಂದ ನೀರಾವರಿ ನಡೆಯುತ್ತಿತ್ತೆಂದು ಸರೂರ ಶಾಸನ(೧೨೯೫)"[೫] ಹೇಳುತ್ತದೆ. ಈ ವಿಚಾರಗಳಿಗೆ ಪೂರಕವಾಗಿ ಎಂ.ಎಂ. ಕಲಬುರ್ಗಿ ಅವರು ಅಭಿಪ್ರಾಯಪಟ್ಟಿರುವಂತೆ ಈ ಸರೂರು ಸರೋವರ ಎಂದೇ ಬಳಕೆಯಾಗಿರುವುದರಿಂದ ಇದು ಸರೋವರ ಆಗಿರಬಹುದೆ ಎನಿಸುತ್ತದೆ. ಆದರೆ

"ಸರವರದೊಳಗೆಲ್ಲ ಕೆರೆಬಾವಿ ದೇಗುಲ
ತುರುಗಿದ ಹೂದೋಟ ಚೆಲ್ವ
ಪರಿ ಪರಿಯಲ್ಲಿ ಮಾಟ ಕೂಟದ ಮಠಗಳ
ಪರಿಕಿಸಿ ನೋಡುತ ಬರಲು"[೬]

ಈ ರೀತಿಯ ಐತಿಹ್ಯ, ಪುರಾಣಗಳಂತಹ ಆಕರಗಳಿಂದ ಮತ್ತು ಆ ಊರಿನ ಸುತ್ತಮುತ್ತಲಿರುವ ಬೆಟ್ಟ-ಗುಡ್ಡ, ಹಳ್ಳ-ಕೊಳ್ಳ ಕೆರೆ, ಸರೋವರಗಳ ಆಧಾರದ ಮೇಲೆ ಈ ಗ್ರಾಮದ ಹಿನ್ನೆಲೆಯನ್ನು ಗ್ರಹಿಸಲಾಗಿದೆ.

ಸರೂರ ಹಾಲುಮತ ಗುರುಪರಂಪರೆ

ಪ್ರಾಚೀನ ಕಾಲದಿಂದಲೂ ಅನೇಕ ಸಮುದಾಯಗಳು ತಮ್ಮದೆ ಆದ ನೆಲದಲ್ಲಿ ನೆಲೆಗೊಂಡು ತಮ್ಮ ಬದುಕನ್ನು ರೂಢಿಸಿಕೊಳ್ಳುತ್ತಾ ಬಂದಿರುತ್ತವೆ. ಇವು ತಮ್ಮ ಜೀವನೋಪಾಯಕ್ಕಾಗಿ ಅನುಸರಿಸಿ ಕೊಂಡು ಬಂದಿರುವ ವೃತ್ತಿ, ತಾನು ಬದುಕುತ್ತಿರುವ ಪರಿಸರ, ಅದಕ್ಕನುಗುಣವಾಗಿ ರೂಢಿಸಿಕೊಂಡು ಬಂದಿರುವ ಸಂಪ್ರದಾಯಗಳು ಬೇರೆ ಬೇರೆಯಾಗಿವೆ. ಅಂದರೆ ಕರ್ನಾಟಕದವರಿಗೆಲ್ಲ ಸಮಾನವಾದ ಸಂಪ್ರದಾಯಗಳು ಕೆಲವಾದರೆ, ಮತ್ತೆ ಕೆಲವು ಆಯಾ ಸಮುದಾಯ ಪ್ರಾಂತ್ಯ, ಪಂಗಡಗಳ ಚೌಕಟ್ಟಿನಲ್ಲಿ ಬೆಳೆದುಬಂದಿರುವ ಸಂಗತಿಗಳು ಗಮನಾರ್ಹವಾಗಿವೆ. ಹೀಗೆ ಬೇರೆಯಾದ ಜನ ಸಮುದಾಯಗಳು ತಮ್ಮದೇ ಆದ ದೈವಿಕ ಪರಿಕಲ್ಪನೆಯ ಅಡಿಯಲ್ಲಿ ಜರುಗುವ ಯಾವುದೇ ಸಮುದಾಯವು ಧಾರ್ಮಿಕವಾಗಿ ಆಚರಿಸುವ ಸಂಪ್ರದಾಯಗಳನ್ನು ಸುಗಮವಾಗಿ ನಡೆಸಬೇಕೆಂಬ ಉದ್ದೇಶದಿಂದ ಪುರೋಹಿತ ವರ್ಗವನ್ನು ಹೊಂದಿರುತ್ತದೆ. ಉದಾಹರಣೆಗೆ ಜೈನರಲ್ಲಿ ಪಂಡಿತರು, ಲಿಂಗಾಯತರಲ್ಲಿ ಜಂಗಮರು, ಬ್ರಾಹ್ಮಣರಲ್ಲಿ ಭಟ್ಟರು ಅಥವಾ ಆಚಾರಿಗಳು ಎಂಬ ಪುರೋಹಿತ ವರ್ಗವು ಕಾರ್ಯವನ್ನು ನೆರವೇರಿಸಿಕೊಡುತ್ತವೆ. ಈ ಹಿನ್ನೆಲೆಯಲ್ಲಿ ಕುರುಬ ಜನಾಂಗವು ತನ್ನ

ಎಲ್ಲಾ ಧಾರ್ಮಿಕ ಕಾರ್ಯಗಳಿಗೆ ತಮ್ಮಲ್ಲಿಯೇ ಒಬ್ಬರನ್ನು ಒಡೆಯರು ಎಂದು ಕರೆದು ಅವರನ್ನೇ ಪುರೋಹಿತರೆಂದು ನೇಮಿಸಿಕೊಂಡಿದೆ. ಅವರಿಗೆ ಪ್ರಾಚೀನ ಕಾಲದಿಂದಲೂ ಅಗ್ರಸ್ಥಾನವನ್ನು ನೀಡಿದ್ದಾರೆ. ಕುರುಬ ಸಮುದಾಯವು ತನ್ನದೇ ಆದ ವಿಶಿಷ್ಟ ಪುರೋಹಿತ ವರ್ಗವನ್ನು ಹೊಂದಿದೆ. ಏಕೆಂದರೆ ಬೇರೆ ಬೇರೆ ಸಮುದಾಯಗಳಲ್ಲಿ ತಮ್ಮ ಕುಲದವರೇ ಆದ ಪುರೋಹಿತರಿರುವುದು ಕಂಡುಬರುವುದಿಲ್ಲ. ಆದರೆ ಕುರುಬರಲ್ಲಿ 'ಒಡೆಯರು' ಅಥವಾ 'ಗುರುವಿನವರು' ಎಂಬ ಉಪ ಪಂಗಡವನ್ನು ರೂಪಿಸಿಕೊಂಡಿದ್ದಾರೆ. ಈ ಒಡೆತನದ ಅಧೀನದಲ್ಲಿ ಕುರುಬರು ಸಾಮಾಜಿಕ, ಧಾರ್ಮಿಕವಾಗಿ ಆಚರಿಸುವ ಎಲ್ಲಾ ಕಾರ್ಯಗಳು ಅವರ ಸಮ್ಮುಖದಲ್ಲಿ ನಡೆಯುತ್ತದೆ.

ಈ ಅಧ್ಯಯನದಲ್ಲಿ ಪ್ರಮುಖವಾಗಿ ಚರ್ಚಿಸುವುದೇನೆಂದರೆ 'ಒಡೆಯರು' ಅಥವಾ 'ಗುರುಒಡೆಯರು' ಎಂಬ ಉಪಪಂಗಡವನ್ನು ಹುಟ್ಟಿಹಾಕಿದವರ್ಯಾರು? ಇದಕ್ಕೆ ಮೂಲ ಕಾರಣಕರ್ತರ್ಯಾರು? 'ಒಡೆಯರು' ಎಂಬುದರ ಅರ್ಥವೇನು? ಗುರುಒಡೆಯರ ಮೂಲ ಯಾವುದು? ಗುರುಒಡೆಯರಲ್ಲಿ ಕಂಡುಬರುವ ಒಳಪಂಗಡಗಳು ಯಾವುವು? ಹಾಗೆಯೇ ಮುಂದುವರೆದು ಗುರುಪರಂಪರೆಯನ್ನು ರೂಢಿಸಿಕೊಂಡು ಬಂದ ಪ್ರಸ್ತುತ ಸಂಪ್ರದಾಯಗಳು ಯಾವುವು? ಗುರುಪರಂಪರೆಗೂ, ಸರೂರಿಗೂ ಯಾವ ರೀತಿಯಾದ ಸಂಬಂಧವಿದೆ ಎಂಬಂತಹ ಅನೇಕ ಕುತೂಹಲವಾದ ವಿಚಾರಗಳನ್ನು ಚರ್ಚಿಸಲಾಗಿದೆ.

ಹಾಗಾಗಿ ಪ್ರಸ್ತುತ ಗುರುಪರಂಪರೆಗೆ ಸರೂರು ಮೂಲಕೇಂದ್ರವಾಗಿದ್ದು, ಕುರುಬರ ಸಂಸ್ಕೃತಿಯನ್ನು ಗುರುಪರಂಪರೆಯ ಮೂಲಕ ಚಿತ್ರಿಸುವಂತಹ ಸಾಂಸ್ಕೃತಿಕ ಸ್ಥಾನವಾಗಿದೆ. ಕುರುಬರಲ್ಲಿ 'ಒಡೆಯರು' ಎಂಬ ಉಪ ಪಂಗಡವನ್ನು ಸುಮಾರು ೧೨ನೆಯ ಶತಮಾನದಲ್ಲಿ ಅಂದರೆ ಶರಣರ ಚಳುವಳಿಯ ಕಾಲಘಟ್ಟದಲ್ಲಿ ಹುಟ್ಟಿ ಹಾಕಿರಬಹುದು. ಇದಕ್ಕೆ ಕಾರಣಕರ್ತರಾಗಿ ರೇವಣಸಿದ್ಧ, ಸಿದ್ಧರಾಮ, ಅಮೋಘಸಿದ್ಧ ಮುಂದುವರೆದು ಶಾಂತಮುತ್ತಯ್ಯ ಹಾಗೂ ಮಂಕಸಿದ್ಧ ಎಂಬುವರು ಪ್ರಮುಖವಾಗಿ ಕಂಡುಬರುತ್ತಾರೆ. ಇವರು ಕುರುಬ ಜನಾಂಗದವರಾಗಿದ್ದು, ಅಂದರೆ ಕುಲಕ್ಕೆ ಕುಲದವರೇ ಗುರುಗಳಾದ ಇವರಿಗೆ ಒಡೆಯರು ಎಂದು ಕರೆಯುತ್ತಾರೆ. ಈ ಒಡೆಯರು ಪದದ ಅರ್ಥವೇನು? ಒಡೆಯರು ಎಂದರೆ ಯಾರು? ಎಂಬುದನ್ನು ಕುರಿತು ಕೆ. ರವೀಂದ್ರನಾಥ ಅವರು 'ಒಡೆಯರು' ಎಂಬ ಲೇಖನದಲ್ಲಿ ಹೇಳಿರುವಂತೆ "ಒಡೆಯರು ಎಂದರೆ ಸಾಮಾನ್ಯವಾಗಿ ನಾಯಕ, ಯಜಮಾನ, ಮುಖಂಡ, ಹಿರಿಯ, ನೇತಾರ ಎಂದು ಒಂದು ಕಡೆ ಹೇಳಲಾಗುತ್ತದೆ. ಮತ್ತೊಂದು ರೀತಿಯಾಗಿ 'ಒಡೆಯರು' ಎಂಬ ಪದಕ್ಕೆ ಸ್ವಾಮಿ, ಅಯ್ಯ, ಜಂಗಮ, ಧಾರ್ಮಿಕ ಮುಖಂಡ, ಗುರು ಎಂಬರ್ಥಗಳಿವೆ. ಕುರುಬರ ಅಯ್ನೋರು, ಕುರುಬರ ಗುರುವಿನವರು, ಕುರುಬರ ಮಾರಾಯಗೋಳು ಎಂದು ಕರೆಸಿಕೊಳ್ಳುವರು ಹಾಗೂ ಸಾಮಾಜಿಕವಾಗಿ ಧಾರ್ಮಿಕವಾಗಿ ನಡೆಯುವ ಹಬ್ಬ-ಉತ್ಸವಗಳು,

ಮದುವೆ, ಮರಣಗಳಂಥ ಕಾರ್ಯಗಳಲ್ಲಿ ಪೌರೋಹಿತ್ಯವನ್ನು ನಡೆಸುವ ಒಡೆಯರಿಗೆ ಗುರುಸ್ಥಾನ ನೀಡಿದ ಪ್ರಯುಕ್ತ ಇವರು ಗುರುಒಡೆಯರೆನಿಸಿದರು."[೭]

ಹೀಗಾಗಿ ಕುರುಬರ ಗುರುಪರಂಪರೆಯಲ್ಲಿ ಒಡೆಯರಿಗೆ ಉನ್ನತ ಸ್ಥಾನಮಾನವನ್ನು ಕಲ್ಪಿಸಿಕೊಟ್ಟಿದ್ದಾರೆ. ಇದಕ್ಕೆ ಸಾಕ್ಷಿಯೆಂಬಂತೆ ಹಿರಿಯ ಸಂಶೋಧಕರಾದ ಎಂ. ಚಿದಾನಂದಮೂರ್ತಿ ಅವರು "ಕುರುಬ ಜಾತಿಯೊಳಗಿನ ಒಡೆಯರ ಈ ಉಪಜಾತಿ ಭಾರತದಲ್ಲಿ ಅತ್ಯಂತ ವಿಶಿಷ್ಟವೆನ್ನಬಹುದಾದ ಒಂದು ವ್ಯವಸ್ಥೆಯನ್ನು ಹೊಂದಿದೆ. ಇವರು ಕುರುಬರ ಪ್ರತ್ಯೇಕ ಗುಂಪಾದರೂ ಕೂಡ ಪ್ರತ್ಯೇಕ ಜಾತಿಯಲ್ಲ. ಏಕೆಂದರೆ ರೇವಣಸಿದ್ಧೇಶ್ವರ ಇವರಿಗೆ ಲಿಂಗದೀಕ್ಷೆಯನ್ನು ನೀಡಿ ಕುರುಬ ಕುಲಕ್ಕೆ ಗುರುವಾಗಿರು ಎಂದು ಹರಸಿದಂದಿನಿಂದ ಇವರು ಕುರುಬರಿಗೆ ಕುಲಗುರುಗಳಾಗಿ ಅವರು ಎಲ್ಲಾ ಪೂಜ್ಯ ಕಾರ್ಯಗಳನ್ನು ನೆರವೇರಿಸಿ ಕೊಡುವವರಾಗಿದ್ದಾರೆ"[೮] ಎಂದಿರುವರು.

ಈ ಪರಂಪರೆಯ ಮೂಲವನ್ನು ಗುರುತಿಸಿ ಕರ್ನಾಟಕದ ಹಾಲುಮತ ಸಮುದಾಯಕ್ಕೆ ತಿಳಿಸಿಕೊಟ್ಟ ಹೆಗ್ಗಳಿಕೆಗೆ ಪಾತ್ರರಾದ ಎಂ.ಎಂ. ಕಲಬುರ್ಗಿ, ಸಿ.ಕೆ. ಪರುಶುರಾಮಯ್ಯ, ವೈ.ಸಿ. ಭಾನುಮತಿ ಹಾಗೂ ಎಫ್.ಟಿ. ಹಳ್ಳಿಕೇರಿ ಅವರಿಗೆ ಸಲ್ಲುತ್ತದೆ. ಈ ರೀತಿಯಾಗಿ ಬೆಳೆದುಬಂದ ಪರಂಪರೆಯನ್ನು ಅಂದಿನಿಂದ ಇಂದಿನವರೆಗೂ ರೂಢಿಸಿಕೊಂಡು ಬಂದಿದ್ದಾರೆ. ಅವುಗಳೆಂದರೆ,

೧. ರೇವಣಸಿದ್ಧ ಪರಂಪರೆ

೨. ಮಂಕಸಿದ್ಧ ಪರಂಪರೆ

೩. ಅಮೋಘಸಿದ್ಧ ಪರಂಪರೆ

ಈ ಮೂರು ಪರಂಪರೆಗಳು ಕುರುಬರಿಗೆ ಕುಲಗುರುಗಳಾಗಿ ತಮ್ಮ ತಮ್ಮ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳನ್ನು ಪೂರೈಸಿಕೊಡುವ ಪರಂಪರೆಗಳಾಗಿವೆ. ರೇವಣಸಿದ್ಧನ ನೇತೃತ್ವದಲ್ಲಿ ಶಾಂತೊಡೆಯರು ಬೆಳೆದು ಬಂದರೆ, ಸಿದ್ಧರಾಮನ ಲಿಂಗ ದೀಕ್ಷೆಯಿಂದ ಮಂಕೊಡೆಯರು ಬೆಳೆದು ಬಂದಿದ್ದಾರೆ. ಅಮ್ಮೋಗಿ ಒಡೆಯ ಯಾರಿಂದ ದೀಕ್ಷೆ ಪಡೆದ ಎಂಬುದು ಎಲ್ಲಿಯೂ ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಆದರೆ ಸೋಮಲಿಂಗನನ್ನು ಗುರುವಾಗಿ ಸ್ವೀಕರಿಸಿದ ಎಂಬ ಕಥೆಗಳಷ್ಟೆ ದೊರೆಯುತ್ತವೆ. ಆದರೆ ರೇವಣಸಿದ್ಧ ಹಾಗೂ ಸಿದ್ಧರಾಮ ಇಬ್ಬರೂ ತಮ್ಮ ಶಿಷ್ಯಂದಿರಿಗೆ ದೀಕ್ಷೆ ನೀಡಿ ಕುರುಬರಿಗೆ ಕುಲಗುರುವಾಗಿರಿ ಎಂದು ಹೇಳಿದಂತೆ, ಸೋಮಲಿಂಗ ಅಮ್ಮೋಗಿ ಸಿದ್ಧನಿಗೆ ಎಲ್ಲೂ ಹೇಳಿದಂತೆ ಕಂಡುಬರುವುದಿಲ್ಲ. ಆದರೆ ಈ ಮೂರು ಸಂಪ್ರದಾಯಗಳು ತಮ್ಮದೇ ಆದ ಸಾಂಸ್ಕೃತಿಕ ಬದುಕಿನ ವಿನ್ಯಾಸವನ್ನು ತಿಳಿಯಲು ಸಾಹಿತ್ಯಿಕವಾಗಿ ಕೆಲವು ಆಕರಗಳನ್ನು ಹೊಂದಿವೆ. ಈ ಆಕರಗಳು ಆಯಾ ಪರಂಪರೆಯೂ ಸಾಂಸ್ಕೃತಿಕ ನಾಯಕನ ಮೂಲಕ ತಮ್ಮ ತಮ್ಮ ಪರಂಪರೆಯನ್ನು ಪ್ರತಿನಿಧಿಸುತ್ತವೆ. ಉದಾಹರಣೆಯಾಗಿ ಹಾಲುಮತ ಪುರಾಣ, ಹಾಲುಮತ ಚರಿತ್ರೆ, ಹಾಲ್ಮತೋತ್ತೇಜಕ

ಪುರಾಣ, ತಗರ ಪವಾಡ, ಸಿದ್ಧಮಂಕ ಚರಿತ್ರೆಯಂತಹ ಅನೇಕ ಸಾಹಿತ್ಯ ಕೃತಿಗಳು ಈ ಸಾಂಸ್ಕೃತಿಕ ನಾಯಕರ ತಾತ್ವಿಕ ನಿಲುವನ್ನು ಅನಾವರಣಗೊಳಿಸುತ್ತವೆ. ಹಾಗಾಗಿ ಈ ಮೂರು ಪರಂಪರೆಯ ಸಂಪ್ರದಾಯಗಳನ್ನು ಈ ಮುಂದಿನಂತೆ ಚರ್ಚೆಗೆ ಒಳಪಡಿಸಲಾಗಿದೆ.

ಮಂಕಸಿದ್ಧ ಪರಂಪರೆ

ಮಂಕಸಿದ್ಧ ಪರಂಪರೆಯು ಹಾಲುಮತ ಗುರುಪರಂಪರೆಯಲ್ಲಿ ಒಂದಾಗಿದೆ. ಈ ಪರಂಪರೆಗೆ ಸಂಬಂಧಿಸಿದಂತೆ ಲಿಖಿತ ಮತ್ತು ಮೌಖಿಕ ಆಕರಗಳು ದೊರೆಯುತ್ತವೆ. ಲಿಖಿತವಾಗಿ ಸಿದ್ಧಮಂಕ ಚರಿತ್ರೆ ಹಾಗೂ ಮರಳಸಿದ್ಧಯ್ಯನವರ ಚರಿತ್ರೆ ಸಿಗುತ್ತದೆ. ಇದರ ಜೊತೆಗೆ ದಾಖಲು ರೂಪದಲ್ಲಿ ಸರೂರಿನ ಎರಡು ಶಾಸನಗಳು ಹಾಗೂ ಒಂದು ನಿರೂಪ ಸಿಗುತ್ತದೆ. ಉಳಿದಂತೆ ಮೌಖಿಕವಾಗಿ ಕಥೆ, ಹಾಡು, ಹೇಳಿಕೆಗಳು ದೊರೆಯುತ್ತವೆ. ಈ ಎಲ್ಲಾ ಆಕರಗಳನ್ನಿಟ್ಟುಕೊಂಡು ಮಂಕಸಿದ್ಧ ಪರಂಪರೆಯನ್ನು ಚರ್ಚೆ ಮಾಡುವುದಕ್ಕಿಂತ ಮುಂಚಿತವಾಗಿ ಈ ಪರಂಪರೆಯನ್ನು ಹುಟ್ಟಾಕಿದವರ್‍ಯಾರು? ಇದಕ್ಕೆ ಕಾರಣವೇನು? ಹಾಗೂ ಇದರ ಮೂಲ ಪುರುಷನ್ಯಾರು? ಆತನ ಇತಿವೃತ್ತವೇನು? ಕುರುಬರ ಗುರುಪರಂಪರೆಗೆ ಮೂಲನೆಲೆ ಸರೂರಾಗಲು ಕಾರಣಗಳೇನು? ಸೊಲ್ಲಾಪುರದ ಸಿದ್ಧರಾಮನಿಗೂ, ಸರೂರಿನಲ್ಲಿ ನೆಲೆನಿಂತ ಮಂಕಸಿದ್ಧನಿಗೂ ಇರುವ ಸಂಬಂಧ ಎಂಥದ್ದು ಹೀಗೆ ಹಲವಾರು ಪ್ರಶ್ನೆಗಳು ಉದ್ಭವಗೊಳ್ಳುತ್ತವೆ. ಹೀಗಾಗಿ ಕೆಲವು ವಿಚಾರಗಳನ್ನು ಚರ್ಚೆ ಮಾಡುವುದಾದರೆ, 'ಮಂಕೊಡೆಯರ' ಹಿಂದೆ ಇರುವ ಮಂಕಸಿದ್ಧ ಪರಂಪರೆಯು ಸೊಲ್ಲಾಪುರದ ಸಿದ್ಧರಾಮನನ್ನು ಪೂಜಿಸಿಕೊಂಡು ಆರಾಧನೆ ಮಾಡಿಕೊಂಡು ಬಂದ ಸಂಪ್ರದಾಯ ವಾಗಿದೆ. ಹೀಗೆ ಸಾಮಾಜಿಕವಾಗಿ, ಧಾರ್ಮಿಕವಾಗಿ ಪೂಜಿಸಿಕೊಂಡು ಬಂದಿರುವ ಸಿದ್ಧರಾಮನ ಇತಿವೃತ್ತವನ್ನು ತಿಳಿಯುವುದಾದರೆ ಸುಮಾರು ೧೨ನೆಯ ಶತಮಾನದಲ್ಲಿ ಬರುವ ಈತ ರೇವಣಸಿದ್ಧನ ಆಶೀರ್ವಾದದಿಂದ ಹಿರೇವೂರೆಂಬ ಗ್ರಾಮದ ಸುಗ್ಗಲದೇವಿ ಹಾಗೂ ಮುದ್ದಗೊಂಡ ಗೌಡನಿಗೆ ವರಪುತ್ರನಾಗಿ ಜನಿಸುತ್ತಾನೆ. ಈತನ ವಿಶಿಷ್ಟವಾದ ಜನನದ ಬಗ್ಗೆ ತಿಳಿಯುವುದಾದರೆ, ಯಲ್ಲನಗೌಡ ಪ. ಅತ್ತಿಕೊಳ್ಳ ಅವರ ತನ್ನ ಹಾಲುಮತ ಚರಿತ್ರೆಯಲ್ಲಿ ಅಭಿಪ್ರಾಯಿಸಿರುವಂತೆ "ರೇವಣಸಿದ್ಧನ ಅನುಗ್ರಹದಿಂದ ಸುಗ್ಗಲದೇವಿಗೆ ನವಮಾಸಗಳು ತುಂಬಿವೆ. ಮಧ್ಯರಾತ್ರಿಯ ಸಮಯ ಆಕಾಶದಲ್ಲಿ ಚುಕ್ಕೆಗಳು ಮಿಣಿ–ಮಿಣಿ ಮಿಂಚುತ್ತಿವೆ. ಸುತ್ತಲೂ ಸುಗಂಧಯುಕ್ತವಾದ ಮಂದಮಾರುತವು ಬೀಸುತ್ತಲಿದೆ. ಎಲ್ಲಾ ಕಡೆಯಲ್ಲಿಯೂ ನಿಶಬ್ದವಾಗಿದೆ. ಅಧಿಕ ಕಾಂತಿಯುಕ್ತನಾದ ಚಂದ್ರನು ಆಕಾಶದಲ್ಲಿ ಶೋಭಿಸುತ್ತಲಿದ್ದಾನೆ. ಮಲ್ಲಿಗೆ, ಸಂಪಿಗೆ, ಸೇವಂತಿಗೆ, ಇರುವಂತಿಗೆ, ಪನ್ನಾಗ ಜಾಜಿ ಮೊದಲಾದ ಸುಗಂಧ ಪುಷ್ಪಗಳು ಅರಳಿ ಮಂದಮಾರುತನಲ್ಲಿ ಬೆರೆತು ಸುತ್ತಲೂ ತಮ್ಮ ಸುಗಂಧವನ್ನು ಬೀರುತ್ತಿದ್ದವು.

ಸಮಾಧಾನಕಾರಕವಾದ ಪವಿತ್ರ ಸಮಯದಲ್ಲಿ ಅತ್ಯಂತ ಪವಿತ್ರಳಾದ ಸುಗ್ಗಲದೇವಿಯು ಬೇನೆಯನ್ನು ತಿನ್ನುತ್ತ ಅತಿ ಆಯಾಸದಿಂದ ಶಿವಶಿವಾ! ಎಂದು ಬಳಲುತ್ತಿರುವುದನ್ನು ಕಂಡು

ಅವಳ ಗರ್ಭದಲ್ಲಿದ್ದ ಶಿಶುವು ತಾಯಿಯನ್ನು ಕುರಿತು 'ತಾಯೆ' ನೀನು ದುಃಖಿಸುವುದೇಕೆ? ಮೂರು ಬೆರಳಿನ ಕೌಪಿನವನ್ನು ನನಗೆ ಕೊಡು, ಅಂದರೆ ನಾನು ನಿನ್ನ ಕರ್ಣದಿಂದ ಹೊರಗೆ ಬರುವೆನು. ನಾನು ಮರುಳು ಮಾನವನಂತೆ ಯೋನಿದ್ವಾರದಿಂದ ಬರುವವನಲ್ಲ. ಆದ್ದರಿಂದ ಈಗ ನೀನು ಮೂರು ಬೆರಳಿನ ಅರಿವೆಯನ್ನು ನುಂಗು ಅದನ್ನು ನಾನು ಧರಿಸಿ ಧರೆಗೆ ಬರುವೆನು ಎಂದು ನುಡಿಯಿತು. ಆಗ ಸುಗ್ಗಲದೇವಿಯು ಶಿವನೇ ಗತಿಯೆಂದು ಮೂರು ಬೆರಳ ಅರಿವೆಯನ್ನು ನುಂಗಲು ಅರಗಳಿಗೆಯ ನಂತರ ಕಣ್ಣದ್ವಾರದಿಂದ ಹೊರಗೆ ಬಂದನು. ಶಿಶುವು ಜನಿಸಿದ್ದೊಂದೇ ತಡ ಅಲ್ಲಿರುವ ಪ್ರತಿಯೊಬ್ಬರ ಕಣ್ಣುಗಳು ಮುಚ್ಚಿ ಹೋದಂತಾದವು. ಆ ಶಿಶುವಿನ ತೇಜಸ್ಸಿಗೆ ಸೂರ್ಯ ಚಂದ್ರಾತಿಗಳ ತೇಜಸ್ಸು ಅಡಗಿ, ಹಗಲು ಹೊತ್ತಿನಲ್ಲಿ ದೀಪ ಹಚ್ಚಿದ ಹಾಗಾಯಿತು. ಮಹಾತ್ಮರು ಅವತರಿಸಬೇಕಾದರೆ ಅತ್ಯಂತ ಸುಲಕ್ಷಣಗಳು ಉತ್ತಮೋತ್ತಮ ನಕ್ಷತ್ರಾದಿಗಳು ಇರುವವೆಂದು ಆ ವೇಳೆಯಲ್ಲಿ ದೇವತೆಗಳು ಪುಷ್ಪದ ಮಳೆಗರೆದರು. ಗಿರಿಜೆ, ಗಂಗೆ, ಹರಿ-ಹರ ಬ್ರಹ್ಮಾದಿಗಳು ತಮ್ಮ ತಮ್ಮ ವಾಹನಗಳ ಸಹಿತ ಧರೆಗಿಳಿದು ಶಿಶುವಿದ್ದೆಡೆಗೆ ಬಂದರು. ಹೆತ್ತ ಶಿಶುವನ್ನು ಪಾರ್ವತಿಯು ಎತ್ತಿ ಮೊಲೆಯುಣಿಸಿದಳು. ಆಗ ದೇವಕನ್ನಿಕೆ, ನಾಗಕನ್ನಿಕೆಯರು ನೆರೆದು ಮುತ್ತಿನ ತೊಟ್ಟಿಲನ್ನು ಕಟ್ಟಿ ಆ ಶಿಶುವನ್ನು ಹಾಕಿ ಜೋಗುಳವನ್ನು ಪಾಡಿ ಅವನ ಮುದ್ದು ಮುಖವನ್ನು ನೋಡಿ ಆತನಿಗೆ ಸಿದ್ಧರಾಮನೆಂದು ಹೆಸರಿಟ್ಟರು"[೯] ಎಂಬ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾರೆ. ಇದಕ್ಕೆ ಅನುಗುಣವಾಗಿ ಚಂದ್ರಕಾಂತ ಬಿಜ್ಜರಗಿ ಅವರು 'ಶ್ರೀ ಸಿದ್ಧರಾಮ' ಎಂಬ ಲೇಖನದಲ್ಲಿ "ಸಿದ್ಧರಾಮ ಅಯೋನಿಜ. ಅವನು ಹುಟ್ಟಿದಾಗ 'ಮಾಸಿಲ್ಲಾ, ಮಲವಿಲ್ಲ, ದುರ್ಗಂಧವಿಲ್ಲ, ಒಡಲ ಪೂಸಿದ ಧಮದ್ರಮ ತಾನಿಲ್ಲ, ಆಗ ಗಿರಿಜೆ ಸಿರಿಸರಸ್ವತಿವೆರಸಿ ಬಂದಳು. ಮೊಹಕೆ ಮೊಲೆಯನುಡಿಸಿದಳು. ತೊಟ್ಟಿಲಿನಲ್ಲಿ ಮಲಗಿಸಿ ಜೋಗುಳ ಹಾಡಿದಳು. ಕೈಲಾಸಕ್ಕೆ ಮರಳಿದ ಮೇಲೆ ಸುಗ್ಗವೆ ತನ್ನ ಪಕ್ಕದಲ್ಲಿ ಮಗುವನ್ನು ಕಂಡಳು. ಜಾತ ಸೂತಕಾತೀತನಾದ ಅವನಿಗೆ ತಾಯಿ ತಂದೆಗಳು ತಮ್ಮ ಕುಲದೈವ ದೂಳಿಮೂಕಾಳನ ಹೆಸರಿಟ್ಟರು. ಆದರೆ ಮಗು ಈ ಹೆಸರಿನಿಂದ ಕೂಗಿದರೆ ಓಗೊಡದೆ ರಾಮಯ್ಯ' ಎಂದು ಕೂಗಿದರೆ ಮಾತ್ರ ಉತ್ತರಿಸುತ್ತಿದ್ದನು. ಒಂದೆರಡು ವರ್ಷಗಳಲ್ಲೆ ಹದಿನೈದು ವರ್ಷದ ಪ್ರಾಯದವನಂತೆ ಬೆಳೆದನು"[೧೦] ಎಂದು ಉಲ್ಲೇಖಿಸಿದ್ದಾರೆ.

ಸಿದ್ಧರಾಮ ಚಾರಿತ್ರಿಕ ಪುರುಷನಾಗಿದ್ದರೂ ಅವನ ಸುತ್ತ ಹೆಣೆದ ಪೌರಾಣಿಕ ಕಥೆಯಿಂದ ಜನ್ಮಕಾಲದ ಬಗ್ಗೆ ನಿಖರವಾಗಿ ಏನನ್ನು ಹೇಳಲಾಗದು. ಆದರೆ ಕವಿಚರಿತೆಕಾರರು ಸಿದ್ಧರಾಮ ಕಾಲವನ್ನು ಕ್ರಿ.ಶ. ೧೧೬೦ ಎಂದು ಹೇಳುತ್ತಾರೆ. ಇವನು ಅಲ್ಲಮ, ಬಸವಣ್ಣ, ರೇವಣಸಿದ್ಧ, ಮರುಳಸಿದ್ಧ, ಶಾಂತಮುತ್ತಯ್ಯನ ಸಮಕಾಲೀನನಾಗಿದ್ದಾನೆ. ಇವನ ಬಗ್ಗೆ ಈವರೆಗೆ ದೊರಕಿರುವ ಶಾಸನಗಳಲ್ಲಿ(೧೨೯ನೆಯ ಇಂಗುಳಿ ಶಾಸನದಲ್ಲಿ) ಸಿದ್ಧರಾಮನನ್ನು ಲಿಂಗದೇವರೆಂದು ಪರಿಗಣಿಸಿದ್ದ ರಿಂದ ಆ ವೇಳೆಗೆ ಇವರು ಗತಿಸಿದ್ದರೆಂದು ಸ್ಪಷ್ಟವಾಗುತ್ತದೆ. ಬಿಜ್ಜಳನು ತಮ್ಮ ಕರ್ಣದೇವನಿಗೆ

ಪಟ್ಟಾಭಿಷೇಕ(ಕ್ರಿ.ಶ. ೧೧೬೭) ಜರುಗುವ ಸಮಯದಲ್ಲಿ ಸಿದ್ಧರಾಮ ಬದುಕಿದ್ದನೆಂದು ರಾಘವಾಂಕನೇ ಹೇಳಿದ್ದಾನೆ. ಇದರಿಂದಾಗಿ ಸಿದ್ಧರಾಮ ೧೧೬೭–೧೨೦೯ರ ಮಧ್ಯ ಎಂದೋ ಸೊಲ್ಲಾಪುರದಲ್ಲಿ ಗವಿ(ಗೋಪೆ)ಯಲ್ಲಿ ಜೀವಂತ ಸಮಾಧಿಸ್ಥನಾಗಿರಬೇಕು ಎಂಬ ವಿಚಾರಗಳು ತಿಳಿದುಬರುತ್ತವೆ.

ಹೀಗೆ ಈ ಎಲ್ಲಾ ಸಂಗತಿಗಳಿಂದ ಸಿದ್ಧರಾಮನ ಇತಿವೃತ್ತವನ್ನು ತಿಳಿದುಕೊಂಡ ಮೇಲೆ ಈತನ ಅನುಯಾಯಿಗಳಾದ ಮಂಕಸಿದ್ಧ ಪರಂಪರೆಯವರು ಕಂಡುಬರುತ್ತಾರೆ. ಪ್ರಸ್ತುತ ಮಂಕಸಿದ್ಧ ಪರಂಪರೆಯನ್ನು ರೂಢಿಸಿಕೊಂಡು ಬರುತ್ತಿರುವ ಮಂಕೊಡೆಯರನ್ನು ಅಧ್ಯಯನಕ್ಕೆ ತೊಡಗಿಸಿಕೊಂಡಾಗ ಅವರು ಮೂಲತಃ ಹಾಲುಮತ ಗುರುಪರಂಪರೆಯಲ್ಲಿ ಬರುವ ಉಪ ಪಂಗಡವಾಗಿದೆ. ಈ ಪಂಗಡದ ಮೂಲಪುರುಷ ಮಂಕಸಿದ್ಧ ಅಥವಾ ಮರುಳಸಿದ್ಧರಾಗಿದ್ದಾರೆ. ಇವರು ಹಾಲುಮತ ಸಮುದಾಯದ ಗುರುಪರಂಪರೆಯಲ್ಲಿ ಪ್ರಸಿದ್ಧ ಸ್ಥಾನವನ್ನು ಪಡೆದುಕೊಂಡವರು. ಇವರ ಕಾರ್ಯಕ್ಷೇತ್ರವು ಸರೂರ ಗ್ರಾಮದ ಹೊರವಲಯದಲ್ಲಿರುವ ತೂಗುಡ್ಡವಾಗಿದೆ. ಇದು ಈತನ ತಪೋಭೂಮಿಯೂ ಹೌದು. ಹಾಗೆಯೇ ಇದೊಂದು ಐತಿಹಾಸಿಕ ಸ್ಥಳವೂ ಹೌದು. ಹೀಗಾಗಿ ಇಲ್ಲಿ ಸಿದ್ಧಮಂಕ ಸೂಜಿಗೆ ತಲೆಯೂರಿ ಕಾಲುಮೇಲೆ ಮಾಡಿ ಉಗ್ರತಪಸ್ಸು ಕೈಗೊಂಡ ವಿಷಯವು ಇಲ್ಲಿ ತಿಳಿದುಬರುತ್ತದೆ. ಏಕ ವ್ಯಕ್ತಿಯಾದ ಈತನನ್ನು ಮರಳಮಂಕ, ಮಂಕತಂದೆ, ಮಂಕಸಿದ್ಧಯ್ಯ, ಮಂಕಯ್ಯ ಎಂಬ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಪ್ರಮುಖವಾಗಿ ಈತನ ಪರಂಪರೆಯವರು ಸರೂರು, ಡಂಬಳ ಹಾಗೂ ಕಳಲೆ ಹೀಗೆ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಕಂಡುಬಂದರು ಕೂಡ, ಹೆಚ್ಚಾಗಿ ಸರೂರು ಬಿಟ್ಟರೆ, ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ ಕಂಡುಬರುತ್ತಾರೆ. ಇಲ್ಲಿ ಮಂಕೊಡೆಯರಿಗೆ ಸಂಬಂಧಿಸಿದಂತೆ ಒಂದು ಮಠವಿರುವುದು ಕಂಡುಬರುತ್ತದೆ. ಆದರೆ ಮಂಕೊಡೆಯರು ಕುರುಬರಲ್ಲಿ ಲಿಂಗಾಯತ ಜಂಗಮರಂತೆ ಬದುಕುತ್ತಿರುವ ಇವರ ಸಂಖ್ಯೆ ತೀರ ಕಡಿಮೆ. ಏಕೆಂದರೆ ಸಿದ್ಧಮಂಕ ಸಂಪ್ರದಾಯದ ಸಾಧು ಕುರುಬರು ಲಿಂಗಾಯತರಾಗುತ್ತಾ ಬಂದಿರುವುದರಿಂದ ಇವರ ಸಂಖ್ಯೆ ಕಡಿಮೆಯಾಗಿರಬಹುದು.

ಇದಕ್ಕೆ ಪೂರಕವಾಗಿ ಶಂಬಾ ಜೋಶಿ ಅವರು "ವೀರಶೈವ ಲಿಂಗಾಯತ ಪಂಥ ಒಂದು ಪ್ರಸಾರಕ ಧರ್ಮವಾಗಿದ್ದರಿಂದ ಕುರುಬ, ರೆಡ್ಡಿ, ಒಕ್ಕಲಿಗರಂತಹ ಅನೇಕ ಉಪಜಾತಿಗಳು ಆ ಧರ್ಮದಲ್ಲಿ ಸೇರಿ ಹೋದವು"[೧೧] ಎಂದು ಹೇಳಿದ್ದಾರೆ. ಅದೇ ರೀತಿಯಾಗಿ ಎಂ.ಎಂ. ಕಲಬುರ್ಗಿ ಅವರು "ವಿಜಯನಗರ ಸ್ಥಾಪಕರು ಹಕ್ಕಬುಕ್ಕರು ಮೈಸೂರಿನ ಒಡೆಯರು ಮೂಲತಃ ಕುರುಬರು ಬಳ್ಳಾರಿ, ಹಂಪೆ ಅರಸರು ಸಿದ್ಧರಾಮನ ಭಕ್ತರು. ಹೀಗೆ ಧಾರ್ಮಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಪೌರಾಣಿಕವಾಗಿ ಕುರುಬ ಮತ್ತು ಲಿಂಗಾಯಿತ ಸಮಾಜಗಳಲ್ಲಿ ಹೋಲಿಕೆಯಿದ್ದು, ಕುರುಬರ ಪರಿಷ್ಕೃತ ರೂಪ ವೀರಶೈವವೆಂದು ಅಭಿಪ್ರಾಯಪಟ್ಟಿದ್ದಾರೆ."[೧೨] ಈ ಎಲ್ಲಾ ಸಂಗತಿಗಳನ್ನು

ಗಮನಿಸಿದಾಗ ಸಿದ್ಧರಾಮನ ಶಿಷ್ಯ ಸಿದ್ಧಮಂಕನ ಪರಂಪರೆಯವರು. ಮೂಲತಃ ಕುರುಬರಾಗಿ ಜನಿಸಿ, ಕಾಲಾಂತರದಲ್ಲಿ ಲಿಂಗಾಯಿತ ಮತ್ತು ವೀರಶೈವ ಸಮುದಾಯಕ್ಕೆ ಸೇರಿಹೋಗಿರುವುದು ಸ್ಪಷ್ಟವಾಗುತ್ತದೆ. ಏಕೆಂದರೆ ಸ್ವತಃ ಸಿದ್ಧರಾಮನು ಚನ್ನಬಸವಣ್ಣನಿಂದ ಲಿಂಗದೀಕ್ಷೆ ಪಡೆದು ಲಿಂಗಾಯಿತರ ಒಳಗಡೆ ಬಂದ ಕಾರಣ ಈತನ ಅನುಯಾಯಿಗಳಾದ ಮಂಕೊಡೆಯರು ಯಥಾವತ್ತಾಗಿ ಗುರುಗಳನ್ನು ಅನುಕರಣೆ ಮಾಡಿರುವುದರಿಂದ ಸಿದ್ಧಮಂಕ ಪರಂಪರೆಯ ಮಂಕೊಡೆಯರು ಲಿಂಗಾಯಿತ ಸಮುದಾಯಕ್ಕೆ ಸೇರಿಕೊಂಡಿರುವುದು ಕಂಡುಬರುತ್ತದೆ.

ಹೀಗಾಗಿ ಮಂಕೊಡೆಯರಿಗೆ ಸಂಬಂಧಿಸಿದ ಕುರುಬರ ಮಠಗಳು ಲಿಂಗಾಯತದೊಳಗೆ ಲೀನವಾಗುತ್ತ ನಡೆದಿರಬಹುದು ಎಂಬ ವಿಚಾರಗಳು ಗಮನಾರ್ಹವಾಗಿವೆ. ಪ್ರಸ್ತುತ ಸರೂರಲ್ಲಿ ಇಂಥ ವಿಶಿಷ್ಟವಾದ ಸಂಸ್ಕೃತಿಯನ್ನು ಸಾಂಸ್ಕೃತಿಕರಣಗೊಳಿಸಿಕೊಂಡು ಬರುತ್ತಿರುವ ಮಂಕೊಡೆಯರ ಸಂಪ್ರದಾಯವನ್ನು ತಿಳಿಯಲು ಹಲವು ಆಕರಗಳು ಲಿಖಿತವಾಗಿ ಮತ್ತು ಮೌಖಿಕವಾಗಿ ದೊರೆಯುತ್ತವೆ. ಈ ಸರೂರನ್ನು ತಮ್ಮ ಕಾರ್ಯಕ್ಷೇತ್ರವಾಗಿ ಹಾಗೂ ತಪೋಭೂಮಿಯನ್ನಾಗಿ ಮಾಡಿಕೊಂಡು ಸಾಂಸ್ಕೃತಿಕ ಬದುಕನ್ನು ಕಟ್ಟಿ ಬೆಳೆಸಿದ ಮಂಕೊಡೆಯರನ್ನು 'ಸಿದ್ಧಮಂಕ ಚರಿತ್ರೆ' ಎಂಬ ಸಾಹಿತ್ಯ ಕೃತಿಯೂ ಅವರ ಭಿನ್ನವಾದ ಸಂಸ್ಕೃತಿಯನ್ನು ಅನಾವರಣಗೊಳಿಸುತ್ತದೆ. ಕುರುಬ ಸಮಾಜದಲ್ಲಿ ಸಿದ್ಧಮಂಕ ಸಂಪ್ರದಾಯದವರು ಸರೂರಲ್ಲಿ ಮೊದಲಿನಿಂದಲೂ ಅಸ್ತಿತ್ವದಲ್ಲಿದ್ದರು ಎಂಬುದಕ್ಕೆ ಇದು ಪ್ರಮುಖ ಆಕರವಾಗಿದೆ. ಇದರ ನಾಯಕ ಮಂಕ ಮರುಳನಾಗಿದ್ದಾನೆ. ಈ ಒಡೆಯರ ನಾಯಕನಾದ ಮಂಕಸಿದ್ಧ ತನ್ನ ಸಮುದಾಯದವರ ಒಳತಿಗಾಗಿ ಹಾಲಕಂಬಿಯ ಮೇಲೆ ಸತ್ತಕುರಿಯನ್ನು ಮಾರಿದ ತಪ್ಪಿನಿಂದಾಗಿ ಅಸ್ಪೃಶ್ಯರಂತೆ, ಕನಿಷ್ಟರಾಗಿ ಹನ್ನೆರಡು ವರ್ಷ ಬದುಕು ನಡೆಸಬೇಕಾಯಿತು. ಈ ಹಿನ್ನೆಲೆಯಲ್ಲಿ ಹಾಲುಮತ ಪರವಾಗಿ ಹೋರಾಡಿ ಜಯಶೀಲನಾದವನು ಮಂಕಸಿದ್ಧ ಎಂಬುದು ಈ ಕೃತಿಯ ಪ್ರಮುಖ ಆಶಯವಾಗಿದೆ. ಕೃತಿಯ ಒಳಗಡೆ ನಡೆಯುವ ಸಂಗತಿಗಳನ್ನು ಸಂಕ್ಷಿಪ್ತವಾಗಿ ನೋಡುವುದಾದರೆ, ಮುಖ್ಯವಾಗಿ ಸಿದ್ಧರಾಮನ ಜನನ, ಪವಾಡ ರೂಪದಲ್ಲಿ ಜರುಗುತ್ತದೆ. ಹಸಿವಿನ ರೂಪದಲ್ಲಿ ಶಿವನು ಕಾಣಿಸಿಕೊಳ್ಳುತ್ತಾನೆ.

ಸಿದ್ಧರಾಮ ಶಿವನನ್ನು ಹುಡುಕಿಕೊಂಡು ಶ್ರೀಶೈಲಕ್ಕೆ ಹೋಗುತ್ತಾನೆ. ಬೇಸತ್ತ ಸಿದ್ಧರಾಮನು ಬಾವಿಗೆ ಹಾರಲು ಹೋಗುತ್ತಾನೆ, ಆಗ ಶಿವನು ರಕ್ಷಿಸುತ್ತಾನೆ. ಮತ್ತೊಂದು ಕಡೆ ಮಂಕ ಮರುಳ ಎಂಬ ಹೆಸರಿನಿಂದ ಹುಟ್ಟಿ ಸಿದ್ಧರಾಮನ ದರ್ಶನಕ್ಕೆ ಸರೂರ ಕೋಡುಗಲ್ಲಿನ ಮೇಲೆ ತಪಸ್ಸು ಮಾಡುತ್ತಾನೆ. ತಪಸ್ಸಿಗೆ ಮೆಚ್ಚಿ ಶಿವನೇ ಸರೂರಿಗೆ ಬಂದು ಆಶೀರ್ವಾದ ಮಾಡುತ್ತಾರೆ. ಶಿವನು ಹೆಗ್ಗಗೌಡನ ಹೊಲದಲ್ಲಿ ಬಂದ ಕುರಿಗಳನ್ನು ರಕ್ಷಿಸಲು ಆದೇಶಿಸಿ ಅವುಗಳ ರಕ್ಷಣೆಗಾಗಿ ತಳವಾರ ಮತ್ತು ರಾಕ್ಷಸಿಯನ್ನು ಕಳಿಸುವನು. ನಂತರ ಸಿದ್ಧಮ್ಮಳನ್ನು ಮತ್ತು ರಾಕ್ಷಸಿಯನ್ನು ಮದುವೆಯಾದ ಹೆಗ್ಗಗೌಡನಿಗೆ ಆದ ಪರಿಣಾಮ ಸತ್ತ ಕುರಿಮಾರಿದ್ದಕ್ಕಾಗಿ ಬಿಜ್ಜಳ ರಾಜನು ಕುರುಬರನ್ನು ಕಲ್ಯಾಣದಿಂದ

ಹೊರ ಹಾಕುವನು. ನಂತರ ಅಲ್ಲಮನ ದೈವಿಕ ಶಕ್ತಿಯಿಂದಾಗಿ ಸಿದ್ಧರಾಮನಿಗೆ ತನ್ನ ತಪ್ಪಿನ ಅರಿವಾಗುವುದು. ಅದಾದ ನಂತರ ರೇವಣಸಿದ್ಧನ ಸ್ಪರ್ಶದಿಂದ ಮಂಕಯ್ಯನು ಎಚ್ಚೆತ್ತುಕೊಂಡು ಕುರುಬರನ್ನು ಪಟ್ಟಣದೊಳಗೆ ಬರುವಂತೆ ಮಾಡಿರುವನು. ಸಿದ್ಧರಾಮ ಮಂಕ ತಂದೆಯ ಆದೇಶದಂತೆ ನಡೆದುಕೊಳ್ಳಲು ತಿಳಿಸಿ ಶರಣರ ಮುಂದೆ ಕುರುಬರ ಹಣೆಗೆ ವಿಭೂತಿಯನ್ನಿತ್ತು ಹರಿಸಿದರು. ಹೀಗೆ ಈ ಪರಂಪರೆಯನ್ನು ಮುದುವರಿಸಲು ಬಸವಣ್ಣೆಪ್ಪ ಹಳವಳ್ಳಿ ಅವರು ಸಂಪಾದಿಸಿರುವ 'ಹಾಲುಮತ ಪುರಾಣವು' ಸಿದ್ಧಮಂಕ ಮತ್ತು ತಗರ ಪವಾಡ ಕಾವ್ಯಗಳ ಮುಂದುವರಿಕೆಯಾಗಿ ಸರೂರ ಹಾಲುಮತ ಗುರುಪರಂಪರೆಯನ್ನು ತಿಳಿಸುವಂತದ್ದಾಗಿದೆ. ಈ ಕೃತಿಯೂ ಮಂಕಸಿದ್ಧ ಪರಂಪರೆಗೆ ಪೂರಕವಾಗಿರುವ ಸಂಗತಿಗಳನ್ನು ವ್ಯಕ್ತಪಡಿಸುತ್ತದೆ. ಇದರ ನಾಯಕ ಮರುಳುಸಿದ್ಧ ಅಥವಾ ಮರುಳ ಮಂಕಸಿದ್ಧನಾಗಿದ್ದಾನೆ. ಈತನನ್ನು ಕೊಡುಗಲ್ಲಿನ ಕಾವ್ಯ ಪುರುಷನೆಂದು ಈ ಕಾವ್ಯ ಗುರುತಿಸುತ್ತದೆ. ಈತನ ತಪಸ್ಸನ್ನು ಮೆಚ್ಚಿ ಕುರುಬರ ಮೂಲಪುರುಷ ಮುದ್ದಗೊಂಡ ಮತ್ತು ಮುದ್ದಮ್ಮರ ಸಂತತಿ ತೂಗುಡ್ಡಕ್ಕೆ ಬಂದು ಕುರಿದೊಡ್ಡಿ ಹಾಕಿಕೊಂಡು ಮಂಕಸಿದ್ಧನಲಿಗೆ ಬಂದು ಲಿಂಗಕಟ್ಟಿ ಉದ್ಧರಿಸಬೇಕೆಂದು ವಿನಂತಿಸಿಕೊಳ್ಳುತ್ತಾರೆ. ಜೊತೆಗೆ ಇಷ್ಟಲಿಂಗ ಧರಿಸುವೆವು ನಿಷ್ಠೆಯಿಂದ ಎಂದು ವಚನ ನೀಡುತ್ತಾರೆ. ಆಗ ಮಂಕಸಿದ್ಧನು ಅವರಿಗೆ ಇಷ್ಟಲಿಂಗ ಧಾರಣೆ ಮಾಡುತ್ತಾನೆ. ಈ ಎಲ್ಲಾ ವಿಚಾರಗಳನ್ನು ಗಮನಿಸಿದಾಗ ಮಂಕಸಿದ್ಧ ಪರಂಪರೆಯ 'ಮಂಕೊಡೆಯರು' ಈ ಪರಂಪರೆಯ ಆರಂಭದಿಂದಲೂ ಸರೂರಲ್ಲಿರುವುದು ಸ್ಪಷ್ಟವಾಗುತ್ತದೆ. ಜೊತೆಗೆ ಲಿಂಗದೀಕ್ಷೆಯನ್ನು ನೀಡುತ್ತಿದ್ದರು ಎಂಬುದಕ್ಕೆ ಇದು ಒಂದು ಆಕರವಾಗಿದೆ. ಈ ಎಲ್ಲಾ ವಿಚಾರಗಳನ್ನೇ ಒಳಗೊಂಡ ಈ ಕೃತಿಗಳು ಸರೂರಿನ ಹಾಲುಮತ ಸಮುದಾಯಗಳು ತಮ್ಮ ಸಮುದಾಯದೊಳಗಡೆ ನಡೆಸುವಂತಹ ಅನೇಕ ಸಾಂಸ್ಕೃತಿಕ ಚಿತ್ರಣಗಳನ್ನು ಕಟ್ಟಿಕೊಡುವಲ್ಲಿ ಪ್ರಮುಖ ಆಕರಗಳಾಗಿವೆ.

ಈ ಹಿನ್ನೆಲೆಯಲ್ಲಿ ಕುರುಬ ಸಮುದಾಯವನ್ನು ಪ್ರತಿನಿಧಿಸುವ ರೇವಣಸಿದ್ಧ, ಸಿದ್ಧರಾಮ, ಮಂಕತಂದೆ ಹೆಗ್ಗಗೌಡರು ಮತ್ತು ಲಿಂಗಾಯತ ಸಮಾಜವನ್ನು ಪ್ರತಿನಿಧಿಸುವ ಬಸವಾದಿ ಶರಣರು ಏಕೀಕರಣಗೊಳ್ಳುವ ಕ್ರಿಯೆ ಇಲ್ಲಿ ಕಥೆಯಾಗಿ ಬೆಳೆದಿದೆ. ಇದನ್ನು ಇನ್ನೂ ಮುಂದುವರೆದು ಹೇಳುವುದಾದರೆ ಭಂಡಾರ ಸಂಪ್ರದಾಯದಿಂದ ವಿಭೂತಿ ಸಂಪ್ರದಾಯದ ಕಡೆಗೆ ಮಾರ್ಪಡುವ ಸಂಕ್ರಮಣ ಸಂದರ್ಭವನ್ನು ತಿಳಿಸಿಕೊಡುವಲ್ಲಿ ಇವು ಮುಂದಾಗಿವೆ. ಏಕೆಂದರೆ ಇವರ ಕಾಲಾವಧಿಯ ಸಂದರ್ಭದಲ್ಲಿ ಆ ಪ್ರದೇಶ(ಉತ್ತರ ಕರ್ನಾಟಕ)ದಲ್ಲಿ ಶರಣರ ಪ್ರಭಾವ ವಿಫುಲವಾಗಿರುವುದರಿಂದ ಈ ರೀತಿಯಾದ ಪ್ರಕ್ರಿಯೆಗಳು ನಡೆದಿರಬಹುದು. ಸರೂರಿನ ಈ ಕುರುಬರ ಗುರುಪರಂಪರೆಯಲ್ಲಿ ಮತ್ತೊಂದು ಪರಂಪರೆಯಾಗಿ ಬೆಳೆದುಬಂದಿದೆ.

ರೇವಣಸಿದ್ಧ ಪರಂಪರೆ

ರೇವಣಸಿದ್ಧ ಕುರುಬ ಸಮಾಜದ ಗುರುಪರಂಪರೆಯಲ್ಲಿ ಪ್ರಸಿದ್ಧಿಯನ್ನು ಗಳಿಸಿಕೊಂಡವನಾಗಿದ್ದಾನೆ. ಕುರುಬ ಸಮಾಜಕ್ಕೆ ಸೇರಿದ ಈತ ಕುರುಬ, ವೀರಶೈವ ಹಾಗೂ ಲಿಂಗಾಯಿತ ಸಮುದಾಯಗಳಲ್ಲಿ ಆರಾಧ್ಯ ದೈವವಾಗಿದ್ದಾನೆ. ಹೀಗಾಗಿ ಕರ್ನಾಟಕದ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯವಾಗಿ ಬಹಳ ಪ್ರಭಾವವನ್ನು ಬೀರಿದ ವ್ಯಕ್ತಿಯಾಗಿ ವ್ಯಾಪಕವಾದ ವಿಸ್ತರಣೆಯನ್ನು ಬೆಳೆಸಿಕೊಂಡಿದ್ದಾನೆ. ಕುಲಗುರುವಾಗಿರುವ ಈತನನ್ನು ಕುರಿತಂತೆ ಲಿಖಿತ ಮತ್ತು ಮೌಖಿಕ ರೂಪದಲ್ಲಿ ಕಾವ್ಯ-ಪುರಾಣ, ಕಥೆ-ಹಾಡುಗಳು ಹಾಗೂ ಶಾಸನ ಶಿಲ್ಪ ದೇವಾಲಯಗಳಂತಹ ಸ್ಮಾರಕಗಳು ಅಧಿಕ ಪ್ರಮಾಣದಲ್ಲಿ ಸಿಗುತ್ತವೆ. ಸಿದ್ಧಮಂಕ ಚರಿತೆ, ತಗರ ಪವಾಡ, ರೇವಣಸಿದ್ಧೇಶ್ವರ ಪುರಾಣ, ಹಾಲುಮತ ಪುರಾಣ ಮೊದಲಾದ ಕಾವ್ಯಪುರಾಣಗಳು ರೇವಣಸಿದ್ಧನ ವ್ಯಕ್ತಿತ್ವ ಮತ್ತು ಸಾಧನೆಯ ಬಗ್ಗೆ ತಿಳಿಸುತ್ತವೆ. ಈತನ ಶಿಷ್ಯಂದಿರಾದ ಶಾಂತಮುತ್ತಯ್ಯ, ಮಂಕಸಿದ್ಧರು ತಮ್ಮ ಸಮುದಾಯದೊಳಗಡೆ ನಡೆಯುವ ತುಮುಲಗಳನ್ನು ಚಿತ್ರಿಸಲು ಈ ಆಕರಗಳು ನೆರವಾಗಿವೆ. ಪ್ರಮುಖವಾಗಿ ರೇವಣಸಿದ್ಧನ ಜನನ ಆತನ ಕಾಲ ನಿರ್ಣಯ ಹಾಗೂ ಆತನ ಕಾರ್ಯಕ್ಷೇತ್ರ, ಅದೇ ರೀತಿಯಾಗಿ ರೇವಣಸಿದ್ಧ ಪರಂಪರೆಯ ಅನುಯಾಯಿಯಾಗಿ ಶಾಂತಮುತ್ತಯ್ಯ ಆತನ ಇತಿವೃತ್ತವನ್ನು ಗಮನಿಸುವಾಗ ರೇವಣಸಿದ್ಧ ಆದ್ಯನಾಗಿ ಕಂಡುಬರುತ್ತಾನೆ. ಈತ ಸುಮಾರು ೧೨ನೆಯ ಶತಮಾನದಲ್ಲಿ ಕಂಡುಬರುವ ಒಬ್ಬ ಸಿದ್ಧ ಪುರುಷ, ಸಿದ್ಧರ ಸಿದ್ಧ, ಸಿದ್ಧರಗುರು ಮತ್ತು ಸಿದ್ಧರ ಒಡೆಯ ಮುಂತಾದ ಅಭಿಧಾನಗಳನ್ನು ಹೊತ್ತು ಸಿದ್ಧಕುಲಕ್ಕೆ ಕಳಶಪ್ರಾಯನಾದವನಾಗಿ ಕಂಡುಬರುತ್ತಾನೆ. ಈ ಎಲ್ಲಾ ಬಗೆಯ ಸಿದ್ಧ ಸಂಪ್ರದಾಯಗಳನ್ನು ಮೈಗೂಡಿಸಿಕೊಂಡು ತನ್ನದೇ ಆದ ಹೊಸ ಸಿದ್ಧ ಸಂಪ್ರದಾಯಕ್ಕೆ ನಾಂದಿಹಾಡಿ ತನ್ನ ಅದ್ಭುತ ಪವಾಡಗಳಿಂದ ಶೈವ, ವೀರಶೈವ, ಲಿಂಗಾಯಿತ ಧರ್ಮದ ಗುರುಪರಂಪರೆಯ ಸ್ಥಾನವನ್ನಲಂಕರಿಸಿದ ಹಾಗೂ ಜನರ ಮನತಣಿಸಿದ ಪವಾಡ ಪುರುಷನಾಗಿ ಪ್ರಸಿದ್ಧಿಯನ್ನು ಪಡೆದುಕೊಂಡಿದ್ದಾನೆ. ಈತನ ಬಗ್ಗೆ ಚಾಮರಸ ಪ್ರಭುಲಿಂಗಲೀಲೆಯಲ್ಲಿ ಪ್ರಭುದೇವರಿಗೆ ಮತ್ತು ಗೋರಕ್ಷಕನಿಗೆ ನಡೆಯುವ ಹಾಗೂ ರೇವಣಸಿದ್ಧೇಶ್ವರ ರಗಳೆಯಲ್ಲಿ ಕಠಾರಿಯ ಪ್ರಸಂಗದಲ್ಲಿ ಗೋರಕ್ಷ ಮತ್ತು ರೇವಣಸಿದ್ಧರ ಮಧ್ಯ ನಡೆಯುವ ವಾದಗಳನ್ನು ಗಮನಿಸಿದರೆ ೧೨ನೆಯ ಶತಮಾನದ ಹೊತ್ತಿಗೆ ಸಿದ್ಧಪರಂಪರೆ ಕರ್ನಾಟಕದಲ್ಲಿ ಪ್ರಭಾವಶಾಲಿಯಾಗಿತ್ತೆಂದು ತೋರುತ್ತದೆ.

> "ನಿರುಪಮ ಸಿದ್ಧನ ಪ್ರತಿಮೆ ಸಿದ್ಧನ ಚಿಂತಕ ಸಿದ್ಧನುತ್ತವ
> ವರಣಶರೀರ ಸಿದ್ಧಿನತಿಕಾರಣ ಸಿದ್ಧನ ಶೇಷ ಮಂಸಮು
> ದ್ಧರಿಸುವ ಸಿದ್ಧನಾತ್ಮ ನಿಜಸಿದ್ಧನ ನೂನಪರಾ ಪರ್ಯೆಕವಿ
> ಸ್ತರತರ ಸಿದ್ಧನೊಪ್ಪಿದ ನಿಳಾತಳದೊಳ್ ಸತಿ ಸಿದ್ಧರೇಣಂ"[೧೩]

[illegible]

ಎಂದು ಹರಿಹರನ ರಗಳೆಯಲ್ಲಿ ರೇವಣಸಿದ್ಧನ ಸಿದ್ಧಪ್ಪನನ್ನು ವರ್ಣಿಸಲಾಗಿದೆ.[೫] ಈತನ ಸಿದ್ಧಟಿಕೆಯ ಸಂದರ್ಭದಲ್ಲಿ ರೇವಣಸಿದ್ಧರು ಸಿದ್ಧಕುಲ ಚಕ್ರವರ್ತಿ, ನಿರುಪಮಸಿದ್ಧ ಮುಕ್ಕಣ್ಣಸಿದ್ಧ, ಸಿದ್ಧರಸಿದ್ಧ, ಅರಸಶಿವಸಿದ್ಧ, ಸಿದ್ಧ ಕುಲಶೇಖರ ಮುಂತಾದ ಬಿರುದಾವಳಿಗಳನ್ನು ಧರಿಸಿದ ಇವರು ಕರ್ನಾಟಕದಲ್ಲಿ ಸಿದ್ಧ ಪರಂಪರೆಯ ವಾರಸುದಾರರಾಗಿ ಕಂಡುಬರುತ್ತಾರೆ. ಹಾಗೆಯೇ ಈತನ ಕಾಲನಿರ್ಣಯದ ಬಗ್ಗೆ ನೋಡುವುದಾದರೆ ಕೊಲ್ಲಿಪಾಕಿಯ ಸೋಮೇಶ್ವರ ಲಿಂಗದಿಂದ ಜನಿಸಿ ಘನಲಿಂಗಿ ರುದ್ರಮುನಿ ದೇವರಿಗೆ ತಂದೆಯಾಗಿ ಲೋಕ ಸಂಚಾರ ಕೈಗೊಂಡು ಪುನಃ ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ಲೀನವಾದರು ಎಂಬ ವಿಚಾರಗಳು ಇದುವರೆಗೆ ರಚನೆಗೊಂಡ ಕಾವ್ಯಗಳಿಂದ ತಿಳಿದು ಬರುತ್ತದೆ. ಆದರೆ ಪುರಾಣಗಳು ಹೇಳುವಂತೆ "ರೇವಣಸಿದ್ಧನು ಅರಿತು ಏಳುನೂರು ವರ್ಷ, ಮರೆತು ಏಳುನೂರು ವರ್ಷ ಬದುಕಿದನೆಂದು" ಹೇಳುತ್ತವೆ. ಹೀಗೆ ಈ ಎಲ್ಲಾ ಆಕರಗಳು ಈತನ ಸ್ಥೂಲ ಕಾಲವ್ಯಾಪ್ತಿಯನ್ನು ಸೂಚಿಸುತ್ತವೆ. ಆದರೆ ನಿರ್ದಿಷ್ಟ ಜೀವನಾವಧಿಯನ್ನು ತಿಳಿಸಿಕೊಡುವ ಆಕರಗಳೆಂದರೆ ಶಾಸನಗಳು. ಹಾಗಾಗಿ ಈತನ ಬಗ್ಗೆ ದೊರೆತ ಶಾಸನಗಳೆಂದರೆ, ಎಂ.ಎಂ. ಕಲಬುಗಿ ಅವರು ಮಾರ್ಗ ನಾಲ್ಕರಲ್ಲಿ ಉಲ್ಲೇಖಿಸಿರುವಂತೆ "ಕಕೇರಿ ಕ್ರಿ.ಶ. ೧೧೨೭ ರೇವಣಸಿದ್ಧದೇವರ ಶಿಷ್ಯ ಬ್ರಹ್ಮರಾಸಿ ಪಂಡಿತನ ಉಲ್ಲೇಖ, ಸಿರಿವಾಳ ಕ್ರಿ.ಶ. ೧೧೭೦(ಶಾಂತಿಮಯ್ಯಗಳ) ಪುತ್ರ ಸಿದ್ಧರೇವಣನೆಂಬ ಉಲ್ಲೇಖ, ಹೋತಗಲ್ಲ ಕ್ರಿ.ಶ. ೧೧೭೪ ಶಾಂತಮಯ್ಯ ಮತ್ತು ಸಿದ್ಧರೇವಣಯ್ಯಗಳ ಉಲ್ಲೇಖ, ಸಿರಿವಾಳ. ಕ್ರಿ.ಶ. ೧೧೭೮ ಶಾಂತೀಶ್ವರ ದೇವಸ್ಥಾನಕ್ಕಾಗಿ ಪುತ್ರ ರೇವಣಯ್ಯನಿಗೆದಾನ, ಹೋತಗಲ್ಲ ಕ್ರಿ.ಶ. ೧೨೦೮ ರೇವಣಸಿದ್ಧೇಶ್ವರ ಪೂಜೆಗಾಗಿ ಆಚಾರ್ಯ ನಾಗರಾಸಿಗೆದಾನ"[೯] ಹೀಗೆ ಈ ಎಲ್ಲಾ ಶಾಸನಗಳ ಕಾಲಾವಧಿಯನ್ನಿಟ್ಟುಕೊಂಡು ರೇವಣಸಿದ್ಧನ ಕಾಲನಿರ್ಣಯವನ್ನು ಸ್ಪಷ್ಟಪಡಿಸಲು ಸಹಾಯಕವಾಗಿದೆ. ಅದೇ ರೀತಿ ರೇವಣಸಿದ್ಧನ ಐತಿಹಾಸಿಕ ಮತ್ತು ಧಾರ್ಮಿಕವಾದ ವಿಚಾರಗಳಿಗೆ ಸಂಬಂಧಿಸಿದಂತೆ ಶಾಸನಗಳಲ್ಲಿ ಉಲ್ಲೇಖಗಳು ಕಂಡುಬರುತ್ತವೆ. ಅವುಗಳಲ್ಲಿ ಕೊಲ್ಲೂರಿನ ೧೧೯೫ರ ಶಾಸನ ರೇವಣೇಶ್ವರ ದೇವರ ನಿತ್ಯ ಸೇವೆಗೆಂದು ಪ್ರಸನ್ನ ರಾಮೇಶ್ವರ ದೇವರ ಮತ್ತು ಅಮರೇಶ್ವರ ದೇವರ ಆಚಾರ್ಯರಿಗೆ ಕಳಚೂರಿ ಚಕ್ರವರ್ತಿ ಸೋಮದೇವನ ಮಾಂಡಲಿಕ ಸೌದೊರೆ ಮಹಾಪ್ರಭುಗಳು ದತ್ತಿ ನೀಡಿದ ಉಲ್ಲೇಖ. ಹಾಗೆಯೇ ೧೧೯೩ರ ಅವ್ವೆರಹಳ್ಳಿ ಶಾಸನದ ಪವಾಡ ಮೆರೆದ ಆಚಾರ್ಯ ಮರುಳಸಿದ್ಧರು ರೇವಣಸಿದ್ಧರ ವರಪುತ್ರ ಎಂಬ ಉಲ್ಲೇಖ ಮತ್ತು ಕ್ರಿ.ಶ. ೧೨೦೦ರ ಪುಳಜೆ ಶಾಸನ ರೇವಣಸಿದ್ಧರ ಹೆಸರಿನಲ್ಲಿ ತೀರ್ಥಕುಂಡವನ್ನು ಸ್ಥಾಪಿಸಿರುವ ಸಂಗತಿ ತಿಳಿದುಬರುತ್ತದೆ. ಈ ಶಾಸನಗಳ ಸಮಯಕ್ಕಾಗಲೇ ರೇವಣಸಿದ್ಧರು ತಮ್ಮ ಸಾಮಾಜಿಕ, ಧಾರ್ಮಿಕ ಹಾಗೂ ಐತಿಹಾಸಿಕ ಕಾರ್ಯಗಳಿಂದ ಜನಮನದಲ್ಲಿ ಪೂಜ್ಯ ಭಾವನೆಯನ್ನು ಗಳಿಸಿದ್ದರು. ನೂರಾರು ದೇವಾಲಯ, ಮಠ, ದಾನದತ್ತಿಗಳು ಇವರ ಹೆಸರಿನಲ್ಲಿ ನಿರ್ಮಾಣಗೊಂಡಿರುವುದು ತಿಳಿದುಬರುತ್ತದೆ. ಹೀಗೆ ನಿರ್ಮಾಣಗೊಂಡ ದೇವಾಲಯ ಮಠಗಳಲ್ಲಿ ಸರೂರ ರೇವಣಸಿದ್ಧೇಶ್ವರ(ಏಳು) ಗುಡಿಯೂ

ಪ್ರಾಚೀನವಾದುದ್ದಾಗಿದೆ. ಇದು ತನ್ನದೇ ಆದ ಚಾರಿತ್ರಿಕವಾದ, ಐತಿಹಾಸಿಕವಾದ ಹಾಗೂ ಸಾಂಸ್ಕೃತಿಕವಾದ ಬದುಕನ್ನು ಚಿತ್ರಿಸುತ್ತದೆ. ಇಲ್ಲಿ ವಿಶೇಷವಾಗಿ ಕುರುಬರ ಗುರುಪರಂಪರೆಯ ಮೂಲ 'ಸರೂರು' ಎಂಬುದನ್ನು ತಿಳಿಸುತ್ತದೆ. ಹಾಗೆಯೇ ಕುರುಬರ ಗುರುಒಡೆಯರ ಸಾಂಸ್ಕೃತಿಕ ಬದುಕನ್ನು ಹಾಗೂ ಅಲ್ಲಿನ ಕುರುಬರ ಗುರುಒಡೆಯರ ಸಾಂಸ್ಕೃತಿಕ ನಾಯಕರ್ಯಾರು ಎಂಬುದನ್ನು ತಿಳಿಸುತ್ತದೆ. ಜೊತೆಗೆ ಅವರು ಆಚರಿಸುವ, ಆಚರಣೆಗಳು, ಸಂಪ್ರದಾಯಗಳು, ಜಾತ್ರೆ-ಉತ್ಸವಗಳು ಈ ಎಲ್ಲಾ ಸಂಗತಿಗಳನ್ನು ಸರೂರಿನ ಗ್ರಾಮ ಅಥವಾ ಪ್ರದೇಶವು ಅನಾವರಣಗೊಳಿಸುತ್ತದೆ. ಈ ಊರಲ್ಲಿ ಕುರುಬರ ಗುರುಒಡೆಯರಿಗೆ ಸಂಬಂಧಿಸಿದಂತೆ ಮಂಕಸಿದ್ಧ ಪರಂಪರೆಯನ್ನು ಬೆಳೆಸಿಕೊಂಡು ಬಂದ ಮಂಕೊಡೆಯರು, ರೇವಣಸಿದ್ಧನ ಪರಂಪರೆಯನ್ನು ಬೆಳೆಸಿಕೊಂಡು ಬಂದ ಶಾಂತೊಡೆಯರು ಕಂಡುಬರುತ್ತಾರೆ. ಈ ಎರಡು ಪರಂಪರೆಗಳ ಕಾರ್ಯಕ್ಷೇತ್ರ ಸರೂರಾಗಿದೆ.

ಈ ಎರಡು ಪರಂಪರೆಗಳಿಗೆ ಸಂಬಂಧಿಸಿರುವಂತೆ ಒಂದೇ ವಸ್ತುವನ್ನು ಹೊಂದಿರುವಂತಹ ಎರಡು ಕಾವ್ಯಗಳು ಪ್ರಮುಖವಾಗಿ ಕಂಡುಬರುತ್ತವೆ. ಈ ಎರಡೂ ಕಾವ್ಯಗಳು ಕುರುಬರ ಗುರುಒಡೆಯರ ಅಧೀನದ ಧಾರ್ಮಿಕ ಕಾರ್ಯಗಳೊಳಗಿನ ಪುರೋಹಿತ ವರ್ಗ ಎಂದು ಕರೆಸಿಕೊಂಡು, ಕುರುಬರ ಗುರುಒಡೆಯರು ತನ್ನತನದ ಪ್ರಬಲತೆಯನ್ನು ವ್ಯಕ್ತಪಡಿಸುವ ಸಂಗತಿಗಳಾಗಿವೆ. ಹಾಗೆಯೆ ಇನ್ನೊಂದು ಕಡೆ ಈ ಎರಡೂ ಕಾವ್ಯಗಳ(ಸಿದ್ಧಮಂಕ ಮತ್ತು ತಗರ ಪವಾಡ ಚರಿತ್ರೆ) ಬಗ್ಗೆ ಹೇಳುವುದಾದರೆ, ಒಂದು ಸಂಕ್ರಮಣದ ಬಗ್ಗೆ ತಿಳಿಸಿದರೆ, ಇನ್ನೊಂದು ಸಂಘರ್ಷವನ್ನು ವ್ಯಕ್ತಪಡಿಸುತ್ತದೆ. ಈ ರೀತಿಯಾದ ವಿಚಾರಧಾರೆಗಳು ಕುರುಬರ ಗುರುಒಡೆಯರ ಪರಂಪರೆಯಲ್ಲಿ ನಡೆಯುವ ಒಳ ಜಗಳಗಳಾಗಿರಬಹುದೇ ಅಥವಾ ಧಾರ್ಮಿಕ ರಾಜಕೀಯವಿರಬಹುದೇ! ಹೀಗೆ ಹಲವು ಚಿಂತನೆಗಳು ಆಯಾ ಸಮುದಾಯಕ್ಕೆ ತಳುಕು ಹಾಕಿಕೊಂಡಿರುವಂತಹ ಸಹಜವಾದ ಸಮಸ್ಯೆಗಳಾಗಿವೆ. ಆದರೆ ಪ್ರಸ್ತುತ ಅಧ್ಯಯನಕ್ಕೆ ಸರೂರನ್ನು ಪೂರಕವಾಗಿಟ್ಟುಕೊಂಡು, ಈ ಊರಿನ ಕುರುಬ ಗುರುಒಡೆಯರ ಪರಂಪರೆಯಲ್ಲಿ ರೇವಣಸಿದ್ಧನ ಅನುಯಾಯಿಯಾದ ಶಾಂತಮುತ್ತಯ್ಯನ ಬಗ್ಗೆ ತಿಳಿಯಬೇಕಾಗಿದೆ. ಈತನ ಕಾರ್ಯಕ್ಷೇತ್ರ ಸರೂರಾಗಿದ್ದು, ರೇವಣಸಿದ್ಧನಿಗೂ ಶಾಂತಮುತ್ತನಿಗೂ ಇರುವ ಸಂಬಂಧ ಎಂಥದ್ದು, ಆತನ ಇತಿವೃತ್ತವೇನು? ಶಾಂತಮುತ್ತಯ್ಯನ ಪರಂಪರೆಯನ್ನು ಪ್ರಸ್ತುತದಲ್ಲಿ ರೂಢಿಸಿಕೊಂಡು ಬರುತ್ತಿರುವವರ್ಯಾರು? ಇವರಿಗೂ ಶಾಂತಮುತ್ತಯ್ಯನಿಗೂ ಇರುವ ಸಂಬಂಧ ಯಾವುದು? ಹಾಗೆಯೇ ಈತನ ಬಗ್ಗೆ ದೊರೆತಿರುವ ಡೊಳ್ಳಿನ ಹಾಡುಗಳು, ಕೃತಿಗಳು ಮತ್ತು ಶಾಸನಗಳು ಈತನನ್ನು ಕುರಿತು ಏನನ್ನು ಹೇಳುತ್ತವೆ. ಈ ರೀತಿಯಾದ ಅನೇಕ ವಿಚಾರಗಳ ಹಿನ್ನಲೆಯಲ್ಲಿ ಪ್ರಸ್ತುತ ಶಾಂತಮುತ್ತಯ್ಯನ ಸಾಂಸ್ಕೃತಿಕ ಬದುಕನ್ನು ಗಮನಿಸುವುದಾದರೆ, ಈತನು ಕುರುಬರ ಪ್ರತ್ಯೇಕ ಗುರುಪರಂಪರೆಯನ್ನು ಒಳಗೊಂಡ ಸಾಂಸ್ಕೃತಿಕ ನಾಯಕನಾಗಿದ್ದಾನೆ. ಸರೂರು ಮೂಲತಃ ಈತನ ಕಾರ್ಯ

ಕ್ಷೇತ್ರವಾಗಿದೆ. ಶಾಂತಮುತ್ತಯ್ಯನು ರೇವಣಸಿದ್ಧನ ಆರಾಧಕನಾಗಿ, ಆತನ ಪರಮ ಭಕ್ತನಾಗಿ, ಗುರುಶಿಷ್ಯನಾಗಿ ಕಂಡುಬರುವುದರ ಜೊತೆಗೆ ಕುರುಬರು ಆಚರಿಸುವ ಎಲ್ಲಾ ಸಾಮಾಜಿಕ, ಧಾರ್ಮಿಕ ಕಾರ್ಯಗಳಿಗೆ ಪುರೋಹಿತನಾಗಿ ಕಾರ್ಯವನ್ನು ನೆರವೇರಿಸಿಕೊಂಡು ಬಂದಿರುವವನಾಗಿದ್ದಾನೆ.

ಈತನನ್ನು ಕುರಿತು ಇಂದಿಗೂ ಪ್ರಚಲಿತಕ್ಕೆ ತರುವ ಕೃತಿ 'ತಗರ ಪವಾಡ'. ಇದು ಕುರುಬರು ಕಲ್ಯಾಣದಲ್ಲಿ ಸತ್ತ ಕುರಿಯನ್ನು ಹಾಲಿನ ಕಂಬಿಯ ಮೇಲೆ ಹೊತ್ತು ತಂದ ವಿಷಯವನ್ನಾಧರಿಸಿ ಕನ್ನಡದಲ್ಲಿ ರಚನೆಯಾದ ಇದೊಂದು ಸಾಂಗತ್ಯ ಕೃತಿಯಾಗಿದೆ. ಇದು ಕುರುಬರ ಗುರುಪರಂಪರೆಯ ಸಂಸ್ಕೃತಿಯನ್ನು ಕಟ್ಟಲು ಮತ್ತು ಕುರುಬರ ಗುರು ಶಾಂತಮುತ್ತಯ್ಯನ ಚರಿತ್ರೆಯನ್ನು ತಿಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಹೀಗಾಗಿ ಈ ಕೃತಿಯ ಒಳಗಡೆ ಶಾಂತಮುತ್ತಯ್ಯ ಹೇಗೆ ತನ್ನ ಸಮುದಾಯದೊಂದಿಗೆ ಸಂಪರ್ಕವನ್ನಿಟ್ಟುಕೊಂಡು ಜೀವನವನ್ನು ಸಾಗಿಸಿಕೊಂಡು ಬಂದ ಹಾಗೂ ಅವನನ್ನು ಗುರುಪರಂಪರೆಯ ನಾಯಕನನ್ನಾಗಿ ಮಾಡಿದವರ್ಯಾರು, ಜೊತೆಗೆ ಶಾಂತಮುತ್ತಯ್ಯನ ವಂಶಸ್ಥರು ಎಂಬುದು ಹುಟ್ಟಿಕೊಳ್ಳಲು ಕಾರಣಗಳೇನು, ಕುರುಬರು ಈತನನ್ನೇ ಗುರುಒಡೆಯರನ್ನಾಗಿ ಮಾಡಲು ಕಾರಣಗಳೇನು, ಆತನು ಸರೂರಲ್ಲಿಯೇ ಐಕ್ಯ ಆಗಲು ಕಾರಣಗಳೇನು ಈ ಎಲ್ಲಾ ವಿಚಾರಗಳನ್ನು ಒಳಗೊಂಡ ಈ ಕೃತಿಯೂ ಸರೂರು ಮತ್ತು ಅಲ್ಲಿನ ಸುತ್ತಮುತ್ತಲಿನ ಕುರುಬರನ್ನು ಕೇಂದ್ರವಾಗಿಟ್ಟುಕೊಂಡು ಕುರುಬರ ಗುರುಪರಂಪರೆಯ ಉನ್ನತಿಗಾಗಿ ನಡೆದಂತಹ ಒಂದು ಸಾಂಸ್ಕೃತಿಕ ಚಿತ್ರಣವಾಗಿದೆ. ಇದನ್ನು ಹೊರತುಪಡಿಸಿದರೆ ಈ ಗುರುಪರಂಪರೆಗೆ ಸಂಬಂಧಿಸಿದ ವಿಚಾರಗಳನ್ನೇ ತಿಳಿಸುವಲ್ಲಿ ತುರುವೇಕೆರೆ ಶಾಸನವು ಪ್ರಮುಖ ಪಾತ್ರವಹಿಸುತ್ತದೆ. ಇದರ ವಸ್ತು ಹಾಲುಮತ ಕುರುಬರಿಗೆ ಗುರುಗಳಾರು ಎಂಬ ವಾದ-ವಿವಾದವನ್ನು ಪ್ರಮುಖವಾಗಿ ಪ್ರಸ್ತುತಪಡಿಸುತ್ತದೆ. ಈ ವಾದವು ವಿಜಯನಗರದ ದೊರೆಗಳಾದ ವೀರಪ್ರತಾಪ, ರಾಮರಾಜೈಯ್ಯ, ಸದಾಶಿವರಾಯ, ವೆಂಕಟಾದ್ರಿರಾಜ ಇವರ ಸಮ್ಮುಖದಲ್ಲಿ ಹಾಗೂ ವಿವಿಧ ಮಠಗಳಿಂದ ಆಗಮಿಸಿದ ಸ್ವಾಮೀಜಿಗಳ ಅಸ್ತಿತ್ವದಲ್ಲಿ ನಡೆಯುತ್ತದೆ. ಏಕೆ ಈ ರೀತಿಯಾದ ಸಭೆ ನಡೆದಿರಬಹುದು ಎಂದರೆ, ಕುರುಬರ ಗುರುಒಡೆಯರಲ್ಲಿಯೇ ಎರಡು ಪಂಗಡಗಳಿವೆ. ಒಂದು ರೇವಣಸಿದ್ಧೇಶ್ವರನ ಅನುಯಾಯಿಗಳಾದ ಶಾಂತೊಡೆಯರು ಕಂಡುಬಂದರೆ, ಎರಡನೆಯದಾಗಿ ಸೊನ್ನಲಾಪುರದ ಸಿದ್ಧರಾಮನ ಅನುಯಾಯಿ ಗಳಾದ ಮಂಕೊಡೆಯರು ಕಂಡುಬರುತ್ತಾರೆ. ಈ ಎರಡು ಪಂಗಡಗಳಲ್ಲಿನ ವಾದವಿವಾದಗಳನ್ನು ಪರಿಗಣಿಸಿದ ಮೇಲೆ ಈ ವಾದದಲ್ಲಿ ಶಾಂತಮುತ್ತಯ್ಯನವರು ಗೆದ್ದು ಮಂಕನವರನ್ನು ಸೆರೆಹಾಕಿಸಿದ ಪ್ರಸ್ತಾಪ ಬಂದಿದೆ.

ಕೊನೆಗೆ ರೇವಣಸಿದ್ಧೇಶ್ವರರ ಪರಂಪರೆಯ ಶಾಂತೊಡೆಯರೇ ಹಾಲುಮತದ ಕುರುಬರಿಗೆ ಗುರುಗಳು ಮಂಕೊಡೆಯರಾದರೆ, ಗುರುತನಕ್ಕೆ ಕಾರಣವಿಲ್ಲ ಎಂದು ತೀರ್ಮಾನಿಸುವ ವಿವರ ಈ ಶಾಸನದಿಂದ ತಿಳಿದುಬರುತ್ತದೆ. ಹೀಗಾಗಿ ಇದು ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿದೆ. ಅಂದರೆ

ಸರೂರಿನಲ್ಲಿಯೂ ಈ ರೀತಿಯಾದ ಎರಡು ಪಂಗಡಗಳಿದ್ದು, ಸರೂರಿಗೆ ಮೂಲತಃ ಯಾವ ಪರಂಪರೆಯವರು ಪ್ರಮುಖರೆನಿಸಿಕೊಳ್ಳುತ್ತಾರೆ ಎಂಬುದಕ್ಕೆ ಈ ವಿಚಾರಗಳು ಸಾಕ್ಷಿಯಾಗಲಿವೆ. ಇದೇ ವಸ್ತುವನ್ನು ಒಳಗೊಂಡ 'ತಗರ ಪವಾಡ' ಎಂಬ ಕಾವ್ಯವು ಸರೂರಿನ ಪರಿಸರದಲ್ಲಿ ಸಿಕ್ಕಿರುವುದರಿಂದ ಈ ವಿಚಾರಗಳು ಸರೂರಿನ ಗುರುಪರಂಪರೆಯನ್ನು ಹೊರತುಪಡಿಸಿಲ್ಲ ಎಂಬುದು ಗಮನಾರ್ಹವಾಗಿದೆ. ಹೀಗೆ ರೇವಣಸಿದ್ಧನ ಪರಂಪರೆಯನ್ನು ರೂಢಿಸಿಕೊಂಡು ಬಂದ ಶಾಂತೊಡೆಯರು ಅಥವಾ ಶಾಂತಮುತ್ತಯ್ಯನ ವಂಶಸ್ಥರು ಬೇರೆ ಬೇರೆ ಪ್ರದೇಶಗಳಲ್ಲಿ ಕಂಡುಬರುತ್ತದೆ.

ಅಮೋಘಸಿದ್ಧ ಪರಂಪರೆ

ಕುರುಬರ ಗುರುಒಡೆಯರ ಪರಂಪರೆಯಲ್ಲಿ ಅಮೋಘಸಿದ್ಧ ಪರಂಪರೆಯೂ ಒಂದಾಗಿದೆ. ಅಮೋಘಸಿದ್ಧ, 'ಅಮ್ಮೋಗಿ' ಒಡೆಯರ ಮೂಲಪುರುಷನಾಗಿ ಹಾಗೂ ಶಿವಭಕ್ತನಾಗಿ ಕ್ರಿ.ಶ. ೧೬ನೆಯ ಶತಮಾನದಲ್ಲಿ ಕಂಡುಬರುತ್ತಾನೆ. ಈತ ಸೋಮಲಿಂಗ ಎನ್ನುವ ಗುರುವಿನ ಮಾರ್ಗದರ್ಶನದಲ್ಲಿ ರೂಪಿಸಿದ ಉಪಪಂಗಡವನ್ನು 'ಅಮ್ಮೋಗಿ' ಒಡೆಯರ ಪಂಗಡವೆಂದು ಗುರುತಿಸಲಾಗಿದೆ. ಈ ಒಡೆಯರ ಸಂಪ್ರದಾಯದ ಆದ್ಯವ್ಯಕ್ತಿ ಅಮೋಘಸಿದ್ಧನೆಂದೂ, ಆತನಿಂದಲೇ ಈ ಪರಂಪರೆಯು ಆರಂಭವಾಯಿತ್ತೆಂದು ಹೇಳಬಹುದಾಗಿದೆ.

ಈತನ ನಾಮದ ಬಗ್ಗೆ ಜನಪದರು ಹೇಳುವಂತೆ ಶಿವಭಕ್ತನಾದ ಈತ ಅಮೋಘವಾದ ತನ್ನ ಶಿವಭಕ್ತಿಯನ್ನು ಪ್ರಕಟಮಾಡಿದ ಕಾರಣವಾಗಿ ಈತನಿಗೆ ಅಮೋಘಸಿದ್ಧ ಎಂಬ ಹೆಸರು ಬಂದಿರಬೇಕೆಂದು ಊಹಿಸಲಾಗುತ್ತದೆ. ಈ ಸಿದ್ಧ ಪರಂಪರೆಯಲ್ಲಿ ಪ್ರಸಿದ್ಧನಾದ ಈತನನ್ನು ಕಾವ್ಯ, ಕಥನಗಳಲ್ಲಿ ಅಮ್ಮುಗಿದೇವ, ಅಮೂಕಸಿದ್ಧ, ಅಮ್ಮೊಗಸಿದ್ಧ, ಅಮೋಘಸಿದ್ಧೇಶ್ವರ ಹೀಗೆ ಹಲವು ಹೆಸರಗಳಿಂದ ಕರೆಯಲಾಗುತ್ತದೆ.

ಅಮೋಘಸಿದ್ಧನ ಇತಿವೃತ್ತಗಳನ್ನು ತಿಳಿದುಕೊಳ್ಳುವ ಸಂದರ್ಭದಲ್ಲಿ ಈ ಹಾಲುಮತ ಗುರುಪರಂಪರೆಯಲ್ಲಿ ಕಂಡುಬರುವ ರೇವಣಸಿದ್ಧ, ಸಿದ್ಧರಾಮ, ಶಾಂತಮುತ್ತಯ್ಯ, ಸಿದ್ಧಮಂಕರ ಬಗ್ಗೆ ಲಿಖಿತ ಆಕರಗಳು ದೊರೆಯುತ್ತವೆ. ಆದರೆ ಅಮೋಘಸಿದ್ಧನ ಬಗ್ಗೆ ಯಾವುದೇ ಲಿಖಿತ ಆಕರಗಳು ಸಿಗುವುದು ಕಷ್ಟಸಾಧ್ಯ. ಈತನನ್ನು ಕುರಿತು ಮೌಖಿಕ ಪರಂಪರೆಯಲ್ಲಿ ಹಾಡುಗಳು, ಕತೆಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆ. ಇವುಗಳ ಆಧಾರದ ಮೇಲೆ ಮುದಗೊಂಡ ಮಹಾದೇವರು ಬರೆದ ಸಿದ್ಧಸಿರಿ(೧೯೯೭) ಎಂಬ ಹೆಸರಿನ ಗದ್ಯ ಕೃತಿಯೊಂದನ್ನು ಬೆಳಕಿಗೆ ತಂದಿದ್ದಾರೆ. ಈ ಕೃತಿಯು ಅಮೋಘಸಿದ್ಧನ ಪರಂಪರೆಯನ್ನು ಪುರಾಣಕ್ಕೆ ಕೊಂಡೊಯುತ್ತದೆ. ಜೊತೆಗೆ ಆತನನ್ನು ನೇರವಾಗಿ ಕೈಲಾಸದಲ್ಲಿ ಕಲ್ಪಿಸಿಕೊಳ್ಳುತ್ತದೆ. ಶಿವನಿಂದ ವರಪಡೆದ ಈತ ಕೈಲಾಸದಿಂದ ತನ್ನ ಗುರು ಸೋಮಲಿಂಗನೊಡನೆ ನೇರವಾಗಿ ಭೂಲೋಕಕ್ಕೆ ಬರುತ್ತಾನೆ. ಹೀಗೆ

ಬರುವಾಗ ಮಾರ್ಗ ಮಧ್ಯದಲ್ಲಿ ಯಾವುದೇ ಕಾರಣಕ್ಕೆ ಹಿಂದಿರುಗಿ ನೋಡಬಾರದೆಂದು ಗುರು ಸೋಮಲಿಂಗ ಕರಾರು ಹಾಕಿರುತ್ತಾನೆ. ಹೀಗೆ ಕರಾರನ್ನು ಹೊತ್ತು ಬರುತ್ತಿರುವ ಅಮೋಘಸಿದ್ಧನು ಗುರುವನ್ನು ಹಿಂದಿರುಗಿ ನೋಡಿದ ಸ್ಥಳದಲ್ಲಿಯೇ ನೆಲೆ ನಿಲುತ್ತಾನೆ. ಈ ಸ್ಥಳವನ್ನು 'ಮುಮ್ಮಟಗಿರಿ' ಎಂದು ಕರೆಯುತ್ತಾರೆ. ಇದು ಜಿಲ್ಲಾ ಕೇಂದ್ರವಾದ ವಿಜಯಪುರದಿಂದ ವಾಯವ್ಯಕ್ಕೆ ಸುಮಾರು ೧೫ ಕಿ.ಮೀ. ಅಂತರದಲ್ಲಿದೆ. ಎತ್ತರವಾದ ಪ್ರದೇಶವನ್ನು ಹೊಂದಿರುವ ಮುಮ್ಮಟಗಿರಿಯಿಂದ ೪–೫ ಕಿ.ಮೀ. ಅಂತರದಲ್ಲಿಯೇ ಅರಿಕೇರಿ, ಜಾಲಗೇರಿ ಮತ್ತು ಸಿದ್ಧಪುರ ಎಂಬ ಮೂರು ಗ್ರಾಮಗಳಿವೆ. ಈ ಮೂರು ಗ್ರಾಮಗಳ ಸೀಮೆಗಳು ಕೊಡುವ ಸ್ಥಳವೇ ಮುಮ್ಮಟಗಿರಿ(ಮೂರು ಮಡ್ಡಿ>ಮುಮ್ಮಟ) ಎಂದು ಕರೆಯಲಾಗುತ್ತದೆ. ಈ ಗಿರಿಯಲ್ಲಿ ಭವ್ಯವಾದ ದೇವಾಲಯವೊಂದಿದೆ. ಈ ದೇವಾಲಯದ ಆರಾಧ್ಯ ದೈವವಾಗಿ ಅಮೋಘಸಿದ್ಧನ್ನು ಕಂಡುಬರುವುದು ಗಮನಾರ್ಹವಾಗಿದೆ.

ಅಮೋಘಸಿದ್ಧನ ಕಾಲ ನಿರ್ಣಯದ ಬಗ್ಗೆ ತಿಳಿಯಲು ತುಂಬಾ ದುಗುಡವಾದ ಸಮಸ್ಯೆಗಳು ಕಂಡುಬರುತ್ತವೆ. ಅದಕ್ಕೆ ಮೂಲಕಾರಣ ಅವನ ಕುರಿತಾಗಿ ಯಾವುದೇ ಲಿಖಿತ ದಾಖಲೆಗಳು ಲಭ್ಯವಾಗದೇ ಇರುವುದು. ಜೊತೆಗೆ ವಿಫುಲವಾದ ಮೌಖಿಕ ಆಕರ ಲಭ್ಯವಿದೆಯಾದರೂ ಅದು ಪೂರ್ಣ ಪ್ರಮಾಣದ ಸಂಗ್ರಹ ಕಾರ್ಯವು ನಡೆದಿಲ್ಲ. ಆತನನ್ನು ಕುರಿತಾಗಿ ಒಂದು ಶಾಸನವೂ ದೊರೆತಿಲ್ಲ, ತಾಮ್ರಪಟಗಳೂ ಇಲ್ಲ. ಆದರೆ ಅವನ ನಾಲ್ವರು ಮಕ್ಕಳು ನೆಲೆನಿಂತ ಭೀಮರಗಿ ಎನ್ನುವ ಗುರುಮನೆಯಲ್ಲಿ ಮೋಡಿ ಲಿಪಿಯಲ್ಲಿರುವ ಕಾಗದದ ಸುರುಳಿಗಳೇ ಚರಿತ್ರೆ ಕಟ್ಟಿಕೊಡುವಲ್ಲಿ ಉಳಿದಿದ್ದ ಆಶಾಕಿರಣ. ಈ ಕಾಗದ ಸುರುಳಿಗಳು ಲಭ್ಯವಾಗದೇ ಹೋಗಿದ್ದರೆ ಅಮೋಘಸಿದ್ಧನ ಕುರಿತು ಚರಿತ್ರೆ ಕಟ್ಟಿಕೊಡುವುದು ತುಂಬಾ ಕಷ್ಟದ ಕೆಲಸ ಆಗುತ್ತಿತ್ತು. ಭೀಮರಗಿಯಲ್ಲಿ ದೊರೆತ ಮೋಡಿಲಿಪಿಯ ದಾಖಲೆಗಳು ಅಮೋಘಸಿದ್ಧ ಈ ನೆಲದವನೇ ಎಂದು ಖಚಿತಪಡಿಸುವಲ್ಲಿ ತುಂಬಾ ಸಹಕಾರಿ ಆದವು. ಇವುಗಳಿಗೆ ಮುಂದುವರೆದು ಚನ್ನಪ್ಪಕಟ್ಟಿ ಅವರು ಹೇಳುವಂತೆ "೧೫೨೫ರಿಂದ ೧೮೨೭ರ ಮಧ್ಯದಲ್ಲಿ ರಚಿತವಾದ ದಾಖಲೆಗಳು ಅವಾಗಿವೆ. ೧೫೨೫ ಕಾಲ ನಾಮ(ಗೇಣಿಪತ್ರ) ೧೫೬೯ರ ಮಜಹರ ಪತ್ರ, ೧೭೨೫ ಮೌಕಿಕ ಹೇಳಿಕೆ, ೧೭೫೭ರ ಥಳಪತ್ರ ಹಾಗೂ ೧೮೨೭ರ ವಾಟಣಿ ಪತ್ರ ಇವಾಗಿವೆ. ೧೫೬೯ನೆಯ ಇಸವಿಯಲ್ಲಿ ಬರೆಯಿಸಲಾದ ಮಜಹರ ಪತ್ರ ಅಮೋಘಸಿದ್ಧನ ಕಾಲನಿರ್ಣಯ ಮಾಡುವಲ್ಲಿ ತುಂಬಾ ಸಹಕಾರಿಯಾಗಿದೆ"[೧೫] ಎಂದು ತಿಳಿಸಿದ್ದಾರೆ. ಹೀಗೆ ಈತನ ಕಾಲನಿರ್ಣಯದ ಬಗ್ಗೆ ಹಾಗೂ ಇತಿವೃತ್ತದ ಬಗ್ಗೆ ತಿಳಿಯಲು ಈ ಮೇಲಿನ ವಿಚಾರಗಳು ಗಮನಾರ್ಹವಾಗಿವೆ.

ಹೀಗಾಗಿ ಈತನ ಕಾರ್ಯಕ್ಷೇತ್ರವನ್ನು ಗಮನಿಸುವುದಾದರೆ, ಕರ್ನಾಟಕದಲ್ಲಿ ವಿಜಯಪುರ, ಬೆಳಗಾವಿ, ಗುಲಬರ್ಗಾ ಜಿಲ್ಲೆಯಗಳ ಜೊತೆಗೆ ಮಹಾರಾಷ್ಟ್ರದ ಸೊಲ್ಲಾಪುರ, ಸಾಂಗಲಿ, ಸಾತಾರ ಜಿಲ್ಲೆಗಳು ಹೀಗೆ ಅನೇಕ ಊರು, ತಾಲೂಕು, ಜಿಲ್ಲೆಗಳಲ್ಲಿ ಅಮೋಘಸಿದ್ಧನ ಮಠಗಳು, ದೇವಾಲಯಗಳು

ಪ್ರಮುಖವಾಗಿ ಕಂಡುಬರುತ್ತವೆ. ಇವುಗಳ ಪೀಠಾಧಿಪತಿಗಳಾಗಿ, ಅರ್ಚಕರಾಗಿ ಅಮೋಘಸಿದ್ಧ ಪರಂಪರೆಯವರಾದ 'ಅಮ್ಮೋಗಿ ಒಡೆಯರು' ಕಂಡುಬರುತ್ತಾರೆ. ಹೀಗೆ ಒಟ್ಟಾರೆಯಾಗಿ ಅಮೋಘ ಸಿದ್ಧನನ್ನು ಕುರಿತು ಮೌಖಿಕ ಪರಂಪರೆಯಲ್ಲಿ ದೊರೆಯುವ ಸಮೃದ್ಧವಾದ ಮಾಹಿತಿಯನ್ನು ಗಮನಿಸಿದರೆ ಈತನೂ ಸಿದ್ಧ ಪರಂಪರೆಯಲ್ಲಿಯೇ ಪ್ರಸಿದ್ಧನಾದ ವ್ಯಕ್ತಿಯೆಂದು ಸ್ಪಷ್ಟವಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಅಮೋಘಸಿದ್ಧನ ಪರಂಪರೆಯ ನೆಲೆಯನ್ನು ಗಮನಿಸುವಾಗ, ಅಮೋಘ ಒಡೆಯರಿಗೂ ಮತ್ತು ಸರೂರಿನಲ್ಲಿರುವ ಒಡೆಯರಿಗೂ ಸಂಬಂಧವಿದೆಯೋ ಅಥವಾ ಇಲ್ಲವೇ, ಇದ್ದರೆ ಅದು ಯಾವ ರೀತಿಯಾದ ಸಂಬಂಧವಾಗಿದೆ ಎಂಬ ಇತ್ಯಾದಿ ಸಂಗತಿಗಳನ್ನು ನೋಡುವು ದಾದರೆ ವಿಜಯಪುರ ಜಿಲ್ಲೆಯು ಮೂಲತಃ ಗುರುಒಡೆಯರಲ್ಲಿ ಬರುವ ಮೂರು ಸಂಪ್ರದಾಯಗಳಿಗೆ ಗಂಗೋತ್ರಿಯಾಗಿದೆ(ಕೇಂದ್ರ ಜಿಲ್ಲೆಯಾಗಿದೆ). ಈ ಹಿನ್ನೆಲೆಯಲ್ಲಿ ಸರೂರು ಈ ಮೂರು ಸಂಪ್ರದಾಯ ಗಳನ್ನು ಒಳಗೊಂಡಿರಬೇಕಾಗಿತ್ತು.

ಹಾಗಾಗಿ ಸರೂರಿನಲ್ಲಿ ರೇವಣಸಿದ್ಧನ ಅನುಯಾಯಿಗಳಾಗಿ ಶಾಂತೊಡೆಯರು, ಸಿದ್ಧರಾಮನ ಅನುಯಾಯಿಗಳಾಗಿ ಮಂಕೊಡೆಯರು ಕಂಡುಬರುತ್ತಾರೆಯೇ ಹೊರತು ಅಮೋಘಸಿದ್ಧನ ಅನುಯಾಯಿಗಳಾದ 'ಅಮ್ಮೋಗಿ ಒಡೆಯರು' ಕಂಡುಬರುವುದಿಲ್ಲ. ಆ ಊರಲ್ಲಿ ಇವರ ಒಂದು ಮನೆಯೂ ಸಿಗುವುದಿಲ್ಲ. ಏಕೆಂದರೆ ೧೨ನೆಯ ಶತಮಾನದಲ್ಲಿ ಕಾಣಿಸಿಕೊಳ್ಳುವ ಈ ಎರಡೂ ಸಂಪ್ರದಾಯಗಳು ಭಂಡಾರ ಚೀಲ ಬಿಟ್ಟು ಕೊರಳಿಗೆ ಲಿಂಗ, ಹಣೆಗೆ ವಿಭೂತಿಯನ್ನು ಸ್ವೀಕರಿಸಿ ಹೆಗಲ ಮೇಲೆ ಕಂಬಳಿಯನ್ನು ಉಳಿಸಿಕೊಂಡು ಬಂದಿರುವ ಸಂಗತಿಯನ್ನು ಗಮನಿಸಬಹುದು. ಜೊತೆಗೆ ಇವರಲ್ಲಿ ಸಿದ್ಧ, ಶರಣ ಸಂಪ್ರದಾಯಗಳ ಜೊತೆಗೆ ನಾಥ ಮಿಶ್ರಣ ಕಂಡುಬರುತ್ತದೆ. ಹೀಗಾಗಿ ಭಂಡಾರ ಚೀಲ ಮತ್ತು ಕಂಬಳಿಯ ಈ ಎರಡನ್ನೂ ಉಳಿಸಿಕೊಂಡು ಸುಮಾರು ೧೬ನೆಯ ಶತಮಾನದಲ್ಲಿ ಕಂಡುಬರುವ ಅಮೋಘಸಿದ್ಧನಿಗೆ ಆ ಊರಲ್ಲಿ ಯಾವುದೇ ರೀತಿಯಾದ ಸ್ಥಾನಮಾನ ದೊರೆಯದೇ ಹೋಗಿರಬಹುದು.

ಆದರೆ ಅಮೋಘ ಒಡೆಯರಿಗೂ ಸರೂರಿನ ಒಡೆಯರಿಗೂ ಸಾಮಾಜಿಕವಾಗಿ, ಧಾರ್ಮಿಕವಾಗಿ, ಅವಿನಭಾವ ಸಂಬಂಧ ಇತ್ತು ಎಂಬುದಕ್ಕೆ ಒಂದು ತಾಮ್ರದ ಕಳಸವು ಸಾಕ್ಷಿಯಾಗಿದೆ. ಹಾಗಾಗಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅದನ್ನು ವೀಕ್ಷಿಸಿ ಅದು ಯಾವ ಕಾಲದ್ದು, ಅದನ್ನು ಕೊಟ್ಟವರ್‍ಯಾರು ಅದರ ವರ್ಷ, ಅದು ಯಾರಿಗೆ ಸಂಬಂಧಿಸಿದೆ, ಅದನ್ನು ಕೊಟ್ಟಿರುವ ಉದ್ದೇಶವೇನು ಎಂಬ ಇತ್ಯಾದಿ ಸಂಗತಿಗಳನ್ನು ದಾಖಲಿಸಿಕೊಂಡು ಚರ್ಚೆ ಮಾಡುವ ಪ್ರಯತ್ನವಾಗಿದೆ. ಸರೂರಿನ ಪ್ರಾಚೀನ ದೇವಾಲಯವಾದ ರೇವಣಸಿದ್ಧೇಶ್ವರನ(ಏಳು) ಗುಡಿ ಹಾಗೂ ಇದನ್ನು ಮಲ್ಲಿಕಾರ್ಜುನ ದೇವಸ್ಥಾನವೆಂದು ಕರೆಯುತ್ತಾರೆ. ಈ ದೇವಾಲಯದಲ್ಲಿ ಕ್ರಿ.ಶ. ೧೮೬೧ರಲ್ಲಿ ಶ್ರೀ ಬಿಳೆನಪ್ಪಾವಡೇರ

ಎಂಬುವರು ಕೊಟ್ಟಿರುವ ತಾಮ್ರದ ಕಳಸವಿದೆ. ಇವರು ಅಮೋಘಸಿದ್ಧ ಪರಂಪರೆಗೆ ಸೇರಿದ ಒಡೆಯರಾಗಿದ್ದಾರೆ. ಇದನ್ನು ಕುರಿತು ಸರೂರಿನ ಒಡೆಯರು ಹೇಳುವಂತೆ "ಈ ಕಳಸವನ್ನು ಅಮೋಘಸಿದ್ಧ ಪರಂಪರೆಗೆ ಸಂಬಂಧಿಸಿದವರು ಕೊಟ್ಟಿದ್ದಾರೆ. ಇದು ಸುಮಾರು ನಾಲ್ಕರಿಂದ ಐದು ಅಡಿ ಎತ್ತರವಾಗಿದೆ. ಇದನ್ನು ಕೊಡಲು ಕಾರಣವಿಷ್ಟೆ, ಅಮೋಘ ಒಡೆಯರ ದಂಪತಿಗಳಿಗೆ ಗಂಡು ಮಗು ಜನನವಾದಾಗ ಅದರ ಸವಿನೆನಪಿಗಾಗಿ, ಇಲ್ಲವೇ ಹರಕೆಯನ್ನು ತೀರಿಸುವ ರೂಪದಲ್ಲಿ ಕೊಟ್ಟಿದ್ದಾರೆ. ಇವರು ಡವಳಾರ ಸಿಂದಿಗಿ ತಾಲೂಕು ವಿಜಯಪುರ ಜಿಲ್ಲೆಯವರಾಗಿದ್ದಾರೆ"[೧೬] ಎಂಬುದು ಗಮನಾರ್ಹವಾದುದು.

ಈ ಕಳಸದಲ್ಲಿ ದಾಖಲಿಸಿರುವಂತೆ "ಬಿಳೆನಪ್ಪಾವಡೇರ ತಾ॥ಹು॥ಗ॥ಮು॥ಶೇ॥ ೧೮೬೧॥ ಕೊ॥" ಎಂದು ಬರೆಯಲಾಗಿದೆ. ಹೀಗಾಗಿ ಈ ಎಲ್ಲಾ ಸಂಗತಿಗಳನ್ನು ಗಮನಿಸಿದಾಗ ಸರೂರಿನ ಒಡೆಯರಿಗೂ ಮತ್ತು ಅಮೋಘ ಒಡೆಯರಿಗೂ ಸಂಬಂಧವಿರುವುದು ಈ ದಾಖಲೆಗಳಿಂದ ಸ್ಪಷ್ಟವಾಗುತ್ತದೆ.

ರೇವಣಸಿದ್ಧ-ಶಾಂತಮುತ್ತಯ್ಯನ ಸಮಸ್ಯೆ

ರೇವಣಸಿದ್ಧ ಮತ್ತು ಶಾಂತಮುತ್ತಯ್ಯ ಇವರಿಬ್ಬರೂ ಹಾಲುಮತ ಮಹಾಪುರುಷರಲ್ಲಿ ಪ್ರಬಲವಾದ ಅಸ್ತಿತ್ವವನ್ನು ಉಳಿಸಿಕೊಂಡವರು. ಇವರು ಕುರುಬ ಸಮುದಾಯದ ಜನತೆಗೆ ಗುರುಗಳಾಗಿ, ಒಡೆಯರಾಗಿದ್ದು, ತಮ್ಮ ಕಾರ್ಯವನ್ನು ರೂಪಿಸಿಕೊಂಡವರಾಗಿದ್ದಾರೆ. ರೇವಣಸಿದ್ಧ ಶಾಂತಮುತ್ತಯ್ಯನ ಗುರು ಎಂದು ಜನಪದರ ಮಾತಲ್ಲಿ ತಿಳಿದುಬಂದರೆ, ಶಾಂತಮುತ್ತಯ್ಯ ರೇವಣಸಿದ್ಧನ ತಂದೆ ಎಂದು ಶಾಸನದಲ್ಲಿ ಉಲ್ಲೇಖ ಸಿಗುತ್ತದೆ. ಆದ್ದರಿಂದ ಇವರಲ್ಲಿ ತಂದೆ-ಮಗನ್ಯಾರು, ಗುರು-ಶಿಷ್ಯನ್ಯಾರು ಎಂಬುದನ್ನು ತಿಳಿಯಲು ಸ್ಪಷ್ಟವಾದ ಮಾಹಿತಿ ದೊರೆಯುವುದು ಕಷ್ಟಸಾಧ್ಯವಾಗಿದೆ. ಹಾಗಾಗಿ ಇವರಿಬ್ಬರ ನಡುವಿನ ಸಮಸ್ಯೆಯ ಗಂಟು ಸಡಿಲವಾಗದೇ ಉಳಿಯುವುದಾಗಿದೆ. ರೇವಣಸಿದ್ಧ ಮತ್ತು ಶಾಂತಮುತ್ತಯ್ಯ ಇವರಿಬ್ಬರೂ ಹಾಲುಮತದವರಾಗಿದ್ದಾರೆ. ಇವರ ಬಗ್ಗೆ ಹಾಲುಮತಸ್ಥರು ಹೇಳುವಂತೆ ರೇವಣಸಿದ್ಧನ ಶಿಷ್ಯ ಶಾಂತಮುತ್ತಯ್ಯನೆಂದು ಹೇಳುತ್ತಾರೆ. ಕಾರಣ ಹಾಲುಮತೋತ್ತೇಜಕ ಪುರಾಣ ಮತ್ತು ತಗರ ಪವಾಡ ಕೃತಿಗಳು ಶಾಂತಮುತ್ತಯ್ಯನನ್ನು ರೇವಣಸಿದ್ಧನ ಶಿಷ್ಯನೆಂದು ಹೇಳುತ್ತವೆ. ಏಕೆಂದರೆ ದೇಶ ಸಂಚಾರಿಯಾದ ರೇವಣಸಿದ್ಧನು ಸರೂರಿನ ಕಡೆ ಬಂದಾಗ ಅಲ್ಲಿನ ಶಾಂತಮುತ್ತಯ್ಯನನ್ನು ಕಂಡು ಅವನ ಭಕ್ತಿಗೆ ಮತ್ತು ಅವನಲ್ಲಿರುವ ಒಳ್ಳೆಯ ಗುಣಕ್ಕೆ ಮೆಚ್ಚಿ ಲಿಂಗದೀಕ್ಷೆ ಕೊಟ್ಟು 'ಇನ್ನೂ ಮುಂದೆ ನೀನು ಕುರುಬರಿಗೆ ಕುಲಗುರುವಾಗಿರು' ಎಂದು ಆಶೀರ್ವಾದ ಮಾಡಿದರು ಎಂಬುದು ಒಂದು ವಿಚಾರವಾದರೆ, ಕಲ್ಯಾಣದಿಂದ ಹೊರಹಾಕಿದ ಕುರುಬರನ್ನು ಕಲ್ಯಾಣ ಪಟ್ಟಣಕ್ಕೆ ಬರುವಂತೆ ಹೋರಾಡಿದ. ನಂತರ ಸತ್ತ ಟಗರನ್ನು ಬದುಕಿಸಿ ಪವಾಡ ಮಾಡಿದ ಸಂಗತಿಗಳು ಈ ಕೃತಿಯಲ್ಲಿ ಇರುವುದರಿಂದ ಶಾಂತಮುತ್ತಯ್ಯನು ರೇವಣಸಿದ್ಧನ

ಶಿಷ್ಯನೆಂಬುದಕ್ಕೆ ಸಾಕ್ಷಿಯಾಗಿವೆ ಎಂಬುದು ಮತ್ತೊಂದು ವಿಚಾರವಾಗಿದೆ. ಈ ರೀತಿಯಾದ ಸಂಗತಿಗಳನ್ನು ಇಟ್ಟುಕೊಂಡು ಸರೂರಿನ ಮತ್ತು ಆ ಪ್ರದೇಶದ ಸುತ್ತಮುತ್ತಲಿನ ಜನರು ಹೇಳುವುದು ಒಂದೇ ಮಾತು. ಅದು ರೇವಣಸಿದ್ಧ ಮೊದಲಿಗೆ ಈ ಕಡೆ ಬಂದು ಶಾಂತಮುತ್ತಯ್ಯನಿಗೆ ಆಶೀರ್ವಾದ ಮಾಡಿ ಹೋದನೆಂದು, ಮತ್ತೊಂದು ಶಾಂತಮುತ್ತಯ್ಯನ ಗುರು ರೇವಣಸಿದ್ಧನೆಂದು ಹೇಳುತ್ತಾರೆ. ಸರೂರಿನ ರೇವಣಸಿದ್ಧೇಶ್ವರನ ಜಾತ್ರೆಗೆ ಬಂದಿರುವ ಪ್ರತಿಯೊಬ್ಬ ಭಕ್ತನನ್ನು ಕೇಳಿದರೂ ಇದೇ ವಿಚಾರವನ್ನು ಹೇಳುತ್ತಾರೆ.

ಈ ರೀತಿಯಾದ ಮೌಖಿಕ ವಿಚಾರಗಳು ಒಂದು ಕಡೆಯಾದರೆ, ಮತ್ತೊಂದು ಕಡೆ ಲಿಖಿತ ಆಕರವಾಗಿ ಶಾಸನವು ದೊರೆತಿದೆ. ಅದು ಈ ಮೇಲಿನ ಸಂಗತಿಗಳಿಗೆ ವಿರುದ್ಧವಾದ ವಿಷಯವನ್ನು ಪ್ರಸ್ತಾಪಿಸುತ್ತದೆ. ಕ್ರಿ.ಶ. ೧೧೮೭ರ ಶಿರವಾಳ ಶಾಸನವು ರೇವಣಸಿದ್ಧರನ್ನು ಶಾಂತಿಮಯ್ಯಂಗಳ ಪುತ್ರ ಎಂದು ಹೇಳಿರುವುದನ್ನು ಗಮನಿಸುವುದಾದರೆ "ಶ್ರೀ ಮದಣಿಮಾಧ್ಯಷ್ಟಗುಣ ಸಂಪನ್ನರುಂ ತತ್ವಜ್ಞಾನ ಸಂಪನ್ನರುಂ ತತ್ವಜ್ಞಾನ ಪ್ರಸನ್ನರುಂ ಷಡಂಗ ಯೋಗ ಸಂಗದರುಂ ಸಸಾರಭ್ಯಸಂಗ ನಿಸರುಮಪ್ಪ ಶಿವಯೋಗಿ ಶಾಂತಿಮ್ಮಯ್ಯ ದೇವಯ್ಯಂಗಳ ಪುತ್ರ ರೇವಣ ದೇವಯ್ಯಂಗಳ ಪ್ರಸಿದ್ಧಿತಿಕೆಯೆಂತೆನೆ"[೧೭] ಎಂದು ಶಾಸನದಲ್ಲಿ ಉಲ್ಲೇಖಿಸಿರುವುದು ಕಂಡುಬರುತ್ತದೆ. ಈ ಸಂಗತಿಗಳನ್ನು ಗಮನಿಸಿದಾಗ ರೇವಣಸಿದ್ಧರ ತಂದೆಯಾದ ಶಾಂತಿಮ್ಮಯ್ಯರನ್ನು "ಶ್ರೀಮದಣಿಮಾಧ್ಯಷ್ಟಗುಣ ಸಂಪನ್ನ, ತತ್ವಜ್ಞಾನ ಪ್ರಸನ್ನ ಶಿವಯೋಗಿ ಎಂದು ವರ್ಣಿಸಿರುವುದನ್ನು ನೋಡಿದರೆ ಸಿದ್ಧ ಪುರುಷನಾದ ರೇವಣಸಿದ್ಧನಿಗೆ ಜನ್ಮನೀಡಿದ ತಂದೆ ಶಾಂತಿಮಯ್ಯನೂ ಅಸಾಮಾನ್ಯ ವ್ಯಕ್ತಿಯೇ ಆಗಿದ್ದ ಎಂಬುದು ತಿಳಿದುಬರುತ್ತದೆ. ಇದಕ್ಕೆ ಪೂರಕವಾಗಿ ಎಂ.ಎಂ. ಕಲಬುರ್ಗಿ ಅವರ 'ತಗರ ಪವಾಡ' ಕೃತಿಯಲ್ಲಿ ಬರುವ ಶಾಂತಯ್ಯನೇ ಸರೂರ ಶಾಂತಮುತ್ತಯ್ಯ, ರೇವಣಸಿದ್ಧನು ಶಾಂತಯ್ಯನ ಗುರುವೆಂಬ ಸೂಚನೆ ಈ ಕೃತಿಯಲ್ಲಿದ್ದು, ಇದು ಕವಿಯ ತಪ್ಪು ತಿಳುವಳಿಕೆ ಎಂದು ತೋರುತ್ತದೆ. ಇಂಥ ಹೇಳಿಕೆಗಳೂ ಇದಕ್ಕೆ ವಿರುದ್ಧವಾದ ಹೇಳಿಕೆಗಳು. ಇಷ್ಟೇ ಏಕೆ ಇವರು ತಂದೆ ಮಕ್ಕಳೋ, ಗುರುಶಿಷ್ಯರೋ ಎಂಬ ಸಂದೇಹದ ಹೇಳಿಕೆಗಳೂ ಅಲ್ಲಲ್ಲಿ ಕೇಳಿಬರುತ್ತವೆ. ಆದರೆ ಶಾಸನಗಳ ಪ್ರಕಾರ ಶಾಂತಮುತ್ತಯ್ಯನ ಶಿಷ್ಯ ರೇವಣಸಿದ್ಧನೆಂದು ತಿಳಿದುಬರುತ್ತದೆ"[೧೮] ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಇದಕ್ಕೆ ಪುಷ್ಟೀಕರಿಸುವಂತೆ ಹಾಗೂ ಶಾಸನಗಳ ಮಾತನ್ನು ಒಪ್ಪುವ ರೀತಿಯಲ್ಲಿ ಬಿ.ಜಿ. ಬಿರಾದಾರ ಅವರು ತಮ್ಮ ವಿಚಾರಗಳನ್ನು 'ಕುರುಬರ ಗುರುಒಡೆಯರು ಸಾಂಸ್ಕೃತಿಕ ಅಧ್ಯಯನ' ಎಂಬ ಕೃತಿಯಲ್ಲಿ "ರೇವಣಸಿದ್ಧರು ಕೊಲ್ಲಿಪಾಕಿ ಸೋಮನಾಥ ಲಿಂಗದಲ್ಲಿ ಉದಿಸಿದರು ಎಂಬ ಪುರಾಣಕರ್ತರ ಅಭಿಪ್ರಾಯವನ್ನು ಒಪ್ಪದೇ ಅವರು ಕುರುಬ ಮೂಲದಿಂದ ಹುಟ್ಟಿಬಂದವರು ಎಂಬ ಅಭಿಪ್ರಾಯಗಳಿವೆ. ಅಂಥವುಗಳಲ್ಲಿ ಒಂದು ಅಭಿಪ್ರಾಯ ಹೀಗಿದೆ. "ಹಾಲುಮತದ ಮುದ್ದುಗೊಂಡ ಮತ್ತು ಮುದ್ದವ್ವ

ಎಂಬ ದಂಪತಿಗಳ ಏಳುಜನ ಮಕ್ಕಳಲ್ಲಿ ಕೊನೆಯವನೇ ಉಂಡಾಡ ಪದ್ಮಗೊಂಡ ಅಥವಾ ಉಂಡಾಡ ಪದ್ಮಣ್ಣ. ಈ ಉಂಡಾಡ ಪದ್ಮಣ್ಣನ ಮೊದಲನೆಯ ಹೆಂಡತಿ ಜಿಂಕಾದೇವಿಯಲ್ಲಿ ಐದು ಮಕ್ಕಳು ಹುಟ್ಟುತ್ತಾರೆ. ೧. ಜಗ್ಗಲಿ ಮುತ್ತಯ್ಯ, ೨. ಸಹಾಯ ಮುತ್ತಯ್ಯ, ೩. ಸೋಹಾಮುತ್ತಯ್ಯ, ೪. ಶಾಂತಿಮಯ ಮುತ್ತಯ್ಯ, ೫. ದೇವರಾಜ. ನಾಲ್ಕನೆಯ ಮಗನಾದ ಶಾಂತಿಮಯ ಮುತ್ತಯ್ಯನೇ ರೇವಣಸಿದ್ಧೇಶ್ವರನ ತಂದೆ ತಾಯಿಯ ಹೆಸರು ಮಹಾದೇವಿ ಶಾಂತಿಮಯ ಮುತ್ತಯ್ಯ ಶಿವಭಕ್ತ ಗುರುಭಕ್ತರೊಡನೆ ಸಮಾಜಹಿತ ಕಾರ್ಯಗಳನ್ನು ಮಾಡುತ್ತಾ ಕೆಲವು ಕಾಲ ಕೊಲ್ಲಿಪಾಕಿ ಸೀಮೆಯಲ್ಲಿ ನೆಲೆಸಿದರು. ಅಲ್ಲಿ ಸೋಮೇಶ್ವರನ ಕೃಪೆಯಿಂದ ರೇವಣಸಿದ್ಧ ಹುಟ್ಟಿದ ಮತ್ತು ಅಲ್ಲಿಯೇ ಸಮಾಧಿ ಯಾದದ್ದು ೧೨೧೭ರಲ್ಲಿ. ಏಕೆಂದರೆ ಅವರು ನೂರೇಳು(೧೦೭) ವರ್ಷ ಬದುಕಿದ್ದರು ಎಂಬ ಪ್ರತೀತಿಯಿದೆ. ಕೆಲವು ಪುರಾಣಗಳು ರೇವಣಸಿದ್ಧರು ಕೊಲ್ಲಿಪಾಕಿ ಸೋಮನಾಥ ಲಿಂಗದಲ್ಲಿ ಉದ್ಭವವಾದರೆಂದು ವರ್ಣಿಸುತ್ತವೆ. ಅವೈಚಾರಿಕ ಜನ ಪಂಚಾಚಾರ್ಯರ ಅನುಯಾಯಿಗಳು ಅದನ್ನು ನಿಜವೆಂದು ನಂಬುತ್ತಾರೆ. ಆದರೆ ಅದರ ಅರ್ಥ ಬೇರೆ. ಅವರು ಮೊದಲು ನಾಥ ಸಂಪ್ರದಾಯದಲ್ಲಿದ್ದು, ನಾಥಸಿದ್ಧರೆನಿಸಿಕೊಂಡಿದ್ದರು. ಆ ಮೇಲೆ ಅದನ್ನು ಬಿಟ್ಟು ಶೈವಸಿದ್ಧರಾದರು. ಆ ಸಂಸ್ಕಾರ ಕ್ರಿಯೆ ಕೊಲ್ಲಿಪಾಕಿ ಸೋಮನಾಥ ದೇವಾಲಯದಲ್ಲಿ ಜರುಗಿದ್ದನ್ನು ಸೋಮನಾಥ ಲಿಂಗದಲ್ಲಿ ಉದ್ಭವವಾದ ಎಂದು ವರ್ಣಿಸಲಾಗಿದೆ. ಅಷ್ಟೆ ಈ ಎಲ್ಲಾ ವಿಚಾರಗಳಿಂದ ತಿಳಿದುಬರುವ ಸಂಗತಿಗಳೆಂದರೆ ಕುರುಬ ಜನಾಂಗದ ಶಾಂತಮುತ್ತಯ್ಯನೇ ರೇವಣಸಿದ್ಧರ ತಂದೆ, ಆತನೂ ಶಿವಭಕ್ತ ಗುರುಭಕ್ತ. ಈತನು ಕೊಲ್ಲಿಪಾಕಿ ಸೀಮೆಯಲ್ಲಿ ನೆಲೆಸಿರುವಾಗ ರೇವಣಸಿದ್ಧರು ಜನಿಸಿದರು. ಇವರು ಮೊದಲು ನಾಥಸಿದ್ಧನಾಗಿದ್ದು ಆ ನಂತರ ಶೈವಸಿದ್ಧರಾದರು. ಇವರು ಸುಮಾರು ೧೦೭ ವರ್ಷಗಳ ವರೆಗೆ ಬದುಕಿದ ದೀರ್ಘಾಯಸ್ಸು ಎಂದು ಗೊತ್ತಾಗುತ್ತದೆ"[೧೯] ಎಂಬ ವಿಚಾರಗಳನ್ನು ಚರ್ಚಿಸುತ್ತಾರೆ.

ರೇವಣಸಿದ್ಧ, ಶಾಂತಮುತ್ತಯ್ಯ ಇವರಿಬ್ಬರ ನಡುವಿನ ಸಮಸ್ಯೆಯನ್ನು ಸೃಷ್ಟಿ ಮಾಡಲು ಎರಡು ಕಾರಣಗಳಿವೆ. ಮೊದಲನೆಯದಾಗಿ ಕ್ರಿ.ಶ. ೧೧೮೭ರ ಶಿರವಾಳ ಶಾಸನವು ಹೇಳುವಂತೆ ರೇವಣಸಿದ್ಧನ ತಂದೆ ಶಾಂತಮುತ್ತಯ್ಯನೆಂದು ಹೇಳುತ್ತದೆ. ಇದರಿಂದ ತಂದೆ ಯಾರು, ಮಗನ್ಯಾರು, ಎಂಬ ಗೊಂದಲಕ್ಕೆಡೆಮಾಡಿ ಕೊಡುತ್ತದೆ. ಅನಂತರ ಎರಡನೆಯದಾಗಿ 'ತಗರ ಪವಾಡ' ಮತ್ತು 'ಹಾಲುಮತೋತ್ತೇಜಕ ಪುರಾಣ' ಇವುಗಳಲ್ಲಿ ಶಾಂತಮುತ್ತಯ್ಯನ ಗುರು ರೇವಣಸಿದ್ಧನೆಂಬ ಸಂಗತಿಯನ್ನು ತಿಳಿಸುತ್ತವೆ. ಇದರಿಂದ ಗುರು ಯಾರೊ, ಶಿಷ್ಯನ್ಯಾರೋ ತಿಳಿಯದಾಗಿದೆ. ಈ ಎರಡೂ ಸಮಸ್ಯೆಗಳಿಂದ ಗುರು, ಶಿಷ್ಯ, ತಂದೆಯೋ ಎಂಬುದನ್ನು ನಿಖರವಾಗಿ ತಿಳಿಯಲು ಗೊಂದಲವಾಗಿದೆ. ಆದ್ದರಿಂದ ಇವುಗಳನ್ನು ಸ್ಪಷ್ಟಪಡಿಸಲು ಬೇರೆ ಯಾವುದೇ ಆಕರವಾಗಲಿ,

ಕಾವ್ಯಗಳಾಗಲೀ ಸಿಕ್ಕಿರುವುದಿಲ್ಲ. ಹಾಗಾಗಿ ಈ ವಿಚಾರಗಳನ್ನು ಕುರಿತು ಚರ್ಚೆ ಮಾಡಿರುವ ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಿದಾಗ ಎಂ.ಎಂ. ಕಲಬುರ್ಗಿ ಅವರು ಶಾಸನ ಪಾಠವನ್ನು ಒಪ್ಪುವಂತೆ, ಬಿ.ಜಿ. ಬಿರಾದಾರವರು ತಮ್ಮ ಸಂಶೋಧನ ಕೃತಿಯಲ್ಲಿ ಅದಕ್ಕೆ ಪೂರಕವಾದ ವಿಚಾರಗಳನ್ನು ಚರ್ಚಿಸಿದ್ದಾರೆ. ಈ ವಿಚಾರಗಳ ಹಿನ್ನೆಲೆಯಲ್ಲಿ ರೇವಣಸಿದ್ಧನ ತಂದೆ ಶಾಂತಮುತ್ತಯ್ಯ ನಾಗಿರಬೇಕು ಎಂಬುದಾಗಿದೆ. ಆದರೆ ಹಾಲುಮತ ಜನಪದರು ಹೇಳುವಂತೆ ಹಾಗೂ ಈ ಎರಡು ಕಾವ್ಯಗಳು ವಾದಿಸುವಂತೆ ಶಾಂತಮುತ್ತಯ್ಯನ ಗುರು ರೇವಣಸಿದ್ಧನಾಗಿದ್ದಾನೆ. ಏಕೆಂದರೆ ಜನಪದರು ಹೇಳುವಂತಹ ಎಷ್ಟೋ ವಿಚಾರಗಳು ಸತ್ಯಕ್ಕೆ ಹತ್ತಿರವಾಗಿರುತ್ತವೆ ಎಂಬುದನ್ನು ಮರೆಯುವಂತಿಲ್ಲ.

ಏಕೆಂದರೆ ಶಾಂತಮುತ್ತಯ್ಯ ರೇವಣಸಿದ್ಧನ ಗುರು ಅಥವಾ ತಂದೆ ಆಗಿದ್ದರೆ, ಆತನ ಪ್ರತಿಮೆಗಳಾಗಲಿ, ಆತನ ಮಠ ಅಥವಾ ಶಾಖಮಠಗಳಾಗಲೀ ಇರಬೇಕಾಗಿತ್ತು. ಆದರೆ ಎಲ್ಲಿಯೂ ಆ ತರಹದ ಮೂರ್ತಿಗಳಾಗಲಿ, ಮಠಗಳಾಗಲಿ, ಕಂಡುಬರುವುದಿಲ್ಲ. ಸಾಮಾನ್ಯವಾಗಿ ಹೇಳುವಂತೆ ಶಿಷ್ಯ ಯಾವಾಗಲೂ ಗುರುಗಳ ಪ್ರತಿಮೆಯನ್ನೇ ಪೂಜಿಸುವುದು ಮತ್ತು ಆರಾಧಿಸುವ ಸಲುವಾಗಿ ಶಿಷ್ಯರಲ್ಲಿರುವ ಭಕ್ತಿ ನಿಷ್ಠೆಯಿಂದ ಗುರುಗಳ ನೆನಪಿಗಾಗಿ ಮೂರ್ತಿಗಳನ್ನು ಇಲ್ಲವೇ ಮಠ, ದೇವಸ್ಥಾನ ಗಳನ್ನು ನಿರ್ಮಿಸುತ್ತಾರೆ. ಈ ಹಿನ್ನೆಲೆಯಲ್ಲಿ ನೋಡಿದಾಗ ರೇವಣಸಿದ್ಧ ಶಾಂತಮುತ್ತಯ್ಯನ ಗುರು ಎಂಬುದಕ್ಕೆ ಸಂಶಯವಿಲ್ಲ. ಈ ಚಿಂತನೆಯ ನೆರಳಲ್ಲಿ ತಗರ ಪವಾಡ, ಹಾಲುಮತೋತ್ತೇಜಕ ಪುರಾಣವು ರಚನೆಗೊಂಡಿರಬಹುದು. ಈ ಕೃತಿಗಳನ್ನು ಬಿಟ್ಟರೆ ಈಗಲೂ ಅಲ್ಲಿನ ಜನಪದರು ನಮಗೆ ಗುರು ರೇವಣಸಿದ್ಧನೆಂದೂ ಮತ್ತು ಶಾಂತಮುತ್ತಯ್ಯ ಆತನ ಶಿಷ್ಯನೆಂದು ಹೇಳುತ್ತಾರೆ. ಏಕೆಂದರೆ ಶಾಂತಮುತ್ತಯ್ಯನ ವಂಶಸ್ಥರು ಅಂತ ಹೇಳಿಕೊಂಡು ಈಗಲೂ ಗುರುವಿನ ಪೂಜೆ ಪುನಸ್ಕಾರಗಳ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ಇವರು ರೇವಣಸಿದ್ಧನ ಪರಂಪರೆ ಯವರು ಎಂದು ಹೇಳಿಕೊಳ್ಳುತ್ತಾರೆಯೇ ವಿನಃ, ನಾವು ರೇವಣಸಿದ್ಧನ ವಂಶಸ್ಥರು ಎಂದು ಹೇಳಿಕೊಳ್ಳುವುದಿಲ್ಲ. ಹೀಗಾಗಿ ರೇವಣಸಿದ್ಧನ ಅಡಿಯಲ್ಲಿ ಬರುವರೇ ಶಾಂತೊಡೆಯರು. ಈ ರೀತಿಯಾದ ವಿಚಾರಗಳನ್ನು ಚರ್ಚಿಸಿದಾಗ ಶಾಂತಮುತ್ತಯ್ಯನೇ ಶಿಷ್ಯ ರೇವಣಸಿದ್ಧನೇ ಗುರು ಎಂಬುದಾಗಿ ಕರೆಯುವುದರಲ್ಲಿ ತಪ್ಪೇನೂ ಇಲ್ಲವೆನಿಸುತ್ತದೆ. ಏಕೆಂದರೆ ಆ ಭಾಗದಲ್ಲಿ ಸಾಮಾನ್ಯವಾಗಿ ನಾಮ ಪಲ್ಲಟವಾಗಿರಬಹುದು. ಅಂದರೆ ಈಗಲೂ ಶಾಂತಮುತ್ತಯ್ಯ, ರೇವಣಸಿದ್ಧಯ್ಯ ಎಂಬ ಹೆಸರುಗಳು ಸಾಕಷ್ಟು ಜನ ಇಟ್ಟುಕೊಂಡಿದ್ದಾರೆ. ಹೀಗಾಗಿ ರೇವಣಸಿದ್ಧನ ಕಾಲದಲ್ಲಿ ಬದುಕಿ ಬಾಳಿದವನು ಶಾಂತಯ್ಯನಲ್ಲ. ತದನಂತರ ಕಾಲದಲ್ಲಿ ಬದುಕಿದ ಶಾಂತಯ್ಯನ ಮಗ ರೇವಣಸಿದ್ಧ ನಾಗಿರುವ ಸಾಧ್ಯತೆಗಳೇ ಸ್ಪಷ್ಟವಾಗಿವೆ.

ಅಡಿಟಿಪ್ಪಣಿಗಳು

೧. ಕುರುಬರ ರೇವಣಸಿದ್ಧ, ಪು. ೧೦೭

೨. ತಗರ ಪವಾಡ(ಸಂ), ೨೦೦೪, ಪದ್ಯ-೮೧, ಪು. ೪೧

೩. ಭೀಮಕವಿಯ ಹಾಲುಮತೋತ್ತೇಜಕ ಪುರಾಣ(ಸಂ), ೨೦೦೮, ಪದ್ಯ-೩೧, ಪು. ೦೭

೪. ಮುದ್ದೇಬಿಹಾಳ ತಾಲೂಕಿನ ಇತಿಹಾಸ ದರ್ಶನ, ೨೦೧೪, ಪು. ೧೫೩, ೧೫೫.

೫. ಮುದ್ದೇಬಿಹಾಳ ತಾಲೂಕಿನ ಇತಿಹಾಸ ದರ್ಶನ, ೨೦೧೪, ಪು. ೧೫೫

೬. ಸಿದ್ಧಮಂಕ ಚರಿತೆ(ಸಂ), ೨೦೦೪, ಪದ್ಯ-೧೨೭, ಪು. ೧೩೧.

೭. ಹಾಲುಮತ ವ್ಯಾಸಂಗ-೦೨(ಸಂ), ೨೦೧೦, ಪು. ೮೦.

೮. ತಗರಣ ಮತ್ತು ಇತರ ಪ್ರಬಂಧಗಳು, ಪು. ೧೧೮

೯. ಹಾಲುಮತ ಚರಿತ್ರೆ(ಸಂ), ೨೦೧೨, ಪು. ೧೪, ೧೫.

೧೦. ಗುರುವಂದನೆ(ಸಂ) ೨೦೦೭, ಪು. ೧೩೯

೧೧. ಶಂಭಾ ಕೃತಿ ಸಂ-೧, ಪು. ೧೪೮

೧೨. ಮಾರ್ಗ ಸಂ-೪, ೨೦೦೪, ಪು. ೩೮೪.

೧೩. ಹರಿಹರನ ರೇವಣಸಿದ್ಧೇಶ್ವರನ ರಗಳೆ, ಪು. ೪೧

೧೪. ಮಾರ್ಗ-೪, ೨೦೦೪, ಪು. ೩೯೩.

೧೫. ಅರಿಕೇರಿ ಅಮೋಘ ಸಿದ್ಧೇಶ್ವರ ಪರಂಪರೆ, ಪು. ೦೭

೧೬. ಮಾಹಿತಿ ಹುಚ್ಚಯ್ಯ ಶಾಂತಯ್ಯ ಗುರುವಿನ-೫೦ ಸರೂರು.

೧೭. ಮಾರ್ಗ-೪ ೨೦೦೪, ಪು. ೩೮೯

೧೮. ಮಾರ್ಗ-೪, ಪು. ೩೮೮

೧೯. ಕುರುಬರ ಗುರುಒಡೆಯರು ಸಾಂಸ್ಕೃತಿಕ ಅಧ್ಯಯನ. ೨೦೧೦, ಪು. ೧೯೨, ೧೯೩

ಅಧ್ಯಾಯ ನಾಲ್ಕು

ಸರೂರು ಹಾಲುಮತ ಪರಂಪರೆ: ಭೌಗೋಳಿಕ ಪ್ರಸಾರ

ಅಧ್ಯಾಯ ನಾಲ್ಕು

ಸರೂರು ಹಾಲುಮತ ಪರಂಪರೆ: ಭೌಗೋಳಿಕ ಪ್ರಸಾರ

ಹಾಲುಮತ ಜನಾಂಗವು ಪ್ರಾಚೀನ ಇತಿಹಾಸವನ್ನು ಹೊಂದಿರುವುದಾಗಿದೆ. ಈ ಸಮಾಜವು ಗುರುಪರಂಪರೆಯನ್ನು ರೂಢಿಸಿಕೊಂಡು ಬಂದಿರುವುದನ್ನು ನೋಡಬಹುದು. ಈ ಗುರುಪರಂಪರೆಯ ನೆಲೆಗಳು ಕರ್ನಾಟಕದಾದ್ಯಂತ ಕಂಡುಬರುತ್ತವೆ. ವಿಶೇಷವಾಗಿ ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಸರೂರ ಗ್ರಾಮವು ಪ್ರಮುಖ ಕೇಂದ್ರ ಸ್ಥಾನವನ್ನು ಪಡೆದುಕೊಂಡಿದೆ. ಏಕೆಂದರೆ ರೇವಣಸಿದ್ಧರು ಶಿವಭಕ್ತನಾದ ಕುರುಬ ಶಾಂತಮುತ್ತಯ್ಯನಿಗೆ ದೀಕ್ಷೆಯನ್ನು ಕೊಟ್ಟು, ಗುರುಕಂಕಣವನ್ನು ಕಟ್ಟಿ ಹಾಲುಮತ ಜನಾಂಗಕ್ಕೆ ಗುರುಒಡೆಯರನ್ನಾಗಿ ಮಾಡಿರುವುದು ಈ ಗ್ರಾಮದಲ್ಲಿ. ಹೀಗಾಗಿ ರೇವಣಸಿದ್ಧರಿಂದ ದೀಕ್ಷೆಗೊಂಡ ಸರೂರು ಶಾಂತಮುತ್ತಯ್ಯನೇ ಕುರುಬರ ಗುರುಪರಂಪರೆಯ ಮೂಲ ಪುರುಷ. ಸರೂರಿನಲ್ಲಿರುವ ರೇವಣಸಿದ್ಧೇಶ್ವರ ಪೀಠವೇ ಕುರುಬರ ಮೂಲ ಪೀಠವಾಗಿದೆ. ಈ ಮಠಾಧಿಪತಿಗಳಿಂದಲೇ ಪ್ರತಿಯೊಂದು ಕಾರ್ಯಗಳು ನಡೆಯಬೇಕಾಗಿತ್ತು. ಆದರೆ ಹಾಲುಮತ ಜನಾಂಗವು ವಿಸ್ತರಿಸಿಕೊಂಡಂತೆಲ್ಲ ಕುಲದ ಗುರುಪರಂಪರೆಯು ಅಪಾರ ಸಂಖ್ಯೆಯಲ್ಲಿ ಹರಡಿಕೊಂಡಿತ್ತು. ಈ ಸಂದರ್ಭದಲ್ಲಿ ಸರೂರಿನ ಮೂಲ ಪೀಠದಿಂದ ಎಲ್ಲರಿಗೂ ಎಲ್ಲಾ ರೀತಿಯಿಂದಲೂ ಮಾರ್ಗದರ್ಶನ ನೀಡಲು ಸಾಧ್ಯವಿಲ್ಲ ಎಂಬ ಸಂಗತಿಯನ್ನು ಮನಗಂಡು ಪೀಠಾಧಿಪತಿಗಳು ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ಅನೇಕ ಶಾಖಾಮಠಗಳನ್ನು ಸ್ಥಾಪಿಸಿಕೊಳ್ಳಲು ಅನುವು ಮಾಡಿಕೊಟ್ಟರು. ಆ ಮಠಗಳಿಗೆ ತಮ್ಮ ಶಾಖಾಮಠದ ಪೀಠಾಧಿಪತಿಗಳನ್ನಾಗಿ ನೇಮಿಸಿ, ಆ ಮಠಗಳಿಗೆ ಸಂಬಂಧಿಸಿದ ಹಾಲುಮತ ಜನಾಂಗದವರು ಧಾರ್ಮಿಕವಾಗಿ, ಸಾಮಾಜಿಕವಾಗಿ ಆಚರಿಸುವಂತಹ ಕಾರ್ಯಗಳಿಗೆ ಗುರುಒಡೆಯರಾಗಿ ಅವರ ಸಂಪ್ರದಾಯಗಳನ್ನು ನೆರವೇರಿಸಿಕೊಂಡು ಹೋಗಲು ಅವಕಾಶ ಮಾಡಿಕೊಡಲಾಯಿತು. ಹೀಗೆ ಕರ್ನಾಟಕದಾದ್ಯಂತ ಒಳ–ಹೊರಗೆ ಹರಡಿಕೊಂಡಿರುವುದರ ಜೊತೆಗೆ ಆಂಧ್ರ, ಮಹಾರಾಷ್ಟ್ರ ಇತ್ಯಾದಿ ರಾಜ್ಯಗಳಲ್ಲಿಯೂ ಈ ಸಮುದಾಯದ ಒಡೆಯರ ಶಾಖಾಮಠಗಳು ಇರುವುದು ಕಂಡುಬರುತ್ತದೆ.

ಈ ಶಾಖಾ ಮಠಗಳು ಜನತೆಯ ಅಗತ್ಯಕ್ಕೆ ಅನುಗುಣವಾಗಿ ನಾಡಿನ ಬೇರೆ ಬೇರೆ ಸ್ಥಳಗಳಲ್ಲಿ ವಾಸವಾಗಿರುವ ಹಾಲುಮತ ಜನಾಂಗದ ಗುರುಒಡೆಯರ ಭೌಗೋಳಿಕ ಪ್ರಸಾರವನ್ನು ಗುರುತಿಸ ಬಹುದು. ಇಲ್ಲಿ ಮುಖ್ಯವಾಗಿ ಸರೂರಿನ ಹಾಲುಮತ ಗುರುಪರಂಪರೆಯ ಮುಂದುವರಿಕೆಯಾಗಿ ವಿಸ್ತರಿಸಿಕೊಂಡ ಶಾಖಾ ಮಠಗಳು ಕರ್ನಾಟಕ ಮತ್ತು ಆಂಧ್ರಪ್ರದೇಶದ ವ್ಯಾಪ್ತಿಯನ್ನು ಒಳಗೊಂಡಂತೆ ಇವೆ. ಅವುಗಳು ಈ ಕೆಳಗಿನಂತಿವೆ.

ಸರೂರ ಸಂಪ್ರದಾಯದ ಸಿದ್ಧರಾಮನ ಅನುಯಾಯಿಗಳಾದ ಮಂಕಸಿದ್ಧ-ಮಂಕೊಡೆಯರು ಸಿದ್ಧರಾಮೇಶ್ವರ ದೇವಾಲಯ, ಮಠಗಳ ಅಧಿಪತಿಗಳಾಗಿ ಹಾಗೂ ಪೂಜಾರಿಗಳಾಗಿ ಕಾರ್ಯನಿರ್ವಹಿಸು ತ್ತಿದ್ದಾರೆ. ಇವರು ಕೆಲವು ಊರುಗಳಲ್ಲಿ ಮಾತ್ರ ಕಂಡುಬರುತ್ತಾರೆ. ಇವರು ಸರೂರ ಗ್ರಾಮವನ್ನು ಬಿಟ್ಟರೆ, ದಕ್ಷಿಣ ಕರ್ನಾಟಕದ ಕೆಲವು ಗ್ರಾಮಗಳಲ್ಲಿ ಇರುವುದು ತಿಳಿದು ಬರುತ್ತದೆ. ಅವುಗಳಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯ ಸಿದ್ಧರಾಮೇಶ್ವರ ಮಠ, ಯಳನಾಡು ಗ್ರಾಮದ ಸಿದ್ಧರಾಮೇಶ್ವರ ದೇವಾಲಯ, ಇದೇ ಜಿಲ್ಲೆಯ ತಿಪಟೂರು ತಾಲೂಕಿನ ಹೊನ್ನವಳ್ಳಿಯ ವಡೆಹುಡಿ ಸಿದ್ಧರಾಮೇಶ್ವರ ಮಠ, ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನ ಸೊಲ್ಲಾಪುರ ಗ್ರಾಮದ ಸಿದ್ಧರಾಮೇಶ್ವರ ದೇವಾಲಯ, ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಬಾಣಾವರದ ಸಿದ್ಧರಾಮೇಶ್ವರ ಮಠ ಹಾಗೆಯೇ ತುಮಕೂರು ಜಿಲ್ಲೆಯ ಗೋಡೆಕೆರೆ, ಬೆಳಗುಂಬ, ಸಿದ್ಧರಾಮದೇವರಹಳ್ಳಿ, ಮೂಗನಾಯಕನ ಕೋಟೆ, ಶೆಲಯ್ಯನಪಾಳ್ಯ ಇನ್ನೂ ಮುಂತಾದ ಊರುಗಳಲ್ಲಿ ಸಿದ್ಧರಾಮೇಶ್ವರ ದೇವಾಲಯಗಳು ಇರುವುದು ಕಂಡುಬರುತ್ತವೆ. ಕರ್ನಾಟಕದಲ್ಲಿ ಸಿದ್ಧರಾಮನ ಮಠಗಳು ಹೆಚ್ಚಾಗಿ ಇದ್ದರು ಕೂಡ ಸರೂರ ಸಂಪ್ರದಾಯದ ಮಂಕೊಡೆಯರ ಪರಂಪರೆಯು ತುಂಬಾ ಕಡಿಮೆ ಪ್ರಮಾಣದಲ್ಲಿವೆ. ಏಕೆಂದರೆ ಮಂಕೊಡೆಯರು ಕುರುಬರೊಂದಿಗೆ ಸಂಬಂಧವನ್ನು ಬೆಳೆಸುವುದಿಲ್ಲ; ಬದಲಾಗಿ ಲಿಂಗಾಯತರೊಂದಿಗೆ ಹೆಚ್ಚಾಗಿ ಸಂಬಂಧ ಬೆಳೆಸಿಕೊಳ್ಳುತ್ತಾರೆ. ಅಂದರೆ ಮಂಕೊಡೆಯರು ಸಾಧಕುರುಬರಿಗೆ ಗುರುಗಳಾಗಿದ್ದಾರೆ. ಹೀಗಾಗಿ ಅವರು ಸಾಧಲಿಂಗಾಯತರಾಗಿ, ಲಿಂಗಾಯತರ ಪ್ರಭಾವಕ್ಕೆ ಒಳಗಾಗಿದ್ದಾರೆ. ಆದ್ದರಿಂದ ಅವರ ಸಂಖ್ಯೆ ಶಾಂತೊಡೆಯರಿಗಿಂತ ಕಡಿಮೆಯಾಗಿದೆ. ಆದರೆ ಆಂಧ್ರ ಗಡಿಭಾಗ ಪ್ರದೇಶದಲ್ಲಿ ಎಲ್ಲಿಯೂ ಈ ಮಂಕಸಿದ್ಧ-ಮಂಕೊಡೆಯರ ಪರಂಪರೆಯ ಮಠ ಅಥವಾ ದೇವಾಲಯಗಳು ಕಂಡುಬರುವುದಿಲ್ಲ. ಶಾಂತಮುತ್ತಯ್ಯ-ಶಾಂತೊಡೆಯರ ಪರಂಪರೆಯು ಹೆಚ್ಚಾಗಿ ಕಂಡುಬರುತ್ತದೆ. ಆದ್ದರಿಂದ ರೇವಣಸಿದ್ಧನ ಅನುಯಾಯಿಗಳಾದ ಶಾಂತೊಡೆಯರ ನೆಲೆಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

೧. ಹೈದರಾಬಾದ್ ಕರ್ನಾಟಕದಲ್ಲಿ ರೇವಣಸಿದ್ಧನ ಮಠಗಳು

ಸರೂರಿನ ಗುರುಪೀಠದಿಂದ ಅದರ ಶಾಖೆಗಳಾಗಿ ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲಿ ರೇವಣಸಿದ್ಧನ ಮಠಗಳು ಕಂಡುಬರುತ್ತವೆ. ಈ ಮಠಗಳ ಮುಖೇನ ಸರೂರಿನ ಹಾಲುಮತ

ಗುರುಪರಂಪರೆಯು ಪ್ರಸಾರಗೊಂಡಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ಕಂಡುಬರುವ ರೇವಣಸಿದ್ಧ ಮಠ ಅಥವಾ ರೇವಣಸಿದ್ಧ ನೆಲೆಗಳನ್ನು ನೋಡಬಹುದು.

೧. ಗುಲಬರ್ಗಾ ಜಿಲ್ಲೆ: ೧. "ಗುಲಬರ್ಗಾ ತಾಲೂಕಿನ– ಕೋರಿಮಠ, ಮಹಾಗಾಂವ, ಹೊನ್ನಳಿ, ಶ್ರೀನಿವಾಸ ಸರಡಗಿ, ಸೊಂತ ೨. ಚಿತ್ತಾಪುರ ತಾಲೂಕಿನ– ರೇವಗಿ, ಅಣಕಲ್ಲು ೩. ಜೇವರ್ಗಿ ತಾಲೂಕಿನ– ಜೇರಟಗಿ, ಕಟ್ಟಿ ಸಂಗಾವಿ, ಒಳ್ಳುಂಡಗಿ, ಅಣಜಗಿ ೪. ಸೇಡಂ ತಾಲೂಕಿನ– ಸೇಡಂ ನಗರ ೫. ಆಳಂದ ತಾಲೂಕಿನ– ಕುಡಕಿ, ಸರಸಂಬಾ ೬. ಅಫಜಲಪೂರ ತಾಲೂಕಿನ– ಕಾರಭೋಸಗಾ, ಹಾವಳಗಾ ೭. ಚಿಂಚೋಳ ತಾಲೂಕಿನ– ಚಂದನ ಕೇರ

೨. ಬೀದರ ಜಿಲ್ಲೆ: ೧. ಹಮನಾಬಾದ್ ತಾಲೂಕಿನ– ಉಡಮನಹಳ್ಳಿ ೨. ಭಾಲ್ಕಿ ತಾಲೂಕಿನ– ನಾವದಗಿ ೩. ಬಸವಕಲ್ಯಾಣ ತಾಲೂಕಿನ– ಧನೂರ, ಸಸ್ತಾಪೂರ, ಚಂಡಕಾಪೂರ ಅಥವಾ ಅಮೃತ ಕಂಡ, ರೇಣ್ಯಾಗವಿ, ಹುಲಿಕಂತಿಮಠ, ನಾರಾಯಣಪುರ.

೩. ಯಾದಗಿರಿ ಜಿಲ್ಲೆ: ೧. ಶಹಾಪುರ ತಾಲೂಕಿನ– ಭೋವಿ ಕಾಡಮಗೇರಿ, ಶಿರವಾಳ, ಸಿಂಗನಹಳ್ಳಿ, ಚಾಮನಾಳ, ಶಹಾಪುರ. ಪಟ್ಟಣದ ಹಳೆಪೇಟೆಯಲ್ಲಿ, ಹಳಿ ಸಗರ ೨. ಸುರಪೂರ ತಾಲೂಕಿನ– ಚಿಂಚೋಳಿ(ವಂದಗಮರು) ೩. ಯಾದಗಿರಿ ತಾಲೂಕಿನ– ಮುನೀರ ಬೊಮ್ಮನಹಳ್ಳಿ, ಆಗತೀರ್ಥ, ಲಿಂಗೇರಿ ಕೋಲೂರು.

೪. ರಾಯಚೂರು ಜಿಲ್ಲೆ: ೧. ಲಿಂಗಸೂರು ತಾಲೂಕಿನ– ಹೂವಿನ ಬಾವಿ ೨. ದೇವದುರ್ಗ ತಾಲೂಕಿನ– ಗಬ್ಬೂರು

೫. ಕೊಪ್ಪಳ ಜಿಲ್ಲೆ: ೧. ಕೊಪ್ಪಳ ತಾಲೂಕಿನ– ಕೊಪ್ಪಳ, ಹಿರೇಸಿಂದೋಗಿ ೨. ಗಂಗಾವತಿ ತಾಲೂಕಿನ– ಬಸವಾಪಟ್ಟಣ

೬. ಬಳ್ಳಾರಿ ಜಿಲ್ಲೆ: ೧. ಬಳ್ಳಾರಿ ತಾಲೂಕಿನ– ಬಳ್ಳಾರಿ(ಟೌನ್) ೨. ಕೂಡ್ಲಿಗಿ ತಾಲೂಕಿನ– ಉಜ್ಜನಿ ೩. ಹೂವಿನಹಡಗಲಿ ತಾಲೂಕಿನ– ಮಕರಬ್ಬಿ, ಹೂವಿನಹಡಗಲಿ ೪. ಹೊಸಪೇಟೆ ತಾಲೂಕಿನ– ಹೊಸಪೇಟೆ, ಮಲಪನಗುಡಿ, ದೇವಲಾಪುರ ೪. ಸಂಡೂರು ತಾಲೂಕಿನ– ವಿಠಲಾಪುರ ೨೩. ಸಿರುಗುಪ್ಪ ತಾಲೂಕಿನ– ಗೋಸ್ಬಾಳ, ತೆಕ್ಕಲಕೋಟೆ"[೧].

ಹೀಗೆ ಅನೇಕ ರೇವಣಸಿದ್ಧ ಮಠಗಳು ಹೈದರಾಬಾದ್ ಕರ್ನಾಟಕದಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಪ್ರಮುಖವಾದ ಕೆಲವು ಮಠಗಳ ವಿಶೇಷತೆಯನ್ನು ಹೀಗೆ ಅನುಸರಿಸಲಾಗಿದೆ.

ರೇವಗಿ

ಗುಲಬರ್ಗಾ ಜಿಲ್ಲೆಯ ಚಿತ್ತಾಪೂರ ಮತ್ತು ಚಿಂಚೋಳಿ ತಾಲೂಕುಗಳು ಈಶಾನ್ಯ ಗಡಿಯಲ್ಲಿ ಕೂಡುವ ಸ್ಥಳದಲ್ಲಿ ರೇವಗಿ ಅಥವಾ ರೇವಣಗಿರಿ ಕಂಡುಬರುತ್ತದೆ. ಇಲ್ಲಿ ಪ್ರಾಚೀನವಾದ

ರೇವಣಸಿದ್ಧೇಶ್ವರನ ದೇವಾಲಯವಿದೆ. ಈ ದೇವಾಲಯದಲ್ಲಿ ಪ್ರತಿ ಶ್ರಾವಣದ ನಡುವಿನ ಸೋಮವಾರ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ರೇಣುಕಾ ಜಯಂತಿಯಂದು ವೈಭವದ ರಥೋತ್ಸವ ನಡೆಯುತ್ತದೆ. ಈ ಜಾತ್ರೆಗೆ ಬೇರೆ ಬೇರೆ ರಾಜ್ಯಗಳಿಂದ ಭಕ್ತರು ಆಗಮಿಸುತ್ತಾರೆ.

ಹುಲಿಕಂತಿ ಮಠ

ಇದು ಬೀದರ ಜಿಲ್ಲೆಯ ಬಸವಕಲ್ಯಾಣ ನಗರದ ಶಹಾಪುರಗಲ್ಲಿಯಲ್ಲಿ ಈ ಹುಲಿಕಂತಿ ಮಠವು ಕಂಡುಬರುತ್ತದೆ. ಮಠದ ಕಟ್ಟಡ ಹಳೆಯ ಕಾಲದ್ದಾಗಿದ್ದು, ಗರ್ಭಗುಡಿಯನ್ನು ಹೊಂದಿದೆ. ಈ ಗದ್ದುಗೆಯು ಕಲ್ಲಿನ ಲಿಂಗಪೀಠವಾಗಿದ್ದು, ಇದರ ಮೇಲೆ ರೇವಣಸಿದ್ಧರ ಕಂಚಿನಮೂರ್ತಿ ಇರುವುದು ಕಂಡುಬರುತ್ತದೆ. ಇದರ ಪೂಜೆಯನ್ನು ೬೬ ವರ್ಷದ ಶ್ರೀ ರೇವಣಸಿದ್ಧಯ್ಯ ಅವರು ಮಾಡುತ್ತಾರೆ. ಈ ಮಠದ ಆವರಣವು ವಿಸ್ತಾರವಾಗಿದ್ದು, ಹಳೆಯ ಬಾವಿ ಮತ್ತು ದೊಡ್ಡ ದೊಡ್ಡ ಲಿಂಗಗಳಿರುವುದು ಕಂಡುಬರುತ್ತದೆ. ಈ ಮಠದಲ್ಲಿ ಜತನದಿಂದ ಇಟ್ಟುಕೊಂಡಿರುವ ಮರಾಠಿ ಲಿಪಿಯಲ್ಲಿರುವ ಶ್ರೀ ಸಿದ್ಧೇಶ್ವರ ಪುರಾಣವು '೨೮೭' ಪುಟಗಳನ್ನು ಒಳಗೊಂಡಿದೆ. ಇದು ತುಂಬಾ ಹಳೆಯದಾಗಿದೆ. ಇದರಲ್ಲಿ ಕಂತಿಮಠದ ಬಗ್ಗೆ ವಿವರಗಳಿವೆ.

ರೇಣ್ಯಾಗವಿ

ಬಸವಕಲ್ಯಾಣ ನಗರದ ರೇಣ್ಯಾಗಲ್ಲಿಯಲ್ಲಿ ಇರುವ ರೇಣ್ಯಾಗವಿಯನ್ನು ರೇವಣಸಿದ್ಧನ ಗವಿ ಸ್ವರೂಪದ ನೆಲೆ ಎಂದು ಹೇಳಲಾಗುತ್ತದೆ. ಈ ಗವಿಯು ದಕ್ಷಿಣೋತ್ತರವಾಗಿ ಸುಮಾರು ಅರ್ಧ ಕಿ.ಮೀ. ಉದ್ದವಿದೆ. ಪೂರ್ವ ಪಶ್ಚಿಮವಾಗಿ ಸುಮಾರು ೪೦೦ ಮೀಟರ್ ಅಗಲವಾಗಿದ್ದು, ಸುಮಾರು ೫೦-೬೦ ಮೀಟರ್ ಎತ್ತರವಾಗಿದೆ. ರೇಣ್ಯಾಗವಿಯು ಮಳೆಗಾಲದಲ್ಲಿ ಸಾವಿರಾರು ಕುರಿಗಳನ್ನು ತನ್ನ ಹೊಟ್ಟೆಯಲ್ಲಿಟ್ಟುಕೊಂಡು ರಕ್ಷಿಸಬಲ್ಲದು. ಹಾಗೆಯೇ ಗವಿಯಲ್ಲಿ ರೇವಣಸಿದ್ಧರು ಇತರ ಶರಣರಂತೆ ಈ ಗವಿಯಲ್ಲಿ ತಂಗಿ ಅನುಷ್ಠಾನ ಮಾಡಿರಬಹುದಾದ ಸಂಗತಿ ನಿಸ್ಸಂಶಯವಾದುದು. ರೇಣ್ಯಾಗವಿಯ ಆಜುಬಾಜಿನ ದಕ್ಷಿಣಕ್ಕೆ ಕಂಬಳಿ ಮಠವಿದೆ. ಈ ಮಠದ ಆವರಣದಲ್ಲಿ ಹಿಂದೆ ಒಂದೆರಡು ಕಂಬಳಿ ಮಗ್ಗಗಳು ಇದ್ದವೆಂದು ಅಲ್ಲಿನ ಸ್ಥಳೀಯ ಹಿರಿಯರು ಹೇಳುತ್ತಾರೆ.

ಭೋಯ ಕಾಡಮಗೇರಿ: ಇದು ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನಲ್ಲಿ ಬರುತ್ತದೆ. ಇದು ರೇವಣಸಿದ್ಧ ಗುರುಪರಂಪರೆಯನ್ನು ರೂಢಿಸಿಕೊಂಡು ಬಂದ ಮಠಗಳಲ್ಲಿ ಪ್ರಮುಖವಾದುದ್ದಾಗಿದೆ. ಇಲ್ಲಿ ರೇವಣಸಿದ್ಧೇಶ್ವರನ ದೇವಾಲಯವಿದ್ದು, ಇದರ ಪೂಜೆ ಪುನಸ್ಕಾರಗಳನ್ನು ಶಾಂತಮುತ್ತಯ್ಯನ ಸಂತತಿಯವರು ನೇರವೇರಿಸಿಕೊಂಡು ಬರುತ್ತಿದ್ದಾರೆ. ಇಲ್ಲಿ ಪ್ರತಿ ವರ್ಷ ರೇವಣಸಿದ್ಧೇಶ್ವರನ ಜಾತ್ರೆ ಶ್ರಾವಣ ಮಾಸದ ಕೊನೆಯ ಸೋಮವಾರದಂದು ನಡೆಯುತ್ತದೆ. ಆ ದಿನ ಪಲ್ಲಕ್ಕಿ ಉತ್ಸವ ಮತ್ತು ಕಳಸಾರೋಹಣ ಮಾಡುತ್ತಾರೆ. ಅದೇ ದಿನ ಬೆಳಗಿನ ಜಾವ

ರೇವಣಸಿದ್ಧ ಹೇಳಿಕೆಗಳು ಜರುಗುತ್ತವೆ. ಈ ಊರಿನ ವಿಶೇಷತೆ ಏನೆಂದರೆ ಕುರುಬ ಕುಲದ ಗುರುವರ್ಗದವರ ನೆಲೆ ಇದಾಗಿದೆ. ಇದನ್ನು ಕುರಿತು ಸರೂರಿನ ಹಿರಿಯರು ಹೇಳುವಂತೆ ಒಂದು ದಿನ ಶಾಂತಮುತ್ತಯ್ಯನವರು ಭಿಕ್ಷಾಟನೆಗೆಂದು ಕಾಡಮಗೇರಿ ಗ್ರಾಮಕ್ಕೆ ಹೋಗುತ್ತಾರೆ. ಆಗ ಆ ಊರಿನ ತಮ್ಮಣ್ಣಗೌಡ ಎಂಬುವನು ಊರಿನ ಪೂರ್ವ ಭಾಗದಲ್ಲಿರುವ ಕೆರೆಯ ದಂಡೆಯ ಮೇಲಿರುವ ಹೊಲದಲ್ಲಿ ಗೋಧಿಯನ್ನು ಬಿತ್ತುತ್ತಿರುತ್ತಾನೆ. ಅಲ್ಲಿಗೆ ಹೋಗಿ ಶಾಂತಮುತ್ತಯ್ಯನವರು ಬಿತ್ತುವ ಗೋಧಿಯನ್ನು ದಾನ ಕೇಳುತ್ತಾರೆ. ಅದಕ್ಕೆ ತಮ್ಮಣ್ಣ ಗೌಡನು ತಾವು ಯಾರು ಎಂದು ಕೇಳುತ್ತಾರೆ. ಆಗ ಶಾಂತಮುತ್ತಯ್ಯನವರು ನಾವು ಹಾಲುಮತದ ಗುರುಗಳು ಎಂದು ಹೇಳುತ್ತಾರೆ, ನೀವೇ ಹಾಲುಮತದ ಗುರುವೆಂಬುದಕ್ಕೆ ಕುರುಹು ಏನು? ಇದರ ಕುರಿತು ಸಾಕ್ಷಿ ತೋರಿಸಿದರೆ ಯೋಗ್ಯ ಭಿಕ್ಷೆಯನ್ನು ಕೊಡುತ್ತೇನೆ ಎಂದು ಹೇಳುತ್ತಾನೆ. ಶಾಂತಮುತ್ತಯ್ಯನವರು ಅಲ್ಲಿಯೇ ಬಿತ್ತುತ್ತಿರುವ ಉಡಿ ಚೀಲದಲ್ಲಿಯ ಗೋಧಿ ಬೀಜವನ್ನು ಚೀಲಕ್ಕೆ ಸುರುವಿ, ಉಡಿಚೀಲದಲ್ಲಿ ಉಸುಕನ್ನು ತುಂಬಿಕೊಂಡು ಹೊಲವನ್ನು ಬಿತ್ತುತ್ತಾರೆ. ಹೀಗೆ ಉಸುಕನ್ನು ಬಿತ್ತಿ ಗೋಧಿಯನ್ನು ಬೆಳೆದು ಪವಾಡ ಮಾಡಿದ ಶಾಂತಯ್ಯನಿಗೆ ತಮ್ಮಣ್ಣಗೌಡ ತನ್ನ ಒಬ್ಬಳೇ ಮಗಳಾದ ಸಕ್ಕರೆಮ್ಮನನ್ನು ಅವರಿಗೆ ಕೊಟ್ಟು, ತನ್ನ ಸರ್ವ ಆಸ್ತಿಯನ್ನು ಅವರಿಗೆ ದಾನವಾಗಿ ಕೊಟ್ಟು ಬಿಡುತ್ತಾನೆ ಎಂಬ ಸಂಗತಿಗಳನ್ನು ಹೇಳುತ್ತಾರೆ. ಹೀಗೆ "ತಮ್ಮಣ್ಣಗೌಡನು ತನ್ನ ಸರ್ವ ಆಸ್ತಿಯು ಅವರ ಹೆಸರಿಗೆ ಕರಾರು ಆಗಿರುವ ದಾನ ಪತ್ರವು ಭೋಯಿ ಕಾಡುಮಗೇರಿಯ ಒಡೆಯರಲ್ಲಿದೆ"[೩] ಎಂದು ಹೇಳುತ್ತಾರೆ.

ಬೂದಿಹಾಳ: ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಬೂದಿಹಾಳ ಮಠವು ಉಣ್ಣೆಕಂಕಣದ ಒಡೆಯರ ಪರಂಪರೆಯ ಆದಿಮೂಲ ಮಠವಾಗಿದೆ. ಇದರ ಅನೇಕ ಶಾಖಾ ಮಠಗಳನ್ನೇ ಎಸ್. ಎಸ್. ಪೂಜಾರ ಅವರು ತನ್ನ ಲೇಖನದಲ್ಲಿ ಗುರುತಿಸಿರುವಂತೆ

"೧. ಬೆಂಡಿಗೇರಿ ೨. ಹನುಮನಹಳ್ಳಿ ೩. ಹುನುಗುಂದ ೪. ಹುಣಸಿಕಟ್ಟೆ ೫. ಹೊನಗನಾಹಳ್ಳಿ ೬. ಸೋಕಿನಾವರಗಿ ೭. ರೋಣಿಹಾಳ ೮. ಸಸಾಲಟ್ಟಿ ೯. ಕೋವಳ್ಳಿ ೧೦. ಕುಂದರಗಿ ೧೧. ಅನಗವಾಡಿ ೧೨. ಯಡಿಹಳ್ಳಿ ೧೩. ಆನದಿನ್ನಿ ೧೪. ಗೋವನಕೊಪ್ಪ ೧೫. ಬಾಡಗಂಡಿ ೧೬. ಪೋರ್ತಿ ೧೭. ಗರಸಂಗಿ ತೆಗ್ಗಿ ೧೮. ಕಲಾದಗಿ ೧೯. ಇಂಗಳಗಿ"[೪] ಎಂಬುದಾಗಿ ವಿವರಿಸಿದ್ದಾರೆ. ಈ ಮಠವನ್ನು ಸಣ್ಣಸಿದ್ಧಪ್ಪ ಮತ್ತು ದೊಡ್ಡಸಿದ್ಧಪ್ಪ ಎಂಬುವರು ಬೂದಿಹಾಳದಲ್ಲಿ ಸ್ಥಾಪಿಸಿದ್ದಾರೆ. ಇವರು ಮೂಲತಹ ಗುಲಬರ್ಗಾದ ಕೋರಿಮಠದಿಂದ ಬಂದವರು ಎಂಬುದಾಗಿ ತಿಳಿದುಬರುತ್ತದೆ.

ಕೊಪ್ಪಳ: ಕೆಂಡದ ಸ್ವಾಮಿ ಮಠವು ಕೊಪ್ಪಳ ತಾಲೂಕಿನಲ್ಲಿ ಬರುತ್ತದೆ. ಇದು ಹಾಲುಮತದ ಪುರಾತನ ಮಠಗಳಲ್ಲಿ ಒಂದಾಗಿದೆ. ಸುಮಾರು ಮೂರುನೂರು ವರ್ಷಗಳ ಹಿನ್ನೆಲೆಯನ್ನು ಹೊಂದಿದೆ. ಇಲ್ಲಿಯ ಸ್ಥಳೀಯರು ನಂಬಿರುವಂತೆ ಬರಗಾಲದ ಸಂದರ್ಭದಲ್ಲಿ ಈ ಮಠದ ಸ್ವಾಮಿಗಳು

ಕೆಂಡವನ್ನು ನುಂಗಿ ಮಳೆಯನ್ನು ತರಿಸಿದ್ದರ ಪ್ರಯುಕ್ತ, ಈ ಮಠಕ್ಕೆ ಕೆಂಡದ ಸ್ವಾಮಿಯ ಮಠ ಎಂದು ಕರೆಯುತ್ತಾರೆ. ಈಗ ಪಂಚಯ್ಯಸ್ವಾಮಿ ಗುರುವಿನವರು ಈ ಮಠದ ಕಾರ್ಯಗಳನ್ನು ನೆರವೇರಿಸಿಕೊಂಡು ಹೋಗುತ್ತಾರೆ. ಇಲ್ಲಿ ಪ್ರತಿದಿನ ಪೂಜೆ ನಡೆಯುತ್ತದೆ. ಹಾಗೂ ವಾರದ ಪೂಜೆಯನ್ನು ಸೋಮವಾರದಂದು ಮಾಡುತ್ತಾರೆ.

ಬಸವಾಪಟ್ಟಣ: ಈ ಗ್ರಾಮವು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿ ಬರುತ್ತದೆ. ಇದು ಗುರುಒಡೆಯರ ಪ್ರಮುಖ ಮಠವಾಗಿದ್ದು, ಇದರ ಮೂಲ ಹೊಸಪೇಟೆಯಾಗಿದೆ. ಏಕೆಂದರೆ ನಂಜುಂಡಯ್ಯ ಮುತ್ತ್ಯಾ ಎಂಬುವರು ಗಂಗಾವತಿಯ ಹತ್ತಿರ ಬಸವಾಪಟ್ಟಣಕ್ಕೆ ಬಂದು ನೆಲೆಸಿದರು. ಅವರು ಕುರುಬರ ಉದ್ಧಾರಕ್ಕಾಗಿ ದುಡಿಯುತ್ತಾ ಬಂದಿರುವ ಸಂಗತಿಗಳು ತಿಳಿದುಬರುತ್ತವೆ.

ಗೋಸ್ಬಾಳ: ಇದು ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನಲ್ಲಿ ಬರುತ್ತದೆ. ಇಲ್ಲಿ ಸಿದ್ಧೇಶ್ವರಸ್ವಾಮಿ ಮಠವಿದೆ. ಹಾಗೆಯೇ ಇಲ್ಲಿ ಪ್ರಾಚೀನವಾದ ದೇವಾಲಯವಿದೆ. ಇದು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ನವರಂಗ ಮತ್ತು ತೆರೆದ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗ ಮತ್ತು ಬೆಳ್ಳಿಯ ಪ್ರತಿಮೆಯಿದೆ. ಇದರ ಧಾರ್ಮಿಕ ಆಚರಣೆಗಳನ್ನು ಪ್ರಸ್ತುತ ಗುರುವಿನ ಚನ್ನಪ್ಪನವರು ಪೂರೈಸಿಕೊಂಡು ಬರುತ್ತಿದ್ದಾರೆ. ಈ ಊರಲ್ಲಿ ಕುರುಬರು ಅಧಿಕ ಸಂಖ್ಯೆಯಲ್ಲಿದ್ದು, ನಾಲ್ಕು ಒಡೆಯರ ಮನೆಗಳಿವೆ. ಈ "ಮಠವು ಕುರುಬರ ಒಳ ಪಂಗಡಗಳಲ್ಲಿ ಬರುವ 'ಗೋಸೆಲಾರು' ಎಂಬ ಪಂಗಡದವರಿಗೆ ಮಾತ್ರ ಸೇರಿದ್ದು, ಇತರೆ ರೇವಣಸಿದ್ಧರ ಮಠಗಳಂತೆ ಕುಲಕ್ಕೆಲ್ಲ ಗುರುಮಠದಲ್ಲಿ ಗೋಸ್ಬಾಳ ಮತ್ತು ಚಿಂತಕುಂಟದ ಗುರುವಿನವರು ಅಣ್ಣ–ತಮ್ಮಂದಿರು, ಎಂದು ಹೇಳುತ್ತಾರೆ."[೫] ಹಾಗೆಯೇ ಈ ಎರಡೂ ಮಠಗಳಿಗೆ, '೨೪' ಜಗುಲಿಗಳು ಸೇರಿವೆ ಎಂಬುದನ್ನು ತಿಳಿಯಲಾಗಿದೆ.

ತೆಕ್ಕಲಕೋಟೆ: ಇದು ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಉತ್ತರ ದಿಕ್ಕಿಗೆ ಇರುವ ಪಟ್ಟಣವಾಗಿದೆ. ಈ ಊರ ಮಧ್ಯದಲ್ಲಿ ಹಳೆಯದಾದ ಕಾಡುಸಿದ್ಧಪ್ಪ ತಾತನ ಮಠವಿದೆ. ಈ ತಾತನ ಚರಿತ್ರೆಯೂ ಕುತೂಹಲಕಾರಿಯಾಗಿದೆ. ಏಕೆಂದರೆ ಈತ ಒಬ್ಬ ಯೋಗಿ ಪವಾಡ ಪುರುಷನಾಗಿದ್ದ. ಈತನು ಜನರಿಗೆ ಕೊಡುತ್ತಿದ್ದ ಉಪದೇಶ ಮತ್ತು ಹೇಳಿಕೆಗಳು ಹುಸಿ ಆಗುವುದಿಲ್ಲ ಎಂಬುದು ಅಲ್ಲಿನ ಸ್ಥಳೀಯರ ನಂಬಿಕೆಯಾಗಿತ್ತು.

ಅವರ ನಂಬಿಕೆಯಂತೆ ಒಮ್ಮೆ ಅಲ್ಲಿನ ದಂಪತಿಗಳು ಬಂದು ಮಕ್ಕಳ ಫಲಕ್ಕಾಗಿ ಈ ಯೋಗಿಯ ಹತ್ತಿರ ಕೇಳುತ್ತಾರೆ. ಆಗ ಅವರ ಭಕ್ತಿಗೆ ಮೆಚ್ಚಿ ಮಕ್ಕಳ ಫಲವನ್ನು ನೀಡಿದರು. ಹೀಗೆ ಕಾಡುಸಿದ್ಧಪ್ಪ ತನ್ನ ಹತ್ತಿರ ಬಂದವರಿಗೆಲ್ಲ ಒಂದೆಲ್ಲ ಒಂದು ರೀತಿಯಲ್ಲಿ ಉಪದೇಶ ಮಾಡಿ ಅವರಿಗೆ ಒಳ್ಳೆಯದಾಗುವ ವಿಧಾನಗಳನ್ನು ನೀಡುತ್ತಿದ್ದರು. ಇದರಿಂದ ಈ ಯೋಗಿಯು ಪ್ರಸಿದ್ಧವಾಗಿದ್ದರು. ಇವರ ಗುರುತನಕ್ಕೆ ಶಿಷ್ಯರನ್ನು ನೇಮಿಸಿಕೊಂಡಿದ್ದರು.

ಬಳ್ಳಾರಿ: ರೇವಣಸಿದ್ಧೇಶ್ವರ ಮಠವು(ಬಳ್ಳಾರಿ ಟೌನ್) ಮಿಲ್ಲರ್ ಪೇಟೆಯಲ್ಲಿದೆ. ಈ ರೇವಣಸಿದ್ಧೇಶ್ವರ ಮಠವನ್ನು ೧೯೬೭ರಲ್ಲಿ ಸ್ಥಾಪನೆ ಮಾಡಲಾಗಿದೆ. ಈ ಮಠದ ಎಲ್ಲಾ ಧಾರ್ಮಿಕ ಕಾರ್ಯಗಳನ್ನು ಶರಣಯ್ಯಸ್ವಾಮಿ ಒಡೆಯರು ನಡೆಸಿಕೊಂಡು ಬರುತ್ತಾರೆ. ಇಲ್ಲಿ ಪ್ರತಿ ದಿನ ಪೂಜೆ ಮಾಡುತ್ತಾರೆ. ಪ್ರತಿ ಶ್ರಾವಣ ಮಾಸದಲ್ಲಿ ಅಭಿಷೇಕದ ಕಾರ್ಯಗಳಿರುತ್ತವೆ. ರೇವಣಸಿದ್ಧೇಶ್ವರ ಜನನ ದಿವಸ ಜಾತ್ರೆ ಉತ್ಸವ ನಡೆಸುತ್ತಾರೆ. ಇದು ಇಲ್ಲಿಯ ವಿಶೇಷವಾಗಿದೆ.

ವಿಠಲಾಪುರ: ಇದು ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನಲ್ಲಿ ಬರುತ್ತದೆ. ಈ ಊರಲ್ಲಿ ರೇವಣಸಿದ್ಧೇಶ್ವರನ ಹಳೆಯ ದೇವಾಲಯವಿದ್ದು, ಅದು ಶಿಥಿಲಗೊಂಡಿದ್ದು, ಈಗ ಹೊಸದಾಗಿ ಕಟ್ಟಿಸಿದ್ದಾರೆ. ಈ ದೇವಾಲಯದ ಧಾರ್ಮಿಕ ಪೂಜಾ ಕಾರ್ಯಗಳನ್ನು ನೆರವೇರಿಸಿ ಕೊಂಡು ಹೋಗಲು ಸಿದ್ಧಯ್ಯ ಸ್ವಾಮಿಯನ್ನೆ ಅರ್ಚಕರಾಗಿ ನೇಮಿಸಲಾಗಿದೆ.

ರೇವಪ್ಪಯ್ಯ ಸ್ವಾಮಿ ಇಲ್ಲಿ ಮೊದಲ ಒಡೆಯರಾಗಿದ್ದರು. ರೇವಣಸಿದ್ಧೇಶ್ವರಗೆ ದಿನಕ್ಕೆರಡು ಬಾರಿ ಪೂಜೆಯನ್ನು ಮಾಡುತ್ತಾರೆ. ಪ್ರತಿ ಹುಣ್ಣಿಮೆ ಅಮಾವಾಸ್ಯೆ, ಶಿವರಾತ್ರಿ, ಯುಗಾದಿ, ರಾಮನವಮಿ ಮತ್ತು ವಿಜಯದಶಮಿಗಳಂಥ ವಿಶೇಷ ದಿನಗಳಲ್ಲಿ ಭಕ್ತರು ಅನ್ನ ದಾಸೋಹವನ್ನು ಏರ್ಪಡಿಸುವರು. ಪ್ರತಿ ವರ್ಷ ರಾಮನವಮಿ ದಿನದಂದು ರಥೋತ್ಸವವನ್ನು ವಿಜೃಂಭಣೆಯಿಂದ ನಡೆಸುವರು. ಇದು ಈ ಊರಿನ ವಿಶೇಷ ಸಂಗತಿಗಳಾಗಿವೆ. ಹೀಗೆ ಹೈದರಾಬಾದ್ ಕರ್ನಾಟಕದಲ್ಲಿ ಅನೇಕ ಶಾಖಾ ಮಠಗಳು, ರೇವಣಸಿದ್ಧ ಮಠ ಅಥವಾ ದೇವಾಲಯಗಳ ರೂಪದಲ್ಲಿ ಸರೂರಿನ ಗುರುಪರಂಪರೆಯನ್ನು ವಿಸ್ತರಿಸಿವೆ.

೨. ಉತ್ತರ ಕರ್ನಾಟಕದಲ್ಲಿ ರೇವಣಸಿದ್ಧ ಮಠಗಳು

ರೇವಣಸಿದ್ಧ ಮಠ ಅಥವಾ ನೆಲೆಗಳು ಕರ್ನಾಟಕದಾದ್ಯಂತ ವಿಸ್ತರಿಸಿಕೊಂಡಿವೆ. ಆದರೆ ಉತ್ತರ ಕರ್ನಾಟಕವೇ ರೇವಣಸಿದ್ಧನ ಮುಖ್ಯ ಸಂಚಾರ ಪ್ರದೇಶವಾಗಿದೆ. ಏಕೆಂದರೆ ಸರೂರಿನಲ್ಲಿ ಶಾಂತಮುತ್ತಯ್ಯನಿಗೆ ಲಿಂಗ ದೀಕ್ಷೆಯನ್ನು ಕೊಟ್ಟು, ನೀನು ಕುರುಬರಿಗೆ ಕುಲಗುರುವಾಗಿರು ಎಂದು ಹಾರೈಸಿದ ಪರಿಸರ ಈ ಭಾಗವಾಗಿದೆ. ಆದ್ದರಿಂದ ಈ ಪರಿಸರದಲ್ಲಿ ಬರುವ ರೇವಣಸಿದ್ಧ ಮಠಗಳನ್ನು ನೋಡುವುದಾದರೆ,

"ಎಫ್.ಟಿ. ಹಳ್ಳಿಕೇರಿ ಅವರು ಉತ್ತರ ಕರ್ನಾಟಕದಲ್ಲಿರುವ ರೇವಣಸಿದ್ಧ ಮಠಗಳನ್ನು ಕುರಿತು "ರೇವಣಸಿದ್ಧ ಪರಂಪರೆಯ ಹಾಲುಮತ ಮಠಗಳು" ಎಂಬ ಲೇಖನದಲ್ಲಿ ಗುರುತಿಸಿರುವಂತೆ

೧. ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ– ಬಂಕಾಪುರ

೨. ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ– ಡಂಬಳ, ನರಗುಂದ ತಾಲೂಕಿನ– ಚಿಕ್ಕನರಗುಂದ.

೩. ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ– ಸರೂರು, ತೂಗುಡ್ಡ. ಬಾಗೇವಾಡಿ ತಾಲೂಕಿನ– ಇಂಗಳೇಶ್ವರ, ಮನಗೋಳ

೪. ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ– ಹಿರೇನಸಬಿ

೫. ಬೆಳಗಾವಿ ಜಿಲ್ಲೆಯ– ಸವದತ್ತಿ ತಾಲೂಕಿನ– ಸಂಗ್ರೇಶಿಕೊಪ್ಪ, ಹಿರೇಕುಂಬಿ, ರಾಯಭಾಗ ತಾಲೂಕಿನ– ಬೆಂಡವಾದ.

ಇವುಗಳನ್ನು ಗುರುತಿಸುವುದರ ಮೂಲಕ ರೇವಣಸಿದ್ಧನ ಮೊದಲ ನೆಲೆಗಳು ಎಂಬುದನ್ನು ತಿಳಿಸುವ ಪ್ರಯತ್ನ ಇಲ್ಲಿ ಕಂಡುಬರುತ್ತದೆ. ಅದೇ ರೀತಿ ಬಿ.ಜಿ. ಬಿರಾದಾರ ಅವರು ರೇವಣಸಿದ್ಧ ಸಂಪ್ರದಾಯದವರು ನೆಲೆಸಿದ್ದ ಪ್ರಮುಖ ನೆಲೆಗಳನ್ನು ಅಥವಾ ಮಠಗಳನ್ನು 'ಕುರುಬರ ಗುರು' ಒಡೆಯರು ಎಂಬ ಗ್ರಂಥದಲ್ಲಿ ಪಟ್ಟಿ ಮಾಡಿದ್ದಾರೆ. ಆದರೆ ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಕ್ಷೇತ್ರಕಾರ್ಯವನ್ನು ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ರೇವಣಸಿದ್ಧ ಮಠಗಳ ಊರುಗಳನ್ನು ಗುರುತಿಸುವುದಾದರೆ:

೭. ವಿಜಯಪುರ ಜಿಲ್ಲೆ: ೧. ಮುದ್ದೇಬಿಹಾಳ ತಾಲೂಕಿನ– ಸರೂರು ೨. ವಿಜಯಪುರ ತಾಲೂಕಿನ– ಸಿವಣಗಿ ೩. ಬಾಗೇವಾಡಿ ತಾಲೂಕಿನ– ರೋಣಿಹಾಳ, ಮನಗೊಳಿ, ಇಂಗಳೇಶ್ವರ, ಬಳ್ಳಾವೂರು.

೮. ಬಾಗಲಕೋಟೆ ಜಿಲ್ಲೆ: ೧. ಬಾದಾಮಿ ತಾಲೂಕಿನ– ಹಿರೇನಸಿಬಿ ೨. ಬಾಗಲಕೋಟೆ ತಾಲೂಕಿನ– ತಳಗಿನ ಹಾಳ ೩. ಬೀಳಗಿ ತಾಲೂಕಿನ– ಬೀಳಗಿ

೯. ಬೆಳಗಾವಿ ಜಿಲ್ಲೆ: ೧. ಸವದತ್ತಿ ತಾಲೂಕಿನ– ಸಂಗ್ರೇಶಿಕೊಪ್ಪ, ಹಿರೇಕುಂಬಿ ೨. ಗೋಕಾಕ್ ತಾಲೂಕಿನ– ಕೌಜಲಗಿ ೩. ರಾಯಬಾಗ ತಾಲೂಕಿನ– ಬೆಂಡವಾಡ, ನಾಗನೂರು ೪. ಬೈಲ ಹೊಂಗಲ ತಾಲೂಕಿನ– ಗೋವನ ಕೊಪ್ಪ,

೧೦. ಧಾರವಾಡ ಜಿಲ್ಲೆ: ೧. ಧಾರವಾಡ ತಾಲೂಕಿನ– ಕೊಟಬಾಗಿ ಮತ್ತು ಅಮ್ಮಿನಭಾವಿ.

೧೧. ಗದಗ ಜಿಲ್ಲೆ: ೧. ಮುಂಡರಗಿ ತಾಲೂಕಿನ– ಡಂಬಳ ೨. ನರಗುಂದ ತಾಲೂಕಿನ– ಚಿಕ್ಕನರಗುಂದ.

೧೨. ಹಾವೇರಿ ಜಿಲ್ಲೆ: ೧. ಶಿಗ್ಗಾವಿ ತಾಲೂಕಿನ– ಬಂಕಾಪುರ ೨. ರಾಣೆಬೆನ್ನೂರು ತಾಲೂಕಿನ– ಚೌಡಯ್ಯದಾನಪುರ.

ಈ ಎಲ್ಲಾ ಊರುಗಳಲ್ಲಿ ರೇವಣಸಿದ್ಧನ ಮಠಗಳ ನೆಲೆಗಳು ದೊರೆಯುತ್ತದೆ. ವಿಶೇಷವಾಗಿ ಉತ್ತರ ಕರ್ನಾಟಕದ ವಿಜಯಪುರದಲ್ಲಿ ರೇವಣಸಿದ್ಧನ ಮೂಲ ನೆಲೆಗಳು ಕಂಡುಬರುತ್ತವೆ ಎಂದು ಹೇಳಿದರೂ ತಪ್ಪಾಗಲಾರದು. ಇಂತಹ ಮೂಲ ಮಠಗಳನ್ನು ಒಳಗೊಂಡ ಹಾಗೂ ವಿಶೇಷತೆಯನ್ನು ತೋರಿಸುವ ಊರುಗಳನ್ನು ಗುರುತಿಸುವುದಾದರೆ ಪ್ರಮುಖವಾಗಿ;

ಸರೂರು

ಇದು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನಲ್ಲಿ ಬರುವ ರೇವಣಸಿದ್ಧನ ಮೂಲ ಗುರುಪೀಠವಾಗಿದೆ. ಈ ಊರಲ್ಲಿ ರೇವಣಸಿದ್ಧರು ಶಿವಭಕ್ತನಾದ ಕುರುಬ ಶಾಂತಮುತ್ತಯ್ಯನಿಗೆ ಲಿಂಗದೀಕ್ಷೆಯನ್ನು ಕೊಟ್ಟು ಗುರು ಕಂಕಣವನ್ನು ಕಟ್ಟಿ ಕುರುಬ ಕುಲಕ್ಕೆ ಒಡೆಯನನ್ನಾಗಿ ಅಥವಾ ಕುಲಗುರುವನ್ನಾಗಿ ಮಾಡಿರುವುದು ಈ ಊರಿನ ವಿಶೇಷತೆಯಾಗಿದೆ.

ಹಾಗೆಯೇ ರೇವಣಸಿದ್ಧರು ಶಾಂತಮುತ್ತಯ್ಯನಿಗೆ ದೀಕ್ಷೆಯನ್ನು ಕೊಡುವ ಸಂದರ್ಭದಲ್ಲಿ ಕೈಲಾಸದಿಂದ ಕರಿಮಲ್ಲಿಗೆಯ ಸರ ಸುರಿದಿರುವುದರಿಂದ 'ಕಲ್ಲಿಕೆರೆ' ಎಂಬ ನಾಮದ ಬದಲು 'ಸರವೂರು' ಎಂಬ ಹೆಸರು ಬರಲು ಕಾರಣವಾಯಿತು ಎಂದು ಅಲ್ಲಿನ ಸ್ಥಳ ಪುರಾಣಗಳು ಮತ್ತು ಹಿರಿಯ ಒಡೆಯರು ಹೇಳುತ್ತಾರೆ. ಈ ಊರಿನಿಂದ ಒಂದು ಫರ್ಲಾಂಗ ದೂರದಲ್ಲಿ ರೇವಣಸಿದ್ಧನ ಏಳುಗುಡಿ ದೇವಸ್ಥಾನವಿದೆ. ಈ ದೇವಸ್ಥಾನದ ಆವರಣದಲ್ಲಿ ಎರಡು ಶಾಸನ ಮತ್ತು ನೂರಾರು ನಾಗರ ಶಿಲ್ಪಗಳಿವೆ. ದೇವಾಲಯದ ಪಕ್ಕದಲ್ಲಿ ಒಡೆಯರ ಸಮಾಧಿಯ ಚಿಕ್ಕ ಚಿಕ್ಕ ಗುಡಿಗಳಿವೆ. ದೇವಸ್ಥಾನದಿಂದ ಸ್ವಲ್ಪ ದೂರದಲ್ಲಿ ಶಾಂತಮುತ್ತಯ್ಯನ ಗದ್ದುಗೆ ಅಥವಾ ಗಿರಿ ಇದೆ. ಅದೇ ರೀತಿ ಊರಲ್ಲಿಯೂ ಒಂದು ಆಧುನಿಕ ಶೈಲಿಯಲ್ಲಿ ನಿರ್ಮಿಸಿದ ರೇವಣಸಿದ್ಧನ ದೇವಾಲಯವಿದೆ. ಈ ಎರಡೂ ದೇವಾಲಯಗಳು ಪೂಜೆ ಪುನಸ್ಕಾರಗಳನ್ನು ಮಾಡುವವರು ಕುರುಬರ ಗುರುಒಡೆಯರು. ಈ ಪರಿಸರದಲ್ಲಿ ಮಂಕಸಿದ್ಧ ಮತ್ತು ಶಾಂತಮುತ್ತಯ್ಯನ ನೆಲೆ ಇದಾಗಿರುವುದರಿಂದ ಇಲ್ಲಿ ಎರಡು ಪಂಗಡಗಳಿರುವುದು ಕಂಡುಬರುತ್ತದೆ. ಶಾಂತಮುತ್ತಯ್ಯನ ಅನುಯಾಯಿಗಳಾದ ಶಾಂತೊಡೆಯರಾದರೆ, ಸಿದ್ಧಮಂಕನ ಅನುಯಾಯಿಗಳು ಮಂಕೊಡೆಯರಾಗಿದ್ದಾರೆ. ಈ ಎರಡೂ ಸಂಪ್ರದಾಯದ ಒಡೆಯರು ಸರೂರಲ್ಲಿರುವುದು ಕಂಡುಬರುತ್ತದೆ. ಹೀಗಾಗಿ ರೇವಣಸಿದ್ಧೇಶ್ವರನ ಜಾತ್ರೆಯು ವರ್ಷದಲ್ಲಿ ಎರಡು ಸಲ ಆಗುತ್ತದೆ. ಒಂದು ಶ್ರಾವಣಮಾಸದ ಕೊನೆಯ ಸೋಮವಾರ ಮತ್ತು ಮಹಾಶಿವರಾತ್ರಿಯ ಸಂದರ್ಭದಲ್ಲಿ ಈ ಜಾತ್ರೆ ಉತ್ಸವವನ್ನು ಅವರವರ ಅನುಕೂಲಕ್ಕೆ ಅನುಗುಣವಾಗಿ ಮಾಡುತ್ತಾರೆ.

ಈ ಜಾತ್ರೆಯ ಸಂದರ್ಭದಲ್ಲಿ ಹೇಳಿಕೆ ಹೇಳುವಂತೆ ವಾಡಿಕೆಯಿದೆ. "ಸರೂರಿನ ಹಿರಿಯರು ಹೇಳುವಂತೆ ಪುಂಡಿಯ ಕಟ್ಟಿಗ್ಯಾಗ ಕೆಂಡವ ಬಗೆದ್ಹಾಂಗ ಪುಂಡ ಸರೂರ ಒಡೆಯರು ಹೇಳಿದ ಮತ್ತು ಬಂಡೀಗ ಕಾಲು ಜಡಿದ್ಹಾಂಗ"[೭] ಇಂತಹ ಮಾತುಗಳಿಂದ ಹೇಳಿಕೆಯ ಮಹತ್ವ ತಿಳಿಯುತ್ತದೆ. ಈ ಜಾತ್ರೆಗೆ ಬೇರೆ ಬೇರೆ ಕಡೆಗಳಿಂದ ಭಕ್ತರು ಬರುತ್ತಾರೆ. ಬಂದಂತಹ ಭಕ್ತರಿಗೆ ದಾಸೋಹವಿರುತ್ತದೆ. ಅದೇ ರೀತಿ ಸಾಮೂಹಿಕ ಮದುವೆಗಳು ನಡೆಯುತ್ತವೆ. ಹೀಗೆ ಸರೂರಿನ ಗುರುಪರಂಪರೆಯು ತಮ್ಮದೇ ಆದ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಗುರುತಿಸಿಕೊಳ್ಳುತ್ತದೆ.

ಹೊರ್ತಿ

ಇದು ಬಿಜಾಪುರ ಜಿಲ್ಲೆಯ ಸೋಲಾಪುರ ರಸ್ತೆಯಲ್ಲಿ ಬರುತ್ತದೆ. ಈ ಊರಿನಲ್ಲಿ ರೇವಣಸಿದ್ಧನ ದೊಡ್ಡದಾದ ಮಠವಿದೆ. ಬಹುಶಃ ರೇವಣಸಿದ್ಧ ಸರೂರಿನಿಂದ ಕಲ್ಯಾಣಕ್ಕೆ ಹೋಗುವ ಮಾರ್ಗದಲ್ಲಿ ಇಂಗಳೇಶ್ವರದ ನಂತರ ಇಲ್ಲಿ ಕೆಲಕಾಲ ತಂಗಿ ತಪಸ್ಸು ಮಾಡಿ ಹೋಗಿರಬಹುದು. ಊರ ಒಳಗಡೆ ಒಂದು ರೇವಣಸಿದ್ಧನ ದೇವಾಲಯವಿದೆ. ಈಗ ಇದರ ಉಸ್ತುವಾರಿಯನ್ನು ಗಾಣಿಗ ಸಮುದಾಯದವರು ನೋಡಿಕೊಳ್ಳುತ್ತಿದ್ದಾರೆ. ಈ ಸಮುದಾಯವನ್ನು ಕುರಿತು ಪುರಾಣಗಳ ಪ್ರಕಾರ "ಬಡವನಾದ ಕಲ್ಲಿಶೆಟ್ಟಿಯ ಮನೆಯಲ್ಲಿ ಗೌಣವನ್ನು ಹೊಡೆದು ಕಲ್ಲಿಶೆಟ್ಟಿಗೂ ಅವನ ಹೆಂಡಿತಿಗೂ ಮತ್ತು ಅವನ ಗಾಣದ ಎತ್ತಿಗೂ ಒಂಟಿಕಣ್ಣಿದ್ದೂ ಅವರಿಗೆ ಇನ್ನೊಂದು ಕಣ್ಣನ್ನು ದಯಪಾಲಿಸಿ ಅವರ ಬಡತನವನ್ನು ದಯಪಾಲಿಸಿರುವ ಸಂಗತಿ ಬಂದಿದೆ."[೮] ಹಾಗೆಯೇ ಹೊರ್ತಿಯ ಅಜ್ಜಮ್ಮ ಮತ್ತು ಅವಳ ಮಗ ಮಲ್ಲಿಕಾರ್ಜುನನನ್ನು ರೇವಣಸಿದ್ಧ ಉದ್ಧರಿಸಿ ಶ್ರೀಮಂತರಾಗಿಸುತ್ತಾನೆ. ಅಜ್ಜಮ್ಮಳಿಗೆ ಊರ ಹೊರಗಿರುವ ದೇವಾಲಯಕ್ಕೆ ನಡೆಯುತ್ತ ಬರುವುದು ಅಸಾಧ್ಯವಾದದ್ದು ಎಂದೆನಿಸಿದಾಗ ಅವಳ ಗಾಣದ ಸ್ಥಳದಲ್ಲಿಯೇ ಪ್ರತ್ಯಕ್ಷನಾಗುತ್ತಾನೆ. ದರ್ಶನ ನೀಡಿದ ಸ್ಥಳದಲ್ಲಿಯೇ ಈಗ ಭವ್ಯ ಮಂದಿರವೊಂದು ನಿಂತಿದೆ. ಊರ ಹೊರಗಿರುವ ಮಂದಿರವೇ ಹಳೆಯದು ಎಂದು ಹೇಳಲಾಗುತ್ತದೆ. ಹೀಗೆ ಹೊರ್ತಿಯು ವಿಶಿಷ್ಟವಾದ ಸಂಗತಿಗಳನ್ನು ಮೈಗೂಡಿಸಿಕೊಂಡಿದೆ.

ಇಂಗಳೇಶ್ವರ: ಇದು ವಿಜಯಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನ ಕೇಂದ್ರದಿಂದ ದಿಂಡವಾರಕ್ಕೆ ಹೋಗುವ ಮಾರ್ಗದಲ್ಲಿ ಬರುತ್ತದೆ. ಇದು ರೇವಣಸಿದ್ಧರ ತಪಸ್ಸು ತಾಣವಾಗಿದೆ. ಈ ಊರಿಗೆ ಪ್ರವೇಶಿಸುವ ಮೊದಲೇ ಗುಡ್ಡದ ಮೇಲೆ ರೇವಣಸಿದ್ಧನ ದೇವಾಲಯ ಕಾಣುತ್ತದೆ. ಇದು ಮೊದಲು ಗುಹಾಂತ ದೇವಾಲಯವಾಗಿತ್ತು. ಇಲ್ಲಿ ದೊರಕಿರುವ ಮೂರ್ತಿಯೇ ನಿಜವಾದ ಮೂರ್ತಿ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಈ ದೇವಾಲಯದ ಗುಹೆಯ ಒಳಗಡೆ ಕರಿಯ ಬಂಡೆಯ ಮೇಲೆ ಕೋರೆ ಮೀಸೆ ಗಡ್ಡಧಾರಿ ಜಟಾಧಾರಿ ರೇವಣಸಿದ್ಧರ ಮೂರ್ತಿ ಇದೆ. ಅದು ಪದ್ಮಾಸನದಲ್ಲಿ ಕುಳಿತ ನಾಲ್ಕು ಅಡಿ ಎತ್ತರದ ಮೂರ್ತಿಯ ಮೇಲೆ ಏಳು ಹೆಡೆಯ ಸರ್ಪ ರಕ್ಷಣೆಗಿದೆ. ಹೀಗೆ ಈ ಮಠವು ಹಲವಾರು ಐತಿಹಾಸಿಕ ಸಂಗತಿಗಳಿಂದ ಕೂಡಿದೆ.

ಉಮ್ರಜ

ಇದು ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನಲ್ಲಿ ಬರುವ ಒಂದು ಹಳ್ಳಿಯಾಗಿದೆ. ಇಲ್ಲಿ ರೇವಣಸಿದ್ಧೇಶ್ವರ ಗುಡಿ ಇದೆ. ಇಲ್ಲಿ ವರ್ಷಕ್ಕೊಮ್ಮೆ ಹೇಳಿಕೆಯಾಗುತ್ತದೆ. ಇಲ್ಲಿ ಬೇರೆ ಬೇರೆ ಮೂಲಗಳ ಜನರು ಮತ್ತು ಭಕ್ತರು ಪಾಲ್ಗೊಳ್ಳುವುದನ್ನು ನೋಡಬಹುದು. ಹೀಗೆ ವಿಜಯಪುರ ಜಿಲ್ಲೆಯಲ್ಲಿ ಬರುವ ಸಿವಣಗಿ, ರೋಣಿಹಾಳು, ಮನಗೂಳಿ, ಬಳ್ಳಾವೂರು ಇತ್ಯಾದಿ ಊರುಗಳಲ್ಲಿ

ರೇವಣಸಿದ್ಧನ ಮಠಗಳು ದೊರೆಯುತ್ತವೆ. ಮುದ್ದೇಬಿಹಾಳ ತಾಲೂಕಿನ ಗಡಿಗೆ ಹೊಂದಿಕೊಂಡಿರುವಂತೆ ನೂರಕ್ಕಿಂತ ಹೆಚ್ಚು ರೇವಣಸಿದ್ಧನ ದೇವಾಲಯಗಳಿವೆ ಎಂದು ಬಿಜ್ಜರಗಿಯವರು ಹೇಳುತ್ತಾರೆ.

ಸಂಗ್ರೇಶಿಕೊಪ್ಪ

ಇದು ಬೆಳಗಾವಿಯ ಜಿಲ್ಲೆಯ ಸವದತ್ತಿ ತಾಲೂಕಿನಲ್ಲಿ ಬರುತ್ತದೆ. ಈ ಊರಲ್ಲಿ ಪ್ರತ್ಯೇಕವಾದ ಮಠವಾಗಲೀ ಗುಡಿಯಾಗಲಿ ಇಲ್ಲ. ಎರಡು ಒಡೆಯರ ಮನೆಗಳಿದ್ದು, ಈ ಮನೆಗಳ ಮಧ್ಯದಲ್ಲಿ ಒಂದು ಅಂಕಣದ ಜಗಲಿಯ ಮೇಲೆ ರೇವಣಸಿದ್ಧನ ಮೂರ್ತಿ ಇದೆ. ಈ ಮೂರ್ತಿಯು ಎದೆಯಿಂದ ಮೇಲ್ಭಾಗದ ಜಟಾಧಾರಿ, ಗಡ್ಡದಾರಿ ಮೂರ್ತಿಯಿದೆ. ಇದು ಇಂಗಳೇಶ್ವರದಲ್ಲಿ ದೊರೆಯುವ ಮೂಲ ರೇವಣಸಿದ್ಧನ ರೂಪವನ್ನೇ ಹೋಲುವ ಮೂರ್ತಿಯಾಗಿದೆ. ಈ ಮೂರ್ತಿಯ ತಲೆಯ ಮೇಲೆ ಐದು ಹೆಡೆಯ ಸರ್ಪವಿದ್ದು, ಬೆತ್ತವನ್ನು ಹಿಡಿದಂತೆ ತೋರುತ್ತದೆ. ಇಲ್ಲಿನ ಹಿರಿಯ ಒಡೆಯರನ್ನು ಕೇಳಿದರೆ ನಾವು ಸರೂರಿನಿಂದ ಬಂದವರು, ಕೆಲವರು ಇಲ್ಲಿಯಿಂದಲೇ ಹಾವೇರಿ ಜಿಲ್ಲೆಯ ಬಂಕಾಪುರಕ್ಕೆ ಹೋದರು ಎಂದು ವಿವರಿಸುತ್ತಾರೆ. ಇಲ್ಲಿ ವಿಶೇಷವಾಗಿ ಶ್ರಾವಣಮಾಸದ ಕಡೆಯ ಸೋಮವಾರ ದಿನದಂದು ಜಾತ್ರೆ ನಡೆಯುತ್ತದೆ.

ಹಿರೇಕುಂಬಿ

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನಲ್ಲಿ ಹಿರೇಕುಂಬಿ ಕಂಡುಬರುತ್ತದೆ. ಈ ಊರಲ್ಲಿ ಅಮೋಘಸಿದ್ಧನ ದೊಡ್ಡ ದೇವಸ್ಥಾನವಿದೆ. ಹಾಗೆಯೇ ರೇವಣಸಿದ್ಧನ ಚಿಕ್ಕದಾದ ಒಂದು ದೇವಾಲಯವಿದೆ. ಈ ಊರಿನ ಒಡೆಯರಿಗೆ ಸಂಗ್ರೇಶಿ ಕೊಪ್ಪದಲ್ಲಿ ಕೊಡುಕೊಳ್ಳುವಿಕೆಯಿರುವುದು ಕಂಡುಬರುತ್ತದೆ. ಇಲ್ಲಿ ಪ್ರತಿದಿನ ಪೂಜೆ ಕಾರ್ಯಗಳು ನಡೆಯುತ್ತವೆ. ವಿಶೇಷವಾಗಿ ಹುಣ್ಣಿಮೆ ಅಮವಾಸೆಗೆ ಪೂಜೆ ನಡೆಯುತ್ತದೆ. ವರ್ಷಕ್ಕೊಂದು ಸಾರಿ ಜಾತ್ರೆಯನ್ನು ನಡೆಸುತ್ತಾರೆ.

ಗೋವನಕೊಪ್ಪ

ಬೆಳಗಾವಿ ಜಿಲ್ಲೆಯ ಬೈಲಹೊಗಲ ತಾಲೂಕಿನಲ್ಲಿ ಗೋವನ ಕೊಪ್ಪ ಗ್ರಾಮವು ಕಂಡುಬರುತ್ತದೆ. ಈ ಊರಲ್ಲಿ ರೇವಣಸಿದ್ಧನ ಸಂಪ್ರದಾಯದ ಸುಮಾರು '೩೫' ಒಡೆಯರ ಕುಟುಂಬಗಳಿವೆ ಎಂದು ತಿಳಿದುಬಂದಿದೆ. ಈ ಎರಡು ಕುಟುಂಬದವರು ಮಾತ್ರ ರೇವಣಸಿದ್ಧನ ಪೂಜೆಯನ್ನು ಮಾಡಿಕೊಂಡು ಬರುತ್ತಾರೆ. ಜೊತೆಗೆ ಪಾರಂಪರಿಕವಾಗಿ ರೂಢಿಸಿಕೊಂಡು ಬಂದಿರುವ ಹಾಲುಮತ ಜನಾಂಗದವರಿಗೆ ಗುರುಗಳಾಗಿ ಅವರ ಧಾರ್ಮಿಕ ಕಾರ್ಯಗಳನ್ನು ಪೂರೈಸಿಕೊಡುವ ಗುರುಒಡೆಯ ರಾಗಿದ್ದಾರೆ. ಇಲ್ಲಿ ದಸರಾ ಹಬ್ಬದ ಸಂದರ್ಭದಲ್ಲಿ ರೇವಣಸಿದ್ಧನ ಜಾತ್ರೆ, ಉತ್ಸವ ನಡೆಯುತ್ತದೆ. ಈ ಊರಿನ ಪೂರ್ವದಿಕ್ಕಿನಲ್ಲಿ ಅನತಿ ದೂರದಲ್ಲಿ ಇರುವ ಬನ್ನಿ ಮರದವರೆಗೆ ರೇವಣಸಿದ್ಧೇಶ್ವರ

ಪಲ್ಲಕ್ಕಿಯನ್ನು ತೆಗೆದುಕೊಂಡು ಹೋಗಿ ಶಮಿಗೆ ಪೂಜೆಯನ್ನು ಸಲ್ಲಿಸಿ, ಬನ್ನಿಯನ್ನು ಮುಡಿಯುವುದು ಇಲ್ಲಿಯ ವಾಡಿಕೆಯಾಗಿದೆ. ಅಲ್ಲಿನ ಹಿರಿಯರು ಹೇಳುವಂತೆ "ಸುತ್ತಮುತ್ತ ಅರವತ್ತು ಹಳ್ಳಿಗಳ ಹಾಲುಮತದವರಿಗೆ ನಾವು ಗುರುಗಳಾಗಿರುವುದೆಂದು ಹೇಳುತ್ತಾರೆ. ಇವುಗಳಲ್ಲಿ ಕೆಲವು ಒಡೆಯರ ಊರುಗಳೆಂದರೆ ಗೋಕಾಕ ತಾಲೂಕಿನ ಕೌಜಲಗಿ, ವಡ್ರಟ್ಟಿ ಉದಗಟ್ಟಿ, ಬೆಂಡವಾಡ ಮುಂತಾದ ಊರುಗಳಲ್ಲಿಯೂ ಒಡೆಯರ ಕುಟುಂಬಗಳಿವೆ"[೯] ಎಂದು ಹೇಳಿದ್ದಾರೆ.

ಹಿರೇನಶಿಬಿ

ಇದು ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನಲ್ಲಿರುವ ಗ್ರಾಮವೇ ಈ ಹಿರೇನಶಿಬಿ. ಇದು ರೇವಣಸಿದ್ಧನ ಪ್ರಸಿದ್ಧ ಮಠವಾಗಿದೆ. ಈ ಊರಿನ ದೇವಾಲಯದ ಜವಾಬ್ದಾರಿಯನ್ನು ಅಲ್ಲಿನ ಒಡೆಯರು ನೋಡಿಕೊಳ್ಳುತ್ತಾರೆ. ಅವರು ನಾವು ಸರೂರಿನ ಮೂಲದವರು ಎಂದು ಹೇಳಿಕೊಳ್ಳುತ್ತಾರೆ. ಈ ಊರಿನ ವಿಶೇಷವಾಗಿ ಪ್ರತಿವರ್ಷ ಶ್ರಾವಣದ ಕೊನೆಯ ಸೋಮವಾರದಂದು ರೇವಣಸಿದ್ಧನ ಜಾತ್ರೆ–ಉತ್ಸವ ನಡೆಯುತ್ತದೆ.

ಈ ಜಾತ್ರೆಯ ಸಮಯದಲ್ಲಿ ರೇವಣಸಿದ್ಧನ ಬೆಳ್ಳಿ ಮುಖವಾಡವನ್ನು ಪಲ್ಲಕ್ಕಿಯಲ್ಲಿ ಇಟ್ಟುಕೊಂಡು ಮೆರವಣಿಗೆ ಮಾಡುತ್ತಾರೆ. ಇಲ್ಲಿಯ ಮತ್ತೊಂದು ಸಂಗತಿಯೇನೆಂದರೆ ಹಿರೇನಶಿಬಿಯಿಂದ ಮುಂದೆ ಎರಡು ಕಿ.ಮಿ. ಅಂತರದಲ್ಲಿ ಚಿಕ್ಕನಶಿಬಿ ಇದ್ದು, ಈ ಎರಡೂ ಊರುಗಳ ಮಧ್ಯ ಗುಡ್ಡದಲ್ಲಿ ಚಿಕ್ಕದಾದ ರೇವಣಸಿದ್ಧೇಶ್ವರನ ದೇವಸ್ಥಾನವಿದೆ. ಅದಕ್ಕೂ ಇವರೇ ಪೂಜೆ ಮಾಡಿಕೊಂಡು ಬರುವ ಸಂಪ್ರದಾಯವಿದೆ. ಇವರ ಕೊಡುಕೊಳ್ಳುವಿಕೆಯ ಸಂಬಂಧಗಳು ಸರೂರು, ಸಂಗ್ರೇಶಿಕೊಪ್ಪ, ಬಾದಾಮಿ ಹಾಲಗೇರಿ ಇತ್ಯಾದಿ ಊರುಗಳಲ್ಲಿ ಇವರ ಸಂಬಂಧವಿದೆ.

ಚಿಕ್ಕ ನರಗುಂದ

ಗದಗ ಜಿಲ್ಲೆಯ ನರಗುಂದ ತಾಲೂಕಿನ ಚಿಕ್ಕನರಗುಂದ ಗ್ರಾಮದಲ್ಲಿ ರೇವಣಸಿದ್ಧೇಶ್ವರನ ಮಠವಿದೆ. ಈ ಮಠವನ್ನು ೧೯ನೇ ಶತಮಾನದಲ್ಲಿ ಬೂದಿಹಾಳದಿಂದ ಬಂದ ಮಹಾತ್ಮರೊಬ್ಬರು ಇಲ್ಲಿ ವಾಸವಾಗಿದ್ದು, ಇಲ್ಲಿಯೇ ರೇವಣಸಿದ್ಧನ ಮಠವನ್ನು ಸ್ಥಾಪನೆ ಮಾಡಿದರು. ಇವರು ರೇವಣಸಿದ್ಧನ ಸಂಬಂಧಿಕರಾಗಿದ್ದರು. ಈ ಊರಿನ ಮುಂಭಾಗದಲ್ಲಿ ಸುಂದರವಾದ ದೇವಾಲಯವಿದೆ. ವರ್ಷಕ್ಕೊಮ್ಮೆ ಇಲ್ಲಿ ಜಾತ್ರೆ ನಡೆಸುತ್ತಾರೆ.

ಅಮ್ಮಿನಭಾವಿ

ಧಾರವಾಡ ಜಿಲ್ಲೆಯ ಧಾರವಾಡ ತಾಲೂಕಿನ ಅಮ್ಮಿನಭಾವಿಯಲ್ಲಿ ಒಡೆಯರ ಎಂಟು ಕುಟುಂಬಗಳಿವೆ. ಇಲ್ಲಿ ಬಸಯ್ಯ ಸಿದ್ಧಯ್ಯ ಗುಡಿ ಎಂಬುವರ ಮನೆಯ ಆವರಣದಲ್ಲಿಯೇ ಚಿಕ್ಕದಾದ ರೇವಣಸಿದ್ಧೇಶ್ವರನ ದೇವಾಲಯವಿದೆ. ಈ ದೇವಾಲಯದ ಪೂಜೆಯನ್ನು ಇವರೇ ಹಿಂದಿನಿಂದಲೂ

ಮಾಡಿಕೊಂಡು ಬಂದಿದ್ದಾರೆ. ಇಲ್ಲಿ ನೆಲೆಸಿರುವ ಒಡೆಯರು ಯಾವುದೇ ರೀತಿಯಿಂದ ಗುರುತನದ ಕಾರ್ಯಗಳನ್ನು ಮಾಡುವುದಿಲ್ಲ, ಕೃಷಿಯನ್ನು ಅವಲಂಬಿಸಿರುವುದು ತಿಳಿದುಬರುತ್ತದೆ.

ಬಂಕಾಪುರ

ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಬಂಕಾಪುರದಲ್ಲಿ ಸರೂರ ಸಂಪ್ರದಾಯದ ಪ್ರಾಚೀನವಾದ ಮಠವಿದೆ. ಇದು ಹಾಲುಮತ ಗುರುಶಾಖಾ ಮಠಗಳಲ್ಲಿ ಇದೇ ಪ್ರಾಚೀನವಾದುದಾಗಿದೆ. ಈ ಮಠದ ಒಡೆಯರುಗಳು ಹಾವೇರಿ ಜಿಲ್ಲೆಯ ಸುಮಾರು ೩೦೦ ಹಳ್ಳಿಗಳ ಕುರುಬ ಸಮುದಾಯದವರಿಗೆ "ಕುಲಗುರುಗಳಾಗಿ ಕಾರ್ಯವನ್ನು ನಿರ್ವಹಿಸುತ್ತಿರುವುದು ತಿಳಿದುಬರುತ್ತದೆ. ಇದು ಕುರುಬ ಕುಲದ ಮೂಲ ಪುರುಷನಾದ ಮುದ್ದವ್ವ-ಮುದ್ದಗೊಂಡರ ಮೂಲ ನೆಲೆಯೆಂದೂ ಕೆಲವು ಕಾವ್ಯ ಪುರಾಣಗಳು ತಿಳಿಸುತ್ತವೆ."[೧೦] ಎಫ್.ಟಿ. ಹಳ್ಳಿಕೇರಿ ಅವರು ಹೇಳುವಂತೆ ಬಂಕಾಪುರವು "ಒಡೆಯರ ಪ್ರಾಚೀನ ನೆಲೆಯಲ್ಲಿ ಒಂದಾಗಿದೆ. ಇಲ್ಲಿರುವ ರೇವಣಸಿದ್ಧೇಶ್ವರ ಮಠವು ಹಾಲುಮತ ಪ್ರಾಚೀನ ಶಾಖಾಮಠಗಳಲ್ಲಿ ಒಂದಾಗಿದೆ. ಇಲ್ಲಿಯ ಒಡೆಯರುಗಳಾದ ಶ್ರೀ ಬಸಯ್ಯಸ್ವಾಮಿಗಳು ಕೈಯಲ್ಲಿ ಕೆಂಡವನ್ನು ಹಿಡಿದುಕೊಂಡು ಮಳೆಯನ್ನು ತರಿಸಿದರೆಂದು ಪ್ರತೀತಿ"[೧೧] ಇದೆ.

೩. ದಕ್ಷಿಣ ಕರ್ನಾಟಕದಲ್ಲಿ ರೇವಣಸಿದ್ಧನ ಮಠಗಳು

ಹಾಲುಮತ ಗುರುಪರಂಪರೆಯ ಧಾರ್ಮಿಕ ಮತ್ತು ಸಾಂಸ್ಕೃತಿಕ ಬದುಕಿನ ಪ್ರಸಾರವನ್ನು ಗಮನಿಸುವಾಗ, ಅನೇಕ ಶಾಖಾಮಠಗಳು, ರೇವಣಸಿದ್ಧನ ಮಠ ಅಥವಾ ಗುಡಿಗಳ ರೂಪದಲ್ಲಿ ವಿಸ್ತರಿಸಿಕೊಂಡಿವೆ. ಹೈದರಾಬಾದ್ ಕರ್ನಾಟಕ ಮತ್ತು ಉತ್ತರ ಕರ್ನಾಟಕಗಳಲ್ಲಿ ಇರುವಂತೆ ದಕ್ಷಿಣ ಕರ್ನಾಟಕದಲ್ಲಿಯೂ ಕಂಡುಬರುತ್ತವೆ.

೧೩. ದಾವಣಗೆರೆ ಜಿಲ್ಲೆ: ೧. ಹರಿಹರ ತಾಲೂಕಿನ- ನಾಗೇನಹಳ್ಳಿ ೨. ಜಗಳೂರು ತಾಲೂಕಿನ- ಬಿಳಿಚೋಡು.

೧೪. ಚಿತ್ರದುರ್ಗ ಜಿಲ್ಲೆ: ೧. ಚಿತ್ರದುರ್ಗ ತಾಲೂಕಿನ- ಸೊಲ್ಲಾಪುರ ೨. ಚಳ್ಳಕೆರೆ ತಾಲೂಕಿನ- ದೊಡ್ಡೇರಿ, ಕಡದರಹಳ್ಳಿ ೩. ಹಿರಿಯೂರು ತಾಲೂಕಿನ- ಹರ್ತಿಕೋಟೆ ೪. ಹೊಸದುರ್ಗ ತಾಲೂಕಿನ - ಬಾಗೂರು, ಕಾರೇಹಳ್ಳಿ, ಶ್ರೀರಾಂಪುರ, ನಗರಗೆರೆ, ಗೂಳಿಹಳ್ಳಿ,

೧೫. ತುಮಕೂರು ಜಿಲ್ಲೆ: ೧. ತುಮಕೂರು ತಾಲೂಕಿನ- ಬೆಳ್ಳಾವಿ, ದಾಸಮುದ್ದನಹಳ್ಳಿ ೨. ಚಿಕ್ಕನಾಯಕನಹಳ್ಳಿ ತಾಲೂಕಿನ- ಚಿಕ್ಕನಾಯಕನಹಳ್ಳಿ, ಕಂದಿಗೆರೆ, ಹಂದನಕೆರೆ, ಯಳನಾಡು, ಹುಳಿಯಾರು ೩. ಶಿರಾ ತಾಲೂಕಿನ- ಶಿರಾ ೪. ತುರುವೇಕೆರೆ ತಾಲೂಕಿನ- ತುರುವೇಕೆರೆ ೫. ಕೊರಟಗೆರೆ ತಾಲೂಕಿನ- ಅಕ್ಕಿರಾಂಪುರ ೬. ಪಾವಗಡ ತಾಲೂಕಿನ- ಜಾಲೋಡು ೭. ಕುಣಿಗಲ್

ತಾಲೂಕಿನ– ಆದಿಶೆಟ್ಟಿಹಳ್ಳಿ ೮. ತಿಪಟೂರು ತಾಲೂಕಿನ– ಹೊನ್ನವಳ್ಳಿ ೯. ಗುಬ್ಬಿ ತಾಲೂಕಿನ– ೧. ಹಾಗಲವಾಡಿ–೧, ೨. ಹಾಗಲವಾಡಿ–೨, ೩. ಮೂಗನಾಯಕನ ಕೋಟೆ.

೧೬. ಚಿಕ್ಕಮಗಳೂರು ಜಿಲ್ಲೆ: ೧. ತರೀಕೆರೆ ತಾಲೂಕಿನ– ತರೀಕೆರೆ, ಶಿವನಿ ೨. ಕಡೂರು ತಾಲೂಕಿನ– ಆಸಂದಿ, ಕಡೂರು, ಚೌಳುಹಿರಿಯೂರು, ಸಖರಾಯಪಟ್ಟಣ, ದೇವನೂರು, ಮತ್ತಿಗಟ್ಟ.

೧೭. ಹಾಸನ ಜಿಲ್ಲೆ: ಅರಸಿಕೆರೆ ತಾಲೂಕಿನ– ಬಾಣಾವರ, ಜಾವಗಲ್, ಕೆಂಕೆರೆ, ಸಂತೆಶಿವರ ೨. ಚನ್ನರಾಯಪಟ್ಟಣ ತಾಲೂಕಿನ– ಅಣತಿ, ಪುರದ ಕೋಡಿಹಳ್ಳಿ ೩. ಬೇಲೂರು ತಾಲೂಕಿನ– ಕಳಸಾಪುರ, ಬೆಳವಾಡಿ.

೧೮. ಮೈಸೂರು ಜಿಲ್ಲೆ: ನಂಜನಗೂಡು ತಾಲೂಕಿನ– ಕಳಲೆ

೧೯. ಕೋಲಾರ ಜಿಲ್ಲೆ: ಗೌರಿಬಿದನೂರು ತಾಲೂಕಿನ– ಗಂಗ ಸಮುದ್ರ, ಇಗಡೂರು

೨೦. ಬೆಂಗಳೂರು ಜಿಲ್ಲೆ: ಬೆಂಗಳೂರು ಗ್ರಾಮಾಂತರ– ಹೊಸೂರು ದೊಡ್ಡಿ.

ಹೀಗೆ ದಕ್ಷಿಣ ಕರ್ನಾಟಕದ ಅನೇಕ ಊರುಗಳಲ್ಲಿ ರೇವಣಸಿದ್ಧನ ಮಠಗಳು ಕಂಡುಬರುತ್ತವೆ. ಇವುಗಳಲ್ಲಿ ಕೆಲವು ಪ್ರಮುಖವಾದಂತಹ ಮಠಗಳನ್ನೇ ಚರ್ಚಿಸುವುದಾದರೆ,

ದೊಡ್ಡೇರಿ

ಇದು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನಲ್ಲಿ ಬರುತ್ತದೆ. ಗುರುಒಡೆಯರ ಪರಂಪರೆಗೆ ಮೂಲ ಶಾಖಾ ಗುರುಮಠವನ್ನು ಹೊಂದಿರುವ ಗ್ರಾಮವಾಗಿದೆ. ಇಲ್ಲಿರುವ ರೇವಣಸಿದ್ಧನ ಮಠವು ಸುಮಾರು ೩೦೦ ವರ್ಷಗಳಷ್ಟು ಇತಿಹಾಸವನ್ನು ಹೊಂದಿದೆ. ಇದು ಈ ಊರಿನ ಮಧ್ಯಭಾಗದಲ್ಲಿದೆ. ಇದರ ಧಾರ್ಮಿಕ ಕಾರ್ಯಗಳನ್ನು ಪ್ರಕಾಶ ಒಡೆಯರು ನಡೆಸಿಕೊಂಡು ಬರುತ್ತಿದ್ದಾರೆ. ಈ ದೇವಾಲಯವು ಗರ್ಭಗೃಹವನ್ನು ಹೊಂದಿದ್ದು, ಗದ್ದುಗೆಯ ಮೇಲೆ ರೇವಣಸಿದ್ಧನ ಮುಖಚಿತ್ರದ ಬೆಳ್ಳಿಯ ಪ್ರತಿಮೆಯಿದೆ. ಈ ಊರಲ್ಲಿ ನಾಲ್ಕು ಕುರುಬರ ಮನೆಗಳಿದ್ದು, ಒಂದು ಒಡೆಯರ ಮನೆಯಿದೆ. ಇಲ್ಲಿ ಹೆಚ್ಚಾಗಿ ಕುರುಬರು ಇಲ್ಲ ಏಕೆ ಎಂದು ಕೇಳಿದಾಗ, ಆಗ ಅಲ್ಲಿನ ಒಡೆಯರು ಹೇಳುವಂತೆ ಈ ಊರಲ್ಲಿ ಮುಸ್ಲಿಂ ಜನಾಂಗದವರು ಹೆಚ್ಚಾಗಿದ್ದರು. ೧೮೮೫ರ ಸುಮಾರಿನಲ್ಲಿ ಇದು ಮೈಸೂರು ರಾಜ್ಯದ ಪ್ರಮುಖ ತಾಲೂಕು ಕೇಂದ್ರವಾಗಿತ್ತು. ಆ ಕಾಲಕ್ಕೆ ಇಲ್ಲಿ ಮುಸ್ಲಿಂ ಅಧಿಕಾರಿಯ ದಬ್ಬಾಳಿಕೆಯಿಂದ ರೋಸಿಹೋದ ಜನರೆಲ್ಲ ಸೇರಿ ರಾಣಿಕೆರೆಯ ಹತ್ತಿರ ಅವನನ್ನು ಹೊಡೆದು ಸಾಯಿಸಿದರು. ಈ ಒಂದು ಕಾರಣದಿಂದ ಅವನ ಅನುಯಾಯಿಗಳಿಗೆ ಹೆದರಿ ಕುರುಬರನ್ನು ಒಳಗೊಂಡಂತೆ ಜನರು ಊರುಬಿಟ್ಟು ಹೋದರು ಎಂದು ಹೇಳುತ್ತಾರೆ.

ಈ ಊರಲ್ಲಿ ವಿಶೇಷವಾಗಿ ಪ್ರತಿವರ್ಷ ಮಹಾನವಮಿಯಂದು ಶ್ರೀ ರೇವಣಸಿದ್ಧೇಶ್ವರನ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಸಕಲ ಕುರುಬ ಸಮುದಾಯದವರು ಭಾಗವಹಿಸಿ ಜಾತ್ರೆಯನ್ನು ಅದ್ದೂರಿಯಿಂದ

ಮಾಡುತ್ತಾರೆ. ಈ ಸಂದರ್ಭದಲ್ಲಿ ದೊಡ್ಡೇರಿ ಗುರುಪೀಠಕ್ಕೆ ಸೇರಿದ "ಸಿದ್ಧಾಪುರ, ನಾಯಕನಹಟ್ಟಿ, ನೇರಲಗುಂಟೆ, ಓಬಯ್ಯನಹಟ್ಟಿ, ವನ್ನಾವಾಳ ಲಕ್ಷ್ಮೀಪುರ, ಗೋಸನಹಳ್ಳಿ, ಕಲಮರಹಳ್ಳಿ, ರಂಗವ್ವನಹಳ್ಳಿ, ಗೌರಿಪುರ, ಸೂರನಹಳ್ಳಿ, ಒಡೆಯರಹಳ್ಳಿ, ಸಾಣೆಕೆರೆ"[೧೨] ಹೀಗೆ ಇನ್ನೂ ಅನೇಕ ಊರುಗಳಲ್ಲಿ ಹಾಲುಮತ ಸಮುದಾಯದವರಿದ್ದು, ಜಾತ್ರೆಯ ಸಮಯದಲ್ಲಿ ಪಾಲ್ಗೊಂಡು ಎಲ್ಲ ಕಾರ್ಯಗಳನ್ನು ನೆರವೇರಿಸಿ ಕೊಡುತ್ತಾರೆ.

ಕಡದರಹಳ್ಳಿ

ಇದು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನಲ್ಲಿ ಬರುತ್ತದೆ. ಈ ಊರಿಗೆ ಹಿಂದೆ ರಂಗವ್ವನಹಳ್ಳಿ ಎಂಬ ಹೆಸರಿನಿಂದ ಕರೆಯಿಸಿಕೊಳ್ಳುತ್ತಿದ್ದ ಈ ಹಳ್ಳಿಯಲ್ಲೊಮ್ಮೆ ಎರಡು ಕೋಮುಗಳ ಮಧ್ಯೆ ಜಗಳ ವಾಯಿತು. ಅದರಲ್ಲಿ ಒಬ್ಬನನ್ನು ಕಡಿದು ಸಾಯಿಸಿದ್ದರು. ಅಂದಿನಿಂದ ರಂಗವನಹಳ್ಳಿಯು ಕಡಿದೋರ ಹಳ್ಳಿ>ಕಡದೊರಹಳ್ಳಿ>ಕಡದರಹಳ್ಳಿಯಾಗಿ ಬದಲಾಗಿದೆ ಎಂದು ಊರಿನ ಹಿರಿಯರು ಹೇಳುತ್ತಾರೆ. ಇಲ್ಲಿ ರೇವಣಸಿದ್ಧೇಶ್ವರನ ಚಿಕ್ಕ ಗುಡಿಯಿದೆ. ಇದರಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಪ್ರಸ್ತುತ ಸಿದ್ಧಯ್ಯ ಒಡೆಯರು ಇದರ ಪೂಜಾರಿಗಳಾಗಿದ್ದಾರೆ. ದೊಡ್ಡೇರಿ ಮತ್ತು ಕಡದರಹಳ್ಳಿಯ ಒಡೆಯರು ಅಣ್ಣ-ತಮ್ಮಂದಿರಾಗಿದ್ದಾರೆ ಎಂದು ಹೇಳುತ್ತಾರೆ. ಪ್ರತಿವರ್ಷ ದಸರದಲ್ಲಿ ರೇವಣಸಿದ್ಧನ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಜೊತೆಗೆ ಬನ್ನಿ ಮುಡಿಯುವ ಪದ್ಧತಿಯನ್ನು ರೂಢಿಸಿಕೊಂಡು ಬರುತ್ತಿದ್ದಾರೆ.

ಹೀಗೆ ಎಲ್ಲ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿರುವ ಈ ಮಠದ ವ್ಯಾಪ್ತಿಗೆ ಅನೇಕ ಊರುಗಳು ಸೇರುತ್ತವೆ. ಉದಾಹರಣೆಗೆ ವೀರಾಪುರಾ, ನಿಡುಗಲ್ಲು, ಪಾವಗಡ, ವಲಸೆ ಗುಂಡ್ಲಾರಹಳ್ಳಿ, ಕೊಂಡೆ ಐಮ್ಮನಹಳ್ಳಿ, ಸೊಲ್ಲಾಪುರ, ಉಳ್ಳಾರ್ತಿ, ಘಟಪರ್ತಿ, ಹೊನ್ನೂರು, ಕಡೇಉಡೆವು, ಕೋನಸಾಗರ, ಖಾನಾಹೊಸಹಳ್ಳಿ ಇತ್ಯಾದಿ ಊರುಗಳು ಇದರ ಅಧೀನದಲ್ಲಿ ಬರುತ್ತವೆ.

ಬಾಗೂರು

ಇದು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನಲ್ಲಿ ಬರುವ ಒಂದು ಗ್ರಾಮವಾಗಿದೆ. ರೇವಣಸಿದ್ಧೇಶ್ವರನ ದೇವಾಲಯವನ್ನೂ ಹೊಂದಿರುವ ಪ್ರಾಚೀನ ನೆಲೆಗಳಲ್ಲಿ ಇದು ಒಂದಾಗಿದೆ. ಇದರ ಪ್ರತಿಯೊಂದು ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿಕೊಂಡು ಬರುತ್ತಿರುವುದು ರೇವಣಸಿದ್ಧನ ಪರಂಪರೆಯ ಅನುಯಾಯಿಗಳಾದ ಶ್ರೀ ಶಾಂತಯ್ಯ, ರೇವಯ್ಯ ಒಡೆಯರ ಸಂತತಿಯವರು. ಇವರು ಪ್ರಾಚೀನ ಕಾಲದಿಂದಲೂ ಈ ಗುರುಪರಂಪರೆಯ ಸಂಪ್ರದಾಯವನ್ನು ಮಾಡಿಕೊಂಡು ಬಂದಿದ್ದಾರೆ. ಏಕೆಂದರೆ ಈ ಊರಲ್ಲಿ ಇರುವುದು ಇದೊಂದೆ ಒಡೆಯರ ಮನೆ. ಹಾಗಾಗಿ ಈ ದೇವಾಲಯದ ಅಥವಾ ಮಠದ ಅರ್ಚಕರಾಗಿ, ಪೀಠಾಧಿಪತಿಗಳಾಗಿ ಕಾರ್ಯವನ್ನು ನಿಭಾಯಿಸಿ ಕೊಂಡು ಬರುತ್ತಿದ್ದಾರೆ. ಇಲ್ಲಿ ಪ್ರತಿದಿನ ರೇವಣಸಿದ್ಧೇಶ್ವರನಿಗೆ ಎರಡು ಬಾರಿ ಪೂಜೆಯನ್ನು

ಮಾಡುತ್ತಾರೆ. ವಿಶೇಷವಾಗಿ ಹುಣ್ಣಿಮೆ ಅಮವಾಸೆಗೆ ಪೂಜೆ ನಡೆಯುತ್ತದೆ. ಈ ಬಾಗೂರು ರೇವಣಸಿದ್ಧೇಶ್ವರನಿಗೆ ನಡೆದುಕೊಳ್ಳುವ ಶಿಷ್ಯರ ಊರುಗಳು ಹೊಸದುರ್ಗ, ಹೊಸಹಳ್ಳಿ, ಹೊಸಮಳಲಿ, ಹಳೆಮಳಲಿ, ನಾಗೇನಹಳ್ಳಿ, ಹೊನ್ನಕೆರೆ, ಅರಳಿಹಳ್ಳಿ, ಮಾರಗೊಂಡನತಿಪ್ಪ, ಬೋಕಿಕೆರೆ, ಗೊರವಿನಕಲ್ಲು, ಕಪ್ಪಳ, ಕಂಗೊಳ್ಳಿ, ಯಾಲಕೆಪ್ಪನಹಟ್ಟಿ, ಮಾವಿನಕಟ್ಟೆ, ಹೀಗೆ ಅನೇಕ ಊರುಗಳಲ್ಲಿ ಶಿಷ್ಯ ವೃಂದದವರು ಇರುವುದಾಗಿ ತಿಳಿದುಬರುತ್ತದೆ.

ತಾಳೀಕಟ್ಟೆ

ಈ ಗ್ರಾಮವು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನಲ್ಲಿ ತಾಳೀಕಟ್ಟೆ ಬರುತ್ತದೆ. ಈ ಊರಲ್ಲಿ ಶೇ ೯೯ರಷ್ಟು ಕುರುಬರೇ ವಾಸವಾಗಿದ್ದಾರೆ. ಹೆಚ್ಚಾಗಿ ಕುರುಬ ಜನಾಂಗದವರು ಇಲ್ಲಿ ನೆಲೆಸಿರುವುದರಿಂದ ಪ್ರಾಚೀನ ಕಾಲದಿಂದಲೂ ಪೂಜೆ ಮಾಡಿಕೊಂಡು ಬಂದ ಮೂರು ಬೀರದೇವರ ದೇವಸ್ಥಾನಗಳಿವೆ. ಸುಮಾರು ೧೮–೧೯ ವರ್ಷಗಳ ಹಿಂದೆ ಕಟ್ಟಿಸಿದ ರೇವಣಸಿದ್ಧೇಶ್ವರನ ದೇವಾಲಯ ಇದೆ.

ಈ ದೇವಾಲಯದ ಪೂಜೆ ಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗುವವರು ಒಡೆಯ ರಾಗಿದ್ದಾರೆ. ಈ ಊರಲ್ಲಿ ಮೂಲತಃ ಚನ್ನಯ್ಯ ಒಡೆಯರ್, ನಿಂಗಯ್ಯ ಒಡೆಯರ್ ಮತ್ತು ಚೆಲುವಯ್ಯ ಒಡೆಯರ್ ಎಂಬುದಾಗಿ ಮೂರು ಮನೆಗಳಿದ್ದವು. ಆದರೆ ಈಗ ಅವರ ಗುರುವರ್ಗದ ಸಂತತಿ ಬೆಳೆದು ಇಪ್ಪತ್ತನಾಲ್ಕು ಒಡೆಯರ ಕುಟುಂಬಗಳಾಗಿವೆ. ಇವರು ಮೂಲತಃ ಗುರುಒಡೆಯರ ಪರಂಪರೆಗೆ ಮೂಲ ಜಿಲ್ಲೆಯಾದ ವಿಜಯಪುರದ ತಾಳೀಕೋಟೆಯವರು ಎಂದು ಹೇಳಿಕೊಳ್ಳುತ್ತಾರೆ. ನಾವು ಅಲ್ಲಿಂದ ವಲಸೆ ಬಂದು ಇಲ್ಲಿ ನೆಲೆಸಿದ್ದೇವೆ. ಏಕೆಂದರೆ ಕ್ರಿ.ಶ. ೧೫೬೫ರಲ್ಲಿ ನಡೆದ ರಕ್ಕಸ ತಂಗಡಗಿ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯವು ಸೋಲನ್ನು ಅನುಭವಿಸಿತು. ಇದರ ಪರಿಣಾಮ ದಿಂದಾಗಿ ಮುಸ್ಲಿಮರ ದೌರ್ಜನ್ಯದ ಹಾವಳಿ ಜಾಸ್ತಿಯಾಯಿತು. ಅದನ್ನು ತಪ್ಪಿಸಿಕೊಳ್ಳುವ ಸಲುವಾಗಿ ಈ ಕಡೆ ಬಂದು ನೆಲೆಸಿದ್ದೇವೆ ಎಂದು ಹೇಳಿಕೊಳ್ಳುತ್ತಾರೆ. ಈ ತಾಳೀಕಟ್ಟೆಯ ರೇವಣಸಿದ್ಧೇಶ್ವರನಿಗೆ ಪ್ರತಿದಿನ ಎರಡು ಸಾರಿ ಪೂಜೆಯನ್ನು ಮಾಡುತ್ತಾರೆ. ಇಲ್ಲಿ ಧಾರ್ಮಿಕವಾಗಿ ಆಚರಿಸುವಂತೆ ಯಾವುದೇ ಜಾತ್ರೆ, ಪಲ್ಲಕ್ಕಿ ಉತ್ಸವ ನಡೆಯುವುದಿಲ್ಲ.

ಕಾರೇಹಳ್ಳಿ

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನಲ್ಲಿ ಬರುವ ಒಂದು ಗ್ರಾಮವಾಗಿದೆ. ಇಲ್ಲಿ ಆಕರ್ಷಕವಾದ ರೇವಣಸಿದ್ಧೇಶ್ವರನ ದೇವಾಲಯವಿದೆ. ಇದು ಗರ್ಭಗೃಹ, ರಂಗಮಂಟಪಗಳನ್ನು ಒಳಗೊಂಡಿದೆ. ಇದರ ಗರ್ಭಗೃಹದ ಮುಂದುಗಡೆಯಲ್ಲಿ ಎಂಟು ಕಲ್ಲಿನ ಕಂಬಗಳನ್ನು ಹೊಂದಿರುವ ವಿಸ್ತಾರವಾದ ರಂಗ ಮಂಟಪವಿದೆ. ಈ ದೇವಾಲಯಕ್ಕೆ ಉತ್ತರ, ಪೂರ್ವ ಹಾಗೂ ಪಶ್ಚಿಮಕ್ಕೆ ಮೂರು ಪ್ರವೇಶ ದ್ವಾರಗಳು ಇರುತ್ತವೆ.

ಸರೂರಿನ ಸಂಪ್ರದಾಯಕ್ಕೆ ಸಂಬಂಧಿಸಿದ ಶಾಂತಮುತ್ತಯ್ಯನ ಸಂತತಿಯವರೇ ಈ ದೇವಾಲಯದ ಒಡೆಯರುಗಳು ಹಾಗೂ ಪೀಠಾಧಿಕಾರಿಗಳು ಆಗಿದ್ದಾರೆ. ಇಲ್ಲಿ ಒಟ್ಟು ಹದಿನೈದು ಒಡೆಯರುಗಳ ಮನೆತನಗಳು ಇರುವುದಾಗಿ ತಿಳಿದುಬರುತ್ತದೆ. ಈ ಎಲ್ಲ ಮನೆತನದ ಗುರುಒಡೆಯರುಗಳು ಸರದಿಯಂತೆ ಹಂಚಿಕೊಂಡು ಈ ರೇವಣಸಿದ್ಧೇಶ್ವರನ ಪೂಜೆ ಪುನಸ್ಕಾರಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ಇಲ್ಲಿ ಪ್ರತಿದಿನ ಮೂರು ಬಾರಿ ಪೂಜೆ ನಡೆಯುತ್ತದೆ. ಅದೇ ರೀತಿ ಪ್ರತೀವರ್ಷ 'ರೇಣುಕ ಜಯಂತಿ'ಯನ್ನು ಮಾಡುತ್ತಾರೆ. ದೀಪಾವಳಿಯಂದು ರೇವಣಸಿದ್ಧೇಶ್ವರನ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಈ ಜಾತ್ರೆ ಸಂದರ್ಭದಲ್ಲಿ ಪಲ್ಲಕ್ಕಿ ಉತ್ಸವವು ಗಂಗಾಸ್ನಾನಕ್ಕೆ ಹೋಗುತ್ತದೆ. ಗಂಗಾಪೂಜೆ ಮುಗಿದ ಮೇಲೆ ಅಲ್ಲಿ ನೆಲೆಸಿರುವ ಎಲ್ಲರಿಗೂ ಪನಿವಾರ ಮತ್ತು ವೀಳ್ಯವನ್ನು ಕೊಡುತ್ತಾರೆ. ಈ ದೇವಾಲಯಕ್ಕೆ ಸೇರಿದ ಭಕ್ತರ ಊರುಗಳೆಂದರೆ ಅಜ್ಜಿಕಂಪಸಾಗರ, ಮೆಣಸಿನೂರು, ಹಾಗಲಕೆರೆ, ಕಲ್ಲೋಳು, ಉಣೇನೂರು ಇನ್ನೂ ಮುಂತಾದ ಊರುಗಳು ಸೇರಿವೆ.

ಹರ್ತಿಕೋಟೆ

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನಲ್ಲಿ ಬರುವ ಒಂದು ಗ್ರಾಮವಾಗಿದೆ. ಈ ಊರು ಚಳ್ಳಕೆರೆ ಹಾಗೂ ಹಿರಿಯೂರಿನ ಮಾರ್ಗದ ಮಧ್ಯದಲ್ಲಿದೆ. ಈ ಗ್ರಾಮದಲ್ಲಿ ಸುಮಾರು ೨೫೦ಕ್ಕೂ ಹೆಚ್ಚು ಕುರುಬ ಸಮುದಾಯದ ಮನೆಗಳಿವೆ. ಇಲ್ಲಿ ರೇವಣಸಿದ್ಧನ ಪ್ರಾಚೀನ ದೇವಾಲಯವಿದೆ. ಅದರ ಪೀಠಾಧ್ಯಕ್ಷರು ಕೆ.ಎಸ್. ಶಿವಪ್ಪಯ್ಯ ಒಡೆಯರಾಗಿದ್ದಾರೆ. ಈ ದೇವಾಲಯದ ಅರ್ಚಕರಾಗಿ ನಾಗಯ್ಯ ಒಡೆಯರನ್ನು ನೇಮಿಸಲಾಗಿದೆ. ಹರ್ತಿಕೋಟೆ ಮತ್ತು ಕಣಜನಹಳ್ಳಿಯಲ್ಲಿರುವ ಒಡೆಯರು ಅಣ್ಣ-ತಮ್ಮಂದಿರಾಗಿದ್ದಾರೆ. ಹಾಗಾಗಿ ವರ್ಷಕ್ಕೊಬ್ಬರಂತೆ ಪೂಜಾ ಕಾರ್ಯಗಳನ್ನು ಮಾಡುವರೆಂದು ಅಲ್ಲಿನ ಹಿರಿಯರು ಹೇಳುತ್ತಾರೆ.

ದೇವಾಲಯದಲ್ಲಿ ದಿನಕ್ಕೆರಡು ಸಲ ಪೂಜೆ ಮಾಡುತ್ತಾರೆ. ಸೋಮವಾರ ಹಾಗೂ ಪ್ರತಿ ಹುಣ್ಣಿಮೆ-ಅಮವಾಸೆಗೆ ವಿಶೇಷ ಪೂಜೆಗಳು ನಡೆಯುತ್ತವೆ. ಪ್ರತಿವರ್ಷದ ದಸರದಲ್ಲಿ ರೇವಣಸಿದ್ಧನ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಈ ಮಠದ 'ಹರ್ತಿಕೋಟೆ ಶ್ರೀ ರೇವಣಸಿದ್ಧೇಶ್ವರ ಟ್ರಸ್ಟ್" ಎಂಬುದಿದೆ. ಇದರ ಮುಖ್ಯ ಉದ್ದೇಶ ಉಣ್ಣೆ ರಗ್ಗು ಉತ್ಪಾದನಾ ಕೇಂದ್ರ, ಕುರಿ ಸಾಕಾಣಿಕೆ, ಸಂಚಕಾರ ಸಂಘ, ಉಣ್ಣೆ ಕೈಮಗ್ಗದ ನೇಕಾರರ ಉತ್ಪಾದನಾ ಮತ್ತು ಮಾರಾಟಗಾರರ ಸಂಘಗಳ ಮುಖೇನವಾಗಿ ಕುರುಬ ಸಮುದಾಯದ ಉನ್ನತಿಗಾಗಿ ಅಭಿವೃದ್ಧಿಯ ಕೆಲಸಗಳನ್ನು ಮಾಡುತ್ತಿದೆ.

ಶ್ರೀರಾಮಪುರ

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನಲ್ಲಿ ಶ್ರೀರಾಮಪುರ ಬರುತ್ತದೆ. ಇಲ್ಲಿ ರೇವಣಸಿದ್ಧೇಶ್ವರ ಮತ್ತು ಬೀರೇಶ್ವರ ದೇವಸ್ಥಾನವು ಒಂದೇ ಆವರಣದಲ್ಲಿವೆ. ಒಡೆಯರ ಮೂರು ಕುಟುಂಬಗಳಿವೆ

ಇವರೇ ರೇವಣಸಿದ್ಧೇಶ್ವರನ ಪೂಜೆ ಪುರಸ್ಕಾರಗಳನ್ನು ಸರದಿಯಂತೆ ಹಂಚಿಕೊಂಡು ನಿರಂತರವಾಗಿ ಮಾಡಿಕೊಂಡು ಬಂದಿದ್ದಾರೆ. ಇಲ್ಲಿಯ ರೇವಣಸಿದ್ಧೇಶ್ವರ ದೇವಾಲಯವು ಆಕರ್ಷಕವಾದ ಶೈಲಿಯಲ್ಲಿದೆ. ಇದು ಗರ್ಭಗೃಹ, ಸಭಾಮಂಟಪವನ್ನು ಒಳಗೊಂಡಿದೆ. ಈ ದೇವಸ್ಥಾನದ ಸುತ್ತಲೂ ಐದೈದು ಕಲ್ಲಿನ ಕಂಬಗಳ ಪ್ರಾಂಗಣವಿದೆ. ಇಲ್ಲಿ ಪ್ರತಿನಿತ್ಯ ಎರಡು ಬಾರಿ ಪೂಜೆಯನ್ನು ಮಾಡುತ್ತಾರೆ. ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ 'ಕಂಥೆಸೇವೆ'ಯನ್ನು ಮಾಡುತ್ತಾರೆ. ಪ್ರತಿವರ್ಷ ರೇಣುಕ ಜಯಂತಿಯಂದು ಪಲ್ಲಕ್ಕಿ ಉತ್ಸವವನ್ನು ಮಾಡುತ್ತಾರೆ. ಈ ಮಠಕ್ಕೆ ನಾಲ್ಕು ನಿಟ್ಟು, ನಲ್ವತ್ತೆಂಟು ಹರಿವಾಣದ ಕುರುಬರು ಭಕ್ತರಾಗಿದ್ದಾರೆ. ಇವರು ಸುಮಾರು ೬೮ ಹಳ್ಳಿಗಳಲ್ಲಿ ಇರುವುದು ಕಂಡುಬರುತ್ತದೆ. ಅವು ಹೊಸದುರ್ಗ, ಕಡೂರು, ಚಿಕ್ಕನಾಯಕನಹಳ್ಳಿ, ಅರಸಿಕೆರೆ ತಾಲೂಕುಗಳಲ್ಲಿವೆ. ಪ್ರಮುಖವಾಗಿ ಹುಳಿಯೂರು, ಯಳನಾಡು, ಕಂದಿಕೆರೆ, ಚಿಕ್ಕನಾಯಕನಹಳ್ಳಿ ಇನ್ನು ಮುಂತಾದ ಊರುಗಳಲ್ಲಿ ಇರುವ ರೇವಣಸಿದ್ಧನ ಮಠಗಳಿಗೆ ಮೂಲಮಠ ಶ್ರೀ ರಾಮಪುರವಾಗಿದೆ. ಕುರುಬರ ಪ್ರತಿಯೊಂದು ಧಾರ್ಮಿಕ ಕಾರ್ಯಗಳನ್ನು ಈ ಗುರುಒಡೆಯರ ಪರಂಪರೆಯೇ ನಡೆಸಿಕೊಂಡು ಬರುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಈ ಪೌರೋಹಿತ್ಯವನ್ನು ನಿರ್ವಹಿಸಿದ್ದಕ್ಕೆ ಕುರುಬ ಶಿಷ್ಯರು ಅಥವಾ ಭಕ್ತರು ಕಾಣಿಕೆ ಹಾಗೂ ನಾಲ್ಕು ಸೇರು ರಾಗಿಯನ್ನು ಕೊಡುತ್ತಾರೆ.

ಚಿಕ್ಕನಾಯಕನಹಳ್ಳಿ

ಇದು ತುಮಕೂರು ಜಿಲ್ಲೆಯಲ್ಲಿ ಬರುವ ತಾಲೂಕ್ಕಾಗಿದೆ. ಈ ಊರಲ್ಲಿ ಹೆಚ್ಚಾಗಿ ಒಡೆಯರು ನೆಲೆಸಿದ್ದು, ಒಡೆಯರ ಪ್ರಮುಖ ನೆಲೆಯಾಗಿದೆ. ಇಲ್ಲಿ ಹಾಲುಮತ ಪರಂಪರೆಗೆ ಸಂಬಂಧಿಸಿದ ಮೂರು ಮಠಗಳಿವೆ. ೧. ರೇವಣಸಿದ್ಧೇಶ್ವರ ಮಠ ೨. ಸಿದ್ಧೇಶ್ವರ ಮಠ ೩. ಸಿದ್ಧರಾಮೇಶ್ವರ ಮಠ. ಈ ಮಠಗಳಲ್ಲಿ ಎರಡು ಶಾಂತೊಡೆಯರಿಗೆ ಸಂಬಂಧಿಸಿದ ಮಠಗಳಾದರೆ ಇನ್ನೊಂದು ಮಂಕೊಡೆಯರಿಗೆ ಸಂಬಂಧಿಸಿದ್ದಾಗಿದೆ. ಈ ಎರಡೂ ಪರಂಪರೆಯ ಮಠಗಳು ತುಂಬಾ ಪ್ರಾಚೀನವು ಅಷ್ಟೇ ವಿಶಿಷ್ಟವೂ ಆಗಿವೆ. ಈ ಮಠಗಳಲ್ಲಿ ಪ್ರತಿನಿತ್ಯ ಎರಡು ಸಲ ಪೂಜೆ ನಡೆಯುತ್ತದೆ. ಅದರೆ ವಿಶೇಷವಾಗಿ ಈ ಊರಲ್ಲಿ ಪ್ರತಿ ವರ್ಷ ಮಹಾಶಿವರಾತ್ರಿಯಂದು ರೇವಣಸಿದ್ಧೇಶ್ವರ ಮತ್ತು ಬೀರಲಿಂಗೇಶ್ವರರ ಬೆಳ್ಳಿ ಪಲ್ಲಕ್ಕಿ ಉತ್ಸವವು ನಡೆಯುತ್ತದೆ.

ವಿಶೇಷವಾಗಿ ಈ ಜಾತ್ರೆಯ ಸಂದರ್ಭದಲ್ಲಿ ಚಿಕ್ಕನಾಯಕನಹಳ್ಳಿಯ ಹಾಲುಮತ ಸಮುದಾಯ ದವರು ಆಚರಿಸುವ ಆಚರಣೆಗಳೇನೆಂದರೆ ಪ್ರಮುಖವಾಗಿ ಕಂಥಾಧಾರಣಾಸೇವೆ, ಪಲ್ಲಕ್ಕಿ ಉತ್ಸವ, ಗದ್ದಿಗೆ ಧಾವಳಿ ಜಾಡಿ ಸೇವೆ, ಚಂದ್ರ ಮಂಡಲೋತ್ಸವ, ಗಂಗೆಪೂಜೆ ಬಿಲ್ವವೃಕ್ಷ ಉತ್ಸವ, ಮಡಲಕ್ಕೆ ಪಯಣ, ಗದ್ದುಗೆ ಸೇವೆ, ಮಂಡೆಸೇವೆ, ಉಯ್ಯಾಲೋತ್ಸವ ಈ ಬಗೆಯ ಉತ್ಸವ ಆಚರಣೆಗಳು ರೇವಣಸಿದ್ಧೇಶ್ವರನ ಜಾತ್ರೆಯ ಸಂದರ್ಭದಲ್ಲಿ ಮಾಡುತ್ತಾರೆ. ಈ ಧಾರ್ಮಿಕವಾದ ಆಚರಣೆಗಳು ಈಗಲೂ ಸಂಬಂಧಿಸಿದ ಮಠಗಳ ಒಡೆಯರ ಸಮ್ಮುಖದಲ್ಲಿ ನಡೆಯುತ್ತವೆ.

ಈ ಮೂರು ಮಠಗಳು ಸೇರಿ 'ಕಂಥಾಧಾರಣೆ' ಎಂಬ ಜಾತ್ರೆಯನ್ನು ಮಾಡುತ್ತಾರೆ. ಇದನ್ನು ಹನ್ನೆರಡು ವರ್ಷಗಳಿಗೊಮ್ಮೆ ನಡೆಸುತ್ತಾರೆ. ಈ ಕಂಥಾಧಾರಣೆಯ ಸಂದರ್ಭದಲ್ಲಿ ಆಯಾ ಮಠದವರು ತಮ್ಮ ಶ್ರೀ ಬೀರಲಿಂಗೇಶ್ವರಸ್ವಾಮಿಯವರನ್ನು ಮಂಗಳ ವಾದ್ಯಗಳೊಂದಿಗೆ ಕರೆತರುವರು. ಬೀರದೇವರ ಮುಂದಾಳತ್ವವಿಲ್ಲದೆ ಶ್ರೀ ರೇವಣಸಿದ್ಧೇಶ್ವರರ ಯಾವುದೇ ಉತ್ಸವವಾಗಲಿ ಅಥವಾ ಜಾತ್ರೆಯಾಗಲಿ ನಡೆಯುವುದಿಲ್ಲ. ಇದು ಈ ಊರಿನ ವಿಶೇಷವೆನಿಸಿಕೊಳ್ಳುತ್ತದೆ. ಈ 'ಕಂಥಾ ಧಾರಣೆಯ' ಜಾತ್ರೆಯ ವಿಶೇಷವೆಂದರೆ ಗುರುರೇವಣಸಿದ್ಧೇಶ್ವರರಿಗೆ ಈ ಹಿಂದೆ ಅರ್ಪಿಸಿದ ಕಂಥೆಯು ಭಿನ್ನವಾದಾಗ ಮತ್ತೊಂದು ಹೊಸ ಕಂಥೆಯನ್ನು ಅರ್ಪಿಸುವ ಒಂದು ಆಚರಣೆಯಾಗಿದೆ. ಈ ಸಂಪ್ರದಾಯವನ್ನು ಪ್ರಾಚೀನ ಕಾಲದಿಂದಲೂ ಆಚರಿಸಿಕೊಂಡು ಬಂದಿರುವ ಸಂಗತಿಗಳು ನಮಗೆ ತಿಳಿದುಬರುತ್ತವೆ. ಏಕೆಂದರೆ ಹಾಲುಮತ ಸಮುದಾಯವು ಶ್ರದ್ಧೆ, ಭಕ್ತಿಯಿಂದ ಉಪವಾಸವಿದ್ದು ಕಂಥೆಯನ್ನು ಸಿದ್ಧಗೊಳಿಸಿದ ಹಾಗೂ ರೇವಣಸಿದ್ಧನಿಗೆ ಕಂಥೆಯನ್ನು ಅರ್ಪಿಸಿದ ವಿಚಾರಗಳು ಸಾಕ್ಷಿಯಾಗಿದೆ. ಹರಿಹರ ತನ್ನ 'ರೇವಣಸಿದ್ಧೇಶ್ವರ ರಗಳೆ' ಎಂಬ ಕೃತಿಯಲ್ಲಿ ರೇವಣಸಿದ್ಧೇಶ್ವರ ವೇಷಭೂಷಣಗಳನ್ನು ಹೀಗೆ ವರ್ಣಿಸಿದ್ದಾರೆ.

"ಕಂಥೆಯ ಕಮನೀಯ ರೂಪಂ, ವಜ್ರ ಕುಂಡಲದ ವಜ್ರಧರಂ, ಲಾಕುಳದ ಲೋಕೈಕ ಬಂಧು ಮೆಟ್ಟಿರ್ಧ, ಪಾವುಗೆಯ ಕಟ್ಟಿ ಅಧಿಕಂ, ಕೋವಣದ ಭಾವುಕಂ"[೧೩] ಎಂಬ ವರ್ಣನೆಯ ಮೊದಲ ಪದದಲ್ಲೇ ಕಂಥೆ ಎಂಬುದನ್ನು ಬಳಸಿದ್ದಾರೆ. ಅದೇ ರೀತಿ ಈ ಕಂಥೆಯ ನೆಯ್ಗೆ ಪದ್ಧತಿಯು ಜಾನಪದರ ಕಾಲದಿಂದಲೂ ಸಿಗುತ್ತದೆ ಎಂಬುದಕ್ಕೆ ಕಣ್ಣಯ್ಯನವರು ತಮ್ಮ ಲೇಖನದಲ್ಲಿ ಗುರುತಿಸಿರುವಂತೆ, ಗೊರೂರು ರಾಮಸ್ವಾಮಿ ಅಯ್ಯಂಗಾರರ ಹಳ್ಳಿಯ ಹಾಡುಗಳ ಸಂಪುಟದಲ್ಲಿ ಬಂದಿರುವಂತೆ,

"ಮಂಕಯ್ಯ ಮರುಳಯ್ಯ ಪಂಚಮುಖದ ಸಿದ್ಧಯ್ಯ
ಚಿಂತೆಯ ಬಿಡಿಸೊ ನನ್ನ ಗುರುವೆ । ರೇವಣ್ಣ
ನಿನ ಕಂತಿಗಾರತಿ ಬೆಳಗೇನು

ಹಾಗೂ

ಹಸುಮಳ್ಳುನೇದಾರು ಸೊಸೆ ಮಕ್ಳು ನೂತಾರೋ
ಚಿನ್ನದ ಕಡ್ಡೀಲಿ ಬೆದವಡೆದು । ನೇದಾರೋ
ಸ್ವಾಮಿ ರೇವಯ್ಯನ ಖುಷಿಕಂತೆ"[೧೪]

ಎಂಬ ಹಾಡಿನಲ್ಲಿ ಕಂಥೆ ಎಂಬ ಪದ ಬಳಕೆಯಾಗಿರವುದನ್ನು ನೋಡಬಹುದು. ಒಟ್ಟಾರೆ ಚಿಕ್ಕನಾಯಕನಹಳ್ಳಿಯ ಮೂರು ಮಠಗಳು ಸೇರಿ ಈ ಕಂಥೆ ಸಿದ್ಧತೆಯನ್ನು ಸಿದ್ಧತೆ ಮಾಡಲು

ದಿನಗಳನ್ನು ನಿಗದಿ ಮಾಡುವರು. ಆನಂತರ ಇದರ ತಯಾರಿಗೆ ಬೇಕಾದ ವಸ್ತುಗಳು ಮತ್ತು ಅವುಗಳ ಜವಾಬ್ದಾರಿಯನ್ನು ತೆಗೆದುಕೊಂಡು ಬುಡಕಟ್ಟಿನವರಿಗೆ ಒಂದೊಂದು ಕೆಲಸವನ್ನು ಹಂಚುತ್ತಾರೆ. ಹೀಗೆ ಅಂಚಿದ ಕಾರ್ಯಗಳನ್ನು ಚಾಚುತಪ್ಪದೇ ನೆರವೇರಿಸಿಕೊಂಡು ಬರುತ್ತಾರೆ. ಈ ಮಠಕ್ಕೆ "ಒಕ್ಕಲಾಗಿ ಹುಳಿಯಾರು ಕುಪ್ಪರಚಿಕ್ಕುಂಪಳ್ಳಿ, ಗೌರಸಾಗರ, ಸಾದರಹಳ್ಳಿ, ಓಟಿಕೆರೆ, ಪವನಕೋಣ, ಮಾಳಿಗೆಹಳ್ಳಿ, ಬೇಲಕೆರೆ, ರಾಯಪ್ಪನ ಪಾಳ್ಯ, ಕುರುಬರ ಹಳ್ಳಿ, ಮಾರಸಂದ್ರ, ದಾಸಗೆರೆ, ಕಂಟ್ಲೆಗೆರೆ, ಮಲಗೊಂಡನಹಳ್ಳಿ, ಬಿಳಿಗೆರೆ, ಕಿಬ್ಬನಹಳ್ಳಿ, ನಡುನಳ್ಳಿ, ಬಗ್ನಳ್ಳಿ, ಹೊನ್ನೆಬಾಗಿ, ಬುಳ್ಳೇನಹಳ್ಳಿ, ಹೊಸಳ್ಳಿ, ಅಪ್ಪನಹಳ್ಳಿ"[೧೫] ಮುಂತಾದ ಊರುಗಳಲ್ಲಿ ಇರುವ ಕುರುಬ ಕುಲಬಾಂಧವರು ಈ ಮಠದ ಒಕ್ಕಲಿನವರಾಗಿದ್ದಾರೆ ಎಂದು ಬಿ.ಜಿ. ಬಿರಾದಾರ ಅವರು ಗುರುತಿಸಿದ್ದಾರೆ. (ಕುರುಬರ ಗುರುಒಡೆಯರು ಸಾಂಸ್ಕೃತಿಕ ಅಧ್ಯಯನ, ಪು. ೧೧೭).

ಯಳನಾಡು

ಇದು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ ಬರುವ ರೇವಣಸಿದ್ಧನ ನೆಲೆಯನ್ನು ಹೊಂದಿದ ಗ್ರಾಮವಾಗಿದೆ. ಈ ಊರಲ್ಲಿ ಪ್ರಾಚೀನವಾದ ರೇವಣಸಿದ್ಧೇಶ್ವರ ದೇವಾಲಯವಿದೆ. ಇದು ಗರ್ಭಗುಡಿ, ಅಂತರಾಳ, ಸಭಾಮಂಟಪವನ್ನು ಒಳಗೊಂಡಿದೆ. ಈ ರೇವಣಸಿದ್ಧನ ದೇವಾಲಯ ದಲ್ಲಿ ಎರಡು ಬೆಳ್ಳಿಯ ಮುಖವಾಡಗಳನ್ನು ಹೊಂದಿದ ಲಿಂಗಗಳಿವೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯಾದ ಟ್ರಸ್ಟ್, ಆಸ್ತಿಯಾಗಲಿ ಇರುವುದಿಲ್ಲ. ಇಲ್ಲಿ ಪ್ರತಿ ವರ್ಷ ರೇಣುಕಾ ಜಯಂತಿಯಂದು ಜಾತ್ರೆ ನಡೆಸುತ್ತಾರೆ. ೧೨ ವರ್ಷಕ್ಕೊಮ್ಮೆ ಕುಂಬಳ ಸೇವೆ ಎಂದು ದೊಡ್ಡ ಜಾತ್ರೆ ಮಾಡುತ್ತಾರೆ. ಪ್ರಸ್ತುತ ಪೂಜಾರಿಗಳಾದ ಶ್ರೀನಿವಾಸಸ್ವಾಮಿ ಒಡೆಯರು ಈ ರೇವಣಸಿದ್ಧೇಶ್ವರ ದೇವಾಲಯದ ಪೂಜೆ ಪುನಸ್ಕಾರಗಳನ್ನು ನೆರವೇರಿಸಿಕೊಂಡು ಬರುತ್ತಿದ್ದಾರೆ.

ಈ ಮಠವು ಶ್ರೀರಾಮಪುರದ ಶಾಖಾ ಮಠವಾಗಿದೆ. ಈ ಯಳನಾಡು ರೇವಣಸಿದ್ಧೇಶ್ವರ ದೇವಾಲಯಕ್ಕೆ ಅಥವಾ ಮಠಕ್ಕೆ ಸೇರಿದ ವಕ್ಕಲುಗಳಾದ ಸಿಂಗಾಪುರ, ಬಟ್ರಾಹಳ್ಳಿ, ಮರಾಟೆ ಪಾಳ್ಯ, ಕರಡಿಹಳ್ಳಿ, ಕಂಚಿಪುರ, ಕೆಟ್ಟದಾಳು ಇತ್ಯಾದಿ ಊರುಗಳು ಸೇರಿಕೊಂಡಿವೆ. ಈ ಊರುಗಳಲ್ಲಿ ನೆಲೆಸಿರುವ ಹಾಲುಮತ ಸಮುದಾಯದವರು ಯಾವುದೇ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳನ್ನು ಮಾಡುವ ಸಂದರ್ಭದಲ್ಲಿ ಈ ಮಠದ ಒಡೆಯರನ್ನು ಕರೆದುಕೊಂಡು ಹೋಗುತ್ತಾರೆ. ಸಾಮಾನ್ಯವಾಗಿ ಮದುವೆಯ ಸಂದರ್ಭದಲ್ಲಿ ಬೇರೆ ಜಾತಿಯ ಪುರೋಹಿತರನ್ನು ಕರೆಸುವುದಿಲ್ಲ. ಕುರುಬರ ಕುಲಗುರುಒಡೆಯರನ್ನೇ ಕರೆಸುತ್ತಾರೆ. ಅವರ ಸಮ್ಮುಖದಲ್ಲಿಯೇ ಪ್ರತಿಯೊಂದು ಆಚರಣೆಯ ಕಾರ್ಯಗಳು ನಡೆಯುತ್ತವೆ.

ಹಂದನಕೆರೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಬರುವ ಗ್ರಾಮವಾಗಿದೆ. ಇಲ್ಲಿ ಪ್ರಾಚೀನವಾದ ರೇವಣಸಿದ್ಧೇಶ್ವರನ ಮಠವಿದೆ. ಈ ಮಠದ ಪೂಜೆ ಪುನಸ್ಕಾರಗಳನ್ನು ಗುರುಒಡೆಯರು ಮಾಡಿಕೊಂಡು ಬರುತ್ತಿದ್ದಾರೆ. ಈ ಊರಲ್ಲಿ ಒಡೆಯರ ಸುಮಾರು ಹದಿನೈದು ಕುಟುಂಬಗಳಿವೆ. ಇಲ್ಲಿ ರೇವಣಸಿದ್ಧೇಶ್ವರನಿಗೆ ಪ್ರತಿದಿನ ಎರಡು ಬಾರಿ ಪೂಜೆಯನ್ನು ಮಾಡುತ್ತಾರೆ. ಆದರೆ ಇಲ್ಲಿ ಯಾವುದೇ ಜಾತ್ರೆ, ಪಲ್ಲಕ್ಕಿ ಉತ್ಸವ ನಡೆಯುವುದಿಲ್ಲ. ಇಲ್ಲಿಯ ವಿಶೇಷವೆಂದರೆ ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ಕಂಥೆಸೇವೆಯನ್ನು ಮಾಡುವ ಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದಾರೆ. ಈ ಆಚರಣೆಯನ್ನು ಇಲ್ಲಿನ ಶಿಷ್ಯವರ್ಗವು ಮತ್ತು ಗುರುವರ್ಗದವರು ಸೇರಿ ತಪ್ಪದೇ ಅತ್ಯಂತ ವಿಧಿಪೂರ್ವಕವಾಗಿ ಆಚರಿಸಿಕೊಂಡು ಬರುತ್ತಿದ್ದಾರೆ. ಪ್ರಸ್ತುತ ಈ ಮಠಕ್ಕೆ ಅರ್ಚಕರಾಗಿ ಕುರುಬರ ಕುಲಗುರುಗಳಾಗಿ, ಪೀಠಾಧಿಪತಿಗಳಾಗಿ, ಧಾರ್ಮಿಕ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿರುವವರು ಶ್ರೀ ಸಿದ್ಧರಾಮಯ್ಯ ಈಶ್ವರಯ್ಯ ಒಡೆಯರು ಆಗಿದ್ದಾರೆ. ಚಿಕ್ಕನಾಯಕನಹಳ್ಳಿ ತಾಲೂಕಿನ ಭಾಗದ ಜನಪದರು ರೇವಣಸಿದ್ಧನನ್ನು ಕುರಿತು ಅನೇಕ ಹಾಡುಗಳನ್ನು ಹಾಡುತ್ತಾರೆ. ಹಂದನಕರೆಯ ಲಕ್ಷ್ಮಕ್ಕಜ್ಜಿಯ ಜನಪದದ ಒಂದು ಪದ್ಯ ಹೀಗಿದೆ:

"ನಾಗಳೊಂದಿಗೆ ಆದಾವೋ ಗುರುಮಟ
ನ್ಯಾಯಗಾರರು ಕುರುಬಾರು
ನ್ಯಾಯಗಾರರು ಕುರುಬಾರ ಕೆರ‍್ಯಾಗ
ಆದಾವು ಗುರು ರೇವಣ್ಣೊರ ಗುರುಮಟ"

–ಹಂದನಕೆರೆ ಲಕ್ಷ್ಮಕ್ಕಜ್ಜಿ

ಈ ರೀತಿಯ ಪದಗಳಿಂದ ಕುರುಬರ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯವಾಗಿ, ನಿಷ್ಠೆಯಿಂದ ಪ್ರತಿಯೊಂದು ಕಾರ್ಯಗಳನ್ನು ಮಾಡಿಕೊಂಡು ಬರುತ್ತಿರುವುದು ತಿಳಿದುಬರುತ್ತದೆ.

ಹೊನ್ನವಳ್ಳಿ

ಈ ಊರು ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನಲ್ಲಿ ಬರುತ್ತದೆ. ರೇವಣಸಿದ್ಧನ ಪ್ರಾಚೀನ ನೆಲೆಗಳಲ್ಲಿ ಇದು ಒಂದಾಗಿದೆ. ಇದು ಸುಮಾರು ಮೂರು ಶತಮಾನಗಳಷ್ಟು ಇತಿಹಾಸವನ್ನು ಹೊಂದಿದ ಮಠವಾಗಿದೆ. ಇದರ ಧಾರ್ಮಿಕ ಕಾರ್ಯಗಳನ್ನು ಆರಂಭದಿಂದಲೂ ಶ್ರೀ ರೇವಣ ಒಡೆಯರು ತದನಂತರ ಆತನ ಮಕ್ಕಳು ನಿರ್ವಹಿಸುತ್ತಿದ್ದರು. ಆದರೆ ಕೆಲವರಲ್ಲಿ ಮನಸ್ತಾಪ ಉಂಟಾಗಿ ಅವರನ್ನು ತೆಗೆದು ಹಾಕಿದ್ದಾರೆ. ಪ್ರಸ್ತುತ ಈ ಮಠದ ಪ್ರತಿಯೊಂದು ಕಾರ್ಯಗಳನ್ನು ಶ್ರೀ ಬಸಪ್ಪ ಒಡೆಯರ್ ಅವರು ನೇರವೇರಿಸಿಕೊಂಡು ಬರುತ್ತಿದ್ದಾರೆ. ಇವರು ಹಾಸನ ಜಿಲ್ಲೆಯ

ಅರಸೀಕೆರೆ ತಾಲೂಕಿನ ಜೈಸಿಪುರದಿಂದ ಬಂದಿದ್ದವರಾಗಿದ್ದಾರೆ. ಇಲ್ಲಿ ರೇವಣಸಿದ್ಧೇಶ್ವರನಿಗೆ ಪ್ರತಿ ದಿನ ಎರಡು ಬಾರಿ ಪೂಜೆಯನ್ನು ಮಾಡುತ್ತಾರೆ. ಇಲ್ಲಿ ಕುರುಬರು ಪ್ರತಿದಿನ ಒಂದು ಮನೆಯವರಂತೆ ಪೂಜೆಯನ್ನು ಮಾಡಿಸುತ್ತಾರೆ. ಇದೇ ಪದ್ಧತಿಯನ್ನು ಚಿಕ್ಕನಾಯಕನಹಳ್ಳಿ ತಾಲೂಕಿನ ಯಳನಾಡು ನಲ್ಲಿಯೂ ಜಾತ್ರೆಯ ಸಂದರ್ಭದಲ್ಲಿ ಮಾಡುತ್ತಾರೆ. ವಿಶೇಷವಾಗಿ ಪ್ರತಿವರ್ಷ ಕಾರ್ತಿಕ ಮಾಸದ ಕೊನೆಯ ದಿವಸದಂದು ರೇವಣಸಿದ್ಧನ ಪಲ್ಲಕ್ಕಿ ಉತ್ಸವ ಮಾಡುತ್ತಾರೆ.

ಹಾಗಲವಾಡಿ

ಇದು ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನಲ್ಲಿ ಬರುವ ಗುರುಪರಂಪರೆಯ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಎರಡು ರೇವಣಸಿದ್ಧೇಶ್ವರನ ಮಠಗಳಿವೆ. ಇದರಲ್ಲಿ ಪ್ರಾಚೀನವಾದ ರೇವಣಸಿದ್ಧೇಶ್ವರನ ಮಠಕ್ಕೆ ಅರ್ಚಕರಾಗಿ, ಪೌರೋಹಿತರಾಗಿ ಶ್ರೀ ರೇವಣ್ಣಯ್ಯ ಒಡೆಯರು ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಆ ಭಾಗದ ಕುರುಬರ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುವ ಕುಲಗುರುಗಳಾಗಿದ್ದಾರೆ. ಇಲ್ಲಿ ವಿಶೇಷವಾಗಿ ಸೋಮವಾರದಂದು ಪೂಜೆಯನ್ನು ಮಾಡುತ್ತಾರೆ. ಜೊತೆಗೆ ಕಾರ್ತಿಕ ಮಾಸ, ಹಾಗೂ ದೀಪಾವಳಿ ಹಬ್ಬದಂದು ಪೂಜೆ ಮಾಡುತ್ತಾರೆ. ಇಲ್ಲಿ ಯಾವುದೇ ಜಾತ್ರೆ, ಪಲ್ಲಕ್ಕಿ ಉತ್ಸವಗಳು ನಡೆಯುವುದಿಲ್ಲ. ಪ್ರಸ್ತುತ ಈ ಮಠಕ್ಕೆ ಸೇರಿದ ಶಿಷ್ಯ ವರ್ಗದ ಊರುಗಳನ್ನು ಬಿ.ಜಿ. ಬಿರಾದಾರ ಅವರು ಉಲ್ಲೇಖಿಸಿರುವಂತೆ ಸಮುದ್ರದ ಕೋಟೆ, ಹಾಗಲವಾಡಿ ಶಿವರಾಂಪುರ, ಎಕ್ಕಲಕಟ್ಟೆ, ಕೋಡಿಹಳ್ಳಿ, ಕುರಿಹಳ್ಳಿ, ಹುಚ್ಚೇನಹಳ್ಳಿ, ಓಬಳಾಪುರ, ಅಣೆಹಳ್ಳಿ, ಶಿವಪುರ, ಮಲ್ಲಾಪುರ, ಮತ್ತಿಕೆರೆ, ಜುಂಜಪ್ಪನಹಳ್ಳಿ, ಸಿದ್ಧರಾಮಪುರ ಮುಂತಾದ ಹಳ್ಳಿಗಳಲ್ಲಿ ಕುರುಬರು ಇದ್ದಾರೆ. ಈ ಊರುಗಳಲ್ಲದೆ ಇನ್ನು ಕೆಲವಾರು ಊರುಗಳಲ್ಲಿ ಗುರುಒಡೆಯರ ಜನಾಂಗದವರು ಇರುವುದಾಗಿ ತಿಳಿದುಬರುತ್ತದೆ. ಅವುಗಳಲ್ಲಿ ಕೊರಟಗೆರೆ ತಾಲೂಕಿನ ಅಕ್ಕಿರಾಂಪುರ, ಪಾವಗಡ ತಾಲೂಕಿನ ಜಾಲೋಟ, ತುಮಕೂರು ತಾಲೂಕಿನ ಬೆಳ್ಳಾವೆ, ದಾಸಮುದ್ದಯ್ಯನಹಳ್ಳಿ"[೧೯] ಮುಂತಾದ ಊರುಗಳಲ್ಲಿ ಈ ಒಡೆಯರ ಕುಟುಂಬಗಳಿರುವುದು ಕಂಡುಬರುತ್ತದೆ.

ಶಿವನಿ

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನಲ್ಲಿ ಬರುವ ಒಂದು ಗ್ರಾಮವಾಗಿದೆ. ಇಲ್ಲಿ ಪ್ರಾಚೀನವಾದ ರೇವಣಸಿದ್ಧನ ಮಠವಿದ್ದು, ಇದರ ಪ್ರತಿಯೊಂದು ಧಾರ್ಮಿಕ ಕಾರ್ಯಗಳನ್ನು ಶ್ರೀ ರೇವಪ್ಪಯ್ಯ ಒಡೆಯರ ಕುಟುಂಬದವರೇ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಇವರ ಸಂತತಿಯ ಮೂರು ಕುಟುಂಬಗಳಿವೆ. ಹಾಗಾಗಿ ಇವರು ಬೇಧ ಭಾವವಿಲ್ಲದೇ ಸರದಿಯಂತೆ ಇಲ್ಲಿಯ ರೇವಣಸಿದ್ಧೇಶ್ವರನ ಪೌರೋಹಿತ್ಯವನ್ನು ಮಾಡಿಕೊಂಡು ಬರುತ್ತಿದ್ದಾರೆ. ಆದರೆ ವಿಷಾದದಾಯಕ ವಿಚಾರವೇನೆಂದರೆ, ಇತ್ತೀಚೆಗೆ ಈ ಮಠಕ್ಕೆ ಸಂಬಂಧಿಸಿದ ಆಸ್ತಿಯ ವಿಚಾರವಾಗಿ ಒಡೆಯರಿಗೂ

ಮತ್ತು ಅಲ್ಲಿನ ಕುರುಬರಿಗೂ ಮನಸ್ತಾಪವಾಗಿ, ರೇವಣಸಿದ್ಧೇಶ್ವರ ದೇವಾಲಯಕ್ಕೆ ಬೀಗ ಹಾಕಿರುವುದು ತಿಳಿದುಬರುತ್ತದೆ. ಪ್ರಸ್ತುತ ಈ ಮಠಕ್ಕೆ ಸೇರಿದ ಬುಡಕಟ್ಟುಗಳೆಂದರೆ ಹೊಳಲ್ಕೆರೆ ತಾಲೂಕಿನ ತಾಳೀಕಟ್ಟೆ, ತರೀಕೆರೆ ತಾಲೂಕಿನ ಸೊಲ್ಲಾಪುರ, ಮಗಳಿ, ಹೊಸೂರು ಗಡಿಗಳ್ಳಿ ಇತ್ಯಾದಿ.

ಆಸಂದಿ

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನಲ್ಲಿ ಬರುವ ಒಂದು ಗ್ರಾಮವಾಗಿದೆ. ಈ ಆಸಂದಿಯಲ್ಲಿ ಪ್ರಾಚೀನ ಕಾಲದಿಂದಲೂ ರೇವಣಸಿದ್ಧೇಶ್ವರನ ಗುರುಮಠವಿದ್ದು, ಇತ್ತೀಚೆಗೆ ೧೯೯೧ರಲ್ಲಿ ಹೊಸದಾದ ರೇವಣಸಿದ್ಧೇಶ್ವರ ದೇವಾಲಯವನ್ನು ಕಟ್ಟಿಸಲಾಗಿದೆ. ಈ ಊರಲ್ಲಿ ಸುಮಾರು ಹನ್ನೆರಡು ಒಡೆಯರ ಕುಟುಂಬಗಳಿವೆ. ಇವರೇ ಒಂದೊಂದು ಕುಟುಂಬದವರು ಒಂದೊಂದು ವರ್ಷ ಪೂಜೆ ಕಾರ್ಯಗಳನ್ನು ನೆರವೇರಿಸಿಕೊಂಡು ಹೋಗುತ್ತಿದ್ದಾರೆ. ಈ ರೇವಣಸಿದ್ಧೇಶ್ವರನಿಗೆ ಪ್ರತಿದಿನ ಮೂರು ಬಾರಿ ಪೂಜೆಯನ್ನು ಮಾಡುತ್ತಿರುವುದು ವಿಶೇಷ ಸಂಗತಿಯಾಗಿದೆ. ಪ್ರತಿ ದಸರ ಹಬ್ಬದ ಸಂದರ್ಭದಲ್ಲಿ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಈ ಮಠಕ್ಕೆ ಸಂಬಂಧಿಸಿದ ಒಡೆಯರುಗಳ ಮತ್ತು ಕೆಲವು ಕುಟುಂಬಗಳು ಕಡೂರಿನಲ್ಲಿ ನೆಲೆಸಿರುವುದು ತಿಳಿದುಬರುತ್ತದೆ.

ಅಣತಿ

ಇದು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನಲ್ಲಿ ಬರುತ್ತದೆ. ಈ ಗ್ರಾಮದಲ್ಲಿ ಪ್ರಾಚೀನವಾದ ರೇವಣಸಿದ್ಧನ ದೇವಾಲಯವಿದೆ. ಇದು ಸುಮಾರು ೧೯ನೆಯ ಶತಮಾನದಲ್ಲಿ ಕಟ್ಟಿಸಿರುವುದೆಂದು ಹೇಳುತ್ತಾರೆ. ಈ ದೇವಾಲಯ(ಮಠ)ದ ಅರ್ಚಕರಾಗಿ ಶ್ರೀ ಗುರುಸಿದ್ಧಲಿಂಗಯ್ಯ ಒಡೆಯರ್ ಎಂಬುವರು ಕಾರ್ಯನಿರ್ವಹಿಸಿಕೊಂಡು ಬರುತ್ತಿದ್ದಾರೆ. ಈ ರೇವಣಸಿದ್ಧೇಶ್ವರನಿಗೆ ಪ್ರತಿದಿನ ಎರಡು ಬಾರಿ ಪೂಜೆಯನ್ನು ಮಾಡಿಕೊಂಡು ಬರುತ್ತಿದ್ದಾರೆ. ವಿಶೇಷವಾಗಿ ರೇಣುಕ ಜಯಂತಿ ಮತ್ತು ಮಹಾಶಿವರಾತ್ರಿಯ ಸಂದರ್ಭದಲ್ಲಿ ಪಲ್ಲಕ್ಕಿ ಉತ್ಸವಗಳು ನಡೆಯುತ್ತವೆ. ಈ ಅಣತಿಯ ಸುತ್ತಮುತ್ತಲಿನ ಪರಿಸರದ ಹಾಲುಮತ ಸಮುದಾಯದವರೆಲ್ಲ ಸೇರಿ ಗುರು ವರ್ಗದವರೊಂದಿಗೆ ಕೂಡಿ 'ಕಂಥೆಧಾರಣೆ' ಯನ್ನು ಮಾಡುತ್ತಾರೆ. ಜೊತೆಗೆ ಈ ಪ್ರದೇಶದಲ್ಲಿ ಹಾಲುಮತಸ್ಥರಿಗೆ ಸಂಬಂಧಿಸಿದ ಸಭೆ, ತೀರ್ಮಾನಗಳು ಇದ್ದಲ್ಲಿ ಈ ಅಣತಿ ಮಠದ ಗುರುಗಳಿಗೆ ತಪ್ಪದೇ ಪತ್ರಗಳನ್ನು ಬರೆಯುತ್ತಿದ್ದರು. ಏಕೆಂದರೆ ಅಷ್ಟು ಪ್ರಾಮುಖ್ಯತೆಯನ್ನು ಈ ಮಠದ ಗುರುಒಡೆಯರಿಗೆ ಕೊಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಕ್ಷೇತ್ರ ಕಾರ್ಯದಲ್ಲಿ ದೊರೆತ ದಾಖಲೆ ಪತ್ರ ಈ ರೀತಿಯಾಗಿದೆ. ಆ ಭಾಗದ ಹಾಲುಮತ ಜನಾಂಗವು ಮಾಡುತ್ತಿರುವ ಆಹಾರ, ವ್ಯವಹಾರಗಳ ಮಾನ್ಯತೆಯನ್ನು ಸರಿಪಡಿಸಲು, ಶುದ್ಧವಾದ ಸಾಂಸ್ಕೃತಿಕ ಆಚರಣೆಗಳನ್ನು ಮಾಡುವ ಸಲುವಾಗಿ ಸಭೆ ಸೇರಿಸಿ, ಸೂಚನೆ ನೀಡುವ ಪ್ರಯುಕ್ತ ಈ ಪತ್ರ ಬರೆಯಲಾಗಿದೆ. ಈ ಪತ್ರದಲ್ಲಿ ಉಲ್ಲೇಖಿಸಿರುವಂತೆ 'ಚನ್ನರಾಯಪಟ್ಟಣದ ತಾಲೂಕು ದಂಡಿಗನಹಳ್ಳಿ

ಹೋಬಳಿ ಬೆಟ್ಟದ ಸಮುದ್ರವಳ್ಳಿ ಗ್ರಾಮದಲ್ಲಿ ತಾರೀಕು ೯.೯.೧೯೨೯ನೇ ಭಾನುವಾರದ ಲಾಗಾಯಿತು ಎರಡು ಮೂರು ದಿವಸಗಳವರೆಗೆ ಸಭೆ ನಡೆಯಬೇಕೆಂದು ಈ ಮತಕ್ಕೆ ಸಂಬಂಧಪಟ್ಟ ಸರವೂರು ಶ್ಯಾಖ ಆಸಂದಿಗಿ ಸಿಂಹಾಸನದ ಗುರುಗಳು ಕಡೂರಿನಲ್ಲಿ ಬಿಜಮಾಡಿರುವ ಸಿದ್ಧರಾಮಪ್ಪ ಒಡೆಯರು ಅಣತಿ ಮಠದ ಗುರುಗಳು, ವಳಗರೆ ಹಳ್ಳಿಯಲ್ಲಿ ಬಿಜಮಾಡಿರುವ ಶಾಂತಪ್ಪವಡೆಯರು ಈ ಸಭೆ ನಡೆಸಬೇಕೆಂದು ಬೇಡುತ್ತೇವೆ' ಎಂದು ಈ ಪತ್ರದಲ್ಲಿ ಬರೆಯಲಾಗಿದೆ. ಈ ಅಣತಿ ಮಠದ ಶಿಷ್ಯರುಗಳ ಊರುಗಳೆಂದರೆ ವಳಗೆರೆಹಳ್ಳಿ ಕೋಡಿಹಳ್ಳಿ, ಕಾರೇಹಳ್ಳಿ, ಚಟ್ನಿಹಳ್ಳಿ, ಬೈರಾಪುರ, ಆದೀಹಳ್ಳಿ, ನವಿಲೆ, ವಳಗೆರೆಹಳ್ಳಿ, ಕಾಮನಾಯಕನ ಹಳ್ಳಿ, ಕೊಪ್ಪಲು, ಕಕ್ಕೇಹಳ್ಳಿ ಇನ್ನೂ ಮುಂತಾದ ಊರುಗಳಲ್ಲಿ ಇರುವುದು ಕಂಡುಬರುತ್ತದೆ.

ಕೆಂಕೆರೆ

ಇದು ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನಲ್ಲಿ ಬರುತ್ತದೆ. ಇಲ್ಲಿ ರೇವಣಸಿದ್ಧೇಶ್ವರನ ಮಠವಿದೆ. ಇದರ ಧಾರ್ಮಿಕವಾದ ಪೂಜೆ ಕಾರ್ಯಗಳನ್ನು ಪ್ರಸ್ತುತ ಗುರುಸಿದ್ಧಯ್ಯ ಒಡೆಯರು ಮತ್ತು ದೊಡ್ಡರೇವಯ್ಯ ಒಡೆಯರು ನೆರವೇರಿಸಿಕೊಂಡು ಬರುತ್ತಿದ್ದಾರೆ. ಇಲ್ಲಿ ರೇವಣಸಿದ್ಧೇಶ್ವರನಿಗೆ ಪ್ರತಿ ಸೋಮವಾರದಂದು ಪೂಜೆ ನಡೆಯುತ್ತದೆ. ವಿಶೇಷವಾಗಿ ಪ್ರತಿವರ್ಷ ಮಹಾಶಿವರಾತ್ರಿ, ರೇಣುಕ ಜಯಂತಿ, ಕನಕ ಜಯಂತಿಯ ಸಂದರ್ಭದಲ್ಲಿ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಆದರೆ ಇತ್ತೀಚೆಗೆ ಈ ಮಠದ ಒಡೆಯರುಗಳನ್ನು ನೈತಿಕ ಆರೋಪದ ಮೇಲೆ ವಜಾಗೊಳಿಸಿರುವುದು ತಿಳಿದುಬರುತ್ತದೆ.

ತುರುವೇಕೆರೆ

ಇದು ತುಮಕೂರು ಜಿಲ್ಲೆಯ ತುರುವೇಕೆರೆ ತಾಲೂಕಿನ ಕೇಂದ್ರವಾಗಿದೆ. ಇದು ಕುರುಬರ ಗುರುಒಡೆಯರ ಮೂಲ ನೆಲೆಯಲೊಂದಾಗಿದೆ. ಇಲ್ಲಿ ಐದು ಶತಮಾನಗಳಷ್ಟು ಇತಿಹಾಸವನ್ನು ಹೊಂದಿರುವ ರೇವಣಸಿದ್ಧೇಶ್ವರನ ಮಠವಿದೆ. ಇಲ್ಲಿ ತಾಮ್ರಶಾಸನ ಕ್ರಿ.ಶ. ೧೪೮೦ರಂದು ದೊರೆತಿದ್ದು, ಈ ಶಾಸನದಲ್ಲಿ ಶಾಂತೊಡೆಯರಿಗೂ ಮತ್ತು ಮಂಕೊಡೆಯರಿಗೂ ನಡೆದ ಗುರುತನದ ವಿವಾದವನ್ನು ತಿಳಿಸುತ್ತದೆ.

ಈ ಮಠದ ಪ್ರತಿಯೊಂದು ಧಾರ್ಮಿಕ ಕಾರ್ಯಗಳನ್ನು ಸಿದ್ಧಪ್ಪ ಒಡೆಯರ್, ಸಿದ್ಧಯ್ಯ ಒಡೆಯರ್ ಮತ್ತು ನಂಜಯ್ಯ ಒಡೆಯರ ಮನೆತನದವರು ಅರ್ಚನ ಕಾರ್ಯವನ್ನು ಮಾಡಿಕೊಂಡು ಬಂದಿದ್ದಾರೆ. ಆದರೆ ಪ್ರಸ್ತುತ ಚಿಕ್ಕನಾಯಕನಹಳ್ಳಿಯ ಕರಿಸಿದ್ಧಪ್ಪಯ್ಯ ಒಡೆಯರ ಮಕ್ಕಳಾದ ರೇಣುಕಾಮೂರ್ತಿಯವರು ಮಠದ ಪೂಜಾ ಕಾರ್ಯಗಳನ್ನು ನೆರೆವೇರಿಸಿಕೊಂಡು ಬರುತ್ತಿದ್ದಾರೆ. ಇಲ್ಲಿ ಯಾವುದೇ ಜಾತ್ರೆ, ಪಲ್ಲಕ್ಕಿ ಉತ್ಸವ ನಡೆಯುವುದಿಲ್ಲ.

ಹೀಗೆ ಕರ್ನಾಟಕದಲ್ಲಿ ಕಂಡುಬರುವ ರೇವಣಸಿದ್ಧನ ಮಠ ಅಥವಾ ದೇವಾಲಯಗಳು ಸರೂರಿನ ಹಾಲುಮತ ಸಂಪ್ರದಾಯದ ಗುರುಒಡೆಯರ ಪರಂಪರೆಯನ್ನು ವಿಸ್ತರಿಸಿವೆ. ಇವು ಪ್ರತಿಯೊಂದು ಧಾರ್ಮಿಕವಾಗಿ ಆಚರಿಸಿಕೊಂಡು ಬರುತ್ತಿರುವ ಪಾರಂಪರಿಕ ಸಂಪ್ರದಾಯಗಳನ್ನು ಬಿಟ್ಟು ಬಂದಿಲ್ಲ. ಅವುಗಳನ್ನು ರೂಢಿಸಿಕೊಂಡು ಬಂದಿರುವುದನ್ನು ಕಾಣಬಹುದು. ಈ ಸರೂರಿನ ಗುರುಒಡೆಯರ ಪರಂಪರೆಯವರು ಕರ್ನಾಟಕ ಒಂದೇ ಅಲ್ಲದೇ ಆಂಧ್ರದಲ್ಲಿಯೂ ಈ ಸಂಪ್ರದಾಯದ ಗುರುಒಡೆಯರು ಕಂಡುಬರುತ್ತಾರೆ. ಅಲ್ಲಿಯೂ ರೇವಣಸಿದ್ಧೇಶ್ವರನ ದೇವಾಲಯ ಅಥವಾ ಮಠಗಳು ಕಂಡುಬರುತ್ತವೆ.

ಆಂಧ್ರಪ್ರದೇಶದ ಗಡಿನಾಡ ಭಾಗದಲ್ಲಿ ದೊರೆತ ರೇವಣಸಿದ್ಧನ ಮಠಗಳು

ಸರೂರ ಸಂಪ್ರದಾಯದ ಗುರುಒಡೆಯರ ಪರಂಪರೆಯು ಕರ್ನಾಟಕದಲ್ಲಿ ಒಂದೇ ಅಲ್ಲದೆ ಆಂಧ್ರಪ್ರದೇಶದಲ್ಲಿಯೂ ಈ ಪರಂಪರೆಯವರು ನೆಲೆಸಿದ್ದಾರೆ. ರೇವಣಸಿದ್ಧನ ಮಠ ಅಥವಾ ದೇವಾಲಯದ ಮೂಲಕ ಸರೂರ ಸಂಪ್ರದಾಯದ ಭೌಗೋಳಿಕ ವ್ಯಾಪ್ತಿಯನ್ನು ವಿಸ್ತರಿಸಿದ್ದಾರೆ. ಆದರೆ ಪ್ರಸ್ತುತ ಕರ್ನಾಟಕ-ಆಂಧ್ರ ಗಡಿನಾಡು ಪ್ರದೇಶದಲ್ಲಿ ವಾಸವಾಗಿರುವ ರೇವಣಸಿದ್ಧನ ಮಠಗಳನ್ನು ನೋಡುವುದಾದರೆ,

ಸೀರ್ಪಿಕೊಟ್ವಾಲು

ಇದು ಆಂಧ್ರ ಪ್ರದೇಶದ ಅನಂತಪುರಂ ಜಿಲ್ಲೆಯ ಬೆಳಗುಪ್ಪ ಮಂಡಲಕ್ಕೆ ಸೇರಿದೆ. ಕುರುಬರು ಸಾಂಸ್ಕೃತಿಕ ಬದುಕನ್ನು ರೂಢಿಸಿಕೊಂಡು ಬರುತ್ತಿರುವ ನೆಲೆಯಾಗಿದೆ. ಕಲ್ಯಾಣದುರ್ಗದಿಂದ ೩೫ ಕಿ.ಮೀ. ದೂರದಲ್ಲಿದೆ. ಊರಿಂದ ಒಂದು ಫರ್ಲಾಂಗ ದೂರದಲ್ಲಿ ರೇವಣಸಿದ್ಧನ ದೇವಾಲಯವಿದೆ. ಸುಮಾರು ಮೂರು ಶತಮಾನಗಳಷ್ಟು ಹಳೆಯ ದೇವಾಲಯವಾಗಿದೆ. ಕರ್ತನಪರ್ತಿಯ ಶಾಂತಮುತ್ತಯ್ಯ ಒಡೆಯರು ಹೇಳುವಂತೆ ಹಂಪಿಯಿಂದ ಶಿವಲಿಂಗ ಮತ್ತು ನಂದಿ ವಿಗ್ರಹಗಳನ್ನು ಮಾಡಿಸಿ ತಿರುಗು ಮಡುವಿನ ಹತ್ತಿರ ಪೂಜಿಸಿ ಜೀವಕಳೆ ತುಂಬಿಸಿಕೊಂಡು ಬಂದು ಪ್ರತಿಷ್ಠಾಪಿಸಿದ್ದೇವೆಂದು ಹೇಳಿದರು. ಇಲ್ಲಿ ಪ್ರತಿ ಹುಣ್ಣಿಮೆ, ಅಮವಾಸೆ ವಿಶೇಷ ದಿನಗಳಲ್ಲಿ ಪೂಜೆ ನಡೆಯುತ್ತದೆ. ನಾವು ಶಾಂತಮುತ್ತಯ್ಯನ ಪರಂಪರೆಯವರು ಎಂದು ಹೇಳಿಕೊಳ್ಳುತ್ತಾರೆ.

ಗೋವಿಂದವಾಡ

ಇದು ಅನಂತಪುರ ಜಿಲ್ಲೆಯ ಬೊಮ್ಮನಹಾಳು ಮಂಡಲಕ್ಕೆ ಸೇರಿದೆ. ಇಲ್ಲಿ ರೇವಣಸಿದ್ಧೇಶ್ವರ ಮಠವಿದೆ. ಇದನ್ನು ಸುಮಾರು ನೂರು-ನೂರೈವತ್ತು ವರ್ಷಗಳ ಹಿಂದೆ ಕಟ್ಟಿಸಿರಬಹುದಾಗಿದೆ. ಮಠದ ಒಳಗಡೆ ಗರ್ಭಗುಡಿಯಿದ್ದು, ಅದರಲ್ಲಿ ಶಿವಲಿಂಗದಿಂದ ಉದ್ಭವವಾದ ರೇವಣಸಿದ್ಧೇಶ್ವರನ ಪ್ರತಿಮೆ ಇದೆ. ಅದು ಸುಮಾರು ಮೂರರಿಂದ ನಾಲ್ಕು ಅಡಿ ಎತ್ತರವಾಗಿದೆ. ಆದ್ದರಿಂದ

ಭಕ್ತಾದಿಗಳಿಗೋಸ್ಕರ ಈ ಮಠವನ್ನು ಕಟ್ಟಿಸಿದ್ದಾರೆ ಎಂದು ಹೇಳುತ್ತಾರೆ. ತಂದೆಯಾದ ಪಂಪಾಪತಿ ಒಡೆಯರು ಆ ಮಠವನ್ನು ಅಂದಿನಿಂದ ಪ್ರಸ್ತುತದವರೆಗೂ ಅದರ ಧಾರ್ಮಿಕ ಪರಂಪರೆಯನ್ನು ರೂಢಿಸಿಕೊಂಡು ಬಂದಿದ್ದಾರೆ. ಬಿಜಾಪುರದಲ್ಲಿ ಬರುವ ಸರೂರಿನ ಒಡೆಯರು ನಾವು ಮೂಲತಃ ಅಣ್ಣ ತಮ್ಮಂದಿರು. ಆದರೆ ಕಾಲಾಂತರವಾಗಿ ತಮ್ಮ ತಂದೆಯವರು ಆಂಧ್ರದಲ್ಲಿ ಬಂದು ನೆಲೆಸಿರುವು ದರಿಂದ ಆ ಕಡೆ ಹೋಗುವುದನ್ನು ಬಿಟ್ಟಿದ್ದೇವೆ. ಆದರೆ ಗುರುಪರಂಪರೆಯನ್ನು ಬಿಟ್ಟಿಲ್ಲ ಎಂದು ಹೇಳಿಕೊಳ್ಳುತ್ತಾರೆ."[೧೭]

ಚಿಂತಕುಂಟ

ಇದು ಕರ್ನೂಲ್ ಜಿಲ್ಲೆಯ ಹಾಲಹರವಿ(ಆಲೂರು) ಮಂಡಲದಲ್ಲಿ ಬರುತ್ತದೆ. ೮೭೫ ಕುಟುಂಬ ಗಳನ್ನು ಹೊಂದಿರುವ ದೊಡ್ಡ ಗ್ರಾಮವಿದ್ದು, ಇಲ್ಲಿ ಶ್ರೀ ರಾಮಪ್ಪನ ದೇವಸ್ಥಾನವಿದೆ. ಇದನ್ನು ಬೀರಪ್ಪ ಎಂದು ಕರೆಯುತ್ತಾರೆ. ಅದೇ ರೀತಿ ಶ್ರೀ ಗುರುಸಿದ್ಧಲಿಂಗೇಶ್ವರಸ್ವಾಮಿಯ ದೇವಸ್ಥಾನವಿದೆ. ಇದನ್ನು ರೇವಣಸಿದ್ಧ, ಕಾರಪ್ಪನ ದೇವರು ಎಂದು ಕರೆಯುವ ವಾಡಿಕೆಯಿದೆ. ಇದು ಶತಮಾನಗಳಷ್ಟು ಹಳೆಯದಾದ ದೇವಾಲಯವಾಗಿದ್ದು, ಅದನ್ನು ಕೆಡವಿ ಸುಮಾರು ೨೫ ವರ್ಷಗಳ ಹಿಂದೆ ಹೊಸದಾಗಿ ದೇವಾಲಯವನ್ನು ಕಟ್ಟಿಸಲಾಗಿದೆ. ಈ ಮಠಕ್ಕೆ ಭಕ್ತಾದಿಗಳು ಕೊಟ್ಟಿರುವ ೧೦ ಎಕರೆ ಭೂಮಿಯಿದೆ. ಪ್ರಸ್ತುತ ಮಠದ ಸಂಪ್ರದಾಯದ ಕಾರ್ಯಗಳಿಗೆ ಅನುಗುಣವಾಗಿ, ಗೋಸ್ಬಾಳ, ನೇಮ್ಕಲ್, ಸಂಗಾಲ ಮತ್ತು ಪೆದ್ದಹುಲ್ತಿ ಇವು ಪ್ರಮುಖವಾಗಿ ಕಾರ್ಯನಿರ್ವಹಿಸಿಕೊಂಡು ಬರುತ್ತಿರುವುದನ್ನು ಈಗಲೂ ನೋಡಬಹುದು. ಈ ಮಠದ ವ್ಯಾಪ್ತಿಗೆ ಒಳಗೊಂಡಿರುವ ೧೨ ಜಗಲಿಯ ದೇವರುಗಳಿಗೆ ಇವರು ಗುರುಗಳಾಗಿದ್ದಾರೆ.

ಕರ್ತನಪರ್ತಿ

ಇದು ಅನಂತಪುರ ಜಿಲ್ಲೆಯ ಕಲ್ಯಾಣದುರ್ಗಂ ಮಂಡಲದಿಂದ ಸುಮಾರು ೧೨ ಕಿ.ಮಿ. ದೂರದಲ್ಲಿದೆ. ಇಲ್ಲಿ ಹೊಸದಾಗಿ ಕಟ್ಟಿಸಿರುವ ರೇವಣಸಿದ್ಧೇಶ್ವರ ದೇವಸ್ಥಾನವಿದೆ. ಇದರಲ್ಲಿ ರೇವಣಸಿದ್ಧೇಶ್ವರನ ಕಂಚಿನ ಪ್ರತಿಮೆ ಇದೆ. ಪ್ರತಿ ಹುಣ್ಣಿಮೆ ಅಮವಾಸ್ಯೆಯಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಜಾತ್ರೆ-ಉತ್ಸವ ಪ್ರಮುಖವಾಗಿ ದಸರ ಸಮಯದಲ್ಲಿ ನಡೆಯುತ್ತವೆ. ಇಲ್ಲಿ ಹೆಚ್ಚಾಗಿ ಕುರುಬ ಸಮುದಾಯದವರು ಸರೂರ ಗುರುಪೀಠಕ್ಕೆ ಸಂಬಂಧವಿರುವವರು ದೇವಸ್ಥಾನದ ಪೂಜಾರಿಗಳಾಗಿದ್ದಾರೆ.

ರಾಯದುರ್ಗಂ

ಅನಂತಪುರ ಜಿಲ್ಲೆಯಲ್ಲಿ ಬರುವ ಹೆಸರಾಂತ ಮಂಡಲವಿದು. ಇಲ್ಲಿ ಹಾಲುಮತ ಸಮುದಾಯಕ್ಕೆ ಸೇರಿದ ಬೀರಪ್ಪ ಮತ್ತು ರೇವಣಸಿದ್ಧನ ದೇವಾಲಯಗಳಿವೆ. ರೇವಣಸಿದ್ಧನ ದೇವಾಲಯವು ಪ್ರಾಚೀನ

ಗುಡಿಯಾಗಿದ್ದು, ರೇವಣಸಿದ್ಧನ ಮೂರ್ತಿಯನ್ನು ಹೊಂದಿರುವ ಗರ್ಭಗುಡಿಯಿದೆ. ದೇವಾಲಯದ ಮುಂದೆ ಗರುಡ ಗಂಬವಿದೆ. ಹಾಗೂ ಒಂದು ನಂದಿ ವಿಗ್ರಹವಿದೆ. ಒಡೆಯರ ಮನೆ ದೇವಾಲಯದ ಆವರಣದಲ್ಲಿಯೇ ಇದೆ. ಆದ್ದರಿಂದ ಪ್ರತಿ ದಿನ ರೇವಣಸಿದ್ಧನಿಗೆ ಬೆಳಿಗ್ಗೆ ಸಾಯಂಕಾಲ ಪೂಜೆ ಮಾಡುತ್ತಾರೆ. ಜೊತೆಗೆ ಸೋಮವಾರ ವಾರದ ಪೂಜೆ ಮಾಡಲಾಗುತ್ತದೆ. ಈ ಮಠದಲ್ಲಿನ ರೇವಣಸಿದ್ಧನಿಗೆ ಯಾವುದೇ ಜಾತ್ರೆ–ಉತ್ಸವಗಳು ನಡೆಯುತ್ತಿಲ್ಲ. ಕಾರಣ ಒಡೆಯರಿಗೆ ವಯಸ್ಸಾಗಿರುವುದರಿಂದ ಇವರು ಮೂಲತಃ ಸರೂರಿಗೆ ಸಂಬಂಧಿಸಿದ ಒಡೆಯರು ಎಂದು ಹೇಳಿಕೊಳ್ಳುತ್ತಾರೆ. “ರಾಯದುರ್ಗ ಮಂಡಲದ ರೇಕಲಗುಂಟ, ಹಿಂದೂಪುರಂ ಮಂಡಲದಲ್ಲಿ ಕಾಲಪಲ್ಲಿ, ಮಡಕಸಿರಾ ಮಂಡಲದಲ್ಲಿ ತಿರುಮದೇವುಡ ಪಲ್ಲಿ, ಗೌಡಪಲ್ಲಿ ಹೀಗೆ ಹಲವು ಪ್ರದೇಶಗಳಲ್ಲಿ ಇದರ ಪರಂಪರೆಯನ್ನು ಕಾಣಬಹುದು.”[೧೮]

ಲಕ್ಷ್ಮಿಂಪಲ್ಲಿ

ಇದು ಕುಂದುರ್ಪಿ ಮಂಡಲದಿಂದ ಸುಮಾರು ೧೦ ಕಿ.ಮೀ. ಅಂತರದಲ್ಲಿದೆ. ಇಲ್ಲಿ ದೇವಾಲಯವು ಸುಮಾರು ೨–೩ ಶತಮಾನಗಳಷ್ಟು ಹಳೆಯದಾಗಿದ್ದು, ಗರ್ಭಗುಡಿಯಲ್ಲಿ ಉದ್ಭವಲಿಂಗವಿದೆ. ಅಲ್ಲಿಯ ಒಡೆಯರಾದ ಚಿಕ್ಕಣ್ಣ ಒಡೆಯರು ಹೇಳುವಂತೆ “ಇಲ್ಲಿ ಕುರುಬರ ಗುರುಒಡೆಯರ ಮೂರು ಮನೆಗಳಿದ್ದು, ಗ್ರಾಮದ ಜನಸಂಖ್ಯೆಯ ಅರ್ಧದಷ್ಟು ಕುರುಬರಿದ್ದಾರೆ. ದೇವಾಲಯದ ಗರ್ಭಗುಡಿಯ ಮೇಲೆ ಇತ್ತೀಚೆಗೆ ಲಿಂಗದ ಮೇಲೆ ಹುತ್ತ ಬೆಳೆದಿದೆ. ಅದನ್ನು ಕೆಡವಿದಂತೆಲ್ಲ ಬೆಳೆದೇ ಬೆಳೆಯುತ್ತದೆ. ಆದ್ದರಿಂದ ಗರ್ಭಗುಡಿಯಿಂದ ಹೊರಗೆ ಪೂಜೆ ಮಾಡುತ್ತಾರೆ.”[೧೯] ಈ ಗ್ರಾಮದಲ್ಲಿ ಯುಗಾದಿ ಸಮಯದಲ್ಲಿ ಬೀರಪ್ಪನ ಜಾತ್ರೆ ನಡೆಯುತ್ತದೆ. ವಿಜಯ ದಶಮಿಯಲ್ಲಿ ರೇವಣಸಿದ್ಧನ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಪ್ರಸ್ತುತ ಈ ಧಾರ್ಮಿಕ ಕಾರ್ಯಗಳನ್ನು ಚಿಕ್ಕಣ್ಣ ಒಡೆಯರು ನೆರವೇರಿಸಿಕೊಂಡು ಬರುತ್ತಿದ್ದಾರೆ.

ಸೂರ್ಪಿ ಮಠದ ಅಣ್ಣ–ತಮ್ಮಂದಿರಾದ ಇವರು ತಮ್ಮ ಮಠದ ವ್ಯಾಪ್ತಿಯಲ್ಲಿ ಬರುವ ರುದ್ರಮ್ಮಂಪಲ್ಲಿ ತಿಪ್ಪನಪಲ್ಲಿ, ಎನುಮಲದೊಡ್ಡಿ ಅಲ್ಲಾಪುರ, ಮಾಕುಡಿಕಿ ಸಿರಿವಾಳ(ಓಬಳಾಪುರ) ಪಾತಪ್ಪನಗುಡಿ, ಪೆನಗಲ್ಲು, ಮಹಾಂತಪುರಂ, ಬಂಡಮೀರಪಲ್ಲಿ, ಚಿಂತರಪಲ್ಲಿ ತುಮಕುಂಟ, ಯರಗುಂಟ, ಕಲ್ಡಿಪಲ್ಲಿಯನ್ನು ಒಳಗೊಂಡಂತೆ ತಮ್ಮ ವ್ಯಾಪ್ತಿಗೆ ಒಳಪಟ್ಟ ಹಳ್ಳಿಗಳಿಗೆ ಗುರುಗಳು ಇವರಾಗಿದ್ದಾರೆ.

ಸಿಂದ್ವಾಳ

ಇದು ಬಳ್ಳಾರಿ ಜಿಲ್ಲೆಯ ಗಡಿಭಾಗದಲ್ಲಿ ಬರುವ ಗ್ರಾಮವಾಗಿದೆ. ಇಲ್ಲಿಯ ರೇವಣಸಿದ್ಧೇಶ್ವರ ಮಠವು ಪುರಾತನವಾದುದು. ಪ್ರಮುಖವಾಗಿ ಇದಕ್ಕೆ ಕರ್ನೂಲು ಜಿಲ್ಲೆಯ ಆದೋನಿ, ಗುಂತಕಲ್ಲು, ಗುಳ್ಯಂ ಭಾಗದಲ್ಲಿ ಹೆಚ್ಚಾಗಿ ನಡೆದುಕೊಳ್ಳುವ ಭಕ್ತಾದಿಗಳಿರುತ್ತಾರೆ. ಜೊತೆಗೆ ಇಲ್ಲಿಯ ಜನರು

ಗೋವಿಂದವಾಡ, ರೇಕಲಕುಂಟ, ಓಬಳಾಪುರಂ ಮುಂತಾದ ಮಠಗಳಿಗೆ ನಡೆದುಕೊಳ್ಳುತ್ತಾರೆ. ಈ ಎಲ್ಲಾ ಮಠಗಳು ಸರೂರಿನ ಮೂಲ ಪೀಠಕ್ಕೆ ಸಂಬಂಧವಿರುವ ಸಂಗತಿಗಳು ತಿಳಿದುಬರುತ್ತವೆ.

ಕೊಪ್ಪಳ ದೊಡ್ಡಿಯಲ್ಲಿರುವ ಸಿಂದ್ವಾಳದ ಒಡೆಯರದು ಸಿದ್ಧಲಿಂಗಯ್ಯಸ್ವಾಮಿ ಹೇಳುವಂತೆ, ಸರೂರ ರೇವಣಸಿದ್ಧ ಮೊದಲು, ಸಿಪ್ಪಿಗಿರಿಗೆ ಬಂದು ಸಿಂಧು ಅನಿಸಿ ಅಲ್ಲಿಂದ ಕರ್ನಾಟಕದಾದ್ಯಂತ ಸಂಚರಿಸಿದ ಎನ್ನುವ ಮಾತು ಆಂಧ್ರವೂ ಕೂಡ ರೇವಣಸಿದ್ಧೇಶ್ವರನ ಕಾರ್ಯಕ್ಷೇತ್ರವಾಗಿತ್ತು ಎಂಬುದಕ್ಕೆ ಸಾಕ್ಷಿಯಂತಿದೆ.

ವೇಪಲಪರ್ತಿ

ಇದು ಬ್ರಹ್ಮ ಸಮುದ್ರ ಮಂಡಲಕ್ಕೆ ಸೇರಿದ ಗ್ರಾಮವಾಗಿದೆ. ಇದು ೩೬೯೨ ಜನಸಂಖ್ಯೆಯನ್ನು ಹೊಂದಿರುವ ದೊಡ್ಡ ಗ್ರಾಮವಾಗಿದೆ. ಈ ಊರಲ್ಲಿ ಒಡೆಯರ ನಾಲ್ಕು ಕುಟುಂಬಗಳಿದ್ದು ಕುರುಬರ ಸುಮಾರು ೫೦ ಮನೆಗಳಿವೆ. ಊರಲ್ಲಿ ರೇವಣಸಿದ್ಧನ ದೇವಾಲಯವಿಲ್ಲ ಆದರೆ ಒಡೆಯರ ಮನೆಯ ಒಂದು ಕೋಣೆಯನ್ನು ಮಠವನ್ನಾಗಿ ಮಾಡಿಕೊಂಡು ಪೂಜೆ ಮಾಡುತ್ತಾರೆ. ಸಿದ್ಧಲಿಂಗಯ್ಯ ಸ್ವಾಮಿ ಮತ್ತು ಅವರ ಮಗ ಯರ್ರಿಸ್ವಾಮಿ ಇಲ್ಲಿನ ಒಡೆಯರು. ಇದರ ವ್ಯಾಪ್ತಿಗೆ ಪಾತಪ್ಪನ ಗುಡಿ, ರೇಣುಕಾಪುರ, ಕಾಮಸಮುದ್ರ, ಕಲ್ಡಿಪಲ್ಲಿ ಮುಂತಾದವು ಬರುತ್ತವೆ.

ಚಾವಾಲ

ಇದು ಅನಂತಪುರಂ ಜಿಲ್ಲೆಯ ವಜ್ರಕರೂರು ಮಂಡಲಕ್ಕೆ ಸೇರಿದೆ. ಈ ಗ್ರಾಮವನ್ನು ಚಾವಾಲ ಅಥವಾ ಚಾವಲ ಎಂದು ಕರೆಯುತ್ತಾರೆ. ಈ ಊರಲ್ಲಿ ರೇವಣಸಿದ್ಧೇಶ್ವರನ ದೇವಾಲಯವಿದ್ದು, ಸುಮಾರು ೩೦ ವರ್ಷಗಳ ಹಿಂದೆ ಕಟ್ಟಿಸಿರುವುದಾಗಿದೆ. ಈ ದೇವಾಲಯದ ಗರ್ಭಗೃಹದಲ್ಲಿ ಶಿವಲಿಂಗ ಎದುರಿಗೆ ನಂದಿ ವಿಗ್ರಹಗಳನ್ನು ಕಾಣಬಹುದು. ಸಿದ್ಧಯ್ಯ ಮತ್ತು ಮಲ್ಲಿಕಾರ್ಜುನ ಒಡೆಯರು ಇದರ ಪೂಜಾರಿಗಳಾಗಿದ್ದರು. ಆದರೆ ಇವರು ಬೇರೆ ಕಡೆ ನೆಲೆಸಿರುವುದರಿಂದ ಈ ದೇವಾಲಯದ ಪೂಜೆಯನ್ನು ಬೇರೆಯವರು ಮಾಡುತ್ತಾರೆ. ಇಲ್ಲಿ ವಿಶೇಷವಾಗಿ ಹುಣ್ಣಿಮೆ ಅಮವಾಸ್ಯೆಗೆ ವಿಶೇಷ ಪೂಜೆ ನಡೆಯುತ್ತದೆ. ಜೊತೆಗೆ ದಸರ–ಯುಗಾದಿ ಶಿವರಾತ್ರಿಗಳಂಥ ಹಬ್ಬದ ದಿನಗಳಲ್ಲಿ ಪೂಜೆ ನಡೆಯುತ್ತದೆ.

ಓಬಳಾಪುರಂ

ಅನಂತಪುರ ಜಿಲ್ಲೆಯ ಡಿ. ಹಿರೇಹಾಳ ಮಂಡಲಕ್ಕೆ ಸೇರಿದೆ. ಬಳ್ಳಾರಿಯಿಂದ ೨೦ ಕಿ.ಮೀ. ದೂರದಲ್ಲಿದೆ. ಈ ಊರು ಕರ್ನಾಟಕದಲ್ಲಿಯೇ ಬೆರೆತೋದಂತಿದೆ. ಇಲ್ಲಿ ರೇವಣಸಿದ್ಧೇಶ್ವರನ ಮಠವಿದೆ. ಈ ಊರು ೭೧೪ ಕುಟುಂಬಗಳನ್ನು ಹೊಂದಿದೆ. ಇದರಲ್ಲಿ ೧೪೦ಕ್ಕೂ ಹೆಚ್ಚು ಕುರುಬರ

ಮನೆಗಳಿವೆ. ಆದರೆ ವಿಶೇಷವಾಗಿ ಒಡೆಯರ ೪೦ ಕುಟುಂಬಗಳು ಈ ಊರಲ್ಲಿವೆ. ಗೋವಿಂದವಾಡದ ಒಡೆಯರ ಅಣ್ಣ-ತಮ್ಮಂದಿರು ಹತ್ತು ವರ್ಷಗಳ ಹಿಂದೆ ಈ ರೇವಣಸಿದ್ಧೇಶ್ವರ ದೇವಾಲಯವನ್ನು ಕಟ್ಟಿಸಿದ್ದಾರೆ. ಇದರ ಪೀಠಾಧ್ಯಕ್ಷರು ವಿರೂಪಾಕ್ಷಯ್ಯ ಒಡೆಯರು. ವಿಜಯ ದಶಮಿಯಲ್ಲಿ ಪಲ್ಲಕ್ಕಿ ಉತ್ಸವ, ಹುಣ್ಣಿಮೆ ಅಮಾವಾಸ್ಯೆಗೆ ವಿಶೇಷ ಪೂಜೆ ನಡೆಯುತ್ತದೆ. ಈ ಮಠದ ವ್ಯಾಪ್ತಿಗೆ ಅನೇಕ ಊರುಗಳು ಬರುತ್ತವೆ. ಅವುಗಳಲ್ಲಿ ಕೆಲವನ್ನು ಹೆಸರಿಸುವುದಾದರೆ, ಬೊಮ್ಮನಹಾಳ್, ಗುಂತಕಲ್ಲು, ನೇಮಕಲ್ಲು, ಹೊಸಗುಡ್ಡ, ಪಕುರ್ತಿವಲ್ಲಿಕೋಟೆ, ಹೊಸಕೋಟೆ, ಗುಗ್ಗರಹಟ್ಟಿ, ಸಿದ್ಧರಾಯನ ಕೋಟೆ ಡಿ. ಹಿರೇಹಾಳ ಈ ಎಲ್ಲ ಶಿಷ್ಯರ ಹಳ್ಳಿಗಳು ಇದರ ವ್ಯಾಪ್ತಿಯಲ್ಲಿ ನಮಗೆ ಕಂಡುಬರುತ್ತವೆ.

ಈ ಎಲ್ಲ ಸಂಗತಿಗಳಿಂದ ಸರೂರ ಹಾಲುಮತ ಗುರುಪರಂಪರೆಯ ಭೌಗೋಳಿಕ ಪ್ರಸಾರವು ಕರ್ನಾಟಕವೊಂದೆ ಅಲ್ಲದೇ ಆಂಧ್ರಪ್ರದೇಶದಲ್ಲಿಯೂ ಹರಡಿಕೊಂಡಿರುವುದು ತಿಳಿದುಬರುತ್ತದೆ. ಕರ್ನಾಟಕ ಹಾಗೂ ಕರ್ನಾಟಕದ ಗಡಿನಾಡಿನಲ್ಲಿ ವಾಸವಾಗಿರುವ ಆಂಧ್ರಪ್ರದೇಶದ ರೇವಣಸಿದ್ಧನ ಮಠ ಅಥವಾ ದೇವಾಲಯಗಳನ್ನು ಕ್ಷೇತ್ರಕಾರ್ಯದ ಮೂಲಕ ಗುರುತಿಸಿ, ಮಾಹಿತಿ ಸಂಗ್ರಹಿಸುವುದರ ಮೂಲಕ ಅಧ್ಯಾಯವನ್ನು ಬರೆಯಲಾಗಿದೆ.

ಜೊತೆಗೆ ಸರೂರಿನ ಹಾಲುಮತ ಗುರುಪೀಠದಿಂದ ಅನೇಕ ಶಾಖಾಮಠಗಳ ರೂಪದಲ್ಲಿ ಗುರುಒಡೆಯರ ಪರಂಪರೆಯನ್ನು ವಿಸ್ತರಿಸುವುದರ ಮುಖೇನ ಈ ಮಠಗಳು ತಮ್ಮ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿಕೊಂಡು ಬರುತ್ತಿರುವುದು ಈ ಭೌಗೋಳಿಕ ಪ್ರಸಾರದಿಂದ ತಿಳಿದುಬರುತ್ತದೆ.

ಕೊನೆಟಿಪ್ಪಣಿಗಳು

೧. ಹಾಲುಮತ ವ್ಯಾಸಂಗ-೫, ರೇವಣಸಿದ್ಧ ಪರಂಪರೆ(ಸಂ) ೨೦೧೪ ಪು. ೧೪೦-೧೪೩.
೨. ಮಾಹಿತಿ: ಜ್ಯೋಗಿ ಮಾಸ್ತರ್-೮೦, ಸರೂರು.
೩. ಕುರುಬರ ಗುರುಒಡೆಯರು ಸಾಂಸ್ಕೃತಿಕ ಅಧ್ಯಯನ, ಪು. ೧೮೯.
೪. ರೇವಣಸಿದ್ಧ ಪರಂಪರೆ, ಪು. ೧೫೩.
೫. ಮಾಹಿತಿ: ಚನ್ನಯ್ಯ ಗುರುವಿನ-೫೦, ಗೋಸ್ಬಾಳ.
೬. ಹಾಲುಮತ ಸಂಸ್ಕೃತಿ-೧, ೪೬-೪೭.
೭. ಮಾಹಿತಿ: ಸಿದ್ಧಯ್ಯ ಸಿದ್ಧರಾಮಯ್ಯ ಗುರುವಿನ-೫೮, ಸರೂರು
೮. ಕುರುಬರ ಗುರುಒಡೆಯರು: ಸಾಂಸ್ಕೃತಿಕ ಅಧ್ಯಯನ, ಪು. ೨೦೦
೯. ಕುರುಬರ ಗುರುಒಡೆಯರು: ಸಾಂಸ್ಕೃತಿಕ ಅಧ್ಯಯನ ಪು. ೧೧೦.
೧೦. ಹಾಲುಮತ ವ್ಯಾಸಂಗ, ಪು. ೧೨೮.
೧೧. ಇತಿಹಾಸ ದರ್ಶನ ಸಂಪುಟ ೨೦, ಪು. ೪೧
೧೨. ಮಾಹಿತಿ: ಪ್ರಕಾಶ ಒಡೆಯರು, ೬೦, ದೊಡ್ಡೇರಿ

೧೩. ಹರಿಹರನ ರಗಳೆಗಳು(ಸಂ) ೧೯೯೯, ಪದ್ಯ ೬೦, ಪು. ೨೮೯.

೧೪. ಹಾಲುಮತ ಕಂಥಾಧಾರಣೆ ಒಂದು ಆಚರಣೆ(ಸಂ) ಪು. ೪೨.

೧೫. ಕುರುಬರ ಗುರುಒಡೆಯರು: ಸಾಂಸ್ಕೃತಿಕ ಅಧ್ಯಯನ ಪು. ೧೧೭.

೧೬. ಕುರುಬರ ಗುರುಒಡೆಯರು: ಸಾಂಸ್ಕೃತಿಕ ಅಧ್ಯಯನ, ಪು. ೧೧೯.

೧೭. ಕೆ. ಹನುಮಂತಪ್ಪ–೬೦, ರಾಯದುರ್ಗಂ

೧೮. ಚಿಕ್ಕಣ್ಣ ಒಡೆಯರು–೫೮, ಲಕ್ಷ್ಮಂಪಲ್ಲಿ

೧೯. ರೇವಣಸಿದ್ಧ ಪರಂಪರೆ, ಪು. ೨೨೬.

ಅಧ್ಯಾಯ ಐದು

ಸರೂರು ಹಾಲುಮತ ಸಂಪ್ರದಾಯ:
ಉತ್ಸವ–ಆಚರಣೆ–ಹೇಳಿಕೆಗಳು

ಅಧ್ಯಾಯ ಐದು

ಸರೂರು ಹಾಲುಮತ ಸಂಪ್ರದಾಯ: ಉತ್ಸವ–ಆಚರಣೆ–ಹೇಳಿಕೆಗಳು

ಸಮಾಜದೊಳಗಡೆ ಮಾನವನ ಜೀವನವನ್ನು ರೂಪಿಸುವಲ್ಲಿ ಹಾಗೂ ಸಂಸ್ಕೃತಿಯನ್ನು ಪೋಷಿಸುವಲ್ಲಿ ಆಚರಣೆಗಳು ಮಹತ್ವ ಪಾತ್ರವಹಿಸುತ್ತವೆ. ವ್ಯಕ್ತಿಯ ಬದುಕಿನ ಅವಿಭಾಜ್ಯ ಅಂಗಗಳಾಗಿ ಆಚರಣೆಗಳು ಬೆಳೆದು ಸಂಪ್ರದಾಯಗಳಾಗಿ ಮಾರ್ಪಾಡುಗೊಳ್ಳುತ್ತವೆ. ವೈಯಕ್ತಿಕವಾಗಿ ರೂಪ ತಾಳುವ ಆಚರಣೆಗಳು ಸಾಮೂಹಿಕವಾಗಿ ಮಹತ್ವವನ್ನು ಪಡೆದುಕೊಳ್ಳುತ್ತವೆ. ಇವು ಮನುಷ್ಯನ ನಂಬಿಕೆಗಳಿಗೆ ಅನುಸಾರವಾಗಿ ಪ್ರಕೃತಿಯೊಂದಿಗೆ, ತನ್ನ ಸಮುದಾಯದೊಂದಿಗೆ ಬೆರೆತು ಸುಖ–ಸಂತೋಷ ಸಂಭ್ರಮಗಳನ್ನು ಅಭಿವ್ಯಕ್ತಿಪಡಿಸುವ ಸಲುವಾಗಿ ಧಾರ್ಮಿಕ ವಿಧಿ ಕ್ರಿಯೆಗಳನ್ನು ರೂಢಿಸಿಕೊಂಡು ಆಚರಣೆಗಳು ಬೆಳೆದು ಬಂದಿರುತ್ತವೆ.

ಇವು ಮನುಷ್ಯನ ಜೀವನದುದ್ದಕ್ಕೂ ಒಂದೊಂದು ಅವಸ್ಥೆಗೂ ಒಂದೊಂದು ಸಂಸ್ಕಾರ, ಒಂದೊಂದು ಸಂಸ್ಕಾರದಲ್ಲೂ ಹಲವಾರು ಆಚರಣೆಗಳಿರುತ್ತವೆ. ಯಾವುದೇ ಧರ್ಮವನ್ನು ತೆಗೆದುಕೊಂಡರೂ ಆಯಾ ಧರ್ಮಕ್ಕೆ ಅನುಗುಣವಾಗಿ ಸಂಪ್ರದಾಯಗಳು ಇದ್ದೇ ಇರುತ್ತವೆ. ಈ ಸಂಪ್ರದಾಯಗಳು ತಾತ್ಕಾಲಿಕ ತಿಳುವಳಿಕೆಗಳಾಗಿರದೆ ಸಮುದಾಯ ಪ್ರಜ್ಞೆಯಲ್ಲಿ ವಿಕಸಿತವಾದ ಜೀವನ ಸಂಹಿತೆಗಳಾಗಿವೆ. ಹೀಗಾಗಿಯೇ ಸಂಪ್ರದಾಯ ನಿಷ್ಠವಾದ ಬದುಕು ಹುಟ್ಟಿನಿಂದ ಮರಣೋತ್ತರದವರೆಗೂ ಅನೇಕ ಶಾಸ್ತ್ರಾಚರಣೆಗಳಿಂದ ಕೂಡಿರುತ್ತದೆ.

ಸಂಪ್ರದಾಯ ಎಂದರೆ, ಸಾಮಾನ್ಯವಾಗಿ ಒಂದು ನಿರ್ದಿಷ್ಟ ಜನಾಂಗದವರಲ್ಲಿ ಅನುಸರಿಸುವ, ಆಚರಿಸುವ ಪದ್ಧತಿಗಳಾಗಿವೆ. 'ಸಂಪ್ರದಾಯ' ಆಚರಣೆಯಿಂದ ಭಿನ್ನವಾದದ್ದು, ಆಚರಣೆಯ ಒಂದು ಭಾಗವಾಗಿ ಸಂಪ್ರದಾಯ ಕಂಡುಬರುತ್ತದೆ. ಈ 'ಸಂಪ್ರದಾಯ' "ಇಂಗ್ಲಿಷ್‌ನ 'convention'

ಎಂಬ ಪದಕ್ಕೆ ಸಂವಾದಿಯಾಗಿ ಬಳಸುತ್ತಾರೆ. 'convention' ಅಂದರೆ ಪದ್ಧತಿ, ಕಟ್ಟಳೆ, ರೂಢಿ, ಬಳಕೆ, ನಡುವಳಿಕೆ ಎಂಬ ಅರ್ಥಗಳನ್ನು ಹೊಂದಿದೆ."[೧] ಹೀಗೆ ಯಾವುದೋ ಒಂದು ಸಮುದಾಯ ಅಥವಾ ಜನಾಂಗದಲ್ಲಿ ಅಂಗೀಕೃತವಾದ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಒಂದು ಪದ್ಧತಿ ಸಂಪ್ರದಾಯವಾಗಿದೆ. ಈ ಸಂಪ್ರದಾಯವನ್ನು ಕುರಿತು Standard Dictionary of folklore ನಲ್ಲಿ ಹೇಳಿರುವಂತೆ, "ಒಂದು ಗುಂಪು ಪರಂಪರಾಗತವಾಗಿ ಒಪ್ಪಿಕೊಂಡಿರುವ ಮಾನವನ ಕ್ರಿಯಾತ್ಮಕತೆಯನ್ನೇ ಸಂಪ್ರದಾಯ" ಎನ್ನುವರು.

ಸಂಕ್ಷಿಪ್ತ ಕನ್ನಡ ನಿಘಂಟು ಪ್ರಕಾರ ಸಂಪ್ರದಾಯ ಎಂಬುದನ್ನು ಈ ಮುಂದಿನಂತೆ ನೋಡಬಹುದಾಗಿದೆ.

೧. ಪೂರ್ವಿಕರಿಂದ ಪರಂಪರೆಯಾಗಿ ಬಂದಿರುವ ಆಚಾರ, ವ್ಯವಹಾರವಾಗಿದೆ.

೨. ಪರಂಪರಾಗತವಾಗಿ ಬಂದಿರುವ ರೂಢಿ, ಪದ್ಧತಿ ಎಂದು ಗುರುತಿಸಲಾಗಿದೆ.

ಹೀಗೆ ಬದುಕಿನ ಪ್ರತಿಯೊಂದು ಹೆಜ್ಜೆಯಲ್ಲೂ ಸಂಪ್ರದಾಯ ಹಾಸುಹೊಕ್ಕಾಗಿದೆ. ಇದು ಒಂದು ಸಣ್ಣ ಕ್ರಿಯೆಯಿಂದ ಹಿಡಿದು ದೇಸಿಯತೆಯವರೆಗೂ ವ್ಯಾಪಿಸಿದೆ. ಸಂಪ್ರದಾಯವು ನಿಂತ ನೀರಲ್ಲ, ಸದಾ ಹರಿಯುವ ನದಿಯಂತೆ ಸೃಜನಶೀಲವಾದದ್ದು. ಆದ್ದರಿಂದ ಸಂಪ್ರದಾಯ ಯಾವುದೇ ಒಂದು ಕಾಲಘಟ್ಟದ ಸಮುದಾಯಕ್ಕೆ ಸೀಮಿತವಾದುದ್ದಲ್ಲ. ಹಾಗಾಗಿ ಸಮಾಜದ ಅನೇಕ ಜಾತಿ–ಜನಾಂಗಗಳು ಒಂದೇ ಪ್ರದೇಶದಲ್ಲಿ ವಾಸಿಸುತ್ತಿದ್ದರೂ ಅವರವರ ಆಚರಣೆಗಳು ವಿಭಿನ್ನವಾಗಿ, ವೈವಿಧ್ಯತೆಯಿಂದ ಕೂಡಿರುತ್ತವೆ. ಪ್ರತಿಯೊಂದು ಜನಾಂಗದವರಿಗೂ ಆಯಾ ಸಮುದಾಯಗಳ ಆಚರಣೆ, ಪದ್ಧತಿಗಳೇ ಶ್ರೇಷ್ಠವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಹಾಲುಮತ ಸಮುದಾಯವೂ ಒಂದಾಗಿದೆ. ಈ ಸಮುದಾಯದವರು ಪ್ರಾಮಾಣಿಕತೆಗೆ ಹತ್ತಿರವಾದಂತಹವರು. ಆಚಾರಶೀಲರು ಹಾಗೂ ಮಡಿ ಮೈಲಿಗಳಿಂದ ದೂರ ಇರುವವರಾಗಿದ್ದಾರೆ. ಇಂಥಹ ಕಟ್ಟುನಿಟ್ಟಾದ ಸಂಪ್ರದಾಯವನ್ನು ರೂಢಿಸಿಕೊಂಡು ಬಂದಿರುವ ಕುರುಬ ಸಮುದಾಯದಲ್ಲಿ 'ಒಡೆಯರು' ಕಂಡುಬರುತ್ತಾರೆ. ಇವರಿಗೆ ಕುರುಬರಲ್ಲಿ ಗುರುಗಳು, ಪೂಜಾರಿಗಳು, ಒಡೆಯರು, ಸ್ವಾಮಿಗಳು ಎಂಬ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಒಟ್ಟಾರೆಯಾಗಿ ಈ ಸಮುದಾಯವು ಪುರೋಹಿತ ಗುರುವರ್ಗಕ್ಕೆ ಪರ್ಯಾಯವಾಗಿ 'ಒಡೆಯರು' ಎಂಬ ಕುರುಬ ಪುರೋಹಿತ ವರ್ಗವನ್ನು ರೂಪಿಸಿಕೊಂಡಿದೆ.

ಹೀಗೆ ರೂಪಿಸಿಕೊಂಡ 'ಒಡೆಯರು' ಎಂಬ ಕುರುಬ ಪುರೋಹಿತ ವರ್ಗವು ಬ್ರಾಹ್ಮಣ ಪುರೋಹಿತ ಹಾಗೂ ಲಿಂಗಾಯಿತ ಪುರೋಹಿತಕ್ಕಿಂತ ತುಂಬಾ ಭಿನ್ನವಾದ ಬದುಕನ್ನು ಕಟ್ಟಿಕೊಂಡು ಬಂದಿರುವುದು ಗಮನಾರ್ಹವಾಗಿದೆ. ಇಂಥಹ ಬದುಕನ್ನು ಕಟ್ಟಿಕೊಂಡ ಗುರುಒಡೆಯರ ಪರಂಪರೆಯ ಸಾಂಸ್ಕೃತಿಕ ಚಿತ್ರಣವನ್ನು ಅನಾವರಣ ಮಾಡುವಲ್ಲಿ ಪ್ರಸ್ತುತ ಅಧ್ಯಯನವು ಪ್ರಮುಖ ಪಾತ್ರ

ವಹಿಸುತ್ತದೆ. ಹಾಗಾಗಿ ಗುರುಒಡೆಯರ ಪರಂಪರೆಯು ಕುರುಬರಿಗಿಂತ ಹೇಗೆ ಭಿನ್ನ ಹಾಗೂ ಒಡೆಯರು ಆಚರಿಸುವ ಆಚಾರ-ವಿಚಾರ, ಹಬ್ಬ-ಹರಿದಿನ, ಜಾತ್ರೆ-ಉತ್ಸವ, ನಂಬಿಕೆ, ಹೇಳಿಕೆಗಳು ಈ ಎಲ್ಲಾ ಸಾಂಸ್ಕೃತಿಕವಾದ ಸಂಪ್ರದಾಯಗಳನ್ನು ಒಳಗೊಂಡ ಹಾಲುಮತ ಗುರುಪರಂಪರೆಯ ಮೂಲ ಕಂಡುಬರುವುದು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಸರೂರ ಗ್ರಾಮದಲ್ಲಿ. ಕರ್ನಾಟಕದಲ್ಲಿ ಹಾಲುಮತಸ್ಥರೆಂದು ಕರೆಯಲಾಗುವ ಕುರುಬ ಜನಾಂಗದ ಗುರುಪರಂಪರೆಗೆ ಮೂಲ ನೆಲೆಯಿರುವುದು ಈ ಊರಲ್ಲಿ. ಈ ಪರಂಪರೆಯ ವ್ಯಾಪ್ತಿಯು ಕರ್ನಾಟಕ ಹಾಗೂ ಆಂಧ್ರ ಪ್ರದೇಶದಲ್ಲಿಯೂ ವಿಸ್ತಾರಗೊಂಡಿದೆ. ಇವರು ಕರ್ನಾಟಕದಿಂದ ವಲಸೆ ಹೋಗಿ ಆಂಧ್ರದಲ್ಲಿ ವಾಸವಾಗಿರುವುದು ಮತ್ತು ಕರ್ನಾಟಕ-ಆಂಧ್ರ ಪ್ರದೇಶದ ಗಡಿನಾಡಿನಲ್ಲಿ ವಾಸವಾಗಿರುವ ಗುರುಪರಂಪರೆಯವರು ಧಾರ್ಮಿಕವಾಗಿ ಆಚರಿಸುವ ಸಂಪ್ರದಾಯಗಳು ಯಾವ ರೀತಿಯಾದ ಸಾಮ್ಯತೆಯನ್ನು ಪಡೆದುಕೊಂಡಿವೆ ಎಂಬುದನ್ನು ತಿಳಿಯುವುದು ಆಸಕ್ತಿದಾಯಕವಾಗಿದೆ. ಹಾಗೇ ಸರೂರು ಕುರುಬ ಜನಾಂಗಕ್ಕೆ ಮೂಲ ಗುರು ಪೀಠವಾಗಿಯೂ, ಪವಿತ್ರ ಕ್ಷೇತ್ರವಾಗಿಯೂ ತನ್ನ ಸಾಂಸ್ಕೃತಿಕ ಹಿರಿಮೆಯನ್ನು ಪಡೆದುಕೊಂಡಿದೆ.

ಕರ್ನಾಟಕದ ವಿವಿಧ ಭಾಗಗಳಲ್ಲಿರುವ ಹಾಲುಮತಸ್ಥರೆಲ್ಲರೂ ಇವರನ್ನೇ ತಮ್ಮ ಗುರುಒಡೆಯರೆಂದು ಪಾಲಿಸಿಕೊಂಡು ಬಂದಿದ್ದಾರೆ. ಧಾರ್ಮಿಕವಾಗಿ ತನ್ನದೇ ಆದಂತಹ ವಿಶಿಷ್ಟತೆಯನ್ನು ಹೊಂದಿರುವ ಸರೂರ ಹಾಲುಮತ ಪರಂಪರೆಯು ಹಲವಾರು ಧಾರ್ಮಿಕ ಆಚರಣೆಗಳು, ಸಂಪ್ರದಾಯ, ಉತ್ಸವಗಳನ್ನು ಇಂದಿಗೂ ರೂಢಿಸಿಕೊಂಡು ಬಂದಿದೆ. ಈ ಪರಂಪರೆಯ ವಿಭಿನ್ನವಾದ ಸಂಗತಿಯೇನೆಂದರೆ, ಪ್ರತಿಯೊಂದು ಸಮುದಾಯವು ತಮ್ಮದೇ ಆದ ಧಾರ್ಮಿಕ, ಸಾಮಾಜಿಕ ಕಾರ್ಯಗಳನ್ನು ನೆರವೇರಿಸಿಕೊಡಲು ಪ್ರತ್ಯೇಕ ಗುರುವರ್ಗವನ್ನು ಹೊಂದಿರುತ್ತದೆ. ಆದರೆ ಹಾಲುಮತ ಸಮುದಾಯವು ತಮ್ಮ ಸಮುದಾಯದವರೇ ಆದ 'ಒಡೆಯರು' ಎಂಬ ಪುರೋಹಿತ ವರ್ಗವನ್ನು ಸೃಷ್ಟಿ ಮಾಡಿಕೊಂಡಿದ್ದಾರೆ. ಈ ವರ್ಗವು ಕುರುಬರ ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳನ್ನು ನೆರವೇರಿಸಿಕೊಡುತ್ತವೆ. ಇಂತಹ ವಿಶಿಷ್ಟ ಸ್ಥಾನವನ್ನು ಹೊಂದಿದ ಗುರುವರ್ಗವು ಯಾವ ರೀತಿಯಾದ ಆಚರಣೆ, ಸಂಪ್ರದಾಯಗಳನ್ನು ರೂಢಿಸಿಕೊಂಡು ಬಂದಿದೆ ಹಾಗೂ ತಮ್ಮ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ಯಾವ ರೀತಿಯಲ್ಲಿ ಕಟ್ಟಿಕೊಟ್ಟಿದೆ ಎಂಬುದು ಪ್ರಸ್ತುತ ಕುತೂಹಲ ಹುಟ್ಟಿಸುವ ವಿಚಾರವಾಗಿದೆ.

ಏಕೆಂದರೆ ಇವರು ಸಸ್ಯಹಾರಿಗಳು, ಮಾಂಸಾಹಾರಗಳಿಂದ ಬಲುದೂರ. ಆದ್ದರಿಂದ ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಯಾವುದೇ ರೀತಿಯಿಂದ ತಮ್ಮ ಸಂಪ್ರದಾಯದ ಆಚರಣೆಗಳಿಗೆ ಧಕ್ಕೆ ಬಾರದ ರೀತಿಯಲ್ಲಿ ಧಾರ್ಮಿಕ ವಿನ್ಯಾಸದ ಬದುಕನ್ನು ರೂಢಿಸಿಕೊಂಡು

ಬಂದಿದ್ದಾರೆ. ಹೀಗಾಗಿ ಇವರು ಕರ್ನಾಟಕ ಒಂದೇ ಅಲ್ಲದೆ ಬೇರೆ ಬೇರೆ ರಾಜ್ಯಗಳಲ್ಲಿಯೂ ವಿಶಿಷ್ಟ ಸಂಪ್ರದಾಯವನ್ನು ಹೊಂದಿದ ಗುರುಒಡೆಯರು ಲಿಂಗಧಾರಿಗಳಾಗಿರುವರು. ಆದರೆ ಲಿಂಗಾಯಿತ ಜಂಗಮರು 'ಒಡೆಯರನ್ನು' ತಮ್ಮ ಸಮಾನವೆಂದು ಒಪ್ಪಿಕೊಳ್ಳುವುದಿಲ್ಲ. ಕುರುಬರಲ್ಲೇ ಪ್ರತ್ಯೇಕ ಗುಂಪಾದ 'ಒಡೆಯರು' ಪ್ರತ್ಯೇಕ ಜಾತಿಯವರಾಗಿರುವುದಿಲ್ಲ. ಆದ್ದರಿಂದ ಸ್ವಗೋತ್ರ ವಿವಾಹ ಮಾಡಿಕೊಳ್ಳುವುದಿಲ್ಲ. ಏಕೆಂದರೆ ಒಡೆಯರೆಲ್ಲರೂ ಸಹೋದರರೆಂಬ ಭಾವನೆ ಅವರಲ್ಲಿದೆ. ಆದ್ದರಿಂದ ಅವರ ವೈವಾಹಿಕ ಸಂಬಂಧಗಳೆಲ್ಲ ಕುರುಬರ ಜೊತೆಯಲ್ಲಿ ಬೆಳೆಸಿಕೊಳ್ಳುತ್ತಾರೆ. ಕುರುಬರ ಗುರುಒಡೆಯರಲ್ಲಿ ಸ್ತ್ರೀಗೆ ಉನ್ನತ ಸ್ಥಾನಮಾನವನ್ನು ನೀಡಿದ್ದಾರೆ. ಇಂತಹ ಕಟ್ಟುನಿಟ್ಟಾದ ಸಂಪ್ರದಾಯವನ್ನು ರೂಢಿಸಿಕೊಂಡು ಬಂದ ಇವರ ಸಂಪ್ರದಾಯಗಳನ್ನು ಸಾಮಾಜಿಕವಾಗಿ ಮತ್ತು ಧಾರ್ಮಿಕ ಹಿನ್ನೆಲೆಯಲ್ಲಿಯೇ ನೋಡಲಾಗುತ್ತದೆ.

ಸಾಮಾಜಿಕ ಆಚರಣೆಗಳು

ಕುರುಬರ ಕುಲಗುರುಗಳಾದ ಒಡೆಯರ ಪರಂಪರೆಯು ಒಂದು ವಿಶಿಷ್ಟವಾದ ಸಾಂಸ್ಕೃತಿಕ ಪರಂಪರೆಯನ್ನು ಒಳಗೊಂಡಿದೆ. ಇವರು ಲಿಂಗಧಾರಿಗಳಗಿದ್ದು, ಕಟ್ಟಾ ಸಸ್ಯಾಹಾರಿಗಳಾಗಿದ್ದಾರೆ. ಹೀಗಾಗಿ ಇವರು ಆಚರಣೆಗಳನ್ನು ಚಾಚುತಪ್ಪದೇ ಪರಂಪರಾಗತವಾಗಿ ರೂಢಿಸಿಕೊಂಡು, ಕಾಪಾಡಿಕೊಂಡು ಬಂದಿದ್ದಾರೆ. ಇವರ ಜನಾಂಗದ ಜನನ, ಮರಣ, ವಿವಾಹ ಹಾಗೂ ಇವರಲ್ಲಿ ಒಡೇರಮ್ಮನಿಗೆ ನೀಡಿದ ಸ್ಥಾನಮಾನ ಹೀಗೆ ಅನೇಕ ಸಂಗತಿಗಳನ್ನು ಗಮನಿಸಲಾಗುತ್ತದೆ. ಒಡೆಯರು ಕುರುಬರಲ್ಲಿ ಒಂದು ಉಪಪಂಗಡವಾಗಿ ಪ್ರಾಚೀನ ಕಾಲದಿಂದಲೂ ತಮ್ಮ ಸಾಮಾಜಿಕ ವ್ಯವಸ್ಥೆಯನ್ನು ಉಳಿಸಿಕೊಂಡು ಬಂದಿದ್ದಾರೆ.

ಒಡೆಯರ ಮದುವೆಯ ಆಚರಣೆಗಳು

ಒಡೆಯರ ಮದುವೆಯ ಸಂದರ್ಭದಲ್ಲಿ ಅನೇಕ ರೀತಿ-ರಿವಾಜುಗಳನ್ನು ಗಮನಿಸಬಹುದಾಗಿದೆ. ಈ ಮದುವೆ ಎಂಬುದು ಎರಡು ಜೀವಿಗಳ ಬೆಸುಗೆಯಾಗಿರುವಂತೆ, ಎರಡು ಕುಟುಂಬಗಳ ಬೆಸುಗೆಗೂ ಕಾರಣವಾಗಿರುವುದು ಕಂಡುಬರುತ್ತದೆ. ಹಾಗಾಗಿ ಒಡೆಯರ ಮದುವೆಯ ಸಂದರ್ಭದಲ್ಲಿ ಸಸ್ಯಹಾರಿಗಳಾದ ಇವರು ಬೇರೊಂದು ಕುಲದಲ್ಲಿ ಅಂದರೆ ತಮ್ಮ ಸಮುದಾಯದ ಕುರುಬರಲ್ಲಿ ಹೆಣ್ಣು ತಂದಾಗ ಅಥವಾ ಹೆಣ್ಣು ಮಾಂಸಹಾರಿಯಾಗಿದ್ದಾಗ ಅಂಥ ಹೆಣ್ಣುಮಗಳಿಗೆ ಮದುವೆ ಶಾಸ್ತ್ರದ ಸಂದರ್ಭದಲ್ಲಿಯೇ ಲಿಂಗಧಾರಣೆ ಮಾಡಿಸುತ್ತಾರೆ. ಏಕೆಂದರೆ ಒಡೆಯರುಗಳೆಲ್ಲರೂ ಸಹೋದರರು ಎಂಬ ಭಾವನೆಯಿಂದ ಜೀವನ ಸಾಗಿಸುತ್ತಿರುವ ಇವರಲ್ಲಿ ಸ್ವಗೋತ್ರ ವಿವಾಹ ನಿಷಿದ್ಧವಾಗಿದೆ. ಆದ್ದರಿಂದ ಇವರ ಮದುವೆಗಳೇನಿದ್ದರೂ ಕುರುಬರ ಇತರ ಬೆಡಗಿನವರೊಂದಿಗೆ ನಡೆಯುತ್ತದೆ. ಹಾಗೆಯೇ ಒಡೆಯರ ಹೆಣ್ಣುಮಗಳನ್ನು ಕುರುಬರಿಗೆ ಕೊಡುವ ಪದ್ಧತಿ ಇಂದಿಗೂ

ಗುರುಒಡೆಯರಲ್ಲಿ ಪ್ರಸ್ತುತವೆನಿಸಿಕೊಂಡಿದೆ. ಮದುವೆಗೆ ಮುಂಚೆ ನಡೆಯುವ ಆಚರಣೆಗಳಲ್ಲಿ ಪ್ರಮುಖವಾದದ್ದು 'ಲಿಂಗಧಾರಣೆ'ಯಾಗಿದೆ. ಒಡೆಯರು ತಮ್ಮ ಮನೆಗೆ ಸೊಸೆಯಾಗಿ ಬರುವ ಹೆಣ್ಣುಮಗಳನ್ನು ಶಾಸ್ತ್ರಬದ್ಧವಾಗಿ ಲಿಂಗಧಾರಣೆ ಮಾಡುತ್ತಾರೆ. ಈ ಲಿಂಗದೀಕ್ಷೆಯ ಕಾರ್ಯ ರೇವಣಸಿದ್ಧೇಶ್ವರ ಮಠ ಇಲ್ಲವೇ ದೇವಸ್ಥಾನದಲ್ಲಿ ನಡೆಸುತ್ತಾರೆ. "ಒಡೆಯರ ಮನೆಗೆ ಸೊಸೆಯಾಗಿ ಬರುವ ಕುರುಬರ ಹೆಣ್ಣುಮಗಳ ತಲೆಯ ಮೇಲೆ ಹಿರಿಯ ಒಡೆಯರು ಪಾದವಿಟ್ಟು ಮಂಗಳ ಸ್ನಾನವನ್ನು ಮಾಡಿಸುತ್ತಾರೆ. ಇನ್ನೂ ಕೆಲವು ಕಡೆಯಲ್ಲಿ ಸೊಸೆಯಾಗಿ ಬರುವ ಕನ್ಯೆಯ ಕೇಶ ಮುಂಡೆಯನ್ನು ತೆಗೆಯುವ ಪದ್ಧತಿಯಿದೆ. ಆದರೆ ಈ ರೀತಿಯಾದ ಪದ್ಧತಿ ಸರೂರನ ಗುರುಒಡೆಯರ ಆಚರಣೆಯಲ್ಲಿ ಕಂಡುಬರುವುದಿಲ್ಲ. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕು ತಾಳೀಕಟ್ಟೆಯಲ್ಲಿ ಈ ಸಂಪ್ರದಾಯ ಕಂಡುಬರುತ್ತದೆ."[೨] ಉಡಿಯಲ್ಲಿ ಬಾಳೆಯ ಎಲೆಯನ್ನಿಟ್ಟು ಅದರಲ್ಲಿ ಐದು ಬಗೆಯ ಮರದ ಚಕ್ಕೆಯ ಕೆಂಡವನ್ನು ಹಾಕಿ, ರೇವಣಸಿದ್ಧೇಶ್ವರ ಸ್ವಾಮಿಯ ದೇವಸ್ಥಾನದ ಪ್ರದಕ್ಷಣೆಯನ್ನು ಹಾಕುತ್ತಾರೆ. ಹೀಗೆ ಪ್ರದಕ್ಷಿಣೆ ಹಾಕಿ ಬಂದ ಮೇಲೆ ಬೇವಿನಕಡ್ಡಿಯಿಂದ ನಾಲಿಗೆಯನ್ನು ಸುಟ್ಟು ಗೋಮೂತ್ರದಿಂದ ನಾಲಗೆಯನ್ನು ತೊಳೆದು ಶುದ್ಧೀಕರಿಸುವ ಪದ್ಧತಿ ಇವರಲ್ಲಿದೆ. ಈ ಕಾರ್ಯಗಳು ಮುಗಿದ ಮೇಲೆ ರೇವಣಸಿದ್ಧೇಶ್ವರನ ಗುಡಿಯಲ್ಲಿ ಸ್ವಾಮಿಯ ಎದುರುಗಡೆ ಕರಿಯ ಕಂಬಳಿಯ ಗದ್ದುಗೆಯನ್ನು ಹಾಕಿ, ಅವಳನ್ನು ಪದ್ಮಾಸನದಲ್ಲಿ ಕೂಡಿಸುತ್ತಾರೆ. ಆ ನಂತರ ಆ ಕಂಬಳಿಯ ಮೇಲೆ ಪಂಚಕಳಶವನ್ನು ಹೂಡಿ ಸುರಗಿಯ ನೂಲನ್ನು ಸುತ್ತುತ್ತಾರೆ.

ರೇವಣಸಿದ್ಧೇಶ್ವರನ ಕೊರಳಿನಿಂದ ನೂಲನ್ನು ತಂದು ಅದನ್ನು ಕನ್ಯೆಯ ಕೊರಳಿಗೆ ಹಾಕುತ್ತಾರೆ. ಈ ರೇವಣಸಿದ್ಧನ ಮುಂದೆ ಕೆಂಪು ವಸ್ತ್ರದಲ್ಲಿ ಕಟ್ಟಿರುವ ಕಂಥೆಯ ಲಿಂಗವನ್ನು ಐದು ಜನ ಹಿರಿಯ ಒಡೆಯರು ಸೂತ್ರದ ಮೂಲಕ ರೇವಣಸಿದ್ಧನ ಹೆಸರನ್ನು ಹೇಳಿ ಅವಳ ಕೊರಳಿಗೆ ಕಟ್ಟುತ್ತಾರೆ. ಹಾಗೆಯೇ ಅವಳ ಕಿವಿಯಲ್ಲಿ "ಓಂ ನಮಃ ಶಿವಾಯಃ" ಎಂಬ ಮಂತ್ರವನ್ನು ಬೋಧಿಸುತ್ತಾರೆ. ಇದೇ ಸಂದರ್ಭದಲ್ಲಿ ಒಡೆಯರ ಹುಡುಗನಿಗೂ ಲಿಂಗದೀಕ್ಷೆ ಮಾಡುತ್ತಾರೆ. ಐದು ಜನ ಒಡೆಯರು ಹುಡುಗನ ನೆತ್ತಿಯ ಮೇಲೆ ಪಾದವಿಟ್ಟು, ಕಾಲುತೊಳೆದು ಆ ನೀರಿನಿಂದ ಹುಡುಗನನ್ನು ಶುದ್ಧಿ ಮಾಡಲಾಗುತ್ತದೆ. ನಂತರ ಅವನಿಗೂ ಲಿಂಗದೀಕ್ಷೆ ಮಾಡಲಾಗುತ್ತದೆ. ಅನಂತರ ಅವರಿಬ್ಬರ ಕೈಗೂ ಜೋಳಿಗೆ ಬೆತ್ತವನ್ನು ಕೊಟ್ಟು 'ಕೊರಾಣ್ಯ' ಭಿಕ್ಷೆಗೆ ಕಳುಹಿಸುತ್ತಾರೆ. "ಅಂದಿನಿಂದ ಒಡೆಯರ ಹುಡುಗ ನಿಜವಾದ 'ಒಡೆಯರಾಗಿ, ಕುರುಬರ ಮನೆಯ ಹುಡುಗಿ ಅವನ ಹೆಂಡತಿ ಒಡೇರಮ್ಮ ಆಗುತ್ತಾಳೆ.

ಹೀಗೆ ದೀಕ್ಷೆಯ ಕಾರ್ಯ ಮುಗಿದ ಮೇಲೆ ಮುಂದೆ ನಡೆಯುವ ಮದುವೆಯ ಕಾರ್ಯವೆಲ್ಲ ಸಾಮಾನ್ಯವಾಗಿ ಇತರ ಕುರುಬರ ಮದುವೆಗಳಂತೆಯೇ ನಡೆಯುತ್ತವೆ. ಆದರೆ ಮದುವೆಯಲ್ಲಿ

ನೂಲು ಸುತ್ತುವ ವಧು-ವರರಿಗೆ ಅರಿಷಿಣ ಹಚ್ಚಿ, ಬಟ್ಟೆ ತೊಡಿಸುವ ಬಾಜಗಳನ್ನು ಒಡೆಯರ ಹೆಣ್ಣುಮಕ್ಕಳು ಮಾಡುತ್ತಾರೆಯೇ ಹೊರತು ಕುರುಬರ ಹೆಣ್ಣುಮಕ್ಕಳಿಗೆ ಅಲ್ಲಿ ಅವಕಾಶವಿರುವುದಿಲ್ಲ. "ಕೊಟ್ಟ ಹೆಣ್ಣು ಕುಲಕ್ಕೆ ಹೊರಗು" ಎಂಬ ಗಾದೆಯ ಮಾತಿನಂತೆ ಕುರುಬರ ಮನೆಯ ಹುಡುಗಿ ಒಡೆಯರಮ್ಮನಾಗಿ ಒಡೆಯರ ಜಾತಿಯವಳಾಗುತ್ತಾಳೆ. ಅಂದಿನಿಂದ ಕಟ್ಟಾ ಸಸ್ಯಾಹಾರಿಯಾಗುತ್ತಾಳೆ. ಅಷ್ಟೆ ಅಲ್ಲದೇ ಸಮಾಜದ ದೃಷ್ಟಿಯಲ್ಲಿಯೂ ಅವಳ ಸ್ಥಾನ ಮೇಲಕ್ಕೇರುತ್ತದೆ. ದೀಕ್ಷೆಯಾದ ದಿನವೇ ಅವಳ ತಂದೆ-ತಾಯಿಯರು ಅವಳಿಗೆ ಬಾಗಿ ನಮಸ್ಕರಿಸುತ್ತಾರೆ. ಅಂದಿನಿಂದ ಅವಳು ತನ್ನ ಕುರುಬ ಬಂಧುಗಳಿಗೆ, ಕೊನೆಗೆ ತನ್ನ ತಂದೆ-ತಾಯಿಯರಿಗೂ ನಮಸ್ಕರಿಸುವಂತಿಲ್ಲ. ಆದರೆ ಅವಳು ತನ್ನ ಗಂಡನಂತೆಯೇ ಸದಾ ಹಣೆಯ ಮೇಲೆ ಮೂರು ಬೆರಳು ವಿಭೂತಿ, ಎದೆಯ ಮೇಲೆ ಲಿಂಗವನ್ನು ಧರಿಸಿಕೊಂಡಿರುತ್ತಾಳೆ. ಇದು ಅವಳನ್ನು ಇತರ ಕುರುಬರ ಹೆಣ್ಣುಮಕ್ಕಳಿಂದ ಪ್ರತ್ಯೇಕಿಸಿ ತೋರಿಸುವ ಅಂಶವಾಗಿದೆ. ಒಡೆಯರುಗಳು ತಮ್ಮ ಮನೆಯಲ್ಲಿ ಹುಟ್ಟಿದ ಹೆಣ್ಣುಮಕ್ಕಳಿಗೆ ಲಿಂಗದೀಕ್ಷೆಯನ್ನು ಕೊಡುವುದಿಲ್ಲ. ಏಕೆಂದರೆ ಮುಂದೆ ಅವಳು ಕುರುಬರ ಮನೆಯ ಸೊಸೆಯಾಗಿ, ಹೋಗುವುದರಿಂದ ಅವಳಿಗೆ ಲಿಂಗದೀಕ್ಷೆ ಇರುವುದಿಲ್ಲ. ಅವಳ ಮದುವೆಯೂ ಕುರುಬರ ಮದುವೆಯಂತೆ ನಡೆಯುತ್ತದೆ. ಕುರುಬರ ಮನೆಯ ಸೊಸೆಯಾಗಿ ಬಂದ ಒಡೆಯರ ಹುಡುಗಿ ಕುರುಬರ ಮನೆಯ ಪದ್ಧತಿಯಂತೆ ಮಾಂಸಹಾರವನ್ನು ಸ್ವೀಕರಿಸಬಹುದು. ಆದರೆ ಮುಂದೆಯೂ ಅವಳು ಸಸ್ಯಹಾರಿಯಾಗಿ ಮುಂದುವರೆಯುತ್ತಾಳೆ. ಹೀಗೆ ಒಡೆಯರ ಮನೆಯಿಂದ ಹೆಣ್ಣನ್ನು ತೆಗೆದುಕೊಂಡ ಕುರುಬರ ಎಷ್ಟೋ ಕುಟುಂಬಗಳು ಸಸ್ಯಹಾರಿಗಳಾಗಿ ಪರಿವರ್ತನೆಯಾಗಿದ್ದು ಕಂಡುಬರುತ್ತದೆ. "ಉದಾಹರಣೆಗೆ ಜೇವರಗಿ ತಾಲೂಕಿನ ಮೂರಗಾನೂರ ಗ್ರಾಮದಲ್ಲಿಯ ಕುರುಬರು ಜೊತೆಗೆ ಒಡೆಯರುಗಳೊಂದಿಗೆ ರಕ್ತ ಸಂಬಂಧವನ್ನು ಮಾಡುತ್ತಿರುವುದರಿಂದ ಅಲ್ಲಿಯ ಯಾವ ಕುರುಬರೂ ಮಾಂಸಹಾರವನ್ನು ಸೇವಿಸುವುದಿಲ್ಲ."[೩] ಇದರ ಮುಂದುವರಿಕೆಯಾಗಿ ಮುದ್ದೇಬಿಹಾಳ ತಾಲೂಕಿನ ಸರೂರಿನ ಕುರುಬರು ಇದಕ್ಕೆ ಹೊರತೇನಿಲ್ಲ. ಹೀಗೆ ಕುರುಬರ ಗುರುಪರಂಪರೆಯವರಾದ ಒಡೆಯರುಗಳು ಮದುವೆಯ ಸಂಪ್ರದಾಯಗಳನ್ನು ಬಹಳ ವಿಶಿಷ್ಟವಾದ ರೀತಿಯಲ್ಲಿ ಮುಂದುವರಿಸಿ ಕೊಂಡು ಬಂದಿರುವುದು ಕಂಡುಬರುತ್ತದೆ.

ಒಡೆಯರು-ಒಡೇರಮ್ಮನಿಗೆ ನೀಡಿದ ಸ್ಥಾನ

ಕುರುಬರ ಹೆಣ್ಣುಮಗಳಾಗಿ ಬಂದು ಒಡೆಯರನ್ನು ಮದುವೆಯಾಗಿ ಒಡೇರಮ್ಮನಾಗುತ್ತಾಳೆ. ಅಂದಿನಿಂದ ಒಡೇರಮ್ಮನಿಗೆ ಗುರುಒಡೆಯರಿಗೆ ನೀಡುತ್ತಿದ್ದ ಗೌರವ, ಮರ್ಯಾದೆಯನ್ನು ಇವಳಿಗೂ ಕೊಡುತ್ತಾರೆ. ಇವಳನ್ನು ಸಾಮಾನ್ಯವಾಗಿ ಒಡೆಯರ ಹೆಂಡತಿ, ಒಡೇರಮ್ಮ, ಒಡೆಯಕಮ್ಮ, ಅಮ್ಮೋರು, ಎಂದು ಗೌರವದಿಂದ ಕರೆಯುವ ಪದ್ಧತಿಯಿದೆ. "ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ ಎಂದು ಸಾರಿರುವ

ಭಾರತ ದೇಶದಲ್ಲಿ ಕುರುಬ ಜನಾಂಗದಂಥ ಹಿಂದುಳಿದ ವರ್ಗದ ಸಮಾಜದಲ್ಲಿ ಸ್ತ್ರೀಗೆ ದೊರಕಿರುವ ಸಾಮಾಜಿಕ ಮತ್ತು ಧಾರ್ಮಿಕ ಹಕ್ಕುಗಳನ್ನು ಗಮನಿಸಿದಾಗ ಆಶ್ಚರ್ಯವಾಗುತ್ತದೆ. ಅದಕ್ಕಾಗಿಯೇ ಒಡೆಯರ ಹೆಂಡತಿ 'ಒಡೇರಮ್ಮ' ಭಾರತೀಯ ಸ್ತ್ರೀ ಸಮಾಜದ ಇತಿಹಾಸದಲ್ಲಿ ಮತ್ತು ಸಮಕಾಲೀನ ಸಂದರ್ಭದಲ್ಲಿ ಅತ್ಯಂತ ಉನ್ನತ ಸ್ಥಾನವನ್ನು ಪಡೆದಿದ್ದಾಳೆ. ಇದಕ್ಕೆ ಕಾರಣ ಈ ಜನಾಂಗದವರು ಸ್ತ್ರೀ ವಿಚಾರದಲ್ಲಿ ಅನುಸರಿಸಿಕೊಂಡು ಬಂದಿರುವ ಅತ್ಯಂತ ಪ್ರಗತಿಪರವೂ, ಆದರ್ಶವೂ ಆದ ಆಚರಣೆಗಳೇ ಕಾರಣವಾಗಿವೆ"[೪] ಎಂದು ಹೇಳಬೇಕಾಗಿದೆ.

ಹೀಗೆ ಒಡೆಯರ ಕೈಹಿಡಿದು ಒಡೆಯರಮ್ಮನಾಗಿ ಬಂದಾಗಿನಿಂದಲೇ ಅವಳ ಸ್ಥಾನ ಬೇರೆ ಕುರುಬರಿಗಿಂತಲೂ ಉನ್ನತ ಸ್ಥಾನ ಪಡೆದಿರುತ್ತಾಳೆ. ಹಾಗೆಯೇ ಗುರುಒಡೆಯರು ಶಿಷ್ಯಂದಿರನ್ನು ಹೇಗೆ ಆಶೀರ್ವಾದಿಸುತ್ತಾರೋ, ಅದೇ ಸ್ಥಾನಮಾನ ಒಡೇರಮ್ಮಗೆ ಸಿಗುತ್ತದೆ. ಇವಳು ಧಾರ್ಮಿಕವಾಗಿ, ಆಚರಿಸುವಂತಹ ಎಲ್ಲಾ ಕಾರ್ಯಗಳಿಗೆ ಭಾಗವಹಿಸಿ ಪೌರೋಹಿತ್ಯವಾಗಿ ಎಲ್ಲಾ ಕಾರ್ಯಗಳನ್ನು ನೆರವೇರಿಸಿಕೊಡುತ್ತಾಳೆ. ಈಕೆ ತನ್ನ ಗಂಡನಂತೆಯೇ ಸದಾ ಹಣೆಯ ಮೇಲೆ ಮೂರು ಬೆರಳು ವಿಭೂತಿ, ಎದೆಯ ಮೇಲೆ ಲಿಂಗವನ್ನು ಧರಿಸಿಕೊಂಡಿರುತ್ತಾಳೆ. ಹೀಗೆ ಅವಳ ಬದುಕು ವಿನ್ಯಾಸ ಕಂಡಂತೆ ಆಹಾರ ಪದ್ಧತಿಯಲ್ಲಿ ವಿಶಿಷ್ಟತೆಯನ್ನು ಪಡೆದುಕೊಳ್ಳುತ್ತಾಳೆ. ಏಕೆಂದರೆ ಒಡೆಯರು ಕಟ್ಟಾ ಸಸ್ಯಹಾರಿಗಳು ಆದ್ದರಿಂದ ಒಡೇರಮ್ಮನು ಅವರ ಆಹಾರ ಪದ್ಧತಿಯನ್ನು ಅಳವಡಿಸಿಕೊಂಡಿರುತ್ತಾಳೆ. ಮತ್ತೆ ಏನಾದರೂ ತನ್ನ ತವರುಮನೆಗೆ ಹೋದರೆ ಅವಳಿಗೆ ಮಡಿಯಿಂದ ಮನೆಯನ್ನು ಶುದ್ಧಿ ಮಾಡಿ ಅವಳಿಗಾಗಿ ಪ್ರತ್ಯೇಕ ಅಡುಗೆಯನ್ನು ಮಾಡುತ್ತಾರೆ. ಅವಳಿಗಾಗಿ ಪ್ರತ್ಯೇಕ ವಸತಿ ವ್ಯವಸ್ಥೆಯನ್ನು ಮಾಡುತ್ತಾರೆ. ಹಾಗೆಯೇ ತವರು ಮನೆಯಲ್ಲಿರುವ ತನ್ನ ತಂದೆ-ತಾಯಿಯರು ಊಟ ಮಾಡಿದ ತಟ್ಟೆಯನ್ನು ತೊಳೆಯುವಂತಿಲ್ಲ. ಮನೆಯ ಹೊರಗಡೆಯೇ ಅವರಿಗೆ ಊಟದ ವ್ಯವಸ್ಥೆ ಇರುತ್ತದೆ. ಹೀಗೆ ಒಡೆಯರು ನೆರವೇರಿಸಿ ಕೊಡುವ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಾದ ಮದುವೆ, ಗೃಹಪ್ರವೇಶ, ನಾಮಕರಣ, ಶವಸಂಸ್ಕಾರ ಹೀಗೆ ಹಲವಾರು ಕಾರ್ಯಕ್ರಮಗಳನ್ನು ಗುರುಒಡೆಯರ ಪತ್ನಿಯರಾದ ಒಡೇರಮ್ಮಗಳು ಮಾಡುವ ಅಧಿಕಾರವನ್ನು ಪಡೆದುಕೊಂಡಿರುತ್ತಾರೆ.

ಸಾಮಾನ್ಯವಾಗಿ ಗುರುಒಡೆಯರು ಕುರುಬರ ಮದುವೆಗಳ ಕಾರ್ಯಗಳನ್ನು ನೆರವೇರಿಸುವ ಸಂದರ್ಭದಲ್ಲಿ ಗುರುಒಡೆಯರು ವಧು-ವರರಿಗೆ ಹೇಳುವ ಹಾರೈಕೆ

ಕಲಿ ಕಲಿಯಾಗಿ
ಕರ್ಯಜ್ಜನಾಗಿ
ಭೀಮಣ್ಣನಾಗಿ

ಬಿಲ್ಲರಾಜ್ಯವನಾಳಿ
ಗುರು ರೇವಣಸಿದ್ಧ ಕಟ್ಟಿದ
ಸೊಸೆ ಸ್ಥಿರವಾಗಲಿ
ಸರೂರ ಶಾಂತಮುತ್ತಯ್ಯ
ಕಟ್ಟಿದ ಕಲ್ಯಾಣ ಸ್ಥಿರವಾಗಲೀ
ಸೋಬತ್ತಿ ಸೋಬಾನ
ಸೋಬತ್ತಿ ಸೋಬಾನ

ಎಂದು ಕರ್ನಾಟಕದಾದ್ಯಂತವಾಗಿ ಒಡೆಯರು ಆಶೀರ್ವದಿಸಿದ್ದಾರೆ. ಇದೇ ರೀತಿ ಆಂಧ್ರದಲ್ಲಿಯೂ ಈ ಸರೂರು ಪರಂಪರೆಯವರು ಕಂಡುಬರುತ್ತಾರೆ. ಉದಾಹರಣೆಗೆ ಬೆಳಗುಪ್ಪ ಮಂಡಲಂಗೆ ಸೇರಿದ ಸೀರ್ಪಿಕೊಟ್ಟಾಲಿನಲ್ಲಿನ ಒಡೆಯರು ಹೇಳುವಂತೆ,

ಸರೂರ ಶಾಂತಮುತ್ತಯ್ಯ
ಕಟ್ಟಿನ ಕಲ್ಯಾಣಂ ಜಯ ಜಯ
ಸೀರ್ಪಿಯ ರೇವಣಸಿದ್ಧಡು
ಕಟ್ಟಿನ ಕಲ್ಯಾಣಂ ಜಯ ಜಯ

ಎಂದು ಹಾರೈಸುತ್ತಾರೆ. ಹೀಗೆ ಒಡೆಯರು ಮದುವೆಯಲ್ಲಿ ನವದಂಪತಿಗಳಿಗೆ ಹಾರೈಸುವಂತೆ ಒಡೇರಮ್ಮನೂ ಈ ರೀತಿಯಾದ ಆಶೀರ್ವಾದ ಮಾಡುತ್ತಿರುವುದನ್ನು ಪಾಲಿಸಿಕೊಂಡು ಬರುತ್ತಿರುವುದು ಕಂಡುಬರುತ್ತದೆ. ಅಂದರೆ ಗುರುಒಡೆಯರ ಮತ್ತೊಂದು ಪ್ರತಿಬಿಂಬವೇ ಈ ಒಡೇರಮ್ಮ ಎಂದು ಹೇಳಿದರೂ ತಪ್ಪಾಗಲಾರದು. ಹೀಗೆ ಗುರುಒಡೆಯರ ಪರಂಪರೆಯಲ್ಲಿ ಒಡೇರಮ್ಮನ ಗಂಡ ಸತ್ತರೆ ಅಥವಾ ಒಡೆಯರು ವಿಧಿವಶರಾದರೆ ಆತನ ಹೆಂಡತಿ ವಿಧವೆಯಾಗುವುದಿಲ್ಲ. ಇದು ಕುರುಬರ ಗುರುಒಡೆಯರ ಆಚರಣೆಯಲ್ಲಿ ವಿಶೇಷವಾದ ಸಂಪ್ರದಾಯವಾಗಿದೆ.

ಏಕೆಂದರೆ ಅವಳ ಕೈಹಿಡಿದ ಗಂಡನಂತೆಯೇ ಅವಳ ಅಂಗದ ಮೇಲಿನ ಲಿಂಗವೂ ಅವಳ ಗಂಡನೇ. ಕೈ ಹಿಡಿದ ಗಂಡ ತೀರಿಕೊಂಡರೂ ಅಂಗದ ಮೇಲಿನ ಲಿಂಗವಿರುವುದರಿಂದ ಅವಳು ವಿಧವೆಯಾಗುವುದಿಲ್ಲ. ಗಂಡ ತೀರಿಕೊಂಡ ಮೇಲೆ ಅವಳು ಸಾಮಾನ್ಯವಾಗಿ ಎಲ್ಲಾ ವಿಧವೆಯರು ಸೌಭಾಗ್ಯ ಚಿಹ್ನೆಗಳಾದ ಮಂಗಳ ಸೂತ್ರ(ತಾಳಿ) ಬಳೆ, ಕಾಲುಂಗುರ, ಕುಂಕುಮವನ್ನು ತೆಗೆದು ಹಾಕುವ ಹಾಗೆ ಒಡೇರಮ್ಮ ತೆಗೆಯುವುದಿಲ್ಲ. ಒಂದರ್ಥದಲ್ಲಿ ಅವಳು ಚಿರಮುತ್ತೈದೆ. ಅವಳು ಹಿಂದಿನಂತೆಯೇ ಎಲ್ಲಾ ಮಂಗಳ ಶರಣರು ಸಾರಿದ 'ಶರಣರ ಸತಿ ಲಿಂಗಪತಿ' ಎಂಬ ಆದರ್ಶ

ತತ್ವ ಬೇರೊಂದು ಜನಾಂಗದಲ್ಲಿರುವುದು ಅದೂ ಕುರುಬ ಜನಾಂಗದಲ್ಲಿ ಅರ್ಥಪೂರ್ಣ ಆಚರಣೆಯಾಗಿ ಬಳಕೆಯಲ್ಲಿರುವುದು ಒಂದು ಸೋಜಿಗದ ಸಂಗತಿಯಾಗಿದೆ ಎಂದು ಡಾ. ಚಿದಾನಂದ ಮೂರ್ತಿಯವರು ಅಭಿಮಾನದಿಂದ ಹೇಳಿರುವ ಮಾತನ್ನು ಇಲ್ಲಿ ನೆನೆಯಬೇಕು. ಹೀಗೆ ಕರ್ನಾಟಕದ ಮುಂದುವರೆದ ಸಮಾಜಗಳಲ್ಲಿ ಸ್ತ್ರೀಗೆ ದೊರೆಯದೇ ಇರುವ ಸ್ಥಾನ ಗೌರವಗಳು ಕುರುಬ ಜನಾಂಗದ ಸ್ತ್ರೀಗೆ ದೊರಕಿರುವುದು ವಿಶೇಷವೆಂದೇ ಹೇಳಬೇಕು. ಆದರೆ ಇನ್ನೂ ಕೆಲವರು ಗುರುಪರಂಪರೆಯಲ್ಲಿ ರೂಢಿಯಿಲ್ಲದವರು ಎಲ್ಲಾ ವಿಧವೆಯರಂತೆ, ಸೌಭಾಗ್ಯದ ಚಿನ್ಹೆಗಳಾದ ಬಳೆ, ಮಂಗಳಸೂತ್ರ, ಕುಂಕುಮ, ಹೂ ಇದಕ್ಕೆ ಸಂಬಂಧಿಸಿದ ಇನ್ನೂ ಮುಂತಾದವುಗಳನ್ನು ತೆಗೆಯುತ್ತಿರುವುದು ಕಂಡುಬರುತ್ತದೆ.

ಉದಾಹರಣೆಗೆ, ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ತಾಳಿಕಟ್ಟೆ, ಬೆಳಗಾಂ ಜಿಲ್ಲೆಯ ಸವದತ್ತಿ ತಾಲೂಕಿನ ಹಿರೇಕುಂಬಿ, ಸಂಗ್ರೇಶಕೊಪ್ಪ, ಬೈಲಹೊಂಗಲ ತಾಲೂಕಿನ ಗೋವನಕೊಪ್ಪ ಇನ್ನೂ ಮುಂತಾದವುಗಳು ಪ್ರಮುಖವಾಗಿ ಕಂಡುಬರುತ್ತವೆ. ಇಲ್ಲಿ ಇನ್ನೊಂದು ವಿಶೇಷವಾದ ಸಂಗತಿಯೆಂದರೆ, ಒಡೆಯರ ಮನೆಯಲ್ಲಿ ಹುಟ್ಟಿದ ಹೆಣ್ಣುಮಗುವಿಗೆ, ಲಿಂಗದೀಕ್ಷೆಯಿಲ್ಲ ಹಾಗೂ ಧಾರ್ಮಿಕವಾಗಿ ಆಚರಿಸುವ ಆಚರಣೆಗಳಿಗೆ ಭಾಗಿಯಾಗುವ ಅವಕಾಶವೂ ಇರುವುದಿಲ್ಲ. ಏಕೆಂದರೆ ಮುಂದೆ ಅವಳು ಕುರುಬರ ಮನೆಯ ಸೊಸೆಯಾಗಿ ಹೋಗುತ್ತಾಳೆಂಬ ಕಾರಣದಿಂದ ಅವಳಿಗೆ ಯಾವುದೇ ಮಾನ್ಯತೆ ಕೊಡುವುದಿಲ್ಲ. ಅವಳ ಮದುವೆಯೂ ಕುರುಬರ ಮದುವೆಯಂತೆಯೇ ನಡೆಯುತ್ತದೆ. ಇದು ಒಡೆಯರ ಹೆಣ್ಣುಮಗಳ ಸ್ಥಿತಿಯಾಗಿದೆ.

ಮಗುವಿನ ಜನನದ ಆಚರಣೆಗಳು(ನಾಮಕರಣ)

ಸಾಮಾನ್ಯವಾಗಿ ಪ್ರತಿಯೊಂದು ಮಗುವಿನ ಜನನದ ಸಂದರ್ಭದ ಆಚರಣೆಗಳು ತಾಯಿಯ ತವರು ಮನೆಯಲ್ಲಿ ನಡೆಯುತ್ತವೆ. ಒಡೆಯರಲ್ಲಿಯೂ ಇದನ್ನು ಹೊರತಾಗಿಲ್ಲ. ಈ ಹಿನ್ನೆಲೆಯಲ್ಲಿ ಒಡೆಯರ ಮನೆಯಲ್ಲಿ ಮಗು ಜನಿಸಿದ ೯ನೇ ದಿನ ಇಲ್ಲವೆ ೧೧ನೇಯ ದಿನಕ್ಕೆ ಸೂತಕ ಮುಗಿಯುತ್ತದೆ. ಹುಟ್ಟಿದ ಮಗು ಗಂಡಾಗಿದ್ದರೆ, ೫ನೆಯ ತಿಂಗಳಲ್ಲಿ ನಾಮಕರಣ ಮಾಡಲಾಗುತ್ತದೆ. ನಾಮಕರಣ ಸಂದರ್ಭದಲ್ಲಿಯೇ 'ಹುಟ್ಟು ಲಿಂಗಧಾರಣೆ' ಮಾಡುತ್ತಾರೆ. ಅದು ಗಂಡು ಮಗುವಿಗೆ ಮಾತ್ರ; ಅದೇ ಹೆಣ್ಣು ಮಗುವಿಗೆ ಈ ರೀತಿಯಾದ ಲಿಂಗಧಾರಣೆ ಮಾಡುವುದಿಲ್ಲ. ಕೇವಲ ನಾಮಕರಣಕ್ಕೆ ಸಂಬಂಧಿಸಿದ ಕಾರ್ಯಗಳು ಮಾತ್ರ ಮಾಡುತ್ತಾರೆ. ಏಕೆಂದರೆ ಹೆಣ್ಣು ಮಗು ಬೆಳೆದು ದೊಡ್ಡವಳಾದ ಮೇಲೆ ಕುರುಬರ ಮನೆಗೆ ಸೊಸೆಯಾಗಿ ಹೋಗುವಳು. ಆದ್ದರಿಂದ ಅವಳಿಗೆ ಲಿಂಗದೀಕ್ಷೆಯ ಅವಶ್ಯಕತೆಯಿಲ್ಲ ಎಂದು ಹೇಳುತ್ತಾರೆ.

ಆದರೆ ಗಂಡು ಮಗುವಿನ ನಾಮಕರಣ ಮತ್ತು ಲಿಂಗಧಾರಣೆಯ ಕ್ರಮವು ಬಹಳ ವಿಶೇಷವಾಗಿರುತ್ತದೆ. ತಾಯಿ ಮತ್ತು ಮಗುವಿಗೆ ಮಡಿಸ್ನಾನ ಮಾಡಿಸಿ ಶ್ರೀ ಗುರು ರೇವಣಸಿದ್ಧೇಶ್ವರನ ಸನ್ನಿಧಿಯಲ್ಲಿ ಕರಿಯ ಕಂಬಳಿಯನ್ನು ಹಾಸಿ ಪಂಚ ಕಳಶವನ್ನು ಹೂಡುತ್ತಾರೆ. ರೇವಣಸಿದ್ಧೇಶ್ವರನನ್ನು ಬಳಸಿದ ಸೂತ್ರವು ತಾಯಿ ಮಗುವನ್ನು ಸ್ಪರ್ಶಿಸುತ್ತದೆ. ಆ ಸೂತ್ರದ ಮೂಲಕ ತಂದ ಲಿಂಗವನ್ನು ಹಿರಿಯ ಒಡೆಯರು ಮಗುವಿಗೆ ಧಾರಣ ಮಾಡುತ್ತಾರೆ. ಹೀಗೆ ಲಿಂಗಧಾರಣೆ ಮಾಡಿ ತಮ್ಮ ಗುರುಒಡೆಯರ ಪರಂಪರೆಗೆ ಅನುಗುಣವಾದ ಹೆಸರುಗಳನ್ನು ಇಡುತ್ತಾರೆ. ಉದಾಹರಣೆಗೆ, ರೇವಣಸಿದ್ಧ, ಶಾಂತಯ್ಯ, ಸಿದ್ಧಯ್ಯ ಮಂಕಯ್ಯ, ಶಾಂತಮುತ್ತಯ್ಯ, ಮಂಕಸಿದ್ಧಯ್ಯ, ಕರಿಸಿದ್ಧ, ಸಿದ್ಧಯ್ಯ ಗುರು ಹೀಗೆ ಅನೇಕ ವಿಧಗಳಲ್ಲಿ ತಮ್ಮ ಕುಲ ಪರಂಪರೆಗೆ ಸಂಬಂಧಿಸಿದ ಹೆಸರುಗಳನ್ನು ನಾಮಕರಣ ಮಾಡುತ್ತಾರೆ. ಇದು ಕುರುಬ ಗುರುಒಡೆಯರು ರೂಢಿಸಿಕೊಂಡು ಬಂದ ಪದ್ಧತಿಯಾಗಿದೆ.

ಋತುಮತಿಯ ಶಾಸ್ತ್ರ

ಸಾಮಾನ್ಯವಾಗಿ ಎಲ್ಲಾ ಸಮುದಾಯಗಳಲ್ಲಿ ಹೆಣ್ಣುಮಗಳು ಋತುಮತಿಯಾದಾಗ ಅವರದ್ದೇ ಆದ ಕೆಲವು ಸಂಪ್ರದಾಯಗಳನ್ನು ರೂಢಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಹೆಣ್ಣು ಮಗಳು ಋತುಮತಿಯಾಗುವುದು ಒಂದು ನೈಸರ್ಗಿಕವಾದಂತಹ ಕ್ರಿಯೆಯಾಗಿದೆ. ಹೆಣ್ಣು ಋತುಮತಿ ಯಾಗುವುದಕ್ಕೆ ಮೈನೆರೆಯುವುದು, ದೊಡ್ಡವಳಾಗುವುದು ಎಂಬ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಈ ಸಂದರ್ಭದಲ್ಲಿ ಬೇರೆ ಬೇರೆ ಜನಾಂಗದವರು ೬ ಮತ್ತು ೮ ದಿನ ಇಲ್ಲವೆ, ೧೨ ದಿನಗಳವರೆಗೆ ಮನೆಯಿಂದ ಹೊರಗೆ ಹಸಿರು ಗುಡಿಸಲು ಹಾಕಿ ಅವಳಿಗೆ ಪ್ರತ್ಯೇಕವಾದ ವ್ಯವಸ್ಥೆ ಮಾಡಿರುತ್ತಾರೆ. ಆದರೆ ಒಡೆಯರಲ್ಲಿ ಹೆಣ್ಣು ಮಗಳು ಋತುಮತಿಯಾದಾಗ, ಐದು ದಿನಗಳವರೆಗೆ ಸೂತಕ ದಿನಗಳೆಂದು ಪರಿಗಣಿಸುತ್ತಾರೆ.

ಈ ಐದು ದಿನಗಳ ಅವಧಿಯಲ್ಲಿ ಪ್ರತ್ಯೇಕ ಸ್ಥಳ ಮಾಡಿ, ಪ್ರತಿ ದಿನ ಎಣ್ಣೆ, ಅರಿಷಿಣ, ಕುಂಕುಮ ಹಚ್ಚಿ ಬಿಸಿ ನೀರಿನಿಂದ ಸ್ನಾನ ಮಾಡಿಸಿ, ಹೂವನ್ನು ಮುಡಿಸಿ, ಆರತಿಯನ್ನು ಬೆಳಗುತ್ತಾರೆ. ಐದನೆಯ ದಿವಸ ಮನೆಯನ್ನು ತೊಳೆದು ಶುದ್ಧಗೊಳಿಸಿ ಹಾಸಿಗೆ ಹೊದಿಕೆಗಳನ್ನು ಮಡಿ ಮಾಡುತ್ತಾರೆ. ನಂತರ ಅವಳಿಗೆ ಎಣ್ಣೆ ಅರಿಷಿಣವನ್ನು ಹಚ್ಚಿ ಬಿಸಿ ನೀರಿನಿಂದ ಸ್ನಾನವನ್ನು ಮಾಡಿಸಿ ಬಿಳಿಯ ಬಟ್ಟೆಯನ್ನು ತೊಡಿಸಿ, ಒಡೆಯರು ಅವಳ ತಲೆಯ ಮೇಲೆ ಪಾದವಿಟ್ಟು ಆಶೀರ್ವದಿಸಿ ಒಳಗಡೆ ಕರೆದುಕೊಳ್ಳುತ್ತಾರೆ.

ಇದಾದ ನಂತರ ಮುತ್ತೈದೆಯರು ಹೂವು ಮುಡಿಸಿ ಆರತಿಯನ್ನು ಬೆಳಗುತ್ತಾರೆ. ಹೀಗೆ ಆರತಿ ಬೆಳಗುವುದರ ಮೂಲಕ ಒಡೆಯರ ಹೆಣ್ಣು ಮಗಳನ್ನು ಹಾರೈಸುತ್ತಾರೆ. ಈ ರೀತಿಯಾಗಿ ಒಡೆಯರು ತಮ್ಮ ಹೆಣ್ಣುಮಗಳಿಗೆ ಋತುಮತಿಯ ಕಾರ್ಯವನ್ನು ಮಾಡುತ್ತಾರೆ. ಇದು ಸಹ ಒಡೆಯರು ಸಂಸ್ಕೃತಿಯ ಬದುಕಿನ ಆಚರಣೆಗಳಲ್ಲಿ ಒಂದಾಗಿದೆ ಎಂಬುದು ಗಮನಾರ್ಹವಾಗಿದೆ.

ಸೀಮಂತ ಕಾರ್ಯ

ಸೀಮಂತ ಕಾರ್ಯ ಎಂದರೆ ಹೆಣ್ಣುಮಗಳು ಮೊದಲಬಾರಿಗೆ ಗರ್ಭವತಿಯಾದಾಗ ಮಾಡುವ ಆಚರಣೆಯಾಗಿದೆ. ಈ ಆಚರಣೆಯನ್ನು ಪ್ರತಿಯೊಂದು ಸಮುದಾಯದವರು ಈ ಕಾರ್ಯವನ್ನು ಬೆಸ ಸಂಖ್ಯೆಯ ತಿಂಗಳಲ್ಲಿ ಮಾಡುವುದು ಕಂಡುಬರುತ್ತದೆ. ಆದ್ದರಿಂದ ಸಾಮಾನ್ಯವಾಗಿ ೫ನೆಯ, ೭ನೆಯ ಅಥವಾ ೯ನೆಯ ತಿಂಗಳಲ್ಲಿ ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ಕುರುಬರ ಮತ್ತು ಗುರುಒಡೆಯರಲ್ಲಿಯೂ ಸೀಮಂತ ಕಾರ್ಯವನ್ನು ಮಾಡುತ್ತಾರೆ. ಈ ಕಾರ್ಯವನ್ನು ಮಾಡಲು ಹೆಣ್ಣು ಮಗಳ ತವರಿನವರು ನಿಗದಿತವಾದ ಒಂದು ಶುಭದಿನವನ್ನು ತಾವೇ ಗೊತ್ತು ಮಾಡುತ್ತಾರೆ. ಇಲ್ಲವೇ ಬ್ರಾಹ್ಮಣ ಪುರೋಹಿತರಿಂದ ದಿನವನ್ನು ನಿಗದಿಪಡಿಸುತ್ತಾರೆ. ಈ ಸಂದರ್ಭದಲ್ಲಿ ಚೊಚ್ಚಲು ಗರ್ಭಿಣಿಯಾದ ಮಗಳಿಗೆ, ಮುತ್ತೈದರೆಲ್ಲ ಸೇರಿ ಹಸಿರು ಅಥವಾ ಹಸಿರು ಬಣ್ಣವನ್ನು ಹೋಲುವ ಸೀರೆ, ಕುಪ್ಪಸ, ಮುಡಿಗೆ ಹೂವನ್ನು ಮುಡಿಸಿ ಆರತಿಯನ್ನು ಬೆಳಗುತ್ತಾರೆ. ಜೊತೆಗೆ ಉಡಿ ತುಂಬಿಸುತ್ತಾರೆ. ಅಂದರೆ ಎಲೆ, ಅಡಿಕೆ, ಒಂದು ತೆಂಗಿನಕಾಯಿ ಮತ್ತು ಅಕ್ಕಿಯನ್ನು ಹಾಕಿ ಉಡಿತುಂಬಿಸುವ ಕಾರ್ಯ ನಡೆಯುತ್ತದೆ. ಈ ಸಂದರ್ಭದಲ್ಲಿ ಸೀಮಂತ ಕಾರ್ಯಕ್ಕೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಾರೆ. ಹೀಗೆ ಅನೇಕ ವಿಧಗಳಲ್ಲಿ ಕಾರ್ಯವನ್ನು ಸಡಗರದಿಂದ ಮಾಡುತ್ತಾರೆ. ಈ ಸೀಮಂತ ಕಾರ್ಯಕ್ಕೆ ಬಂದ ಜನತೆಗೆ ಸಿಹಿ ಊಟದ ವ್ಯವಸ್ಥೆಯನ್ನು ಮಾಡಿರುತ್ತಾರೆ. ಈ ಕಾರ್ಯ ಹೆಣ್ಣುಮಕ್ಕಳ ಬದುಕಿನಲ್ಲಿ ಅತ್ಯುನ್ನತ ಸ್ಥಾನವನ್ನು ಪಡೆದುಕೊಂಡಿದೆ.

ವಿಧವಾ ವಿವಾಹ

ವಿಧವಾ ವಿವಾಹ ಪದ್ಧತಿಗೆ ಬೇರೆ ಜನಾಂಗದಲ್ಲಿ ಅವಕಾಶವಿರುವಾಗ ಕುರುಬರ ಗುರುಒಡೆಯರಲ್ಲಿ ವಿಧವಾ ವಿವಾಹಕ್ಕೆ ಅವಕಾಶವಿರುವುದಿಲ್ಲ. ಏಕೆಂದರೆ ಒಡೆಯರ ಹೆಂಡತಿಯಾದ ಒಡೇರಮ್ಮಗಳಿಗೆ ಪತಿ ವಿಯೋಗವಾದರೂ ಕೂಡ ಇತರ ವಿಧವೆಯರಂತೆ ಸೌಭಾಗ್ಯದ ಸಂಕೇತಗಳಾದ ತಾಳಿ, ಬಳೆ, ಕುಂಕುಮ ಇತ್ಯಾದಿಗಳನ್ನು ತೆಗೆಯುವುದಿಲ್ಲ. ಏಕೆಂದರೆ ಒಡೆಯರು ಮದುವೆ ಮಾಡಿಕೊಳ್ಳುವ ಸಂದರ್ಭದಲ್ಲಿ ಶಾಸ್ತ್ರೋಕ್ತವಾಗಿ ಅವಳಿಗೆ ರೇವಣಸಿದ್ಧನ ಸಮ್ಮುಖದಲ್ಲಿ ಲಿಂಗದೀಕ್ಷೆಯಾಗಿರುತ್ತದೆ. ಆದ್ದರಿಂದ ಅಂಗದ ಮೇಲೆ ಕಟ್ಟಿಕೊಂಡಿರುವ ಲಿಂಗದೊಂದಿಗೆ ಅವಳ ವಾಸ್ತವವಾದ ಮದುವೆಯಾಗಿರುತ್ತದೆ ಎಂಬ ಭಾವನೆ ಕುರುಬರ ಗುರುಒಡೆಯರಲ್ಲಿ ಬಂದಿದೆ. ಹಾಗಾಗಿ ಕೈಹಿಡಿದ ಗಂಡ ತೀರಿಹೋದರೂ ಅವಳ ಅಂಗದ ಮೇಲೆ ಕಟ್ಟಿಕೊಂಡಿರುವ ಲಿಂಗವಿರುವುದರಿಂದ ಅವಳು ಬೇರೆ ವಿವಾಹವಾಗುವ ಪ್ರಶ್ನೆಯೇ ಬರುವುದಿಲ್ಲ. ಆದ್ದರಿಂದ ಇವಳಿಗೆ "ಚಿರ ಮುತ್ತೈದೆ" ಎಂದು ಕರೆಯುವುದುಂಟು. ಹೀಗಾಗಿ ಗಂಡ ಸತ್ತ ನಂತರ ಯಾವುದೇ ಸೌಭಾಗ್ಯ ಸಂಕೇತಗಳನ್ನು ತೆಗೆದು ಹಾಕದೆ, ಗಂಡ ಭಾಗಿಯಾಗುತ್ತಿದ್ದ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳಿಗೆ ತಾನು

ಭಾಗಿಯಾಗಿ ಎಲ್ಲಾ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುವ ಒಡೆತನವನ್ನೇ ಪಡೆದುಕೊಂಡಿರುತ್ತಾಳೆ. ಈ ಕಾರಣದಿಂದ ಬೇರೆ ಸ್ತ್ರೀಯರಿಗಿಂತಲೂ ಉನ್ನತ ಸ್ಥಾನ ಗೌರವಗಳನ್ನು ಅವಲಂಭಿಸಿರುವ ಒಡೇರಮ್ಮ ಉತ್ತಮ ನಡೆನುಡಿಯಿಂದಿರಬೇಕಾಗಿದೆ. ಹೀಗಾಗಿ ಒಡೇರಮ್ಮನ ಬದುಕಿನಲ್ಲಿ ಒಳ್ಳೆಯ ಗುಣ ಮತ್ತು ಪಾತಿವ್ರತೆಯನ್ನು ಜನರು ಬಯಸುತ್ತಿದ್ದರು. ಈ ಹಿನ್ನೆಲೆಯಲ್ಲಿ ವಿಧವಾ ವಿವಾಹಕ್ಕೆ ಅವಕಾಶ ನೀಡದೇ ಇರುವ ಪದ್ಧತಿಯನ್ನು ಕುರುಬರ ಗುರುಒಡೆಯರು ರೂಢಿಸಿಕೊಂಡು ಬಂದಿರಬಹುದು.

ಶವಸಂಸ್ಕಾರ ಪದ್ಧತಿ

ಶವಸಂಸ್ಕಾರ ಎಂದರೆ ಸಾಮಾನ್ಯವಾಗಿ ಸತ್ತವರನ್ನು ಹೂಳುವ ಅಥವಾ ಸುಡುವ ಸಂದರ್ಭದಲ್ಲಿ ಸತ್ತ ವ್ಯಕ್ತಿಯೊಂದಿಗೆ, ವಿಧಿ–ವಿಧಾನಗಳ ಮೂಲಕ ಮಾಡುವ ಸಂಪ್ರದಾಯವಾಗಿದೆ. 'ಮನುಷ್ಯನ' ಬದುಕಿನಲ್ಲಿ ಹುಟ್ಟು ಸಾವು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಹುಟ್ಟು ಆಕಸ್ಮಿಕವಾದರೆ, ಸಾವು ಅನಿವಾರ್ಯ, ಹಾಗಾಗಿ ಜನಿಸಿದ ಪ್ರತಿಯೊಬ್ಬ ವ್ಯಕ್ತಿಯ ಸಂಪ್ರದಾಯಗಳೇ ಶವಸಂಸ್ಕಾರಕ್ಕೆ ಕಾರಣ.

ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಜನಾಂಗವೂ ತನ್ನದೇ ರೀತಿಯಲ್ಲಿ ಶವಸಂಸ್ಕಾರ ಮಾಡಿದರೆ, ವಿಭಿನ್ನವಾದ ನೆಲೆಯಲ್ಲಿ ಕುರುಬರ ಗುರುಒಡೆಯರು ಮಾಡುತ್ತಾರೆ. ಗುರುಒಡೆಯರ ಪರಂಪರೆಯಲ್ಲಿ ಒಡೆಯರಯ್ಯ ಅಥವಾ ಒಡೇರಮ್ಮ ನಿಧನರಾದರೆ ಶವವನ್ನು ಸ್ನಾನ ಮಾಡಿಸಿ, ಹೊಸ ಬಟ್ಟೆಯನ್ನು ತೊಡಿಸಿ ಲಿಂಗಪೂಜಾ ಭಂಗಿಯಲ್ಲಿ ಗೋಡೆಗೆ ಒರಗಿಸಿ ಕೂಡಿಸಿರುತ್ತಾರೆ. ಒಡೆಯರ ಶವದ ಹಣೆಗೆ, ಕೊರಳಿಗೆ, ಭುಜ, ರಟ್ಟೆ, ಮುಂಗೈ, ಮುಂಗಾಲುಗಳಿಗೆ ಮೂರು ಬೆರಳಿನಿಂದ ಧವಳ ಬಣ್ಣದ ವಿಭೂತಿಯನ್ನು ಹಚ್ಚಿ ಹಣೆಗೆ ಗಂಧವನ್ನು ಇಡುತ್ತಾರೆ. ಬಿಲ್ವಪತ್ರಿ, ತುಂಬೆಪತ್ರಿ, ಲಕ್ಕಿಪತ್ರಿಯನ್ನು ಹೇರಳವಾಗಿಟ್ಟಿರುತ್ತಾರೆ. ಮರುಗ, ಮಲ್ಲಿಗೆ, ಸೇವಂತಿಗೆ ಹೂವುಗಳಿಂದ ಕಳೇಬರವನ್ನು ಅಲಂಕರಿಸುತ್ತಾರೆ. ಮನೆಯಲ್ಲಿ ಲೋಭಾನದ ಹೊಗೆಯನ್ನು ಹಾಕಿರುತ್ತಾರೆ. ನಂತರ ಎಲ್ಲಾ ಬಳಗದವರು, ಹಿರಿಯರು ಸೇರಿದ ನಂತರ ಕಳೇಬರವನ್ನು ರೇವಣಸಿದ್ಧನ ಗುಡಿಗೆ ತರುತ್ತಾರೆ. ಗರ್ಭಗುಡಿಯಲ್ಲಿ ಶೋಭಿಸುವ ಶಿವನ ಸ್ವರೂಪಿ ರೇವಣಸಿದ್ಧಯ್ಯನ ಎದುರುಗಡೆಗೆ ಪ್ರಾಂಗಣದಲ್ಲಿ ಇಡುತ್ತಾರೆ.

ಆಗ ಮಠದ ಒಡೆಯರು ಲಿಂಗೈಕ್ಯ ಗುರುವಿಗೆ ಅಥವಾ ಗುರುತಾಯಿಗೆ(ಒಡೇರಮ್ಮ) ಹಣೆಗೆ ವಿಭೂತಿ ಗಂಧವನ್ನು ಹಚ್ಚಿ ಧೂಪಾರತಿಯಿಂದ ಪೂಜೆಯನ್ನು ಮಾಡುತ್ತಾರೆ. ಹಲಗೆ, ಡೊಳ್ಳು, ಕಂಡೆ, ಚಮ್ಮೇಳ ಮುಂತಾದ ಮಂಗಳವಾದ್ಯಗಳು ಮೊಳಗುತ್ತಿರುವಾಗ ಗುರುವಿನ ಲಿಂಗದೀಕ್ಷೆಯನ್ನು ಸಡಿಲಿಸುವ ಕಾರ್ಯವು ವಿಧಿವತ್ತಾಗಿ ನಡೆಯುತ್ತದೆ. ಸಾಮಾನ್ಯವಾಗಿ ಎಲ್ಲಾ ಒಡೆಯರು ಶವವನ್ನು

ಮಂಟಪದಲ್ಲಿ ಹೊತ್ತೊಯ್ಯುತ್ತಾರೆ. ಆದರೆ ಸರೂರಿನಲ್ಲಿರುವ ಒಡೆಯರ ಸಂಪ್ರದಾಯಗಳೆ ವಿಶೇಷವಾಗಿವೆ. ಇವರು ಎಲ್ಲಾ ರೀತಿಯ ಶವಸಂಸ್ಕಾರದ ಪೂಜೆ ಪದ್ಧತಿ ಒಂದೆ ಆದರೆ ಇವರು ಶವವನ್ನು ಕಂಬಳಿಯಲ್ಲಿ ತೆಗೆದುಕೊಂಡು ಹೋಗುತ್ತಾರೆ. ಒಡೆಯರಾದರೆ ಬಿಳಿ ಕಂಬಳಿಯಿಂದ ಸುತ್ತಿಕೊಂಡು ಹೋಗುತ್ತಾರೆ. ಅದೇ ರೀತಿ ಒಡೇರಮ್ಮರಾದರೆ ಕರಿಕಂಬಳಿಯನ್ನು ಮುಚ್ಚಿ ಶವವನ್ನು ತೆಗೆದುಕೊಂಡು ಹೋಗುತ್ತಾರೆ. ಇವರಲ್ಲಿ ಕಂಬಳಿಗಳ ವಿಶೇಷತೆಯೇನೆಂದರೆ, ಕರಿಕಂಬಳಿ ಶ್ರೇಷ್ಠವಾದದ್ದು. ಬಿಳಿಕಂಬಳಿ ಇನ್ನೂ ಶ್ರೇಷ್ಠವಾದದ್ದು ಎಂಬ ನಂಬಿಕೆಯಿದೆ. ಹೀಗಾಗಿ ನಂಬಿಕೆಗೆ ಪೂರಕವಾಗುವಂತೆ "ಕುಷ್ಟಗಿ ತಾಲ್ಲೂಕು ಕೊರಡಕೇರೆ ಗ್ರಾಮದ ಅಮೋಘಸಿದ್ಧ ಗುರುವಿನವರು ಹೇಳುವಂತೆ, ಕರಿಕಂಬಳಿ ಮತ್ತು ಬಿಳಿಕಂಬಳಿ ಎಡಬಲ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಇಲ್ಲಿ ಪುರುಷನಿಗೆ ಮೊದಲ ಆದ್ಯತೆ ಆ ಕಾರಣಕ್ಕೆ ಆತನಿಗೆ ಬಿಳಿಕಂಬಳಿಯನ್ನು ಬಳಸುತ್ತಾರೆ. ಹೆಣ್ಣು ಕರಿಕಂಬಳಿ ಬಳಕೆಯ ಮನೆತನದಿಂದ ಬಂದವಳು. ಆದ್ದರಿಂದ ಆಕೆಗೆ ಕರಿಕಂಬಳಿ ಬಳಸುತ್ತೇವೆ"[೫] ಎಂದು ಹೇಳುತ್ತಾರೆ. ಈ ವಿಚಾರಕ್ಕೆ ಅನುಗುಣವಾಗಿ ಮತ್ತೊಂದು ಸಂಗತಿಯೇನೆಂದರೆ 'ಪಂಥ-ಪ್ರಭಾವ' ಎಂಬ ಲೇಖನದಲ್ಲಿ ಲಿಂಗದಹಳ್ಳಿ ಹಾಲಪ್ಪ ಅವರು ಚರ್ಚಿಸಿರುವಂತೆ "ಹಾಲುಮತಸ್ಥರು ಕಂಬಳಿ ಸಂಸ್ಕೃತಿಗೆ ಸೇರಿದ ಜನರಾಗಿದ್ದಾರೆ. ಇವರು ಎಷ್ಟೇ ಸಮಾನತೆಯ ಮಂತ್ರ ಜಪಿಸಿದರೂ ಇವರಲ್ಲಿ ಉಚ್ಚರು ಮತ್ತು ನೀಚರು ಎಂಬ ತಾರತಮ್ಯವು ಎದ್ದು ಕಾಣುತ್ತದೆ. ಬಿಳಿಕಂಬಳಿ ಉಚ್ಚ ಸಂಸ್ಕೃತಿಯ ಪ್ರತೀಕವಾಗಿದ್ದು, ಕಪ್ಪು ಕೆಳವರ್ಗವನ್ನು ಪ್ರತಿನಿಧಿಸುತ್ತದೆ. ಕಂಬಳಿಯಲ್ಲಿ ವಿಶೇಷವಾಗಿ, ಬಿಳಿಕಂಬಳಿ ಪ್ರಧಾನ ಧಾರೆಗೆ ಬರುವಾಗ ಈ ವ್ಯಾತ್ಯಾಸವನ್ನು ಹೊತ್ತು ತಂದಿದೆಯೆಂಬ ನಂಬಿಕೆಯಿದೆ. ಬಿಳಿ ಶ್ರೇಷ್ಠ ಮತ್ತು ಕಪ್ಪು ಕನಿಷ್ಠ ಎನ್ನುವ ಪರಿಕಲ್ಪನೆಯು ಇಂದಿಗೂ ಜೀವಂತವಾಗಿದೆ. ಗುರುಒಡೆಯರು ಅಥವಾ ರೇವಣಸಿದ್ಧ, ಸಿದ್ಧರಾಮ ಮತ್ತು ಶಾಂತಮುತ್ತಯ್ಯನ ಸಂಸ್ಕೃತಿಯವರು ಮಾತ್ರ ಬಿಳಿ ಕಂಬಳಿಯನ್ನು ಬಳಸಬೇಕು ಎಂಬ ನಿಯಮ ರೂಢಿಯಲ್ಲಿದೆ"[೬] ಎಂದು ಹೇಳುತ್ತಾರೆ. ಈ ವಿಚಾರವನ್ನು ಒಪ್ಪುವಂತೆ ಈಗಲೂ ಸರೂರಲ್ಲಿ ಶಾಂತಮುತ್ತಯ್ಯ ವಂಶಸ್ಥರು ಹಾಗೂ ಮಂಕಸಿದ್ಧ ವಂಶಸ್ಥರು ಬಿಳಿಕಂಬಳಿಯ ಜಾಡಿಯಿಂದ ಶವವನ್ನು ತೆಗೆದುಕೊಂಡು ಹೋಗುತ್ತಾರೆ.

ಏಕೆಂದರೆ ಅದು ಶ್ರೇಷ್ಠವಾದುದ್ದರ ಸಂಕೇತವಾಗಿದೆ. ಅಂದರೆ ಗುರುಒಡೆಯರು ಧಾರ್ಮಿಕವಾಗಿ ಆಚರಿಸುವ ಕಾರ್ಯಗಳಿಗೆ ಅದನ್ನೇ ಬಳಸುತ್ತಾರೆ. ಇನ್ನೊಂದು ವಿಶೇಷವಾದ ಸಂಗತಿಯೇನೆಂದರೆ ಒಡೆಯರು ಹೇಳಿಕೆ ಹೇಳುವ ಸಂದರ್ಭದಲ್ಲಿಯೂ ಬಿಳಿಕಂಬಳಿಯ ಜಾಡಿಯನ್ನೇ ತಲೆಯ ಮೇಲೆ ಹಾಕಿಕೊಂಡು ಮಳೆ-ಬೆಳೆಯ ಬಗ್ಗೆ ಹೇಳಿಕೆ ಹೇಳುತ್ತಾರೆ. ಹೀಗಾಗಿ ಈ ಪರಂಪರೆ ವಿಭಿನ್ನವಾಗಿದೆ. ಇವರು ಮೊದಲು ಶವವನ್ನು ಮಂಟಪ ಮಾಡಿ ಅದರಲ್ಲಿ ಶವವನ್ನು ಕೂರಿಸಿಕೊಂಡು ಹೋಗುವ ಪದ್ಧತಿಯಿದ್ದು, ಈಗ ಅನಿವಾರ್ಯ ಕಾರಣಕ್ಕೆ ಅದನ್ನು ಬಿಟ್ಟಿರಬಹುದು. ಆದರೆ ಇವರ

ಶವಗಳನ್ನು ಸಾಮಾನ್ಯವಾಗಿ ರೇವಣಸಿದ್ಧ ದೇವಾಲಯಗಳ, ಆಜು-ಬಾಜಿನಲ್ಲಿ ಹೂಳುತ್ತಾರೆ. ಹೂಥಂತಹ ಸಮಾಧಿಯ ಮೇಲೆ ಸಣ್ಣ-ಸಣ್ಣ ಗುಡಿಗಳಾಗಿ ಕಟ್ಟುತ್ತಿದ್ದರು. ಆದರೆ ಈಗ ದೊಡ್ಡವಾಗಿ, ದೇವಸ್ಥಾನದ ರೀತಿಯ ಗುಡಿಗಳನ್ನು ಕಟ್ಟಿಸುತ್ತಾರೆ. ಇದಕ್ಕೆ ಉದಾಹರಣೆಯಾಗಿ ಸರೂರಿನಿಂದ, ಮೂರು ಫರ್ಲಾಂಗು ದೂರದಲ್ಲಿರುವ ಏಳುಗುಡಿ ರೇವಣಸಿದ್ಧೇಶ್ವರನ ದೇವಸ್ಥಾನವಿದೆ. ಆ ದೇವಸ್ಥಾನದ ಬಲಭಾಗಕ್ಕೆ ಒಡೆಯರ ಸಮಾಧಿಗಳಿವೆ. ಹಾಗೂ ಅದರ ಜೊತೆಗೆ ಸಮಾಧಿಗಳ ಮೇಲೆ ಗುಡಿಗಳನ್ನು ಕಟ್ಟಿಸಿದ್ದಾರೆ. ಇದೇ ರೀತಿಯಾಗಿ ಅನಂತಪುರ ಜಿಲ್ಲೆಯಲ್ಲಿ ಬರುವ ಲಕ್ಷ್ಮಂಪಲ್ಲಿಯಲ್ಲಿ ನಾಲ್ಕು ಸಮಾಧಿಗಳಿರುವುದು ತಿಳಿದುಬರುತ್ತದೆ. ಆ ಸಮಾಧಿಗಳಿಗೆ ರೇವಣಸಿದ್ಧೇಶ್ವರನ ಜಾತ್ರೆಯ ಸಮಯದಲ್ಲಿ ಪೂಜೆ ಮಾಡುವ ರೂಢಿಯನ್ನು ಬೆಳಸಿಕೊಂಡು ಬಂದಿದ್ದಾರೆ. ಹೀಗೆ ಗುರುಒಡೆಯರು ಸಾಮಾಜಿಕವಾಗಿ ಅನೇಕ ಆಚರಣೆಗಳನ್ನು ಮಾಡಿಕೊಂಡು ಬಂದಿದ್ದಾರೆ.

೨. ಧಾರ್ಮಿಕ ಆಚರಣೆಗಳು

ಒಡೆಯರು ಧಾರ್ಮಿಕವಾಗಿ ಅನೇಕ ರೂಢಿ ಸಂಪ್ರದಾಯಗಳೊಂದಿಗೆ ಆಚರಣೆಗಳನ್ನು ಮಾಡಿಕೊಂಡು ಬಂದಿದ್ದಾರೆ. ಪುರೋಹಿತರಾಗಿ, ಅರ್ಚಕರಾಗಿ ಕುರುಬರು ಧಾರ್ಮಿಕವಾಗಿ ಆಚರಿಸುವ ಎಲ್ಲ ಆಚರಣೆಗಳಿಗೆ ಇವರೇ ಮುಂದೆ ನಿಂತು ನಡೆಸಿಕೊಡುತ್ತಾರೆ. ಇಂತಹ ಉನ್ನತ ಗುರುತನವನ್ನು ಹೊಂದಿದ ಇವರು ತಮ್ಮ ಗುರುಪರಂಪರೆಯನ್ನು ಕಾಪಾಡಿಕೊಳ್ಳುವ ಸಲುವಾಗಿ, ರೇವಣಸಿದ್ಧ, ಸಿದ್ಧರಾಮರ ಮಠ ಅಥವಾ ದೇವಾಲಯಗಳ ಹಾಜು-ಬಾಜಲ್ಲಿ ವಾಸವಾಗಿರುತ್ತಾರೆ. ಇವರ ಅನುಯಾಯಿಗಳು ಇದನ್ನು ಬಿಟ್ಟಿಲ್ಲ. ಹೀಗಾಗಿ ಸರೂರು ಸಂಪ್ರದಾಯದ ಗುರುಒಡೆಯರ ಪರಂಪರೆಗೆ ರೇವಣಸಿದ್ಧ, ಸಿದ್ಧರಾಮರು ಆರಾಧ್ಯ ದೈವಗಳಾಗಿದ್ದಾರೆ. ಈ ದೇವರುಗಳ ಅರ್ಚಕರಾಗಿ ಪೌರೋಹಿತ ರಾಗಿ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಧಾರ್ಮಿಕವಾಗಿ ಆಚರಿಸುವ ಹಬ್ಬ, ಜಾತ್ರೆ, ಪಲ್ಲಕ್ಕಿ, ಉತ್ಸವ, ಹೇಳಿಕೆ ಇನ್ನೂ ಮುಂತಾದ ಆಚರಣೆಗಳನ್ನು ಮಾಡುತ್ತಾರೆ.

ಸರೂರ ಸಂಪ್ರದಾಯದ ಜಾತ್ರೆ-ಉತ್ಸವಗಳು

ಮನುಷ್ಯನ ಬದುಕಿನ ಉದ್ದಕ್ಕೂ ಆಚರಣೆ-ಸಂಪ್ರದಾಯಗಳು ಪ್ರಮುಖವಾದ ಪಾತ್ರವನ್ನು ಪ್ರತಿನಿಧಿಸುತ್ತವೆ. ದಿನನಿತ್ಯದ ಜೀವನದಲ್ಲಿ ಅನುಸರಿಸುವ ಈ ಪದ್ಧತಿಗಳು ಬದುಕಿಗೆ ಒಂದು ಚೌಕಟ್ಟಿನಂತಿರುತ್ತವೆ. ಅವು ಆಯಾ ಕಾಲಕ್ಕೆ ಅನುಗುಣವಾಗಿ ಆಧುನಿಕ ಜೀವನಕ್ಕೆ ಮನುಷ್ಯ ಹೇಗೆ ಹೊಂದಿಕೊಳ್ಳುತಾನೋ ಹಾಗೆಯೇ ಅವನ ಜೊತೆ ಜೊತೆಯಲ್ಲಿ ಧಾರ್ಮಿಕ ಸಂಪ್ರದಾಯಗಳು ಸಹ ಅಲ್ಪಸ್ವಲ್ಪ ಬದಲಾವಣೆಯನ್ನು ಬಯಸುತ್ತವೆ. ಈ ಹಿನ್ನೆಲೆಯಲ್ಲಿ ಸರೂರ ಹಾಲುಮತ ಸಂಪ್ರದಾಯದ ಗುರುಒಡೆಯರ ಪರಂಪರೆಯ ಬದುಕು ಇದಕ್ಕೆ ಹೊರತಾಗಿಲ್ಲ. ಹಾಗಾಗಿ ಈ ಊರಿನ ಒಡೆಯರಿಗೆ ಸಂಬಂಧಿಸಿದಂತೆ, ರೇವಣಸಿದ್ಧನ ಅನುಯಾಯಿಗಳಾದ ಶಾಂತೊಡೆಯರು

ಹಾಗೂ ಸಿದ್ಧರಾಮನ ಅನುಯಾಯಿಗಳಾದ ಮಂಕೊಡೆಯರು ಇಲ್ಲಿ ಕಂಡುಬರುತ್ತಾರೆ. ಈ ಎರಡೂ ಸಂಪ್ರದಾಯದವರು ಶ್ರೀಗುರು ರೇವಣಸಿದ್ಧೇಶ್ವರನನ್ನು ಆರಾಧಿಸುತ್ತಾರೆ. ಈತನ ಜಾತ್ರೆ–ಪಲ್ಲಕ್ಕಿ ಉತ್ಸವ, ಆಚರಣೆಗಳು ಅದ್ದೂರಿಯಿಂದ ನಡೆಯುತ್ತವೆ.

ಸರೂರಿನ ಗುರುಒಡೆಯರು ರೇವಣಸಿದ್ಧೇಶ್ವರನ ಜಾತ್ರೆಯನ್ನು ಮಾಡುವಾಗ ಅವರು ರೂಢಿಸಿಕೊಂಡು ಬಂದ ಸಂಪ್ರದಾಯದ ವಿಶಿಷ್ಟತೆಯನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಿರುವಂತೆ, ಸರೂರಿನಲ್ಲಿ ರೇವಣಸಿದ್ಧೇಶ್ವರನ ಜಾತ್ರೆಯನ್ನು ವರ್ಷದಲ್ಲಿ ಎರಡು ಸಾರಿ ಆಚರಿಸಲಾಗುತ್ತದೆ. ಅದು ಶ್ರಾವಣಮಾಸ ಮತ್ತು ಶಿವರಾತ್ರಿಯ ಸಮಯದಲ್ಲಿ ಈ ವಿಶೇಷ ಆಚರಣೆ ಕಂಡುಬರುತ್ತದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅಲ್ಲಿನ ಆಚರಣೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿದಾಗ ಈ ಎರಡೂ ಸಮಯದಲ್ಲೂ ಪಲ್ಲಕ್ಕಿಯು ಊರನ್ನು ಬಲಕ್ಕೆ ಮಾಡಿಕೊಂಡು, ಪಲ್ಲಕ್ಕಿಕಟ್ಟೆ, ಏಳುಗುಡಿ ಮತ್ತು ಶಾಂತಮುತ್ತಯ್ಯನ ಗದ್ದುಗೆಗೆ ಹೋಗಿ ಶಿವವಾಣಿ ಹೇಳುವುದು ಹಾಗೂ ಇತರೆ ಪೂಜೆ–ಪುನಸ್ಕಾರ ಕಾರ್ಯಗಳನ್ನು ಮುಗಿಸಿಕೊಂಡು ಮರಳಿ ಊರಿಗೆ ಬರುವ ಪರಂಪರೆಯನ್ನು ಪಾಲಿಸಿಕೊಂಡು ಬಂದಿದ್ದಾರೆ. ಶಿವರಾತ್ರಿಯ ಸಂದಂರ್ಭದಲ್ಲಿ ಆಚರಿಸುವ ರೇವಣಸಿದ್ಧೇಶ್ವರನ ಜಾತ್ರೆಯನ್ನು ಒಂದು ತಿಂಗಳು ಮುಂಚಿತವಾಗಿಯೇ ಪೂರ್ವತಯಾರಿ ನಡೆಸುತ್ತಾರೆ. ಏಕೆಂದರೆ ಹಬ್ಬ–ಜಾತ್ರೆ ಎಂದರೆ ಮನುಷ್ಯನಿಗೆ ಸಂತಸದ ಸಡಗರ, ಹಾಗಾಗಿ ಪ್ರತಿಯೊಂದು ಮನೆಯಿಂದ ಹಿಡಿದು ದೇವರ ಗುಡಿಯವರೆಗೂ ಸ್ವಚ್ಛತೆಯಿಂದ ಇರಬೇಕು ಎಂಬ ನಂಬಿಕೆಯನ್ನು ಬೆಳೆಸಿಕೊಂಡಿರುತ್ತಾರೆ.

ಹಾಗಾಗಿ ಸರೂರಿನ ಗ್ರಾಮಸ್ಥರೆಲ್ಲ ಸೇರಿ ಸ್ವತಃ ತಾವೇ ಸುಣ್ಣವನ್ನು ತಯಾರಿಸಿಕೊಂಡು ಊರಿನಲ್ಲಿರುವ ರೇವಣಸಿದ್ಧೇಶ್ವರನ 'ಏಳು' ಗುಡಿಗೆ ಹಾಗೂ ಶಾಂತಮುತ್ತಯ್ಯನ ಗದ್ದುಗೆಗೆ ಹಾಗೂ ಕಳಸದ ಗುಡಿಗೆ ಹೀಗೆ ಊರಿನ ಪ್ರತಿಯೊಂದು ದೇವಸ್ಥಾನವನ್ನು ಸ್ವಚ್ಛಗೊಳಿಸಿ, ಜಾತ್ರೆಗೆ ಸಜ್ಜುಗೊಳಿಸಿಕೊಳ್ಳುತ್ತಾರೆ. ರೇವಣಸಿದ್ಧೇಶ್ವರ ಜಾತ್ರೆಯನ್ನು ಒಂದು ತಿಂಗಳು ಮುಂಚಿತವಾಗಿಯೇ ಪೂರ್ವತಯಾರಿ ನಡೆಸುತ್ತಾರೆ. ಈ ಸಮಯದಲ್ಲಿ ಗ್ರಾಮದ ಎಲ್ಲಾ ಜನರು ಸೇರಿಕೊಂಡು ಆಚರಣೆಗೆ ಬೇಕಾದಂತಹ ಎಲ್ಲಾ ತಯಾರಿಗಳನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಈ ಸಮಯದಲ್ಲಿ ಹಾಲುಮತ ಸಂಸ್ಕೃತಿಗೆ ಸಂಬಂಧಿಸಿದಂತಹ ಕಥೆ, ಪುರಾಣ ಹೇಳಿಸುವುದು ಕಂಡುಬರುತ್ತದೆ. ಉದಾ: ಸಿದ್ಧರ ಪುರಾಣ, ಶರಣ ಬಸವೇಶ್ವರನದ್ದು, ರೇವಣಸಿದ್ಧೇಶ್ವರನದ್ದು ಹಾಗೂ ಹೇಮರೆಡ್ಡಿ ಮಲ್ಲಮ್ಮನದ್ದು. ಹೀಗೆ ಹಲವಾರು ಪುರಾಣಗಳ ಜೊತೆಗೆ ಡೊಳ್ಳಿನ ಹಾಡುಗಳನ್ನು ಹಾಡಿಸುವ ಕಾರ್ಯಕ್ರಮಗಳನ್ನು ಪ್ರತಿದಿನ ಕೈಗೊಳ್ಳಲಾಗುವುದು. ಅವಧೂತರು ಅಮವಾಸ್ಯೆಯಿಂದ, ಶಿವರಾತ್ರಿ ಅಮವಾಸ್ಯೆಯವರೆಗೆ ಈ ಸಂಪ್ರದಾಯಗಳನ್ನು ತಪ್ಪದೇ ಪಾಲಿಸಿಕೊಂಡು ಬಂದಿದ್ದಾರೆ.

ರೇವಣಸಿದ್ಧೇಶ್ವರನ ಜಾತ್ರೆಯಲ್ಲಿ ಶಿವವಾಣಿ ಹೇಳುವಂತವರು ಶಾಂತಮುತ್ತಯ್ಯನ ವಂಶಸ್ಥರಾಗಿರುತ್ತಾರೆ. ಈ ಹೇಳಿಕೆ ಹೇಳುವಂತವರು ಐದು ದಿನಗಳ ಕಾಲ ಉಪವಾಸವಿದ್ದು, ಶಿವರಾತ್ರಿಯ ಅಮವಾಸ್ಯೆಯ ಹಿಂದಿನ ದಿನ ಸುಮಾರು ಮೂರು–ನಾಲ್ಕು ಗಂಟೆಯ ಸುಮಾರಿಗೆ ದೇವರ ಪಲ್ಲಕ್ಕಿಯನ್ನು ಊರಿನ ಕಳಸದ ಗುಡಿಯಿಂದ ಪ್ರಾರಂಭಿಸಿ 'ಊರಿನ ಹೊರಗಿರುವ ಪಲ್ಲಕ್ಕಿ ಕಟ್ಟೆಯ ಹತ್ತಿರ ತರಲಾಗುತ್ತದೆ. ಈ ಸ್ಥಳದಲ್ಲಿ ಪೂಜೆ ಮಾಡಿಕೊಂಡು ದೇವರ ಮೂರ್ತಿಯ ಪಲ್ಲಕ್ಕಿ ಸಹಿತ ಒಡೆಯರು ಹಾಗೂ ಇತರ ಭಕ್ತರು ಕೂಡಿಕೊಂಡು ಕೃಷ್ಣನದಿಗೆ ಹೋಗುತ್ತಾರೆ. ಅಲ್ಲಿ ಗಂಗಾಪೂಜೆ ಮಾಡಲಾಗುತ್ತದೆ. ಈ ಗಂಗೆಪೂಜೆಯ ವಿಶೇಷವೆಂದರೆ, ರೇವಣಸಿದ್ಧೇಶ್ವರನು "ಗಂಗೆಯನ್ನು ಮೀಯುವ ಸಂಕೇತವಾಗಿ" ಈ ಆಚರಣೆಯನ್ನು ಪಾಲಿಸಿಕೊಂಡು ಬರಲಾಗಿದೆ. ಶಿವಸ್ನಾನದಿಂದ ಗಂಗಾದೇವಿಯನ್ನು ಪೂಜೆಮಾಡಿ ರೇವಣಸಿದ್ಧೇಶ್ವರ, ಸಂಧ್ಯಾವಂದನೆಗಾಗಿ ನೀನು ಪವಿತ್ರ ಉದಕ(ಜಲ)ವನ್ನು ನೀಡಬೇಕೆಂದು ಪೂಜೆಮಾಡಿ ಅಡಿಕೆ, ಎಲೆ, ತೆಂಗಿನಕಾಯಿ, ಬಾಳೆ ಹಣ್ಣುಗಳನ್ನೆಲ್ಲ ಗಂಗೆಗೆ ವೀಳೆಯ ಕೊಟ್ಟು ಆ ಉದಕವನ್ನು(ತೀರ್ಥ) ತಂದು ಊರಿನ ದೇವಸ್ಥಾನದಲ್ಲಿ ಪುಣ್ಯೋದಕವನ್ನೆರೆಯುವುದು ಕಂಡುಬರುತ್ತದೆ. 'ಏಳು' ಮಣ್ಣಿನ ಬಿಂದಿಗೆಯಿಂದ ತಂದ ಪವಿತ್ರ ಜಲವನ್ನು ಹಾಗೂ ಕೆಂಡದಿಂದ ತಯಾರಿಸಿದ ರೊಟ್ಟಿಯನ್ನು ದೇವಸ್ಥಾನದಲ್ಲಿ ಪೂಜೆ ಮಾಡಿ ಭಕ್ತರಿಗೆ ಹಂಚಲಾಗುತ್ತದೆ.

ಕೆಂಡದ ರೊಟ್ಟಿ: ಈ ಕೆಂಡದ ರೊಟ್ಟಿಯ ವಿಶೇಷವೇನೆಂದರೆ ಗಂಗಾಸ್ನಾನಕ್ಕೆ ದೇವರು ಹೋಗುವ ಸಮಯದಲ್ಲಿ ಭಕ್ತರು ಕೊಟ್ಟಿರುವ ಗೋಧಿ ಹಿಟ್ಟನ್ನು ಕಲಸಿ ಕೆಂಡದ ಮೇಲೆ ರೊಟ್ಟಿಯನ್ನು ತಯಾರಿಸಲಾಗುತ್ತದೆ. ಈ ರೊಟ್ಟಿಯನ್ನು ಪುನಃ ಭಕ್ತರಿಗೆ ಹಂಚಲಾಗುತ್ತದೆ. ಇದನ್ನು ಜನರು ತಮ್ಮ ಜಮೀನಿನಲ್ಲಿ ಮುಚ್ಚಿಡುತ್ತಾರೆ. ಹೀಗೆ ಮಾಡುವುದರಿಂದ ತಮ್ಮ ಜಮೀನಿನಲ್ಲಿ ಉತ್ತಮ ಬೆಳೆಯಾಗುತ್ತದೆ ಅಥವಾ ಫಲವತ್ತತೆಯು ಹೆಚ್ಚಾಗುತ್ತದೆ ಎಂಬ ಭಾವನೆ ಇವರಲ್ಲಿ ಹಿಂದಿನಿಂದಲೂ ಬೆಳೆದು ಬಂದಿದೆ.

ದೀಡ (ದೀರ್ಘ)ನಮಸ್ಕಾರ: ಗಂಗಾಸ್ನಾನ ಮುಗಿಸಿಕೊಂಡು ಬಂದ ಮರುದಿನ ಅಮವಾಸ್ಯೆಯಂದು ಬೆಳಿಗ್ಗೆ ಸುಮಾರು ೭ರಿಂದ ೯ ಗಂಟೆಯವರೆಗೆ ದೀಡನಮಸ್ಕಾರ ಹಾಕುತ್ತಾರೆ. ಊರಿನಿಂದ ಹಿಡಿದು ಊರೊರಗಿರುವ ರೇವಣಸಿದ್ಧೇಶ್ವರನ ಗುಡಿಯವರೆಗೆ ಚಿಕ್ಕ ಮಕ್ಕಳಿಂದ ಹಿಡಿದು ದೊಡ್ಡವರ ತನಕ ಸ್ನಾನ ಮಾಡಿ ಮಡಿಬಟ್ಟೆಯಿಂದ ಈ ನಮಸ್ಕಾರವನ್ನು ಮಾಡುತ್ತಾರೆ. ಇಲ್ಲಿ ಪ್ರಮುಖವಾಗಿ ಹಾಲುಮತ ಜನಾಂಗವೊಂದೇ ಅಲ್ಲದೆ ಆ ಊರಿನಲ್ಲಿರುವ ಪ್ರತಿಯೊಂದು ಸಮುದಾಯದವರು ಹಾಗೂ ಜಾತ್ರೆಗೆ ಆಗಮಿಸಿದ ಎಲ್ಲಾ ಭಕ್ತರೂ ಸಹ ರೇವಣಸಿದ್ಧೇಶ್ವರನಿಗೆ ದೀಡನಮಸ್ಕಾರ ಹಾಕುವುದನ್ನು ನೋಡಬಹುದು. ಇದಾದ ನಂತರ ಜಾತ್ರೆಯ ಸಿದ್ಧತೆಗಳು ನಡೆಯುತ್ತವೆ. ಇಲ್ಲಿ ಡೊಳ್ಳು, ಜಾಗಟೆ

ಶಂಖ ಮೇಳೈಯಿಸುತ್ತವೆ. ಈ ವಾದ್ಯಗಳ ಮೂಲಕ ಕಳಸಗಳ ಮೆರವಣಿಗೆ ಸಾಗುತ್ತದೆ. ಕಳಸವೂ ಗುಡಿಯಿಂದ ಪ್ರಾರಂಭವಾಗಿ ಊರಿನ ಹೊರಗಿರುವ ರೇವಣಸಿದ್ಧೇಶ್ವರ ಗುಡಿಗೆ ಹೋಗಿ ಅಲ್ಲಿ 'ಏಳು' ಶಿಖರಗಳಿಗೆ ಹಾಗೂ ಶಾಂತಮುತ್ತಯ್ಯನ ಗದ್ದುಗೆಯ ಮೇಲೆ ಕಳಸಗಳನ್ನು ಪ್ರತಿಷ್ಠಾಪಿಸಲಾಗುತ್ತದೆ. ಹಾಗೆಯೇ ಸ್ತ್ರೀಯರು ಹೊತ್ತುತಂದ ಕುಂಭದ ನೀರನ್ನು ಶಾಂತಮುತ್ತಯ್ಯನ ಗದ್ದುಗೆಯ ಮೇಲೆ ಹಾಕಿ ಪೂಜೆ ಮಾಡುತ್ತಾರೆ. ಹೀಗೆ ಇಡೀ ದಿನ ಭಕ್ತರು ತಮ್ಮ ಭಕ್ತಿಯನ್ನು ಪ್ರದರ್ಶಿಸುತ್ತಾರೆ. ನಂತರ ಅದೇ ದಿನ ರಾತ್ರಿ ಎಂಟು ಗಂಟೆಯ ಸುಮಾರಿಗೆ ಕಳಸದ ಗುಡಿಗೆ ಹೋಗುತ್ತಾರೆ.

ಕಳಸದ ಗುಡಿ ಅಂದರೆ ರೇವಣಸಿದ್ಧೇಶ್ವರನಿಗೆ ಭಕ್ತರು ಮಾಡಿಸಿದ ಕಳಸಗಳನ್ನು ಹಾಗೂ ಈ ದೇವರಿಗೆ ಸಂಬಂಧಿಸಿದ ಪ್ರತಿಯೊಂದು ವಸ್ತ್ರಾಭರಣಗಳನ್ನು ಇಡಲು ಒಂದು ಪ್ರತ್ಯೇಕ ಮನೆಯಿದೆ. ಅದನ್ನೇ ಕಳಸದ ಗುಡಿ ಎಂದು ಕರೆಯುತ್ತಾರೆ. ಅಲ್ಲಿ ಒಡೆಯರು ಹಾಗೂ ಹಾಲುಮತಸ್ಥರೆಲ್ಲ ಸೇರಿ ರೇವಣಸಿದ್ಧನ ಪಲ್ಲಕ್ಕಿಯನ್ನು ಅಲಂಕರಿಸಿಕೊಂಡು ಅದರೊಳಗೆ ರೇವಣಸಿದ್ಧನ ಬೆಳ್ಳಿಮೂರ್ತಿಯನ್ನು ಇಟ್ಟುಕೊಂಡು ಅದ್ದೂರಿಯಿಂದ ಪಲ್ಲಕ್ಕಿ ಉತ್ಸವವು ಊರಿನ ಬೀದಿ ಬೀದಿಯಲ್ಲಿ ಸಾಗುತ್ತದೆ. ದಾರಿಯುದ್ಧಕ್ಕೂ ಮಹಿಳೆಯರು ಮತ್ತು ಕುಟುಂಬಸ್ಥರು ಎಡೆಯನ್ನು ಅರ್ಪಿಸಿ ಒಡೆಯರ ಕಾಲು ತೊಳೆದು, ಪೂಜೆ ಮಾಡಿ ಆಶೀರ್ವಾದವನ್ನು ಪಡೆದುಕೊಳ್ಳುತ್ತಾರೆ. ಹಾಗೆಯೇ ಈ ಜಾತ್ರೆ–ಉತ್ಸವದ ಸಂದರ್ಭದಲ್ಲಿ, ಊರಿನ ಗ್ರಾಮಸ್ಥರು ಹಾಗೂ ಹೊರಗಿನ ಭಕ್ತಾದಿಗಳು ಪ್ರತಿಯೊಬ್ಬರೂ ಪರಂಪರಾಗತವಾಗಿ ಬಂದಂತಹ ವಿಧಿ ಕ್ರಿಯೆಗಳನ್ನು ನೇರವೇರಿಸಿಕೊಂಡು ಹೋಗುತ್ತಿದ್ದಾರೆ. ಉದಾಹರಣೆಗೆ, ಪಂಜು ಹಿಡಿಯುವವರು, ಹೊಲೆಯರು, ಛಲವಾದಿಗರು, ಮಾದಿಗ ಜನಾಂಗದವರು ಮಾಡುತ್ತಾರೆ. ಹಾಗೆಯೇ ಅಗಸರು ಪಲ್ಲಕ್ಕಿಯ ಮುಂದೆ–ಮುಂದೆ ಮಡಿಬಟ್ಟೆಯನ್ನು ಹಾಸುತ್ತಾರೆ. ಇದನ್ನು ಆ ಪರಿಸರದಲ್ಲಿ 'ಅಡದಿ ಹಾಸುವುದು' ಎಂದು ಕರೆಯುತ್ತಾರೆ.

ಹೀಗೆ ಛತ್ರಿ–ಚಾಮರ ಇಡಿಯುವುದು ಇದೇ ರೀತಿ ಬೇರೆ ಬೇರೆ ಕಾರ್ಯಗಳನ್ನು ಸ್ವ ಇಚ್ಚೆಯಿಂದ ಭಕ್ತಿಪೂರ್ವಕವಾಗಿ ತಮ್ಮ ಕಾರ್ಯದಲ್ಲಿ ತೊಡಗಿರುತ್ತಾರೆ. ಇವರು ಊರಿನ ಕಳಸದ ಗುಡಿಯಿಂದ ಹೊರಟು ಮತ್ತೆ ಅದೇ ಗುಡಿಗೆ ಬರುವವರೆಗೆ ತಮ್ಮ ತಮ್ಮ ಕಾರ್ಯಗಳಲ್ಲಿ ಮಗ್ನರಾಗಿರುತ್ತಾರೆ. ಈ ಪಲ್ಲಕ್ಕಿ–ಉತ್ಸವದುದ್ದಕ್ಕೂ ಡೊಳ್ಳು ಕುಣಿತ, ಕರಡಿ ಮಜುಲು, ಕುದುರೆ ಕುಣಿತ ಹಾಗೂ ನವಿಲುಗಳ ವೇಷ ಹೀಗೆ ಬೇರೆ ಬೇರೆ ವೇಷ–ಭೂಷಣಗಳನ್ನು ಧರಿಸಿಕೊಂಡು ವಿಜೃಂಭಣೆಯಿಂದ ನೃತ್ಯಗಳನ್ನು ಮಾಡುತ್ತಾರೆ. ಅದರಲ್ಲೂ ವಿಶೇಷವಾಗಿ ಡೊಳ್ಳು ಹೊಡೆಯುವವರು ಯಾವುದಾದರೊಂದು ನಾಣ್ಯವನ್ನು ನೆಲದ ಮೇಲೆ ಎಸೆದು ಅದನ್ನು ಡೊಳ್ಳನ್ನು ಬಾರಿಸಿಕೊಂಡೇ ಹಿಂದಕ್ಕೆ ಬಗ್ಗಿ ತನ್ನ ಹಣೆಗೆ ಅಂಟಿಸಿಕೊಳ್ಳುವುದು, ಇಲ್ಲವೆ ಬಾಯಿಂದ ತೆಗೆಯುವಂತಹ ಸಣ್ಣ ಸಣ್ಣ ಸಾಂದರ್ಭಿಕ ಪ್ರಸಂಗಗಳನ್ನು ತೋರಿಸುತ್ತಾ, ಜಾತ್ರೆಯನ್ನು ನೋಡಲು ಬಂದ ಜನರಿಗೆ ಮನರಂಜನೆಯನ್ನು ಉಂಟುಮಾಡುತ್ತಾರೆ. ಈ ಪಲ್ಲಕ್ಕಿ ಉತ್ಸವದಲ್ಲಿ ಭಾಗವಹಿಸಿದ ಹಿರಿಯರು ಹೇಳುವಂತೆ;

ಶ್ರೀ ರೇವಣಸಿದ್ಧ ಮಹತ್ ಮಲ್ಲಯ್ಯಗೆ

ಶಾಂತಮುತ್ತಯ್ಯನ ಮಹತ್ ಮಲ್ಲಯ್ಯಗೆ

ಕಾಳಿ ಬಸವೇಶ್ವರ ಮಹತ್ ಮಲ್ಲಯ್ಯಗೆ

ಕೊಡೆಕಲ್ ಬಸವೇಶ್ವರ ಮಹತ್ ಮಲ್ಲಯ್ಯಗೆ

ಬಾಗೇವಾಡಿ ಬಸವೇಶ್ವರ ಮಹತ್ ಮಲ್ಲಯ್ಯಗೆ

ಜಯಮಂಗಳಂ ಜಯ ಪಾರ್ವತೀ ಪತಿ ಹರ ಹರ ಮಹಾದೇವ

ಹೀಗೆ ನಾಮಸ್ಮರಣೆ ಮಾಡುವುದರ ಮೂಲಕ ಆ ಪ್ರದೇಶದ ಎಲ್ಲಾ ದೇವರುಗಳನ್ನು ನೆನಪಿಸಿಕೊಳ್ಳುವ ಸಲುವಾಗಿ ಶ್ಲೋಕಗಳನ್ನು ಜಾತ್ರೆ-ಉತ್ಸವದಲ್ಲಿ ಹೇಳುತ್ತಾರೆ. ಈ ಉತ್ಸವವು ರಾತ್ರಿ ಸುಮಾರು ಎಂಟು ಗಂಟೆಯಿಂದ ಶುರುವಾಗಿ ಮಧ್ಯರಾತ್ರಿ ೧೧-೧೨ ಗಂಟೆ ಸುಮಾರಿಗೆ ಶಾಂತಮುತ್ತಯ್ಯನ ಗದ್ದುಗೆಯವರೆಗೆ ಸಾಗಿ ಬರುತ್ತದೆ. ಇಲ್ಲಿ ಸಂಪ್ರದಾಯಬದ್ಧವಾಗಿ ಶಾಂತಮುತ್ತಯ್ಯನವರು ಐಕ್ಯವಾಗಿರುವ ಗದ್ದುಗೆಯ ಮೇಲೆ ಎಣ್ಣೆ ಎರಚುವುದು, ಹಣ್ಣು-ಕಾಯಿ ನೈವೇಧ್ಯವನ್ನು ಮಾಡಲಾಗುತ್ತದೆ. ನಂತರ ಇಲ್ಲಿ ಶಾಂತಮುತ್ತಯ್ಯನ ವಂಶಸ್ಥರೇ ಆದ ಒಡೆಯರು ಹೇಳಿಕೆಯನ್ನು ಹೇಳುತ್ತಾರೆ. ಈ ಹೇಳಿಕೆಯು ಮಳೆ-ಬೆಳೆಗೆ ಸಂಬಂಧಿಸಿರುತ್ತದೆ.

ರವೆ ಉಂಡೆಯ ಶಾಸ್ತ್ರ: ಈ ನುಚ್ಚುನುಂಡಿಯ ಪದ್ಧತಿಯನ್ನು ಹೇಳಿಕೆ ಹೇಳಿದ ತಕ್ಷಣವೇ ಈ ಕಾರ್ಯ ಮಾಡುತ್ತಾರೆ. ಇದು ರವೆ ಉಂಡೆಯನ್ನು ಎತ್ತಿಕೊಳ್ಳುವ ಸಂಪ್ರದಾಯವಾಗಿದೆ. ಅಂದರೆ ನೈವೇಧ್ಯಕ್ಕೆಂದು ಐದು ರವೆ ಉಂಡೆಗಳನ್ನು ಒಂದು ಮಣ್ಣಿನ ಮಡಿಕೆಯಲ್ಲಿಟ್ಟುಕೊಂಡು ಬಂದಿರುತ್ತಾರೆ. ಈ ರವೆ ಉಂಡೆಯನ್ನು ಹೇಳಿಕೆ ಹೇಳಿದ ವ್ಯಕ್ತಿಯು ತನ್ನ ಕೈಯಿಂದ ಎತ್ತಿ ಹಿರೇಕುರುಬರ ಕೈಗೆ ಕೊಡುತ್ತಾನೆ. ಆಗ ಹಿರೇಕುರುಬ ಅದರ ಗೂಡಾರ್ಥವನ್ನು ಅಲ್ಲಿ ನೆರೆದಿರುವ ಜನತೆಗೆ ಮನವರಿಕೆ ಮಾಡಿಕೊಡುತ್ತಾರೆ. ಅದು ಯಾವ ರೀತಿ ಎಂದರೆ, ಹೇಳಿಕೆ ಹೇಳಿದಾತ ಕೊಟ್ಟ ರವೆ ಅಥವಾ ನುಚ್ಚುನುಂಡಿಗಳ ಆಧಾರದ ಮೇಲೆ ಅಂದರೆ ರವೆ ಉಂಡಿಗಳು ಸಮಸಂಖ್ಯೆಯಲ್ಲಿ ಬಂದರೆ ಗ್ರಾಮಕ್ಕೆ ಅಪಶಕುನವೆಂಬ ಭಾವನೆ ಅಥವಾ ಮಳೆ-ಬೆಳೆಗಳು ಪೂರ್ಣ ಪ್ರಮಾಣದಲ್ಲಿ ಬೆಳೆಯುವುದಿಲ್ಲವೆಂಬ ನಂಬಿಕೆ. ಅದೇ ರೀತಿ ಬೆಸಸಂಖ್ಯೆಯಲ್ಲಿ ಬಂದರೆ ಒಳಿತಾಗುವುದೆಂಬ ಭಾವನೆ ಇಲ್ಲಿನ ಜನತೆಯಲ್ಲಿ ಮನೆ ಮಾಡಿರುವುದು ಕಂಡುಬರುತ್ತದೆ. ಈ ಸಂಪ್ರದಾಯವು ಇಂದಿಗೂ ಉಳಿದುಕೊಂಡು ಬಂದಿದೆ. ಹೀಗೆ ಈ ಎಲ್ಲಾ ಪೂಜೆ ಪುನಸ್ಕಾರಗಳು ಮುಗಿಸುವತ್ತಿಗೆ ಸುಮಾರು ಮಧ್ಯರಾತ್ರಿ ಒಂದರಿಂದ ಎರಡು ಗಂಟೆಯಾಗುತ್ತದೆ. ಅಲ್ಲಿಂದ ಪಲ್ಲಕ್ಕಿ ಕಳಸವೂ ಗುಡಿ ಸೇರುವ ಹೊತ್ತಿಗೆ, ಬೆಳಗಿನ ಜಾವ ನಾಲ್ಕು-ಐದು ಗಂಟೆಯಾಗುತ್ತದೆ. ಇಲ್ಲಿಗೆ ರೇವಣಸಿದ್ಧನ ಜಾತ್ರೆ-ಪಲ್ಲಕ್ಕಿ ಉತ್ಸವವು ಕೊನೆಗೊಳ್ಳುತ್ತದೆ. ಮರುದಿನ ಊರಲ್ಲಿ ಜಾತ್ರೆಯ ಪ್ರಯುಕ್ತ ಡೊಳ್ಳಿನ ಹಾಡುಗಳ ಮೂಲಕ

ಸವಾಲು, ಜವಾಬುಗಳು ನಡೆಯುತ್ತವೆ. ಇದಕ್ಕೆ ಬೇರೆ ಬೇರೆ ಊರುಗಳಿಂದ ಡೊಳ್ಳಿನ ಕಲಾವಿದರು, ಹಾಡ್ಕಿ ಹಾಡುವವರು ಬಂದಿರುತ್ತಾರೆ. ಹೀಗೆ ಸರೂರ ಗುರುಒಡೆಯರು ಆಚರಿಸುವ ರೇವಣಸಿದ್ಧೇಶ್ವರನ ಜಾತ್ರೆಯು ಮೂರು ದಿನಗಳ ಕಾಲ ನಿರಂತರವಾಗಿ ನಡೆಯುತ್ತದೆ.

ಈ ರೀತಿಯಾದ ಸರೂರಿನ ಗುರುಒಡೆಯರ ಸಂಪ್ರದಾಯವು ವಿಶಿಷ್ಟವಾಗಿದೆ. ಹಾಗಾಗಿ ತಮ್ಮ ವಿಭಿನ್ನವಾದ ಸಾಂಸ್ಕೃತಿಕ ಬದುಕಿನ ಪರಂಪರೆಯನ್ನು ತಮ್ಮಲ್ಲಿ ಉಳಿಸಿಕೊಳ್ಳದೇ ರೇವಣಸಿದ್ಧನ ಶಾಖಮಠಗಳ ರೂಪದಲ್ಲಿ ಗುರುಒಡೆಯರ ಪರಂಪರೆಯನ್ನು ಬೇರೆ ಬೇರೆ ಪ್ರದೇಶ, ಊರು, ತಾಲೂಕು, ಜಿಲ್ಲೆ, ರಾಜ್ಯಗಳಲ್ಲಿ ವಿಸ್ತರಿಸಿಕೊಂಡಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ "ರಾಮನಗರ ಜಿಲ್ಲೆಯ ಅವ್ವೇರಹಳ್ಳಿ, ರೇವಣಸಿದ್ಧ ಬೆಟ್ಟದಲ್ಲಿ ಈ ಪರಂಪರೆಯವರು ರೇವಣಸಿದ್ಧೇಶ್ವರನ ಜಾತ್ರೆ–ಉತ್ಸವವನ್ನು ಮಾಡುತ್ತಾರೆ. ಇಲ್ಲಿ ಪ್ರತಿ ವರ್ಷ ವ್ಯಾಸ ಪೂರ್ಣಿಮೆಯಿಂದ ಐದು ದಿನಗಳವರೆಗೆ ಜಾತ್ರೆ ಸೇರುತ್ತದೆ. ವ್ಯಾಸ ಪೂರ್ಣಿಮೆಯ ದಿನದ ಬೆಳಗಿನ ಜಾವದಲ್ಲಿ ಅಗ್ನಿ ತುಳಿಯುವ ಅಥವಾ ಕೆಂಡ ತುಳಿಯುವ ಕಾರ್ಯಕ್ರಮವಿರುತ್ತದೆ. ಈ ಸಮಯದಲ್ಲಿ ಶಿವಪಾರ್ವತಿಯರ ಉತ್ಸವಮೂರ್ತಿ ಸ್ಥಾಪಿಸಿರುತ್ತಾರೆ. ಮರುದಿನ ಪಲ್ಲಕ್ಕಿಯಲ್ಲಿ ಶಿವ ಪಾರ್ವತಿಯರ ಉತ್ಸವ ಮೂರ್ತಿಗಳನ್ನಿಟ್ಟು ಗಿರಿ ಪ್ರದಕ್ಷಿಣೆ ಹಾಕಿಸುತ್ತಾರೆ. ಇನೇ ದಿನ ರೇಣುಕಾಂಬೆಯ ಮುತ್ತಿನ ಪಲ್ಲಕ್ಕಿ ಮೆರವಣಿಗೆಯಿರುತ್ತದೆ. ಈ ಸಮಯದಲ್ಲಿ ಬೆಟ್ಟದ ತುತ್ತ ತುದಿಯಲ್ಲಿರುವ ತಂದೆ ರೇವಣಸಿದ್ಧನ ಉತ್ಸವ ಮೂರ್ತಿಯನ್ನು ಹೊತ್ತುತಂದು ಮೆರವಣಿಗೆಯನ್ನು ಮಾಡುತ್ತಾರೆ."[೭] ಹಾಗೆಯೇ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಸಂಗ್ರೇಶಿಕೊಪ್ಪದಲ್ಲಿ ರೇವಣಸಿದ್ಧನ ಪ್ರತ್ಯೇಕವಾದ ಮಠವಾಗಲಿ ಇರುವುದಿಲ್ಲ. ಆದರೆ ಎರಡು ಒಡೆಯರ ಮನೆಗಳ ನಡುವೆ ಒಂದು ಅಂಕಣವಿದ್ದು, ಅಲ್ಲಿಯೇ ಜಗಲಿಯ ಮೇಲೆ ರೇವಣಸಿದ್ಧನ ಮೂರ್ತಿ ಇರುತ್ತದೆ. ಎದೆಯಿಂದ ಮೇಲ್ಭಾಗದ ಜಟಾಧಾರಿ, ಗಡ್ಡಧಾರಿ ಮೂರ್ತಿಯಿದ್ದು ಇದು ಲಿಂಗಳೇಶ್ವರದಲ್ಲಿ ದೊರೆಯವ ಮೂಲ ರೇವಣಸಿದ್ಧರನ್ನು ಹೊಲುವ ಮೂರ್ತಿಯಾಗಿದೆ. ಮೂರ್ತಿಯ ತಲೆಯ ಮೇಲೆ ಐದು ಹೆಡೆಯ ಸರ್ಪವಿದೆ. ಎಲ್ಲ ಊರುಗಳಲ್ಲಿರುವ ಹಾಗೆ ಇಲ್ಲಿ ರೇವಣಸಿದ್ಧೇಶ್ವರರಿಗೆ ಪಲ್ಲಕ್ಕಿಗಳಿಲ್ಲ, ಆದರೆ ಶ್ರಾವಣ ಮಾಸದ ಕಡೆಯ ಸೋಮವಾರ ದಿನ ಇಲ್ಲಿ ಜಾತ್ರೆ ನಡೆಯುತ್ತದೆ. ಈ ಸಂಗ್ರೇಶಿಕೊಪ್ಪದ ರೇವಣಸಿದ್ಧನೊಂದಿಗೆ, ಗೋವನಕೊಪ್ಪದ ರೇವಣಸಿದ್ಧ, ಯಡಹಳ್ಳಿಯಿಂದ ರೇವಣಸಿದ್ಧ ಹೀಗೆ ಐದು ರೇವಣಸಿದ್ಧೇಶ್ವರರ ಮೂರ್ತಿಗಳನ್ನು ಕೂಡಿಸಿ ಜಾತ್ರೆ ಮಾಡುತ್ತಾರೆ."[೮] ಹಾಗೆಯೇ ಬೈಲಹೊಂಗಲ ತಾಲೂಕಿನ ಗೋವನಕೊಪ್ಪದಲ್ಲಿ ರೇವಣಸಿದ್ಧ ಸಂಪ್ರದಾಯದ ಅನೇಕ ಮನೆಗಳಿವೆ. ಅವರು ಮೂಲತಃ ಸರೂರ ಗುರುಪೀಠದವರು ಎಂದು ಹೇಳಿಕೊಳ್ಳುತ್ತಾರೆ.

ಪ್ರತಿವರ್ಷ ದಸರಾ ಹಬ್ಬದ ಸಂದರ್ಭದಲ್ಲಿ ಈ ರೇವಣಸಿದ್ಧೇಶ್ವರ ಜಾತ್ರೆ–ಪಲ್ಲಕ್ಕಿ ಉತ್ಸವವನ್ನು ಮಾಡುತ್ತಾರೆ. ಅದೇ ರೀತಿ ಸರೂರ ಸಂಪ್ರದಾಯದ ಒಡೆಯರಿಗೆ ಸಂಬಂಧಿಸಿದಂತೆ ಬಾದಾಮಿ

ತಾಲೂಕಿನ ಹಿರೇನಶಿಬಿಯಲ್ಲಿ ರೇವಣಸಿದ್ಧೇಶ್ವರನ ದೇವಾಲಯವಿದೆ. ಧಾರ್ಮಿಕವಾಗಿ ಪ್ರತಿಯೊಂದು ಕಾರ್ಯಗಳನ್ನು ಒಡೆಯರೇ ವಹಿಸಿಕೊಳ್ಳುತ್ತಾರೆ. ಇಲ್ಲಿ ಪ್ರಮುಖವಾಗಿ ರೇವಣಸಿದ್ಧೇಶ್ವರನ ಜಾತ್ರೆ ನಡೆಯುತ್ತದೆ. ಅದು ಪ್ರತಿವರ್ಷ ಶ್ರಾವಣದ ಕೊನೆಯ ಸೋಮವಾರದಂದು ನಡೆಯುತ್ತದೆ. ಹೀಗೆ ಕಡೂರು ತಾಲೂಕಿನ ಆ ಸರದಿಯಲ್ಲಿಯೂ ಈ ಪರಂಪರೆಯವರು ರೇವಣಸಿದ್ಧನ ಜಾತ್ರೆ-ಪಲ್ಲಕ್ಕಿ ಉತ್ಸವವನ್ನು ಆಚರಿಸಿಕೊಂಡು ಬಂದಿದ್ದಾರೆ. ಪ್ರಾಚೀನ ಕಾಲದಿಂದಲೂ ರೇವಣಸಿದ್ಧೇಶ್ವರನ ಮಠವಿದ್ದು, ಈಗ ಹೊಸದಾಗಿ ರೇವಣಸಿದ್ಧೇಶ್ವರನ ದೇವಾಲಯವನ್ನು ಕಟ್ಟಿಸಿದ್ದಾರೆ. ಇವರು ದಸರಾ ಹಬ್ಬದ ಸಂದರ್ಭದಲ್ಲಿ ರೇವಣಸಿದ್ಧನ ಜಾತ್ರೆ ಪಲ್ಲಕ್ಕಿ ಉತ್ಸವವನ್ನು ನಡೆಸುತ್ತಾರೆ. ಹೀಗೆ ಪ್ರತಿನಿತ್ಯ ಪೂಜೆಯನ್ನು ಮಾಡುವುದರ ಜೊತೆಗೆ ಹಬ್ಬ ಹರಿದಿನಗಳಲ್ಲಿ ರೇವಣಸಿದ್ಧೇಶ್ವರನ ಪಲ್ಲಕ್ಕಿ ಉತ್ಸವ ಜಾತ್ರೆಯನ್ನು ಏರ್ಪಡಿಸುತ್ತಿರುವುದು ಕಂಡುಬರುತ್ತದೆ. ಪ್ರಮುಖವಾಗಿ ಈ ರೇವಣಸಿದ್ಧೇಶ್ವರನ ಜಾತ್ರೆ-ಉತ್ಸವಗಳು ದಸರಾ ಹಾಗೂ ಮಹಾಶಿವರಾತ್ರಿಯ ಸಂದರ್ಭದಲ್ಲಿ ನಡೆಯುತ್ತವೆ. ಅವು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ದೊಡ್ಡೇರಿ, ರಂಗವ್ವನಹಳ್ಳಿ, ಹಿರಿಯೂರು ತಾಲೂಕಿನ ಹರ್ತಿಕೋಟೆ, ಹೊಸದುರ್ಗ ತಾಲೂಕಿನ ಕಾಡೇಹಳ್ಳಿ ಹೀಗೆ ಅನೇಕ ಪ್ರದೇಶಗಳಲ್ಲಿ ದಸರಾ ಹಬ್ಬದಲ್ಲಿ ರೇವಣಸಿದ್ಧೇಶ್ವರನ ಪಲ್ಲಕ್ಕಿ ಉತ್ಸವಗಳು ನಡೆಯುತ್ತಿರುವುದು ಕಂಡುಬರುತ್ತವೆ. ವಿಶೇಷವಾಗಿ ಶ್ರಾವಣ ಮತ್ತು ಮಹಾಶಿವರಾತ್ರಿಯಂದು ಸರೂರು ಮತ್ತು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯ ಜಾತ್ರೆ-ಪಲ್ಲಕ್ಕಿ ಉತ್ಸವಗಳು ಜನರ ಮನದಲ್ಲಿ ಅಚ್ಚಳಿಯದೇ ಉಳಿದುಕೊಂಡಿವೆ. ಹೀಗೆ ಸರೂರಿನ ಗುರುಒಡೆಯರ ಪರಂಪರೆಯು ಕರ್ನಾಟಕದಾದ್ಯಂತ ವಿಸ್ತರಿಸಿಕೊಂಡಿದ್ದಲ್ಲದೆ, ಆಂಧ್ರ ಪ್ರದೇಶದಲ್ಲಿಯೂ ಇದರ ಅಸ್ತಿತ್ವವನ್ನು ಬೆಳೆಸಿಕೊಂಡು ಬರುತ್ತಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದು ಕೊಳ್ಳಲಾಗಿದೆ. ಅಲ್ಲಿ ಸರೂರಿನ ಸಂಪ್ರದಾಯದವರು ಎಂದು ಹೇಳಿಕೊಳ್ಳುವ ಅನೇಕ ಗುರುಒಡೆಯರ ಮನೆಗಳು ಆಂಧ್ರ ಪ್ರದೇಶದಲ್ಲಿ ಕಂಡುಬರುತ್ತವೆ. ಇವರು ಸರೂರಿನ ಗುರುಒಡೆಯರು ಆಚರಿಸುವ ಸಂಪ್ರದಾಯಗಳನ್ನು ರೂಢಿಸಿಕೊಂಡು, ಪಾಲಿಸಿಕೊಂಡು ಬಂದಿರುವುದನ್ನು ಅವರು ಆಚರಿಸುವ ಹಬ್ಬಗಳಿಂದ ಹಾಗೂ ಜಾತ್ರೆ ಪಲ್ಲಕ್ಕಿ ಉತ್ಸವ ಇತ್ಯಾದಿ ಸಂಪ್ರದಾಯಗಳಿಂದ ತಿಳಿದುಬರುತ್ತದೆ. ಆದರೆ ಇವರು ಸರೂರಿನ ಹಾಗೆ ಎಲ್ಲಾ ಸಂಪ್ರದಾಯಗಳನ್ನು ಅಳವಡಿಸಿಕೊಂಡು ಆಚರಿಸುವುದು ಕಷ್ಟಸಾಧ್ಯ. ಆದರೂ ಈ ಗುರುಒಡೆಯರ ಪರಂಪರೆಯನ್ನು ಕಾಲಕಾಲಕ್ಕೆ ರೇವಣಸಿದ್ಧೇಶ್ವರನ ಜಾತ್ರೆ ಪಲ್ಲಕ್ಕಿ ಉತ್ಸವಗಳನ್ನು ಅದ್ಧೂರಿಯಾಗಿ ಆಚರಣೆ ಮಾಡಿಕೊಂಡು ಬರುತ್ತಿರುವುದು ಕಂಡುಬಂದಿದ್ದು ಅವುಗಳಲ್ಲಿ ಪ್ರಮುಖ ಪ್ರದೇಶಗಳೆಂದರೆ,

ಅನಂತಪುರಂ ಜಿಲ್ಲೆಯಲ್ಲಿ ಬರುವ ಕರ್ತನಪರ್ತಿ ಇದು ಕಲ್ಯಾಣದುರ್ಗ ಮಂಡಲಕ್ಕೆ ಸೇರಿದೆ. ಇಲ್ಲಿ ರೇವಣಸಿದ್ಧೇಶ್ವರನ ದೇವಾಲಯವಿದ್ದು, ಸುಮಾರು ಹತ್ತು ವರ್ಷಗಳ ಈಚೆಗೆ ನಿರ್ಮಿಸ

ಲಾಗಿರುವುದರಿಂದ ರೇವಣಸಿದ್ಧನ ಕಂಚಿನ ಪ್ರತಿಮೆಯಿದೆ. ಇದರ ಧಾರ್ಮಿಕ ಕಾರ್ಯಗಳನ್ನು ಶಾಂತಮುತ್ತಯ್ಯ ಒಡೆಯರು ಮತ್ತು ಸಿದ್ಧಯ್ಯ ಒಡೆಯರು ನೆರವೇರಿಸಿಕೊಡುತ್ತಾರೆ. ಇಲ್ಲಿ ಪ್ರತಿ ಹುಣ್ಣಿಮೆ, ಅಮವಾಸ್ಯೆಯಲ್ಲಿ ವಿಶೇಷ ಪೂಜೆ ನಡೆಯುತ್ತದೆ. ದಸರಾ ಸಮಯದಲ್ಲಿ ರೇವಣಸಿದ್ಧನ ಪಲ್ಲಕ್ಕಿ ಉತ್ಸವ ಅದರ ಜೊತೆಗೆ ವೀರಮಾಳಮ್ಮನ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಹಾಗೆಯೇ ಕುಂದುರ್ಪಿ ಮಂಡಲಂಗೆ ಸೇರಿದ ಲಕ್ಷ್ಮಂಪಲ್ಲಿಯಲ್ಲಿಯೂ ಈ ಸಂಪ್ರದಾಯದ ಒಡೆಯರು ವಾಸವಾಗಿದ್ದಾರೆ. ಸರೂರಿನ ಗುರುಒಡೆಯರು ತಮ್ಮ ಒಡೆಯರ ಶವಗಳನ್ನು ಸಾಮಾನ್ಯವಾಗಿ, ರೇವಣಸಿದ್ಧೇಶ್ವರ ಗುಡಿಯ ಅಕ್ಕ ಪಕ್ಕದಲ್ಲಿ ಸಮಾಧಿ ಮಾಡಿರುತ್ತಾರೆ. ಇದೇ ಸಂಪ್ರದಾಯದ ರೂಢಿಯನ್ನು ಲಕ್ಷ್ಮಂಪಲ್ಲಿಯಲ್ಲಿ ನೋಡಬಹುದು. ಏಕೆಂದರೆ ಅಲ್ಲಿಯೂ ಗುಡಿಯ ಪಕ್ಕದಲ್ಲಿ ಹಿಂದಿನ ಒಡೆಯರ ನಾಲ್ಕು ಸಮಾಧಿಗಳಿವೆ. ಇವರು ರೇವಣಸಿದ್ಧನ ಜಾತ್ರೆಯ ಪಲ್ಲಕ್ಕಿ ಉತ್ಸವವನ್ನು ವಿಜಯ ದಶಮಿಯಂದು ಆಚರಿಸುತ್ತಾರೆ. ಅದೇ ರೀತಿ ಕರ್ನೂಲ್, ಆಲೂರು, ಚಿಂತಕುಂಟ ಮಂಡಲದಲ್ಲಿ ಕೂಡ ರೇವಣಸಿದ್ಧನ ಪಲ್ಲಕ್ಕಿ ಉತ್ಸವ ಮಾಡುತ್ತಾರೆ. ಇಲ್ಲಿ ಪ್ರತೀವರ್ಷ ಜಾತ್ರೆ ನಡೆಯುವುದಿಲ್ಲ. ಸುಮಾರು ಹನ್ನೆರಡು ವರ್ಷಗಳಿಗೊಮ್ಮೆ "ದೊಡ್ಡದ್ಯಾವ್ರು" ಮಾಡುತ್ತಾರೆ. ಇಲ್ಲಿ ಗುರುಸಿದ್ಧೇಶ್ವರ ಸ್ವಾಮಿಯ ದೇವಸ್ಥಾನವಿದೆ. ಇದನ್ನು ರೇವಣಸಿದ್ಧ ಅಥವಾ ಕಾರಪ್ಪಮ ದೇವಸ್ಥಾನ ಎಂದು ಕರೆಯುತ್ತಾರೆ. ಹೀಗೆ ಇದರ ಪೂಜೆಯನ್ನು ರೇವಣಸಿದ್ಧಯ್ಯ ಒಡೆಯರು ಪೂಜೆ ಮಾಡಿಕೊಂಡು ಬರುತ್ತಾರೆ. ಇವರ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಗೊಸ್ಬಾಳ, ನೇಮ್ಕಲ್, ಸಂಗಾಲ ಹಾಗೂ ಪೆದ್ದಹುಲ್ತಿ(ಹಿರಿಯುಲ್ತಿ) ಇವು ಪ್ರಮುಖವಾಗಿ ಕಾರ್ಯನಿರ್ವಹಿಸುತ್ತವೆ. ಅದರಲ್ಲಿ ಪೆದ್ದಹುಲ್ತಿಯು ಕರ್ನೂಲ್ ಜಿಲ್ಲೆಯ ಪತ್ತಿಕೊಂಡ ಮಂಡಲದಲ್ಲಿ ಬರುತ್ತದೆ. ಇವರು ಧಾರ್ಮಿಕವಾಗಿ ಎಲ್ಲಾ ಕಾರ್ಯಗಳನ್ನು ಒಡೆಯರ ಸಮ್ಮುಖದಲ್ಲಿ ನಡೆಸುತ್ತಾರೆ. ಇವರು ದೀಪಾವಳಿ ಸಂದರ್ಭದಲ್ಲಿ ಪಲ್ಲಕ್ಕಿ ಉತ್ಸವಗಳನ್ನು ಮಾಡುತ್ತಾರೆ. ಈ ಜಾತ್ರೆಗೆ ಕರ್ನಾಟಕ, ಮಹಾರಾಷ್ಟ್ರ ಹೀಗೆ ಬೇರೆ ಬೇರೆ ಕಡೆಯಿಂದ ಒಡೆಯರು ಹಾಗೂ ಭಕ್ತಾದಿಗಳು ಬರುತ್ತಾರೆ ಎಂದು ಹೇಳಿಕೊಳ್ಳುತ್ತಾರೆ. ಹೀಗೆ ಅನೇಕ ಊರುಗಳಲ್ಲಿ ಸರೂರಿನ ಗುರುಒಡೆಯರ ಪರಂಪರೆಯನ್ನು ರೂಢಿಸಿಕೊಂಡು ಬರುತ್ತಿರುವುದು ತಿಳಿದುಬರುತ್ತದೆ. ಹೀಗೆ ಮೂಲ ಪೀಠದಿಂದ ಗುರುಒಡೆಯರು ಅಂದರೆ ಕರ್ನಾಟಕದಿಂದ ವಲಸೆ ಹೋಗಿ ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಗಡಿಭಾಗದಲ್ಲಿ ಹೆಚ್ಚಾಗಿ ವಾಸವಾಗಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಸರೂರಿನ ಗುರುಒಡೆಯರ ಸಂಸ್ಕೃತಿ ಸಾರ್ವತ್ರೀಕರಣ ಗೊಂಡಿರುವುದು ಗಮನಾರ್ಹವಾಗಿದೆ. ಹೀಗೆ ಈ ಎಲ್ಲ ಜಾತ್ರೆ–ಉತ್ಸವಗಳನ್ನು ಗಮನಿಸಿದಾಗ ಕುರುಬ ಸಮುದಾಯ ಮತ್ತು ಗುರುಒಡೆಯರ ಪರಂಪರೆಗಳಲ್ಲಿ ಆಚರಣೆ, ಸಂಪ್ರದಾಯಗಳು ಭಿನ್ನವಾಗಿದ್ದರು, ಕೆಲವೊಂದು ಸಂಪ್ರದಾಯಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವುದು

ಕಂಡುಬರುತ್ತದೆ. ಈ ಎಲ್ಲ ಜಾತ್ರೆ, ಉತ್ಸವ, ಆಚರಣೆಗಳು ಸರೂರಿನ ಸಂಪ್ರದಾಯದ ಆಚರಣೆಗಳ ಛಾಯೆ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಇತರೆ ಭಾಗಗಳಲ್ಲಿ ಕಂಡುಬರುವುದನ್ನು ಗಮನಿಸಬಹುದು.

ಒಡೆಯರ ಹೇಳಿಕೆಗಳು

ಈ ಭೂಮಿಯ ಮೇಲೆ ಸಾಂಸ್ಕೃತಿಕ ಬದುಕನ್ನು ಅವಲಂಭಿಸಿದ ಪ್ರತಿಯೊಂದು ಜನಾಂಗವು ಹರಕೆ, ಹೇಳಿಕೆ, ದೈವೀ ನಂಬಿಕೆಗಳನ್ನು ರೂಢಿಸಿಕೊಂಡು ಜೀವನ ಸಾಗಿಸುತ್ತಿರುತ್ತವೆ. ಹೀಗಾಗಿ ಮನುಷ್ಯನ ಸಾಂಸ್ಕೃತಿಕ ಬದುಕಿನ ಹಿನ್ನೆಲೆಯಲ್ಲಿ ಸೃಷ್ಟಿಯಾದ ಹೇಳಿಕೆಗಳಿಗೆ ಮೌಖಿಕ ಸಾಹಿತ್ಯದಲ್ಲಿ ಹಲವಾರು ಕಾರಣಗಳಿಂದ ಅಗ್ರಸ್ಥಾನವಿದೆ. ಇವು ಒಗಟಿನ ರೂಪದ ನಂಬಿಕೆಗಳಾಗಿವೆ. ತನ್ನನ್ನು ನಂಬಿದ ಭಕ್ತರಿಗೆ ನಿಸರ್ಗದ ಕುರಿತಾಗಿ, ಮಳೆ-ಬೆಳೆಯ ಬಗ್ಗೆ ಹಾಗೂ ಮನುಷ್ಯನ ಜೀವನಕ್ಕೆ ಅಡೆತಡೆಯಾದ ರೋಗ ರುಜಿನೆಗಳ ಬಗ್ಗೆ ದೇವರು-ದೈವಗಳ ಕಾಟವನ್ನು ಕುರಿತು ವ್ಯಾಪಾರ, ರಾಜಕಾರಣದ ಕುರಿತು ಹೀಗೆ ಅತ್ಯಂತ ಭರವಸೆಯ ಸುಳಿವುಗಳನ್ನು ನೀಡುವಂತಹ ಹೇಳಿಕೆಗಳನ್ನು ಹೇಳಿಕೊಂಡು ಬಂದಿರುವಂತಹ ಅನೇಕ ನಿದರ್ಶನಗಳು ಇಲ್ಲಿ ಕಂಡುಬರುತ್ತವೆ.

ಈ ಹಿನ್ನೆಲೆಯಲ್ಲಿ ಸರೂರಿನ ಗುರುಒಡೆಯರ ಆಚರಣೆಯ ಹೇಳಿಕೆಗಳು ಇವರನ್ನು ಹೊರತುಪಡಿಸಿಲ್ಲ. ಇವರು ಕುರಿಕಿಲಾರಿಗಳೊಂದಿಗೆ ಸದಾಚಾರಣ ಮಾಡುತ್ತಾ ನಿಸರ್ಗದ ಒಡನಾಟದಲ್ಲಿ ಸದಾ ಜೀವಿಸುವ ಇವರಿಗೆ ಪ್ರಕೃತಿಯಲ್ಲಿ ಸಂಭವಿಸುವ ಕೌತುಕಮಯ ಸನ್ನಿವೇಶಗಳ ಆಧಾರದ ಮೇಲೆ ಮಳೆ-ಬೆಳೆಯ ಲೆಕ್ಕಾಚಾರ ಹಾಕುವ ಸಾಮರ್ಥ್ಯ ಬಂದಿರುತ್ತದೆ. ಇದೊಂದು ರೀತಿಯ ಪಾರಂಪರಿಕ ಜ್ಞಾನವೂ ಹೌದು. ಇಂಥಹ ಪಾರಂಪರಿಕ ಜ್ಞಾನವುಳ್ಳಂತಹ ಹಾಲುಮತಸ್ಥರು ಪ್ರಕೃತಿಯೊಂದಿಗೆ ನಿಕಟ ಸಂಪರ್ಕ ಹೊಂದಿದ್ದು, ಕಾಡು-ಮೇಡುಗಳನ್ನು ಅಲೆಯುತ್ತಾ ನಿಸರ್ಗದ ರೌದ್ರ ಮತ್ತು ಸೌಮ್ಯ ವರ್ತನೆಗಳನ್ನು ಎದುರಿಸಿ ಬದುಕಿನ ಬಗ್ಗೆ ಭವಿಷ್ಯದಲ್ಲಿ ಭರವಸೆ ಮೂಡಿಸುವ ಅನಿವಾರ್ಯತೆಯಿತ್ತು ಎಂಬುದರ ಬೌದ್ಧಿಕ ಚಿಂತನೆಯೊಳಗಡೆ ಸೃಷ್ಟಿಯಾಗಿರಬಹುದು.

ಈ ಎಲ್ಲಾ ಸಂಗತಿಗಳನ್ನು ಮನಗಂಡು ಪ್ರಸ್ತುತ ಸಂದರ್ಭದಲ್ಲಿ ಚರ್ಚಿಸುವುದೇನೆಂದರೆ ಕುರುಬರ ಗುರುಒಡೆಯರ ಪರಂಪರೆಯು ಮೂಲತಃ ಸರೂರಿನ ಪರಿಸರದಲ್ಲಿ ಪ್ರಜ್ವಲಿಸುವುದರಿಂದ ಅವರ ಸಾಂಸ್ಕೃತಿಕ ಬದುಕಿನ ವಿಶೇಷತೆಯನ್ನು ಗುರುತಿಸುವಾಗ ಆ ಊರಿನಲ್ಲಿ ಶಾಂತಮುತ್ತಯ್ಯನ ಪರಂಪರೆ ಮತ್ತು ಮಂಕಸಿದ್ಧನ ಪರಂಪರೆಯ ಒಡೆಯರಿದ್ದಾರೆ. ಇವರು ರೂಢಿಸಿಕೊಂಡು ಬಂದ ಆಚರಣೆ-ಸಂಪ್ರದಾಯಗಳು ಇತರರಿಗೆ ಕುತೂಹಲ ಮೂಡಿಸುವಂತಹ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಸರೂರಿನ ಗುರುಒಡೆಯರು ವಿಶೇಷವಾಗಿ ರೇವಣಸಿದ್ಧೇಶ್ವರನ ಜಾತ್ರೆ, ಉತ್ಸವಗಳಲ್ಲಿ ಮಳೆ-ಬೆಳೆಗೆ ಸಂಬಂಧಿಸಿದ ಹೇಳಿಕೆಗಳನ್ನು ಹೇಳುವಂತದ್ದು ಕಂಡುಬರುತ್ತದೆ. ಇದು ಕರ್ನಾಟಕ ದಲ್ಲೊಂದೆ ಅಲ್ಲದೇ ಆಂಧ್ರ ಪ್ರದೇಶದಲ್ಲಿಯೂ ಈ ಪರಂಪರೆಯ ಒಡೆಯರು ಇದನ್ನು ರೂಢಿಸಿಕೊಂಡು ಬರುತ್ತಿರುವುದನ್ನು ಈಗಲೂ ನೋಡಬಹುದು.

ಸರೂರಿನಲ್ಲಿ ಜಾತ್ರೆಯು ಶ್ರಾವಣ ಮತ್ತು ಶಿವರಾತ್ರಿಯಲ್ಲಿ ವರ್ಷಕ್ಕೆ ಎರಡು ಬಾರಿ ಹೇಳಿಕೆ ನಡೆಯುತ್ತದೆ. ಹೀಗೆ ಜಾತ್ರೆ ನಡೆಯುವ ಸಂದರ್ಭದಲ್ಲಿ ಶಾಂತಮುತ್ತಯ್ಯನ ವಂಶಸ್ಥರ ಒಡೆಯರು ಹೇಳಿಕೆಗಳನ್ನು ಹೇಳುತ್ತಾರೆ. ಇವು ಸುಮಾರು ಅರ್ಧ ರಾತ್ರಿಯ ಸಮಯದಲ್ಲಿ ಜರುಗುವಂತಹ ಹೇಳಿಕೆಗಳಾಗಿವೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸಂಗ್ರಹಿಸಿದ ಹೇಳಿಕೆಗಳು ಇಂತಿವೆ.

ಹಿರೇಕುರುಬ: ಸುತ್ತು ಮುಂಗಾರು ಮಳೆ ದಯಮಾಡ ಬೇಕ್ರಿ

ಒಡೆಯ: ಎಲೇ ತುರ್ತು ರೋಣಿ ಮಿರ್ಕ ಮಿಂಚು ಸಾಗ್ಮಾಣಿ

ಹಿ.ಕು: ಮುಂದಿನ ಎಲ್ಲಾ ಮಳೆಗಳನ್ನು ಸಾಗ್ಮಾಡ ಬೇಕ್ರಿ

ಒಡೆಯ: ಮುಂಗಾರು ನಲವತ್ತಾರು ಪೈಸೆ, ಇಂಗಾರು ಏನು ಅತ್ತಂಗಿಲ್ಲದೆ ಎಪ್ಪತ್ಮೂರು ಪೈಸೆ ಕೊಟ್ಟೀನಿ ನೋಡು.

ಹಿ.ಕು.: ಜಾಗದಲ್ರೀ....

ಒಡೆಯ: ಜಾಗದಲ್ಲಿ ಯಾವನು ಭಕ್ತಿಭಾವ ಇಟ್ಟು ನಡಿತಾನಾ ಅವನ ಮನೆತನಕ್ಕೆ ತೊಟ್ಲಿಟ್ಟು ತೂಗಿಸ್ತೀನಿ ನೋಡು.

ಹಿರೇ ಕುರುಬ: ತುರ್ತು ಮುಂಗಾರು ಮಳೆ ದಯಮಾಡ್ಬೇಕ್ರಿ

ಒಡೆಯ: ಅಲೇ... ಈ ಮಳೆ ಇಡಕಂಡ ಉಬ್ಬಿ–ಉತ್ತರಿ ಸಂಪೂರ್ಣವಾಗಿ ಬರುತ್ತೈತಿ.

ಹಿ.ಕು: ಮುಂದಲ ಮಳೇರೀ...

ಒಡೆಯ: ಮುಂದೆ ಬೇಕಾದಷ್ಟು ಕೊಟ್ಟೀನಿ

ಹಿ.ಕು: ಹಿಂಗಾರೀ

ಒಡೆಯ: ಹಿಂಗಾರ್‍ಯಾಗ ೭೩ ಪೈಸ್ಯೆ ಬಿಳೆಕಾಳು ಮುಂದೈತಿ

ಹಿ.ಕು: ಜಾಗದಲ್ರೀ...

ಒಡೆಯ: ಜಾಗದಲ್ಲಿ ಅಪನಂಬಿಕೆಯಿಟ್ಟು ನಡಿಬೇಡಲೇ... ತುಳಿದೇನು ಪಾತಾಳಕೆ.

ಹಿರೇ ಕುರುಬ: ತುರ್ತು ಮುಂಗಾರು ಮಳೆ ದಯ ಮಾಡ್ಬೇಕ್ರಿ

ಒಡೆಯ: ಎಲೇ... ತುರ್ತು ರೋಣಿ ಮಿರ್ಕ್ ಉಡಿಕಟ್ಟೀನಿ

ಹಿರೇಕುರುಬ: ಮುಂದೆ ಎಲ್ಲವೂ ಸಾಗ್ಮಾಡ್ಬೇಕ್ರಿ

ಒಡೆಯ: ಪುಣ್ಯದ ಬೆಳೆ, ಧರ್ಮದ ಮಳೆ

ಹಿರೇಕುರುಬ: ಹಿಂಗಾರೀ...

ಒಡೆಯ: ಹಿಂಗಾರಿಯ್ಯಾಗ ಮುತ್ತಿನ ರಾಶಿ ಹೊಟ್ಟೇನಿ

ಹಿರೇಕುರುಬ:	ಜಾಗದಲ್ರೀ
ಒಡೆಯ:	ಜಾಗದಲಿ ಬಲು ಜ್ಯೋಕಿ ಬೆಂಕಿ ಕಾಯಕತ್ತದೆ(ಶಾಂತ ವಂಶಸ್ಥರು)
ಹಿ.ಕು.:	ತುರ್ತು ಮಳೆ ಹೇಳಬೇಕಪ್ಪ
ಒಡೆಯ:	ಭೂಮಿ ತೂಕದ ಮಳೆ, ಭೂಮಿ ತೂಕದ ಬೆಳೆ ಅಂತಾನ ಹಿಂಗಾರಿ ಮುಂಗಾರಿ ಸಮ ತೂಕ ಮಾಡಿದಾಗ ಹಿಂಗಾರಿ ಆರು ಅಡಿ ಅಂತಾನ, ಮುಂಗಾರು ಮೂರೇ ಅಂತಾನ.
ಹಿ.ಕು.:	ಜಾಗದಾಗಪ್ಪ
ಒಡೆಯ:	ಜಾಗದಲ್ಲಿ ನಂಬಿಕೆ ಇಟ್ಟು ನಡೆದಾತಂಗೆ ಸದಾ ಬಂಗಾರದಂತೆ ಐತೆ ಅಂತಾನ.
ಒಡೆಯ:	ಹಿಂಗಾರಿ ಮುಂಗಾರಿ ತೂಕಮಾಡಿ ನೋಡಿದ್ರಾಗ ಕೆಂಪುಕಾಳು ಬಿಳಿಕಾಳು ಸಮ ಆತು ಅಂತಾನ್ರಲೇ...

"ಮಿರಗಕ್ಕೆ ಕೂರಿಗಿ ಸಾಗ ಮಾಡಬೇಕು ಅನ್ನುದರಾಗ ಕಡ್ಡಿ ಅಡ್ಡವಿತ್ತು"

"ಅರಿದ್ರೀಗಿ ಎಂಟಾಣೆ ಭಾಗ ಸಾಗ ಮಾಡೀನಿ, ಸಜ್ಜಿ, ತೊಗರಿ, ಸೇಂಗಾ, ಒಕ್ಕಲ ಮಗನಿಗೆ ಬಂಗಾರ ಖಡೆ ಒಗದೀನಿ"

"ರೋಣಿ ಒಂದು ಭಾಗ ಸಾಗ ಮಾಡೀನಿ ಮಿರಗಕ್ಕೆ ಕೂರಗಿ ಸಾಗ ಮಾಡಬೇಕು ಅನ್ನುದರಾಗ ಕೊಡ್ಡ ಅಡ್ಡಬಿತ್ತು. ಪುಷ್ಯ ಪುನರುಶ್ಯಕ್ಕೆ ಸಂಪೂರ್ಣ ಮಾಡೀನ

"ಮಿರಗಕ್ಕೆ ಅರಿದ್ರೀಗಿ ಕೂರಿಗಿ ಸಾಗ ಮಾಡಬೇಕು ಅನ್ನುದರಾಗ ಕಸರ ಕುಂತು ಬೂತ್ಯಾನ ಹಚ್ಚಿ ಬೈಲ ಮಾಡೀನಿ"

"ಹಿಂಗಾರಿ ಮುಂಗಾರಿ ಕಟಾ ಮಾಡುದುದಾಗ ಹಿಂಗಾರಿ ಮುಂದಾಯಿತು"[7]

ಇಂತಹ ಅನೇಕ ಹೇಳಿಕೆಗಳು ಸರೂರಿನ ಒಡೆಯರು ಹೇಳಿರುವುದು ಸಿಗುತ್ತವೆ. ಇವರು ಪ್ರಮುಖವಾಗಿ ಮುಂದೆ ಜರುಗುವ ಮಳೆ-ಬೆಳೆಗೆ ಸಂಬಂಧಿಸಿದ ಹೇಳಿಕೆಗಳನ್ನು ಹೆಚ್ಚಾಗಿ ಹೇಳುವುದನ್ನು ಗಮನಿಸಬಹುದು. ಹೀಗೆ ಹೇಳುವ ಸಂದರ್ಭದಲ್ಲಿ ಸರೂರಿನ ಒಡೆಯರ ವಿಶೇಷತೆ ಏನೆಂದರೆ ಶಾಂತಮುತ್ತಯ್ಯನ ವಂಶಸ್ಥರ ಒಡೆಯರು ಹೇಳಿಕೆ ಹೇಳುವಾಗ, ಮಳೆ-ಬೆಳೆಯ ಸಂಗತಿಗಳ ಬಗ್ಗೆ ಕೇಳುವುದಕ್ಕೆಂದೇ ಹಿರೇಕುರುಬರಿರುತ್ತಾರೆ. ಇವರಲ್ಲಿ ಒಬ್ಬರು ಒಡೆಯರ ಕಾಲಿಗೆ ನಮಸ್ಕರಿಸಿದರೆ ಮತ್ತೊಬ್ಬರು ಕೇಳುತ್ತಾರೆ. ಇದಕ್ಕೆ ಒಡೆಯರು ಅವರ ಮಾತಿಗೆ ಜವಾಬು(ಉತ್ತರೆನ್ನುವಾಗೆ) ಕೊಡುತ್ತಾರೆ. ಈ ರೀತಿಯಾದ ಸಂಪ್ರದಾಯಗಳು ಉತ್ತರ ಕರ್ನಾಟಕದಲ್ಲಿ ಮಾತ್ರ ಕಂಡುಬರುತ್ತವೆ. ಹಾಗಾಗಿ ಸರೂರು ಗುರುಒಡೆಯರ ಸಂಸ್ಕೃತಿಯು ಪರಂಪರೆಯಲ್ಲಿ ವಿಶಿಷ್ಟವಾದುದ್ದಾಗಿದೆ.

ಹೀಗೆ ಮುಂದುವರೆದು ವಿಜಯಪುರ ಜಿಲ್ಲೆಯ ಸರೂರ, ಗುಲಬರ್ಗಾ ಜಿಲ್ಲೆ ಶಹಾಪುರ ತಾಲೂಕಿನ ಶಿರವಾಳ ರೇವಣಸಿದ್ಧೇಶ್ವರ ಶಾಂತಮುತ್ತಯ್ಯನ ಮಹಾಶಿವರಾತ್ರಿ ಮಹಾನವಮಿ ಜಾತ್ರೆಯಲ್ಲಿ ಆಗಿರುವ ಹೇಳಿಕೆಗಳಲ್ಲಿ ಕಾಲವನ್ನು ನಿದರ್ಶನಕ್ಕಾಗಿ ನೋಡುವುದಾದರೆ,

"ಸರೂರ ಮಲ್ಲಿಕಾರ್ಜುನ ಒಡೆಯರ್: ಅರಿದ್ರೀಗಿ ಕೂರಿಗೆ ಸಾಗಮಾಡಬೇಕು ಅನುದುರಾಗ ಇದಿಮಾಯು ಇದರಿಗಿ ಬಂದಳು, ಭೂತ್ಯಾನ ಹಚ್ಚಿ ಬೈಲ ಮಾಡೀನಿ", "ಗಿಡದಾಗ ಹಣ್ಣಾಯಿತು ಗಿಳಿಬಾಯಿಗೆ ಹುಣ್ಣಹುಟ್ಟು ತಲೆ ಗಾಣಮಿಣಿ"

"ಸಿದ್ಧಯ್ಯ ಒಡೆಯರು: ಹಿಂಗಾರಿ ನಾಡಕ ಹಿಂಗಾರಿ, ಮುಂಗಾರಿ ನಾಡಕ ಮುಂಗಾರಿ ಕಟಾ
ಮಾಡುವುದುರಾಗ ಜೋಡು ನುಚ್ಚಿನ ಕಟ್ಟಿಹಾಕಿ ನೆಲೆ ಗಾಣಮಣಿ"
ಎಲೇ... ತಿರುಗಲಕ್ಕೆ ರಾಮನ ಬಾಣಲ್ಲ ಹಾರಲಕ್ಕೆ ಕಾಮನ ಬೂದಿಯಲ್ಲಿ ಮಿರಗಾಮಿಂಚಿತು. ಆರಿದ್ರ ಕೂಲಿಗೆ ಸಾಗ ಮಾಡದ್ರಾಗ ಸಂಪೂರ್ಣ ತಡೆಬಿತ್ತು ಪುಷ್ಯನು ಪುಣ್ಯವರಸು, ಛಪ್ಪನ್ನಾಡಿಗೆ ಸಂಪೂರ್ಣ ಮಾಡಿನಿ, ರೋಮಿ ಮೃಗಶಿರ ಮಳೆ ಪ್ರಾರಂಭವಾಗುವ ಹೇಳಿಕೆ.
ಯಾಂವ ಕೇಳಾಂವ ಅಂಗೈಹಿಡಿದು ಕೇಳ ಬೇಡ ಮುಂಗೈ ಹಿಡಿದು ಕೇಳು ಕೂರಿಗಿ ಸಾಗ ಮಾಡುದರಾಗ ಇದಿಮಾಯಿ ರಂಡಿ ಇದಿರಿಗಿ ಬಂದಳು ಬೂತ್ಯಾನ ಹಟ್ಟೆ ಬಯಲು ಮಾಡಿನಿ.
ಕರಿತಲ ಮಾನವನಿಗೆ ಎಷ್ಟು ಹೇಳಿದರೂ ಸಮಧಾನ ಆಗಲಿಲ್ಲ ಬಸವನ ಚಿಕ್ಕಾರಸರೀಗಿ ಹರಿದೀನಿ"[೧೦]

ಎಂಬ ಮುಂತಾದ ಮಾತುಗಳಲ್ಲಿ ಹೇಳಿಕೆಗಳ ಶೈಲಿಯನ್ನು ಗಮನಿಸಬಹುದು. ಹೀಗೆ ಈ ಎಲ್ಲಾ ಹೇಳಿಕೆಗಳನ್ನು ಗಮನಿಸಿದಾಗ ಬಹುಮುಖ್ಯವಾಗಿ ತಿಳಿದುಬರುವುದೇನೆಂದರೆ, ನಮ್ಮ ಪೂರ್ವಿಕರ ಕಾಲದಲ್ಲಿ ಮಳೆ ನಕ್ಷತ್ರಗಳನ್ನು ನೋಡಿ ಬಿತ್ತನೆ ಕಾರ್ಯಗಳನ್ನು ಮಾಡುತ್ತಿದ್ದರು. ಯಾವ, ಯಾವ ಮಳೆಗಳಿಗೆ ಯಾವ, ಯಾವ ಬೆಳೆಗಳನ್ನು ಭಿತ್ತನೆ ಮಾಡಬೇಕು. ಅಂತಹ ಸಂದರ್ಭದ ಸ್ವಾರಸ್ಯದ ಚಿತ್ರಣವನ್ನು ಇಲ್ಲಿ ಕೊಡುತ್ತಾರೆ. ಮುಂದೆ ಸಂಭವಿಸಲಿರುವ ಮಳೆ-ಬೆಳೆ, ಸುಖ-ದುಃಖಗಳ ಬಗ್ಗೆ ಹೆಚ್ಚಾಗಿ ತಿಳಿದುಬರುತ್ತವೆ ಎಂಬುದನ್ನು ಮರೆಯುವಂತಿಲ್ಲ. ಒಡೆಯರು ಹೇಳಿಕೆ ಹೇಳುವ ಸಂದರ್ಭ ದಲ್ಲಿ, ಅಲ್ಲಿ ಸೇರಿರುವರೆಲ್ಲ ಬಹುಪಾಲು ಜನರು ಪಶುಪಾಲಕರು ಹಾಗೂ ಕೃಷಿಕರಾಗಿರುತ್ತಾರೆ. ಇವರು ಮಳೆಯನ್ನೇ ನಂಬಿ ಜೀವನ ಸಾಗಿಸುವಂತವರು. ಮಳೆ ಬಂದರೆ ಬೆಳೆ, ಬೆಳೆದರೆ ಬದುಕು, ಒಡೆಯರುಗಳು ಹೇಳುವ ಹೇಳಿಕೆಗಳನ್ನು ನಂಬುತ್ತಾರೆ. ಏಕೆಂದರೆ "ಹೇಳಿಕೆ ಹೇಳುವುದು ಶಿವನಿಂದ

ಬಂದ ವರಪ್ರಸಾದ ಎನ್ನುವುದು ಇವರ ನಂಬಿಕೆ. ಆದ್ದರಿಂದ ಪ್ರಕೃತಿಯೊಂದಿಗೆ ನಿಕಟ ಸಂಪರ್ಕ ಹೊಂದಿದ ಪ್ರತಿಯೊಬ್ಬ ಕೃಷಿಕನೂ ಅದರ ಏರು-ಪೇರುಗಳನ್ನು ಅರಿತು ಬದುಕುತ್ತಿರುವುದರಿಂದ ಅದನ್ನು ಹೊರತುಪಡಿಸಿಲ್ಲ.

ಹೀಗಾಗಿ ನಂಬಿಕೆಯನ್ನು ಕುರಿತು ಮಲ್ಲಿಕಾರ್ಜುನ ಲಠ್ಠೆ ಅವರು ಹೇಳುವಂತೆ, "ಮನುಷ್ಯನ ಬಾಳಿನುದ್ದಕ್ಕೂ ನೆರಳಿನಂತೆ ಹಿಂಬಾಲಿಸುತ್ತಿರುವ ಈ ನಂಬಿಕೆಗಳ ಇತಿಮಿತಿಗಳನ್ನು ಅರಿಯಬೇಕು"[೧೧] ಎಂದು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಒಡೆಯರ ಹೇಳಿಕೆಯಲ್ಲಿ ಬಂದಿರುವ ವಿಚಾರಗಳನ್ನು ಅನುಸರಿಸಿಯೇ ತಮ್ಮ ಕೃಷಿ ಚಟುವಟಿಕೆಗಳನ್ನು ರೂಢಿಸಿಕೊಂಡು ಬರುತ್ತಿದ್ದಾರೆ. ಹೇಳಿಕೆಗಳನ್ನು ಜಾತ್ರೆ-ಉತ್ಸವಗಳಲ್ಲಿ ಚಾಚು ತಪ್ಪದೇ ಹೇಳಿಕೊಂಡು ಬಂದಿರುವುದು ಉತ್ತರ ಕರ್ನಾಟಕದ ಭಾಗಕ್ಕೆ ಸಲುತ್ತದೆ. ಈ ಭಾಗದ ವಿಜಯಪುರ ಜಿಲ್ಲೆಯ ಸರೂರನ್ನು ಮೂಲ ಕೇಂದ್ರವಾಗಿಟ್ಟುಕೊಂಡು, ಇದನ್ನು ಬೇರೆ ಬೇರೆ ಜಿಲ್ಲೆ ತಾಲೂಕುಗಳಲ್ಲಿಯೂ ಈ ರೀತಿಯಾದ ಹೇಳಿಕೆಗಳನ್ನು ಹೇಳುತ್ತಾರೆ. ರೇವಣಸಿದ್ಧನ ಪರಂಪರೆಯವರಾದ ಶಾಂತಮುತ್ತಯ್ಯನ ವಂಶಸ್ಥರು ಹೆಚ್ಚಾಗಿ ಹೇಳಿಕೆ ಹೇಳುವ ರೂಢಿಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಈ ಪರಂಪರೆಯವರು ಆಂಧ್ರಪ್ರದೇಶದಲ್ಲಿಯೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದ್ದಾರೆ. ಆದರೆ ಆಂಧ್ರದಲ್ಲಿ ಕುರುಬ ಸಮುದಾಯಗಳು ಹೆಚ್ಚಾಗಿದ್ದು ಗುರುಒಡೆಯರ ಸಂಖ್ಯೆ ತುಂಬಾ ಕಡಿಮೆಯಿದೆ. ಹಾಗಾಗಿ ಈ ರೀತಿಯಾದ ಸಂಪ್ರದಾಯ ಗಳು ಸಿಗುವುದು ತುಂಬಾ ವಿರಳವಾಗಿರುವುದು ತಿಳಿದುಬರುತ್ತದೆ. ಒಟ್ಟಾರೆಯಾಗಿ ಹಾಲುಮತ ಸಮುದಾಯದ ಗುರುಒಡೆಯರ ಪರಂಪರೆ ಇರುವ ಪ್ರದೇಶದಲ್ಲಿ ತಮ್ಮ ಸಾಂಸ್ಕೃತಿಕ ಬದುಕನ್ನು ಮರೆತಿಲ್ಲ, ಎಂಬುದಕ್ಕೆ ಇಂಥಹ ಅನೇಕ ವಿಚಾರಗಳು ಸಾಕ್ಷಿಯಾಗಿವೆ.

ಪವಾಡಗಳು

ಪವಾಡಗಳು ಒಬ್ಬ ಆದರ್ಶ ಪುರುಷನ ಸುತ್ತಲೂ ಸುತ್ತುತ್ತಿರುತ್ತವೆ. ಅವು ಆ ವ್ಯಕ್ತಿಯ ಬದುಕಿನ ತತ್ವಗಳನ್ನು ಜನರಿಗೆ ತಿಳಿಸಲು ಪ್ರಯತ್ನಿಸುತ್ತವೆ. ಈ ಪವಾಡಗಳು ಜನಸಾಮಾನ್ಯರಿಗೆ ನಿಲುಕದ ಹಾಗೂ ಆಶ್ಚರ್ಯವನ್ನು ಉಂಟು ಮಾಡುವ ಘಟನೆಗಳಾಗಿರುತ್ತವೆ. ಈ ಘಟನೆಗಳು ಊಹಿಸಿಕೊಳ್ಳಲೂ ಸಾಧ್ಯವಾಗದ ರೀತಿಯಲ್ಲಿ ನಡೆದಿರುತ್ತವೆ. ಇವು ಪ್ರಕೃತಿ ನಿಯಮವನ್ನು ಮೀರಿ ಚಲಿಸುವಂತಹ ಸಾದೃಶ್ಯ ಘಟನೆಗಳಾಗಿವೆ. ಇಂತಹ ಪವಾಡ ಕಥೆಗಳನ್ನು ಜನರು ಬಹು ಹಿಂದಿನಿಂದಲೂ ನಂಬಿಕೊಂಡು ಬಂದಿದ್ದಾರೆ. ಏಕೆಂದರೆ ಇವು ಜನಸಾಮಾನ್ಯರ ಭಕ್ತಿ, ಶ್ರದ್ದೆಗಳನ್ನು ಆಕರ್ಷಿಸುವ ಸಾಧನಗಳಾಗಿವೆ.

'ಪವಾಡ' ಎಂಬ ಪದದ ಪರಿಕಲ್ಪನೆಯನ್ನು ಗಮನಿಸುವುದಾದರೇ "ಪ್ರವಾದ-ಪವಾಡ ಸಂಸ್ಕೃತದ 'ವಾದ' ಪದಕ್ಕೆ 'ಪ್ರ' ಉಪಸರ್ಗ ಸೇರಿ 'ಪ್ರವಾದ' ಆಗುತ್ತದೆ. 'ವಾದ' ಎಂದರೆ ಚರ್ಚೆ, ತರ್ಕ,

ಮಾತು, ಸಂಭಾಷಣೆ ಎಂಬ ಅರ್ಥಗಳಿವೆ. ಒಬ್ಬನ ಮಾತಿಗೆ ವಿಶೇಷ ಶಕ್ತಿ ಬಂದಾಗ ಪ್ರವಾದವಾಗುತ್ತದೆ. 'ಪ್ರವಾದ' ಹೇಳುವವನು 'ಪ್ರವಾದಿ' ಆಗುತ್ತಾನೆ. ಪ್ರವಾದಿ ಎಂದರೆ ತನ್ನದೇ ಸರಿ ಎಂದು ಹೇಳಿ ಹಾಗೆ ಮಾಡಿ ತೋರಿಸುವವ. ಅಂದರೆ ಇಲ್ಲಿ ಹೇಳುವುದು ಮತ್ತು ಹೇಳಿದ್ದನ್ನು ಮಾಡಿ ತೋರಿಸುವುದು. ಎರಡೂ ಕೆಲಸಗಳನ್ನು ಪ್ರವಾದಿ ಮಾಡಬೇಕಾಗುತ್ತದೆ. 'ಪವಾಡ' ಎಂಬ ಪದವನ್ನು ಸಾಮರ್ಥ್ಯ, ದೃಷ್ಟಿ, ಮಹಿಮೆ, ಮಹಾತ್ಮೆ ಎಂಬರ್ಥಗಳಲ್ಲೂ ಬಳಸಲಾಗಿದೆ”[೧೨] ಈ ಪವಾಡಗಳನ್ನು ಕುರಿತು ಕನ್ನಡ ತೆಲುಗುಗಳಲ್ಲಿ ಪವಾಡವೆಂದು, ತಮಿಳಿನಲ್ಲಿ 'ಪವಾಡ' ಎಂದು ಮರಾಠಿಯಲ್ಲಿ 'ಪೊವಾಡ' ಎಂದು ಕರೆಯುತ್ತಾರೆ. ಅದೇ ರೀತಿ ಇಗ್ಲಿಂಷ್ ಶಬ್ದ ಇದನ್ನು ಇಂಗ್ಲಿಷ್ ಭಾಷಾಕೋಶದಲ್ಲಿ ಹೀಗೆ ಅರ್ಥೈಸಲಾಗಿದೆ. ಈ ಪವಾಡಗಳನ್ನು ಕುರಿತು ಸಿಸಿರೋ ಎಂಬ ತತ್ವಜ್ಞಾನಿ ಹೇಳುವಂತೆ “ಸಾಮಾನ್ಯ ಜನತೆಗಂತೂ ಪವಾಡಗಳು ಬೇಕೆ ಬೇಕು ಎನ್ನುವುದು. Miracales are necessary for the poietry of Ignorant folk”[13] ಪವಾಡಗಳು ಪೂರ್ವ ಕಲ್ಪಿತ ದಂತ ಕತೆಗಳಲ್ಲ, ಎಲ್ಲೋ ಯಾವಾಗಲೋ ಘಟಿಸಿದ ಒಂದು ಘಟನೆ ವ್ಯಕ್ತಿ ಸಾಧನೆಯನ್ನು ಕುರಿತು ಹೇಳುವಂತಹದ್ದು, ಹೀಗೆ 'ಪವಾಡ' ಎಂಬ ಪರಿಕಲ್ಪನೆ ಬಂದ ತಕ್ಷಣ ಮಹಾಪುರುಷರಿಗೆ ಒಂದು ಕಳೆ ಬಂದಂಥಾಗುತ್ತದೆ. ಏಕೆಂದರೆ ಮಹಾಪುರುಷನೊಬ್ಬ ಸಾಮಾನ್ಯವಾಗಿ ಜನರ ಬದುಕಿನಲ್ಲಿ ನಡೆದ ಕಾರ್ಯಗಳನ್ನು ಸರಾಗವಾಗಿ ಮಾಡಿದಾಗ ಅವರು ಆತನನ್ನು ಅಸಾಧಾರಣ ಶಕ್ತಿಯುಳ್ಳವನೆಂದೂ, ಪವಾಡ ಪುರುಷನೆಂದು ನಂಬಿಕೊಂಡಿರುತ್ತಾರೆ. ಹೀಗೆ ಇವರ ಬಗ್ಗೆ 'ನಂಬಿಕೆ' ಹೆಮ್ಮರವಾಗಿ ಬೆಳದಾಗ ಸಾಮಾನ್ಯ ಜನರ ಬಾಯಲ್ಲಿ ದಂತ ಕಥೆಗಳು, ಐತಿಹ್ಯಗಳ ರೂಪ ಪಡೆದು ಪುನಃ ಪುನಃ ಮರುಕಳಿಸುವ ಸಾಧನಗಳಾಗಿ ಹೊರಹೊಮ್ಮುತ್ತವೆ. ಹೀಗಾಗಿ ಇವು ತಲ–ತಲಾಂತರಗಳಿಂದಲೂ ಪ್ರಚಲಿತದಲ್ಲಿವೆ. ಪ್ರಮುಖವಾಗಿ ಇವು ಜಾತಿ, ಮತ, ಧರ್ಮ ಎನ್ನದೇ ಪ್ರತಿಯೊಂದು ಸಮುದಾಯದಲ್ಲಿಯೂ ಕಂಡುಬರುತ್ತದೆ. ಇದಕ್ಕೆ ಹಾಲುಮತ ಸಮುದಾಯವೂ ಹೊರತಾಗಿಲ್ಲ. ಈ ಜನಾಂಗದಲ್ಲಿ ಮಹಾಪುರುಷರಾಗಿ, ಸಾಂಸ್ಕೃತಿಕ ವೀರರಾಗಿ ಅನೇಕ ಮಹನೀಯರು ಕಂಡುಬರುತ್ತಾರೆ.

ಅವರಲ್ಲಿ ರೇವಣಸಿದ್ಧ, ಸಿದ್ಧರಾಮ, ಮರುಳಸಿದ್ಧ, ಅಮೋಘಸಿದ್ಧ, ಮೈಲಾರಲಿಂಗ, ಬೀರಪ್ಪ, ಶಾಂತಮುತ್ತಯ್ಯ ಹೀಗೆ ಅನೇಕ ಮಹಾತ್ಮರು ಸಿಗುತ್ತಾರೆ. ಇವರು ತಮ್ಮ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಅವರದೇ ಆದ ನೆಲೆಯಲ್ಲಿದ್ದು, ಅನೇಕ ಪವಾಡಗಳನ್ನು ಮೆರೆದಿರುವಂತಹದು ತಿಳಿದುಬರುತ್ತದೆ. ಇವರಲ್ಲಿ ಪ್ರಸ್ತುತ ಸರೂರ ಹಾಲುಮತ ಸಂಪ್ರದಾಯದ ಪರಂಪರೆಯಲ್ಲಿ ಕಂಡು ಬರುವ ಪವಾಡ ಪುರುಷರೆಂದರೆ, ರೇವಣಸಿದ್ಧ, ಸಿದ್ಧರಾಮ ಇವರ ಅನುಯಾಯಿಗಳಾದ ಶಾಂತಮುತ್ತಯ್ಯ, ಮಂಕಸಿದ್ಧರು ಇರುವುದು ತಿಳಿದುಬರುತ್ತದೆ. ಇವರ ನಂತರವೂ ಸಹ ಈ ಪರಂಪರೆಯ ಅನುಯಾಯಿಗಳು ಪವಾಡಗಳನ್ನು ಮಾಡಿ ಜನಸಾಮಾನ್ಯರ ಬದುಕಿನ ಉದ್ದಕ್ಕೂ

ಅಚ್ಚಳಿಯದ ರೀತಿಯಲ್ಲಿ ಉಳಿದಿದ್ದಾರೆ. ಹೀಗಾಗಿ ಪ್ರಸ್ತುತ ಕ್ಷೇತ್ರಕಾರ್ಯ ಸಂದರ್ಭದಲ್ಲಿ ದೊರೆತ ಕೆಲವು ಪವಾಡಗಳೆಂದರೆ,

* ಟಗರು ಪವಾಡ
* ಮರಳು ಬಿತ್ತಿ ಗೋಧಿ ಬೆಳೆದ ಪವಾಡ
* ಗೂಳಿ ಮತ್ತು ಟಗರು ಪವಾಡ
* ಹೊಳೆದಾಟಿದ ಪವಾಡ
* ನಾಲ್ವತವಾಡದಲ್ಲಿ ಮಳೆ ಸುರಿಸಿದ ಪವಾಡ
* ಗೂಳಿಯನ್ನು ಬದುಕಿಸಿದ ಪವಾಡ

ಟಗರು ಪವಾಡ

ಒಂದು ದಿನ ಕಟುಕನೊಬ್ಬನು ಟಗರನ್ನು ಕಡಿಯಲು 'ಅದನ್ನು ಗಟ್ಟಿಯಾಗಿ ಹಿಡಿದುಕೊಂಡು ಸಿದ್ಧನಾಗಿರುತ್ತಾನೆ. ಟಗರು ಪ್ರಾಣದಾಸೆಗಾಗಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತದೆ. ಆಗ ಬಿಜ್ಜಳ ಮತ್ತು ಬಸವಣ್ಣನವರು ಅದನ್ನು ನೋಡುತ್ತಾರೆ. ನೋಡಿ ತಡೆಯಲಾರದೆ ಕಟುಕನ ಹತ್ತಿರ ಹೋಗಿ ಈ ಟಗರನ್ನು ಏನು ಮಾಡುವಿ ಎಂದು ಕೇಳಿದರು. ಅದಕ್ಕೆ ಕಟುಕನು ಇದನ್ನು ಕಡಿದು ಇದರ ಮಾಂಸವನ್ನು ಮಾರಿ ಜೀವನ ನಡೆಸುತ್ತೇನೆ ಪ್ರಭುಗಳೇ ಎಂದು ಉತ್ತರಿಸುತ್ತಾನೆ. ಹೌದೇನು! ಹಾಗಾದರೆ ಈ ಟಗರನ್ನು ಬಿಟ್ಟು ಬಿಡು ಎಂದು ಕೇಳಿದರು. ಹಾಗಾದರೆ ನೀವು ಹೇಳಿದಂತೆ ಬಿಡುತ್ತೇನೆ. ಈ ಟಗರಿನ ಬೆಲೆ ೨೦ ವರಹಗಳಾಗುತ್ತದೆ. ಅವುಗಳನ್ನು ಕೊಟ್ಟರೆ ಖಂಡಿತ ಬಿಡುತ್ತೇನೆ ಎಂದು ಕಟುಕನು ಹೇಳುತ್ತಾನೆ. ಅದಕ್ಕೆ ಬಸವಣ್ಣ ಮತ್ತು ಬಿಜ್ಜಳರು ೨೫ ವರಹಗಳನ್ನು ಕೊಟ್ಟು ಕಲ್ಯಾಣ ಪಟ್ಟಣಕ್ಕೆ ಟಗರನ್ನು ತರುತ್ತಾರೆ. ಅದು ಅಲ್ಲಿ ತುಂಬಾ ಸುಖವಾಗಿ ಮೇಯ್ದು ಮೆರೆಯುತ್ತಿತ್ತು. ಹೀಗೆ ದಿನಗಳು ಕಳೆದಂತೆಲ್ಲ, ಈ ಟಗರು ಜನರಿಗೆ ಹಾಯಲಿಕ್ಕೆ ಹತ್ತಿತು. ಅದನ್ನು ಬಸವಣ್ಣ ಬಿಜ್ಜಳರು ಕಣ್ಣಾರೆ ಕಂಡು ಆ ಟಗರಿನ ಬಗ್ಗೆ ಆಲೋಚನೆ ಮಾಡಿದರು. ಇದನ್ನು ಇಲ್ಲೇ ಬಿಟ್ಟರೆ ಸರಿ ಕಾಣುವುದಿಲ್ಲವೆಂದು ತಿಳಿದು, ಈ ಟಗರನ್ನು ಸಾಕಲು ಹಾಲುಮತಕ್ಕೆ ಕುಲಗುರುಗಳಾದ ಶಾಂತಮುತ್ತಯ್ಯನವರು ಒಳ್ಳೆಯವರೆಂದು ನಿರ್ಧರಿಸಿದರು. ಆಗ ಸರೂರು ಗ್ರಾಮದಲ್ಲಿದ್ದ ಶಾಂತ ಮುತ್ತಯ್ಯನನ್ನು ಕಲ್ಯಾಣಕ್ಕೆ ಕರಸಿಕೊಂಡು ಈ ಟಗರನ್ನು ನೀವೇ ಸಾಕಬೇಕು ಎಂದು ಹೇಳಿ ಅವರೊಡನೆ ಕಳಿಸಿದರು. ಆಗ ಹಿರಿಯರ ಮಾತಿಗೆ ಒಪ್ಪಿಕೊಂಡು ಆ ಟಗರನ್ನು ತಂದು ತಮ್ಮ ಕುರಿಗಳ ಹಿಂಡಿನಲ್ಲಿ ಬಿಟ್ಟುಕೊಂಡರು. ಹೀಗೆ ಆ ಟಗರು ಏಷ್ಟೋ ದಿನಗಳವರೆಗೆ ಅವರಲ್ಲಿ ಆನಂದದಿಂದ ಕಾಲಕಳೆಯುತ್ತಿತು. ಹೀಗೆ ದಿನಗಳು ಉರುಳಿ ಹೋದಂತೆಲ್ಲ ಟಗರು ಮುಪ್ಪಾವಸ್ಥೆಗೆ ಬಂದು ಶಾಂತಮುತ್ತಯ್ಯನವರಲ್ಲಿಯೇ ಮೃತಪಟ್ಟಿತು. ಆಗ ಮಹಾ ಶಿವಭಕ್ತನಾದ ಶಾಂತ

ಮುತ್ತಯ್ಯನವರು ಸತ್ತಂತ ಟಗರನ್ನು ನಮ್ಮಲ್ಲಿಯೇ ಮಣ್ಣು ಮಾಡುವುದು ಬೇಡ ಎಂದು ಹೇಳುತ್ತಾರೆ. ಏಕೆಂದರೆ ಅದನ್ನು ಯಾರು ಕೊಟ್ಟಿರುತ್ತಾರೋ ಅವರಿಗೆ ಒಪ್ಪಿಸಬೇಕಾದದ್ದು ನಮ್ಮ ಧರ್ಮ ಎಂದು ತಿಳಿದು ಊರಿನ ಎಲ್ಲಾ ಜನರನ್ನು ಕೂಡಿಸಿಕೊಂಡು ಡೊಳ್ಳು ವಾಲಗಗಳೊಂದಿಗೆ ಮೆರೆಸುತ್ತ ಬಸವಣ್ಣ ಮತ್ತು ಬಿಜ್ಜಳರಿರುವ ಆಸ್ಥಾನಕ್ಕೆ ಬಂದರು. ಆಗ ಶಾಂತಮುತ್ತಯ್ಯನವರು ವಿನಂತಿ ಪೂರಕವಾಗಿ, ಮಹಾರಾಜರೇ ನಿಮ್ಮ ಟಗರು ಮೃತಪಟ್ಟಿದೆ ಅದಕ್ಕಾಗಿ ನಿಮ್ಮ ಟಗರನ್ನು ನೀವು ತೆಗೆದುಕೋಳ್ಳಿರಿ ಎಂದು ಹೇಳಿದರು, ಆವಾಗ ಆಸ್ಥಾನದಲ್ಲಿರುವ ರಾಜರು ಮತ್ತು ಇತರ ಇರತಕ್ಕಂತ ಮಂತ್ರಿಗಳು ಎಲ್ಲರೂ ಸೇರಿ ನಾವು ನಿನಗೆ ಕೊಟ್ಟಿದ್ದು ಜೀವಂತ ಟಗರು ಅದಕ್ಕಾಗಿ ನೀವು ಕೊಡುವುದಾದರೆ ನಮಗೆ ಪ್ರಾಣವಿರುವ ಟಗರನ್ನೇ ಕೊಡಬೇಕೆಂದರು. ಆ ಪದವನ್ನು ಕೇಳಿ ಶಾಂತಮುತ್ತಯ್ಯನಿಗೆ ದಂಗು ಬಡೆದಂತಾಯಿತು. ಈ ಹಾಲುಮತ ವಂಶಸ್ಥರಿಗೆ ಕಳಂಕ ಬಂದಂತೆ ಕಾಣುತ್ತದೆ ಎಂದು ಶಿವಭಕ್ತರಾದ ಶಾಂತಮುತ್ತಯ್ಯನವರು ಶಿವನ ಧ್ಯಾನ ಮಾಡುತ್ತಾ, ನಾನು ನಿಜವಾದ ಶಿವಭಕ್ತನಾಗಿದ್ದರೆ, ಜಗದ್ಗುರು ರೇವಣಸಿದ್ಧರು ನನ್ನನ್ನು ಕುರುಬರ ಕುಲಗುರುವನ್ನಾಗಿ ಮಾಡಿದ್ದು ನಿಜವಾಗಿದ್ದರೆ ಈ ಟಗರನ್ನು ಬದುಕಿಸಬೇಕೆಂದು ಬೇಡಿಕೊಳ್ಳುತ್ತಾನೆ. ಹಾಗೆಯೇ ಮುಂದುವರೆದು ಮೂರುಲೋಕದ ಮುಕ್ಕಣ್ಣ ಶಿವರಾಯನೇ ಬದುಕಿಸಬೇಕೆಂದು ರೇವಣಸಿದ್ಧರು ತನಗೆ ಹೊಂದಿಸಿದ್ದ ಜಾಡಿಯನ್ನು ಅದರ ಮೇಲೆ ಹೊದಿಸಿ, ಏಳು ಎದ್ದೇಳು ಎಂದು ಟಗರಿನ ಮೇಲೆ ಹಸ್ತವನ್ನು ಇಟ್ಟರು. ಆಗ ಸತ್ತಿದ್ದ ಟಗರು ಥಟ್ಟನೇ ಎದ್ದು ನಿಂತು ಮೈಕೊಡವಿತು. ಆಗ ಅದನ್ನು ಕಂಡ ಶಾಂತಮುತ್ತಯ್ಯನ ವಂಶಸ್ಥರೆಲ್ಲ ಜೈಕಾರ ಹಾಕಿದರು. ಕಲ್ಯಾಣ ಪಟ್ಟಣದಲ್ಲಿರುವ ಶಿವಶರಣರೆಲ್ಲ ಮೆಚ್ಚಿಕೊಂಡು ಹಾಲುಮತ ಸಮುದಾಯಕ್ಕೆ ನೀನೇ ಕುಲಗುರು ಎಂದು ಹಾರೈಸಿದರು. ಅನಂತರ ಬಿಜ್ಜಳರಾಜರು ಶಾಂತಮುತ್ತಯ್ಯನವರನ್ನು ತಮ್ಮ ಸಿಂಹಾಸನದ ಮೇಲೆ ಕೂಡಿಸಿ ಕಲ್ಯಾಣದ ಬೀದಿ ಬೀದಿಗಳಲ್ಲಿ ಮೆರವಣಿಗೆ ಮಾಡಿ ಸರೂರಿಗೆ ಬಂದು ಬಿಟ್ಟು ಹೋಗುತ್ತಾರೆ. ಹೀಗೆ ತನ್ನ ಊರಿನಲ್ಲಿಯೂ ಶಾಂತಮುತ್ತಯ್ಯನಿಗೆ ಮೆರವಣಿಗೆ ಮಾಡುತ್ತಾರೆ. ಹೀಗೆ ಪವಾಡ ಮಾಡಿ ತನ್ನ ಕುಲಧರ್ಮವನ್ನು ಉಳಿಸಿಕೊಂಡನು.

ಮರಳು ಬಿತ್ತಿ ಗೋಧಿ ಬೆಳದ ಪವಾಡ

ಕುರುಬರ ಕುಲಗುರುಗಳಾದ ಶಾಂತಮುತ್ತಯ್ಯನವರು ಭಿಕ್ಷಾಟನೆಗೆಂದು ಶಿಷ್ಯರ ಊರುಗಳಿಗೆ ಹೋಗಿಬರುವ ಪರಂಪರೆ ಹಿಂದಿನಿಂದಲೂ ರೂಢಿಯಲ್ಲಿದೆ. ಹೀಗೆ ಒಮ್ಮೆ ಹೋದಂತಹ ಸಂದರ್ಭದಲ್ಲಿ ಭಕ್ತಾದಿಗಳು ಕೊಟ್ಟಂತಹ ದವಸದಾನ್ಯಗಳನ್ನು ತೆಗೆದುಕೊಂಡು ಬರುತ್ತಿರುತ್ತಾರೆ. ಹೀಗೆ ಬರುತ್ತಿರುವ ಸಮಯದಲ್ಲಿ ಕಾಡಮಗೇರಿ ಎಂಬ ಊರಿಗೆ ಬರುತ್ತಾರೆ. ಇದು ಕಲಬುರ್ಗಿ ಜಿಲ್ಲೆಯ ಶಹಾಪೂರ ತಾಲೂಕಿನಲ್ಲಿ ಬರುತ್ತದೆ. ಆ ಊರನ್ನು ಹಾದು(ದಾಟಿ) ಬರುವಂತಹ ಸಮಯದಲ್ಲಿ

ತಮ್ಮಣ್ಣಗೌಡ ಎಂಬುವವನು ಊರಿನ ಪೂರ್ವ ಭಾಗದಲ್ಲಿರುವ ಕೆರೆಯ ದಂಡೆಯ ಮೇಲಿರುವ ಹೊಲದಲ್ಲಿ ಗೋಧಿಯನ್ನು ಬಿತ್ತುತ್ತಿರುತ್ತಾನೆ. ಆ ಕಡೆಯಿಂದ ಬಂದ ಶಾಂತಮುತ್ತಯ್ಯ ಅವರನ್ನು ನೋಡಿ ಬಿತ್ತುವ ಗೋಧಿಯನ್ನು ದಾನ ಕೇಳುತ್ತಾರೆ. ಅದಕ್ಕೆ ತಮ್ಮಣ್ಣಗೌಡನು ನೀನು ಯಾರು, ಎಲ್ಲಿಂದ ಬಂದಿರುವೆ ಎಂದು ಕೇಳುತ್ತಾನೆ. ಆಗ ಶಾಂತಮುತ್ತಯ್ಯ, ನಾವು ಸರೂರಿನ ಹಾಲುಮತದ ಗುರುಗಳು ಎಂದು ಉತ್ತರಿಸುತ್ತಾರೆ. ಸರಿ, ಹಾಲುಮತದ ಗುರುಗಳೆಂಬುದಕ್ಕೆ ಸಾಕ್ಷಿಯೇನಿದೆ ಅಥವಾ ಕುರುಹು ಏನಾದರೂ ಇದ್ದರೆ ತೋರಿಸು ಆಗ ನಿನಗೆ ಭಿಕ್ಷೆಯನ್ನು ಕೊಡುತ್ತೇನೆ ಎಂದು ತಮ್ಮಣ್ಣಗೌಡ ಹೇಳುತ್ತಾನೆ. ಅದಕ್ಕೆ ಶಾಂತಮುತ್ತಯ್ಯನವರು ಕೋಪಿಸಿಕೊಳ್ಳದೇ ಶಾಂತ ರೀತಿಯಿಂದ ಅಲ್ಲಿಯೇ ಬಿತ್ತುತ್ತಿರುವ ಉಡಿ ಚೀಲದಲ್ಲಿಯ ಗೋಧಿಯನ್ನು ಚೀಲಕ್ಕೆ ಸುರುವಿ ತನ್ನ ಜೋಳಿಗೆಯಲ್ಲಿ ಮರುಳನ್ನು ತುಂಬಿಕೊಂಡು ಹೊಲವನ್ನು ಬಿತ್ತುತ್ತಾರೆ. ಇವರು ಬಿತ್ತಿದಂತಹ ಗೋಧಿ ತುಂಬಾ ಫಲವತ್ತತೆಯಿಂದ ಬೆಳೆದಿರುತ್ತದೆ. ಹೀಗೆ ಮರುಳನ್ನು ಬಿತ್ತಿ ಗೋಧಿಯನ್ನು ಬೆಳೆದು ಪವಾಡ ಮಾಡಿದ್ದಾರೆ ಎಂಬ ವಿಚಾರಗಳು ತಿಳಿದುಬರುತ್ತವೆ.

ಗೂಳಿ ಮತ್ತು ಟಗರು ಪವಾಡ

ಇಂತಹ ಪವಾಡವನ್ನು ನಾವು ಇಲ್ಲಿಯವರೆಗೆ ಎಲ್ಲಿಯೂ ನೋಡಿಲ್ಲ ಮತ್ತು ಕೇಳಿಲ್ಲ. ಒಮ್ಮೆ ಮರುಳಸಿದ್ಧರು, ಪದ್ಮಗೊಂಡ ಮತ್ತು ಮಕ್ಕಳು ಇವರ ಜೊತೆಗೆ ಕಲ್ಯಾಣ ಪಟ್ಟಣದ ಅಗಸೆಯ ಬಾಗಿಲಿಗೆ ಬಂದು ನಿಲ್ಲುತ್ತಾರೆ. ಆಗ ಅಗಸೆಯ ಬಾಗಿಲು ಕಾಯುವ ಕಾವಲುಗಾರರು ಪದ್ಮಗೊಂಡ ಮತ್ತು ಅವರ ಜೊತೆಗೆ ಬಂದ ಕುರಿಗಾರರನ್ನು ತಡೆದು ನಿಮ್ಮನ್ನು ಹಿಂದೆ ಕಲ್ಯಾಣ ಪಟ್ಟಣದಿಂದ ಹೊರಗೆ ಹಾಕಿದ್ದೇವು ಈಗ ಮತ್ತೇಕೆ ಬಂದೀರಿ ಎಂದು ತಡೆದು ನಿಲ್ಲಿಸುತ್ತಾರೆ. ಆದರೆ ಎಲ್ಲ ಕುರಿಗಾರರು, ಪದ್ಮಗೊಂಡ ಮತ್ತು ಮರುಳಸಿದ್ಧರು ಎಲ್ಲರೂ ಸಂಜೆಯವರೆಗೆ ಅಲ್ಲೆ ನಿಂತಿರುತ್ತಾರೆ. ಆ ಸಮಯದಲ್ಲಿ ಒಂದು ಗೂಳಿ ಕಲ್ಯಾಣದಲ್ಲಿ ಸತ್ತಿರುತ್ತದೆ. ಅದನ್ನು ಮೆರವಣಿಗೆ ಮಾಡಿಕೊಂಡು ಎಲ್ಲಾ ಶಿವಶರಣರು ಹೂಳುವುದಕ್ಕಾಗಿ ವಾಲಗ ಊದುತ್ತ ಅಗಸೆಯ ಬಾಗಿಲಿಗೆ ಬಂದರು. ಆಗ ಮರುಳಸಿದ್ಧರು ಮುಂದೆ ಬಂದು ನಿಂತು ಶಿವಶರಣರೇ ಕೇಳಿರಿ, ನೀವು ಹೊತ್ತು ತಂದ ಬಸವನನ್ನು ನಾವು ಬದುಕಿಸುವುವೆವು. ನಮ್ಮ ಟಗರಿನ ಪ್ರಾಣವನ್ನು ನೀವು ಬದುಕಿಸಬೇಕು. ಈ ಪವಾಡವನ್ನು ನೀವು ಗೆದ್ದರೆ ನಾವು ತಿರುಗಿ ಹೋಗುವೆವು. ಒಂದು ವೇಳೆ ನಾವು ಗೆದ್ದರೆ ಕಲ್ಯಾಣಪಟ್ಟಣದಲ್ಲಿ ನಾವು ವಾಸಿಸುವೆವು ಎಂದು ತಮ್ಮ ಕುರುಬರ ಕಡೆಯಿಂದ ಒಂದು ಟಗರನ್ನು ತಂದು ಅದನ್ನು ಕೊಂದು ಮುಂದೆ ಇರಿಸಿದರು. ಆಗ ಇಡೀ ಪಟ್ಟಣದ ಶಿವಶರಣರು ಹಾಗೂ ಜನಸಾಮಾನ್ಯರೆಲ್ಲ ಸೇರಿ ಅಗಸೆಯ ಬಾಗಿಲಿಗೆ ಬಂದು ನಿಂತರು. ನೆರೆದಂತಹ ಎಲ್ಲ ಪ್ರಮಥರು ಆಶ್ಚರ್ಯಪಟ್ಟರು. ಇಂತಹ ಪವಾಡವನ್ನು ನಾವು ಇಲ್ಲಿಯವರೆಗೆ ಎಲ್ಲಿಯೂ ನೋಡಿಲ್ಲ ಮತ್ತು ಕೇಳಿಲ್ಲ ಎಂದು

ಅವರವರಲ್ಲೇ ಗುಸು-ಗುಸು ಸುದ್ದಿ ನಡೆಯುತ್ತದೆ. ಈ ಸಂಗತಿಯನ್ನು ಬಸವಣ್ಣನವರಿಗೂ ತಿಳಿಸುತ್ತಾರೆ. ಆಗ ಬಸವಣ್ಣನವರು ಮಹೇಶ್ವರರೆ ಈ ಭೂಮಿಯಲ್ಲಿ ಆಶ್ಚರ್ಯವನ್ನು ಉಂಟುಮಾಡಿ ಹಾಲು ಮತವನ್ನು ಉನ್ನತ ಶಿಖರಕ್ಕೆ ಏರಿಸುವುದಕ್ಕಾಗಿ ಮರುಳಸಿದ್ಧನೆಂಬ ಶಿವಶರಣನು ಸದಾಶಿವನಿಂದ ವರವನ್ನು ಪಡೆದು ನಮ್ಮಲ್ಲಿಗೆ ಬಂದಿರುವನು. ಆದ್ದರಿಂದ ಆತನನ್ನು ತಡೆಯಲು ನನ್ನಿಂದ ಸಾಧ್ಯವಿಲ್ಲ. ನೀವೇ ಏನಾದರು ಮಾಡಿರಿ ಎಂದು ಹೇಳಿದರು. ಆಗ ಎಲ್ಲ ಪ್ರಥಮರು ಶರಣರ ಮಹಿಮೆ ಶರಣರೇ ಬಲ್ಲರು ಎಂದರು. ಹೀಗೆ ಮಾತನಾಡುತ್ತ ಶರಣರಲ್ಲಿ ಒಬ್ಬನು ಮುಂದೆ ಬಂದು ಮರುಳಸಿದ್ಧನಿಗೆ ಈ ಸತ್ತ ಗೂಳಿಯನ್ನೇ ಎಬ್ಬಿಸು ಎಂದನು. ಆಗ ಮರುಳಸಿದ್ಧರು ಪರಮೇಶ್ವರನ ಧ್ಯಾನಮಾಡಿ, ನಂದೀಶ್ವರ ಏಳು ಎಷ್ಟು ಹೊತ್ತು ಮಲಗುವೆ ಎನ್ನಲು, ಸತ್ತು ಬಿದ್ದ ಗೂಳಿಯು ಥಟ್ಟನೆ ಎದ್ದು ನಿಂತಿತು. ಆಗ ಶಿವಶರಣರೆಲ್ಲರೂ ಅದನ್ನು ನೋಡಿ ಗಾಬರಿಗೊಂಡರು. ಸರಿ ಆಗಲಿ ಇನ್ನೊಮ್ಮೆ ಇವನನ್ನು ಪರೀಕ್ಷಿಸುವ ಸಲುವಾಗಿ ಈ ಕುರಿಯು ಬೇಡ. ನಾವು ಬೇರೊಂದು ಟಗರನ್ನು ತರುವೆವು ಎಂದು ಒಂದು ಟಗರನ್ನು ತರಿಸಿ ನುಚ್ಚುನೂರಾಗಿ ಕಡಿಸಿ ಅವನ ಮುಂದೆ ತಂದು ಇಟ್ಟರು. ಇದನ್ನು ಬದುಕಿಸಿದರೆ ನೀನು ಈ ಪವಾಡವನ್ನು ಗೆದ್ದಂತಾಗುವುದು ಎಂದರು. ಆಗ ಮರುಳಸಿದ್ಧರು ಶಿವನಾಮ ಸ್ಮರಣೆ ಮಾಡುತ್ತ ಹಿಂದಕ್ಕೆ ಸದಾಶಿವನಿಂದ ತನಗೆ ದೊರೆತ ಕಿರಿಜಾಡಿಯನ್ನು ಆ ಸತ್ತ ಟಗರಿನ ಮೇಲೆ ಹೊದಿಸಿ ಇದನ್ನು ಎಬ್ಬಿಸು ಎಂದು ಹೇಳಲು ಜಗಮುತ್ತಯ್ಯನು ಕುರುಬರ ದಡ್ಡಿ ಪರ್ವತವಾಗಲಿ, ಶೆಟ್ಟಿಸಾಹುಕಾರನು ನಮ್ಮ ಮನೆಗೆ ಹಾಲು, ಮೊಸರು, ಬೆಣ್ಣೆ, ಮಜ್ಜಿಗೆಗೆ ಬರುತ್ತಿರಲಿ. ನಮ್ಮ ಹಾಲುಮತಕ್ಕೆ ಮರುಳಸಿದ್ಧನೇ ಗುರುವಾಗಲೀ, ಈ ಮಾತು ಸತ್ಯವಾಗಿದ್ದರೆ ಸತ್ತ ಟಗರು ಮೇಲಕ್ಕೇಳಲಿ, ಇಲ್ಲವಾದರೆ ನಾವು ಬಂದ ದಾರಿಯಿಂದ ತಿರುಗಿ ಹೋಗುವೆವು ಎಂದು ಹೇಳಿ ಟಗರನ್ನು ಏಳು ನಿನ್ನ ಪಾಲಕನು ಎಬ್ಬಿಸುವೆನು ಹೇಳು ಎಂದು ಕೂಗಲು, ಆ ಸತ್ತ ಟಗರು ಮೈ ಜಾಡಿಸುತ್ತ ಎದ್ದು ಮರುಳಸಿದ್ಧನ ಹತ್ತಿರ ಹೋಗಿ ನಿಂತಿತು. ಇದನ್ನೆಲ್ಲ ನೋಡಿ ಬೆರಗಾಗಿ ಒಂದು ಕ್ಷಣ ಮೌನವಾಗಿ ಮರುಳಸಿದ್ಧನ ಹತ್ತಿರ ಬಂದು ಶಿವಶರಣರೆಲ್ಲ ಕ್ಷಮೆ ಕೇಳಿದರು. ತಪ್ಪಾಯಿತೆಂದು ಹೇಳಿದರು. ಆಗ ಮರುಳಸಿದ್ಧನನ್ನು ಮತ್ತು ಕುರುಬರನ್ನು ನೀವು ಇನ್ನೂ ಮುಂದೆ ಕಲ್ಯಾಣ ಪಟ್ಟಣದೊಳಗೆ ಬರಬಹುದು. ಹಾಲು, ಮೊಸರು ಎಂದಿನಂತೆ ಮಾರಬಹುದು ಎಂದು ತಿಳಿಸಿದರು. ಹೀಗೆ ಮರುಳಸಿದ್ಧನು ಕುರುಬರ ಒಳತಿಗಾಗಿ ಈ ರೀತಿಯಾದ ಪವಾಡವನ್ನು ಮಾಡಿ ಅವರಿಗೆ ಕಲ್ಯಾಣದಲ್ಲಿ ಮತ್ತೆ ಹಿಂದಿನಂತೆ ನಡೆದುಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟರು.

ಈ ಪವಾಡಗಳು ಸರೂರ ಸಂಪ್ರದಾಯದ ಹಾಲುಮತಸ್ಥರು ಶಾಂತಮುತ್ತಯ್ಯ ಮತ್ತು ಮರುಳಸಿದ್ಧರಿಂದ ಆರಂಭಗೊಂಡ ಪವಾಡಗಳು ಮುಂದೆ ಇವರ ಪರಂಪರೆಯಿಂದ ಗುರುಒಡೆಯರು ಜಗದ್ಗುರುವಾದ ರೇವಣಸಿದ್ಧನ ನಾಮವನ್ನು ಹೇಳಿಕೊಂಡು ಒಂದಲ್ಲ ಒಂದು ರೀತಿಯಲ್ಲಿ ಪವಾಡಗಳನ್ನು ಮಾಡಿಕೊಂಡು ಬರುತ್ತಿದ್ದಾರೆ.

ಹೊಳೆದಾಟಿದ ಪವಾಡ

ಒಮ್ಮೆ ಸರೂರಲ್ಲಿ ರೇವಣಸಿದ್ಧನ ಜಾತ್ರೆ ನಡೆದಿರುತ್ತದೆ. ಈ ಜಾತ್ರೆಯಲ್ಲಿ ಶಾಂತಮುತ್ತಯ್ಯನ ಪರಂಪರೆಯದವರೇ ಹೇಳಿಕೆ ಹೇಳಿಕೊಂಡು ಬರುವಂತೆ ರೂಢಿಯಿದೆ. ಹೀಗಾಗಿ ಒಂದು ಬಾರಿ ಶಿವರಾತ್ರಿಯಂದು ನಡೆದ ಜಾತ್ರೆಯಲ್ಲಿ ನಾಡ ಸುತ್ತಿನ ಭಕ್ತಾದಿಗಳೆಲ್ಲ ಹೇಳಿಕೆಯನ್ನು ಕೇಳಲು ಶಾಂತಮುತ್ತಯ್ಯನ ಗಿರಿಯಲ್ಲಿ ನೆರೆದಿರುತ್ತಾರೆ. ಈ ಸಂದರ್ಭದಲ್ಲಿ ಹೇಳಿಕೆ ಹೇಳುವಂತಹ ಮಂಕಯ್ಯ ಮುತ್ತಯ್ಯನವರು ಕುರಿಗಳೊಂದಿಗೆ ಊರುಬಿಟ್ಟು ಬೇರೆ ಕಡೆ ಹೋಗಿರುತ್ತಾರೆ. ಈ ಮುತ್ತೆ ಅಲ್ಲಿ ಮಲಗಿರುವ ಸಮಯದಲ್ಲಿ ದೇವರು(ರೇವಣಸಿದ್ಧರು) ಸ್ವಪ್ನಕ್ಕೆ ಬಂದು ಹೇಳುತ್ತಾರಂತೆ, ಊರಲ್ಲಿ ರೇವಣಸಿದ್ಧನ ಜಾತ್ರೆ ನಡೆದಿದೆ. ನಿನ್ನ ನಾಣ್ಣುಡಿಯ ಹೇಳಿಕೆಯನ್ನು ಕೇಳಲು ಎಲ್ಲಾ ಭಕ್ತಾದಿಗಳು ಕಾಯುತ್ತಿದ್ದಾರೆ. ನೀನು ಈಗಿಂದೀಗಲೇ ಹೋರಡಬೇಕು ಎಂಬುದಾಗಿ ಸ್ವಪ್ನವಾಗುತ್ತದಂತೆ. ಆಗ ತಕ್ಷಣ ಎದ್ದು ತನ್ನ ಜೊತೆಯಲ್ಲಿ ನಾಲ್ಕು ಮಂದಿ ಶಿಷ್ಯಂದಿರನ್ನು ಕರಕೊಂಡು ಬೇಗಬೇಗ ಬರುತ್ತಾರಂತೆ. ಹೀಗೆ ಬರುವಾಗ ಹಾವರಗಿ ಹಳ್ಳಿಯನ್ನು ಹಾದು ಬರಬೇಕಾಗಿತ್ತು. ಆದರೆ ಅಲ್ಲಿ ಕೃಷ್ಣಾನದಿ ಭೀಕರವಾಗಿ ಹರಿಯುತ್ತಿರುತ್ತದೆ.

ಅದೇ ಊರಿನ ಅಂಬಿಗರ ದೇಶಿಯ ನಾವಿಕನಿರುತ್ತಾನೆ. ಅವನತ್ತಿರ ಹೋಗಿ ನಮ್ಮನ್ನು ಹೊಳೆದಾಟಿಸು ಎಂದು ಕೇಳಿಕೊಳ್ಳುತ್ತಾನೆ. ನಾವು ಹೋಗಲೇಬೇಕು, ಏಕೆಂದರೆ ಊರಲ್ಲಿ ಜಾತ್ರೆ ನಡೆದಿದೆ. ನಾನು ಹೇಳಿಕೆ ಹೇಳಬೇಕಾಗಿದೆ ಎನ್ನುತ್ತಾನೆ. ಅದಕ್ಕೆ ಅಂಬಿಗ ಇಂತಹ ತುಂಬಿದ ನದಿದಾಟಿಸಲು ನನ್ನಿಂದ ಸಾಧ್ಯವಿಲ್ಲ. ನಿಮ್ಮ ಗುರು ಶಿಷ್ಯರಿಗೋಸ್ಕರ ನನ್ನ ಪ್ರಾಣವನ್ನು ಕಳೆದುಕೊಳ್ಳಲು ಸಾಧ್ಯವಿಲ್ಲ ಎಂದು ಹೇಳುತ್ತಾನೆ. ಹಾಗೆಯೇ ಮಾತನ್ನು ಮುಂದುವರಿಸಿ, ನಿಜವಾದ ಶಿವಭಕ್ತನಾಗಿದ್ದರೆ, ನಾಡನ್ನು ಹಾಗೂ ನಾಡಿನ ಜನತೆಯನ್ನು ಕುರಿತು ಶಿವವಾಣಿಯನ್ನು ಹೇಳುವವನೇ ನೀನಾಗಿದ್ದರೆ, ಹೊಳೆಯನ್ನು ದಾಟಿ ಹೋಗು ನೋಡೋಣ ಎಂದು ವ್ಯಂಗ್ಯವಾಗಿ ನುಡಿಯುತ್ತಾನಂತೆ. ಆಗ ಮತ್ತೆ ಸರಿ ಎಂಥೇಳಿ ಹರಿಯುವ ನದಿಯ ನೀರಿನ ಮೇಲೆ ಕಂಬಳಿ ಹಾಸಿ, ಅದರ ಮೇಲೆ ಕೂತು ಶಂಕನುಡಿಸುತ್ತ ಹೊಳೆಯನ್ನು ದಾಟುತ್ತಾರೆ. ಆತನ ಜೊತೆಯಲ್ಲಿ ಬಂದ ಶಿಷ್ಯರೂ ಕಂಬಳಿ ಹಿಡಿದು ದಡ ಸೇರುತ್ತಾರೆ. ಹೀಗೆ ಪವಾಡ ಮೆರೆದು ಬಂದು ನಾಡಿನ ಜನತೆಗೆ ಹೇಳಿಕೆ ಹೇಳಿರುವಂತಹದ್ದು ಆಗ ಅಲ್ಲಿ ಅವರನ್ನು ಪಡೆದ ಅಂಬಿಗನಿಗೆ ಎರಡು ಕಣ್ಣು ಹೋಗಿರುತ್ತವೆ. ಏಕೆಂದರೆ ಸರೂರಿನ ಗುರುಗಳಿಗೆ ಹೊಳೆದಾಟಿಸದೇ, ಕೇವಲವಾಗಿ ಮಾತನಾಡಿದ್ದಕ್ಕೆ ನನ್ನ ಕಣ್ಣು ಹೋಗಿವೆ ಎಂದು ತಿಳಿದುಕೊಂಡು ತನ್ನ ತಪ್ಪಿಗಾಗಿ ಸರೂರಿನ ಗುರುಗಳ ಹತ್ತಿರ ಹೋಗಿ ತಪ್ಪನ್ನು ಒಪ್ಪಿಕೊಳ್ಳುತ್ತಾರೆ. ಗುರುಗಳ ಅನುಕರಣೆಯಿಂದ ಅಂಬಿಗನಿಗೆ ಕಣ್ಣು ಬರುತ್ತವಂತೆ. ಹೀಗಾಗಿ ಅಂಬಿಗನು ಗುರು ಕಾಣಿಕೆಯಾಗಿ ಒಂದು ಕಳಸವನ್ನು ಕೊಟ್ಟಿರುತ್ತಾರೆ. ಅದು ಈಗಲೂ ಸರೂರಿನ ಮಠದಲ್ಲಿದೆ. ಅದನ್ನು ಅಂಬಿಗನ ಕಳಸವೆಂತಲೇ' ಕರೆಯುತ್ತಾರೆ.

ನಾಲ್ವತವಾಡದಲ್ಲಿ ಮಳೆ ಸುರಿಸಿದ ಪವಾಡ

ಶ್ರಾವಣ ಮಾಸದಲ್ಲಿ ಸರೂರಿನ ರೇವಣಸಿದ್ಧೇಶ್ವರನ ಜಾತ್ರೆ ನಡೆಯುತ್ತದೆ. ಈ ಜಾತ್ರೆಯ ಹಿಂದಿನ ದಿನ ಹೊಳೆಗೆ ಹೋಗಿ ಬರುವುದು ಹಿಂದಿನಿಂದಲೂ ರೂಢಿಯಲ್ಲಿದೆ. ಹೀಗೆ ಹೋಗುವಾಗ ಹೇಳಿಕೆ ಹೇಳುವ ಒಡೆಯರು ಅವರ ಜೊತೆಗೆ ಇತರೆ ಶಿಷ್ಯ ವೃಂದದವರು ಕೂಡಿಕೊಂಡು ಹೋಗುತ್ತಾರೆ. ಇವರು ಹೋಗುವಾಗ ಪಲ್ಲಕ್ಕಿ ಹಾಗೂ ದೇವರ ಉತ್ಸವ ಮೂರ್ತಿಗಳನ್ನು ಇಟ್ಟುಕೊಂಡು ಗಂಗಾಸ್ನಾನಕ್ಕೆ ಹೋಗುತ್ತಾರೆ. ಇವರು ವಿಶೇಷವಾಗಿ ನಾರಾಯಣಪುರಕ್ಕೆ ಹತ್ತಿರ ಇರುವ ಛಾಯಾ ಭಗವತಿಯಲ್ಲಿಗೆ ಹೋಗುತ್ತಾರೆ. ಇದು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನಲ್ಲಿ ಬರುತ್ತದೆ. ಅಲ್ಲಿಗೆಯೇ ಏಕೆ ಹೊಗಬೇಕೆಂದರೆ, ಅಲ್ಲಿ ಕೃಷ್ಣಾನದಿ ಹರಿಯುತ್ತದೆ ಹಾಗೂ ಇವರು ಹೋಗಿ ಬರಲು ಸಮೀಪವಾಗುತ್ತದೆ. ಮತ್ತೊಂದು ಸಂಗತಿಯೇನೆಂದರೆ, ಛಾಯಾಭಗವತಿ ರೇವಣಸಿದ್ಧನ ತಂಗಿ ಎಂಬ ಭಾವನೆಯಿಂದ ಹಾಗೂ ಗಂಗಾಸ್ನಾನಕ್ಕೆ ಪುಣ್ಯ ಸ್ಥಳವೆಂದು ಅಲ್ಲಿಗೆ ಹೋಗುವುದುಂಟು. ಹೀಗೆ ಹೋಗಿ ಒಂದು ದಿನ ಅಲ್ಲಿ ವಸತಿ ಇದ್ದು, ಮರುದಿನ ಬೆಳಿಗ್ಗೆ ಗಂಗಾಸ್ನಾನ ಮಾಡಿಕೊಂಡು ನೈವೇದ್ಯ ಮಾಡುತ್ತಾರೆ. ಅನಂತರ ಅಲ್ಲಿಯು ಹೇಳಿಕೆ ಹೇಳುತ್ತಾರೆ. ಈ ಎಲ್ಲ ಕಾರ್ಯಗಳನ್ನು ಮುಗಿಸಿಕೊಂಡು ಪಲ್ಲಕ್ಕಿಯೊಂದಿಗೆ ಸರೂರಿಗೆ ಮರಳಿ ಬರುತ್ತಾರೆ. ಹೀಗೆ ಬರುವಾಗ ದಾರಿ ಮಧ್ಯದಲ್ಲಿ ನಾಲ್ವತವಾಡ ಎಂಬ ಊರು ಬರುತ್ತದೆ. ಈ ಊರಿನ ಮಧ್ಯದಿಂದ ಪಲ್ಲಕ್ಕಿ ಹಾದು ಹೊಗಬೇಕಾಗಿತ್ತು. ಹೀಗಿರುವಾಗ ಸರೂರಿನ ಗುರುಗಳು ಬರುವುದನ್ನು ಕಂಡು ನಾಲ್ವತವಾಡದ ಗೌಡರು ಹಾಗೂ ಹಿರಿಯರು ಸೇರಿಕೊಂಡು ಈ ಊರಿನ ಅಗಸೆ ಬಾಗಿಲನ್ನು ಹಾಕಿ ನಮಗೆ ಮಳೆಯನ್ನು ಕೊಟ್ಟೇ ಹೋಗಬೇಕು ಇಲ್ಲವೆಂದರೆ ಬಾಗಿಲು ತೆಗೆಯುವುದಿಲ್ಲ, ಎಂದು ಗುರುಗಳಿಗೆ ಅಡ್ಡ ನಿಲ್ಲುತ್ತಾರೆ. ಆಗ ಗುರುಗಳ ಹಿಂದೆ ಇರುವ ಹಾಲವರನನ್ನು ಕೇಳುತ್ತಾನೆ. ಎಲೇ! ಹಾಲವರ ಮೇಲೆ ಮೋಡಗೀಡೈತೇನೋ! ಎಂದು ಕೇಳುತ್ತಾನೆ. ಅದಕ್ಕೆ ಹಾಲವರನು ಮುತ್ತೇ! "ಒಂದಂಗೈ ಅಗಲೈತೇ" ಎಂದು ಉತ್ತರಿಸುವನು. ಅದಕ್ಕೆ ಮಂಕಯ್ಯ ಮುತ್ತೆ ಆಗಾದ್ರೆ ಮಳೆ ನಿನಗೆ ಎಷ್ಟು ಬೇಕೊ ಅಷ್ಟು ಕೊಟ್ಟಿನಿನೋಡು ಎಂದು ಹೇಳಿ ಕೈಯಲ್ಲಿರುವ ತ್ರಿಶೂಲದಿಂದ ಬಾಗಿಲನ್ನು ಹೊಡೆಯುತ್ತಾನೆ. ಆರು ಇಂಚಿನ ದಪ್ಪದ ಅಗಸೆ ಬಾಗಿಲು ಮುರಿದು ಬೀಳುತ್ತದೆ. ಅದನ್ನು ದಾಟಿ ಬರುವಷ್ಟೊತ್ತಿಗೆ ಧಾರಾಕಾರವಾಗಿ ಮಳೆ ಸುರಿಯುತ್ತದಂತೆ. ಹೀಗೆ ಮಳೆ ಸುರಿಸಿದ ಪವಾಡವನ್ನು ಅಲ್ಲಿನ ಜನ ಸಮುದಾಯವು ಈಗಲೂ ಹೇಳುತ್ತಾರೆ.

ಗೂಳಿಯನ್ನು ಬದುಕಿಸಿದ ಪವಾಡ

ಸುಮಾರು ೩೦-೩೫ ವರ್ಷಗಳ ಕೆಳಗೆ ನಡೆದಂತಹ ಒಂದು ಪವಾಡವಾಗಿದೆ. ಇದು ಹುನುಗುಂದದಲ್ಲಿ ನಡೆದಿರುವ ಘಟನೆ ಇದಾಗಿದೆ. ಇದು ಬಾಗಲಕೋಟೆ ಜಿಲ್ಲೆಯಲ್ಲಿ ಬರುವ

ಒಂದು ತಾಲೂಕಾಗಿದೆ. ಈ ಊರಲ್ಲಿ ರೆಡ್ಡಿಯ ಗುರುಗಳು ಪ್ರಮುಖರೆಂದು ಅನಿಸಿಕೊಂಡಿರುತ್ತಾರೆ. ಹೀಗೆ ಮೆರದಾಡಿರುವ ಆ ಊರಲ್ಲಿ ರೆಡ್ಡಿಯ ಗುರುಗಳಿಗೂ ಹಾಗೂ ಸರೂರಿನ ಗುರುಗಳಿಗೂ ಒಂದು ಸಿದ್ಧಾಟ್ಟಿಕೆ ನಡೆಯುತ್ತದೆ. ಅದೇನೆಂದರೆ ಸರೂರಿನ ಗುರುಗಳಾದ ಸಿದ್ಧರಾಮಯ್ಯ ಮುತ್ತೆ ಅವರು ಭಿಕ್ಷಾಟನೆಗೆಂದು ಆಕಡೆ ಹೋಗಿರುವ ಸಂದರ್ಭದಲ್ಲಿ ಆ ಊರಲ್ಲಿ ಒಂದು ಗೂಳಿ ಸತ್ತಿರುತ್ತದೆ. ಆ ಸತ್ತಂತಹ ಗೂಳಿಯನ್ನು ಯಾರು ಬದುಕಿಸುತ್ತಾರೋ ಅವರು ಗುರುತನಕ್ಕೆ ಶ್ರೇಯಸ್ಸು ಎಂದು ಊರಿನ ಜನರ ಮುಂದೆ 'ಶಪತ' ಮಾಡುತ್ತಾರೆ. ಆಗ ರೆಡ್ಡಿಯ ಗುರುಗಳು ಗೂಳಿಯನ್ನು ಎಬ್ಬಿಸಲು ಎಷ್ಟು ಪ್ರಯತ್ನಪಟ್ಟರೂ ಗೂಳಿ ಮೇಲೇಳುವುದೇ ಇಲ್ಲ. ನಂತರದ ಸರದಿ ಸರೂರಿನ ಗುರುಗಳದ್ದು. ಆಗ ಸಿದ್ಧರಾಮಯ್ಯ ಮುತ್ತೆಯವರು ರೇವಣಸಿದ್ಧನನ್ನು ನೆನಸಿಕೊಂಡು ನೀನೇ ನನ್ನನ್ನು ಉಳಿಸಬೇಕು ರೇವಣ ಎಂದು ಕೈಮುಗಿದು ಅಲ್ಲೇ ಇರುವ ದೇವಾಲಯದ ಒಳಗಡೆ ಹೋಗಿ ಆಧಾರ(ವಿಭೂತಿ) ತಗೊಂಡು ಬಂದು ಗೂಳಿಗೆ ಹಚ್ಚಿ ನಡದುಬ್ಬ(ಬುಜ) ಚಪ್ಪರಿಸುತ್ತಾನೆ. ಆಗ ಗೂಳಿ ದಿಡೀರನೆ ಅಂಬಾ! ಎಂದು ಎದ್ದು ನಿಲ್ಲುತ್ತದೆ. ಹೀಗೆ ಗೂಳಿಯನ್ನು ಬದುಕಿಸಿ ಪವಾಡ ಮೆರೆದ ಗುರುಗಳನ್ನು ನೋಡಿ ಸಂತೋಷಗೊಂಡು ಆ ಊರಿನ ಮೇಲಿನ ಪೇಟೆ, ಕೆಳಗಿನ ಪೇಟೆಯ ಇಡೀ ಹಾಲುಮತ ಸಮುದಾಯದವರು ಸೇರಿಕೊಂಡು ಅಡ್ಡಪಲ್ಲಕ್ಕಿ ಮಾಡಿಸುತ್ತಾರೆ. ಅವರನ್ನು ಪಲ್ಲಕ್ಕಿಯ ಮೇಲೆ ಕೂರಿಸಿ ಹುನುಗುಂದದ ಬೀದಿ-ಬೀದಿಯಲ್ಲಿ ಮೆರಸಿದರು. ಎಂಬ ವಿಚಾರಗಳನ್ನು ಆ ಊರಿನ ಹಿರಿಯರು ಹೇಳುತ್ತಾರೆ. ಹೀಗೆ ಹಲವಾರು ಪವಾಡಗಳು ಈ ಸಮುದಾಯದಲ್ಲಿ ದೊರೆಯುತ್ತವೆ.

ಪವಾಡಗಳು: ವೈಚಾರಿಕ ಚರ್ಚೆ

ಸರೂರಿನ ಸಂಪ್ರದಾಯದ ಒಡೆಯರ ಈ ಗುರುಪರಂಪರೆಯು ಸಿದ್ಧರ ಪರಂಪರೆಯ ಅಡಿಯಲ್ಲಿ ಬರುವಂತಹದ್ದು. ಹೀಗಾಗಿ ಇವರ ಪವಾಡಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕರ್ನಾಟಕದಲ್ಲಿ ವಿವಿಧ ಬಗೆಯ ಸಿದ್ಧರು ತಮ್ಮದೇ ಆದ ಸಾಧನೆ ಹಾಗೂ ತಪಸ್ಸು ಮಾಡಿರುವುದು ತಿಳಿದು ಬರುತ್ತದೆ. ಉದಾಹರಣೆಗೆ ಮಲೆಮಾದೇಶ್ವರ, ಮಂಟೇಸ್ವಾಮಿ, ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ, ಕೊಟ್ಟೂರು ಗುರುಬಸವೇಶ್ವರ, ಸಿದ್ಧರಾಮೇಶ್ವರ ಹೀಗೆ ಹಲವಾರು ಸಿದ್ಧ ಪುರುಷರು ಈ ನಾಡಿನಲ್ಲಿ ಪವಾಡಗಳನ್ನು ಮೆರೆದು ಜನಸಾಮಾನ್ಯರ ಬದುಕಿನಲ್ಲಿ ಉಳಿದಿದ್ದಾರೆ. ಇಂತಹ ಸಿದ್ಧ ಪರಂಪರೆಯಲ್ಲಿ ಉನ್ನತವಾಗಿ ಬೆಳೆದು ನಿಂತವರು ರೇವಣಸಿದ್ಧರಾಗಿದ್ದಾರೆ. ಈ ರೇವಣಸಿದ್ಧರು ತಮ್ಮ ಶಿಷ್ಯರಾಗಿ ಆಶೀರ್ವದಿಸಿ ಹೋದಂತಹ ಶಾಂತಮುತ್ತಯ್ಯನು ಕೂಡ ಸಿದ್ಧ ಪರಂಪರೆಯ ಮಾರ್ಗದಲ್ಲಿ ಸಾಧನೆಗೈದಿರುವ ಸಾಧಕ ಸಿದ್ಧನಾಗಿದ್ದಾನೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಟಗರ ಪವಾಡ ಹಾಗೂ ಗೂಳಿ ಮತ್ತು ಟಗರ ಪವಾಡಗಳಲ್ಲಿ ತಿಳಿದುಬರುವ ಪ್ರಮುಖ ಅಂಶಗಳೆಂದರೆ, ಇಲ್ಲಿ ಶರಣ

ಸಂಸ್ಕೃತಿ ಹಾಗೂ ಸಿದ್ಧ ಸಂಸ್ಕೃತಿಯ ನಡುವಿನ ಸಂಘರ್ಷದ ನೆಲೆಯು ಕಂಡುಬರುತ್ತದೆ. ಏಕೆಂದರೆ ಇಲ್ಲಿ ಬಸವಣ್ಣ ಲಿಂಗಾಯತ ಧರ್ಮದ ತಳಹದಿಯ ಮೇಲೆ ರೂಪಿಸಿರುವ ಶಿವನ ಪರಿಕಲ್ಪನೆಗಿಂತ ಸಿದ್ಧಪರಂಪರೆಯಲ್ಲಿ ಕಂಡು ಕೊಂಡಿರುವ ಶಿವನ ಪರಿಕಲ್ಪನೆಯು ಹೆಚ್ಚು ಪರಿಣಾಮ ಕಾರಿಯಾಗಿರುವ ಅಂಶಗಳನ್ನು ಇಲ್ಲಿ ಗುರುತಿಸಬಹುದಾಗಿದೆ. ಹೀಗಾಗಿ ಇಲ್ಲಿ ಲಿಂಗ ದೀಕ್ಷೆಯ ತಳಹದಿಯ ಲಿಂಗಾಯತ ಧರ್ಮಕ್ಕೂ, ಸಿದ್ಧಪರಂಪರೆಯ ನೆಲೆಗಳಿಗೂ ನಡೆಯುವ ಸಂಘರ್ಷವನ್ನು ಗುರುತಿಸಬಹುದು. ಹಾಗೆಯೇ 'ಮರುಳು ಬಿತ್ತಿ ಗೋಧಿ ಬೆಳೆದಿರುವ ಸನ್ನಿವೇಶ' ಬರುತ್ತದೆ. ಈ ಸಂಗತಿಯನ್ನು ಮೇಲ್ವಿಚಾರವಾಗಿ ಚರ್ಚಿಸುವಾಗ ಮರುಳು ಬಿತ್ತಿಗೋಧಿ ಬೆಳೆದಿರಲಿಕ್ಕಿಲ್ಲ. ಆದರೆ ಸಿದ್ಧಪುರುಷರ ಸಿದ್ಧಿಯ ಶಕ್ತಿ ಎಂತಹದ್ದಾಗಿರಬಹುದು. ಏಕೆಂದರೆ ಆತ್ಮಬಲವೊಂದಿದ್ದರೆ ಏನುಬೇಕಾದರು ಸಾಧಿಸಬಲ್ಲರೂ ಎಂಬುದಾಗಿರುತ್ತದೆ. ಇದನ್ನು ಇನ್ನೊಂದು ರೀತಿಯಲ್ಲಿ ಆಲೋಚಿಸಿದಾಗ ಈ ಪವಾಡದಲ್ಲಿ ತಮ್ಮಣ್ಣಗೌಡನು ಜಮೀನ್ದಾರಿ ವ್ಯವಸ್ಥೆಯ ಪ್ರತಿನಿಧಿಯಾಗುತ್ತಾನೆ. ಇವನು ದಾನವನ್ನು ಮಾಡುವ ಪ್ರವೃತ್ತಿಯಲ್ಲಿ ತನ್ನ ಅಧಿಕಾರದ ದರ್ಪವನ್ನು ಪ್ರದರ್ಶಿಸುತ್ತಾರೆ. ಆದರೆ ಸಿದ್ಧ ಪರಂಪರೆಯ ಪ್ರತೀಕವಾಗಿರುವ ಶಾಂತಮುತ್ತಯ್ಯನು ಈ ಜಮೀನ್ದಾರಿಕೆಯ ದರ್ಪವನ್ನು ಶಾಂತ ರೀತಿಯಿಂದ ಮುರಿಯಲು ಪ್ರಯತ್ನಿಸುತ್ತಾನೆ ಎಂಬಂತೆ ಭಾಸವಾಗುತ್ತದೆ.

ಅದೇ ರೀತಿ ಹೊಳೆದಾಟಿದ ಮತ್ತು ಮಳೆ ಸುರಿಸಿದ ಪವಾಡಗಳನ್ನು ಮೆರೆದಿದ್ದಾರೆ. ಇವುಗಳಲ್ಲಿ ಸಾಮಾನ್ಯವಾಗಿ ತಿಳಿಯುವ ಸಂಗತಿಯೆಂದರೆ ಶ್ರಾವಣಮಾಸ ಮಳೆಗಾಲದಲ್ಲಿಯೇ ಪ್ರವೇಶಿಸುತ್ತದೆ. ಹೀಗಾಗಿ ಈ ವೇಳೆಯಲ್ಲಿ ಮಳೆ ಬರುವುದು ಸಹಜವಾಗಿರುತ್ತದೆ. ಆದರೆ ಇಲ್ಲಿ ಸಿದ್ಧಿಯ ಫಲವೆಂಬಂತೆ ಗುರುಒಡೆಯರು ಮಳೆಯನ್ನು ಕರುಣಿಸುತ್ತಾರೆ. ಹಾಗೆಯೇ ಅಂಬಿಗನು ಹೊಳೆದಾಟಿಸಿಲ್ಲ ಎಂಬ ಕಾರಣಕ್ಕೆ ಆತನಿಗೆ ಎರಡು ಕಣ್ಣು ಹೋಗಿ ಮತ್ತೆ ಬರುತ್ತದೆ. ಅಂದರೆ ಇಲ್ಲಿ ತನ್ನ ವಿರುದ್ಧವಾಗಿ ನಡೆದುಕೊಂಡವರಿಗೆ ಭಯ ಹುಟ್ಟಿಸುವ ನೆಲೆಯಲ್ಲಿ ಹಾಗೂ ಶಿಕ್ಷೆಯನ್ನು ನೀಡುವ ಮೂಲಕ ತನ್ನ ಅಸ್ತಿತ್ವವನ್ನು ಕಾಯ್ದುಕೊಂಡಿರಬಹುದು. ಹೀಗಾಗಿ ಇಂದಿಗೂ ಅನೇಕ ಪವಾಡಗಳನ್ನು ಸಿದ್ಧ ಪರಂಪರೆಯೂ ಸಾಧನೆಗೈಯುತ ಸಿದ್ಧ ಸಾಧನೆಯ ಮಾರ್ಗವೊಂದನ್ನು ಅನುಸರಿಸಿರುವುದಾಗಿ ಕಂಡುಬರುತ್ತದೆ. ಹಾಗೆಯೇ ಇವರು ಸಿದ್ಧಸಾಧನೆಯನ್ನು ಪ್ರದರ್ಶಿಸುವುದು ಮಾತ್ರವಲ್ಲದೇ ಇವರು ಅಪಾರವಾದ ಶಿಷ್ಯ ಬಳಗವನ್ನು ಬೆಳೆಸಿದ್ದಾರೆ. ಈ ಎಲ್ಲಾ ಅಂಶಗಳನ್ನು ಮೇಲಿನಂತೆ ಚರ್ಚೆಮಾಡಿ ಒಂದು ಕಡೆ ಇಟ್ಟುನೋಡಿದಾಗ ಆ ಪವಾಡಗಳಿಗೂ ಮತ್ತು ಅದನ್ನು ನಂಬಿ ಬದುಕುವ ಸಮುದಾಯಕ್ಕೂ ಯಾವುದೇ ರೀತಿಯಾದ ಸಂಬಂಧ ಇರುವುದಿಲ್ಲ.

ಏಕೆಂದರೆ ಪ್ರತಿಯೊಬ್ಬ ಸಾಂಸ್ಕೃತಿಕ ವೀರನು ಆಯಾ ಸಮುದಾಯಗಳನ್ನು ನಿಯಂತ್ರಿಸಿ, ಕಾಪಾಡಿ ಸಮುದಾಯದ ನಂಬಿಕೆ ಗೌರವಗಳಿಗೆ ಪಾತ್ರರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಆ ವೀರನ ಮರಣದ ನಂತರ ಐತಿಹ್ಯ, ಪುರಾಣ ಕಟ್ಟುಕಥೆಗಳ ಮೂಲಕ ಜನಮನಗಳಲ್ಲಿ ಅಚ್ಚಳಿಯದೇ

ಉಳಿದಿರುತ್ತಾರೆ. ಹೀಗಾಗಿ ಸಾಂಸ್ಕೃತಿಕ ವೀರರು ವ್ಯಕ್ತಿ–ಶಕ್ತಿಗಳ ಪ್ರತೀಕವಾಗಿ ಜನರ ಬದುಕಲ್ಲಿ ಕ್ರಿಯಾಶೀಲರಾಗಿ ಉಳಿದುಕೊಳ್ಳುತ್ತಾರೆ. ಇಲ್ಲಿ ಜನಸಾಮಾನ್ಯರ ಬದುಕಲ್ಲಿ ಇದ್ದಾನೆಂದರೆ ಆತನ ಜೊತೆಗೆ ಆತನು ಮಾಡಿದ ಪ್ರತಿಯೊಂದು ಕಾರ್ಯವೂ ಚಲನಶೀಲವಾಗಿರುತ್ತದೆ. ಅದು ಸರಿಯೋ, ತಪ್ಪೋ, ಜನರು ಅದನ್ನು ತರ್ಕಿಸುವಂತಿಲ್ಲ. ಏಕೆಂದರೆ ಆ ಸಮುದಾಯದ ಜನ ಸಾಮಾನ್ಯರಲ್ಲಿ ಬೇರ್ಪಡಿಸಲಾಗದ ಮಟ್ಟಿಗೆ ಬೆರೆತು ಹೋಗಿರುತ್ತಾರೆ. ಅಂದರೆ ಪವಾಡಗಳು ಸಮುದಾಯದ ಒಪ್ಪಿತ ಮೌಲ್ಯಗಳಾಗಿವೆ. ದೇವರು ನಂಬಿದವರನ್ನು ಕೈಬಿಡುವುದಿಲ್ಲ ಎಂಬ ನಂಬಿಕೆಯಿಂದ ಜನರ ಬದುಕಿನಲ್ಲಿ ಭಕ್ತಿಯ ಮುದ್ರೆಯನ್ನು ಒತ್ತಿವೆ. ಹಾಗಾಗಿ ಪವಾಡಗಳನ್ನು ಇವರ ಬದುಕಿನಿಂದ ಬೇರೆಯಿಟ್ಟು ನೋಡಲು ಸಾಧ್ಯವಿಲ್ಲ.

ಒಂದು ವೇಳೆ ನೋಡಿದರೂ ಅವು ಅರ್ಥವಿಲ್ಲದ ಘಟನೆಗಳಾಗಿರುತ್ತವೆ. ಸಮುದಾಯಗಳು ಎಲ್ಲಿಯವರೆಗೆ ದೈವಗಳ ಸಾಂಸ್ಕೃತಿಕ ವೀರರನ್ನು ನಂಬಿರುತ್ತಾರೋ! ಅಲ್ಲಿಯವರೆಗೆ ಈ ಪವಾಡಗಳನ್ನು ಒಡೆಯಲು ಸಾಧ್ಯವಿಲ್ಲ. ಇದಕ್ಕೆ ಕಾರಣವಿಷ್ಟೆ, ಜನಸಾಮಾನ್ಯರು ಪವಾಡಗಳನ್ನು ನಂಬಿರುವುದರಿಂದ ಅವು ಸಮುದಾಯದ ಆಚರಣೆಯಲ್ಲಿ ಸೇರಿಹೋಗಿವೆ. ನಂಬಿಕೆಯನ್ನು ಅವಲಂಬಿಸಿ ಬದುಕುವ ಸಮುದಾಯವು ತನ್ನದೇ ಆದ ರೀತಿಯಲ್ಲಿ ಪವಾಡಗಳ ಕಥೆಗಳನ್ನು ಕಟ್ಟಿಕೊಂಡು ಜೀವನ ನಡೆಸುತ್ತದೆ. ಹೀಗಾಗಿ ಪವಾಡಗಳು ಜನರ ಬದುಕಿನಲ್ಲಿ ಹಾಸು ಹೊಕ್ಕಾಗಿವೆ. ಇವುಗಳನ್ನು ಯಾರು ಪ್ರಶ್ನಿಸುತ್ತಾರೋ ಅಥವಾ ತರ್ಕಿಸುತ್ತಾರೋ ಅವರು ಹುಚ್ಚರು ಎಂಬ ಕಲ್ಪನೆಗೆ ಸಾಕ್ಷಿ ಯಾಗುವಂತೆ ತೋರುತ್ತಾರೆ.

ಸರೂರ ಸಂಪ್ರದಾಯದ ಆಚರಣೆಗಳ ಭಿನ್ನತೆ

ಸರೂರ ಸಂಪ್ರದಾಯವನ್ನು ಮೂಲವಾಗಿಟ್ಟುಕೊಂಡು ಆಂಧ್ರದಲ್ಲಿಯೂ ಇದರ ಸಂಪ್ರದಾಯದ ನೆಲೆಗಳು ಕಂಡುಬರುತ್ತವೆ. ಅವರು ಸಾಮಾಜಿಕವಾಗಿ, ಧಾರ್ಮಿಕವಾಗಿ ಆಚರಿಸುವಂತಹ ಎಲ್ಲ ಕಾರ್ಯಗಳನ್ನು ಕಾಲಕ್ಕೆ ಅನುಗುಣವಾಗಿ ಆಚರಣೆಗಳನ್ನು ಮಾಡಿಕೊಂಡು ಬಂದಿದ್ದಾರೆ. ಆದರೆ ಸರೂರಿನಲ್ಲಿ ಆಚರಿಸುವಂತಹ ಎಲ್ಲಾ ಸಂಪ್ರದಾಯಗಳನ್ನು ಅಳವಡಿಸಿಕೊಳ್ಳದೇ ಕೆಲವು ಪದ್ಧತಿಗಳನ್ನು ರೂಢಿಸಿಕೊಂಡು ಬರುತ್ತಿದ್ದಾರೆ. ಉದಾಹರಣೆಗೆ ಸರೂರಿನಲ್ಲಿ ರೇವಣಸಿದ್ಧನ ಜಾತ್ರೆಯನ್ನು ಶ್ರಾವಣಮಾಸ ಮತ್ತು ಶಿವರಾತ್ರಿಯಲ್ಲಿ ಆಚರಿಸುತ್ತಾರೆ. ಇದು ಇಲ್ಲಿನ ವಿಶೇಷವಾಗಿದೆ. ಹಾಗೆಯೇ ಆಂಧ್ರದ ಬೆಳಗುಪ್ಪ ಮಂಡಲದಲ್ಲಿ ಬರುವ ಸೀರ್ಪಿಕೊಟ್ಟಾಲಿನಲ್ಲಿ ಯುಗಾದಿ ಮತ್ತು ವಿಜಯದಶಮಿಯ ಸಂದರ್ಭದಲ್ಲಿ ಈ ಜಾತ್ರೆಯನ್ನು ಮಾಡುತ್ತಾರೆ. ಈ ಪಲ್ಲಕ್ಕಿ ಉತ್ಸವ, ಜಾತ್ರೆ–ಕುಂಭಮೇಳಗಳ ಮೆರವಣಿಗೆಗಳನ್ನು ಎರಡೂ ಕಡೆ ಮಾಡುವುದು ಕಂಡುಬರುತ್ತದೆ. ಆದರೆ ಸೀರ್ಪಿಕೊಟ್ಟಾಲನ ವಿಶೇಷತೆಯೇನೆಂದರೆ ರೇವಣಸಿದ್ಧನ ಜೊತೆಗೆ ವೀರಮಾಳಮ್ಮನ ಪಲ್ಲಕ್ಕಿ ಉತ್ಸವ ನಡೆಯುತ್ತದೆ.

ಸಂಪ್ರದಾಯ ಬದ್ಧವಾಗಿ ಗಂಗೆಯ ಪೂಜೆಯನ್ನು ಮಾಡಿಕೊಂಡು ದೇವಾಲಯಕ್ಕೆ ಕರೆತರುವುದು ಇಲ್ಲಿಯ ಪದ್ಧತಿಯಾಗಿದೆ. ಅದೇ ರೀತಿ ಓಬಳಾಪುರಂ ಹಾಗೂ ಕುಂದುರ್ಪಿ ಮಂಡಲದಲ್ಲಿ ಬರುವ ಲಕ್ಷ್ಮಂಪಲ್ಲಿಯಲ್ಲಿಯೂ ವಿಜಯದಶಮಿಯಂದು ರೇವಣಸಿದ್ಧನ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಕರ್ನೂಲ್ ಜಿಲ್ಲೆಯ ಆಲೂರು ಮಂಡಲದಲ್ಲಿ ಚಿಂತಕುಂಟ ಎಂಬ ಊರಿದೆ. ಇಲ್ಲಿ ಪ್ರತಿವರ್ಷ ರೇವಣಸಿದ್ಧನ ಜಾತ್ರೆ ಪಲ್ಲಕ್ಕಿ ಉತ್ಸವ ನಡೆಯುವುದಿಲ್ಲ. ಸುಮಾರು ಹನ್ನೆರಡು ವರ್ಷಗಳಿಗೊಮ್ಮೆ ನಡೆಯುತ್ತದೆ. ಇದನ್ನು ಅಲ್ಲಿಯ ಜನರು 'ದೊಡ್ಡದ್ಯಾವ್ರು' ಎಂದು ಕರೆಯುತ್ತಾರೆ. ಆ ಊರಿನ ರೇವಣಸಿದ್ಧನ ಮಠಕ್ಕೆ ಸಂಬಂಧಿಸಿದ ಜಗಲಿಯ ದೇವರುಗಳು ಬಂದು ಜಾತ್ರೆಯನ್ನು ಸಾಂಸ್ಕೃತಿಕವಾಗಿ ಮೂರು ದಿನಗಳ ಕಾಲ ಮಾಡುತ್ತಾರೆ.

ಇಲ್ಲಿಯ ಸಂಪ್ರದಾಯದ ವಿಶೇಷವೆಂದರೆ ಬಂದಂತಹ ಎಲ್ಲಾ ದೇವರುಗಳು ಒಮ್ಮೆಯೇ ಗಂಗಾಸ್ನಾನಕ್ಕೆ ಹೋಗುತ್ತವೆ. ಪೂಜೆ ಪುನಸ್ಕಾರಗಳಾದ ನಂತರ ಆ ಮಠದ ಗುರುಒಡೆಯರ ಸಮ್ಮುಖದಲ್ಲಿ ಪಟ್ಟದ ಪೂಜಾರಿಯನ್ನು ನೇಮಕ ಮಾಡುತ್ತಾರೆ. ಹೀಗೆ ಈ ಎಲ್ಲಾ ಕಾರ್ಯಗಳ ಜೊತೆಗೆ ದಾಸೋಹದ ಕಾರ್ಯವನ್ನು ನೆರವೇರಿಸಿಕೊಡುತ್ತಾರೆ. ಇದು ಈ ಊರಿನ ವಿಶಿಷ್ಟತೆಯನ್ನು ತೋರಿಸುತ್ತದೆ. ಆದರೆ ಸರೂರಿನಲ್ಲಿ ರೇವಣಸಿದ್ಧನ ಜಾತ್ರೆ ಉತ್ಸವ ನಡೆದ ಸಂದರ್ಭದಲ್ಲಿ ಹಲವಾರು ಸಂಪ್ರದಾಯದ ಆಚರಣೆಗಳನ್ನು ಮಾಡುತ್ತಾರೆ. ಅವು ಕೆಂಡದ ಮೇಲೆ ರೊಟ್ಟಿ ಸುಡುವುದು ದೀಡನಮಸ್ಕಾರ ಹಾಕುವುದು, ಹೇಳಿಕೆ ಹೇಳಿದ ನಂತರ ರವೆ ಉಂಡೆಯ ಪದ್ಧತಿ ಹೀಗೆ ಸಾಂಸ್ಕೃತಿಕ ಪ್ರತೀಕವಾಗಿ ಅನೇಕ ಪದ್ಧತಿಗಳನ್ನು ಆಚರಿಸುತ್ತಾರೆ. ಆದರೆ ಆಂಧ್ರ ಪರಿಸರದಲ್ಲಿ ಸಿಕ್ಕಂತಹ ಸರೂರು ಸಂಪ್ರದಾಯದ ನೆಲೆಗಳಲ್ಲಿ ಈ ರೀತಿಯಾದ ಸಂಪ್ರದಾಯದ ಆಚರಣೆಗಳು ಕಂಡುಬರುವುದು ಕಡಿಮೆ. ಆದರೆ ಇವುಗಳಲ್ಲಿ ಕೆಲವನ್ನು ರೂಢಿಸಿಕೊಂಡು, ಇನ್ನೂ ಕೆಲವನ್ನು ಅಳವಡಿಸಿಕೊಂಡು ಬರುತ್ತಿರುವ ಸಂಗತಿಗಳನ್ನು ಕಾಣಬಹುದು. ಇವರು ಧಾರ್ಮಿಕವಾಗಿ ಯಾವುದೇ ಆಚರಣೆಗಳನ್ನು ಮಾಡಿದರೂ ಗುರುಒಡೆಯರ, ಒಡೆತನದಲ್ಲಿ ಮಾಡುತ್ತಾರೆ. ಈ ಗುರುಒಡೆಯರು ಮೂಲತಃ ಸರೂರು ಪೀಠಕ್ಕೆ ಸಂಬಂಧವಿರುವುದು ಕಂಡುಬರುತ್ತದೆ. ಇಲ್ಲಿ ಬೀರಪ್ಪ ದೇವರನ್ನು ರಾಮಪ್ಪ ಎಂದು ಕರೆದರೆ. ರೇವಣಸಿದ್ಧನನ್ನು ಕಾರಪ್ಪ ಎಂದು ಕರೆಯುತ್ತಾರೆ. ಹೀಗೆ ಅಲ್ಲಿನ ಪ್ರಾದೇಶಿಕ ರೂಢಿಗೆ ಅನುಗುಣವಾಗಿ ಹೆಸರುಗಳನ್ನು ಕರೆಯುತ್ತಾರೆ. ಒಟ್ಟಾರೆ ಆ ಎಲ್ಲಾ ಆಚರಣೆಗಳನ್ನು ಗಮನಿಸಿದಾಗ ಸರೂರು ಮತ್ತು ಆಂಧ್ರದಲ್ಲಿ ಆಚರಿಸುವ ಸಂಪ್ರದಾಯಗಳಿಗೆ ಸಾಮ್ಯತೆ ಇರುವುದು ತಿಳಿದುಬರುತ್ತದೆ. ಇಂಥಹ ವಿಶೇಷ ಸಂಪ್ರದಾಯದ ಪರಂಪರೆಯನ್ನು ಹೊಂದಿದ ಈ ಸಮುದಾಯದ ಆಚರಣೆಗಳು ಸಾಂಸ್ಕೃತಿಕ ಅಧ್ಯಯನದ ಮಹತ್ವವನ್ನು ಸಾರುತ್ತವೆ.

ಅಡಿಟಿಪ್ಪಣಿಗಳು

೧. ಕುರುಬರ ಒಳಪಂಗಡಗಳು ಅಪ್ರಕಟಿತ ಪ್ರಬಂಧ ಪು. ೧೮

೨. ಕುರುಬರ ಗುರುಒಡೆಯರು: ಸಾಂಸ್ಕೃತಿಕ ಅಧ್ಯಯನ, ಪು. ೧೪೦

೩. ಕುರುಬರ ಗುರುಒಡೆಯರು: ಸಾಂಸ್ಕೃತಿಕ ಅಧ್ಯಯನ, ಪು. ೧೪೧

೪. ಕುರುಬರ ಗುರುಒಡೆಯರು: ಸಾಂಸ್ಕೃತಿಕ ಅಧ್ಯಯನ, ಪು. ೧೪೩

೫. ಹಾಲುಮತ ಗುರು ಸರೂರು ಶಾಂತಮುತ್ತಯ್ಯ, ಪು. ೬

೬. ರೇವಣಸಿದ್ಧ ಪರಂಪರೆ, ಪು. ೧೩೦

೭. ಹಾಲುಮತ ವ್ಯಾಸಂಗ-೫, ಪು. ೨೨.

೮. ಹಾಲುಮತ ವ್ಯಾಸಂಗ-೫, ಪು. ೧೭೧.

೯. ಹಾಲುಮತ ಗುರು ಸರೂರು ಶಾಂತಮುತ್ತಯ್ಯ; ಪು. ೭೯.

೧೦. ಹಾಲುಮತ ಗುರು ಸರೂರು ಶಾಂತಮುತ್ತಯ್ಯ; ಪು. ೭೭

೧೧. ಹಾಲುಮತ ಕಿರಣ, ಪು. ೬೫

೧೨. ಪಂಚಗಣಾಧೀಶ್ವರರ ಪವಾಡಗಳು ಸಾಂಸ್ಕೃತಿಕ ಸಂಕಥನ, ಪು. ೬೪.

೧೩. Encyclopedia Bridanica Val-13 ಪು. ೧೮

ಅಧ್ಯಾಯ ಆರು

ಸರೂರು ಹಾಲುಮತ ಸಂಪ್ರದಾಯ: ಸಾಹಿತ್ಯ

ಅಧ್ಯಾಯ ಆರು

ಸರೂರು ಹಾಲುಮತ ಸಂಪ್ರದಾಯ: ಸಾಹಿತ್ಯ

ಹಾಲುಮತ ಸಮುದಾಯವು ತನ್ನದೇ ಆದ ಐತಿಹಾಸಿಕ ಮಹತ್ವವನ್ನು ಹೊಂದಿದೆ. ಈ ಸಮುದಾಯದ ಗುರುಪರಂಪರೆಯ ದೈವಗಳ ಆಚರಣೆ, ನಂಬಿಕೆ, ಸಂಪ್ರದಾಯಗಳನ್ನು ಪ್ರತಿಪಾದಿಸುವ ಲಿಖಿತ ಆಕರಗಳು ಲಭ್ಯವಿರುವುದು ಕಂಡುಬರುತ್ತದೆ. ಇಂಥಹ ಆಕರಗಳಲ್ಲಿ ಸರೂರ ಗುರುಪರಂಪರೆಗೆ ಸಂಬಂಧಿಸಿದ ಕೆಲವು ಸಾಹಿತ್ಯಕ ಆಕರಗಳು ಪ್ರಮುಖವೆನಿಸುತ್ತವೆ. ಅಂತಹ ಆಕರಗಳಲ್ಲಿ ತಗರ ಪವಾಡ, ಸಿದ್ಧಮಂಕ ಚರಿತೆ, ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ ಮತ್ತು ಚನ್ನಬಸವಶಾಸ್ತ್ರಿ ಕವಿಯ ಹಾಲುಮತ ಪುರಾಣ ಇತ್ಯಾದಿ ಕೃತಿಗಳ ಜೊತೆಗೆ, ಈ ಪರಂಪರೆಗೆ ಸಂಬಂಧಿಸಿದಂತೆ ಕೆಲವು ಶಾಸನಗಳು, ದಾಖಲೆ ಪತ್ರಗಳು ಹಾಗೂ ತಾಮ್ರದ ಬಿಲ್ಲೆಗಳು ಸಿಗುತ್ತವೆ. ಹೀಗೆ ಅನೇಕ ವಿಧವಾದ ದಾಖಲೆಗಳು ಸರೂರು ಪರಂಪರೆಯನ್ನು ಅಧ್ಯಯನ ಮಾಡುವುದಕ್ಕೆ ಪ್ರಮುಖವಾದ ಆಕರಗಳಾಗಿ ಕಂಡುಬರುತ್ತವೆ. ಇವು ಕುರುಬ ಸಮುದಾಯದ ಪ್ರಾಚೀನತೆಯನ್ನು ಪ್ರತಿಪಾದಿಸುವ ಆದಿಗೊಂಡ, ಆತನ ವಂಶಾವಳಿ, ಅವರ ವೃತ್ತಿ, ರೇವಣಸಿದ್ಧ, ಸಿದ್ಧರಾಮ, ಶಾಂತಮುತ್ತಯ್ಯ, ಮರುಳಸಿದ್ಧ ಮುಂತಾದವರ ಸಾಂಸ್ಕೃತಿಕ ಬದುಕಿನ ಮೂಲಕ ಗುರುಪರಂಪರೆಯನ್ನು ತಿಳಿಯಲು ಅನುಕೂಲವಾಗಿವೆ. ಈ ಹಿನ್ನೆಲೆಯಲ್ಲಿ ಈ ಆಕರಗಳು ಸರೂರ ಹಾಲುಮತ ಸಂಪ್ರದಾಯದ ಬಗ್ಗೆ ಅವರ ಗುರುಪರಂಪರೆಯ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ಅನಾವರಣಗೊಳಿಸುವಲ್ಲಿ ಯಾವ ರೀತಿಯಲ್ಲಿ ಪೂರಕವಾಗಿವೆ ಎಂಬುದನ್ನು ಈ ಅಧ್ಯಾಯದಲ್ಲಿ ಅವಲೋಕಿಸಲಾಗಿದೆ.

೧. ಲಿಖಿತ ಸಾಹಿತ್ಯ

೨. ದಾಖಲು ಸಾಹಿತ್ಯ

ಅ. ಶಾಸನಗಳು

ಆ. ದಾಖಲೆ ಪತ್ರಗಳು

ಇ. ಭಾಷಣ ಮತ್ತು ವರದಿಗಳು

ಲಿಖಿತ ಸಾಹಿತ್ಯ: ಪ್ರಮುಖವಾಗಿ ಹಾಲುಮತ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಲಿಖಿತ ಆಕರಗಳಲ್ಲಿ 'ತಗರ ಪವಾಡ' ಪ್ರಮುಖವಾಗಿ ಕಂಡುಬರುತ್ತದೆ.

೧. ತಗರ ಪವಾಡ: ಇದು ಸಾಹಿತ್ಯ ಕೃತಿಯಾಗಿದೆ. ಇದನ್ನು ಎಂ.ಎಂ. ಕಲಬುರ್ಗಿ, ಸಿ.ಕೆ. ಪರುಶುರಾಮಯ್ಯ, ಎಫ್.ಟಿ. ಹಳ್ಳಿಕೇರಿ ಅವರು ಸಂಪಾದನೆ ಮಾಡಿ, ೨೦೦೪ರಲ್ಲಿ ಗದುಗಿನ ವಿದ್ಯಾನಿಧಿ ಪ್ರಕಾಶನದಿಂದ ಪ್ರಕಟಗೊಳಿಸಲಾಗಿದೆ. ಈ ಕಾವ್ಯದ ಕರ್ತೃವಿನ ಬಗ್ಗೆ ಮತ್ತು ಕಾಲದ ಬಗ್ಗೆ ಎಲ್ಲಿಯೂ ದಾಖಲೆಗಳು ಸಿಗುವುದಿಲ್ಲ. ಆದರೆ ಈ ಕೃತಿಯು ಸುಮಾರು ೧೭ನೇ ಶತಮಾನದಲ್ಲಿ ರಚನೆಯಾಗಿರಬೇಕು ಎಂಬುದು ಸಂಪಾದಕರ ಅಭಿಪ್ರಾಯವಾಗಿದೆ. ಇದು ಕುರುಬರ ಸಂಸ್ಕೃತಿಯನ್ನು ಕಟ್ಟಲು ಮತ್ತು ಕುರುಬರ ಗುರು ಶಾಂತಮುತ್ತಯ್ಯನ ಚರಿತ್ರೆಯನ್ನು ತಿಳಿಯುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಈ ಕೃತಿಯು ಎಂಟು ಸಂಧಿಗಳಿಂದ ಕೂಡಿದೆ. ಸಣ್ಣ ಸಣ್ಣ ಉಪಕಥೆಗಳನ್ನು ಹೇಳುವುದರ ಮೂಲಕ ಶಾಂತಮುತ್ತಯ್ಯನ ಪರಂಪರೆಯನ್ನು ತಿಳಿಸುತ್ತದೆ. ಈ ಕಾವ್ಯದ ಆರಂಭದ ಪದ್ಯ ವೃತ್ತವಾಗಿದೆ. ನಂತರ ಕಂದ, ಅನಂತರದ ಎಲ್ಲಾ ಪದ್ಯಗಳು ಸಾಂಗತ್ಯದಿಂದ ಕೂಡಿವೆ. ಸಂಗನ ಬಸವರಾಜ, ಅಲ್ಲಮ, ಸಿದ್ಧರಾಮ, ರುದ್ರಮುನಿ, ಚನ್ನಬಸವ, ಮಡಿವಾಳ ಇನ್ನೂ ಮೊದಲಾದವರಿಗೆ ನಮಸ್ಕರಿಸುತ್ತೇನೆ ಎಂದು ಕಾವ್ಯ ಆರಂಭವಾಗುತ್ತದೆ. ಇಲ್ಲಿ ಪರಮೇಶ್ವರನನ್ನು ರೇವಣಸಿದ್ಧನೆಂದು ಕರೆಯಲಾಗಿದೆ. ಒಂದು ದಿನ ಪರಮೇಶ್ವರನು ಕೈಲಾಸದಲ್ಲಿ ಒಡ್ಡೋಲಗದಲ್ಲಿರುವ ಸಂದರ್ಭದಲ್ಲಿ ನಾರದನು ಪ್ರವೇಶಿಸುತ್ತಾನೆ. ಆಗ ಪರಮೇಶ್ವರನು ನಾರದನನ್ನು ಸ್ವಾಗತಿಸಿ ಅವನ ಯೋಗಕ್ಷೇಮವನ್ನು ವಿಚಾರಿಸುತ್ತಾನೆ. ಆಗ ನಾರದನು ಹೇಳುತ್ತಾನೆ, ಭೂಲೋಕದ ವಿಚಾರವನ್ನು ಮುಂದಿಡುತ್ತಾ ಭೂಲೋಕದಲ್ಲಿ ಕೊಲ್ಲಾಪುರವೆಂಬ ಪಟ್ಟಣದಲ್ಲಿ ಮಾಯೆ ಎಂಬ ಒಬ್ಬಳು ವೇಶ್ಯೆ ಇದ್ದಾಳೆ. ಅವಳಿಗೆ ಮನಸೋತು ನವಕೋಟಿ ಸಿದ್ಧರು ಅವಳ ದಾಸರಾಗಿ ದುಡಿಯುತ್ತಿದ್ದರು. ಹೀಗೆ ದುಡಿಯುತ್ತಿರುವುದನ್ನು ಕಂಡು ನಾರದರು ಶಿವನಿಗೆ ತಿಳಿಸಿ ಸಹಾಯವನ್ನು ಕೋರುತ್ತಾರೆ. ಈ ಸಂಗತಿಯನ್ನು ತಿಳಿದ ಶಿವನು ಕೊಲ್ಲಾಪುರದ ಮಾಯೆಯಲ್ಲಿಗೆ ಬಂದು, ಅವಳು ಕೊಡುವ ಅನೇಕ ವಿಷದ ಕೊಡಗಳನ್ನು ಕುಡಿದು ಅವನ ದಿವ್ಯ ಶಕ್ತಿಯನ್ನು ತೋರಿಸಿ ಅವಳಿಗೆ ಮೆರಗುಂಟು ಮಾಡಿಸುತ್ತಾನೆ. ಅವನು ತೋರಿಸಿದ ಅಸಾಮಾನ್ಯ ಶಕ್ತಿಗೆ ಬೆರಗಾದ ಮಾಯೆ ಸಿದ್ಧನಲ್ಲವೆಂದು ತಿಳಿದು ಸಾಷ್ಟಾಂಗ ನಮಸ್ಕಾರಗೈಯುತ್ತಾಳೆ. ಬುದ್ಧಿಮಾಂದ್ಯದಿಂದ ಕೂಡಿದ ನವಕೋಟಿ ಸಿದ್ಧರಿಗೆ ಕುರಿಗಳಾಗುವಂತೆ ಶಪಿಸುತ್ತಾನೆ. ಅವುಗಳನ್ನು ಕಾಯುತ್ತ ತೊಗರಿಸಿಯ ಗ್ರಾಮಕ್ಕೆ ಬಂದು, ಅಲ್ಲಿಯ ಒಕ್ಕಲಿಗ ಆದಿಗೊಂಡನ ಹೆಂಡತಿ ಮಲ್ಲಮ್ಮನ ಹೊಲದ ಹುತ್ತಿನಲ್ಲಿ ಕುರಿಗಳನ್ನು ಹೊಗಿಸಿ ಕೈಲಾಸಕ್ಕೆ ಹೋಗುತ್ತಾನೆ. ತೊಗರಿಸಿಯ ಆದಿಗೊಂಡನ ಏಳುಜನ ಮಕ್ಕಳಲ್ಲಿ ಕೊನೆಯವನಾದ ಪದ್ಮಣ್ಣನು ಉಂಡಾಡಿಯಾಗಿದ್ದನು. ಪದ್ಮಣ್ಣನ

ತಾಯಿ ಮಲ್ಲಮ್ಮ ಮಗನನ್ನು ಕರೆದು ಬುದ್ಧಿವಾದವನ್ನು ಹೇಳುತ್ತಾಳೆ. ತಾಯಿಯ ಬುದ್ಧಿವಾದವನ್ನು ಗ್ರಹಿಸಿದ ಪದ್ಮಣ್ಣನು ಒಂದು ದಿನ ಕಾಡನ್ನು ಕಡಿಯಲು ಹೊಲಕ್ಕೆ ಹೋದಂತಹ ಸಂದರ್ಭದಲ್ಲಿ ಹುತ್ತವನ್ನು ಒಡೆಯಬೇಡ, ಮುತ್ತುಗವನ್ನು ತರಿಯ ಬೇಡ, ಮುತ್ತಿಪ್ಪ ಮರಗಳನ್ನು ನೀಡರಿ ಎಂಬ ತಂದೆ ಆದಿಗೊಂಡನ ಮಾತನ್ನು ಪರೀಕ್ಷಿಸಲು ಹೊಲದ ಮೂಲೆಯಲ್ಲಿದ್ದ ಹುತ್ತವನ್ನು ಒಡೆದು, ಅದರ ಮೇಲಿದ್ದ ಮುತ್ತುಗವನ್ನು ಕಡಿದನು. ಆಗ ಹುತ್ತದಿಂದ ಹೊರ ಬಂದ ಅಸಂಖ್ಯಾತ ಕುರಿಗಳನ್ನು ನೋಡಿ ಆಶ್ಚರ್ಯಪಡುತ್ತಾನೆ. ಇಷ್ಟೊಂದು ಕುರಿಗಳನ್ನು ನಿರ್ವಹಿಸುವುದು ತನ್ನ ಕೈಯಿಂದ ಅಸಾಧ್ಯವಾದುದೆಂದು ಮನಗಂಡಾಗ ಪದ್ಮಣ್ಣನ ಕಷ್ಟವನ್ನು ನೋಡಿ ಶಿವನು ಸೃಷ್ಟಿಮಾಡಿ ಕಳಿಸಲ್ಪಟ್ಟ ಬೀರಯ್ಯನೆಂಬುವನು ಇವನಿಗೆ ಕುರಿಕಾಯುವ ಕೆಲಸದಲ್ಲಿ ನೆರವಾಗುತ್ತಾನೆ. ಬೀರಯ್ಯ ನೆಂಬುವವನನ್ನು ಸೃಷ್ಟಿ ಮಾಡಿ ಕುರಿ ಕಾಯುವ ಕೆಲಸದಲ್ಲಿ ನೆರವಾಗುವಂತೆ ತಿಳಿಸಿ ಕಳಿಸುತ್ತಾನೆ.

ಹೀಗೆ ಒಂದು ದಿನ ಕುರಿಗಳನ್ನು ಮುಂದಿಟ್ಟುಕೊಂಡು ಪದ್ಮಣ್ಣ ಮತ್ತು ಬೀರಯ್ಯರು ಹೋಗುತ್ತಿರಲು, ಒಂದು ಅಡವಿಯ ಮಧ್ಯದಲ್ಲಿ ಬಕನೆಂಬ ರಕ್ಕಸನು ಎದುರು ಬಂದು ಕುರಿಗಳನ್ನು ತಿನ್ನುವುದಾಗಿ ಧಾವಿಸುತ್ತಾನೆ. ಆಗ ಬೀರಯ್ಯನು ತನ್ನ ತೋಳ್ಬಲದಿಂದ ರಕ್ಕಸನನ್ನು ಸಂಹರಿಸುತ್ತಾನೆ. ಆಗ ಆತನ ಮಗಳು ಸಿರಿವಂತೆ,

"ಎನಗಾರು ಗತಿಯೋ ಈ ಘೋರಾರಣ್ಯ ದೊಳಿರ್ದ
ಜನಕನ ಕೊಂದಿರಿ ನೀವು
ವಿನಯ ವಚನದಿಂದ ವೀರ ಬೀರಯ್ಯನ ಚ
ರಣಕ್ಕೆ ನೊಸಲ ಚಾಚಿದಳು"[೧]

ಹೀಗೆ ಸಿರಿವಂತೆಯು ತನಗೆ ದಿಕ್ಕಿಲ್ಲದಂತಾಯಿತೆಂದು ರೋಧಿಸುತ್ತಾ ಬಂದು ಬೀರಯ್ಯನ ಪಾದಕ್ಕೆರಗುತ್ತಾಳೆ. ಆಗ ಪದ್ಮಣ್ಣನಿಗೆ ಆಕೆಯನ್ನು ವಿವಾಹ ಮಾಡುತ್ತಾನೆ. ಹೀಗೆ ಮುಂದುವರೆದು ಪದ್ಮಣ್ಣನು ರಾಕ್ಷಸನ ಮಗಳು ಸಿರಿವಂತೆಯೊಡನೆ ಕುರಿಗಳನ್ನು ಕಾಯುತ್ತಾ ಮುಂದುವರೆಯುತ್ತಾನೆ. ಅಲ್ಲಿಗೆ ಪರಮೇಶ್ವರನು ಬರುತ್ತಾನೆ. ಪದ್ಮಣ್ಣನು ನಡೆದ ಎಲ್ಲ ಸಂಗತಿಯನ್ನು ತಿಳಿಸುತ್ತಾನೆ. ಆಗ ಪರಮೇಶ್ವರನು ಪದ್ಮಣ್ಣನಿಗೆ ಕಂದ ಈಕೆಯನ್ನು ನಿನ್ನ ಚಿಕ್ಕ ಹೆಂಡತಿಯಾಗಿ ಸ್ವೀಕರಿಸು ಎಂದು ಹೇಳುತ್ತಾನೆ. ಪದ್ಮಣ್ಣನು ತೊಗರಿಸಿಯನ್ನು ಬಿಡುವ ವೇಳೆಗೆ ಲಿಂಗಮ್ಮ ಎಂಬುವವಳೊಂದಿಗೆ ಮದುವೆಯಾಗಿತ್ತು. ಅವರಿಗೆ ಶಾಂತಯ್ಯನೆಂಬ ಮಗನು ಹುಟ್ಟಿದ್ದನು. ಅವರು ತೊಗರಿಸಿಯಲ್ಲಿಯೇ ಇದ್ದರು. ಶಿವನು ಹೇಳುವನು, 'ಕಂದ ನಿನ್ನ ಹಿರಿಯ ಹೆಂಡತಿ ಲಿಂಗಮ್ಮನ ಮಕ್ಕಳು ಹತ್ತಿಕಂಕಣದ ಕುರುಬರೆಂದೂ, ನಿನ್ನ ಚಿಕ್ಕ ಹೆಂಡತಿಯ ಮಕ್ಕಳು ಉಣ್ಣೆಕಂಕಣದ ಕುರುಬರೆಂದೂ ಭೂಲೋಕದಲ್ಲಿ ಪ್ರಸಿದ್ಧರಾಗುತ್ತಾರೆ ಎಂದು ಹೇಳಿ, ಕುರಿಯ ಜವಾಬ್ದಾರಿಯನ್ನು ಹೊತ್ತ ನೀನು ಕುರುಬಗೌಡನಾಗು.

ನಿನ್ನ ಕುಲದೇವರು ವೀರಬೀರಯ್ಯ, ನಿನ್ನ ಕುಲಗುರು ಶಾಂತಯ್ಯನೆಂದು ಆಶೀರ್ವದಿಸಿ ಮಾಯವಾಗುತ್ತಾನೆ.

ಇತ್ತ ತೊಗರಿಸಿರಿಯಲ್ಲಿ ಪದ್ಮಣ್ಣನ ತಾಯಿ ಮಲ್ಲಮ್ಮನು ತನ್ನ ಮಗನು ಹೋದ ದುಃಖದಿಂದ ತೀವ್ರವಾಗಿ ಬಳಲುತ್ತಿರುತ್ತಾಳೆ. ಅಲ್ಲದೆ ಆ ಹಿಂದಿನ ರಾತ್ರಿ ತನ್ನ ಮಗನು ಸಿರಿವಂತೆ ಸಹವಾಸವಾಗಿ ಕುರಿಹೊಡಕೊಂಡು ಮನೆಗೆ ಬಂದಂತೆ ಕನಸಾಗಿರುತ್ತದೆ. ಅದೇ ದಿನ ಒಬ್ಬ ಶರಣನು ಅವರಲ್ಲಿಗೆ ಬಂದು ಪದ್ಮಣ್ಣನು ಯಾವ ಅಪಾಯಕ್ಕೂ ಗುರಿಯಾಗಿಲ್ಲವೆಂದೂ ಆತನು ಮತ್ತೆ ಮರಳಿ ಬರುತ್ತಾನೆಂದು ನಂಬಿಕೆ ಕೊಡುತ್ತಾನೆ. ಮಗ ಬರುವನೆಂಬ ನೆಮ್ಮದಿಯಿಂದ ಆದಿಗೊಂಡ ಮತ್ತು ಮಲ್ಲಮ್ಮ ಇವರು ತಮ್ಮ ಮೊಮ್ಮಗ ಶಾಂತಯ್ಯನಿಗೆ ಪರವಿಗೊಂಡನೆಂಬುವನ ಮೊಮ್ಮಗಳು ದೇವಮ್ಮ ಎಂಬಾಕೆಯನ್ನು ತಂದು ಸಂತೋಷದಿಂದ ವಿವಾಹ ಮಾಡುತ್ತಾರೆ.

"ಶರಣರಾಡಿದ ಮಾತುಸ್ಥಿರವೆಂದು ಶಾಂತಯ್ಯಗೆ
ಪರವಿಗೊಂಡನ ಮೊಮ್ಮಗಳ
ಹರಸಿ ಸೇಸೆಯ ನಿಟ್ಟು ಚಿರಂಜೀವಿಯಾಗೆಂದು
ಹರುಷದಿ ಮದುವೆ ಮಾಡಿದರು"[೨]

ಅಷ್ಟರಲ್ಲಿ ಪದ್ಮಣ್ಣನು ಕುರಿ ಹಿಂಡು ಸಮೇತ ತೊಗರಿಸಿಯನ್ನು ಪ್ರವೇಶಿಸಿ ಬಿತ್ತಿದ ಹೊಲಕ್ಕೆ ಅಷ್ಟೂ ಕುರಿಗಳನ್ನು ಬಿಟ್ಟು ಮೇಯಿಸುತ್ತಿರುತ್ತಾನೆ. ಆಗ ಊರಿನ ಜನರು ಅದಕ್ಕೆ ಪ್ರತಿರೋಧ ವ್ಯಕ್ತಪಡಿಸುತ್ತಾರೆ. ಅವರನ್ನು ದೊಣ್ಣೆ ಬೀಸಿ ಪದ್ಮಣ್ಣ ಓಡಿಸುತ್ತಾನೆ. ಆಗ ಆದಿಗೊಂಡನ ಹಿರಿಯ ಮಗ ಮಲ್ಲಣ್ಣನು ಈ ದೃಶ್ಯವನ್ನು ನೋಡಿ ಭಯಭೀತನಾಗಿ ತಂದೆಯ ಬಳಿ ಬಂದು ನಿನ್ನ ಬಸುರಲ್ಲಿ ಮತ್ತೆ ಬಂದಂತಾಯಿತು ಎಂದು ನಡೆದ ಸಂಗತಿಯನ್ನು ವರದಿ ಮಾಡುತ್ತಾನೆ. ಈ ಮಾತುಗಳನ್ನು ಕೇಳಿದ ಮಲ್ಲಯ್ಯನು ಆತನು ತನ್ನ ಮಗನೇ ಇರಬೇಕೆಂದು ಊಹಿಸಿ ಸತಿಯೊಡನೆ ಹೊಲಕ್ಕೆ ಹೋಗಿ ತನ್ನ ಮಗನನ್ನು ಕರೆದುಕೊಂಡು ಹೋಗುತ್ತಾರೆ.

ಪದ್ಮಣ್ಣನು ಕುರಿಗಳನ್ನು ಮತ್ತು ಸಿರಿವಂತೆಯನ್ನೂ ಊರ ಹೊರಗಿರುವ ಕರುವುಗಳ ಬಳಿ ಬಿಟ್ಟು ತಂದೆ ತಾಯಿಗಳ ಜೊತೆ ಮನೆಗೆ ಹೋಗುತ್ತಾನೆ. ಬಹಳ ದಿನಗಳ ನಂತರ ಮನೆಗೆ ಬಂದ ಪದ್ಮಣ್ಣನನ್ನು ತಂದೆ ಮತ್ತು ಪತ್ನಿ(ಲಿಂಗಮ್ಮ) ಆದರದಿಂದ ಸತ್ಕರಿಸುತ್ತಾರೆ. ಆ ರಾತ್ರಿ ಪದ್ಮಣ್ಣನು ಅಲ್ಲಿಯೇ ಇದ್ದು, ಬೆಳಗ್ಗೆ ಎದ್ದು ಪದ್ಮಣ್ಣನು ತಾನಿನ್ನು ಹೊರಡುವುದಾಗಿ ತಾಯಿಗೆ ತಿಳಿಸುತ್ತಾನೆ. ಇದನ್ನು ಕೇಳಿ ಮಲ್ಲಮ್ಮನು ದುಃಖಿಸುತ್ತಾಳೆ. ತಮ್ಮಲ್ಲಿರುವ ಆಸ್ತಿ ಮತ್ತು ಹೆಂಡತಿ ಮಗನನ್ನು ತನ್ನೊಂದಿಗೆ ಕರೆದೊಯ್ಯಲು ತಿಳಿಸುತ್ತಾರೆ. ಹಣ ಆಸ್ತಿ ಎಲ್ಲಾ ಉಳಿದ ಆರು ಜನ ಮಕ್ಕಳಿಗೆ ಇರಲೆಂದು ಹೇಳಿ ಆದಿಗೊಂಡ ಹೊರಡುತ್ತಾನೆ. ಹೀಗೆ ಪದ್ಮಣ್ಣನು ತನ್ನ ಇಬ್ಬರು ಹೆಂಡತಿಯರ

ಜೊತೆ ಮತ್ತು ಮಗ ಶಾಂತಯ್ಯನೊಡನೆ ಕುರಿಗಳನ್ನು ನಡಿಸಿಕೊಂಡು ಹೋಗುತ್ತಾನೆ. ಕೆಲವು ದಿವಸ ಎಲ್ಲರೂ ಕುರಿಗಳನ್ನು ಕಾಯುತ್ತ ಒಟ್ಟಿಗೆ ಇರುತ್ತಾರೆ. ಪದ್ಮಣ್ಣನು ರಾಕ್ಷಸಿ ಹೆಂಡತಿ ಸಿರಿವಂತೆ ಯೊಡನೆ ಊಟ ಮಾಡುವುದು ಶಾಂತಯ್ಯನಿಗೆ ಸರಿಬರುವುದಿಲ್ಲ ಆಗ,

"ರಕ್ಕಸಿಯ ಕುಲದವಳೊಡನೆ ಭೋಜನ ಮಾಡೆ
ದಕ್ಕೂದೆ ತಿಂಬುವ ಅನ್ನ
ಅತ್ತಲು ಗುರು ನೀನೆ ಗತಿಯನುತಲಿ ಆ
ಚಿಕ್ಕಶಾಂತನು ಕಡೆಗಾದ"[೩]

ತಂದೆಯ ಕುರಿಯ ಹಿಂಡಿನಲ್ಲಿ ಸಮಭಾಗವನ್ನು ಪಡೆದುಕೊಂಡು ಹೆಂಡತಿ ದೇವಮ್ಮನೊಂದಿಗೆ ತಂದೆಯಿಂದ ಬೇರೆಯಾಗಿ ಅವರಲ್ಲಿದ್ದ ಕುರಿಗಳನ್ನು ಎರಡು ಭಾಗ ಮಾಡಿಕೊಳ್ಳುತ್ತಾರೆ. ಇಲ್ಲಿಂದ ಮುಂದೆ ಪದ್ಮಣ್ಣ, ಲಿಂಗಮ್ಮ, ಸಿರಿವಂತೆ ಇವರ ವಿಚಾರ ಬರುವುದಿಲ್ಲ. ಇಲ್ಲಿಂದ ಶಾಂತಮುತ್ತಯ್ಯ ಕಥೆಯ ಕೇಂದ್ರ ವ್ಯಕ್ತಿಯಾಗಿ ನಿಲ್ಲುತ್ತಾನೆ. ಹೀಗೆ ತಂದೆಯಿಂದ ಬೇರೆಯಾದ ಶಾಂತಮುತ್ತಯ್ಯ ಅಚಲ ನಿಷ್ಠೆಯಿಂದ ಶಿವನ ಪೂಜೆಯಲ್ಲಿ ನಿರತನಾಗುತ್ತಾನೆ. ಆತನ ಭಕ್ತಿಗೆ ಮೆಚ್ಚಿ ಶಿವನು(ರೇವಣಸಿದ್ಧನು) ಅವನಲ್ಲಿಗೆ ಬರುತ್ತಾನೆ. ಹಾಗೆ ಬಂದ ಶಿವನ ರೂಪವನ್ನು ಈ ಮುಂದಿನಂತೆ ವರ್ಣಿಸಲಾಗಿದೆ.

"ಹಿಡಿದ ತ್ರಿಶೂಲ ಕಪ್ಪರ ಕಂಥೆ ಭಸಿತವು
ಜಡಿದ ರುದ್ರಾಕ್ಷಿ ಪಾವುಗೆಯು
ಕುಡಿ ಮೀಸೆ ಕಿಡಿಗಣ್ಣು ನಡೆವ ರೌದ್ರಾಕಾರ
ಒಡೆಯ ತಾ ಬಂದು ನಿಂತಿರಲು"[೪]

ಈ ರೀತಿಯಾಗಿ ಕೆಂಗಣ್ಣಿನ ರೂಪವನೊಂದಿದ ರೇವಣಸಿದ್ಧನನ್ನು ಕಂಡು ಶಾಂತಮುತ್ತಯ್ಯ ದಂಪತಿಗಳು ಶ್ರದ್ಧೆ, ಭಕ್ತಿಯಿಂದ ಹಾರೈಕೆ ಮಾಡುತ್ತಾರೆ. ಆರೋಗಣೆಗೆ ಎಡೆ ಮಾಡುವ ವೇಳೆಗೆ ಪರಮೇಶ್ವರನು ಕಂದನ ಭಕ್ತಿಯನ್ನು ಇಂದು ಪರೀಕ್ಷಿಸುವನೋ ಎಂಬಂತೆ ಕೋಟಿ ಜಂಗಮರನ್ನು ಕರೆಯುತ್ತಾನೆ. ಬಂದಂತಹ ಕೋಟಿ ಜಂಗಮರನ್ನು ಶಾಂತಯ್ಯ ದಂಪತಿಗಳು ಶಿವನ ಅನುಗ್ರಹದಿಂದ ಸಂತೃಪ್ತಿ ಪಡಿಸುತ್ತಾರೆ. ಇದರಿಂದ ಸಂತೋಷಗೊಂಡ ಶಿವನು ಶಾಂತಮುತ್ತಯ್ಯನಿಗೆ ಏನು ಬೇಕು ಕೇಳಿಕೊ ಎಂದು ಹೇಳುತ್ತಾನೆ.

"ಧರೆಯೊಳು ನಿನಗೇಣೆವುಂಟೆನೊ ಮಹದೇವ
ಕರುಣಿಸು ಎನಗೊಂದು ವರವ
ಕರುಣಾಳು ರೇವಣ್ಣ ದೀಕ್ಷೆ ಮೋಕ್ಷವನಿತ್ತು
ಗುರುವಾಗಬೇಕೆಂದ ಶಾಂತ"[೫]

ಹೀಗೆ ಶಾಂತನು ನಿನ್ನ ದಯೆಯಿಂದ ಎಲ್ಲವೂ ಇದೆ. ನನಗೆ ದೀಕ್ಷೆ ಮೋಕ್ಷಗಳನ್ನಿತ್ತು ಸಲಹಬೇಕು ಎಂದು ಕೇಳಿಕೊಳ್ಳುತ್ತಾನೆ. ಈ ರೀತಿ ಕೇಳಿದ ಶಾಂತನನ್ನು ಲೋಕದಲ್ಲಿರುವ ಶುಭವಸ್ತುಗಳನ್ನು ತರಿಸಿ ಪಂಚ ಕಳಸಗಳ ಮಧ್ಯ ಶಾಂತನನ್ನು ಕುಳ್ಳಿರಿಸ ದೀಕ್ಷೆಯನ್ನು ನೀಡುತ್ತಾನೆ. ಈ ಸುಸಂದರ್ಭಕ್ಕೆ ಪಂಡಿತರಾಧ್ಯ, ರೇವಣರಾಧ್ಯ, ಏಕೋರಾಮಯ್ಯ, ಮರುಳ ಸಿದ್ಧಯ್ಯ ಇತ್ಯಾದಿ ಶರಣರೆಲ್ಲ ಸೇರುತ್ತಾರೆ. ಅಲ್ಲಿದ್ದ ಶರಣರು ಶಾಂತನನ್ನು ಕುರಿತು ಶಿವನ ಪುರದಲ್ಲಿರುವ ಕರಿಮಲ್ಲಿಗೆಯ ಪುಷ್ಪವನ್ನು ತಂದಲ್ಲದೆ ದೀಕ್ಷೆ ಸಂಪೂರ್ಣವಾಗುವುದಿಲ್ಲ ಎಂದು ಹೇಳುತ್ತಾರೆ. ಆಗ ಶಾಂತಯ್ಯನು ಶಿವನನ್ನು ಪ್ರಾರ್ಥಿಸಿ ಕಡೆಗೆ ಕರಿಮಲ್ಲಿಗೆ ಪುಷ್ಪವು ಬರದಿದ್ದಲ್ಲಿ ಶಿರವನರಿದುಕೊಳ್ಳುವನೆಂದು ಕೈಗೆ ಚಂದ್ರಾಯುಧವನ್ನು ತೆಗೆದುಕೊಳ್ಳುತ್ತಾನೆ. ಆಗ ಕೈಲಾಸದಿಂದ ಕರಿಮಲ್ಲಿಗೆಯ ಪುಷ್ಪವು ಸರಸರವಾಗಿ ಇಳಿದು ಬರುತ್ತದೆ.

"ಹರನ ಪುರದಲಿಂದ ಕರಿಮಲ್ಲಿಗೆ ಹೂವು
ಗುರುವು ರೇವಣ್ಣ ನಂಘ್ರಿಯೊಳು
ಶರಣ ಶಾಂತನ ಮೇಲೆ ಬೀಳಲು ಜನಮೆಚ್ಚಿ
ಸರವೂರುಯೆಂಬರಾಪುರವ"[೬]

ಹೀಗೆ ಹರನ ಪುರದಿಂದ ಸರಸರವಾಗಿ ಕರಿಮಲ್ಲಿಗೆಯ ಹೂವು ಸರೋಪಾದಿಯಾಗಿ ಬಂದು ಶಾಂತನ ಕೊರಳಿಗೆ ಬಿದ್ದಿರುವುದರಿಂದ ಆ ಸ್ಥಳಕ್ಕೆ ಸರವೂರೆಂದು ಹೆಸರಾಯಿತು. ನೆರೆದ ಶರಣರೆಲ್ಲರೂ ಜಯ ಜಯವೆಂದು ಹೊಗಳಿ ಶಾಂತನಿಗೆ ದೀಕ್ಷೆ ಕೊಟ್ಟರು. ಅಂದಿನಿಂದ ಆ ಸ್ಥಳಕ್ಕೆ ಸರವೂರು ನಾಮದಿಂದ ಪ್ರಸಿದ್ಧವಾದ ಕ್ಷೇತ್ರವಾಗುತ್ತದೆ. ಇತ್ತ ಕಿನ್ನರಿ ಬ್ರಹ್ಮಯ್ಯನು ಅಕ್ಕ ಸಾಲಿಗನಾಗಿದ್ದನು. ಬಿಜ್ಜಳ ರಾಜನ ಹೆಂಡತಿಯ ಆಭರಣದ ವಿಚಾರದಲ್ಲಿ ರಾಜನೊಂದಿಗೆ ಮನಸ್ತಾಪ ಉಂಟಾಗಿ, ಆ ವೃತ್ತಿ ತ್ಯಜಿಸಿ ಕಿನ್ನರಿ ಭಾರಿಸುತ್ತಾನೆ. ತ್ರಿಪುರಾಂತಕ ದೇವಾಲಯದಿಂದ ಪ್ರತಿದಿನ ಹನ್ನೊಂದು ರೂಪಾಯಿ ಹಣವನ್ನು ಪಡೆದು, ಜೀವನ ನಡೆಸುತ್ತಿದ್ದನು. ಕಲ್ಯಾಣದಲ್ಲಿ ಬೊಪ್ಪಯ್ಯನೆಂಬ ವಿಷಯಾಸಕ್ತನು ತನ್ನ ವೇಶ್ಯೆ ಚೆನ್ನಿ ಎಂಬುವವಳಿಗೆ ಒಂದು ತಗರನ್ನು ತರುತ್ತಿರುವ ಸಮಯದಲ್ಲಿ ಆಯಾಸವಾಗುತ್ತದೆ. ಕಾರಣ ದಾರಿಯಲ್ಲಿ ವಿಶ್ರಮಿಸುತ್ತಿರುವಾಗ ಇಳಿಸಿದ ತಗರು ತ್ರಿಪುರಾಂತಕ ದೇವಾಲಯ ಪ್ರವೇಶಿಸಿ ಗರ್ಭಗುಡಿಯ ಲಿಂಗವನ್ನು ಅಪ್ಪಿಕೊಳ್ಳುತ್ತದೆ. ಮೊರೆ ಹೊಕ್ಕವರನ್ನು ಕಾಯಬೇಕಲ್ಲದೆ ಕೊಲ್ಲುವುದು ಧರ್ಮವಲ್ಲವೆಂದು ಬ್ರಹ್ಮಯ್ಯ ಎರಡರಷ್ಟು ಬೆಲೆ ಕೊಟ್ಟು ಕೊಂಡು, ಸಾಕ್ಷಿಗಾಗಿ ಅದಕ್ಕೆ ಲಿಂಗ ಮುದ್ರೆಯನ್ನು ಹಾಕಿ ಸರೂರಿಗೆ ತಂದು ಭಕ್ತ ಶಾಂತಯ್ಯನಿಗೆ ಅದರ ಜವಾಬ್ದಾರಿಯನ್ನು ಹೊರಸಿ ಅವನ ಕುರಿಯ ಮಂದೆಯಲ್ಲಿ ಬಿಟ್ಟು ಹೋಗುತ್ತಾನೆ.

ಕಲ್ಯಾಣದಲ್ಲಿ ವಾಸವಾಗಿದ್ದ ಶರಣ ಸಂಪ್ರದಾಯದ ಕುರುಬರು ಶರಣರಿಗೆ ಹಾಲುಮೊಸರು ಮಾರುವ ಶೆಟ್ಟಿ ವೃತ್ತಿಯನ್ನು ಕೈಗೊಂಡಿರುತ್ತಾರೆ. ಶಿವನು ಸಿದ್ಧಶೆಟ್ಟಿ, ಮಲ್ಲಶೆಟ್ಟಿ ರೂಪಧರಿಸಿ ಕಲ್ಯಾಣಕ್ಕೆ

ಬಂದು ಅವರ ಜೊತೆಯಲ್ಲಿಯೇ ವ್ಯಾಪಾರವನ್ನು ಆರಂಭಿಸುತ್ತಾರೆ. ಈ ಹೊಸ ವ್ಯಾಪಾರಿಗಳನ್ನು ಕಲ್ಯಾಣದ ಜನರು ನಿಮ್ಮ ನೆಲೆಯಾವುದೆಂದು ಕೇಳಿದಾಗ

"ಕಡವಾಡಯೆಂಬ ಪಟ್ಟಣವು ತಾವಿರ್ಪುದು
ನೋಡುವ ದೇಶ ಮಧ್ಯಗಳ
ರೂಢಿಯೊಳಧಿಕ ಕಲ್ಯಾಣವು ಪೊಸತೆನೆ
ನೋಡಲು ಬಂದೆ(ವೆಂದರು)"[೭]

ಹೀಗೆ ಕಡವಾಡಿ ಗ್ರಾಮದವರೆಂದು ಕಲ್ಯಾಣದ ಅಧಿಕತೆಯನ್ನು ಕೇಳಿ ಬಂದೆವೆಂದೂ ಹೇಳುತ್ತಾರೆ. ಹೀಗಿರಲು ಒಂದು ದಿವಸ ಹಾಲು ಮಾರುವ ಕುರುಬರು ಹಾಲಿನ ಜೊತೆಯಲ್ಲಿ ಸತ್ತ ಕುರಿಯೊಂದನ್ನು ಪೇಟೆಗೆ ತಂದರು. ಇದನ್ನು ಕಂಡ ಸಿದ್ಧಶೆಟ್ಟಿ, ಮಲ್ಲಿ ಶೆಟ್ಟಿಯರು ಇದನ್ನು ಪ್ರತಿಭಟಿಸಿ ಶರಣರು ಕೊಳ್ಳುವ ಹಾಲು ಮೊಸರಿನ ಜೊತೆ ಸತ್ತ ಕುರಿಯನ್ನು ತಂದದ್ದು ಮಹಾಪರಾಧವೆಂದು, ಇದರಿಂದ ಪಟ್ಟಣವು ಅಪವಿತ್ರವಾಯಿತೆಂದು ಪ್ರತಿಭಟಿಸಿದರು. ಈ ಕಾರಣಕ್ಕಾಗಿ ಕುರುಬರನ್ನು ಕಟ್ಟಮತದವರೆಂದು ಕಲ್ಯಾಣ ಪಟ್ಟಣದಿಂದ ಹೊರಹಾಕುತ್ತಾರೆ. ಇದರಿಂದ ಕುರುಬರು ಅಸ್ಪೃಶ್ಯರಂತೆ ಅಡವಿಯಲ್ಲಿ ಬಾಳ ತೊಡಗಿದರು.

"ಕುರುಬರು ಮೂರು ಲೋಕಕ್ಕೆ ಹೊರಗುಯೆಂದು
ಸಾರಿಡಂಗುರವ ಹೊಯ್ಸಿದರು
ಹೊರಗಾಗಿ ಹನ್ನೆರಡೊರುಷವಾಗಿರಲಾಗಿ
ಶ್ರೀ ಗುರು ರೇವಣಸಿದ್ಧ"[೮]

ಈ ರೀತಿಯಾಗಿ ಕುರುಬರು ಕಲ್ಯಾಣವನ್ನು ಬಿಟ್ಟು ಅಡವಿಯಲ್ಲಿ ಅಸ್ಪೃಶ್ಯರಂತೆ ಹನ್ನೆರಡು ವರ್ಷಗಳ ಕಾಲವನ್ನು ಕಳೆಯುತ್ತಿರುವ ಸಂದರ್ಭದಲ್ಲಿ ಕುರುಬರನ್ನು ಕುಲವಂತರನ್ನಾಗಿ ಮಾಡಲು, ಶಿವನು ಸಿದ್ಧಶೆಟ್ಟಿಯ ರೂಪದಲ್ಲಿ ಬರುತ್ತಾನೆ. ಅಲ್ಲಿಗೆ ಕುರುಬರೆಲ್ಲ ಒಡೆಯನೆಂಬವರಿಲ್ಲ ಹಿಡಿದರೆ ಕೊಂಬಿಲ್ಲ ಪೊಡವಿಯೊಳಗೆ ಎಮಗ್ಯಾರುಯಿಲ್ಲ ಕಡು ಪಾಪಿಗಳಾಗಿ ತಿರುಗುತಿಹೆವು ಎಂದು ತಮ್ಮ ಸಂಕಟವನ್ನು ಅವನ ಮುಂದೆ ಹೇಳಿಕೊಳ್ಳುತ್ತಾರೆ. ಆಗ ಸಿದ್ಧಶೆಟ್ಟಿಯು ಹೇಳುತ್ತಾರೆ, ನಿಮಗೆ ಒಬ್ಬ ಒಡೆಯನು ಉಂಟು, ನಿಮ್ಮ ಕುಲವನ್ನೆಲ್ಲ ಮಮತೆಯಿಂದ ಕೈಗೊಂಡು ನಿಮಗೆ ಎಣೆಯಿಲ್ಲವೆಂದೆನಿಸುವ ಒಬ್ಬ ಶರಣನುಂಟು' ಅಂದರೆ ಇಲ್ಲಿಂದ ಹನ್ನೆರಡು ಯೋಜನದಲ್ಲಿ ಇರುವ 'ಸರೂರ' ಗ್ರಾಮವಿದೆ. ಅಲ್ಲಿ ಶಾಂತಯ್ಯನೆಂಬ ಶರಣನಿದ್ದಾನೆ. ಅವನನ್ನು ಮೊರೆಹೊಕ್ಕು ಪವಿತ್ರರಾಗಿರಿ. ಶಾಂತಯ್ಯನನ್ನು ಗುರುವಾಗಿ ಸ್ವೀಕರಿಸಿದರೆ ನಿಮಗೆ ಕುಲವುಂಟಾಗುತ್ತದೆ ಎಂದು ಹೇಳುತ್ತಾನೆ.

ಅಲ್ಲಿಂದ ಕುರುಬರೆಲ್ಲ ಸೇರಿ ಅವರಲ್ಲಿ ಪ್ರಮುಖರಾದ ಸಿದ್ಧೇಗೌಡ, ರಾಮೇಗೌಡ, ಲಕ್ಕೇಗೌಡ, ರಾಮಣ್ಣಗೌಡ ಮುಂತಾದ ಗೌಡರೆಲ್ಲ ಕೂಡಿ ಸರವೂರಿನಲ್ಲಿರುವ ಶಾಂತಮುತ್ತಯ್ಯನನ್ನು ಕಂಡು ನಮಸ್ಕರಿಸುತ್ತಾರೆ. ಆಗ ದೂರದಿಂದ ಬಂದವರನ್ನು ಗಮನಿಸಿ ಅವರ ಯೋಗಕ್ಷೇಮ ವಿಚಾರಿಸುತ್ತಾನೆ. ಆಗ ಬಂದಂತವರು ತಮ್ಮ ಸಂಕಟವನ್ನು ಹೀಗೆ ಹೇಳಿಕೊಳ್ಳುತ್ತಾರೆ.

> "ಒಂದು ದಿನದಿ ಸತ್ತಕುರಿಯ ಕಂಬಿಯ ಮೇಲೆ
> ಬಂದಿಸಿ ತಂದರೆಮ್ಮವರು
> ತಂದು ಮೊಸರು ಮಾರುತಿರಲು ನಮ್ಮವರೆಲ್ಲ
> ಬಂದಿತು ಕೇಡು ಕೇಳೊಡೆಯ"
> ಕುರುಬರಾದವರೆಲ್ಲ ಕುಲಕ್ಕೆ ಹೊರಗು ಎಂದು
> ಹೊರಡಿಸಿ ಹನ್ನೆರಡೊರುಷ
> ಹೊರಗೆ ಕಾಲವ ಕಳೆಯಲು ಒಬ್ಬ ಶರಣನು
> ಗುರುತು ಕೊಟ್ಟನು ನಿಮ್ಮ ಬಳಿಗೆ"[೯]

ಹೀಗೆ ಸತ್ತ ಕುರಿಯನ್ನು ಕಲ್ಯಾಣ ಪಟ್ಟಣದಲ್ಲಿ ಹೊತ್ತು ಮಾರಿದ ಪ್ರಮಾದಕ್ಕೆ ೧೨ ವರ್ಷ ಬಹಿಷ್ಕಾರದ ಶಿಕ್ಷೆಗೆ ಒಳಗಾಗಿದ್ದೇವೆ. ಈ ಸಂಕಷ್ಟದಿಂದ ನಮ್ಮನ್ನು ಪಾರುಮಾಡಿ ಕುಲದ ಗೌರವ ಉಳಿಸು ಒಡೆಯ ಎಂದು ಬೇಡಿಕೊಳ್ಳುತ್ತಾರೆ. ಹೀಗೆ ಶಾಂತಯ್ಯ ಮತ್ತು ಗೌಡರು ಮಾತನಾಡುವ ಸಮಯದಲ್ಲಿ ಕುರಿ ಹಿಂಡಿನಿಂದ ಒಬ್ಬ ಕುರಿಗಾಹಿಯು ಬಂದು ಕುರಿ ಹಿಂಡಿನಲ್ಲಿದ್ದ ಕಿನ್ನರಬ್ರಹ್ಮನ ತಗರು ಸತ್ತು ಹೋಯಿತೆಂದು ವರದಿ ಮಾಡುತ್ತಾನೆ.

ಇದನ್ನು ಕೇಳಿದ ಶಾಂತಯ್ಯನು ಪುಷ್ಪಕವೊಂದನ್ನು ರಚಿಸಿ ತಗರನ್ನು ಅದರಲ್ಲಿಟ್ಟು ವೈಭವದಿಂದ ಸಕಲ ವಾದ್ಯಗಳೊಡನೆ ಕಲ್ಯಾಣ ಪಟ್ಟಣಕ್ಕೆ ತರುತ್ತಿರುವಾಗ ಅದನ್ನು ಮಲ್ಲಿಶೆಟ್ಟಿಗಳು

> "ಸತ್ತ ಮೇಷನ ಹೊತ್ತುಕೊಂಡೊರ ಹೊರಗೆ
> ಹೊತ್ತು ಕೊಂಡ್ಹೋಗೊಂದು ಸಹಜ
> ಸತ್ತ ಕುರಿ ಹೊತ್ತುಕೊಂಡು ಪೇಟೆಯೊಳಗೆ
> ಹೊತ್ತು ತರುವರೇನು ಹೇಳಿ"[೧೦]

ಎಂದು ಅದನ್ನು ತಡೆಯಲು ಪ್ರಯತ್ನಿಸುತ್ತಾರೆ. ಆಗ ಶಾಂತಮುತ್ತಯ್ಯ ಅವರಾಡಿದ ಮಾತುಗಳನ್ನು ಕೇಳಿ ರೋಷದಿಂದ,

> "ಎಮ್ಮ ಒಡೆಯ ರೇವಣಸಿದ್ಧನರಿಕೆಯು
> ಚೆನ್ನತಗರ ಪವಾಡವನು

ನಿರ್ಣಯಿಸದಿದ್ದರೆ ನಿಮ್ಮ ಚರಣ ಸೇವಕನಲ್ಲ
ಇನ್ನು ಛೇದಿಸುವೆನು ಶಿರವ"[೧೧]

ಶಾಂತಯ್ಯನು ಎನ್ನಯ್ಯ ಸಿದ್ಧರೇವಣ್ಣನರಿಕೆಯ ಚನ್ನ ಮೇಷನ ಪವಾಡ ನಿರ್ಣಯಿಸದಿರೆ ನಿಮ್ಮ ಶರಣ ಸೇವಕನಲ್ಲ ಎಂದು ಹೇಳುತ್ತಾನೆ. ಆ ನಂತರ ತ್ರಿಪುರಾಂತಕ ದೇವಾಲಯಕ್ಕೆ ತರುತ್ತಾನೆ. ಈ ಸುದ್ದಿಯನ್ನು ತಿಳಿದು ಪವಾಡವನ್ನು ನೋಡಲು ಕಲ್ಯಾಣದ ಅರಸು ಬಿಜ್ಜಳ, ಕಿನ್ನರಯ್ಯ, ಸೊನ್ನಲಿಗೆ ಸಿದ್ಧರಾಮಯ್ಯ, ತಲಕಾಡು ಬ್ರಹ್ಮಯ್ಯ, ಮೋಳಿಗೆ ಮಾರಯ್ಯ, ಹಡಪದ ಅಪ್ಪಣ್ಣ ಹಾಗೂ ಬಸವಣ್ಣ ಮುಂತಾದ ಶರಣರು ಬಂದು ನೆಲೆಸುತ್ತಾರೆ.

ಬಿಜ್ಜಳನು ಇಂದು ಸತ್ತಿರುವ ತಗರನ್ನು ಎಬ್ಬಿಸದಿದ್ದರೆ ನಿಮ್ಮನ್ನೆಲ್ಲ ಗಾಣದಲ್ಲಿ ಹಾಕಿ ಅರಸುತ್ತೇನೆ ಎಂದು ಹೇಳುತ್ತಾನೆ. ಆಗ ಅಲ್ಲಿದ್ದ ಶರಣರು ಒಬ್ಬರನೊಬ್ಬರು ನೋಡಿಕೊಳ್ಳುತ್ತಾರೆ. ಆಗ ಬಸವನು ಶರಣರನ್ನು ಕುರಿತು ನಿಮ್ಮಂತಹ ಶರಣರ ಕರುಣೆಯಿದ್ದಲ್ಲಿ ಶಾಂತನು ತಗರನ್ನು ಮರಳಿ ಪಡೆಯುತ್ತಾನೆ. ಶಿಶುವಿಗೆ ಹೆತ್ತವರು ಹೆಸರಿಡಬೇಕಲ್ಲದೆ ಮತ್ತಾರಿಂದಲೂ ಆ ಕೆಲಸ ಸಲ್ಲದು. ಅಂತೆಯೇ ಈ ಪವಾಡವನ್ನು ಮೆರೆಯುವುದು ಶಾಂತನೊಬ್ಬನಿಂದಲೇ ಸಾಧ್ಯವೆಂದು ನುಡಿದು ಶಾಂತನನ್ನು ಹರಸಿ, ಭಸಿತವನ್ನಿಟ್ಟು ಮೈದಡವಿ ತೀರ್ಥಪ್ರಸಾದಗಳನ್ನು ತಳೆಯುತ್ತಾನೆ. ಮಲಗಿದ್ದ ತಗರು ಘುಡು, ಘುಡಿಸುತ್ತ ಮೇಲೆದ್ದು ನಿಲ್ಲುತ್ತದೆ. ಹೀಗೆ ಶಾಂತನ ಪವಾಡವನ್ನು ನೋಡಿದ ಬಿಜ್ಜಳನು ನಡುಗಿದನು. ಆಗ ಊರಿನ ಪ್ರಜೆಗಳೆಲ್ಲ ಶಾಂತನನ್ನು ಹೊಗಳುತ್ತಾರೆ. ಬಸವನು ಶಾಂತನ ಭಕ್ತಿಗೆ ಮೆಚ್ಚಿ ಬೇಕಾದುದನು ಬೇಡು ಎನ್ನುತ್ತಾನೆ. ಆಗ ಶಾಂತಮುತ್ತಯ್ಯನು ಏನು ಕೇಳಲಿ ದೇವ. ನಿಮ್ಮ ಕಟಾಕ್ಷದಿಂದ ನನಗಾವ ಕೊರತೆಯೂ ಇಲ್ಲ ಆದರೆ,

"ಲೋಕೋಪಕಾರಣದೆಂದೆನಿಸುವ
ಬೇಕೆಂಬ ಕಟ್ಟ ಭಕ್ತರನು
ನೀ ಕರುಣಿಸಿ ರಟ್ಟಮತದವರೆನಿಸನ್ನ
ಈ ಕುಲದವರನುದ್ಧರಿಸು"[೧೨]

ಎಂದು ಶಾಂತಯ್ಯ ತಮ್ಮ ಕುಲ ಬಾಂದವರನ್ನು ಉದ್ಧರಿಸಬೇಕಾಗಿದೆ ಎಂದು ಹೇಳಿಕೊಳ್ಳುತ್ತಾನೆ. ಈ ಮಾತುಗಳನ್ನು ಆಲಿಸಿದ ಬಸವಣ್ಣನು ಕುರುಬ ಕುಲಸ್ಥರೆಲ್ಲರನ್ನು ಕರೆಸಿ ಅವರಿಗೆ ವಿಭೂತಿಯ ಭಸಿತವನ್ನಿಟ್ಟು ಸುಖದಿಂದ ಬದುಕಿರೀ ಎಂದು ಹೇಳುತ್ತಾನೆ. ಹಾಗೆಯೇ

"ಹಾಲುಮತದ ಕುಲದವರೆಲ್ಲ ಶಾಂತಯ್ಯ
ಲೋಲ ನೀನೇ ಗುರುವಾಗಿ
ಭೂಲೋಕದೊಳು ಕೀರ್ತಿವಂತನೆನಿಸಿ ಕೊಂಡೆ
ಮೇಲಾಗಿ ಕುಲವನ್ನುದ್ಧರಿಸಿ"[೧೩]

ಎಂದು ಹೇಳುತ್ತಾ ಬಸವಣ್ಣನು ಶಾಂತಮುತ್ತಯ್ಯನಿಗೆ ಆಶೀರ್ವಾದ ಮಾಡುತ್ತಾನೆ. ಶಾಂತಮುತ್ತಯ್ಯ ಕೇಳುತ್ತಾನೆ, ನಾನು ತಗರ ಪವಾಡ ಮೆರದುದಕ್ಕೆ ಮತ್ತು ನನ್ನನ್ನು ಕುರುಬ ಕುಲಕ್ಕೆ ಒಡೆಯನನ್ನಾಗಿ ಮಾಡಿದ್ದಕ್ಕೆ ಕುರುಹು ಏನು ಎಂದು ಕೇಳಿದಾಗ, ಬಸವಣ್ಣ "ಮೂರು ಲೋಕಕ್ಕೆ ಪ್ರಜ್ವಲಿಸುವಂತಹ ಕುಲವೆಂದು ಮೂರೇಣಿನ ಕಂಥಯನ್ನಿತ್ತು" ಎಂದು ಶಾಂತಯ್ಯನಿಗೆ ಹೇಳುತ್ತಾನೆ.

"ಕಲ್ಲಿನೊಳಗೆ ಲಿಂಗ ಹುಟ್ಟಿದ ಮರಿಯಾದೆ
ಯಲ್ಲಿರಬೇಕು ಭಕ್ತಿಯೊಳು
ಜಲದೊಳು ತಾವರೆ ಹುಟ್ಟಿದ ಮರೆಯಾದೆ
ಅಲ್ಲಲ್ಲೆ ಪೂಜ್ಯುಂಟು ನಿಮಗೆ"[೧೪]

ಕಲ್ಲಿನಲ್ಲಿಯೇ ಲಿಂಗವು ಹುಟ್ಟಿದರೂ ದೈವತ್ವ ಸ್ವರೂಪವನ್ನು ಪಡೆದು, ಜನರಿಂದ ಪೂಜೆಗೊಳ್ಳುವಂತೆ ಕುರುಬ ಸಮುದಾಯದಲ್ಲಿ ಹುಟ್ಟಿದ ನಿನಗೆ ಅವರಲ್ಲೇ ವಿಶೇಷ ಸ್ಥಾನಮಾನ ದೊರೆಯುತ್ತದೆ. ಈ ಜಲದ ತಾವರೆ ಎಂಬುದು ಒಡೆಯರ ಪರಿಶುದ್ಧಿಯನ್ನು ತಿಳಿಸಿಕೊಡುತ್ತದೆ. ಹೀಗೆ ಶಾಂತಯ್ಯನು ಕಲ್ಯಾಣದಲ್ಲಿ ಮೆರೆದ ಪವಾಡವು ಎಲ್ಲಾ ಪವಾಡಗಳಿಗಿಂತಲೂ ಅಧಿಕವಾಯಿತೆಂದು ಶರಣರು ನುಡಿದರು. ಆನಂತರ,

"ಊರೊಳು ಮೆರವಣಿಗೆಯ ಮಾಡಿ ಶಾಂತಯ್ಯನ
ಧೀರ ಬಿಜ್ಜಳನರಮನೆಗೆ
ಭೋರನೆ ಕರೆ ತಂದು ಉಡುಗೊರೆಗಳನಿತ್ತು
ಆರತಿಗಳನು ಎತ್ತಿದರು"[೧೫]

ಹೀಗೆ ಶಾಂತಯ್ಯನನ್ನು ಕಲ್ಯಾಣ ಪಟ್ಟಣದ ಬೀದಿ ಬೀದಿಯಲ್ಲಿ ಉತ್ಸವವನ್ನು ಮಾಡಿಕೊಂಡು ಬಿಜ್ಜಳನ ಆಸ್ಥಾನಕ್ಕೆ ಕರೆದು ತರುತ್ತಾರೆ. ಶಾಂತಯ್ಯನಿಗೆ ಉಡುಗೊರೆ ಕೊಟ್ಟು ಗೌರವಿಸುತ್ತಾರೆ. ಅಲ್ಲಿಂದ ಶಾಂತಯ್ಯನು ಶರಣರೊಡನೆ ಸರೂರಿಗೆ ಹೊರಡುತ್ತಾನೆ. ಅವರ ಜೊತೆಗೆ ಬಸವಣ್ಣನು ಹೋಗುತ್ತಾನೆ. ಪವಾಡವನ್ನು ಗೆದ್ದು ಬಂದನೆಂಬ ವಿಷಯವನ್ನು ತಿಳಿದ ಶಾಂತಯ್ಯ ಹೆಂಡತಿ ದೇವಮ್ಮನು ಅತಿಶಯವಾದ ಆನಂದದಿಂದ ಕೂಡಿದವಳಾಗಿ, ಕಳಶ ಕನ್ನಡಿ ಹಿಡಿದು ಬಂದ ಶಾಂತಯ್ಯನನ್ನು ಸರವೂರಿನ ಸಖಿಯರೊಡನೆ ಸ್ವಾಗತ ಮಾಡಿದಳು. ಶಾಂತಯ್ಯನ ಜೊತೆಗೆ ಬಂದವರಿಗೆಲ್ಲ ಪಾದಾರ್ಚನೆಗೈದು, ಭೋಜನದ ಸಂತರ್ಪಣೆ ನಡೆಸುತ್ತಾರೆ. ದೇವಮ್ಮನೊಡನೆ ಬಂದಿದ್ದ ಶರಣರಿಗೂ, ತನ್ನ ಶಿಷ್ಯ ಕುರುಬ ಗೌಡರುಗಳಿಗೂ ಬಸವನ ಸಮ್ಮುಖದಲ್ಲಿ ಉಚಿತವಾದ ಉಡುಗೊರೆಗಳನ್ನು ಅರ್ಪಿಸುತ್ತಾರೆ. ಬಸವಣ್ಣನು ಶಾಂತಯ್ಯನಿಗೂ ಹರಸುತ್ತಾ ಹೇಳುತ್ತಾರೆ,

“ಚಿಕ್ಕ ಶಾಂತಯ್ಯ ಸಂಗಮ್ಮನಮರ್ದಪ್ಪುತ
ವರ ಶಾಂತಮುತ್ತಯ್ಯನ ಕೊಟ್ಟು
ಕ್ಷೀರ ಕುಲದೊಳಗ್ಗೆಲ್ಲ ಒಡೆಯನೇ ನೀನೆಂಬ
ಹರಸಿಯಿಟ್ಟರು ಭಸಿತವನು”[೧೬]

ಹೀಗೆ ಶಾಂತಯ್ಯನಿಗೆ ಭಸಿತವನಿಟ್ಟು ಆಶೀರ್ವಾದ ಮಾಡಿ ಕಲ್ಯಾಣ ಪಟ್ಟಣಕ್ಕೆ ಹೋಗುತ್ತಾರೆ. ಇದು ಈ ಎಲ್ಲಾ ಸಂಗತಿಗಳನ್ನು ಒಳಗೊಂಡ ಕಥಾಸಾರವಾಗಿದೆ.

ಈ ಕೃತಿಯು ಸರೂರ ಹಾಲುಮತ ಗುರುಪರಂಪರೆಯ ಚರಿತ್ರೆಯನ್ನು ತಿಳಿಸಿಕೊಡುತ್ತದೆ. ಇದರ ನಾಯಕನಾಗಿ ಶಾಂತಮುತ್ತಯ್ಯ ಕಂಡು ಬರುತ್ತಾನೆ. ಇದು ಈತನ ಅನುಯಾಯಿಗಳಾದ ಶಾಂತ ಒಡೆಯರನ್ನು ಪ್ರತಿನಿಧಿಸುವ ಕೃತಿಯಾಗಿದೆ. ಈ ಕೃತಿಯು ಕುರುಬರ ಗುರುವರ್ಗದವರ ಬಗ್ಗೆ ಹಲವಾರು ಚಾರಿತ್ರಿಕ ವಿಚಾರಗಳನ್ನು ತಿಳಿಸಿಕೊಡುತ್ತದೆ. ಇದು ಕುರುಬರಲ್ಲಿರುವ ಕಂಕಣ ಬೇಧವನ್ನು ತಿಳಿಸಿಕೊಡುತ್ತದೆ. ಶಾಂತಮುತ್ತಯ್ಯನಿಗೆ ಲಿಂಗದೀಕ್ಷೆ ನೀಡಿದ್ದು ಶಿವನೋ ಅಥವಾ ರೇವಣಸಿದ್ಧನೋ! ಎಂಬುದನ್ನು ತಿಳಿಯಲು ಸ್ಪಷ್ಟವಾಗಿ ಭೀಮಕವಿಯ ಕೃತಿಯನ್ನು ಗಮನಿಸಬಹುದು. ಇದರ ಜೊತೆಗೆ ಸರೂರಿನ ಒಡೆಯರಲ್ಲಿ ಕೂಡ ಶಾಂತಮುತ್ತಯ್ಯನಿಗೆ ರೇವಣಸಿದ್ಧನೇ ದೀಕ್ಷೆಯನ್ನು ನೀಡಿದರು ಎಂಬುದಾಗಿ ಹೇಳುತ್ತಾರೆ. ಒಟ್ಟಾರೆ ತಗರ ಪವಾಡವು ಅಂದಿನ ಕುರುಬರ ಧಾರ್ಮಿಕ ಆಚರಣೆಯ ವಿಶಿಷ್ಟತೆಯನ್ನು ಹಾಗೂ ಸಾಮರಸ್ಯ ಜೀವನವನ್ನು ತಿಳಿಸುತ್ತದೆ. ಈ ಒಂದು ಗುರುಪರಂಪರೆಯ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ಪ್ರಸ್ತುತದಲ್ಲಿಯೂ ರೂಢಿಸಿಕೊಂಡು ಬರುತ್ತಿರುವುದಕ್ಕೆ ಇದು ಪ್ರಮುಖ ಆಕರವಾಗಿದೆ.

ಸಿದ್ಧಮಂಕ ಚರಿತೆ

ಸರೂರಿನ ಹಾಲುಮತಸ್ಥರಿಗೆ ಸಂಬಂಧಿಸಿದ ಶಿಷ್ಟ ಸಾಹಿತ್ಯದ ಅಧ್ಯಯನದಲ್ಲಿ ಸಿದ್ಧಮಂಕ ಚರಿತೆಯು ಒಂದಾಗಿದೆ. ಎಂ.ಎಂ. ಕಲಬುರ್ಗಿ ಮತ್ತು ವೈ.ಸಿ. ಭಾನುಮತಿ ಅವರು ಏಕೈಕ ಹಸ್ತಪ್ರತಿಯಿಂದ ಪರಿಷ್ಕರಿಸಿದ್ದಾರೆ. ಇದು ೨೦೦೪ರಲ್ಲಿ ಗದುಗಿನ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಲಿಂಗಾಯಿತ ಅಧ್ಯಯನ ಸಂಸ್ಥೆಯಿಂದ ಪ್ರಕಾಶನಗೊಂಡಿದೆ. ಈ ಕೃತಿ ಕುರುಬ ಸಮಾಜವನ್ನು ಪ್ರತಿನಿಧಿಸುವ ರೇವಣಸಿದ್ಧ, ಸಿದ್ಧರಾಮ, ಮಂಕಯ್ಯ ತಂದೆ ಹೆಗ್ಗಗೌಡರು ಮತ್ತು ಲಿಂಗಾಯತ ಸಮಾಜವನ್ನು ಪ್ರತಿನಿಧಿಸುವ ಬಸವಾದಿ ಶರಣರು ಏಕೀಕರಣಗೊಳ್ಳುವ ಕ್ರಿಯೆ ಇಲ್ಲಿ ಕಥೆಯಾಗಿ ಬೆಳದಿರಬಹುದು. ಏಕೆಂದರೆ ಬಸವ, ಸಿದ್ಧರಾಮ, ರೇವಣಸಿದ್ಧರ ಸಮ್ಮುಖದಲ್ಲಿ ಕುರುಬ ಕುಲಕ್ಕೆ ಗುರುವಾಗಿ ನೇಮಕಗೊಂಡಿರುವುದನ್ನು ಸಿದ್ಧಮಂಕ ಚರಿತೆಯು ಅತ್ಯಂತ ವಿಸ್ತೃತವಾಗಿ ನಿರೂಪಿಸುತ್ತದೆ.

ಈ ಕೃತಿಯು ನಾಲ್ಕು ಸಂಧಿಗಳನ್ನೊಳಗೊಂಡಿದೆ. ಆರಂಭದ ಸಂಧಿಯಲ್ಲಿ ಸಿದ್ಧರಾಮ ಶಿವನಿಗೆ ನಮಸ್ಕರಿಸುತ್ತಾ ಕೃತಿಯನ್ನು ಕೇಳಿದರೆ ಅನ್ನದಾನ, ಕನ್ಯಾದಾನ ಲಭಿಸುತ್ತದೆ ಎಂದು ಹೇಳುತ್ತಾರೆ. ಇಲ್ಲಿ ರೇವಣಸಿದ್ಧ, ಸಿದ್ಧರಾಮ ದೇವರ ಪ್ರತಿರೂಪವಾಗಿದ್ದಾರೆ. ಇಲ್ಲಿ ಕವಿಯು ಕಪಿಲಸಿದ್ಧ ಮಲ್ಲನ ಮಹಿಮೆಯನ್ನು ಬಣ್ಣಿಸುತ್ತಾನೆ. ಸಿದ್ಧಮಂಕ ಸರೂರು ಗ್ರಾಮದಲ್ಲಿ ತಪವಿದ್ದ ಬಗೆಯನ್ನು ಆದ್ಯರ ವಚನ ಶಾಸನಗಳನ್ನಾಧರಿಸಿ ಈ ಕಾವ್ಯಯನ್ನು ಹೇಳುತ್ತಾನೆ. ಧರೆಗೆ ಸೊಲ್ಲಾಪುರ ಕೈಲಾಸ, ಸಿದ್ಧರಾಮನೇ ಶಿವ, ಗುಡ್ಡರೇ ಗಣೇಶ್ವರರು, ಅಷ್ಟ ಷಷ್ಠಿತೀರ್ಥವೇ ಶಿವಾಲಯವೆಂದು ಚಿತ್ರಿಸಿರುವ ಸುರರ ಕಿನ್ನರರ ಸಭೆಗೆ ಆಗಮಿಸಿದ ಭೃಂಗಿಯನ್ನು ನೋಡಿ ಗಂಧರ್ವರು ನಗುವರು. ಇದರಿಂದ ಸಿಟ್ಟಿಗೆದ್ದ ಭೃಂಗಿ "ನೀವು ಭೂಮಿಯಲ್ಲಿ ಸತಿಪತಿಗಳಾಗಿ ಹುಟ್ಟಿರಿ" ಎಂದು ಶಾಪಹಾಕುತ್ತಾನೆ. ಭೃಂಗಿಯಿಂದ ಶಾಪಗ್ರಸ್ತರಾದ ಗಂಧರ್ವರ ಹೊಟ್ಟೆಯಲ್ಲಿ "ಉಣ್ಣದ ಉಸಿರಿಕ್ಕಿದ ಜಿತೇಂದ್ರಿಯ ಮಗನಾಗಿ ಸಿದ್ಧರಾಮ ಹುಟ್ಟುವನು. ಭೂಮಿಯನ್ನು ಪಾವನ ಮಾಡುವ ಸಲುವಾಗಿ ಭೂಲೋಕದಲ್ಲಿ ವೃದ್ಧರಾದ ಸುಗ್ಗವ್ವೆ ಮುದ್ದಯ್ಯರ ಮಗನಾಗಿ ಜನಿಸುತ್ತಾನೆ. ಇತ್ತ ರೇವಣಸಿದ್ಧನು ಹನ್ನೆರಡು ಸಾವಿರ ಕನ್ನೆಯರ ಭಿಕ್ಷೆಯನ್ನು ಬೇಡಿ ಲೋಕ ಸಂಚಾರ ಮಾಡಿಕೊಂಡು ಸೊನ್ನಲಿಗೆಯ ಸಮೀಪ ಬರುತ್ತಲೇ ಪಾದುಕೆಗಳನ್ನು ಕಳಿಸಿ ಭೂಮಿಗೆ ನಮಸ್ಕರಿಸುತ್ತಾನೆ. ಶಿಷ್ಯರಿಗೆ,

"ನದಿಯಿಲ್ಲದಿಹ ತೀರ್ಥ ಶಿಲೆಯ ಪೂರ್ವದ ವಿಹ
ಗದವೊಲೊಬ್ಬ ಸಿದ್ಧನಿಂದ
ಇದು ಲಿಂಗದ ಬೀಡು ಇದು ಮುಕ್ತಿಯ ಕ್ಷೇತ್ರ
ಇದು ಧರ್ಮದಾದಿ ಸೊನ್ನಲಿಗೆ"[೧೭]

ಎಂದು ಶಿಷ್ಯಂದಿರಿಗೆ ಉತ್ತರವನ್ನು ಕೊಡುತ್ತಾನೆ. ಸಿದ್ಧರಾಮ ಜನಿಸುವ ಸ್ಥಳ ಎಂದು ಹೇಳುತ್ತಾ ಊರಿನೊಳಗೆ ಬರುತ್ತಾನೆ. ಸುಗ್ಗತಿಗೆ ನಮಸ್ಕರಿಸಿ ನಿಮ್ಮ ಉದರದಲ್ಲಿ ಶಿವಯೋಗಿ ಜನಿಸುತ್ತಾನೆ ಎಂದು ಹೇಳುತ್ತಾನೆ. ಮುಂದೆ ಸಿದ್ಧರಾಮ ಜನಿಸುತ್ತಾನೆ, ಅನಂತರ ಗೌರಿ ಭೂಮಿಗೆ ಬಂದು ಮೊಲೆಹಾಲು ಉಣಿಸಿ ತೂಗಿ ಸಿದ್ಧರಾಮ ಎಂದು ಹೆಸರಿಟ್ಟು ಕೈಲಾಸಕ್ಕೆ ತೆರಳುತ್ತಾಳೆ. ಆಗ ನಿದ್ದೆಯಿಂದೆದ್ದು

"ಜಾತಕರ್ಮವ ಮಾಡಿ ಪಿತಮಾತೆಯರುಗಿರಿ
ಜಾತೆ ಕೊಟ್ಟಾ ನಾಮವನು
ನೀತಿಗಳೆದು ಧೂಳಿಮಾಕಾಳನೆಂದವ
ರೋತು ಕೊಟ್ಟರು ಪೆಸರುವನು"[೧೮]

ಎಚ್ಚರಾದ ಸುಗ್ಗಲೆ ಕೂಸಿಗೆ ಧೂಳಮಾಕಾಳನೆಂದು ಹೆಸರಿಟ್ಟರು. ಸಿದ್ಧರಾಮ ದನ ಕಾಯುವ ಕೆಲಸಕ್ಕೆ ಹೋಗುತ್ತಾನೆ. ಮರದ ಕೆಳಗೆ ಮಣ್ಣಿನ ಲಿಂಗವನ್ನು ಮಾಡಿ ಪೂಜೆ ಮಾಡುತ್ತಿರುತ್ತಾನೆ.

ಹೀಗೆ ಮಾಡುವ ಸಂದರ್ಭದಲ್ಲಿ ಒಂದು ದಿನ ಶಿವ ಪ್ರತ್ಯಕ್ಷನಾಗಿ ತನಗೆ ಹಸಿವಾಗಿದೆ ಎಂದು ಊಟ ತರಲು ತಿಳಿಸುತ್ತಾನೆ. ಸಿದ್ಧರಾಮ ಓಡಿಹೋಗಿ ತರುವಷ್ಟರಲ್ಲಿ ಮಾಯವಾಗಿ ಹೋಗಿದ್ದರು. ಶಿವನನ್ನು ಕಾಣದೆ ಹುಡುಕಾಡಿ ಬಳಲುತ್ತಿರಲು ಜಂಗಮ ವೇಷದ ಶಿವ ಶ್ರೀಶೈಲದತ್ತ ತೋರಿಸಿದ. ಅಲ್ಲಿ ಹುಡುಕಿ ಸಿಗದಿದ್ದಾಗ ನಿರಾಶೆಯಿಂದ ಪ್ರಾಣ ತ್ಯಾಗ ಮಾಡಲು ನಿರ್ಧರಿಸಿ ಅದನ್ನು ತಪ್ಪಿಸಿದ ಭೈರವನು ಸಿದ್ಧರಾಮನಿಗೆ ೪೮ ಯೋಜನ ವಿಸ್ತಾರವಾದ ಶ್ರೀಶೈಲ ತೋರಿಸಿದ. ತನ್ನ ಸಾಮರ್ಥ್ಯವನ್ನೆಲ್ಲ ಸೊಲ್ಲಾಪುರಕ್ಕೆ ಧಾರೆ ಎರೆಯುವನೆಂದೂ, ಬರಡು ಕಪಿಲೆಯಿಂದ ಕರು ಹುಟ್ಟಿದ ದಿನ ಬರುವನೆಂದೂ ಶಿವ ಹೇಳಿದ ಮಾತನ್ನು ನಂಬಿ ಸಿದ್ಧರಾಮ ಸೊಲ್ಲಾಪುರಕ್ಕೆ ಮರಳಿ ಶಿವನ ಆದೇಶದಂತೆ ಅಣ್ಣ ಬೊಮ್ಮಣ್ಣನ ಸಹಾಯದಿಂದ ದೇವಾಲಯ ನಿರ್ಮಿಸಿ ಶ್ರೀಶೈಲದಿಂದ ಲಿಂಗರೂಪದಲ್ಲಿ ಬಂದು ಶಿವನನ್ನು ಅಥವಾ ಮಲ್ಲಿಕಾರ್ಜುನನನ್ನು ಸ್ಥಾಪಿಸಿದ.

ಶಿವನ ಶಾಪಕ್ಕೆ ಗುರಿಯಾದ ರೋಮಕೋಟಿ ಋಷಿಯು ಮಂಕಮರುಳ ಎಂಬ ಹೆಸರಿನಿಂದ ಭೂಲೋಕದಲ್ಲಿ ಹುಟ್ಟಿ ಸಿದ್ಧರಾಮನ ಶಿಷ್ಯನಾಗಲು ಮತ್ತು ದರ್ಶನಕ್ಕಾಗಿ

> "ಹೋಗೆನಲಾಕ್ಷಣ ಯೋಗಿಯಡಿಗೆ ಬಿದ್ದ
> ನೀಗಿಯೆ ಭವಬಂಧನವ
> ಬೇಗ ಸರವೂರದೊಳು ಕೋಡುಗಲ್ಲಲಿ
> ಲಾಗಿಂದ ತಪ ಮಾಡಿದನು
> ತಪದನುವನು ಕಂಡು ವಿಪರಿತವೆತ್ತನು
> ಕೃಪೆಯಿಂದ ಬಂದು ನಾರದ
> ಕಪಿಲಸಿದ್ಧ ಮಲ್ಲೇಶನೊಳು ಸುರ್ದಶನು
> ವಿಪರೀತ ತಪಸಿಯ ಪರಿಯ"[೧೯]

ಹೀಗೆ ಸರೂರಿನ ಕೊಡುಗಲ್ಲಿನ ಮೇಲೆ ತಲೆಕೆಳಗೆ ಕಾಲು ಮೇಲೆ ಮಾಡಿ ತಪಸ್ಸು ಮಾಡುತ್ತಿರುವುದನ್ನು ನಾರದನಿಂದ ಕೇಳಿದ ಶಿವ ನಂದಿಯನ್ನೇರಿ ಭೂಲೋಕಕ್ಕೆ ಬರುತ್ತಾನೆ. ದಾರಿಯಲ್ಲಿ ಶಿವ ಪಾರ್ವತಿಗೆ ಅಸಂಖ್ಯಾತ ಕುರಿ ಮಂದಿಗಳು ಕಾಣಿಸುತ್ತವೆ. ಇವು ಏನೆಂದು ಗಿರಿಜೆ ಕೇಳಲು, ಭೃಂಗಿಯ ಶಾಪದಿಂದ ಕಿನ್ನರರು ಕುರಿಗಳಾಗಿದ್ದಾರೆ. ಅವುಗಳನ್ನು ನಿಗ್ರಹಿಸಲಾಗಿದೆ ಗವಿಯಲ್ಲಿ ಹೋಗಿಸಿ ಕೈಲಾಸಕ್ಕೆ ಹೊರಡುತ್ತಾನೆ. ಶಿವಭಕ್ತ ಮುತ್ತುಗದ ಮರವನ್ನು ಕಡೆದು ನೆಲಸಮ ಮಾಡಲು ಗವಿಯಿಂದ ಅಸಂಖ್ಯಾತ ಕುರಿಗಳು ಬಂದವು. ಅವು ಇರುವೆಯೋಪಾದಿಯಲ್ಲಿ ಕುರಿಗಳು ಕಂಡವು. ಶಿವನು ಮುದುಕನ ವೇಷದಲ್ಲಿ ಬಂದು ಕುರಿ ಬೇಡಿದ. ಅದಕ್ಕೆ ಹೆಗ್ಗಗೌಡನು ಇದು ತನ್ನ ಸಂಪತ್ತಲ್ಲವೆಂದು ತಿಳಿಸಲು ಶಿವನು ಅವನೆಲ್ಲ ಹೆಗ್ಗಗೌಡನಿಗೆ ಕೊಡುವುದಾಗಿ ತಿಳಿಸುತ್ತಾನೆ. ಆನಂತರ ಒಕ್ಕಲು ಮಗ ತುಪ್ಪಳ ಕತ್ತರಿಸಿ ನೇಯ್ದು ಅದರಿಂದ ಲಿಂಗಕ್ಕೆ ಗದ್ದುಗೆ ಮಾಡಿ ಪೂಜಿಸುವಾಗ

"ಮೊಲ್ಲೆ ಮಲ್ಲಿಗೆ ಜಾಜಿ ಸುರಹೊನ್ನ ಸಂಪಗೆ
ಎಲ್ಲ ಪುಷ್ಪದಿ ಪೂಜೆ ಮಾಡಿ
ಮಲ್ಲಿಕಾರ್ಜುನ ನಮ್ಮ ಕುಲದೇವನೆನುತಲಿ
ನಿಲ್ಲದೆ ಸೊಲಬಗರಸಿದ"[೨೦]

ಹೀಗೆ ಪೂಜೆ ಮುಗಿಸಿದ ಬಳಿಕ ಶಿವನನ್ನು ಸ್ಮರಿಸುತ್ತಲೇ ಪ್ರತ್ಯಕ್ಷನಾಗಲು ಅವನಿಗೆ ಹಾಲು ಮೊಸರಿನ ಆರೋಗಣೆ ಮಾಡಿಸಿದ. ಇದಕ್ಕೆ ಮೆಚ್ಚಿದ ಶಿವನು ಕುರಿಕಾಯಲು ತಳವಾರನನ್ನು ನೇಮಿಸಿ ಹೋಗುತ್ತಾನೆ. ಒಕ್ಕಲು ಮಗನ ಸುತ್ತ ಹಾಲು ಹಯನ ಬೆಳೆದು ನಿಂತಿರುವುದನ್ನು ಕಂಡು ಶಿವನು ಉಳಿಗದವಳಾಗಿರಲು ರಕ್ಕಸಿಯ ಮಗಳನ್ನು ಕಳಿಸಿದನು. ಅವಳನ್ನು ಒಕ್ಕಲುಮಗ ಮೋಹಗೊಂಡು ಹೆಂಡತಿಯಾಗಿ ಸ್ವೀಕರಿಸುತ್ತಾನೆ. ನಂತರ ತನ್ನ ಮೊದಲ ಹೆಂಡತಿಯ ನೆನಪಿಗಾಗಿ ಸ್ವಗ್ರಾಮವಾದ ಕುರಿಬೆಟ್ಟದೂರಿಗೆ ಬರುತ್ತಾನೆ. ಆಗ ತನ್ನ ತಂದೆಯಾದ ಚಂದಗೊಂಡನು ನೀನು ರಕ್ಕಸಿಯ ಮಗಳನ್ನು ಮದುವೆಯಾಗಿದ್ದಿಯಾ ಎಂದು ವಿರೋಧಿಸುತ್ತಾನೆ. ಆದರೆ ಅಲ್ಲಿನ ಬಂಧುಗಳೆಲ್ಲ "ಶಿವ ಸ್ಪರ್ಶದಿಂದ ನೀನು ಕುಲೀನನೇ ಆಗಿರುವೆ ಮರುಗಬೇಡ" ಎಂದು ಹೇಳಿದರು. ತಂದೆಯಿಂದ ಆಸ್ತಿಯನು, ಕುಲವಾರುವನು ಪಡೆದು ಹೀಗೆ ಇಬ್ಬರ ಹೆಂಡತಿಯರೊಂದಿಗೆ ಸಿದ್ಧರಾಮನನ್ನು ದರ್ಶಿಸಲು ಸೊನ್ನಲಾಪುರಕ್ಕೆ ಪ್ರಯಾಣ ಬೆಳಸಿದನು. ಇದನ್ನು ಕೃತಿಕಾರ ಹೀಗೆ ಹೇಳುತ್ತಾನೆ,

"ಅಳಗ ಬಳಗನೆಂಬೆರಡು ಶುನಕಗಳ
ನೊಲವಿಂದ ತಾಪಿಡಿಕೊಂಡು
ಬಳಲದ ತೇಜಿದಲಿಬ್ಬರು ಸ್ತ್ರೀಯರ ಕೊಂ
ಡಲಸದೆ ಬರೆಸರವೂರಕೆ"[೨೧]

ಈ ರೀತಿಯಾಗಿ ಸರೂರಿಗೆ ಬಂದ ಹೆಗ್ಗಗೌಡ ತನ್ನ ಸಂಸಾರದೊಂದಿಗೆ ಜೀವನ ಸಾಗಿಸುತಾ

"ಸರವೂರದೊತ್ತಿಲಿ ತಜುಬಿ ಕೀಲಾರವ
ಗುರುಸಿದ್ಧರಾಮಗೆಂದೆನಲು
ಇರದೆ ಬೆಣ್ಣೆ ಪಾಲು ಮೊಸರನು ಕಣಿಕಕ್ಕ
ವೆರಸಿ ಗುರುವಿಗೆ ಕಳುಹಿದ"[೨೨]

ಹೀಗೆ ತನ್ನ ಜೀವನದ ಜೊತೆಗೆ ಪ್ರತಿದಿನವೂ ಸಿದ್ಧರಾಮನಿಗೆ ಹಾಲು ಮೊಸರನ್ನು ಕಳುಹಿಸಿ ಕೊಡುತ್ತಿದ್ದರು. ಈ ರೀತಿ ಹಲವು ದಿನ ಕಳೆಯುತ್ತಿರಲು ಸಿದ್ಧರಾಮನು ಕರೆಯಿಸಿ "ಸರವೂರಲ್ಲಿ" ಮರುಳಮಂಕನು ತಪಸ್ಸು ಮಾಡುತ್ತಲಿದ್ದು, ನೀನು ಅವನ ರಕ್ಷಣೆಗಾಗಿ ಅಲ್ಲಿಯೇ ನೆಲೆಸು" ಎಂದು

ಹೇಳಿದನು. ಆ ಮೇರೆಗೆ ಕುಲಸ್ತ್ರೀ ಸಿದ್ಧಮ್ಮನೊಂದಿಗೆ ಅಲ್ಲಿ ನೆಲಸಿದನು. ಶಿವನನ್ನು ಕುರಿತು ತಪಸ್ಸು ಮಾಡುತ್ತಿರುವ ಇಂಥ ಮಹಿಮಾಶಾಲಿ ಶರಣನಾದ ಮಂಕ ತಂದೆಯನ್ನು ತಪಸ್ಸು ಮಾಡುತ್ತಿರುವುದನ್ನು ನೋಡಿ ಆಶ್ಚರ್ಯಪಟ್ಟನು. ಇವನ ತಪಸ್ಸನ್ನು ಶಿವನಿಗೆ ತಿಳಿಸಿದನು. ಆ ಸಮಯದಲ್ಲಿ ಕೈಲಾಸಕ್ಕೆ ಬಂದ ಸಿದ್ಧರಾಮಯ್ಯನು ನಾರದನ ಹೇಳಿಕೆಯನ್ನು ಬೆಂಬಲಿಸಿ ಮಂಕ ತಂದೆಯ ಅಭಿಷ್ಟವನ್ನು ಪೂರೈಸಲು ಭಿನ್ನವಿಸಿಕೊಂಡ. ಹೀಗೆ ಶಿವಶರಣರು ತಮ್ಮ ಕಾಯಕ ವ್ರತಗಳಿಂದ ಮಹಿಮಾ ಶಾಲಿಗಳಾದಂತೆ ಸೂಜಿಯೂರಿ ತಲೆಕೆಳಗಾಗಿ ಉಗ್ರತಪಸ್ಸು ಮಾಡುತ್ತಿದ್ದ ಮಂಕ ತಂದೆಯನ್ನು ನೋಡಲು ಹಾಗೂ ತಪಸ್ಸನ್ನು ಪರೀಕ್ಷಿಸಲು ಶಿವ ಬರುತ್ತಾನೆ.

ಅದೇ ಸಮಯದಲ್ಲಿ ಇತ್ತ ಮಂಗಳವಾಡದಲ್ಲಿ ಆಳುತ್ತಲ್ಲಿದ ಬಿಜ್ಜಳರಾಯನು ಬೇಟೆಯ ನೆವದಿಂದ ಮಂಕತಂದೆಯ ತಪಸ್ಸನ್ನು ನೋಡಿ ಬೆರಗಾದ. 'ಸಿದ್ಧರಾಮನು ಪರ್ವತಮಲ್ಲಯ್ಯನನ್ನು ತನ್ನಲ್ಲಿಗೆ ತಂದರೆ ಮಂಕತಂದೆ ಸಿದ್ಧರಾಮನನ್ನೇ ತನ್ನಲ್ಲಿಗೆ ತರಲು ಈತ ತಪಸ್ಸು ಮಾಡುತ್ತಲಿರುವನೆಂದು ಬಸವಣ್ಣ ಬಿಜ್ಜಳನಿಗೆ ಹೇಳಿದ. ಮಂಕತಂದೆಯನ್ನು ನೋಡಿಕೊಳ್ಳುತ್ತಿರುವ ಹೆಗ್ಗಗೌಡನಿಗೆ ಹೇಳುತ್ತಾನೆ.

"ಅರಸು ಪಟ್ಟಣ ಹೊಕ್ಕು ಕರೆಸಿದ ಗೌಡನ ನೀ
ನಿರು ಸುಖದಲಿಯೆಂದೆನುತ
ಪರಪುರುಷಾರ್ಥಿ ನೀನಹುದೆಂದು ಬಿಜ್ಜಳ
ಕರೆದು ಮನ್ನಿಸಿ ಮನೆಗೊಟ್ಟ"[೨೩]

ಹೀಗೆ ಹೇಳುತ್ತಾ ಬಿಜ್ಜಳನು ಪ್ರೀತಿಯಿಂದ ನೀನು ತನ್ನ ರಾಜಧಾನಿಗೆ ಬಂದು ವಾಸಿಸಲು ಆದೇಶ ನೀಡಿದ. ಬಿಜ್ಜಳನ ಮಗ್ಗುಲಲಿದ್ದ ಬಸವಣ್ಣನನ್ನು ಕಂಡು ಹೆಗ್ಗಗೌಡ "ಬಸವನ ನೆನೆದರೆ ಭಯವಿಲ್ಲ. ಭವವಿಲ್ಲ ಬಸವನ ಭಜಿಸೆ ಸುಖಿಗಳು" ಎಂದು ಭಾವಿಸಿ ಅವನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದ. ಹೀಗೆ ಹೆಗ್ಗಗೌಡ ರಾಜಧಾನಿಗೆ ಬಂದು ನೆಲೆನಿಂತು, ಜಂಗಮ ದಾಸೋಹ ಮುಂದುವರಿಸಿದ. ಈ ಸಮಯದಲ್ಲಿ ಒಮ್ಮೆ ಹಾಲಕಂಬಿಗೆ ಸತ್ತ ಕುರಿಯನ್ನು ಕಟ್ಟಿಕೊಂಡು ಕುರುಬರು ರಾಜಧಾನಿಗೆ ಪ್ರವೇಶಿಸಿದ್ದಾರೆ ಎಂದು ಬಿಜ್ಜಳನಿಗೆ ದೂರು ನೀಡಿದರು. ಇವರ ಮಾತುಗಳನ್ನು ಕೇಳಿದ ಬಿಜ್ಜಳನು ಹೆಗ್ಗಗೌಡನ ಆದಿಯಾಗಿ ಕುರುಬರನ್ನು ಕಲ್ಯಾಣದಿಂದ ಹನ್ನೆರಡು ವರ್ಷ ಸುತ್ತಲೂ ಏಳುಗೆರೆ ಬರೆಯಿಸಿ ಇದನ್ನು ದಾಟಬಾರದೆಂದು ಆಜ್ಞೆ ಮಾಡಿದ. ಆಗ ಹೆಗ್ಗಗೌಡನು

"ಕುಲದೊಳು ಕಿಜೆದಾದರೆ ಆಚಾರದ
ನೆಲಮಾರ್ಗವು ಕಿಜೆದಲ್ಲ
ಕುಲದೊಳಧಿಕ್ಕ ಶ್ವಪಚಯ್ಯ
ನೊಲಿದು ದೀಕ್ಷೆಯ ಕೊಟ್ಟುದಜೆಯ"[೨೪]

ಕುಲದಲ್ಲಿ ಕಿರಿಯರಾದರೂ ನಮ್ಮ ನಡತೆ ಕಿರಿದಲ್ಲವೆಂದೂ, ಕುಲದಲ್ಲಿ ಭಕ್ತಿಕುಲ ಭವಿಕುಲವೆಂಬ ಎರಡು ಕುಲ ಮಾತ್ರ ಇರುವುದಾಗಿ ನಾನಾ ರೀತಿಯಿಂದ ಹೇಳಿಕೊಂಡನು. ಅದಕ್ಕೆ ಬಿಜ್ಜಳ ಕಿವಿಗೊಡಲಿಲ್ಲ.

ಇತ್ತ ಸೊನ್ನಲಾಪುರಕ್ಕೆ ಅಲ್ಲಮ ಪ್ರಭುಗಳು ಪ್ರವೇಶ ಮಾಡುತ್ತಾರೆ. ಆ ಸಮಯಕ್ಕೆ ಸಿದ್ಧರಾಮನು ಪ್ರಸಿದ್ಧಿಗಾಗಿ ಕೆರೆಬಾವಿ ಕಟ್ಟುವ ಕೆಲಸದಲ್ಲಿ ತೊಡಗಿರುತ್ತಾನೆ. ಅದನ್ನು ಅಲ್ಲಮನು ವಿರೋಧಿಸುತ್ತಾನೆ. ಸಿಟ್ಟಿಗೆದ್ದ ಸಿದ್ಧರಾಮ ಗುಡ್ಡರು ಹಿಡಿಯಲು ಹೋದರೆ ಸಿಗುವುದಿಲ್ಲ. ಕಲ್ಲಿನಿಂದ ಹೊಡೆದರೆ ಮಾಯವಾಗುತ್ತಾನೆ. ಸಿದ್ಧರಾಮ ಸಿಟ್ಟಿನಿಂದ ಹಣೆಗಣ್ಣು ತೆಗೆಯಲು ಅಲ್ಲಮನನ್ನು ಬಿಟ್ಟು ಇನ್ನುಳಿದ ಪ್ರದೇಶವು ಸುಟ್ಟು ಬೂದಿಯಾಗುತ್ತದೆ. ಕೊನೆಗೆ ಅಲ್ಲಮನ ವ್ಯಕ್ತಿತ್ವವನ್ನು ತಿಳಿದ ಸಿದ್ಧರಾಮ ಅವರಿಗೆ ವಂದಿಸಿ ಸರೂರಿಗೆ ಬರುತ್ತಾನೆ. ಮಂಕಸಿದ್ಧನಲ್ಲಿ ಮಕ್ಕಳೆಂಬ ಭಾವದಿಂದ ಚಿಕ್ಕಯ್ಯ, ಶಾಂತಯ್ಯರೆಂಬ ಕುಮಾರರಿದ್ದರು. ಸರೂರಿನಲ್ಲಿ ತಪಸ್ಸು ಮಾಡುತ್ತಿರುವ ಮಂಕಯ್ಯನನ್ನು ಸಿದ್ಧರಾಮ, ರೇವಣಸಿದ್ಧರು ಸ್ಪರ್ಶಿಸುತ್ತಲೇ ಮಂಕಸಿದ್ಧ ಎದ್ದು,

"ಹೆತ್ತೆಸಾರಿದ ಸೂಜಿಗಕಲ್ಲ ಸೂಜಿಗೆ ತೋಟಿ
ಹತ್ತಿಕೊಂಡು ಬಿಡದಂತೆ
ನಿತ್ಯ ಗುರುವೆ ಸಿದ್ಧರಾಮ ಎನುತ ಮಂಕ
ಹಸ್ತವ ಮುಗಿದೆಱರಗಿದನು"[೨೫]

ಹೀಗೆ ಸಿದ್ಧರಾಮನಿಗೆ ನಮಸ್ಕರಿಸುತ್ತಾನೆ. ಆಗ ನಿನ್ನ ಬೇಡಿಕೆ ಏನೆಂದು ಕೇಳಲು ನಮ್ಮನ್ನು

"ಏಳು ಬೇಲಿಯನೆ ಕಳೆದು ಹೊಱಹಾಕಿಯೆ
(ಮೂಲೆ) ಮೂಲೆಗೆ ಮುಟ್ಟದವರ
ಸಾಲಿಗೆ ತಂದು ಸಲಹಿದ ಬಳಿಕಲೆನ್ನ
ಪಾಲಿಸೆನುತಲೆಱಗಿದನು"[೨೬]

ಹೀಗೆ ಹೊರ ಹಾಕಿರುವ ಹೆಗ್ಗಗೌಡನಾದಿಯಾಗಿ ಎಲ್ಲ ಕುರುಬರು ಕಲ್ಯಾಣ ನಗರಕ್ಕೆ ಸೇರುವಂತೆ ಮಾಡಬೇಕೆಂದು ಭಿನ್ನವಿಸಿಕೊಳ್ಳುತ್ತಾನೆ. ಈ ಕೋರಿಕೆಯನ್ನು ಮನ್ನಿಸಿ, ತ್ರಿಪುರಾಂತ ದೇವಾಲಯದಲ್ಲಿ ಸಮಸ್ತ ಪುರಜನ, ಬಿಜ್ಜಳ, ಬಸವಾದಿ ಶರಣರು ನೆರೆಯುತ್ತಾರೆ. ಬಿಜ್ಜಳ ತನ್ನ ತಪ್ಪನ್ನು ಒಪ್ಪಿಕೊಂಡು ಬಲದೇವ, ಜಗದೇವ, ಬಸವೇಶ ಮಂತ್ರಿಗಳೊಂದಿಗೆ ಸಿದ್ಧರಾಮಯ್ಯನ ಶಿಷ್ಯನಾದ ಮಂಕಯ್ಯನ ಕೀರ್ತಿಯನ್ನು ಕೇಳಿದ. ತನ್ನ ಕಾಯವನ್ನು ದಂಡಿಸಿ ಅನ್ಯರ ಹಿತಕ್ಕಾಗಿ ಹಂಬಲಿಸಿದ ಅವನ ತ್ಯಾಗವನ್ನು ಮೆಚ್ಚಿದ. ಹೀಗೆ ಬಿಜ್ಜಳನ ತಪ್ಪನ್ನು ಸರಿಪಡಿಸಿಕೊಟ್ಟ ಬಸವಣ್ಣನಿಗೂ ತಮ್ಮ ಗುರುವಾದ ಮಂಕ ತಂದೆಗೂ ಅಲ್ಲಿಗೆ ಆಗಮಿಸಿದ ಕುರುಬರು ನಮಸ್ಕರಿಸಿದರು.

ಶಿಷ್ಯರು ಮಾಡಿದ ಪಾಪ ಗುರುವಿಗೆ ತಗಲುವಂತೆ ತಾವು ಮಾಡಿದ ಅಪಚಾರ ಮಂಕ ತಂದೆಯನ್ನು ನೋಯಿಸಿತು. ಇದನ್ನು ತಿದ್ದಿಕೊಳ್ಳುವುದಕ್ಕಾಗಿ ಪ್ರಾಣಾರ್ಪಣೆ ಮಾಡುವೆನೆಂದು ಹೆಗ್ಗಗೌಡನ ಹನ್ನೆರಡು ಜನ ಮಕ್ಕಳು ತಮ್ಮ ತಮ್ಮ ಖಡ್ಗಗಳಿಂದ ಶಿರವನ್ನು ಹರಿದುಕೊಂಡರು. ಇವರ ಲಿಂಗ ಭಕ್ತಿಗೆ ಹಾಗೂ ವ್ರತಕ್ಕೆ ಶಿವ ಮೆಚ್ಚಿ ಮತ್ತೆ ಅವರಿಗೆ ಜೀವದಾನ ಮಾಡಿದನು. ನೆರೆದ ಹೆಗ್ಗಗೌಡ ಮತ್ತು ಅವರ ಅನುಯಾಯಿ ಕುರುಬರಿಗೆ ರೇವಣಸಿದ್ಧರ ಆದೇಶದಂತೆ ಸಿದ್ಧರಾಮನು ಎಲ್ಲರಿಗೆ ವಿಭೂತಿಯನ್ನು ಕೊಟ್ಟು "ಇವರು ನಮ್ಮವರು" ಎಂದು ಸಾರಿ ಹೇಳಿದರು. ಮಂಕತಂದೆಯ ಕೃಪೆಯಿಂದ ಕಲ್ಯಾಣದಿಂದ ಬಹಿಷ್ಕೃತರಾದ ಕುರುಬರು ಕಲ್ಯಾಣ ಪಟ್ಟಣವನ್ನು ಪ್ರವೇಶಿಸಿದರು ಎಂಬುದು ಈ ಕೃತಿಯ ತಿರುಳು.

ಈ ಕೃತಿಯು ಸರೂರಿನ ಹಾಲುಮತ ಗುರುಪರಂಪರೆಯನ್ನು ಗುರುತಿಸುವುದರ ಜೊತೆಗೆ, ಮಂಕಸಿದ್ಧ ಪರಂಪರೆಯ ಒಡೆಯರ ಇತಿವೃತ್ತವನ್ನು ತಿಳಿಸಿಕೊಡುತ್ತದೆ. ಇದರ ಮೂಲ ಕಥಾ ನಾಯಕನಾಗಿ 'ಮಂಕಮರುಳ' ಕಂಡುಬರುತ್ತಾನೆ. ಸಿದ್ಧರಾಮನ ಅನುಯಾಯಿಗಳಾದ ಸಿದ್ಧಮಂಕ ಸಂಪ್ರದಾಯದವರನ್ನೇ ಮುಂದೆ ಮಂಕೊಡೆಯರು ಎಂದು ಕರೆಸಿಕೊಂಡು ಈಗಲೂ ನೆಲೆನಿಂತಿರುವ ಸಂಪ್ರದಾಯವನ್ನು ಗುರುತಿಸಬಹುದು. ಸರೂರಿನಿಂದ ಏಳು ಕಿ.ಮೀ. ದೂರದಲ್ಲಿರುವ ತೂಗುಡ್ಡ, ಸಿದ್ಧರಾಮನ ಸೊನ್ನಲಿಗೆ, ಬಸವಣ್ಣನ ಕಲ್ಯಾಣ ಸಿದ್ಧಮಂಕನ ಸರೂರು. ಹಾಗೆಯೇ ಸರೂರಿನಲ್ಲಿರುವ ಮಲ್ಲಿಕಾರ್ಜುನ ದೇವಾಲಯ ಇವೆಲ್ಲವೂ ಹಾಲುಮತ ಸಮಾಜದ ಐತಿಹಾಸಿಕ ಪರಂಪರೆಯನ್ನು ನಿರೂಪಿಸುವಲ್ಲಿ ಪ್ರಮುಖ ಆಕರಗಳಾಗಿವೆ. ಈ ಎಲ್ಲಾ ನೆಲೆಗಳ ಹಿನ್ನೆಲೆಯಲ್ಲಿ ಸರೂರಿನ ಹಾಲುಮತ ಗುರುಪರಂಪರೆಯು ಪ್ರಸಿದ್ಧವಾಗಿದೆ. ಇದರಲ್ಲಿ ಪ್ರಮುಖವಾದ ಸಂಗತಿಯೇನೆಂದರೆ, ಕುರುಬ ಜನಾಂಗವು ಮತಾಂತರಕ್ಕೆ ಒಳಗಾಗುವ ಒಂದು ಪ್ರಕ್ರಿಯೆಯಾಗಿದೆ. ಅಂದರೆ ಭಂಡಾರ ಸಂಸ್ಕೃತಿಯ ಹಾಲುಮತಸ್ಥರು ಶರಣ ಸಂಪ್ರದಾಯಕ್ಕೆ ಅಥವಾ ವಿಭೂತಿ ಸಂಸ್ಕೃತಿಗೆ ಹೊರಳುವುದರ ಮೂಲಕ ಒಂದು ಕುಲವು ತನ್ನ ನೆಲೆಯನ್ನು ಭದ್ರಪಡಿಸಿಕೊಳ್ಳುತ್ತದೆ. ಹಾಗೆಯೇ ಹನ್ನೆರಡನೆಯ ಶತಮಾನದ ಶರಣರ ಒಳಜಗಳ, ಸಮಸ್ಯೆ ಬಸವಣ್ಣನ ಸಮ್ಮುಖದಲ್ಲಿ ನ್ಯಾಯ ನಿರ್ಣಯ ಮೊದಲಾದ ಚಿಕ್ಕ ಚಿಕ್ಕ ಘಟನೆಗಳನ್ನು ಸಮಸ್ಯೆಗಳ ರೂಪದಲ್ಲಿ ಎತ್ತುವುದರ ಮೂಲಕ ಕುಲಬೇಧವನ್ನು ನಿರಾಕರಣೆ ಮಾಡುವುದರ ಮುಖೇನ ಅಂದಿನ ಸಾಮಾಜಿಕ, ಧಾರ್ಮಿಕ ಪರಿಸ್ಥಿತಿಯನ್ನು ತಿಳಿಸಿಕೊಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

೩. ಭೀಮಕವಿಯ ಹಾಲುಮತೋತ್ತೇಜಕ ಪುರಾಣ

ಭೀಮಕವಿಯು ಬರೆದಿರುವ ಈ ಕೃತಿಯು ಸರೂರಿನ ಸಂಪ್ರದಾಯದ ಹಾಲುಮತ ಗುರುಪರಂಪರೆ ಯನ್ನು ಪ್ರತಿನಿಧಿಸುವ ತಗರಪವಾಡ, ಸಿದ್ಧಮಂಕ ಚರಿತೆಯಂತೆ ಇದು ಕೂಡ ಮಹತ್ವದ ಕೃತಿಯಾಗಿದೆ. ಇದು ಸರೂರಿನ ರೇವಣಸಿದ್ಧನ ಪರಂಪರೆಯ ಅನುಯಾಯಿಗಳಾದ ಶಾಂತಯ್ಯನ ಪರಂಪರೆ

ಅಥವಾ ಶಾಂತೊಡೆಯರನ್ನು ಕುರಿತು ತನ್ನ ಕಥಾಸಾರದಲ್ಲಿ ಅಭಿವ್ಯಕ್ತಿಸುತ್ತದೆ. ಭೀಮಕವಿಯ ಹಾಲುಮತೋತ್ತೇಜಕ ಪುರಾಣವು, ಕಾಲದ ದೃಷ್ಟಿಯಿಂದ ಕುಲಾಚಾರದ ಸಂಪ್ರದಾಯ, ಗುರುಪರಂಪರೆ, ರೇವಣಸಿದ್ಧನ ಜನನ, ಹಾಲುಮತ ಸಮುದಾಯದ ಸಾಂಸ್ಕೃತಿಕ ವೀರರು, ಇವರಲ್ಲಿ ಶಾಂತಮುತ್ತಯ್ಯ ಲಿಂಗದೀಕ್ಷೆ ಪಡೆದು ಹಾಲುಮತ ಗುರುವಾಗಿ ಸಮಾಜವನ್ನು ಬೆಳೆಸಿದ. ಅದೇ ರೀತಿ ಶಾಂತಮುತ್ತಯ್ಯನಿಗೆ ರೇವಣಸಿದ್ಧನು ಮೂರಡಿ ಕಂತೆಯನ್ನು ಧರಿಸುವಂತೆ ಹೇಳಿದ್ದು, ಹೀಗೆ ಅನೇಕ ವಿಚಾರಗಳನ್ನು ಈ ಕೃತಿಯಲ್ಲಿ ಚರ್ಚಿಸಲಾಗಿದೆ. ಆದರೆ ಈ ಎಲ್ಲಾ ವಿಚಾರಗಳನ್ನು ಗಮನಿಸಿ ಪ್ರಸ್ತುತ ಸರೂರ ಹಾಲುಮತ ಸಂಪ್ರದಾಯದ ಗುರುಒಡೆಯರ ಪರಂಪರೆಗೆ ಹೇಗೆ ಪೂರಕವಾಗಿದೆ ಎಂಬುದನ್ನು ತಿಳಿಯಲು ಈ ಕೃತಿಯು ಪ್ರಮುಖ ಆಕರವಾಗಿದೆ.

ಈ ಕೃತಿಯು ವಾರ್ಧಕ ಷಟ್ಪದಿಯಲಿದ್ದು, ಒಂಭತ್ತು ಸಂಧಿಗಳು ಹಾಗೂ '೫೯೮'(ಐದುನೂರ ತೊಂಬತ್ತೆಂಟು) ಪದ್ಯಗಳಿಂದ ಕೂಡಿದೆ. ಇದರ ಕಥಾಸಾರದ ಮೂಲಕ ಗಮನಿಸುವುದಾದರೆ ಮೊದಲ ಆರಂಭದ ಸಂಧಿಯಲ್ಲಿ ಕವಿಯಾದವನು ತನ್ನ ಮನಸ್ಸಿನಲ್ಲಿರುವ ವಿಚಾರಗಳನ್ನು ಹೇಳುವುದರ ಜೊತೆಗೆ, ದೇವಾನುದೇವತೆಗಳನ್ನು ನೆನೆಯುತ್ತಾನೆ. ಈ ಕೃತಿಯ ಒಡೆಯ ರೇವಣಸಿದ್ಧನೆಂದೂ, ಜಂಬುಲಿಂಗವೆಂಬುವನ ಮಗ ಭೀಮ ಎಂಬ ಹೆಸರಿನ ತಾನು ಲಖನಾಪುರದಗೌಡ ಹನುಮಂತರೆಡ್ಡಿ ಎಂಬ ಗುರುವಿನ ದಯದಿಂದ ಈ ಕೃತಿಯನ್ನು ರಚಿಸಿರುವುದಾಗಿ ಹೇಳಿಕೊಳ್ಳುತ್ತಾನೆ. ಹರಿಹರ, ವರಕಾಳಿದಾಸ, ಪಾಲ್ಕುರಿಕೆ ಸೋಮನಾಥ, ಗುರು ಪಂಡಿತ, ರಾಘವಾಂಕ, ನಿಜಗುಣಾರಾಧ್ಯ ಹೀಗೆ ಅನೇಕ ಕವಿಗಳನ್ನು ನೆನೆಯುತ್ತಾರೆ. ಇದನ್ನು ಓದಿದವರಿಗೂ ಮತ್ತು ಕೇಳಿದವರಿಗೂ ಸನ್ಮತಿ ದೊರೆಯುತ್ತದೆಂದು ಪ್ರತಿ ಸಂಧಿಯ ಕೊನೆಯಲ್ಲಿ ಹೇಳುವನು. ಎರಡನೇ ಸಂಧಿಯಲ್ಲಿ ರೇವಣಸಿದ್ಧೇಶ್ವರ ಚರಿತ್ರೆಯ ಕುರಿತು ಚಾರಿತ್ರಿಕ ಹಿನ್ನೆಲೆಯಲ್ಲಿ ಕಟ್ಟಿಕೊಡಲಾಗಿದೆ. ರೇವಣಸಿದ್ಧನ ಜನನ ಕೊಲ್ಲಿಪಾಕಿಯ ಸೋಮಲಿಂಗದಲ್ಲಿ ಆಗುತ್ತದೆ. ತನ್ನ ಲೀಲೆಗಳನ್ನು ತೋರಿಸುತ್ತಾ ದೇಶ ಪರ್ಯಟನೆಯಾಗಿ ಸರೂರಿಗೆ ಬರುತ್ತಾನೆ. ಅಲ್ಲಿ ಕುರಿಹಿಂಡನ್ನು ಮೇಯಿಸುತ್ತಿರುವ ಶಾಂತಮುತ್ತಯ್ಯನೆಂಬ ಶಿವಭಕ್ತನಿರುತ್ತಾನೆ. ಇವನಿಗೆ ಸೋಯಿಮುತ್ತಯ್ಯ, ಜಗಮುತ್ತಯ್ಯ, ಲಲಿತ ಮುತ್ತಯ್ಯ ಎಂಬ ಮೂರು ಜನ ಮಕ್ಕಳಿರುತ್ತಾರೆ. ಅವರು ಕುರಿಗಳನ್ನು ಸಲಹುತ್ತ ಆನಂದದಿಂದ ಜೀವನ ಸಾಗಿಸುತ್ತಿರುವಾಗ.

"ತುರುಗಳ ಪಾಲಿಸುತ್ತಲ್ಲಾಸದಂಕೆ ಸಂ
ಚರಿಸಿ ಕಲ್ಲಿನ ಕೆರೆಯ ಭಾಗದಲ್ಲಿ ನಿಲಯಮಂ
ವಿರಟಿಸುತ ಪ್ರೇಮದಿಂಚರರಿಂಗೆ ಚೆನ್ನೆ
ರಡು ಕಂಬಿ ಪಾ ಹರುಷದಿಂದಿರಲಿಲ್ಲಗಭಸುತೆ ಸಿದ್ಧೇಂದ್ರ ಲೊಟ್ಟು ಸತತ
ನಿರದೆ ಬಂದವೃತಮಂ ನೀಡೆಂದು ಸಮ್ಮೋಹ
ವೆರಸಿ ನಿಲ್ಲಲು ಶಾಂತಮುತ್ತಯ್ಯ ಕಂಡು ಪದ ಪದ್ಮಕಭಿವಂದಿಸಿದನು"[೨೭]

ಹೀಗೆ ಶಾಂತಮುತ್ತಯ್ಯ ದಿನನಿತ್ಯ ಹನ್ನೆರಡು ಕಂಬಿ ಹಾಲನ್ನು ಹಿಂಡಿ ಬೇಡಿದವರಿಗೆ ದಾನ ಮಾಡುತ್ತಿರುತ್ತಾನೆ. ಇಂತಹ ಸಂದರ್ಭದಲ್ಲಿ ದೇಶ ಸಂಚಾರಿಯಾದ ರೇವಣಸಿದ್ಧನು ಬಂದು ಅಮೃತವನ್ನು ದಾನ ನೀಡೆಂದು ಕೇಳುತ್ತಾನೆ. ಆಗ ಶಾಂತಮುತ್ತಯ್ಯನು ಅವನ ಪಾದಕಮಲಕ್ಕೆ ನಮಸ್ಕರಿಸುತ್ತಾನೆ. ಆಗ ರೇವಣಸಿದ್ಧನು ಶಾಂತಮುತ್ತಯ್ಯನ ಉದಾರ ಮನಸ್ಸಿಗೆ ಮೆಚ್ಚಿ ಈ ಕುರುಬರ ಮನೆತನದಲ್ಲಿ ಜನಿಸಿದ ನಿನಗೆ "ನೀನಂದ ನುಡಿಗಳು ಸಿದ್ಧಿಸಲಿ ಭೂಮಿಯ ಮೇಲೆ" ಎಂದು ಆಶೀರ್ವಾದ ಮಾಡುತ್ತಾನೆ. ಅನಂತರ ರೇವಣಸಿದ್ಧನು ಶಿವನ ಸದ್ಭಕ್ತಿ ಲೀಲೆಗಳನ್ನು ಬೋಧಿಸಿ, ಶಾಂತಮುತ್ತಯ್ಯನಿಗೆ ಲಿಂಗದೀಕ್ಷೆಯನ್ನು ರೇವಣಸಿದ್ಧರು ಒಂದು ಶುಭ ಸಂದರ್ಭದಲ್ಲಿ ನೀಡುತ್ತಾರೆ.

"ಲಿಂಗದೀಕ್ಷೆಯನ್ನಿತ್ತು ಕ್ಷೀರಕುಲವೃಕ್ಷ
ನಂಗೊಳಿಸಿ ಗುರುಕಂಕಣವಧರಿಸಿ ಕರಕೆತನ
ಕಂಗೊಳಿಪತೆರದಿ ಪಟ್ಟವಗಟ್ಟಿ ಗುರುನಾಮ ಶಾಸನವಗೈದುಮುತೆಂ
ತುಂಗವರೇವಣಸಿದ್ಧ ಶಾಂತಮುತ್ತಯ್ಯಂಗೆ
ವೆಂಗದೆ ಕುತೂಹಲದೊಳಾಶಿರ್ವಚಿಸಿದಯಾ
ಪಾಂಗದಿಂ ಪಾಲ್ಯವಿದು ಬಳಕಲ್ಲಿಂದ ನಡೆದು ಬಾಂದಳ ಮಾರ್ಗಕೆ"೨೮

ಹೀಗೆ ರೇವಣಸಿದ್ಧರು ಶಾಂತಮುತ್ತಯ್ಯನಿಗೆ ಲಿಂಗದೀಕ್ಷೆಯನ್ನು ಕೊಟ್ಟು ಗುರುಕಂಕಣವನ್ನು ಕಟ್ಟಿ, ಗುರುನಾಮ ಶಾಸನವನ್ನು ರಚಿಸಿ ಕುರುಬ ಕುಲಕ್ಕೆ ಅಧ್ಯಕ್ಷನನ್ನಾಗಿ ಮಾಡಿದ ವಿಚಾರಗಳನ್ನು ಗಮನಿಸಬಹುದಾಗಿದೆ. ಹಾಗೆಯೇ ಮೂಲತಃ ಕುರುಬನೂ, ಭಕ್ತನೂ ಆಗಿರುವ ಶಾಂತಮುತ್ತಯ್ಯನಿಗೆ ಸರೂರಿನಲ್ಲಿ ದೀಕ್ಷೆಯನ್ನು ನೀಡಿ ಅನೇಕ ಕಡೆಯಲ್ಲಿ ನೆಲೆನಿಂತಿರುವ ಕುಲಸ್ಥರಿಗೆ, ರೇವಣಸಿದ್ಧರು ತಮ್ಮ ಕಾರ್ಯಗಳನ್ನು ಪೂರೈಸಲು ಶಿಷ್ಯರನ್ನು ನೇಮಿಸುತ್ತಿದ್ದರು ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ರೇವಣಸಿದ್ಧರು ಬಿಜ್ಜಳರಾಯನಲ್ಲಿ ಬಂಧಿಯಾಗಿದ್ದ ಹನ್ನೆರಡು ಸಾವಿರ ಬಾಲೆಯರನ್ನು ಕಾಪಾಡುವನು. ಅದಕ್ಕೆ ಪ್ರತಿಯಾಗಿ ಬಿಜ್ಜಳನ ಮಗಳನ್ನು ಮದುವೆಯಾಗುವನು. ಸಮಾಜದ ಉದ್ಧಾರಕ್ಕಾಗಿ ಕೆರೆಯನ್ನು ಕಟ್ಟಲು ಮುಂದಾದಾಗ ಚೋಳರಾಜನ ಮಗಳು ಗರ್ಭವತಿಯಾಗಿರುವುದನ್ನು ಕಂಡು ಆಕೆಯ ಗರ್ಭವನ್ನು ಸೀಳಿ ಮೂರು ತಿಂಗಳ ಪಿಂಡವನ್ನು ಹೊರತೆಗೆದು ಕೆರೆಯದಂಡೆಯಲ್ಲಿ ಹೂಳಿಟ್ಟ ನಂತರ ಅದನ್ನು ಆರು ತಿಂಗಳ ನಂತರ ತೆಗೆಯಲು ಸಿದ್ಧ ಪ್ರತಿರೂಪದಂತಿರುವ ಶಿಶು ಗೋಚರಿಸುತ್ತದೆ. ಅದಕ್ಕೆ ರುದ್ರಮುನಿ ಎಂದು ನಾಮಕರಣ ಮಾಡಿ ಬಿಜ್ಜಳ ರಾಯನ ಮಗಳಿಗೆ ಒಪ್ಪಿಸುವರು. ಆ ಮಗು ಬೆಳೆದು ದೊಡ್ಡವನಾದ ನಂತರ ರೇವಣರು ವೀರಶೈವ ದೀಕ್ಷೆಯನ್ನು ಕೊಟ್ಟು ತತ್ವ ಬೋಧಿಸುವರು. ಇದರಿಂದ ನಮಗೆ ಸೂಕ್ಷ್ಮವಾಗಿ ತಿಳಿಯುವುದೇನೆಂದರೆ ಕುರುಬ ಕುಲದಲ್ಲಿಯೂ ಲಿಂಗದೀಕ್ಷೆಯ ಮೂಲಕ ವೀರಶೈವೀಕರಣಗೊಂಡಿರುವುದಾಗಿ ತಿಳಿದುಬರುತ್ತದೆ.

ನಂತರ ಸಿದ್ಧರಾಮನ ಕಥೆಯನ್ನು ಹೇಳುತ್ತಾ ಸರೂರಿನ ಪರಿಸರದಲ್ಲಿ ಶಾಂತಮುತ್ತಯ್ಯ ಜನರಿಗೆ ಹಾಲುಕೊಡುತ್ತಾ ಸುಖದಿಂದ ಬಾಳುತ್ತಿದ್ದರು. ಅಲ್ಲಿಯ ಸಿದ್ಧರು ವಾದ ಮಾಡಲು ಅವರನ್ನು ಗೆದ್ದು ನರಕುರಿಗಳನ್ನಾಗಿ ಮಾಡಿ, ನಂತರ ಮುಂತಾಸುರನನ್ನು ಕೊಂದು ಮೂರು ಭಾಗ ಮಾಡಿ ಮೂರಡಿಯ ಕಂಚೆಗಳಾಗಿ ಮಾಡಿ ಧರಿಸೆಂದು ಗುರು ರೇವಣಸಿದ್ಧ ಶಾಂತಮುತ್ತಯ್ಯನಿಗೆ ಹೇಳಲು ಗುರುವಿನ ಆಜ್ಞೆಯನ್ನು ಪಾಲಿಸಿ ಜಗತ್ಪ್ರಸಿದ್ಧನಾದನು. ಕುರಿಗಳ ಉಣ್ಣೆಯಿಂದ ಕಂಬಳಿ, ಗದ್ದುಗೆ, ಗುರು ಪಾದ ಪೂಜೆಗೆ ಉಪಯೋಗವಾಗುವ, ಡೊಳ್ಳು ವಾದ್ಯವಾಗಲಿ ಎಂದು ಶಾಂತಮುತ್ತಯ್ಯನಿಗೆ ರೇವಣಸಿದ್ಧರು ಆಶೀರ್ವದಿಸಿದರು.

“ಮೇಷಗಳ ರೋಮಗುರ್ವಾಸನಕ್ಕೆ
ನಿಚ್ಚಳದ ಗದ್ದುಗೆಯ ಚರ್ಮ ಗುರುಪಾದ ಪೂಜೆ
ಗುಚ್ಚಿಕಂಗೊಡವ ಘನ ವಾದ್ಯಂಗಳಾಗವೆಂ
ದುಚ್ಚರಿಸಿ ಶಾಂತಮುತ್ತಯ್ಯಗಾಶೀರ್ವದಿಸಿ ಮೇಘ ಮಾರ್ಗಕ್ಕೆ ಜಗಿದ”೨೯

ಹೀಗೆ ಈ ಕಾವ್ಯದಲ್ಲಿ ಲಿಂಗಾಪೇಕ್ಷೆಯಾದ ಶಾಂತಮುತ್ತಯ್ಯನಿಗೆ ರೇವಣಸಿದ್ಧರು ಲಿಂಗದೀಕ್ಷೆಯನ್ನು ಕೊಟ್ಟು ಮಾಯವಾದರು ಎಂಬ ವಿಚಾರಗಳು ಅದರಿಂದ ತಿಳಿದುಬರುತ್ತದೆ. ಒಟ್ಟಾರೆ ಈ ಸಂಗತಿಗಳನ್ನು ಗಮನಿಸಿದಾಗ ಸರೂರಿನಲ್ಲಿ ವಾಸವಾಗಿರುವ ಭಕ್ತನಾಗಿರುವ ಶಾಂತಮುತ್ತಯ್ಯನಿಗೆ ದೀಕ್ಷೆಯನ್ನು ಕೊಟ್ಟು ಕುರುಬರಿಗೆ ಕುಲಗುರುವನ್ನಾಗಿ, ಒಡೆಯನನ್ನಾಗಿ ಮಾಡಿದ ವಿಷಯವು ಇದರಿಂದ ತಿಳಿದು ಬರುತ್ತದೆ.

೪ ಹಾಲುಮತ ಪುರಾಣ(೧೯೧೦)

ಬಂಕಾಪುರದ ಬಸವಣ್ಣಪ್ಪ ನೀಲಪ್ಪ ಹಳವಳ್ಳಿ ಅವರು ತಾಡೋಲೆಯಿಂದ ಅಭ್ಯಾಸಮಾಡಿ ಈ ಕೃತಿಯನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಇದು ಕುರುಬರ ಗುರುಪರಂಪರೆಯ ಮುಂದುವರಿಕೆಯನ್ನು ಗುರುತಿಸಲು ಪ್ರಮುಖ ಸಾಹಿತ್ಯ ಆಕರವಾಗಿದೆ. ವಿಶೇಷವಾಗಿ ಈ ಕಾವ್ಯವು ಸರೂರು ಹಾಲುಮತ ಸಂಪ್ರದಾಯವನ್ನು ಪ್ರತಿನಿಧಿಸುವ ಸಾಹಿತ್ಯ ಕೃತಿಯಾಗಿದೆ. ಅಂದರೆ ತಗರ ಪವಾಡ, ಸಿದ್ಧಮಂಕ ಚರಿತೆ ಇವುಗಳ ಮುಂದುವರಿಕೆಯಾಗಿದೆ. ಇದರಲ್ಲಿ ಸರೂರಿನ ಗುರುಪರಂಪರೆಯ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ಯಾವ ರೀತಿಯಲ್ಲಿ ಉನ್ನತಿಕರಿಸಿದೆ ಎಂಬುದನ್ನು ಗಮನಿಸುವುದಾದರೆ, ಇದು ಐದು ಸಂಧಿಗಳು ಹಾಗೂ ೪೧೫ ಸಾಂಗತ್ಯ ಪದ್ಯಗಳನ್ನು ಹೊಂದಿದೆ. ಆರಂಭದ ಸಂಧಿಯಲ್ಲಿ

“ಪ್ರಾರಂಭದಲ್ಲಿ ಕವಿ ಗುರುವಿಗೆ ವಂದಿಸುತ್ತ
ಕರಿಯ ಕಂಬಳಿ ಕಂಥೆಕರದಲ್ಲಿ ಕಪ್ಪರ

ವರನಾಗ ಬೆತ್ತವ ಹಿಡಿದು
ದರಿಯ ಬ್ರಹ್ಮಾಂಡವ ಚರಿಸಿ ಭಿಕ್ಷವಕೇಳ್ವೆ
ಸರವೂರ ಸಿದ್ಧೇಶ್ವರಗೆ ಶರಣು"[೩೦]

ಹೀಗೆ ಗುರುವಾದ ಸರೂರು ಸಿದ್ಧೇಶ್ವರನಿಗೆ ನಮಸ್ಕರಿಸುತ್ತಾ ಕಾವ್ಯವನ್ನು ಆರಂಭಿಸುತ್ತಾರೆ. ಈ ಕಾವ್ಯದ ಸಂಧಿ ಮೂರರಿಂದ ಮರುಳಸಿದ್ಧಯ್ಯನ ಚರಿತೆ ಪ್ರಾರಂಭವಾಗುತ್ತದೆ. ಇವನು ಈ ಕಾವ್ಯದ ನಾಯಕನಾಗಿ ಜಾತಿಯಿಂದ ಕುರುಬನೆಂದು ಹೇಳಿಕೊಂಡಿದ್ದಾನೆ. ಇವನು ಸರೂರಿನಿಂದ ೨.೩ ಕಿ.ಮೀ. ದೂರದ ತೂಗುಡ್ಡದಲ್ಲಿ ತಪಸ್ಸು ಮಾಡಿದ ವಿಚಾರವನ್ನು ಪ್ರಸ್ತಾಪಿಸುತ್ತಾನೆ. ಅಂದರೆ ಶಿವನು ಮರುಳಸಿದ್ಧನಿಗೆ ಹನ್ನೆರಡು ಸೂಜಿ, ಹನ್ನೆರಡು ಡಬ್ಬಣ ಕೊಟ್ಟು ಭೂಮಿಯನ್ನು ತೂಗುತ್ತಾ ಹೋಗು, ಎಲ್ಲಿ ಭೂಮಿ ಒಂದು ಗುಂಜಿ ಹೆಚ್ಚಾಗುವುದೊ ಅಲ್ಲಿ ತಪೋಧರನಾಗು ಎಂದು ತಿಳಿಸುತ್ತಾನೆ. ಸಿದ್ಧರಾಮನು ಶಿವನಿಂದ ಮರುಳಸಿದ್ಧೇಶ ಎಂಬ ಹೊಸ ಹೆಸರನ್ನು ಪಡೆದು

"ತೂಗುತ ಬರಲು ಧರೆಯೊಳಗೆ
ತೂಗುಡ್ಡವೆಂಬಾ ಸ್ಥಳದಲ್ಲಿ
ತೂಗಿ ನೋಡಲು ಭೂಮಿಯ ತೂಕ ವೆಗ್ಗಳವಾಗಿ
ಜಾಗ ಮಾಡಿದ ಸ್ಥಲವ"[೩೧]

ಹೀಗೆ ತೂಗುಡ್ಡದಲ್ಲಿ ತಪಸ್ಸು ಮಾಡಲು ಆರಂಭಿಸುತ್ತಾನೆ.

"ಗುಲಗಂಜಿ ಸೂಜಿಯ ನಿಲಿಸಿ ವೊಂದರ ಮೇಲೆ
ಒಲಿದು ದಬ್ಬಣ ಅಡಿಕೆಗಳ
ಗೆಲವಿಂದ ಏರಿಸಿ ತಲೆಯ ಪಾದಗಳನು । ರ
ದಲಂತು ತಪವ ಮಾಡಿದರು"[೩೨]

ಹೀಗೆ ತಪವು ಮಾಡಿದ ವಿಚಾರಗಳನ್ನು ಗಮನಿಸಬಹುದು. ಆದರೆ ಅವರ ತಪಸ್ಸು ಯಾವ ಪರಿಣಾಮದಲ್ಲಿತ್ತು ಎಂಬುದಕ್ಕೆ ಈ ಮುಂದಿನ ಕಾವ್ಯವು ಪ್ರಸ್ತಾಪಿಸುತ್ತದೆ.

"ಹುತ್ತ ಮೈಯೊಳಗಿಕ್ಕಿ ಬೆತ್ತ ಬೆಳ್ಳಿಯು ಹಬ್ಬಿ
ವೆತ್ತ ಗೀಜುಗನ ಮನೆ ಮಾಡಿ
ಕತ್ತಲು ಹಗಲು ಎಂದರಿಯದೆ ತಪಸನು
ವಿಸ್ತರಿಸುವದಳಲ್ಲ"[೩೩]

ಸಿದ್ಧಮಂಕ ತೂಗುಡ್ಡದಲ್ಲಿ ಕಠಿಣ ತಪಸ್ಸು ಮಾಡುತ್ತಿರುವ ವಿಷಯವನ್ನು ನಾರದರಿಂದ ಶಿವ ಪಾರ್ವತಿಯರು ತಿಳಿದು ನೋಡಲು ಬಂದರು. ಶಿರವಡಿಯಾಗಿ ಕಾಲು ಮೇಲಾಗಿ ಭಯಂಕರವಾದ ತಪವನ್ನು ಮಾಡುತ್ತಿರುವ ಮರುಳಸಿದ್ಧನಿಗೆ ವರವನು ಕೇಳೆಂದಾಗ, ಆಗ ತನ್ನನ್ನು ಕುರುಬ ಕುಲಕ್ಕೆ ಗುರುವನ್ನಾಗಿ ಮಾಡಿರಿ. ಅದೇ ರೀತಿ ಕಲ್ಯಾಣ ಪಟ್ಟಣದಿಂದ ಹೊರಹಾಕಲ್ಪಟ್ಟ ಕುರುಬರನ್ನು ಮತ್ತೇ ಒಳ ಪ್ರವೇಶಿಸುವಂತೆ ಮಾಡು ಎಂದು ಕೇಳಿಕೊಳ್ಳುತ್ತಾನೆ. ಇದರಲ್ಲಿ ಪ್ರಮುಖವಾಗಿ ರೇವಣಸಿದ್ಧನು ಸತ್ತ ತಗರನ್ನು ಬಸವಾದಿ ಪ್ರಮಥರ ಸಮ್ಮುಖದಲ್ಲಿ ಬದುಕಿಸಿ ಕಲ್ಯಾಣವನ್ನು ಪ್ರವೇಶಿಸುತ್ತಾನೆ. ಹೀಗಾಗಿ ಈ ಕೃತಿಯು ಸಿದ್ಧಮಂಕ ಚರಿತೆಯ ಪ್ರತಿಕೃತಿಯಂತಿದೆ. ಇದರ ನಾಯಕ ಮರುಳಸಿದ್ಧ ನಾಗಿದ್ದಾನೆ. ಶಾಸನಗಳು ಮತ್ತು ಸಿದ್ಧಮಂಕ ಚರಿತೆ ಕೃತಿಯಲ್ಲಿ ಈತನನ್ನು ಮಂಕಸಿದ್ಧ, ಮಂಕುಮರುಳ, ಮಂಕಯ್ಯ, ಸಿದ್ಧಮಂಕ ಎಂದು ಕರೆದಿರುವ ವಿಚಾರಗಳು ತಿಳಿದುಬರುತ್ತವೆ.

ಇಲ್ಲಿಯೂ ಪ್ರಮುಖವಾಗಿ ಭಂಡಾರದಿಂದ ವಿಭೂತಿಯತ್ತ ವಾಲುವ ಸಾಂಸ್ಕೃತಿಕತೆಯನ್ನು ಕಾಣಬಹುದು. ಒಟ್ಟಾರೆ ಹಾಲುಮತ ಸಾಂಸ್ಕೃತಿಕ ಪರಂಪರೆಯನ್ನು ತಿಳಿಸುವಲ್ಲಿ ಹಾಗೂ ಗುರುಪರಂಪರೆಯ ಇತಿಹಾಸವನ್ನು ಪ್ರಾಚೀನದತ್ತ ಮುಖ ಮಾಡಿ ನೋಡಲು ಇದೊಂದು ಪ್ರಮುಖ ಆಕರವಾಗಿದೆ. ಈ ರೀತಿಯಾಗಿ ಸರೂರಿನ ಗುರುಪರಂಪರೆಯ ಹಿರಿಮೆಯನ್ನು ಹೆಚ್ಚಿಸಿದೆ.

೫. ಚನ್ನಬಸವ ಕವಿಯ ಹಾಲುಮತ ಪುರಾಣ

ಈ ಕೃತಿಯು ಕುರಬರ ಆರಾಧ್ಯ ದೈವಗಳಾದ ಶಿವಸಂಭೂತರಾದ ಶಿವಪದ್ಮ, ಶಿವಸಿದ್ಧ ಬೀರೇಶ್ವರ, ಮಾಳಿಂಗರಾಯ, ಶಾಂತಮುತ್ತಯ್ಯ, ರೇವಣಸಿದ್ಧ ಮೊದಲಾದವರ ಉಪಕಥೆಗಳನ್ನು ಹೊಂದಿದೆ. ಇದು ಭೀಮಕವಿಯ ಹಾಲುಮತೋತ್ತೇಜಕ ಪುರಾಣದ ಕಥೆಯನ್ನು ಹೋಲುತ್ತದೆ. ಭೀಮಕವಿಯು ವಾರ್ಧಕ ಷಟ್ಪದಿಯಲ್ಲಿ ಬರೆದರೆ, ಚನ್ನಬಸವ ಕವಿ ಸಾಂಗತ್ಯದಲ್ಲಿ ರಚಿಸಿದ್ದಾರೆ. ಪ್ರಸ್ತುತ ಸರೂರು ಸಂಪ್ರದಾಯಕ್ಕೆ ಪೂರಕವಾಗುವಂತೆ, ಕೆಲವು ವಿಚಾರಗಳನ್ನು ನೋಡುವುದಾದರೆ; ಈ ಕೃತಿಯ ಎರಡನೇ ಸಂಧಿಯಲ್ಲಿ ರೇವಣಸಿದ್ಧೇಶ್ವರನ ಲಿಂಗಾವತಾರ ಮತ್ತು ಭುವನೋದ್ಧಾರ ಮಾಡುತ್ತಾ ಸರೂರು ಶಾಂತಮುತ್ತಯ್ಯನಿಗೆ ಲಿಂಗಪ್ರಧಾನ ಮಾಡುತ್ತಾ ಶಾಂತಮುತ್ತಯ್ಯನ ಮಕ್ಕಳಾದ

> "ಸುವಿಮುತ್ತಯ್ಯ, ಜಗಮುತ್ತಯ್ಯನು
> ವಿವರಿಸೆ ಲಲಿತ ಮುತ್ತಯ್ಯ
> ಕುವರರಿವರ ಮನದಿರವನೇನೆಂಬನು
> ಭುವನದೊಳಾದರ್ಶವದು"[೩೪]

ಶಾಂತಮುತ್ತಯ್ಯನ ಮಕ್ಕಳ ಪ್ರಸ್ತಾಪದೊಂದಿಗೆ ರೇವಣಸಿದ್ಧರು ಲೋಕದೊಳಗಣ ಅಂಕು ಡೊಂಕು ಗಳನ್ನು ಸುಧಾರಿಸುವ ಸಮಾಜ ಕಾರ್ಯಗಳೊಂದಿಗೆ ಶಾಂತಮುತ್ತಯ್ಯನಿಗೆ ಲಿಂಗದೀಕ್ಷೆಯನಿತ್ತು

ಹಾಲುಮತದವರಿಗೆ ಗುರುವಾಗಿಸಿ, ಜೀವನದ ಮುಖ್ಯ ವಿಚಾರಗಳನ್ನು ಬೋಧಿಸಿದರು. ಗುರುವಿನ ಅಪ್ಪಣೆ ಮೇರೆಗೆ ಶಾಂತಮುತ್ತಯ್ಯ ಕೊಲ್ಲಾಪುರದ ಕುಟಿಲ ಸಿದ್ಧರನ್ನು ನಿಗ್ರಹಿಸಿ ಬರುವಾಗ ಎದುರಾದ ಮುಂಡಾಸುರ ರಾಕ್ಷಸನನ್ನು ಮೂರು ಹೋಳಾಗಿಸಿ ಇವರ ಜ್ಞಾಪಕಾರ್ಥವಾಗಿ ಮುರುಡಿನ ಕಂಥೆ ಎಂಬ ಬಿರುದನ್ನು ಗುರುವಿನಿಂದ ಪಡೆಯುತ್ತಾನೆ. ಶಿಷ್ಯರ ಮೇಲೆ ದಂಡನ ಖಂಡನಾದಿಗಳನ್ನು ನಡೆಸಬೇಕಾದ ಕಾರಣ ಹಾಲುಮತದವರಿಗೆಲ್ಲಾ 'ಒಡೆಯರು' ಎನ್ನುವ ಪ್ರತೀತಿ ಇರಲೆಂದು ರೇವಣಸಿದ್ಧ ಅನುಗ್ರಹಿಸಿದನು. ಹಾಗೆಯೇ ಶಾಂತಮುತ್ತಯ್ಯನನ್ನು ಕುರುಬರ ಕುಲಗುರುವಾಗಿ ಮಾಡಿದನು. ಮುಂದೆ ಕಲ್ಯಾಣ ಪಟ್ಟಣದಲ್ಲಿ ನೆರೆದ ಶರಣರ ಎದುರು ಸತ್ತಿರುವ ತಗರೊಂದನ್ನೂ ಬದುಕಿಸಿ ಬಸವಾದಿ ಶರಣರಿಂದ ಮತ್ತು ಅರಸ ಬಿಜ್ಜಳನಿಂದ ಮೆಚ್ಚುಗೆಯನ್ನು ಪಡೆಯುತ್ತಾನೆ. ಇದರಿಂದ ಕುರುಬರ ಕುಲಕ್ಕೆ ಗುರುತನವು ದೊರಕಿರುವುದು ತಿಳಿದುಬರುತ್ತದೆ. ಇದರ ನೆನಪಿಗಾಗಿ ಬಸವಣ್ಣನವರಿಂದ 'ಮೂರೇಣಿನ ಕಂಥೆ'ಯನ್ನು ಚೆನ್ನಬಸವ ಕಾಣಿಕೆಯಾಗಿ ಪಡೆಯುತ್ತಾನೆ.

"ಹಾಲುಮತದ ಕುಲದವರ್ಗೆಲ್ಲ ಶಾಂತ್ತಯ್ಯ
ಲೋಲ ನೀನೇ ಗುರುವಾಗಿ
ಭೂಲೋಕದೊಳು ಕೀರ್ತಿವಂತನೆನಿಸಿಕೊಂಡೆ
ಮೇಲಾಗಿ ಕುಲವನುದ್ಧರಿ"[೩೭]

ಈ ರೀತಿಯಾಗಿ ಹೇಳುತ್ತಾ ಬಸವಣ್ಣನು ಶಾಂತಮುತ್ತಯ್ಯನ ಹಣೆಗೆ ವಿಭೂತಿಯನ್ನು ಹಚ್ಚಿ ಹಾಲುಮತದವರಿಗೆಲ್ಲ ನೀವು ಕುಲಗುರುಗಳಾಗಿರಿ ಎಂದು ಹೇಳುತ್ತಾನೆ.

ಒಟ್ಟಾರೆ ಇದರಿಂದ ತಿಳಿಯುವುದೇನೆಂದರೆ, ಭಂಡಾರ ಸಂಸ್ಕೃತಿಯನ್ನು ಬಿಟ್ಟು ವಿಭೂತಿ ಸಂಸ್ಕೃತಿಯ ದೀಕ್ಷೆ ಕೊಡುವುದರ ಮೂಲಕ ಅದನ್ನು ರೂಢಿಸಿಕೊಂಡಿರುವುದು ತಿಳಿದುಬರುತ್ತದೆ. ಅಂದರೆ ಮೂಲತಃ ಭಂಡಾರ ಸಂಸ್ಕೃತಿಯನ್ನು ಅಳವಡಿಸಿಕೊಂಡು ಬರುತ್ತಿರುವ ಕುರುಬ ಸಮುದಾಯಕ್ಕೆ ರೇವಣಸಿದ್ಧನ ಅನುಗ್ರಹದಿಂದ, ವಿಶೇಷವಾಗಿ ಶಾಂತಮುತ್ತಯ್ಯನ ಆದರ್ಶಶಕ್ತಿಯಿಂದ ವಿಭೂತಿ ಸಂಸ್ಕೃತಿ ದೊರೆಯಿತು ಹಾಗೂ ಪುರೋಹಿತ್ಯ ಸ್ಥಾನಮಾನ ಪ್ರಾಪ್ತವಾಗಿರುವುದು ನಮಗೆ ತಿಳಿದು ಬರುತ್ತದೆ.

ಇಂತಹ ಪುರೋಹಿತ್ಯವನ್ನು ಅಥವಾ ಕುರುಬರ ಕುಲಗುರುಗಳಾಗಿ, ಗುರುಒಡೆಯರಾಗಿ, ಉನ್ನತ ಸ್ಥಾನಮಾನವನ್ನು ಪಡೆದುಕೊಂಡ ಶಾಂತಮುತ್ತಯ್ಯನನ್ನು ಗುರುತಿಸುತ್ತದೆ. ಈತನು ಸರೂರು ಪರಿಸರದ ಸಾಂಸ್ಕೃತಿಕ ವೀರನಾಗಿದ್ದಾನೆ. ಆದ್ದರಿಂದ ಈ ಸಾಂಗತ್ಯ ಕಾವ್ಯವು ಪ್ರಸ್ತುತ ಸರೂರ ಹಾಲುಮತ ಗುರುಪರಂಪರೆಯಲ್ಲಿ ಬರುವ ಶಾಂತಮುತ್ತಯ್ಯನ ಅನುಯಾಯಿಗಳಾದ ಶಾಂತೊಡೆಯರನ್ನು ಗುರುತಿಸಲು ಸಹಾಯವಾಗಿದೆ.

ತೌಲನಿಕ ವಿವೇಚನೆ

ಕುರುಬರ ಗುರುಪರಂಪರೆಯನ್ನು ತಿಳಿಸುವಲ್ಲಿ ಮತ್ತು ಅವರ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ಅನಾವರಣ ಮಾಡುವಲ್ಲಿ ಕೆಲವು ಕೃತಿಗಳು ಪ್ರೇರಣೆಯಾಗಿವೆ. ಅವುಗಳಲ್ಲಿ ತಗರ ಪವಾಡ, ಸಿದ್ಧಮಂಕ ಚರಿತೆ, ಹಾಲುಮತೊತ್ತೇಜಕ ಪುರಾಣ, ಚನ್ನಬಸವ ಕವಿಯ 'ಹಾಲುಮತ ಪುರಾಣ' ಬಸವಣ್ಣಪ್ಪ ನೀಲಪ್ಪ ಹಳವಳ್ಳಿ ಅವರ 'ಹಾಲುಮತ ಸಂಪ್ರದಾಯದ ಗುರುಒಡೆಯರ ಪರಂಪರೆ' ಕೃತಿಗಳು ಸರೂರು ಗುರುಒಡೆಯರ ಚಾರಿತ್ರಿಕ ಪರಂಪರೆಯನ್ನು ತಿಳಿಸಿಕೊಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅವುಗಳಲ್ಲಿ ಮುಖ್ಯವಾಗಿ ತಗರ ಪವಾಡ, ಸಿದ್ಧಮಂಕ ಚರಿತೆ ಈ ಎರಡೂ ಕೃತಿಗಳು ಒಂದೇ ಆಶಯವನ್ನು ವ್ಯಕ್ತಪಡಿಸುತ್ತವೆ. ಕಲ್ಯಾಣಪಟ್ಟಣದಲ್ಲಿರುವ ಕುರುಬರು ಹಾಲಕಂಬಿಯ ಮೇಲೆ ಸತ್ತ ಕುರಿ ಮಾಂಸವನ್ನು ಊರೊಳಕ್ಕೆ ತಂದು ಮಾರಿದ ಪರಿಣಾಮದಿಂದಾಗಿ ಅಲ್ಲಿನ ಶರಣರು ಕುರುಬರನ್ನು ರಟ್ಟಮತದವರೆಂದು ಪರಿಗಣಿಸಿ ಕಲ್ಯಾಣದಿಂದ ಏಳು ಕೇರಿಗಳ(ಬೇಲಿಯಿಂದ) ಆಚೆ ಹಾಕಿ ಅಸ್ಪೃಶ್ಯರಂತೆ ಕನಿಷ್ಠರಾಗಿ ಬಾಳುವಂತೆ ಮಾಡಿದರು. ಈ ರೀತಿಯಾದ ಸಂಗತಿಯನ್ನು ವಿರೋಧಿಸಿದಂತಹ ಕಥಾ ವಸ್ತುವನ್ನು ತಗರ ಪವಾಡ ಮತ್ತು ಸಿದ್ಧಮಂಕ ಚರಿತೆ ಒಳಗೊಂಡಿದೆ. 'ತಗರ ಪವಾಡ' ಕಾವ್ಯದ ನಾಯಕನಾಗಿ ಶಾಂತಮುತ್ತಯ್ಯ ಕಂಡು ಬಂದು, ಕುರುಬರ ಉದ್ಧಾರಕ್ಕಾಗಿ ಅಂದಿನ ಬಸವಾದಿ ಪ್ರಮಥರು ಮತ್ತು ಶಿವಶರಣರ ಸಮ್ಮುಖದಲ್ಲಿ ಮೃತ ತಗರನ್ನು ಬದುಕಿಸಿ ಪವಾಡವನ್ನು ಮೆರೆದು, ಕುರುಬ ಕುಲಕ್ಕೆ ಸಾಂಸ್ಕೃತಿಕ ವೀರನಾಗುತ್ತಾನೆ. ಅದೇ ರೀತಿ ಸಿದ್ಧಮಂಕ ಚರಿತೆಯ ನಾಯಕನಾಗಿ ಮರುಳಮಂಕನು ಬಂದು ತಮ್ಮ ಕುಲಬಾಂಧವರನ್ನು ಅಸ್ಪೃಶ್ಯರೆಂಬ ಕಳಂಕದಿಂದ ವಿಮುಕ್ತರನ್ನಾಗಿ ಮಾಡಬೇಕೆಂಬ ಛಲದಿಂದ ಉಗ್ರ ತಪಸ್ಸನ್ನು ಮಾಡಿ ಸಿದ್ಧರಾಮ–ಅಲ್ಲಮರ ಅನುಗ್ರಹದಿಂದ ಎಲ್ಲಾ ಕುರುಬರು ಕಲ್ಯಾಣ ನಗರಕ್ಕೆ ಪ್ರವೇಶಿಸಲು ಕೋರಿಕೊಳ್ಳುತ್ತಾನೆ. ಈ ರೀತಿಯಾಗಿ ಕುರುಬ ಕುಲಕ್ಕೆ ಸಾಂಸ್ಕೃತಿಕ ವೀರನಾಗುತ್ತಾನೆ.

ಹೀಗೆ ಇವರಿಬ್ಬರೂ ಕುರುಬ ಕುಲದಲ್ಲಿ ಜನಿಸಿ, ತಮ್ಮವರ ಉದ್ಧಾರಕ್ಕಾಗಿ ವಿಭಿನ್ನ ರೂಪದಲ್ಲಿ ಹೋರಾಟ ನಡೆಸುತ್ತಾರೆ. ಹಾಗೆಯೇ ಹೊರಹಾಕಲ್ಪಟ್ಟ ಕುರುಬರನ್ನು ಕಲ್ಯಾಣ ಪಟ್ಟಣದೊಳಗೆ ಕರೆತರಬೇಕೆಂಬ ಛಲ ಅವರಲ್ಲಿರುವುದು ಕಂಡುಬರುತ್ತದೆ. ಸಿದ್ಧಮಂಕ ಚರಿತೆಯಲ್ಲಿ ಬರುವ ಮರುಳಮಂಕ ಮತ್ತು ತಗರ ಪವಾಡದಲ್ಲಿ ಬರುವ ಶಾಂತಮುತ್ತಯ್ಯ ಇವರಿಬ್ಬರೂ ಒಂದೇ ಸಮುದಾಯದವರಾಗಿದ್ದರೂ ತಮ್ಮ ಆಶಯದ ನಿರೂಪಣೆಯನ್ನು ಬೇರೆ ಬೇರೆ ರೀತಿಯಲ್ಲಿ ಅಭಿವ್ಯಕ್ತ ಪಡಿಸಿದ್ದಾರೆ. ಈ ಎರಡೂ ಕೃತಿಗಳು ಸರೂರು ಪರಿಸರದ ಆಜುಬಾಜಿನಲ್ಲಿ ನಡೆದ ಘಟನೆ ಗಳಾಗಿರುವುದರಿಂದ ಆ ಊರಿನ ಗುರುಒಡೆಯರ ಪರಂಪರೆಯವರು ತಮ್ಮದೇ ಆದ ಸಾಂಸ್ಕೃತಿಕ ಅಭಿವ್ಯಕ್ತಿಯನ್ನು ಈ ರೀತಿಯಾಗಿ ಮಾಡಿರಬಹುದೇ ಎಂಬ ಪ್ರಶ್ನೆ ಎದುರಾಗುತ್ತದೆ. ಏಕೆಂದರೆ

ಸರೂರು ಗುರುಪರಂಪರೆಗೆ ಮೂಲ ನೆಲೆಯಾಗಿದ್ದು, ಎರಡು ಸಂಪ್ರದಾಯಗಳನ್ನು ಒಳಗೊಂಡಿದೆ. ಆದ್ದರಿಂದ ತಮ್ಮ ತಮ್ಮ ಗುರುಪರಂಪರೆಯ ವಿಶಿಷ್ಟತೆಯನ್ನು ತೋರಿಸುವಲ್ಲಿ ಮುಂದಾಗಿರಬಹುದೇ!

ಒಟ್ಟಾರೆ ಈ ಕೃತಿಗಳು ಚರಿತ್ರೆಯ ಪುರಾಣೀಕರಣ ವರ್ಗಕ್ಕೆ ಸೇರಿದವುಗಳಾಗಿದ್ದು, ಕುರುಬ ಸಮುದಾಯದ ಎರಡೂ ಸಂಪ್ರದಾಯಗಳನ್ನು ಚಾರಿತ್ರಿಕವಾಗಿ ಕಟ್ಟಿಕೊಡುತ್ತವೆ ಹಾಗೂ ಅವರ ಗುರುಪರಂಪರೆಯನ್ನು ಹೇಳುವಲ್ಲಿ ಯಶಸ್ವಿಯಾಗಿವೆ. ಪ್ರಸ್ತುತ ಶಾಂತಮುತ್ತಯ್ಯನ ಸಂಪ್ರದಾಯದವರನ್ನು ಶಾಂತೋಡೆಯರೆಂದು ಕರೆದರೆ, ಸಿದ್ಧಮಂಕ ಸಂಪ್ರದಾಯದವರನ್ನೇ ಮುಂದೆ ಮಂಕೊಡೆಯರು ಎಂದು ಕರೆಯಲಾಗಿದೆ. ಮಂಕೊಡೆಯರು ಸಾಧ ಕುರುಬರಿಗೆ ಗುರುಗಳಾಗಿದ್ದಾರೆ. ಈಗ ಅವರು ಸಾಧ ಲಿಂಗಾಯತರಾಗಿ ಲಿಂಗಾಯತ ಪ್ರಭಾವಕ್ಕೆ ಒಳಗಾಗಿದ್ದಾರೆ. ಹೀಗಾಗಿ ಅವರ ಸಂಖ್ಯೆ ಶಾಂತೊಡೆಯರಿಗಿಂತ ಕಡಿಮೆಯಾಗಿರಬಹುದು. ಈ ಸಂಪ್ರದಾಯದವರಿಗೆ ಪರಮಗುರು ಸಿದ್ಧರಾಮನಾದರೆ, ಶಾಂತೊಡೆಯರಿಗೆ ಪರಮಗುರು ರೇವಣಸಿದ್ಧನಾಗಿದ್ದಾನೆ. ಹೀಗೆ ಸರೂರು ಗುರುಪರಂಪರೆಯು ಬೆಳೆದುಬಂದಿರುವ ಬಗೆಯಾಗಿದೆ. ಆದರೆ ಈ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿರುವುದರ ಹಿನ್ನೆಲೆಯಾಗಿ ಬಸವಣ್ಣಪ್ಪ ನೀಲಪ್ಪ ಹಳವಳ್ಳಿ ಅವರ ಹಾಲುಮತ ಪುರಾಣವೂ ಒಂದಾಗಿದೆ. ಇದು ಸಿದ್ಧಮಂಕ ಚರಿತೆ ಮತ್ತು ತಗರ ಪವಾಡಗಳೊಂದಿಗೆ ಸಾಮ್ಯತೆ ಪಡೆದುಕೊಂಡಿದೆ. ಸಿದ್ಧಮಂಕ ಚರಿತೆಯ ಪ್ರತಿ ಕೃತಿಯಾಗಿದೆ. ಏಕೆಂದರೆ ಸಿದ್ಧರಾಮನ ಶಿಷ್ಯನಾದ ಮರುಳಸಿದ್ಧನ ಇತಿವೃತ್ತವನ್ನು ಸ್ಥೂಲವಾಗಿ ನಿರೂಪಿಸುತ್ತದೆ. ಸಿದ್ಧಮಂಕ, ಮರುಳಮಂಕ, ಮಂಕಯ್ಯ ಎಂಬ ವಿವಿಧ ಹೆಸರುಗಳಿಂದ ಕರೆಯಲಾಗಿದೆ. ಇವೆಲ್ಲಾ ಒಂದೇ ವ್ಯಕ್ತಿಯನ್ನು ಕುರಿತಾದುದು ಎಂದು ಸ್ಪಷ್ಟವಾಗುತ್ತದೆ. ಈ ಕೃತಿಯು ಕವಿ ಮರುಳ ಸಿದ್ಧಯ್ಯನವರ ಚರಿತೆ ಎಂದು ಈ ಕೃತಿಯಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಹೀಗಾಗಿ ಸಿದ್ಧಮಂಕ ಚರಿತೆ ಮತ್ತು ಮರುಳಸಿದ್ಧೇಶ್ವರ ಚರಿತೆ ಒಂದೇ ಪರಂಪರೆಯ ಕೃತಿಗಳಾಗಿವೆ. ಇದು ಸರೂರು ಸಂಪ್ರದಾಯದಲ್ಲಿ ಬರುವ ಮಂಕೋಡೆಯರ ಗುರುಪರಂಪರೆಯನ್ನು ಪುಷ್ಟೀಕರಿಸುವಂತಿದೆ.

ಅದೇ ರೀತಿ ಶಾಂತೋಡೆಯರ ಸಂಪ್ರದಾಯದ ಮುಂದುವರಿಕೆಯಾಗಿ ರಸ್ತಾಪುರ ಭೀಮ ಕವಿಯ ಹಾಲುಮತೋತ್ತೇಜಕ ಪುರಾಣವು ಮಾಹಿತಿ ನೀಡುತ್ತದೆ. ಈ ಕೃತಿಯಲ್ಲಿ ಪುರಾಣಗಳ ಕಾಲ್ಪನಿಕತೆಗಳಿಂದ ರೇವಣಸಿದ್ಧರ ನಾಯಕತ್ವದಲ್ಲಿ ಕಥೆ ಹೆಣೆಯಲ್ಪಟ್ಟಿದೆ. ತಗರ ಪವಾಡದಲ್ಲಿ ಶಾಂತಮುತ್ತಯ್ಯನ ಮಕ್ಕಳ ಪ್ರಸ್ತಾಪ ಬರುವುದಿಲ್ಲ. ಆದರೆ ಭೀಮಕವಿಯ ಕೃತಿಯಲ್ಲಿ ಅವರ ವಿವರಗಳು ಬರುತ್ತವೆ. ಆದ್ದರಿಂದ ಅದರ ಮುಂದುವರಿಕೆಯ ಭಾಗವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಚೆನ್ನಬಸವ ಕವಿಯ 'ಹಾಲುಮತ ಪುರಾಣ'ದಲ್ಲಿ ಸಾರಥಿ ಎರಡರಲ್ಲಿ ಶಾಂತಮುತ್ತಯ್ಯನ ಪ್ರಸ್ತಾಪ ಬರುತ್ತದೆ. ರೇವಣಸಿದ್ಧರು ಸರೂರಿನಲ್ಲಿರುವ ಶಿವಭಕ್ತನಾದ ಶಾಂತಮುತ್ತಯ್ಯನಿಗೆ ಲಿಂಗದೀಕ್ಷೆಯನ್ನು

ಕೊಡುತ್ತಾನೆ. ಅದರಂತೆ ಕುರುಬ ಕುಲಕ್ಕೆ ಗುರುತನವು ದೊರಕುವುದರ ಕುರುಹಾಗಿ ಬಸವಣ್ಣನವರಿಂದ ಮೂರೇಣಿನ ಕಂಥೆಯನ್ನು ಚೆನ್ನಬಸವ ಕಾಣಿಕೆಯಾಗಿ ಪಡೆಯುತ್ತಾನೆ. ಹೀಗಾಗಿ ಈ ಕೃತಿಯೂ ಸರೂರಿನ ರೇವಣಸಿದ್ಧನ ಶಿಷ್ಯನಾದ ಶಾಂತಮುತ್ತಯ್ಯನ ಪರಂಪರೆಯನ್ನು ತಿಳಿಸುವುದರ ಮೂಲಕ ಈತನ ಅನುಯಾಯಿಗಳಾದ ಶಾಂತೋಡೆಯರ ಸಂಪ್ರದಾಯವನ್ನು ಗುರುತಿಸಲು ಅನುಕೂಲವಾಗಿದೆ. ಹೀಗೆ ಈ ಎಲ್ಲಾ ಆಕರಗಳು ಒಂದಲ್ಲ ಒಂದು ರೀತಿಯಲ್ಲಿ ಕುರುಬರು ಗುರುಒಡೆಯರ ಪರಂಪರೆಯನ್ನು ಗುರುತಿಸುವಲ್ಲಿ ಮತ್ತು ಪರಂಪರೆಗೆ ಮೂಲನೆಲೆಯಾದ ಸರೂರನ್ನು ಕೇಂದ್ರವಾಗಿಟ್ಟುಕೊಂಡು ಆ ಊರಿನ ಗುರು ಒಡೆಯರ ಪರಂಪರೆಯನ್ನು ಬೇರೆ ಬೇರೆ ಶಾಖಮಠಗಳ ರೂಪದಲ್ಲಿ ಹರಡಿಕೊಂಡಿವೆ.

೨. ದಾಖಲು ಸಾಹಿತ್ಯ

೧. ಶಾಸನಗಳು: ಈ ಸಂಪ್ರದಾಯಗಳ ಪರಂಪರೆಯನ್ನು ಸ್ಪಷ್ಟಪಡಿಸಲು ಕೆಲವು ಶಾಸನಗಳು ದೊರೆಯುತ್ತವೆ. ಈ ಶಾಸನಗಳು ಸಾಹಿತ್ಯದ ಒಂದು ಭಾಗವಾಗಿ ಬಳಕೆಯಾಗುತ್ತವೆ. ಇವು ದಾಖಲೆ ವರ್ಗಕ್ಕೆ ಸೇರುತ್ತವೆ. ಏಕೆಂದರೆ ಸಾಹಿತ್ಯಕ್ಕಿಂತ ಭಿನ್ನವಾದ ಐತಿಹಾಸಿಕ ಮಹತ್ವವನ್ನು ಬಿಚ್ಚಿಡುವಲ್ಲಿ ಇವು ಪ್ರಮುಖ ಪಾತ್ರವಹಿಸುತ್ತವೆ. ಶಾಸನಗಳು ಯುದ್ಧಮಾಡಿ ಗೆದ್ದು, ಸೋತಂತಹ ವಿಚಾರ ಗಳಾಗಿರಬಹುದು. ಇಲ್ಲವೇ ದಾನ ನೀಡಿದ ತೆರಿಗೆ, ಕೋಟೆ–ಕೊತ್ತಲಗಳ ಬಗ್ಗೆ ತಿಳಿಸುತ್ತವೆ. ಅದರ ಜೊತೆಗ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಟ್ಟ ಸಾಂಸ್ಕೃತಿಕ ವೀರರ ಬಗ್ಗೆ ಹಾಗೂ ಅವರನ್ನು ಪ್ರತಿನಿಧಿಸುವ ಪವಾಡ, ನಂಬಿಕೆ, ಧರ್ಮದ ಹೆಸರಿನಲ್ಲಿ ಆಯಾ ಸಮುದಾಯಗಳಿಗೆ ಧಾರ್ಮಿಕವಾಗಿ ದುಡಿದ ಮಠ, ಬಸದಿ ಇತ್ಯಾದಿ ವಿಷಯಗಳನ್ನು ಕುರಿತು ದಾಖಲೆ ಮಾಡುತ್ತವೆ. ಈ ಹಿನ್ನೆಲೆಯಲ್ಲಿ ಕುರುಬ ಸಮುದಾಯಕ್ಕೆ ಸಂಬಂಧಿಸಿದಂತೆ ಧಾರ್ಮಿಕವಾಗಿ, ಸಾಮಾಜಿಕವಾಗಿ ಅನೇಕ ಶಾಸನಗಳು ದೊರೆಯುತ್ತವೆ. ಆದರೆ ಕುರುಬರ ಗುರುಒಡೆಯರ ಪರಂಪರೆಗೆ ಸಂಬಂಧಿಸಿದಂತೆ, ಅದರಲ್ಲಿ ಸರೂರಿನ ಹಾಲುಮತ ಗುರುಪರಂಪರೆಗೆ ಸಂಬಂಧಿಸಿದಂತೆ ಕೆಲವು ಶಾಸನಗಳು ದೊರೆಯುತ್ತವೆ. ಅವುಗಳಲ್ಲಿ ಶಿರವಾಳ ಶಾಸನ, ತುರುವೇಕೆರೆ ಶಾಸನ, ಸರೂರಿನ ಎರಡು ಶಾಸನಗಳು ಇನ್ನೂ ಮುಂದುವರೆದು ತಾಮ್ರದ ಪತ್ರಗಳು, ಬೆರಳಚ್ಚು ದಾಖಲೆ ಪತ್ರಗಳು ದೊರೆಯುತ್ತವೆ. ಈ ಎಲ್ಲಾ ಆಕರಗಳಿಂದ ಕುರುಬರ ಗುರುಪರಂಪರೆಯ ಮಹತ್ವ ಎಂಥದ್ದು ಎಂಬುದನ್ನು ನಮಗೆ ಮನವರಿಕೆ ಮಾಡಿಕೊಡುತ್ತವೆ. ಈ ಆಕರ ಸಾಮಗ್ರಿಗಳನ್ನು ಬಳಸಿಕೊಂಡು ಸರೂರಿನ ಗುರುಪರಂಪರೆಯ ಬಗ್ಗೆ ಪ್ರಸ್ತಾಪಿಸುತ್ತವೆ. ಆ ದಾಖಲೆಗಳ ವಸ್ತು, ಭಾಷೆಯ ಸ್ವರೂಪ, ಅದರ ಮಹತ್ವವೇನು, ಸರೂರಿನ ಒಡೆಯರಿಗೂ, ದಾಖಲೆಗಳಿಗೂ ಸಾಮ್ಯತೆ ಇದೆಯೇ, ಇಲ್ಲವೇ ಎಂಬ ಅನೇಕ ವಿಚಾರಗಳನ್ನು ಚರ್ಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಶಾಸನಗಳು ಯಾರನ್ನು ಅಥವಾ ಯಾವ ವಿಚಾರಗಳನ್ನು ಒಳಗೊಂಡಿವೆ ಎಂಬುದನ್ನು ಈ ಮುಂದಿನಂತೆ ಶಾಸನಗಳ ಆಧಾರದಿಂದ ತಿಳಿಯಬಹುದಾಗಿದೆ.

ತುರುವೇಕೆರೆ ಶಾಸನ

ಇದರ ಕಾಲ ಕ್ರಿ.ಶ. ೧೪೮೦ ಎಂದು ಉಲ್ಲೇಖಗೊಂಡಿದೆ. ಇದರ ಅಕ್ಷರಗಳ ಸ್ವರೂಪವನ್ನು ಗಮನಿಸಿ, ಇದು ನಕಲು ಪ್ರತಿಯೆಂದು ಊಹಿಸಿ ಬಹುಶಃ ೧೮ನೇ ಶತಮಾನದಲ್ಲಿ ನಕಲು ಮಾಡಿರಬಹುದಾಗಿ ಲಿಪಿತಜ್ಞರು ಹೇಳಿದ್ದಾರೆ. ಇದು ಮೂರು ತಾಮ್ರ ಪತ್ರಗಳಲ್ಲಿ ದೊರೆತಿದ್ದು ೮೭ ಸಾಲುಗಳಿಂದ ಬರೆಯಲ್ಪಟ್ಟಿದೆ. "ತುರುವೇಕೆರೆಯ ಶ್ರೀ ರೇವಣಸಿದ್ಧೇಶ್ವರ ಮಠದಲ್ಲಿ ದೊರೆತ ಈ ಶಾಸನವು ವಿಜಯನಗರದ ದೊರೆಗಳಾದ ವೀರಪ್ರತಾಪ, ರಾಮರಾಜೈಯ್ಯ ಸದಾಶಿವರಾಯ ಹಾಗೂ ವೆಂಕಟಾದ್ರಿರಾಜ ಇವರ ಸಮ್ಮುಖದಲ್ಲಿ ಇವರ ಜೊತೆಗೆ ವಿವಿಧ ಮಠಗಳ ಸ್ವಾಮೀಜಿ, ಹಿರಿಯರ ನೇತೃತ್ವದಲ್ಲಿ ನಡೆದ ಹಾಲುಮತ ಕುರುಬರಿಗೆ ಗುರುಗಳಾರು ಎಂಬ ವಾದ ವಿವಾದವೇ ಈ ಶಾಸನದ ಮುಖ್ಯ ವಸ್ತಾಗಿದೆ."[೩೬] ಈ ವಾದದಲ್ಲಿ ಶಾಂತಮುತ್ತಯ್ಯನು ಮಂಕಯ್ಯನನ್ನು ಗೆದ್ದು ಸೆರೆ ಹಾಕಿಸಿದ ವಿಚಾರವು ಇದರಲ್ಲಿ ತಿಳಿದುಬರುತ್ತದೆ. ಏಕೆಂದರೆ ಈ ಪ್ರದೇಶದಲ್ಲಿ ಎರಡು ಸಂಪ್ರದಾಯದ ಪಂಗಡಗಳಿರುವುದು ಕಂಡುಬರುತ್ತದೆ. ಒಂದನೆಯದಾಗಿ, ರೇವಣಸಿದ್ಧನ ಗುರುಪರಂಪರೆಯನ್ನು ರೂಢಿಸಿಕೊಂಡು ಆತನ ಅನುಯಾಯಿಗಳಾಗಿ ಶಾಂತೊಡೆಯರು ಕಂಡುಬರುತ್ತಾರೆ. ಅದೇ ರೀತಿ ಎರಡನೆಯದಾಗಿ ಸೊಲ್ಲಾಪುರದ ಸಿದ್ಧರಾಮನ ಗುರುಪರಂಪರೆಯ ಅಡಿಯಲ್ಲಿ ಆತನ ಅನುಯಾಯಿಗಳಾದ ಮಂಕೊಡೆಯರು ಕಂಡುಬರುತ್ತಾರೆ.

ಆದ್ದರಿಂದ ಈ ಎರಡು ಗುರುಪರಂಪರೆಗಳ ನಡುವೆ ನಡೆದಿರುವ ಗುರುತನದ ಅಧಿಕಾರದ ವಿವಾದವನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ನಡೆದ ಸಭೆಯಲ್ಲಿ ಶಾಂತಮುತ್ತಯ್ಯನವರಿಗೆ ನೀವು ಕುರುಬ ಕುಲದವರಿಗೆ ಗುರುವಾದುದು ಹೇಗೆಂದು ನಿಮಗೆ ಮುರುಹು ಮುದ್ರೆ ಮೂರಡಿಯ ಕಂಥೆ ಬಂದುದು ಹೇಗೆಂದು ಹೇಳಲಾಗಿ ಶಾಂತಮುತ್ತಯ್ಯನವರೇ ಆಡಿದ ಮಾತು ಮುಂದಿನಂತಿವೆ.

ಆ ಕಲ್ಯಾಣ ಪುರದಲ್ಲಿ ಸತ್ತ ಕುರಿಯನ್ನು ಹೆತ್ತ ಮೊಸರನು ಎರಡನು ಕೂಡಿವೆಂದುಕ ಗುಡಿಯಲಿದೆ ಕುರುಬರು ಮಾರಲಾಗಿ ಆ ಕಲ್ಯಾಣಪುರದ ಗಣಂಗಳು ಬಸಮಣನು । ಹೆಂಗೆ ಸತ್ತ ಕುರಿಯನು ಹೆರ್ತ್ತ ಮೊಸರನು । ಹೀಗೆ ಕುರುಬರು ಮಾರಬಹುದು ಎಂದು ಕುರಬರಯೋಳು ಬೆಲೆಯಿಂದ್ರ ಹೊರಹಾಕಲಾಗಿ ಆ ಕುರುಬರು ಬಂದು ನಮಗೆದುರಾಗಿ ನಂಮ ಕಲ್ಯಾಣ ಪಟ್ಟಣದೊಳಗೆ । ಕಿನ್ನರಿ ಬ್ರಹ್ಮಯ್ಯನವರ ಲಿಂಗ ಮುದ್ರೆಯ ತಗರು ಸಾಯಲಾಗಿ ಸತ್ತ ತಗರ ಕಲ್ಯಾಣಕ್ಕೆ ಹಿಡಿಸಿಕೊಂಡು ಹೋಗಿ । ಪುಷ್ಪಕದಲ್ಲಿ ಕೊಂಡು ಹೋಗಿ ನಂಮ ಗುರುರೇವಣಸಿದ್ಧೇಶ್ವರ ದೇವರ ಸ್ತುತಿಗೆ ಬಂದು ತೀರ್ಥ ಪ್ರಸಾದವನ್ನು ತಿಳಿದು । ಆ ಸತ್ತ ತಗರಿನ ಪ್ರಾಣವನ್ನು ಪಡೆದೆವು. ಆ ಕಲ್ಯಾಣದಲ್ಲಿ ಪುರದ ಬಸವಣ್ಣನು । ಮಹಾಮಹಾಂತ ಶರಣರು ಮೆಚ್ಚಿ ಮುರುಹು ಮುದ್ದೆ ಮೂರಡಿಯ ಕಂಥೆಯನು ಕೊಟ್ಟು ಹೊರಹಾಕಿದ ಕುರುಬರನು ಕುಲವನು. ಏಳಿಯಕೆ ತೆಗೆದುಕೊಂಡು ಕುರುಬರೆಲ್ಲರಿಗೂ

ಗುರುವಾಗಿರುಯೆಂದು ಆ ಕುರುಬರಿಗೆ ವಿಭೂತಿ ಧರಿಸಿಕೊಂಡು ಯಿರಿಯೆಂದರು। ಆ ಬಸವಣ್ಣನು ಮಹಾಶರಣನು ಅರಬ್ಯ ಮೊದಲು ಕಂಥೆ ಬಂದುದು ಗುರುವಾದ ವಿವರ ಬಂದಿಗಯೆಂದು ಶಾಂತಯ್ಯನವರು ಆಡಿದರು। ನಂತರ ಸಭೆಯವರು ಮಾಂಕನವರಿಗೆ ನಿಮಗೆ ಮುರುಹು ಮುದ್ರೆ ಮೂರಡಿಯ ಕಂಥೆ ಬಂದುದು ಹೇಗೆ ಕುರುಬರಿಗೆ ಗುರುವಾದುದು ಹೇಗೆ ಎಂದು ಕೇಳಲಾಗಿ ಮಂಕಯ್ಯನವರು ಆಡಿದ ಮಾತು. "ಕೋಡುಗಲ್ಲಿನ ಮೇಲೆ ಹನ್ನೆರಡು ಬಟ್ಟಲಿರಿಸಿ ಆ ಸೂಜಿಬಟ್ಟಲ ಮೇಲೆ ಹನ್ನೆರಡು ವರುಷ ತಪಸಮಾಡಲಾಗಿ। ಈಶ್ವರನು ಮೆಚ್ಚಿ ಪ್ರಸಂಗವಾಗಿ ನಮಗೆ ಮುರುಹು ಮುದ್ರೆ ಮೂರಡಿಯ ಕಂಥೆಯನು ಕೊಟ್ಟು ಕುರುಬಕುಲಕೆ ಗುರುವಾಗಿರಿಯೆಂದು ಮಂಕನವರು ಆಡಲಾಗಿ ಸಭೆ ಸಮಸ್ತರು। ನಿನು ಯಿಂಥಾ ಪ್ರಸಂಗಸ ಆ ಯುಗದಲ್ಲಿ ನಡೆದಿದೆಯೆಂದು ಸಭೆ ಕೇಳಲಾಗಿಯಿ ಕಲಿಯುಗದಲ್ಲಿಯಿಂದ್ರ ಉಗ್ರ ತಪಸ್ಸು ಆರು ಮಾಡಿದವರುಯಿಲ್ಲ। ಪೂರ್ವದಲ್ಲಿ ಬಸವ ಬಿಜ್ಜಣನ ಕಾಲದಲ್ಲಿ ತಪಸು ಮಾಡಿದೆಲು। ಎಂದು ಮಂಕಯನವರು ಆಡಲಾಗಿ. ಆ ಮಾತು ಕೇಳಿಸಿದಂತೆ ಸಮಸ್ತ ಪ್ರಜೆಗಳು ಸರ್ವರೆಲ್ಲ ಕೇಳಿ। ಆಗಮಗಳ ನೋಡಿಯಿ ಕಲಿಯುಗದಲಿ ಯಿಂಥಾ ಉಗ್ರತಪಸನಾರು ಮಾಡಿದವರುಯಿಲ್ಲ ಪೂರ್ವದಲಿ। ಪಾರ್ವತಿ ದೇವಿಯರು ಯಾರೆಂದುಗೂ ಜನನ ಮರಣವಿಲ್ಲದಂತಾ ಪುರುಷನಾಗಬೇಕೆಂದು ಪರಮೇಶ್ವರನ ಕುಕ್ಕಟ ತಪಸ ಮಾಡಿದ। ಯಿ ಕಲಿಯುಗದಲಿ ಹೀಗೆ ಆರು ತಪಸ ಮಾಡಿದವರುಯಿಲ್ಲ ಮಂಕನವರ ಮಾತು ಬೀಲು ಸೋಲವೆಂದು ಕಟಕಿಯ ಮಾಡಿದರು। ನಿಂನ ಗುರು ಸೊಲ್ಲಾಪುರದ ಸಿದ್ಧರಾಮದೇವರಿಗೆ ತಂದೆ ತಾಯಿ ಉಂಟು ಫಲ ಉಂಟು ನಿನಿಗೆ ತಂದೆ ತಾಯಿಲ್ಲ। ಕುಲವಿಲ್ಲಯಿ ಯರಡು ಬಗೆಯಲ್ಲಿ ನಿಂನ ಮಾತು ಸೋಲಯೆಂದು ಸಭೆಯಂನೆಲವಾಗಿ। ಮಂಕನವರು ಆಡಿದ ಮಾತು ತಂತಮ ಕುಲ ಸೇನೆ ಕುಲವೆಂದು ಆಡಲಾಗಿ ಸೇನೆ ಕುಲವೆಂದರೆ ಹಾಲುಕುಲವಾಯಿತ್ತು। ಮೊದಲು ಕುಲವಿಲ್ಲ ವೆಂದಗೆ ಯಂಗೆ ಕುಲದ ಹೇಳಿದೆ। ಇದರಿಂದ ಮರು ಮಾತಿನಲು ನಿಂನ ಮಾತು ಸೊಲ। ನಿನಗೆ ಗುರುತನಕೆ ಕೆಲಸವಿಲ್ಲವೆಂದು। ಸಭೆಯಂನಲಾಗಿ ಹಾಲುಮತದ ಕುರುಬ ಕುಲಕೆ ಶಾಂತಮುತ್ತಯ್ಯನವರ ಗುರುಗಳು। ಮಂಕನಾದರೆ ಗುರುತನಕೆ ಕಾರಣವಿಲ್ಲ ಎಂದು। ಸಭೆಯಲು. ಕೂಡಿ ಸಮಸ್ತರು ಮಠ ಮನೆಯ ಹಿರಿಯರುಗಳು ಮಹಾಮಹಾಂತು ಸಮಸ್ತರೆಲ್ಲಾರು। ಯಿ ಅರ್ಥಕೆ ವಂದು ಮೊಲೆ ಬರೆಸಿ ವೊದಿಸಿ ತೊರ್‍ಸಿ ಬಿಂನಹ ಮಾಡಿ। ಆ ತಿರುಮಲಾರಜಿಯ್ಯನವರು ರಾಮರಾಜಯ್ಯನವರು। ವೆಂಕಟಾದ್ರಿ ರಾಜಯ್ಯನವರು ಯಿವರು ಅರಸುಗಳು ನ್ಯಾಯದಲ್ಲಿ। ಗೆದ್ದ. ಶಾಂತಮುತ್ತಯ್ಯನವರಿಗೆ ವಿರೂಪಾಕ್ಷ ದೇವರ ಸೋಮವಾರದ ಬಾಗಿಲಲಿ ಕುರುಬರೆಂಬ ಜಾತಿಗೆ ಮಂಕನವರಿಗೆ ಕಾರಣವಿಲ್ಲ ಶಾಂತಮುತ್ತಯ್ಯನವರ ಗುರುಉಗಳೆಂದು ಹೊಯಿಸಿ ಕೊಟ್ಟ ಸ್ಥಿರ ಶಾಸನವು"[೩೭]

ಈ ಶಾಸನದ ವಿಚಾರಗಳನ್ನು ಗಮನಿಸಿದಾಗ ಕುರುಬ ಕುಲಕ್ಕೆ ಗುರುಗಳಾಗಿರುವವರು ಸರೂರು ಶಾಂತಯ್ಯನವರು ಎಂಬುದು ಸ್ಪಷ್ಟವಾಗುತ್ತದೆ.

ಶಿರವಾಳ ಶಾಸನ

ಇದು ಸಹ ಸರೂರ ಹಾಲುಮತ ಸಂಪ್ರದಾಯದಲ್ಲಿ ಬರುವ ಗುರುಪರಂಪರೆಗೆ ಪೂರಕವಾಗಿದೆ. ಈ ಶಾಸನವು ಶಿರವಾಳ ಗ್ರಾಮದ ಸಿದ್ಧೇಶ್ವರ ದೇವಾಲಯದಲ್ಲಿ ದೊರಕಿದೆ. ಇದು ೩೫ ಉದ್ದ ೩೦ ಅಂಗುಲವಿದ್ದು, ಕರಿಕಲ್ಲನ್ನು ಬಳಸಿಕೊಂಡು ಅಕ್ಷರಗಳನ್ನು ಕೊರೆಯಲಾಗಿದೆ. ಈ ಕನ್ನಡ ಅಕ್ಷರಗಳನ್ನು ೧೨ನೇ ಶತಮಾನದಲ್ಲಿನ ಲಿಪಿಯಾಗಿರಬಹುದು ಎಂದು ಗುರುತಿಸಲಾಗಿದೆ(ಲಿಪಿಶಾಸ್ತ್ರಜ್ಞರ ಪ್ರಕಾರ). ಇದು ಸಿದ್ಧೇಶ್ವರ ದೇವಾಲಯದ ದಕ್ಷಿಣ ದಿಕ್ಕಿಗೆ ಇದೆ. ಈ ಶಾಸನವನ್ನು ೧೧೭೮ರ ಹೊತ್ತಿಗೆ ರಚಿಸಲಾಗಿದ್ದು, ಮಹಾಮಂಡಳೇಶ್ವರ ಎಳಮೇಳ ಸಿಂಗಿದೇವರಸನ ತಾಯಿ ನಾಗಲದೇವಿ ಮಹಾ ಪ್ರಧಾನ ಕೇತನ ನಾಯಕರು ಹಾಗೂ ಯಾದವ ಬಿಲ್ಲ ಮಹದೇವನ ಅಧಿಕಾರಿ ಅಪ್ಪಯ್ಯ ನಾಯಕನು ಎಳಮೇಲ '೫೦'ರಲ್ಲಿದ್ದ ಮರವಡಿ ಗ್ರಾಮವನ್ನು ಸಿರಿವೊಳಲಸಿದ್ಧ ನಾಡೇಶ್ವರ ದೇವರ ಪೂಜಾವಿಧಿಗೆಂದು ತಿಳಿಸುತ್ತದೆ. ಹಾಗೆಯೇ ಶಾಂತಿಮಯ್ಯ ಹಾಗೂ ಅವನ ರೇವಣದೇವಯ್ಯನ ಪವಾಡಗಳನ್ನು ತಿಳಿಸುತ್ತದೆ.

ಈ ಶಾಂತಮುತ್ತಯ್ಯನನ್ನು ಕುರಿತು ಶಿರವಾಳ(೧೧೭೦), ಕೆಲ್ಲೂರು(೧೧೭೪), ಹೋಸಗಲ್ಲ (೧೧೭೪) ಮತ್ತು ಸಿರವಾಳ(೧೧೭೮) ಹೀಗೆ ನಾಲ್ಕು ಶಾಸನಗಳು ದೊರೆಯುತ್ತವೆ. ಈ ಶಾಸನಗಳು ಸಿರವಾಳದಲ್ಲಿ ಪ್ರಸಿದ್ಧವಾದ ಸಿದ್ಧಶಾಂತೇಶ್ವರ ದೇವರ ಪೂಜೆಗಾಗಿ ಅವರ ಪುತ್ರ ರೇವಣದೇವನಿಗೆ ದಾನ ನೀಡಿರುವುದನ್ನು ಹೇಳುವುದರಿಂದ ಈ ಹೊತ್ತಿಗಾಗಲೇ ಶಾಂತಿಮಯ್ಯ(ಶಾಂತಮುತ್ತಯ್ಯ) ನಿಧನ ಹೊಂದಿ ಸಿರವಾಳದಲ್ಲಿ ಸಿದ್ಧಶಾಂತೇಶ್ವರ ಹೆಸರಿನ ದೇವರೆಂದು ಪೂಜೆಗೊಳ್ಳುತ್ತಿದ್ದುದು ಸ್ಪಷ್ಟ ವಾಗುತ್ತದೆ. ಕ್ರಿ.ಶ. ೧೧೭೮ರಲ್ಲಿ ಸಿರವಾಳ ಶಾಸನದಲ್ಲಿ ಈ ಶಾಂತಮುತ್ತಯ್ಯನ ಮಹಿಮೆಯನ್ನು ಹೀಗೆ ಹೇಳಲಾಗಿದೆ,

> "ಶಿವಯೋಗಿ ಶಾನ್ತಿಮಯ್ಯಂಗಳ ಮಹಿಮೆಯಂತೆನೆ ಕೃತಯುಗ
> ತ್ರೇತೆ ಮೂರನೆಯ ದ್ವಾಪರದೊಲುನೆಗಳ್ದ ಭೂತೋದ್ಭವ
> ಬ್ರತಿತ ಬ್ರತಾನು ಕಾರಿಗಳು ದಿವ್ಯ ಸಹಸ್ತ ಶತಾನು ಮಬ್ದ ಕಿಂ
> ಕರನು ಹರಯಿ ಬಳಿಕವಾತೆಸೆದೀವನದಂತೆಗೆ ಶಾಸ್ತ್ರಿಮಯ್ಯ
> ತತುಕ್ಷಣದೊಳೆ ಭಕ್ತಿಯ(ಂ) ಪಡದನೇಂ ಕಲಿವೀರನೊ ವೀರಭದ್ರನೋ
> ಶ್ರೀ ಮದಣಿ ಮಾಧ್ಯಷ್ಟಗುಣ ಸಂಪನರುಂ ತತ್ವಜ್ಞಾನ ಪ್ರಸನ್ನರುಂ
> ಷಡಂಗಯೋಗ।
> ಸಂಗದರುಂ ಸರಸಾಭ್ಯ ಸಂಗ ನಿಸಂಗರುಮಪ್ಪ ಶಿವಯೋಗಿ
> ಶಾನ್ತಿಮಯ್ಯ ದೇವಂಗಳ ಪುತ್ರ ರೇವಣದೇವಯ್ಯಂಗಳ ಪ್ರಸಿದ್ಧಿಂಯಂತೆನೆ"[೩೮]

ಈ ಶಾಸನದಲ್ಲಿ ಇವನನ್ನು ಎರಡು ಸಲ ಶಿವಯೋಗಿ ಎಂದು ಕರೆಯಲಾಗಿದ್ದು, ಇದರ ಅರ್ಥ ಅಸ್ಪಷ್ಟವಾಗಿದೆ. ಆದರೆ ಇಲ್ಲಿ ಶಾಂತಿಮಯ್ಯ ತತ್‌ಕ್ಷಣದಲ್ಲಿಯೇ ಭಕ್ತಿ ಗಳಿಸಿದನೆಂದು ತಿಳಿದುಬರುತ್ತದೆ. ಆದರೆ ಇಲ್ಲಿನ ವಿಶೇಷವೇನೆಂದರೆ, ಶಾಂತಮುತ್ತಯ್ಯನ ಸುತ್ತ ಸರೂರ, ಕೆಲೂರ, ಸಿರಿವಾಳ, ಹೊತೂರ ಗ್ರಾಮಗಳು ಸೇರಿಕೊಂಡಿವೆ. ಹೀಗೆ ಎಲ್ಲಾ ಊರುಗಳಿದ್ದರೂ ಈತನನ್ನು ಸರೂರ ಶಾಂತಮುತ್ತಯ್ಯನೆಂದೇ ಪ್ರಸಿದ್ಧನಾಗಿದ್ದಾನೆ. ಇದು ಈತನ ಜನ್ಮಗ್ರಾಮ ಅಥವಾ ಐಕ್ಯವಾದ ಸ್ಥಳವಾಗಿದೆ. ಪ್ರಸ್ತುತ ಈಗಲೂ ಇದೆ. ಆದರೆ ಅದನ್ನು ಈಗಲೂ ಶಾಂತಮುತ್ತಯ್ಯನ ಗದ್ದುಗೆ ಗಿರಿ, ಐಕ್ಯವಾದ ಸ್ಥಳ ಎಂದೆಲ್ಲಾ ಕರೆಯುತ್ತಾರೆ. ಇಂತಹ ದಾಖಲೆಗಳು ಹೆಚ್ಚೆಚ್ಚಾಗಿ ದೊರೆತಂಥೆಲ್ಲ ಸರೂರಿನ ಹಾಲುಮತ ಗುರುಪರಂಪರೆಯ ಇತಿಹಾಸವನ್ನು ತಿಳಿದುಕೊಳ್ಳುವಲ್ಲಿ ಮತ್ತು ಸ್ಪಷ್ಟಪಡಿಸಿಕೊಳ್ಳಲು ಅನುಕೂಲವಾಗುತ್ತದೆ. ಅದೇ ರೀತಿ ಸರೂರಿನಲ್ಲಿಯೇ ಎರಡು ಶಾಸನಗಳು ದೊರೆತ್ತಿವೆ.

ಎಸ್.ಐ.ಐ. ರಲ್ಲಿ ಪ್ರಕಟವಾದ ಶಾಸನದಲ್ಲಿ ಇದರ ಕಾಲಮಾನ ಕ್ರಿ.ಶ. ೧೨೧೦ ಆಗಿದೆ. "ಯಾದವ ಸಿಂಘಣನು ಆಗ ಆಳ್ವಿಕೆಯ ೧೧ನೆಯ ವರ್ಷದಲ್ಲಿ ಶಿವಗೌಡನು ಅರಳಿಗೆರೆಯ ಕೊರಿಯ ಮಲ್ಲಿಕಾರ್ಜುನ ದೇವರನ್ನು ಪ್ರತಿಷ್ಠಾಪಿಸಿದನು. ಸಿದ್ಧರಾಮನ ತಂದೆಯ ಭೂಮಿ ಮತ್ತು ಮನೆ ನಿರ್ದೇಶಗಳನ್ನು ಕೊಂಡು ಆ ದೇವರಿಗಾಗಿ ಶಿವನಗೌಡನ ಕೈಯಲ್ಲಿ ದತ್ತಿ ಕೊಟ್ಟನು. ಮಂಕಯ್ಯ ಮತ್ತು ಸಿದ್ಧರಾಮ ತಂದೆಯ ಮಕ್ಕಳು ಆ ದೇವರಿಗೆ ಮತ್ತೊಂದು ಭೂದತ್ತಿಯನ್ನು ಅರಸನಹಳ್ಳಿಯ ವೀರನಗೌಡನ ಕೈಯಲ್ಲಿ ಕೊಟ್ಟರು ಮಂಕಯ ಹುನುಗುಂದದ ಬೀಚರ ಗುರುವಿನ ಮಗ, ಬಹುಶಃ ಮಂಕಯ್ಯನು ತನ್ನ ಮತ್ತು ಗುರುವಾದ ಬೀಚನಿಗೆ ಆ ದೇವಸ್ಥಾನವನ್ನು ಕೊಟ್ಟಂತೆ ಕಂಡುಬರುವುದು. ಅದೇ ರೀತಿ ಮತ್ತೊಂದು ಶಾಸನದಲ್ಲಿ ಇದರ ಕಾಲ ಕ್ರಿ.ಶ. ೧೨೦೮ ನವಂಬರ್ ೨೪ ಸೋಮವಾರ ಯಾದವ ಸಿಂಘಣನ ಆಳ್ವಿಕೆಯ ೧೦ನೇ ವರ್ಷದ ಈ ಶಾಸನದಲ್ಲಿ ಮಲ್ಲಿನಾಥ ಕಾಮನೆಂಬುವನು ಮಂಕಯ್ಯನಿಗೆ ಅಲ್ಲಿಯ ದೇವರಿಗೆ ಭೂಮಿ, ಬಂಗಾರ ಮನೆ, ನಿವೇಶನವನು ದತ್ತಿ ಕೊಟ್ಟನೆಂದಿದೆ." ಈ ಎರಡೂ ಶಾಸನಗಳಲ್ಲಿ ಮಂಕಯ್ಯನೆಂಬುವನ ಉಲ್ಲೇಖವಿದೆ. ಏಕೆಂದರೆ ಕುರುಬರಲ್ಲಿ ಸರೂರಿನ ಸಂಪ್ರದಾಯದವರೆಂಬ ಒಂದು ಪಂಗಡವೇ ಇದೆ. ಆದ್ದರಿಂದ ಸರೂರಿನ ಗುರುಒಡೆಯರ ಪರಂಪರೆಗೆ ಮೂಲ ಆಕರಗಳು ದೊರೆಯುತ್ತವೆ. ಮಂಕಯ್ಯ, ಮರುಳಯ್ಯ, ಮಂಕಸಿದ್ಧ ಈ ರೀತಿಯಾದ ಹೆಸರುಗಳು ಸರೂರಿನಲ್ಲಿ ಬರುವ ಮಂಕೊಡೆಯರ ಪರಂಪರೆಗೆ ಸೇರಿದವರು ಎಂಬುದು ತಿಳಿದುಬರುತ್ತದೆ.

೨. ದಾಖಲೆ ಪತ್ರಗಳು

ಈ ಪರಂಪರೆಗೆ ಸಂಬಂಧಿಸಿದಂತೆ ಕೆಲವು ದಾಖಲೆ ಪತ್ರಗಳು ದೊರಕಿವೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೊರೆತ ಪತ್ರಗಳು, ಇವು ಹೆಚ್ಚಾಗಿ ಸರೂರಿನ ಗುರುಪೀಠದಿಂದ ನಿರ್ಣಯವಾದ

ವಾದವಿವಾದಗಳ ಬಗ್ಗೆ ಹಾಗೂ ಈ ಪೀಠದಿಂದ ಮಾನ್ಯತೆ ಪಡೆದ ಶಾಖಮಠಗಳ ಬಗ್ಗೆ, ಶಿಕ್ಷಣದ ಬಗ್ಗೆ, ನಡುವಳಿಕೆಯ ಬಗ್ಗೆ, ಒಡೆಯರು ತಮ್ಮ ಗುರುಪರಂಪರೆಯನ್ನು ರೂಢಿಸಿಕೊಂಡು ಬಂದಾಗ ಹೇಗೆ ಇರಬೇಕು, ಹೇಗೆ ಇರಬಾರದು ಹಾಗೂ ಅವರ ಮತಧರ್ಮದ ಚೌಕಟ್ಟನ್ನು ಮೀರಿ ನಿಂತವರಿಗೆ ದಂಡನೆ ವಿಧಿಸುವಂತಹದ್ದು, ಅವರು ತೆಗೆದುಕೊಂಡ ತೀರ್ಮಾನಗಳ ಬಗ್ಗೆ ದಾನದತ್ತಿ, ನೀಡಿದ್ದರ ಬಗ್ಗೆ ಹೀಗೆ ಹಲವಾರು ಸಂಗತಿಗಳನ್ನು ಬಿಚ್ಚಿಡುವ ಪತ್ರಗಳು ದೊರಕಿವೆ. ಅವುಗಳನ್ನು ಚರ್ಚಿಸುವುದಾದರೆ,

ಕ್ರಿ.ಶ. ೧೯೧೪ರಲ್ಲಿ ಗುರು ಹಿರಿಯರ ಸಮ್ಮುಖದಲ್ಲಿ ನಡೆದ ಒಂದು ಘಟನೆ ಈಗಿದೆ. "ಶ್ರೀಮನ್ ಮಹಾ ಆಸಂಧಿ ಸಂಸ್ಥಾನದ ಗುರುಗಳು ಶ್ರೀ ಸಣ್ಣಸಿದ್ಧಪ್ಪ ಒಡೆಯರು, ಸಿದ್ರಾಮಯ್ಯ ಒಡೆಯರು, ಬಸಪ್ಪ ಒಡೆಯರು ಮತ್ತು ಹನ್ನೆರಡು ಗುಡಿಕಟ್ಟು ಹದಿನೆಂಟು ಹರಿವಾಣ, ಎರಡು ಕಟ್ಟೆಮನೆ ಯಜಮಾನರುಗಳ ಅಧಿಕಾರ ಸ್ಥಾನದಿಂದಾ" ಹಾಸನ ಮತ್ತು ಚಿಕ್ಕಮಂಗಳೂರು ಜಿಲ್ಲೆಯ ಕುರುಬ ಜನಾಂಗದ ಮಹಾಮಂಕಳಿಯವರಿಗೆ ಬರೆದ ದಾಖಲೆ ಪತ್ರ ಇದಾಗಿದೆ.

ಈ ಪತ್ರದಲ್ಲಿ ಉಲ್ಲೇಖಿಸಿರುವಂತೆ "ಕಡೂರಿನ ಒಡಯರ ಮೇಲೆ ಆಸಂದಿ ಕೋಲುಕಾರ ಮರುಳನ ಹೆಂಡತಿಯೊಬ್ಬಳು ಚಿಕ್ಕಮಗಳೂರು ಕೋರ್ಟಿನಲ್ಲಿ ತಾರೀಖು ೭.೧೨.೧೯೧೪ರ ಮರ್ಕ್ಕಂ ಕ್ರಿಮಿನಲ್ ಕೇಸು ನಂಬರು ೨೧ರಲ್ಲಿ ಅಕ್ರಮ ಸ್ತ್ರೀ ಸಂಘದ ಮೊಕದ್ದಮೆ ನಡೆಸಿದ ಸದರಿ ಒಡೆಯರು ಲಾಕೋಫನ್ನು ಅನುಭವಿಸಿದ್ದರ ಮೇರೆಗೆ ಇವರನ್ನು ಮಠದ ಹಕ್ಕಿನಿಂದ ವಜಾ ಮಾಡಿರುತ್ತೇನೆ" ಎಂಬ ವಿಚಾರಗಳನ್ನು ಒಳಗೊಂಡಿದೆ. ನಮಗೆ ಇದರಿಂದ ತಿಳಿಯುವುದು ಇಷ್ಟೇ, ಕುರುಬರ ಗುರುಒಡೆಯರು ತಮ್ಮ ಸಂಪ್ರದಾಯದ ಧಾರ್ಮಿಕ ಚೌಕಟ್ಟಿನ ಮಿತಿಯನ್ನು ಮೀರುವಂತಿಲ್ಲ ಇದರಿಂದ ಒಡೆಯರಲ್ಲಿರುವ ಮಡಿವಂತಿಕೆಯನ್ನು ತಿಳಿಸಿಕೊಡುತ್ತದೆ.

೧೯೨೯ರಲ್ಲಿ ಮೈಸೂರು ಸೀಮೆಯ ಕುರುಬ ಮಹಾಮಂಡಳಿಯವರಿಗೆ ಚನ್ನರಾಯ ಪಟ್ಟಣದ ತಾಲ್ಲೂಕು ಹಾಗೂ ಹೊಳೆನರಸಿಪುರ ತಾಲೂಕಿನ ಆಸುಪಾಸಿನ ಈ ಜನಾಂಗದ ಮುಖ್ಯಸ್ಥರು ಬರೆಸಿರುವ ಕಾಗದವಾಗಿದೆ. ಈ ಪತ್ರದಲ್ಲಿರುವ ಸಂಗತಿಯೇನೆಂದರೆ "ಹಾಲುಮತ ಜನಾಂಗವು ದಿನೇ ದಿನೆ ಕೇವಲ ಹೀನ ಸ್ಥಿತಿಗೇರುತ್ತದೆ. ಈ ಮತಕ್ಕೆ ವಿರೋಧವಾದ ಚಟುವಟಿಕೆಯನ್ನು ಮಾಡುತ್ತಿದೆ. ಆಹಾರ ವ್ಯವಹಾರಗಳ ನ್ಯೂನತೆಯನ್ನು ಸರಿಪಡಿಸಲು ವಿದ್ಯದ ಅಭಿರುಚಿಯನ್ನು ಸೂಚಿಸಲು ಹಾಗೂ ಶುದ್ಧವಾದ ಸಾಂಸ್ಕೃತಿಕ ಆಚರಣೆಗಳನ್ನು ಮಾಡಬೇಕೆಂದು ಸಭೆ ಸೇರಿಸಿ ಸೂಚನೆ ನೀಡುವ ಸಲುವಾಗಿ ಈ ಪತ್ರ ಬರೆಯಲಾಗಿದೆ."

ಇದರಲ್ಲಿ ಉಲ್ಲೇಖಿಸಿರುವಂತೆ "ಚನ್ನರಾಯಪಟ್ಟಣ ತಾಲೂಕು, ದಂಡಿಗನಹಳ್ಳಿ ಹೋಬಳಿ ಬೆಟ್ಟದ ಸಮುದ್ರವಳ್ಳಿ ಗ್ರಾಮದಲ್ಲಿ ತಾರೀಖು ೯.೬.೧೯೨೯ನೇ ಭಾನುವಾರದಲಾಯಿತು. ಎರಡು

ಮೂರು ದಿವಸದವರೆಗೆ ಸಭೆ ನೆರೆಯಬೇಕೆಂದು ಈ ಮಠಕ್ಕೆ ಸಂಬಂಧಪಟ್ಟ ಸರವೂರು ಖ್ಯಾಖ ಆಸಂದಿ ಸಿಂಬಾಸನದ ಗುರುಗಳು ಕಡೂರಿನಲ್ಲಿ ಬಿಜ ಮಾಡಿರುವ ಸಿದ್ಧರಾಮಪ್ಪ ವಡೆಯರು ಅಣತಿ ಮಠದ ಗುರುಗಳು ವಳಗೆರೆ ಹಳ್ಳಿಯಲ್ಲಿ ಬಿಜಮಾಡಿರುವ ಶಾಂತಪ್ಪವಡೆಯರು ಈ ಸಭೆ ನಡೆಸಬೇಕೆಂದು ಬೇಡುತ್ತೇವೆ ಎಂದು ಪತ್ರ ಬರೆಯುತ್ತಾರೆ."

೧೯೩೧ರಲ್ಲಿ ನಡೆದ ಕುರುಬರ ಮಹಾನಾಡು ಸಭೆಯ ತೀರ್ಮಾನದ ಒಂದು ದಾಖಲೆಯ ಪತ್ರ ಸಿಕ್ಕಿದೆ. ಅದರಲ್ಲಿ ಉಲ್ಲೇಖಿಸಿರುವಂತೆ "ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ಬರಗೂರು ಶ್ರೀ ಬೀರೇಶ್ವರಸ್ವಾಮಿ ದೇವಸ್ಥಾನದ ಬಳಿ ತಾರೀಖು ೨೭ ಮತ್ತು ೨೮ನೇ ಫೆಬ್ರುವರಿ ೧೯೩೧ರಲ್ಲಿ ನಡೆದ ಸಭೆಯಲ್ಲಿ ತೀರ್ಮಾನವಾದ ಸಂಗತಿಗಳನ್ನು ಇದರಲ್ಲಿ ದಾಖಲಿಸಿದ್ದಾರೆ. ಅವುಗಳೆಂದರೆ ಶಿಕ್ಷಣದ ಬಗ್ಗೆ ಕಾಳಜಿವಹಿಸಿ ವಿದ್ಯಾರ್ಥಿ ನಿಲಯಕ್ಕೆ ಬೇಕಾಗುವ ಜಾಗಕ್ಕೋಸ್ಕರ ಸರ್ಕಾರಕ್ಕೆ ಮನವಿ ಮಾಡಿರುವಂತಹದ್ದು. ಹೆಣ್ಣಿನ ಕಡೆಯವರು ಗಂಡಿನ ಕಡೆಯವರಿಂದ ಹಣವನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸಬೇಕು ಅಂದರೆ ಅಂದಿನ ಕಾಲದಲ್ಲಿಯೇ 'ವಧುದಕ್ಷಿಣೆ' ಎಂಬ ಮೂಢ ಪದ್ಧತಿಯನ್ನು ಸಂಪೂರ್ಣ ವಿರೋಧಿಸಿರುವುದು ಹಾಗೆಯೇ ತಮ್ಮ ಕುಲಸ್ತರು ಲಗ್ನಕಾಲದಲ್ಲಿ ಹೆಣ್ಣಿನವರು ೨ ರೂಪಾಯಿ, ಗಂಡಿನವರು ೩ ರೂಪಾಯಿಗಳನ್ನು ವಿದ್ಯಾಭ್ಯಾಸದ ಪಂಡಿತರಿಗೆ ಕೊಡಬೇಕಾಗಿತ್ತು. ವಿಶೇಷವಾಗಿ ನಮ್ಮ ಜನಗಳು ನಮ್ಮ ಕುಲಗುರುಗಳಾದ ಸರವೂರು ಶಾಖಾಗುರುಗಳಿಗೆ ಹೊರತು ಅನ್ಯಜಾತಿಯ ಗುರುಗಳಿಗೆ ನಡೆದುಕೊಳ್ಳಬಾರದು. ಏಕೆಂದರೆ ಕುರುಬರ ಗುರುಪರಂಪರೆಗೆ ಮೂಲಕೇಂದ್ರ ಸರೂರಾಗಿರುವುದರಿಂದ ಈ ರೀತಿಯಾದ ತೀರ್ಮಾನ ತೆಗೆದುಕೊಂಡಿರಬಹುದು." ಇದೇ ರೀತಿಯಾದ ದಾಖಲೆ ಪತ್ರಗಳು ಆಂಧ್ರದಲ್ಲಿಯೂ ಸಿಕ್ಕಿರುವುದು ನಮಗೆ ತಿಳಿದುಬರುತ್ತದೆ.

೧೯೮೦ರಲ್ಲಿ ಕಲ್ಯಾಣದುರ್ಗ ತಾಲೂಕು ಶೀರ್ಪಿಗ್ರಾಮದಲ್ಲಿ ಸಿದ್ಧೇಶ್ವರ ಸ್ವಾಮಿ ದೇವಾಲಯವಿದೆ. ಇದು ಸು. ೮೦೦(ಎಂಟನೂರು) ವರ್ಷಗಳ ಇತಿಹಾಸ ಹೊಂದಿದ್ದು, ಈ ದೇವಾಲಯವು ಸರ್ಕಾರದ ಅಧೀನದ ಭೂಮಿಯಲ್ಲಿದೆ. ಆದ್ದರಿಂದ ಅಲ್ಲಿನ ಗುರುಒಡೆಯರು ಹಿರಿಯರು ಸೇರಿ ಸರ್ಕಾರಕ್ಕೆ ಒಂದು ಪತ್ರ ಬರೆದಿರುವಂತಹದ್ದು. ಅದರಲ್ಲಿ ಉಲ್ಲೇಖಿಸಿರುವಂತೆ "ಮಹಾರಾಜ ರಾಜಶ್ರೀ ಧರ್ಮವರಂ ರೆವಿನ್ಯೂ ಡಿ.ವಿ.ಜಿ.ನಲ್ ಆಫೀಸರು ಅವರ ಸಮಕ್ಷಮಕ್ಕೆ ಅನಂತಪುರ ಜಿಲ್ಲೆ ಕಲ್ಯಾಣದುರ್ಗ ಸಬ್ ಡಿವಿಜನ್‌ಗೆ ಸೇರಿದ ವೇಪಲಪರ್ತಿ, ಲಕ್ಷ್ಮಂಪಲ್ಲಿ, ಕರ್ನಾಟಕರಾಜ್ಯದ ಪಾವಗಡ ತಾಲೂಕಿನ ಜಾಲೋಡು ಗ್ರಾಮ ಮತ್ತು ಕರ್ತನಪರ್ತಿ ಗ್ರಾಮಗಳಲ್ಲಿ ನೆಲೆಸಿರುವ ಹಾಗೂ ಇಲ್ಲಿ ಸಂತಾನವನ್ನು ಹೊಂದಿರುವವರು. ಶೀರ್ಪಿ ಗ್ರಾಮದಲ್ಲಿರುವ ಸಿದ್ಧೇಶ್ವರಸ್ವಾಮಿ ದೇವಾಲಯಕ್ಕೆ ಭಕ್ತರಾದ ನಾವು ವಿನಯ ಪೂರ್ವಕವಾಗಿ ಪ್ರಾರ್ಥಿಸುವ ಮನವಿಪತ್ರ ಇದಾಗಿದೆ. ಇದು ತೆಲುಗು ಲಿಪಿ ಮತ್ತು ಭಾಷೆಯನ್ನು ಒಳಗೊಂಡಿದೆ. ಅದೇ ರೀತಿ, ಸ್ವಸ್ತಿ ವಿಜಯಾಭ್ಯುದಯ ಶಾಲಿವಾಹನ ಶಖ ವರ್ಷಂಗಳು ಸನ್ ೧೧೯೯ನೆಯ ಪ್ರಮೋದೂತ ನಾಮ ಸಂವತ್ಸರ ಆಶ್ವಿಯುಜ ಶುದ್ಧ ೧೦ನೇ ಸೋಮವಾರದಂದು

ರೇವಣ ಸಿದ್ಧೇಶ್ವರ ವರಪ್ರಸಾದದಿಂದ ಜೀವಿಸುತ್ತಿರುವ ಶೀರ್ಪಿಯ ಬುಡ್ಡೇ ವಡೆಯರು–ನಾಗಪ್ಪ ವಡೆಯರು, ಸಿದ್ಧಪ್ಪ ವಡಿಯರು, ರೇವಣ್ಣ ವಡಿಯರು ಈ ನಾಲ್ಕು ಜನ ಅಣ್ಣ ತಮ್ಮಂದಿರು ಇವರಿಗೆ ಬುಡ್ಡೇ ವಡೆಯರು ಲಿಂಗ ನಿರ್ಮಾಣ ಮಾಡಿಕೊಟ್ಟಿರುವ ಸಂಗತಿಯನ್ನು ತಿಳಿಸಿಕೊಡುತ್ತದೆ. ಈ ರೀತಿಯಾದ ಒಡೆಯರ ಗುರುಪರಂಪರೆಯಲ್ಲಿ ನಡೆದ ಸಾಂಸ್ಕೃತಿಕವಾದ ಅಡೆತಡೆಗಳನ್ನು ತೋರಿಸಿಕೊಡುತ್ತವೆ.

ಒಟ್ಟಾರೇ ಈ ರೀತಿಯಾದ ದಾಖಲೆ ಪತ್ರಗಳನ್ನು ಗಮನಿಸಿದಾಗ ನಮಗೆ ಕುರುಬರ ಗುರುಒಡೆಯರ ಸಂಪ್ರದಾಯದ ಪರಂಪರೆಗೆ ಸರೂರು ಮೊದಲ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಸರೂರು ಸಂಪ್ರದಾಯದ ಒಡೆಯರು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ನೆಲೆಸಿರುವ ಸಂಗತಿಗಳು ತಿಳಿಯುತ್ತವೆ. ಇಂತಹ ದಾಖಲೆಗಳಿಂದ ಯಾವುದೇ ಒಂದು ಇತಿಹಾಸವನ್ನು ಮರುಸೃಷ್ಟಿಸಲು ಸಾಧ್ಯವಿದೆ. ಅಂದರೆ ಆಕರಗಳು ಹೆಚ್ಚು ಹೆಚ್ಚು ದೊರೆತಂತೆಲ್ಲ ಒಂದು ವಿಷಯದ ಚಿತ್ರಣ ಸ್ಪಷ್ಟವಾಗುತ್ತದೆ.

೩. ಭಾಷಣಗಳು ಮತ್ತು ವರದಿಗಳು

ಹಾಲುಮತ ಸಮುದಾಯದ ಮಹನೀಯರು ತಮ್ಮ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿಯುತ್ತಿದ್ದರು. ಅದೇ ರೀತಿ ಜನ ಜಾಗೃತಿಯನ್ನು ಮೂಡಿಸುವ ಸಲುವಾಗಿ ಒಂದೆಡೆ ಸಂಘಟಿತರಾಗಿ ಸಭೆಗಳನ್ನು ನಡೆಸುತ್ತಿದ್ದರು. ಈ ಸಭೆಗಳ ಪ್ರಮುಖ ಉದ್ದೇಶವೇನೆಂದರೆ, ತಮ್ಮ ಜನಾಂಗದ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ವಿಚಾರಗಳನ್ನು ಕುರಿತು ತಿಳುವಳಿಕೆ ಮೂಡಿಸುವುದಾಗಿತ್ತು. ಇಂತಹ ನೀತಿ ನಿಯಮಗಳ ವಿಚಾರಗಳನ್ನು ಕುರಿತು ಹಲವಾರು ಗಣ್ಯಮಾನ್ಯರು ಹಾಲುಮತ ಸಭೆಗಳಲ್ಲಿ ತಿಳಿಸುತ್ತಿದ್ದರು. ಹೀಗೆ ತಿಳಿಸಿದಂತಹ ಭಾಷಣಗಳನ್ನು, ಮಾಹಿತಿಗಳನ್ನು ವರದಿಯ ರೂಪದಲ್ಲಿ ಪ್ರಕಟಿಸಲಾಗುತ್ತಿತ್ತು. ಈ ಎಲ್ಲ ವರದಿ ಭಾಷಣಗಳನ್ನು ಎಫ್.ಟಿ. ಹಳ್ಳಿಕೇರಿ ಅವರು ಸಂಗ್ರಹಿಸಿ "ಹಾಲುಮತ ಮಹಾಸಭೆ ಭಾಷಣಗಳು ಮತ್ತು ವರದಿಗಳು" ಎಂಬ ಸಂಪುಟವನ್ನು ಪ್ರಕಟಿಸಿದ್ದಾರೆ. ಇದು ಅಲ್ಲದೇ ಬಿಡಿಬಿಡಿ ರೂಪದಲ್ಲಿಯೂ ಕೆಲವು ಸಭೆ, ಮಹಾಸಭೆಗಳ ವರದಿಗಳನ್ನು ದಾಖಲೆಗಳ ರೂಪದಲ್ಲಿ ಪ್ರಕಟಿಸಲಾಗಿದೆ. ಇವುಗಳಲ್ಲಿ ಪ್ರಮುಖವಾಗಿ ಸಭೆ, ಭಾಷಣಗಳು, ಉಪನ್ಯಾಸಗಳು ಸುಮಾರು ಇಪ್ಪತ್ತನೆಯ ಶತಮಾನದ ಆರಂಭದಿಂದಲೂ ಈ ಸಮುದಾಯದಲ್ಲಿ ಕಂಡುಬರುತ್ತವೆ. ಇಂತಹ ಸಂಘಟನೀಯ ಸಭೆ ಅಥವಾ ಭಾಷಣಗಳು ಎಲ್ಲೆಲ್ಲಿ ನಡೆದಿವೆ, ಯಾವಾಗ ನಡೆದಿವೆ, ಇವು ಯಾರ ಅಧೀನದಲ್ಲಿ ನಡೆದಿರುತ್ತವೆ. ಹೀಗೆ ನಡೆದಂತಹ ಸಭೆಗಳಲ್ಲಿ ಯಾರ್‍ಯಾರು ಉಪನ್ಯಾಸ ನೀಡಿದರು, ಅದರ ಅಧ್ಯಕ್ಷತೆ ಯಾರು ಎಂಬ ಅನೇಕ ವಿಚಾರಗಳನ್ನು ಈ ವರದಿಗಳಲ್ಲಿ ಗಮನಿಸಬಹುದು. ಇದರಲ್ಲಿ ೧೯೧೦ ಅಕ್ಟೋಬರ್ ೨೩ರಿಂದ ೨೫ರ ವರೆಗೆ ಲಕ್ಷ್ಮೇಶ್ವರದಲ್ಲಿ ನಡೆದ ಮಹಾಸಭೆಯಿಂದ ಹಿಡಿದು ಈವರೆಗೆ ಉಪಲಬ್ಧವಾಗಿರುವ ವರದಿಗಳನ್ನು ಈ ಸಂಪುಟದಲ್ಲಿ ಪ್ರಕಟಿಸಿದ್ದಾರೆ.

೧. ಹಾಲುಮತ ಧಾರ್ಮಿಕ ಹಾಗೂ ವಿದ್ಯಾವರ್ಧಕ ಮಹಾಸಭೆ

೧. ಲಕ್ಷ್ಮೇಶ್ವರದಲ್ಲಿ ೧೯೧೦ನೆಯ ಅಕ್ಟೋಬರ್‌ನಲ್ಲಿ ನಡೆದ ೧ನೆಯ ಮಹಾಸಭೆ

೨. ಹುಲ್ಲೂರಿನಲ್ಲಿ ೧೯೨೩ನೆಯ ಏಪ್ರಿಲ್‌ನಲ್ಲಿ ನಡೆದ ೨ನೆಯ ಮಹಾಸಭೆ

೩. ದೇವಗಿರಿಯಲ್ಲಿ ೧೯೨೩ನೆಯ ಡಿಸೆಂಬರ್‌ನಲ್ಲಿ ನಡೆದ ೩ನೆಯ ಮಹಾಸಭೆ

೪. ಅಬ್ಬಿಗೇರಿಯಲ್ಲಿ ೧೯೨೯ನೆಯ ಸೆಪ್ಟಂಬರ್‌ನಲ್ಲಿ ನಡೆದ ೪ನೆಯ ಮಹಾಸಭೆ

೨. ಕರ್ನಾಟಕ ಹಾಲುಮತ(ಕುರುಬರ) ಪರಿಷತ್ತು

೫. ನಲವಡಿಯಲ್ಲಿ ೧೯೨೦ರಲ್ಲಿ ನಡೆದ ೧ನೆಯ ಕುರುಬರ ಪರಿಷತ್ತು

೬. ಬಂಕಾಪುರದಲ್ಲಿ ೧೯೨೪ರಲ್ಲಿ ನಡೆದ ೨ನೆಯ ಕುರುಬರ ಪರಿಷತ್ತು

೭. ರಾಣೇಬೆನ್ನೂರಿನಲ್ಲಿ ೧೯೩೭ರಲ್ಲಿ ನಡೆದ ೩ನೆಯ ಕುರುಬರ ಪರಿಷತ್ತು

೮. ಗೋಕಾಕನಲ್ಲಿ ೧೯೩೯ರಲ್ಲಿ ನಡೆದ ೪ನೆಯ ಕುರುಬರ ಪರಿಷತ್ತು

೩. ಅಖಿಲ ಭಾರತ ಹಾಲುಮತ(ಕುರುಬರ) ಪರಿಷತ್ತು

೯. ಪುಣೆಯ ಜೇಜೂರಿಯಲ್ಲಿ ೧೯೨೦ರಲ್ಲಿ ನಡೆದ ೧ನೆಯ ಕುರುಬರರ ಪರಿಷತ್ತು

೧೦ ಅಮಳನೇರದಲ್ಲಿ ೧೯೨೨ರಲ್ಲಿ ನಡೆದ ೨ನೆಯ ಕುರುಬರ ಪರಿಷತ್ತು.

೪. ಸಭೆಗಳು

೧೧.ಅಮೋಗಿ ಸಿದ್ಧಾರ್ಯ ಕುರುಬರ ಬೋರ್ಡಿಂಗ ಸ್ಥಾಪನೆಯ ವರದಿ

೧೨.ಕುರುಬರ ವಿದ್ಯಾರ್ಥಿಗಳ ಧರ್ಮಾರ್ಥ ಬೋರ್ಡಿಂಗ ವರದಿ

೧೩.ಕುರುಬರ ಸಂಘ ಸ್ಥಾಪನೆಯ ಪೂರ್ವಭಾವಿ ಸಭೆಯ ವರದಿ

ಈ ಮೇಲಿನವುಗಳಲ್ಲಿ ಕೆಲವು ಸಭೆ, ಮಹಾಸಭೆ ಹಾಗೂ ಸಮ್ಮೇಳನಗಳ ವರದಿಗಳು ಲಭ್ಯವಿವೆ. ಇನ್ನೂ ದೇವಗಿರಿ, ನಲವಡಿ ಗೋಕಾಕ, ಪುಣೆ ಹಾಗೂ ಅಮಳನೇರಗಳಲ್ಲಿ ನಡೆದ ಕಾರ್ಯಕ್ರಮಗಳ ವರದಿಗಳು ದೊರೆತಿಲ್ಲ. ಆದರೆ ದೊರೆತಿರುವ ವರದಿಗಳು ಆಯಾ ಮಹಾಸಭೆ, ಪರಿಷತ್ತುಗಳ ವಿವರಗಳನ್ನು ತಿಳಿಸುತ್ತವೆ. ಇವುಗಳ ಸ್ವರೂಪ ಆರಂಭದಲ್ಲಿ ಸ್ವಾಗತಾಧ್ಯಕ್ಷರ ಭಾಷಣ, ಅಧ್ಯಕ್ಷರ ಭಾಷಣ, ಉಪನ್ಯಾಸಗಳ ವಿವರ, ಮಂಡಿಸಿದ ಠರಾವುಗಳು ಹಾಗೂ ಪಾಲ್ಗೊಂಡ ಗಣ್ಯಮಾನ್ಯರ ಹೆಸರುಗಳನ್ನು ದಾಖಲಿಸಲಾಗಿದೆ.

೧. ಲಕ್ಷ್ಮೇಶ್ವರದಲ್ಲಿ ೧೯೧೦ನೆಯ ಅಕ್ಟೋಬರ್‌ನಲ್ಲಿ ನಡೆದ ೧ನೆಯ ಮಹಾಸಭೆ

ಈ ಸಭೆಯು ಅಕ್ಟೋಬರ್ ತಿಂಗಳಿನ ೨೩ರಿಂದ ೨೫ರವರೆಗೆ ಮೂರು ದಿನಗಳ ಕಾಲ ನಡೆದ ಶ್ರೀ ಹಾಲುಮತ ಧರ್ಮೋತ್ತೇಜಕ ಮಹಾಸಭೆಯು ಇದಾಗಿದೆ. ಈ ಸಭೆಯೂ ಹಾಲುಮತ ಸಮುದಾಯವು ಆಯೋಜಿಸಿದ ಮೊದಲನೆಯ ಸಭೆಯಾಗಿದೆ. ಈ ಸಭೆಯನ್ನು ಲಕ್ಷ್ಮೇಶ್ವರ, ಶಿರಹಟ್ಟಿ, ಗುಡಗೇರಿ ಈ ಮೂರು ತಾಲೂಕಿನ ಮಹನೀಯರು ಸೇರಿ ಈ ಸಭೆಯನ್ನು ಸೇರಿಸಿರುತ್ತಾರೆ.

ಇದರ ಅಧ್ಯಕ್ಷತೆಯನ್ನು ಶ್ರೀ ಅಮೋಗಿಸಿದ್ಧಯ್ಯನವರು ವಹಿಸಿಕೊಂಡಿರುತ್ತಾರೆ. ಈ ಸಭೆಯ ಭಾಷಣಕಾರರಾಗಿ ಪ್ರಮುಖವಾಗಿ ಬಸವಂಣ್ಣೆಪ್ಪ ಹಳವಳ್ಳಿ ಬಂಕಾಪೂರ, ಗುರುಪಾದಯ್ಯನವರು, ಗುರುವಿನ ಹೂವಿನ ಹಡಗಲಿ, ಗುರು ಶಾಂತಪ್ಪಾ ಅಂಣಾ ಹಾನಗಲ್ಲ, ಕನ್ನಿಲೇಟರ್ ಬಂಕಾಪೂರ, ಕರಿಯಪ್ಪಾ ಸಿದ್ಧಪ್ಪಾ ಒಂದನೇ ನಂಬರ ಸ್ಕೂಲ ಮಾಸ್ತರ ಲಕ್ಷ್ಮೇಶ್ವರ ಇನ್ನೂ ಅನೇಕ ಗಣ್ಯರು ಈ ಸಭೆಯಲ್ಲಿ ಭಾಗವಹಿಸಿ ಭಾಷಣವನ್ನು ಮಾಡಿರುತ್ತಾರೆ. ಇವರ ಭಾಷಣಗಳ ತಿರುಳು ಇಷ್ಟೇ, ಹಾಲುಮತ ಸಮುದಾಯದವರು ಮೌಢ್ಯತೆ ಮತ್ತು ಅನಾಚಾರದಲ್ಲಿ ತೊಡಗಿಕೊಂಡಿದ್ದಾರೆ. ಅವರನ್ನು ಆಚಾರವಂತರನ್ನಾಗಿ ಮಾಡಬೇಕು. ಆದ್ದರಿಂದ ಅದಕ್ಕೆ ಪೂರಕವಾದ ಸಲಹೆ ಸೂಚನೆಗಳನ್ನು ನೀಡುವ ಭಾಷಣಗಳು ಇವಾಗಿವೆ.

೧ನೆಯ ಹಾಲುಮತ ಧರ್ಮೋತ್ತೇಜಕ ಮಹಾಸಭೆಯಲ್ಲಿ ಪಾಸಾದ ಠರಾವುಗಳು

* ಶ್ರೀ ಹಾಲುಮತವು ಅನಾದಿ ಕಾಲದಲ್ಲಿತ್ತೆಂತಲೂ ಕಲ್ಯಾಣದಲ್ಲಿ ಬಸವಾದಿ ಪ್ರಮಥರು ಅರವತ್ತು ಮೂರು ಮಂದಿ ಮಹನೀಯರ ಪೈಕಿ ಒಬ್ಬ ಶರಣನು ಹುಟ್ಟಿ ಶಿವಭಕ್ತಿಯನ್ನು ಕೈಕೊಂಡು ಪರಿಶೀಲ ಮಹಾಜ್ಞಾನಿಯು ವೃದ್ಧಿಪಡಿಸಿದನೆಂತಲೂ ನಿಗಮಾಗಮ ಪುರಾಣೋಕ್ತಿಗಳಿಂದ ಸಿದ್ಧಮಾಡಿ ಗರುಡಪ್ಪಯ್ಯನವರ ತಿಮ್ಮಪ್ಪನವರೂ ಉಳಿದ ಮಹನೀಯರೂ ಮಾಡಿದ ಭಾಷಣಕ್ಕೆ ಸಭಾಸ್ಥರು ಒಪ್ಪಿಗೆ ಪಡುತ್ತಾರೆ.
* ಕಾಲಾಂತರದಿಂದ ಹೀನಸ್ಥಿತಿ ಹೋಗಲಾಡಿಸುವುದಕ್ಕೆ ಗುರುಪಾದಯ್ಯನವರು ಹಡಗಲಿ ಇವರ ಭಾಷಣದ ಪ್ರಕಾರ ಧರ್ಮೋಪದೇಶ ಮಾಡಲಿಕ್ಕೆ ಯಾವತ್ತು ಗುರುಗಳು ಒಪ್ಪಿಗೆ ಪಟ್ಟದ್ದರಿಂದ ಸುಧಾರಿಸಲಿಕ್ಕೆ ಅಡ್ಡಿ ಇಲ್ಲವೆಂದು ಸಭಾಸದಸ್ಯರು ಒಪ್ಪಿಗೆ ಪಡುವರು.
* ನಮ್ಮ ಮತದಲ್ಲಿ ದುರಾಚಾರದಿಂದ ನಡೆದಂಥವರನ್ನು ಸಮಾಜದಿಂದ ದೂರ ಮಾಡಬೇಕೆಂದು ಸರ್ವರ ಭಾಷಣದ ಮೇಲಿಂದ ಮಹಾಸಭೆಯವರು ಅಭಿಪ್ರಾಯಪಡುತ್ತಾರೆ.
* ಕನ್ಯಾದಾನ ಮಾಡುವುದು ಉತ್ತಮ ಪದ್ಧತಿಯೆಂತಲೂ ಇದರಂತೆ ಶಿಷ್ಯರೆಲ್ಲರೂ ನಡೆಯಬೇಕೆಂತಲೂ ಕನ್ಯೆಗೆ ಹಣ ತಗೊಂಡು ಮಾರಲಿಕ್ಕೆ ಕೊಡುವಂಥಾ ನಡತೆಯನ್ನು ಸ್ವೀಕರಿಸಬಾರದೆಂತಲೂ ಗುರುಪಾದಯ್ಯನವರು ಹಡಗಲಿ ಇವರ ಭಾಷಣದ ಮೇಲಿಂದ ಸಭೆಯವರು ಅಭಿಪ್ರಾಯಪಡುವರು.
* ಗಂಡ ಸತ್ತ ನಂತರ ವ್ಯಭಿಚಾರ ಮಾಡುವರನ್ನು ಹಡೆದವರನ್ನು ಜಾತಿಯಲ್ಲಿ ಶುದಧಾಚ್ಯಾರ ಮಾಡಿ ತೆಗೆದುಕೊಳ್ಳಬಾರದೆಂದು ಸಭೆಯವರ ಕಟ್ಟಳೆಯಾಗಿದೆ.
* ಹಾಲುಮತ ಶ್ರೀ ಗುರುಗಳಾದ ಮಠಸ್ಥರು ತಮ್ಮ ಶಿಷ್ಯರಿಗೆ ದುರಾಚ್ಯಾರದ ನಡಾವಳಿಯನ್ನು ಬಿಡಿಸಿ, ಸನ್ಮಾರ್ಗಕ್ಕೆ ಹಂಚಬೇಕೆಂತಲೂ, ಹಾಲುಮತವು ಜ್ಞಾನಮಾರ್ಗದಿಂದಿದ್ದು ಕರ್ಮಮಾರ್ಗಕ್ಕೆ ಸೇರಿಸಬಾರದೆಂತಲೂ ಸದರೀ ಸರ್ವರ ಉಪನ್ಯಾಸದ ಮೇಲಿಂದ ಹೇಳಿದೆ ಇದಕ್ಕೆ ತಪ್ಪಿ

ದುರಾಚಾರದಿಂದ ನಡಿಸುವಂಥಾ ಗುರುಗಳಿಗೆ ಭಿಕ್ಷ ವಗೈರೆ, ಮಾನ ಮರ್ಯಾದೆ ಕೊಡಬಾರದೆಂತಲೂ ಸಭೆಯವರು ಅಭಿಪ್ರಾಯಪಡುವರು.

* ವಿದ್ಯದ ಮಹತ್ವವನ್ನು ಬೆಳೆಸಲಿಕ್ಕೆ ಅಧ್ಯಕ್ಷರು ಸದರೀ ಮೂರು ತಾಲೂಕಿನ ಬಡಹುಡುಗರಿಗೆ ಅನ್ನೋದಕ ಕೊಟ್ಟು ವಿದ್ಯ ಕಲಿಸುವುದಕ್ಕೆ ಕಬೂಲ ಮಾಡಿದಂತೆ ಸರ್ವ ಪ್ರಯತ್ನ ವಿದ್ಯಾವರ್ಧಕ ಫಂಡು ಕೊಡಿಸಬೇಕು, ಗುರು ಶಾಂತಪ್ಪಾ ಅಣ್ಣಾ ಹಾನಗಲ್ಲವ ಸರ್ವ ಉಪನ್ಯಾಸಕರೂ ಹೇಳಿದ ಮೇರೆಗೆ ಸಭೆಯವರು ಸಹಾಯ ಮಾಡುತ್ತೇವೆಂಬುದಾಗಿ ಅಭಿಪ್ರಾಯಪಡುವರು. ಹೀಗೆ ಅನೇಕ ರೀತಿಯಾದ ವಿಚಾರಗಳನ್ನು ಈ ಸಭೆಯಲ್ಲಿ ಭಾಷಣ ಮಾಡಿದ ಉಪನ್ಯಾಸಕರ ವಿಚಾರಗಳನ್ನು ಒಳಗೊಂಡಂತೆ ಈ ಠರಾವುಗಳನ್ನು ಹೊರಡಿಸಿರುವುದಾಗಿದೆ.

೨. ೨ನೆಯ ಹಾಲುಮತ ಮಹಾಸಭೆಯ ಅಧ್ಯಕ್ಷರ ಭಾಷಣ

ಈ ಹಾಲುಮತ ಮಹಾಸಭೆಯ ಅಧ್ಯಕ್ಷರ ಭಾಷಣವನ್ನು ತಾರೀಖು ೨೭.೦೪.೧೯೨೩ರಂದು ಮಾಡಿದ್ದಾರೆ. ಹುಲ್ಲೂರು ಶಿರಹಟ್ಟಿ ತಾಲ್ಲೂಕು, ಸಾಂಗಲ್ಲಿ ಸಂಸ್ಥಾನ, ಧಾರವಾಡ ಜಿಲ್ಲಾ, ಅಧ್ಯಕ್ಷರಾದ ವೇದಮೂರ್ತಿ ಶ್ರೀ ಗುರುಚರಮೂರ್ತಿ ಗುರುಸಿದ್ಧಯ್ಯಸ್ವಾಮಿಗಳು ಮಠ ಸಂಗ್ರೆಕೊಪ್ಪ ತಾಲೂಕು ಸವದತ್ತಿ ಜಿಲ್ಲಾ ಬೆಳಗಾಂವ ಇವರು ಮಾಡಿದ್ದಾರೆ. ಇವರು ತಮ್ಮ ಸಮುದಾಯದ ಜನರು ಮಾಡುವ ದುಷ್ಟ ಕಾರ್ಯಗಳ ವಿರುದ್ಧ ಉಪನ್ಯಾಸವನ್ನು ನೀಡಿದ್ದಾರೆ. ತಮ್ಮ ಸಮುದಾಯದ ಜನರು ಧರ್ಮದ ದುರುಪಯೋಗ ಮಾಡಿ ಗುರು ಶಿಷ್ಯಭಾವವನ್ನು ಕಡಿಮೆ ಮಾಡುತ್ತಾ ಧರ್ಮ ದ್ರೋಹಿಗಳಾಗುತ್ತಿರುವರು, ಇದರಿಂದ ನಮ್ಮ ಪವಿತ್ರವಾದ ರೇವಣಸಿದ್ಧೇಶ್ವರ ಧರ್ಮದ ಹಾಲುಮತವು ದೀನೇ ದಿನೇ ಕ್ಷೀಣಾವಸ್ಥೆಯನ್ನು ಹೊಂದುತ್ತಿದೆ. ಇದಲ್ಲದೆ ನಮ್ಮ ಧರ್ಮದಲ್ಲಿ ಮಧ್ಯಪಾನ, ಮಾಂಸಹಾರ, ಗಾಂಜ, ಸೇವನೆ ಮಾಡುವ ಜನರಿದ್ದಾರೆ. ಇಂತಹ ರಾಕ್ಷಸ ಕೆಲಸಗಳನ್ನು ಬಿಟ್ಟು ಒಳ್ಳೆಯದಾರಿಯಲ್ಲಿ ನಡೆಯಿರಿ ಎಂಬ ಮಾತುಗಳನ್ನು ಹೇಳಿದ್ದಾರೆ. ಅದೇ ರೀತಿ ನಮ್ಮ ಜನರಲ್ಲಿ ವಿದ್ಯಾಭಿರುಚಿ ಸ್ವಲ್ಪವಾದರೂ ಇರದೇ ಆಹಾರ ನಿದ್ರಾಭಯ ಮೊದಲಾದವುಗಳಿಂದ ದ್ವಿಪಾದ ಪಶುಗಳಂತೆ ಆಚರಿಸಿ ಮಾನವೀಯ ಉನ್ನತ ಮಾರ್ಗವನ್ನೇ ಮರೆತುಬಿಟ್ಟಿದ್ದಾರೆ. ಆದ್ದರಿಂದ ನಮ್ಮ ಧರ್ಮದ ಜನರು ವಿದ್ಯೆಯನ್ನು ಅವಶ್ಯಕವಾಗಿ ಕಲಿಯತಕ್ಕದ್ದು. ವಿದ್ಯೆಯೇ ಶಾಶ್ವತವಾದ ಸಂಪತ್ತು, ವಿದ್ಯೆಯೇ ಇಹಪರ ಸೌಖ್ಯದಾಯಕ, ವಿದ್ಯೆಯೇ ಮೋಕ್ಷಪ್ರದವು. ವಿದ್ಯೆಯೇ ಧರ್ಮ ಬಂದುವು ವಿದ್ಯೆಯಿಂದ ಜ್ಞಾನವೂ, ಮಾನವೂ, ಗೌರವವೂ, ಭಕ್ತಿಯೂ ಉಂಟಾಗುವುದು.

ವಿದ್ವತ್ವಂಚ ನೃಪತ್ವಂಚ ನೈವತುಲ್ಯ ಕದಾಚನ ।
ಸ್ವದೇಶೇ ಪೂಜ್ಯತೇ ರಾಜ ವಿದ್ವಾನ್ ಸರ್ವತ್ರ ಪೂಜ್ಯತೇ ॥

ವಿದ್ಯಾನಾಮರಸ್ಯ ರೂಮಧಿಕಂ ಪ್ರಚ್ಛನ್ನ ಗುಪ್ತಂಥನಂ ।
ವಿದ್ಯಾಭೋಗಕರೀ ಯಶಸ್ಸುಖಕರೀ ವಿದ್ಯಾಗರೂಣಾಂ ಗುರುಃ ॥
ವಿದ್ಯಾಬಂಧು ಜನೇ ವಿದೇಶಗಮನೇ ವಿದ್ಯಾ ಪರಾದೇವತಾ ।
ವಿದ್ಯಾ ರಾಜಸುಪೂಜ್ಯತೇ ನಹಿ ಧನಂ, ವಿದ್ಯಾವಿಹೀನಂ ಪಶುಃ ॥

ಅಂದರೆ "ವಿದ್ವಾಂಸನಿಗೂ ರಾಜನಿಗೂ ಹೋಲಿಸಿ ನೋಡಲಾಗಿ ರಾಜನು ತನ್ನ ದೇಶದಲ್ಲಿ ಪೂಜಿಸಲ್ಪಡುತ್ತಾನೆ. ಆದರೆ ವಿದ್ವಾಂಸನು ಎಲ್ಲ ಕಡೆಯಲ್ಲಿಯೂ ಪೂಜಿಸಲ್ಪಡುತ್ತಾನೆ. ವಿದ್ಯೆಯು ಮನುಷ್ಯನ ಸೌಂದರ್ಯವನ್ನು ಹೆಚ್ಚಿಸುವುದು; ಗುಪ್ತವಾಗಿರುವ ನಿಧಿ: ಸುಖವನ್ನು ಕೀರ್ತಿಯನ್ನೂ ನೀಡುವಂಥದು, ಗುರುವಿಗೆ ಗುರುವಾಗುವುದು; ಪರದೇಶದಲ್ಲಿ ಬಂಧುವಿನಂತೆ ಸಹಾಯ ಮಾಡುವುದು; ಶ್ರೇಷ್ಠವಾದ ದೇವತೆ: ಧನವಿಲ್ಲದ ವಿದ್ಯಾವಂತನೂ ಸಹ ರಾಜರಲ್ಲಿ ಮನ್ನಣೆ ಹೊಂದುತ್ತಾನೆ; ಆದರೆ ವಿದ್ಯೆ ಇಲ್ಲದವನು ಪಶುಸಮಾನನು." ನಮ್ಮ ಧರ್ಮವನ್ನು ಉದ್ಧರಿಸುವುದಕ್ಕಾಗಿ ೧೩ ವರ್ಷದ ಕೆಳಗೆ ಲಕ್ಷ್ಮೇಶ್ವರದಲ್ಲಿ ಹಾಲುಮತದ ೧ನೆಯ ಧಾರ್ಮಿಕ ಹಾಗೂ ವಿದ್ಯಾವರ್ಧಕ ಸಭೆಯೂ, ೨ ವರ್ಷದ ಕೆಳಗೆ ತರೀಕೆರೆ(ಮೈಸೂರು ಪ್ರದೇಶ)ಯಲ್ಲಿ ಹಾಲುಮತದ ಮಹಾಸಭೆಯೂ ನಲವಡಿ(ಧಾರವಾಡ ಜಿಲ್ಲೆ)ಯಲ್ಲಿ ಕರ್ನಾಟಕ ೧ನೆಯ ಹಾಲುಮತದ ವಿದ್ಯಾವರ್ಧಕ ಮತ್ತು ಸಾಮಾಜಿಕ ಮಹಾಸಭೆಯೂ, ಶ್ರೀ ಕ್ಷೇತ್ರ ಜೇಜೂರಿಯಲ್ಲಿ(ಮಹಾರಾಷ್ಟ್ರ) ಅಖಿಲ ಭಾರತೀಯ ಹಾಲುಮತದ ೧ನೆಯ ಶಿಕ್ಷಣ ಪರಿಷತ್ತೂ, ೧೯೨೨ನೆಯ ಡಿಸೆಂಬರ್‌ನಲ್ಲಿ ಅಮಳನೇರ(ಪೂರ್ವ ಖಾನ್‌ದೇಶ)ದಲ್ಲಿ ಅಖಿಲ ಭಾರತೀಯ ಹಾಲುಮತದ ೨ನೆಯ ಶಿಕ್ಷಣ ಪರಿಷತ್ತು ಆಗಿರುವವು. ಇವುಗಳಲ್ಲಿ ಆಯಾಯ ಸಭೆಯವರು ತಮ್ಮ ಧ್ಯೇಯವನ್ನು ಯಥಾಪ್ರಕಾರ ಸಾಗಿಸಿರುವರು. ಲಕ್ಷ್ಮೇಶ್ವರ ಸಭೆಯವರು ಧರ್ಮ ಹಾಗೂ ವಿದ್ಯ ಪ್ರಸಾರ ಮಾಡುತ್ತ ಎಷ್ಟೋ ಜನ ವಿದ್ಯಾವಂತರ ಆವಿರ್ಭಾವಕ್ಕೆ ಕಾರಣರಾಗಿರುವರು. ನಲವಡಿ ಸಭೆಯವರು ಗದುಗಿನಲ್ಲಿ ಹಾಲುಮತ ಸೊಸೈಟಿ, ಕರ್ನಾಟಕ ಹಾಲುಮತ ವಿದ್ಯಾವರ್ಧಕ ಸಂಘಗಳನ್ನು ಸ್ಥಾಪಿಸಿ ಅವುಗಳಿಂದ ವಿದ್ಯೆ ಹಾಗೂ ಧರ್ಮ ಸುಧಾರಣೆ ಮಾಡುತ್ತಿರುವರು.

ಹೀಗೆ ಈ ಎಲ್ಲಾ ವಿಚಾರಗಳನ್ನು ಕುರಿತು ೨ನೆಯ ಹಾಲುಮತ ಮಹಾಸಭೆಯ ಅಧ್ಯಕ್ಷರಾದ ಗುರುಸಿದ್ಧಯ್ಯ ಸ್ವಾಮಿಗಳು ಮಾತನಾಡಿರುವ ಸಂಗತಿಗಳು ಇವಾಗಿವೆ.

೩. ೪ನೆಯ ಹಾಲುಮತ ಮಹಾಸಭೆಯ ವರದಿ

ಇದನ್ನು ತಾರೀಖು ೧.೯.೧೯೨೫ನೆಯ ಸೋಮವಾರದಂದು ಧಾರವಾಡ(ಜಿಲ್ಲೆ) ರೋಣ ತಾಲೂಕಿನ ಅಬ್ಬಿಗೇರಿಯಲ್ಲಿ ಸಭೆಯನ್ನು ಆಯೋಜಿಸಲಾಗಿತ್ತು. ಇದರ ಅಧ್ಯಕ್ಷತೆಯನ್ನು ಶ್ರೀ ಸ್ವಾಮಿ ವಿರೂಪಾಕ್ಷ ಒಡೆಯರು ವಹಿಸಿಕೊಂಡಿದ್ದರು. ಈ ಸಭೆಯೂ ಮೂರು ದಿನಗಳ ಕಾಲ

ನಡೆದಿರುತ್ತದೆ. ಈ ಸಭೆಯಲ್ಲಿ ಚರ್ಚೆಯಾದ ವಿಚಾರಗಳೆಂದರೆ, ವಿದ್ಯೆಯನ್ನು ಕುರಿತು ಮಾತಾಡಿರುವಂತಹದು. ಈ ಹಾಲುಮತ ಸಮುದಾಯವು ವಿದ್ಯೆಯ ಗಂಧವನ್ನೇ ಅರಿಯದ ಸಮಾಜವಾಗಿದೆ. ಸಾಮಾಜಿಕ, ಧಾರ್ಮಿಕ, ನೈತಿಕ ಮೊದಲಾದವುಗಳಿಂದ ತೀರ ಹಿಂದುಳಿದಿರುವುದು ಕಂಡುಬರುತ್ತದೆ. ನಮ್ಮ ಸಮಾಜದಲ್ಲಿ ಅನೇಕ ದುಷ್ಟ ಪರಿಪಾಠಗಳು ನೆಲೆಗೊಂಡಿವೆ. ಬಾಲ್ಯ ಹಾಗೂ ವಿಧವಾ ವಿವಾಹ ತೆರವು, ಲಗ್ನಗಳಲ್ಲಿ ದುಂದುಗಾರಿಕೆ ಮೊದಲಾದವುಗಳಿಂದ ಹೀನಸ್ಥಿತಿಯು ಬಂದಿದೆ ಇವನ್ನು ಬಿಟ್ಟುಬಿಡಬೇಕು.

ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ವಿದ್ಯೆ ಕಲಿಸಬೇಕು. ದೇವರು ಕೊಟ್ಟ ಅಮೂಲ್ಯವಾದ ಬುದ್ಧಿಶಕ್ತಿಯ ಉಪಯೋಗ ಮಾಡಿಕೊಳ್ಳಬೇಕು. ಅದೇ ರೀತಿ ಲಿಂಗಧಾರಣೆಯು ಪೂರ್ವ ಕಾಲದಿಂದಲೂ ನಡೆದುಬಂದ ಕಾರ್ಯವಾಗಿದೆ. ಇದು ಪ್ರಸ್ತುತ ನಮ್ಮ ಸಮಾಜದಲ್ಲಿ ಬಹು ಒತ್ತಡದಿಂದ ನಡೆದಿರುವದು. ನಮ್ಮ ಗುರುವರ್ಗದವರೂ ಸಮಾಜ ಸುಧಾರಕರೂ ಪ್ರಯತ್ನ ನಡೆಸಿರುವುದರಿಂದ ಈ ಕಾರ್ಯವು ಈಗ ಸಾರ್ವತ್ರಿಕವಾಗಿ ನಡೆದಿರುವುದು. ನಾವು ವೇದಕಾಲದಿಂದಲೂ ಲಿಂಗಧಾರಿಗಳಾಗಿ ಶೈವ ಸಂಪ್ರದಾಯವನ್ನು ಪ್ರಚಾರದಲ್ಲಿ ತಂದು ನಾವು ಪವಿತ್ರರಾಗಿದ್ದೇವೆ. ಮಧ್ಯಕಾಲದಲ್ಲಿ ನಾವು ವಿದ್ಯೆ ಬುದ್ಧಿವಿಹೀನರಾದದ್ದರಿಂದಲೇ ಲಿಂಗವನ್ನು ಅಗಲಿದೆವು. ವಿಜಯನಗರದ ಅರಸರು, ಬನವಾಸಿಯ ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು ಮೊದಲಾದವರು ಈಶ್ವರನನ್ನೇ ಪೂಜಿಸಿ ಧನ್ಯರಾಗಿರುವರು. ನಮ್ಮ ಐತಿಹ್ಯ ಶೋಧ ಮಾಡಲಾಗಿ ನಾವೆಲ್ಲರೂ ಲಿಂಗಧಾರಿಗಳಾಗಿದ್ದೇವೆಂದೂ ಕಂಡುಬರುವುದು. ಈ ಕಾರ್ಯಕ್ಕೆ ನಮ್ಮ ಗುರುವರ್ಗದವರು ಪ್ರಯತ್ನಿಸುವದು ಸ್ತುತ್ಯವಾದದ್ದು. ಹೀಗೆ ಹತ್ತಾರು ವಿಚಾರಗಳನ್ನು ಕುರಿತು ಈ ವರದಿಯಲ್ಲಿ ದಾಖಲಿಸಲಾಗಿದೆ. ಈ ಸಮುದಾಯದ ಸುಧಾರಣೆಯ ಕಾರ್ಯವು ಕಳೆದ ೨೦ ವರ್ಷಗಳಿಂದ ಸಾವಕಾಶವಾಗಿ ನಡೆದಿರುವುದು ಕಂಡುಬರುತ್ತವೆ. ಲಕ್ಷ್ಮೇಶ್ವರ, ನಲವಡಿ, ತರಕೇರಿ, ಜೇಜೂರಿ, ಅಮಳನೇರ, ಹುಲ್ಲೂರು, ದೇವಗಿರಿ, ಬಂಕಾಪೂರ, ಗೋನಾಳ, ದೇವಿಹೊಸೂರ, ಚಿತ್ರದುರ್ಗ, ಬೆಟ್ಟ ಸಮುದ್ರವಳ್ಳಿ, ವಿಜಾಪೂರ ಮೊದಲಾದ ಸ್ಥಳಗಳಲ್ಲಿ ಸಭೆಯ ಪರಿಷತ್ತುಗಳು ನಡೆದಿವೆ. ಕರ್ನಾಟಕ ಹಾಲುಮತ(ಕುರುಬ) ಸಂಘ, ಮುಂಬೈ ಕರ್ನಾಟಕ ಹಾಲುಮತ ಸಹಕಾರ ಸಂಘ, ಬೆಂಗಳೂರು ಕುರುಬರ ಸಂಘ ಇತ್ಯಾದಿ ಸಂಘ ಸಂಸ್ಥೆಗಳು ಸ್ಥಾಪಿಸಲ್ಪಟ್ಟಿರುವವು.

ಈ ಮಹಾಸಭೆಯಲ್ಲಿ ಪಾಸಾದ ಠರಾವುಗಳು ಇಂತಿವೆ.

* ನಮ್ಮ ಸಮಾಜವು ಬ್ರಿಟಿಷ್ ಸಾಮ್ರಾಜ್ಯಕ್ಕೆ ರಾಜನಿಷ್ಠೆಯನ್ನು ವ್ಯಕ್ತಪಡಿಸುತ್ತದೆ.
* ನಮ್ಮ ಗುರುವರ್ಗದವರು ಕಲಕತ್ತ, ಕಾಶಿ, ಇಂದೂರ, ಮೈಸೂರ, ಕೊಲ್ಲಾಪುರ, ವಿಜಯಪುರ ಮುಂತಾದ ವಿದ್ಯಾಸ್ಥಳಗಳಿಗೆ ಹೋಗಿ ವಿದ್ಯಾವಂತರಾಗಿ ಸಮಾಜ ಭೂಷಣರಾಗತಕ್ಕದ್ದು.
* ಹಾಲುಮತದವರು ಲಿಂಗಧಾರಿಗಳಾಗತಕ್ಕದ್ದು.

* ಶ್ರೀದೇವಿ ಅಹಲ್ಯಾಬಾಯಿಯ ಪುಣ್ಯತಿಥಿಯ ಬಗ್ಗೆ ಸಾರ್ವಜನಿಕ ರೀತಿಯಿಂದ ಸೂಟಿ ಕೊಡಲಿಕ್ಕೆ ಆಯಾ ಪ್ರಾಂತಿಕ ಸರಕಾರಕ್ಕೆ ಕೇಳಿಕೊಳ್ಳುವುದು.
* ಶ್ರೀ ಹಾಲುಮತ ಗುರುವರ್ಗದ ಸಂಘ ಸ್ಥಾಪಿಸುವದು, ಈ ಬಗ್ಗೆ ಕೆಳಗೆ ಕಾಣಿಸಿದ ಜನರ ಒಂದು ಕಾರ್ಯಕಾರಿ ಕಮೀಟಿ ನೇಮಿಸುವುದು.

ಹೀಗೆ ಈ ಸಭೆಯಲ್ಲಿ ಅನೇಕ ವಿಚಾರ ಧಾರೆಗಳನ್ನು ಕುರಿತು ಚರ್ಚೆ ಮಾಡಿ ಸಭೆಯ ಒಪ್ಪಿಗೆಯ ಮೆರೆಗೆ ಈ ಎಲ್ಲ ಸಲಹೆ ಸೂಚನೆಗಳ ಮೂಲಕ ಠರಾವುಗಳನ್ನು ಹೊರಡಿಸಿದ್ದಾರೆ.

೪. ೨ನೆಯ ಹಾಲುಮತ ಪರಿಷತ್ತಿನ ವರದಿ

ಇದು ತಾರಿಖು ೨೫, ೨೬ನೆಯ ಮೇ ೧೯೨೪ನೇ ಇಸ್ವಿಯಲ್ಲಿ, ಧಾರವಾಡ ಜಿಲ್ಲೆಯ ಬಂಕಾಪುರದಲ್ಲಿ ನಡೆದಿರುತ್ತದೆ.

ಸ್ವಾಗತ ಮಂಡಲದ ಅಧ್ಯಕ್ಷರಾದ ಶ್ರೀಯುತ ಪವಾಡಿಗೌಡ ಫಕೀರಗೌಡ ಪಾಟೀಲ ಹರ್ಲಾಪುರ ಇವರು ಮಾಡಿದ ಭಾಷಣ ಹೀಗಿದೆ, ಪ್ರಮುಖವಾಗಿ ಇವರು ಶಿಕ್ಷಣವನ್ನು ಕುರಿತು ಹೆಚ್ಚಾಗಿ ಪ್ರಸ್ತಾಪಿಸಿದ್ದಾರೆ. ಅಂದರೆ ಹಾಲುಮತ ಸಮಾಜಕ್ಕೆ ಜ್ಞಾನನೇತ್ರ ಎಂಬುದು ಇಲ್ಲದ್ದರಿಂದ ಹೆಜ್ಜೆಹೆಜ್ಜೆಗೆ ಅಡ್ಡದಾರಿಯನ್ನು ಹಿಡಿಯುವುದು ಮತ್ತು ವಿಧವಿಧವಾದ ಕಷ್ಟನಷ್ಟಗಳಿಂದ ಕೊರಗುತ್ತಿರುವುದು, ಮನುಷ್ಯ ಪ್ರಾಣಿಯನ್ನು ಪಶುಪಕ್ಷ್ಯಾದಿಗಳಿಂದ ವಿಂಗಡಿಸುವ ಜ್ಞಾನಶಕ್ತಿಯೇ ನಮ್ಮಲ್ಲಿ ಇಲ್ಲವೆಂದ ಮೇಲೆ ನಮಗೂ ಅವುಗಳಿಗೂ ವಿಶೇಷ ವ್ಯತ್ಯಾಸವಿರುವುದೆಂದು ನನಗಂತೂ ಅನಿಸುವುದಿಲ್ಲ. ನಾವು ಪಶು ಪ್ರಾಯರಾಗಿರುವೆವು. ಭರ್ತೃಹರಿಯು ಹೇಳುವಂತೆ ನಾವು ಕೇವಲ ಬಾಲಕೋಡುಗಳಿಲ್ಲದ ಪಶುಗಳೇ ಸರಿ. ಅಜ್ಞಾನವೆಂಬ ಹಿರಿಯ ಭೂತದಿಂದ ನಾವು ನೊಂದಿರುವೆವು. ಅವಿದ್ಯೆಯೆಂಬ ಭಯಂಕರ ಪಿಶಾಚಿಯು ನಮ್ಮ ಸಮಾಜಕ್ಕೆ ಬಡಕೊಂಡಿದೆ. ಈ ಘನಘೋರ ಪಿಶಾಚಿಯ ಮೂಲಕ ನಮ್ಮ ಹಾಲುಮತವು ಸಾಮಾಜಿಕ, ಔದ್ಯೋಗಿಕ, ನೈತಿಕ, ಧಾರ್ಮಿಕ, ರಾಜಕೀಯ ಅವನತಿ ಅಧೋಗತಿಗಳೆಂಬ ಮಹಾರೋಗಗ್ರಸ್ತವಾಗಿದೆ. ಈ ಪಿಶಾಚಿಯನ್ನು ಹೊಡೆದೊಡಿಸುವ ಮಂತ್ರ ತಂತ್ರೋಪಾಯವನ್ನು ಮೊದಲು ಅರಿತುಕೊಳ್ಳಬೇಕು.

ಅದೇ ರೀತಿ ನಮ್ಮ ಸಮಾಜದ ಆಚರಣೆಯಲ್ಲಿರುವ ಕುಂದು ಕೊರತೆಗಳು ಮಿತಿಮೀರಿವೆ. ಬಾಲ್ಯವಿವಾಹ ಮಾಡುವ ದುಷ್ಟ ಪರಿಪಾಠವು ನಮ್ಮ ಸಮಾಜದಲ್ಲಿ ಇದೆ. ಸಣ್ಣ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಬದಲಾಗಿ ಬಾಲ್ಯದಲ್ಲಿಯೇ ಅವರಿಗೆ ದೊಡ್ಡದಾದ ಒಂದು ಗುದ್ದಿಯನ್ನು ಕಟ್ಟಿ "ವಿವಾಹೋ ವಿದ್ಯಾನಾಶಾಯ" ಎಂಬಂತೆ ಅವರ ವಿದ್ಯಾಭ್ಯಾಸವನ್ನು ಕಟ್ಟು ಮಾಡಿಬಿಡುತ್ತಾರೆ. ಆದ್ದರಿಂದ ಇದನ್ನು ಬಿಡಬೇಕು ಹಾಗೆಯೇ ವರದಕ್ಷಿಣೆ ಮತ್ತು ತೆರವುಗಳ ರೂಪದಿಂದ ಹಣ ಕೊಟ್ಟು ವಧುವರರ ವಿಕ್ರಯ ಮಾಡುವ ದುಷ್ಟಾಚರಣೆಯು ನಮ್ಮಲ್ಲಿರುವುದು.

ವಿಶೇಷವಾಗಿ ಚಿಕ್ಕವಯಸ್ಸಿನ ಬಾಲಕಿಯರನ್ನು ವೃದ್ಧರಿಗೆ ವಿವಾಹ ಮಾಡುವುದು ಅಲ್ಲಲ್ಲಿ ದ್ರವ್ಯದಾಸೆಯಿಂದ ನಡೆಯುತ್ತದೆ. ಲಗ್ನ ಮೊದಲಾದ ಸಂಸ್ಕಾರ ಸಮಾರಂಭಗಳಲ್ಲಿ ಒಣ ದೊಡ್ಡಸ್ತಿಕೆಯ ಸಲುವಾಗಿ ಸಾಲಾ ಕೊಯ್ದು ಮಿತಿ ಮೀರಿ ಧನವ್ಯಯ ಮಾಡುವ ರೂಢಿಯು ಉಂಟು. ನಮ್ಮಲ್ಲಿ ಗಂಡಸರಲ್ಲಿಯೇ ವಿದ್ಯೆಯಿಲ್ಲದಿರುವಾಗ ಸ್ತ್ರೀ ವಿದ್ಯಾಭ್ಯಾಸದಗೊಡವೆಗೆ ಹೋಗಬಾರದೆಂದು ನಾವು ತಿಳಿದಿದ್ದೇವೆ.

ಸ್ತ್ರೀ ಸಮಾಜಕ್ಕೂ ಶಿಕ್ಷಣವು ಬೇಕೇಬೇಕು, ನನ್ನ ಅಭಿಪ್ರಾಯದಲ್ಲಿ ಮೊದಲು ವಿದ್ಯಾಭ್ಯಾಸ ಮಾಡಿಸಬೇಕು. "ಸ್ತ್ರೀಯರಿಗೆ ವಿದ್ಯೆ ಕಲಿಸಿದರೆ ಜನಾಂಗಕ್ಕೆ ವಿದ್ಯೆ ಕಲಿಸಿದಂತಾಗುವುದೆಂಬ" ನಾಣ್ಣುಡಿಯನ್ನು ಚೆನ್ನಾಗಿ ನೆನಪಿನಲ್ಲಿಡತಕ್ಕದ್ದು. ಏಕೆಂದರೆ ವಿದ್ಯೆ ಲಿಂಗಭೇದವಿಲ್ಲದು ಎಂದು ಹೇಳಿದ್ದಾರೆ. ಹಾಗೆಯೇ ಮುಂದುವರಿದು ನಮ್ಮ ಸಮಾಜದ ಬಹುಜನರು ಮಾಂಸ ಭಕ್ಷಣ ಮಾಡುತ್ತಾರೆ. ಇದಕ್ಕಾಗಿ ಅವರು ಆಡು, ಕುರಿ ಮೊದಲಾದ ನಿರುಪದ್ರವಿ ಮತ್ತು ಬಹಳ ಉಪಯುಕ್ತ ಪ್ರಾಣಿಗಳ ಹಿಂಸೆ ಮಾಡಲಿಕ್ಕೆ ಇಷ್ಟೂ ಹಿಂಜರಿಯುವುದಿಲ್ಲ. ಮಾಂಸ ಭಕ್ಷಣದಿಂದ ಮನುಷ್ಯನಲ್ಲಿ ತಾಮಸ ವೃತ್ತಿಯುಂಟಾಗುವದು. ಮಾಂಸವು ಮನುಷ್ಯ ಜಾತಿಯ ಸ್ವಾಭಾವಿಕ ಆಹಾರವಲ್ಲ ಮತ್ತು ನಮ್ಮ ನಾಡಿನಂತೆ ಉಷ್ಣ ಪ್ರದೇಶದಲ್ಲಿ ಮಾಂಸವು ತಕ್ಕ ಆಹಾರವೇ ಅಲ್ಲ. ಆದುದರಿಂದ ಮಾಂಸ ಭಕ್ಷಣದಂಥ ಅಧರ್ಮ ಕೃತ್ಯವನ್ನು ಬಿಟ್ಟುಬಿಡಬೇಕಾಗಿ ಮತ್ತು ಭೂತದಯೆಯುಳ್ಳವರಾಗಬೇಕಾಗಿ ಆಗ್ರಹದ ಪ್ರಾರ್ಥನೆ ಎಂದು ಹೇಳಿದ್ದಾನೆ. ಹೀಗೆ ಈ ಎಲ್ಲ ವಿಚಾರಗಳು ಹಾಲುಮತ ಸಮುದಾಯದ ಒಳಿತಿಗಾಗಿ ಹಾಗೂ ತಿಳುವಳಿಕೆಯ ಹಾದಿಯಲ್ಲಿ ನಡೆಯಬೇಕೆಂಬ ಚಿಂತನೆಯನ್ನು ಈ ಭಾಷಣದ ಮೂಲಕ ವ್ಯಕ್ತಪಡಿಸಿದ್ದಾರೆ.

೫. ೨. ಹಾವೇರಿ ಜಿಲ್ಲೆ ಬಂಕಾಪುರದಲ್ಲಿ ನಡೆದ ಕರ್ನಾಟಕ ಹಾಲುಮತ(ಕುರುಬರ) ೨ನೆಯ ಪರಿಷತ್ತಿನ ರಿಪೋರ್ಟು

ಇದನ್ನು ತಾರೀಖ ೨೪ ಮೇ ೧೯೨೪ರಂದು ನಡೆದ ಕುರುಬ ಪರಿಷತ್ತಿನ ಅಧ್ಯಕ್ಷರಾದ ಶ್ರೀಮಂತ ನೀಲಗಿಂ ಜಿ. ಸಂಜೀವಯ್ಯನವರು ಮೈಸೂರು ಕಾಯಿದೆ ಕೌನ್ಸಿಲ್ ಮೆಂಬರ್ ಇವರು ಮಾಡಿದ ಭಾಷಣದ ಮಾಹಿತಿ ಹೀಗಿದೆ: ಹಾಲುಮತ ಸಭೆಯನ್ನು ಕುರಿತು ಮಾತನಾಡುವ ಸಂದರ್ಭದಲ್ಲಿ ಹೇಳುತ್ತಾರೆ. ಇಂಥ ಪರಿಷತ್ತುಗಳಿಂದ ನಮ್ಮ ಸಮಾಜದ ಪೂರ್ವದಲ್ಲಿ ಮತಭೇದಗಳು ಇದ್ದಿಲ್ಲ, ನಡುವೆ ಆದವು. ಕುರುಬರು ಆರ್ಯವಂಶದವರು ಮತ್ತು ಕ್ಷಾತ್ರತೇಜದವರೆಂದು ಭಾರತ ಇತಿಹಾಸದಿಂದ ಕಂಡುಬರುತ್ತದೆ. ಪಲ್ಲವರು, ಕದಂಬರು, ಯಾದವರು, ಕುರುಬರು, ಮದ್ರಾಸ್ ಪ್ರಾಂತದ ಕಂಚಿಯಲ್ಲಿ ಆಳಿದರು.

ಕದಂಬರು, ಯಾದವರು ಕುರುಬರೆಂದು ಮಿ. ಟೇಲರ ಸಾಹೇಬರ "ಲಿಟರೇಚರ ಮತ್ತು ಸಾಯಿನ್ಸ" ಎಂಬ ಗ್ರಂಥದಿಂದ ಹಾಗೂ ಮದ್ರಾಸ ಯುನಿವರ್ಸಿಟಿ ಸಂಸ್ಕೃತ ಪ್ರೊಫೆಸರ ಗಸ್ಟಾ

ಆಪರ್ಟ ಇವರು ಬರೆದ "ಒರಿಜಿನಲ್ ಇನ್ ಹ್ಯಾಬಿಟೆಂಟ್ಸ್ ಆಫ್ ಇಂಡಿಯಾ" ಎಂಬ ಗ್ರಂಥದಿಂದ ತಿಳಿಯುತ್ತದೆ. ಮೆ.ಎ.ಎಚ್. ನಂಜುಡಯ್ಯನವರು ರಚಿಸಿದ "ಕುರುಬರು" ಎಂಬ ಗ್ರಂಥದಿಂದ ಇವರಿಗೆ ಹಾಲುಮತದವರೆಂದು ತಿಳಿಯುತ್ತದೆ. ಪೂರ್ವದಲ್ಲಿ ಬಳ್ಳಾರಿ ಜಿಲ್ಲಾ ಕಲೆಕ್ಟರರಾಗಿದ್ದ ಮಿ. ಸಿವೆಲ್ ಸಾಹೇಬರು ಬರೆದ "ಫರಗಾಟನ್ ಎಂಪಾಯರ ಆಫ್ ವಿಜಯನಗರ" ಎಂಬ ಗ್ರಂಥದಿಂದ ಹಾಗೂ ರಾವಬಹುದ್ದೂರ ಕೃಷ್ಣಸ್ವಾಮಿ ಅಯ್ಯಂಗಾರ ಇವರು ಬರೆದ "ಸೋರ್ಸಸ್ ಆಫ್ ವಿಜಯನಗರ" ಎಂಬ ಗ್ರಂಥದಿಂದ ಹಾಗೂ ಬೇರೆ ಅನೇಕ ಆಧಾರಗಳಿಂದ ವಿಜಯನಗರದ ರಾಜ್ಯಸ್ಥಾಪಕರಾದ ಹಕ್ಕಬುಕ್ಕರು ಕುರುಬರೆಂದು ತಿಳಿಯುತ್ತದೆ. ಚಂದ್ರವಂಶದ ಅರಸರಲ್ಲಿ ಪ್ರಖ್ಯಾತರಾದ "ಕುರು ವಂಶದವರು" ಕುರುಬರೆಂದು ಸಿದ್ಧವಾಗುವುದು. "ಕಾಸ್ಟ ಆಂಡ ಟ್ರೈಬ್ಸ್ ಆಫ್ ಸದರ್ನ ಇಂಡಿಯಾ" ಗ್ರಂಥದಲ್ಲಿ ಥರ್ಸಟನ್ ದೊರೆಯವರು ಪೂರ್ವದ ಇತಿಹಾಸ ಶೋಧಿಸುವಲ್ಲಿ ತಮಿಳು ನಿಘಂಟುಕಾರ ಪಿಂಗಳ ಮುನಿಯು ತನ್ನ ನಿಘಂಟಿನಲ್ಲಿ ಕುರುಂಬನ್ ಅಂದರೆ ಕುರುನೀಲಮಾನಾರ್ ಅಥವಾ ಚಿಕ್ಕದೊರೆ ಎಂದು ಬರೆದದ್ದು ತಿಳಿಯುತ್ತದೆ. ಕುರುಬರು ಪಲ್ಲವರು ಒಂದೇ ಎಂದು ಮೈಸೂರು ೧೯೧೧ನೇ ಸೆನಸಸ್ ರಿಪೋರ್ಟನಲ್ಲಿಯೂ ಸೌಥ ಆರ್ಕಾಟ್ ಮ್ಯೂನುಯಲ್‌ನಲ್ಲಿಯೂ ಬರೆದಿದೆ. ಕಂಬಳಿ ನೇಯುವುದರಲ್ಲಿಯೂ ಸುಧಾರಣೆಯಾಗಬೇಕು, ನಮ್ಮಲ್ಲಿ ಐಕ್ಯಮತ ಬೇಕು, ವಿದ್ಯಾಭಿವೃದ್ಧಿಯಾಗಬೇಕು. ದುಷ್ಟವ್ಯಸನಗಳಾದ ಮದ್ಯಪಾನ, ಮಾಂಸಭಕ್ಷಣ ಮೊದಲಾದವು ಇಲ್ಲದಂತಾಗಬೇಕು. ಬಾಲ್ಯ ವಿವಾಹ ಮಾಡಬಾರದು. ಲಗ್ನದಲ್ಲಿ ದುಂದುಗಾರಿಕೆ ಮಾಡಬಾರದು. ಹೀಗೆ ಹತ್ತು ಹಲವು ವಿಚಾರಗಳನ್ನು ಕುರಿತು ಮಾತನಾಡಿದ್ದಾರೆ.

ಒಟ್ಟಾರೇ ಕರ್ನಾಟಕ ಹಾಲುಮತ(ಕುರುಬರ) ೩ನೆಯ ಪರಿಷತ್ತಿನಲ್ಲಿ ಚರ್ಚೆಯಾದ ವಿಚಾರಗಳನ್ನು ಇಟ್ಟುಕೊಂಡು ಎಲ್ಲಾ ಮಹಾನೀಯರು ಸೇರಿ, ಕೆಲವು ಠರಾವುಗಳನ್ನು ಹೊರಡಿಸಿದ್ದಾರೆ. ಅವುಗಳಲ್ಲಿ ಕೆಲವು

* ಒತ್ತಾಯದ ಶಿಕ್ಷಣ ಕಾಯದೇಯು ತೀವ್ರ ಅಮಲಿನಲ್ಲಿ ಬರಬೇಕು.
* ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ಉಚ್ಚ ಮಾಧ್ಯಮಿಕ ಶಿಕ್ಷಣ ಸಂಸ್ಥೆಗಳಲ್ಲಿ ಹಾಗೂ ಕನ್ನಡ ಟ್ರೇನಿಂಗ ಕಾಲೇಜು ಮತ್ತು ಸ್ಕೂಲುಗಳಲ್ಲಿ ಪ್ರಥಮ ಹಾಗೂ ಸುಲಭ ಪ್ರವೇಶ ವಿದ್ಯಾರ್ಥಿವೇತನ ಸಿಗುವ ಬಗ್ಗೆ ಸರಕಾರಕ್ಕೆ ಆಗ್ರಹದ ವಿನಂತಿ.
* ನಮ್ಮ ಜನರಿಗೆ ತಗಾಯಿ, ಬಹಳ ಕಂತಿನ ಸಾಲ, ಕುರಿಗಳಿಗೆ ಅಡವಿ, ಬಂದೂಕ ಲಾಯಸೆನ್ಸ್ ಮುಂತಾದ ಸವಲತ್ತುಗಳನ್ನು ಸರಕಾರದವರು ಕೊಡಬೇಕು.
* ವಿದ್ಯಾವರ್ಧಕ ಫಂಡ ಕೊಡಿಸುವುದು
* ಬಾಲ್ಯವಿವಾಹ, ತೆರವು, ವರದಕ್ಷಿಣೆ, ಲಗ್ನದಲ್ಲಿ ದುಂದುಗಾರಿಕೆಯ ನಿಷೇಧ

* ಸ್ತ್ರೀ ಶಿಕ್ಷಣ ಪ್ರಸಾರ
* ಮದ್ಯಪಾನ, ಮಾಂಸಭಕ್ಷಣ ಮುಂತಾದ ದುಷ್ಟವ್ಯಸನಗಳ ನಿಷೇಧ
* ಒಬ್ಬ ಗುರುವು ಬಹಿಷ್ಕಾರ ಹಾಕಿದ್ದನ್ನು ಮತ್ತೊಬ್ಬ ಗುರುವು ಶುದ್ಧ ಮಾಡಬಾರದು.
* ಕರ್ನಾಟಕ ಹಾಲುಮತ ಸ್ವಯಂ ಸೇವಕ ಸಂಘ ಸ್ಥಾಪನೆ.
* ಪುನರ್ವಿವಾಹ ಮಾಡಬೇಕು. ಇತ್ಯಾದಿ ಸಂಗತಿಗಳನ್ನು ಕುರಿತು ಈ ಸಭೆಯಲ್ಲಿ ಠರಾವುಗಳನ್ನು ಪಾಸುಮಾಡಿದ್ದಾರೆ.

೬. ೩ನೆಯ ಹಾಲುಮತ ಪರಿಷತ್ತಿನ ಸರ್ವಾಧ್ಯಕ್ಷರ ಭಾಷಣ

ಇದು ೧೯೩೦ರಲ್ಲಿ ರಾಣೇಬೆನ್ನೂರಿನಲ್ಲಿ ನಡೆದ ಮೂರನೆಯ ಕುರುಬರ ಪರಿಷತ್ತಿನ ಸರ್ವಾಧ್ಯಕ್ಷರಾದ ಡಾ. ಆರ್ ನಾಗನಗೌಡರು ಮಾಡಿದ ಭಾಷಣದಲ್ಲಿ ಮಾತನಾಡಿದ ವಿಚಾರಗಳೆಂದರೆ, ಪ್ರಮುಖವಾಗಿ ಶಿಕ್ಷಣದ ಬಗ್ಗೆ, ಅದರಿಂದ ಆಗುವ ಉಪಯೋಗದ ಬಗ್ಗೆ ತಿಳಿಸಿಕೊಟ್ಟಿದ್ದಾರೆ. ಈ ಸಭೆಯ ಸರ್ವಾಧ್ಯಕ್ಷರಾಗಿ ಹೇಳುವುದಿಷ್ಟೇ, ಶಿಕ್ಷಣವು ನಮ್ಮ ಜನಾಂಗದ ಮುಖ್ಯ ಅವಶ್ಯಕತೆಯಾಗಿದೆ. ಎಲ್ಲಾ ಕುರುಬ ಮಕ್ಕಳಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣವು ಅವಶ್ಯವಾಗಿ ಇರಬೇಕೆಂದು ನಾನು ವಾದಿಸುತ್ತೇನೆ. ಮನೆಯನ್ನು ಶುಚಿಯಾಗಿಡಲು ನೆಯ್ಗೆ ಮಾಡುವ ಹಾಗೂ ಮನೆಯ ಹೊರಗೆ ಕುರಿ ಮಂದೆಯನ್ನು ಕಾಯುವ ತಮ್ಮ ಹೆತ್ತವರಿಗೆ ಬುತ್ತಿಯನ್ನು ತೆಗೆದುಕೊಂಡು ಹೋಗುವ ಕೆಲಸಗಳಲ್ಲಿ ಸಹಾಯಕವಾಗಿರುವ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಲ್ಲಿ ತೊಂದರೆಯಾಗಬಹುದೆಂದು ಭಾವಿಸುವವರಿದ್ದಾರೆ, ಅದನ್ನು ಬಿಡಬೇಕು. ಉಣ್ಣೆ ಮತ್ತು ಕುರಿ ಕೈಗಾರಿಕೆ ಹಾಗೂ ನಮ್ಮ ಜನಾಂಗದ ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆಗೆ ನಮ್ಮ ಮಕ್ಕಳು ಕನಿಷ್ಠ ಪ್ರಾಥಮಿಕ ಶಿಕ್ಷಣ ಹೊಂದಿರಬೇಕು. ಪ್ರಸ್ತುತ ಶಾಲೆಯಲ್ಲಿ ನೀಡಲಾಗುವ ಪ್ರಾಥಮಿಕ ಶಿಕ್ಷಣವು ಅಷ್ಟಾಗಿ ಸಹಾಯವಾಗುವುದಿಲ್ಲ. ವಿದ್ಯಾರ್ಥಿಗಳು ಶಾಲೆಯನ್ನು ಬಿಟ್ಟ ನಂತರ ಅನಕ್ಷರಸ್ತರಾಗದಂತೆ ತಡೆಯುವುದು ಪ್ರಾಥಮಿಕ ಶಿಕ್ಷಣವಾಗಿರಬೇಕು. ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಹತ್ತಿರ ಇರುವ ಉಣ್ಣೆ ಮತ್ತು ಕುರಿ ಕೈಗಾರಿಕೆಗಳ ಬಗೆಗೆ ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮಗಳನ್ನು ಹೊಂದಿದ ಪಾಠಗಳಿರಬೇಕು. ಮಕ್ಕಳ ದಿನನಿತ್ಯದ ಗೃಹ ಚಟುವಟಿಕೆ ಮತ್ತು ಮುಂದಿನ ಜೀವನದ ಕಸಬುಗಳಿಗೆ ಶಿಕ್ಷಣವು ಜೊತೆಗೂಡಿದರೆ ಗ್ರಾಮಸ್ಥರ ಏಳಿಗೆಯು ಸಾಧ್ಯ ಎಂದು ಹೇಳಿದ್ದಾರೆ. ಅದೇ ರೀತಿ ಮುಂದುವರೆದು ಭಾರತದಲ್ಲಿ ಕುರಿಗಳು ಎಲ್ಲೆಲ್ಲಿ ಎಷ್ಟೇಷ್ಟು ಇವೆ. ಅವುಗಳ ಗುಣಮಟ್ಟವೇನು. ಈ ಕಂಬಳಿ ನೇಯ್ಗೆಯನ್ನು ಕುರಿತು ಕುರುಬರಿಗೆ ತರಗತಿಗಳ ಮೂಲಕ ಬೋಧಿಸಬೇಕಿದೆ. ತಾಲೂಕು ಅಥವಾ ಜಿಲ್ಲಾ ಮಟ್ಟದ ಸಹಕಾರ ನಿಯಮದನ್ವಯ ಮಾರುಕಟ್ಟೆಯ ಸಮಿತಿಗಳನ್ನು ನೇಮಿಸಬೇಕು. ಹೀಗೆ ಹಲವಾರು ವಿಚಾರಗಳನ್ನು ಮಂಡಿಸಿದ ಆರ್. ನಾಗನಗೌಡನು

ಕೊನೆಯಲ್ಲಿ ಒಂದು ಮಾತು ಹೇಳುತ್ತಾರೆ. ಅದು ಈ ಭಾಷಣದಲ್ಲಿ ಕೆಲವು ಮುಖ್ಯ ಸಮಸ್ಯೆಗಳು ಮತ್ತು ಪರಿಹಾರಗಳನ್ನು ನಿಮ್ಮ ಮುಂದೆ ಮಂಡಿಸಿದ್ದೇನೆ. ಅವುಗಳು ನಿಮ್ಮ ಒಪ್ಪಿಗೆ ಮತ್ತು ಬೆಂಬಲವನ್ನು ಪಡೆಯುತ್ತವೆ ಎಂದು ನಾನು ಆಶಿಸುತ್ತೇನೆ.

೭. ಅಮೋಗಿ ಸಿದ್ದಾರ್ಯ ಕುರುಬರ ಬೋರ್ಡಿಂಗ್ ಸ್ಥಾಪನೆಯ ವರದಿ

ಇದು ಧಾರವಾಡ ಜಿಲ್ಲೆ ಶಿರಹಟ್ಟಿ ತಾಲೂಕು ಹುಲ್ಲೂರಿನಲ್ಲಿ ನಡೆದಿದೆ. ತಾರೀಖು ೧.೬.೧೯೨೫ನೇ ಚಂದ್ರವಾರ ದಿವಸ ಈ ಬೋರ್ಡಿಂಗನ್ನು ವೇ. ಸಿದ್ಧಯ್ಯನವರು ಅಮೋಗಿ ಹುಲ್ಲೂರ ಈ ಮಹಾಶಯರ ಹಸ್ತದಿಂದ ಬೋರ್ಡಿಂಗ ತೆರೆಯುವ ಸಮಾರಂಭವು ಬಹು ವಿಜೃಂಭಣೆಯಿಂದ ನೆರವೇರಿತು. ಈ ವೇಳೆಯಲ್ಲಿ ವೇ. ಸಿದ್ಧಯ್ಯನವರು ಮಾಡಿದ ಭಾಷಣದಲ್ಲಿ ಕೆಲವು ವಿಚಾರಗಳನ್ನು ನೋಡಲಾಗುವುದು. ಹಾಯ್ ಬಂಧುಗಳೇ, ಈ ಚಿತ್ರವನ್ನು ನೋಡಿರಿ ಅಂದರೆ ಪೂರ್ವಜರಾದ ನಮ್ಮ ಸಮುದಾಯದವರು ಮೆರೆದು ಹೋದ ಚಿತ್ರಪಟವನ್ನು ತೋರಿಸುತ್ತಾ ಹೇಳುತ್ತಾರೆ. ನಮ್ಮ ಪೂರ್ವಜರ ವೈಭವವೆತ್ತ, ನಮ್ಮ ಭಾಗ್ಯ ಹೀನತೆಯತ್ತ, ಅವರ ಕರ್ತೃತ್ವ ಶಕ್ತಿಯೆತ್ತ, ನಮ್ಮ ಕರ್ತವ್ಯ ಶೂನ್ಯತೆಯೆತ್ತ, ಅವರ ಶೌರ್ಯ ಧೈರ್ಯ ಸಾಹಸಗಳೆಲ್ಲಿ! ನಮ್ಮ ಹೊಡಿತನವೆಲ್ಲಿ! ಬಾಂಧವರೇ ನೋಡಿರಿ ಕಣ್ತೆರೆದು ನೋಡಿರಿ. ನಮ್ಮ ಶಿಲೆಯು ಬೂದಿಮುಚ್ಚಿದ ಕೆಂಡದಂತೆಯೂ, ಕುರಿಯ ಹಿಂಡಿನೊಳಗಿನ ಸಿಂಹನಂತೆಯೂ ಇರುವುದು.

ನಾವೆಲ್ಲರೂ ಅಜ್ಞಾನವೆಂಬ ಘೋರ ಕತ್ತಲೆಯಿಂದ ಮುಚ್ಚಲ್ಪಟ್ಟಿರುವೆವು. ಆದ್ದರಿಂದ ನಮಗೆ ಯಾವ ಮಾರ್ಗವೂ ತೋಚದಾಗಿದೆ. ನಮಗೂ ಜ್ಞಾನವುಂಟು, ಧರ್ಮವುಂಟು, ಇತಿಹಾಸವುಂಟು, ವಾಂಙ್ಮಯವುಂಟು, ಶಕ್ತಿಯುಂಟು ಸಂಘಟನೆಯುಂಟು ನಮ್ಮ ಪೂರ್ವಜರು ಮಹಾ ಕಾರ್ಯಗಳನ್ನು ಮಾಡಿ ನಮ್ಮ ಸಮಾಜದ ಗೌರವ ಕಾಯ್ದಿರುವರು. ಇಂಥ ಮಹತ್ವವಾದ ಕಾರ್ಯಗಳನ್ನು ತಾವು ವಿಚಾರಿಸಿ ನೋಡಿರಿ. ಅಂದರೆ ನಮ್ಮ ಧರ್ಮದ ಕಲ್ಪನೆಯು ತಾನಾಗಿಯೇ ಆಗುವುದು. ಇಲ್ಲಿಯವರೆಗೆ ನಮ್ಮ ಸಮಾಜದ ಪೂರ್ವದ ವೈಭವವನ್ನು ಹೇಳಿದ್ದಾಯಿತು. ಇನ್ನು ಮೇಲೆ ಕಾರ್ಯದ ಕಡೆಗೆ ಹೊರಳುವಾ ಭೂತಕಾಲದ ಪರಿಸ್ಥಿತಿಯೇ ವರ್ತಮಾನ ಕಾಲದಲ್ಲಿ ಕಾರ್ಯಕ್ಕೆ ಹಚ್ಚಿ ಭವಿಷ್ಯತ್ಕಾಲದ ಫಲವನ್ನು ಸೂಚಿಸುವುದು. ಜನಾಂಗವು ಮುಂದುವರಿಯಬೇಕಾದರೆ ಶಿಕ್ಷಣವೇ ತಳಹದಿಯಾಗಿರುವುದು. ಇದೇ ಮಾತನ್ನು ಅನೇಕ ತತ್ವಜ್ಞಾನಿಗಳು ಹೇಳಿರುವರು. ಶಿಕ್ಷಣ ಪ್ರಸಾರವಾಗಬೇಕಾದರೆ ಇಂಥ ಸಂಸ್ಥೆಗಳು ಅವಶ್ಯವಾಗಿರಬೇಕು ಎಂದು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಹಾಗೆಯೇ ಈ ಸಂಸ್ಥೆಗಳ ಸ್ಥಾಪನೆಗೆ ಕಾರಣ ಕರ್ತರಾದ ಡಿ.ಕೆ. ಕಲೇಕ್ಟರ ಸಾಹೇಬರವರು. ಮೆ. ಕೃಷ್ಣರೆಡ್ಡಿ ಭದ್ರಾಪುರ ಎಮ್.ಎ. ಈ ಬೋರ್ಡಿಂಗ ಹಾಗೂ ಕ್ಲಾಸಿನ ವಿಷಯವಾಗಿ ಒಳ್ಳೆ ಸಹಾನುಭೂತಿಯನ್ನು ತೋರಿಸಿ ಪ್ರೋತ್ಸಾಹ ಕೊಟ್ಟಿರುವರು. ಅದೇ ರೀತಿ ಧಾರವಾಡದ ಡಿ.ಲೋ.ಬೋ. ವೈಯಿಸ್ ಪ್ರಸಿಡೆಂಟರಾದ

ಶ್ರೀ ದೇವನಗೌಡ ಲಿಂಗನಗೌಡ, ಹೈಕೋರ್ಟಿನ ವಕೀಲ ಈ ಮಹನೀಯರು ನಮ್ಮ ಸಮಾಜದ ಏಳ್ಗೆಗೆ ಮುಖ್ಯ ಕಾರಣರಾಗಿರುವರು. ನಲವಡಿ, ಹುಲ್ಲೂರು, ದೇವಗಿರಿ, ಬಂಕಾಪುರ ಮೊದಲಾದ ಸ್ಥಳಗಳಲ್ಲಿ ನೆರೆದ ಕುರುಬರ ಮಹಾಸಭೆಗಳು ಇವರ ಸಹಾಯದಿಂದಲೇ ಆಗಿರುವವು. ಹಾಗೆಯೇ ಮುಂಬಯಿ ಕರ್ನಾಟಕ ಹಾಲುಮತ ಸಹಕಾರಿ ಸಂಘ ಗದಗ, ಕರ್ನಾಟಕ ಕುರುಬರ ಸಂಘ ಇವು ಇವರ ಪ್ರಯತ್ನದಿಂದಲೇ ಸ್ಥಾಪಿಸಲ್ಪಟ್ಟಿರುವವು ಎಂದು ಹೇಳಿದ್ದಾರೆ.

೮. ಕುರುಬರ ವಿದ್ಯಾರ್ಥಿಗಳ ಧರ್ಮಾರ್ಥ ಬೋರ್ಡಿಂಗ ವರದಿ

ಇದು ಶಿರಹಟ್ಟಿ ತಾಲೂಕು, ಬಟ್ಟೂರ ಗ್ರಾಮದಲ್ಲಿ ೧೯೪೭ನೆಯ ಇಸ್ವಿಯಲ್ಲಿ ಸ್ಥಾಪಿತವಾಗಿದೆ. ಇದರ ಮುಖ್ಯ ಉದ್ದೇಶ, ಕುರುಬರ ಬಡ ಹಾಗೂ ಅನಾಥ ವಿದ್ಯಾರ್ಥಿಗಳ ಸಲುವಾಗಿ ಸ್ಥಾಪಿಸಲಾಗಿದೆ. ಬಟ್ಟೂರ ಪ್ರಾಥಮಿಕ ಶಾಲಾ ಹಾಗೂ ಲಕ್ಷ್ಮೇಶ್ವರ ಹೈಸ್ಕೂಲಿನಲ್ಲಿ ಕಲಿಯುತ್ತಿರುವ ಈ ಬೋರ್ಡಿಂಗಿನ ವಿದ್ಯಾರ್ಥಿಗಳಿಗೆ ಊಟ ಹಾಗೂ ವಸತಿ ಏರ್ಪಾಡು ಮಾಡಿದೆ. ಇದಲ್ಲದೆ ಇಲ್ಲಿ ಹಿಂದುಳಿದ ಸಮಾಜಗಳ ವಿದ್ಯಾರ್ಥಿಗಳೂ ಕಲಿಯುತ್ತಿದ್ದಾರೆ. ಈ ಬೋರ್ಡಿಂಗನಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗಾಗಿ ವಾಚನಾಲಯ, ಔಷದೋಪಚಾರ, ಉಪನ್ಯಾಸಗಳ ಏರ್ಪಾಡು ಇದೆ ಎಂದು ಹೇಳುತ್ತಾರೆ. ಹೀಗೆ ಈ ಧರ್ಮಾರ್ಥಕ ಬೋರ್ಡಿಂಗನಿಂದ ಉತ್ತಮವಾದ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿದೆ ಎಂಬುದು ಇಲ್ಲಿಯ ಸ್ಪಷ್ಟತೆಯ ವಿಚಾರವಾಗಿದೆ.

೯. ಕುರುಬರ ಸಂಘದ ಸ್ಥಾಪನೆಯ ಪೂರ್ವಭಾವಿ ಸಭೆಯ ವರದಿ

ಇದು ಚಿಕ್ಕನಾಯಕನಹಳ್ಳಿಯಲ್ಲಿ ಕುರುಬರ ಸಂಘದ ಸ್ಥಾಪನೆಗಾಗಿ ೧೩ ಮೇ ೧೯೨೫ರಂದು ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ವರದಿ ಇಷ್ಟಿದೆ. ಪ್ರಸ್ತುತ ಚಿಕ್ಕನಾಯಕನಹಳ್ಳಿಯಲ್ಲಿರುವ ಕುರುಬರ ಮತದ ಮೂರು ಮಠದ ಶ್ರೀಗುರು ವರ್ಗದವರೂ ಸೇರಿ ಚಿಕ್ಕನಾಯಕನಹಳ್ಳಿ ಶ್ರೀ ಗುರು ರೇವಣಸಿದ್ಧೇಶ್ವರ ಸ್ವಾಮಿ ಮಠದಲ್ಲಿ ತಮ್ಮ ಅಭಿವೃದ್ಧಿ ಮೊದಲಾದವುಗಳಿಗಾಗಿ ಒಂದು ಉಪಸಂಘವನ್ನು ಸ್ಥಾಪಿಸಿಕೊಳ್ಳುವುದಕ್ಕೋಸ್ಕರ ಬೆಂಗಳೂರು ಕುರುಬರ ಸಂಘದ ಜನರಲ್ ಕೌನ್ಸಿಲ್, ಜನರಲ್ ಸೆಕ್ರೆಟರಿಗಳೂ, ಲೆಜಿಸ್ಲೇಟಿವ್ಹ್ ಕೌನ್ಸಿಲ್ ಮೆಂಬರರೂ ಮತ್ತೋದ್ಧಾರಕ ವಿಷಯದಲ್ಲಿ ಬದ್ಧ ಕಂಕಣರೂ ಆದ ಶ್ರೀಯುತ ನೀಲಗಿರಿ ಜಿ. ಸಂಜೀವಯ್ಯನವರನ್ನು ಬರಮಾಡಿಕೊಂಡು ಅವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಸೇರಿಸಿ ಹಾಲುಮತದ ಒಳತಿಗಾಗಿ ದುಡಿಯಿರಿ ಎಂಬ ವಿಚಾರಗಳನ್ನು ತಿಳಿಸಿದ್ದಾರೆ.

ಈ ಸಭೆಯಲ್ಲಿ ಪಾಸಾದ ಠರಾವುಗಳು

* ಈ ಚಿಕ್ಕನಾಯಕನಹಳ್ಳಿಯಲ್ಲಿ ಬೆಂಗಳೂರು ಕುರುಬರ ಸಂಘಕ್ಕೆ ಸೇರಿದಂತೆ ಒಂದು ಉಪಸಂಘವನ್ನು ಸ್ಥಾಪನೆ ಮಾಡತಕ್ಕದ್ದು.

* ನಮ್ಮ ಈ ಮೂರು ಮಠಗಳಲ್ಲಿ ಪ್ರತಿಯೊಂದು ಮಠಕ್ಕೆ ಸಂಬಂಧಪಟ್ಟ ಯಾವ ವ್ಯಾಜ್ಯಗಳು ಬಂದರೂ ಆಯಾ ಮಠದ ಗುರುಗಳೆಲ್ಲರೂ ಒಟ್ಟಾಗಿ ಸೇರಿ ಆ ವ್ಯಾಜ್ಯವನ್ನು ಕೂಡಲೇ ಫಸಲ್ಮಾಡತಕ್ಕದ್ದು.
* ಮಠಕ್ಕೆ ಸಂಬಂಧಪಟ್ಟ ನಡವಳಿಕೆಗಳ ವಿಚಾರದಲ್ಲಿ ಬೆಂಗಳೂರು ಸೆಂಟ್ರಲ್ ಸಂಘದವರು ಆಗಾಗ್ಗೆ ತೀರ್ಮಾನಿಸಿ ಕಳುಹಿಸತಕ್ಕ ವಿಚಾರಗಳನ್ನು ಜಾರಿಗೆ ತರಲು ಬದ್ಧರಾಗಿರತಕ್ಕದ್ದು.

ಹೀಗೆ ಈ ಪೂರ್ವಭಾವಿ ಸಭೆಯಲ್ಲಿ ಚರ್ಚೆಯಾದ ಸಂಗತಿಗಳನ್ನು ಇಲ್ಲಿ ತಿಳಿಯಲಾಗಿದೆ. ಒಟ್ಟಾರೇ ಈ ಎಲ್ಲ ಸಂಗತಿಗಳು "ಹಾಲುಮತ ಮಹಾಸಭೆ ಭಾಷಣಗಳು ಮತ್ತು ವರದಿಗಳು" ಎಂಬ ಕೃತಿಯ ವಿಚಾರಗಳು ಇವಾಗಿವೆ. ಸಭೆ, ಭಾಷಣ ಮತ್ತು ವರದಿಗಳಿಗೆ ಸಂಬಂಧಿಸಿದ ಬಿಡಿ ಬಿಡಿಯಾದ ಕಾಗದ ಪತ್ರಗಳು ದೊರೆತಿವೆ.

೧೦. ಹಾಲುಮತ ಕುರುಬರ ಮಹಾನಾಡಸಭೆ

ಈ ಸಭೆಯು ಹಾಲುಮತ ಸಮುದಾಯದ ಗುರುಒಡೆಯರ ಹಿರಿಯ ಮಹಾನೀಯರ ಸಮ್ಮುಖದಲ್ಲಿ ನಡೆದಿರುತ್ತದೆ. ಹಾಸನ ಜಿಲ್ಲೆಯ, ಚನ್ನರಾಯಪಟ್ಟಣ ತಾಲ್ಲೂಕು ಬರಗೂರಲ್ಲಿ ಆಯೋಜಿಸಲಾಗಿರುತ್ತದೆ. ಇದು ೨೭ ಮತ್ತು ೨೮ನೇ ಫೆಬ್ರುವರಿ ೧೯೩೧ರಂದು ನಡೆದಿರುತ್ತದೆ.

* ಹಾಲುಮತ ಕುರುಬರ ಮಹಾನಾಡ ಸಭೆಯಲ್ಲಿ ಪಾಸಾದ ಠರಾವುಗಳೆಂದರೆ;
* ಹಾಸನಜಿಲ್ಲೆಯಲ್ಲಿ ಕಟ್ಟುವ ವಿದ್ಯಾರ್ಥಿ ನಿಲಯಕ್ಕೆ ಬೇಕಾಗುವ ಜಾಗವನ್ನು ದ್ರವ್ಯ ಸಹಾಯನವನ್ನು ಕೊಡಿಸಿಕೊಡುವು ನಮ್ಮ ಹಜರತ್ ಡೆಪ್ಯುಟ್ ಕಮೀಷನರ್ ಸಾಹೇಬರ ಮೂಲಕ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳಬೇಕೆಂಬುದು ಸರ್ವಾನು ಮತದಿಂದ ಪಾಸಾಯಿತು.
* ಮದುವೆ ಮುಂಜಿ ಮೊದಲಾದ ಕಾರ್ಯಗಳಲ್ಲಿ ಹೆಣ್ಣಿನ ಕಡೆಯವರು ಗಂಡಿನವರಿಂದ ಮುಂಗಡವಾಗಿ ಹಣವನ್ನು ತೆಗೆದುಕೊಳ್ಳುವ ಅತಿ ಹೇಯಕರವಾದ ಮೂಢಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕು.
* ಕುಲಸ್ಥರಿಗೆ ವಿಧಿಸುವ ದಂಡ, ಕಾಣಿಕೆ ಮೊದಲಾದವುಗಳನ್ನು ಅವರ ಯೋಗ್ಯತೆಯನ್ನು ನೋಡಿ ಹಾಕತಕ್ಕದ್ದು.
* ಲಗ್ನ ಕಾಲದಲ್ಲಿ ಹೆಣ್ಣಿನವರು ಎರಡು ರೂಪಾಯಿ, ಗಂಡಿನವರು ಮೂರು ರೂಪಾಯಿ ಈ ಮೇರೆಗೆ ವಿದ್ಯಾಭ್ಯಾಸದ ಫಂಡಿಗೆ ಕೊಡತಕ್ಕದ್ದು.
* ನಮ್ಮ ಜನಗಳು ನಮ್ಮ ಕುಲಗುರುಗಳಾದ ಸರವೂರು ಶಾಖಾಗುರುಗಳಿಗೇ ಹೊರತು ಅನ್ಯಜಾತಿಯ ಗುರುಗಳಿಗೆ ನಡೆದುಕೊಳ್ಳಬಾರದು ಮತ್ತು ಅವರಿಂದ ಅವ್ಯವಹಾರ ವಗೈರೆಗಳನ್ನು ತೀರಿಸಿಕೊಳ್ಳಲೂ ಬಾರದು.

[illegible]

* ಈ ಕಟ್ಟುಗಳನ್ನು ಮೀರಿ ನಡೆದವರಿಗೆ ಕೂಲದ ಮುಖಂಡರಾದ ಗೌಡ, ಯಜಮಾನ, ಹೆಗ್ಗಡೆ, ಪೂಜಾರಿ, ನಾಡುಗೌಡರು, ಗುರುಗಳು ಸೇರಿ ತಕ್ಕ ಬಂದೂಬಸ್ತನ್ನು ಮಾಡತಕ್ಕದ್ದೆಂಬ ಠರಾವು ಸರ್ವಾನುಮತದಿಂದ ಅಂಗೀಕೃತವಾಗಿರುತ್ತದೆ. ಹೀಗೆ ಈ ಎಲ್ಲ ಸಂಗತಿಗಳನ್ನು ಈ ಮಹಾನಾಡ ಸಭೆಯಲ್ಲಿ ತೀರ್ಮಾನಿಸಲಾಗಿದೆ.

೧೧. ಶ್ರೀ ಹಾಲುಮತ ಕುರುಬರ ಮಹಾನಾಡುಸಭೆ ದೊಡ್ಡಬಾಗನಹಳ್ಳಿ

ಈ ಸಭೆಯು ಶ್ರೀಮಾನ್ ಮಹಾವೇದಮೂರ್ತಿ ಬಿ.ಎಸ್. ಚನ್ನಪ್ಪ ಒಡೆಯರು ಇವರ ಘನ ಅಧ್ಯಕ್ಷತೆಯಲ್ಲಿ ನಡೆದಿರುತ್ತದೆ. ಹಾಸನ ತಾಲೂಕು ಕಸಬಾ ಹೋಬಳಿ ದೊಡ್ಡಬಾಗನ ಹಳ್ಳಿಯಲ್ಲಿ ತಾ ೧೩.೦೫.೧೯೫೨ರಲ್ಲಿ ನಡೆದಿರುತ್ತದೆ. ಈ ಸಭೆಯಲ್ಲಿ ವಿಶೇಷವಾಗಿ ಚರ್ಚೆಯಾದ ಸಂಗತಿಗಳೆಂದರೆ ನಮ್ಮ ಹಾಲುಮತ ಸಮುದಾಯದ ನ್ಯೂನಾತಿರಿಕ್ತಗಳನ್ನು ವಿವೇಚಿಸಲೂ ಮತ್ತು ಹಿಂದುಳಿದಿರುವ ನಮ್ಮ ಜನಾಂಗದ ಪೂರೋಭಿವೃದ್ಧಿಯ ವಿಷಯವಾಗಿ ಚರ್ಚೆಗಳನ್ನು ನಡೆಸಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವ ಸಲುವಾಗಿ ಈ ಸಭೆಯಲ್ಲಿ ಚರ್ಚಿಸಲಾಗಿದೆ.

೧೨. ಮೈಸೂರು ಸೀಮೆಯ ಹಾಲುಮತದ ಕುರುಬರ ಮಹಾನಾಡು ಉಪಸಭೆ

ಇದನ್ನು ತಾ ೨೪ ಜುಲೈ ತಿಂಗಳು ೧೯೩೩ರಲ್ಲಿ ನಡೆಸುತ್ತಾರೆ. ಇದರ ಉದ್ದೇಶ ನಂಜನಗೂಡು ತಾಲೂಕು ಕಳಲೆ ಗುರು ರೇಣುಪುರಿಯಲ್ಲಿ ನೆಲಸಿರುವ ಜಗದ್ಗುರು ರೇಣುಕರವರ ಜಯಂತಿ ಆರಾಧನೆ ಮಹೋತ್ಸವವನ್ನು ಮಂಗಳಗೊಳಿಸುವುದಕ್ಕಾಗಿ, ನಿಮ್ಮ ಶಕ್ತಾನುಸಾರ ಗುರುಸೇವೆ. ಕಾರ್ಯಕ್ಕಾಗಿ ಧನಧಾನ್ಯ ಸಹಾಯವನ್ನು ಮಾಡಬೇಕೆಂದು ಈ ಸಭೆಯನ್ನು ಆಯೋಜಿಸಲಾಗಿದೆ. ಹೀಗೆ ಹಾಲುಮತಸಮುದಾಯದ ಒಳಿತಿಗಾಗಿ ಅವರ ನೀತಿ ನಿಯಮಗಳನ್ನು ಪಾಲಿಸುವ ಸಲುವಾಗಿ ಮತ್ತು ಗುರುಒಡೆಯರು ನಿರ್ಧರಿಸಿದ ಠರಾವುಗಳನ್ನು ರೂಢಿಸಿಕೊಳ್ಳುವ ಸಲುವಾಗಿ ಈ ಸಭೆ, ಉಪಸಭೆ, ಭಾಷಣ ಇತ್ಯಾದಿ ಸಂಗತಿಗಳನ್ನು ಇವುಗಳ ಮೂಲಕ ತಿಳಿಯಬಹುದು.

ಒಟ್ಟಾರೇ ಈ ಅಧ್ಯಾಯದಲ್ಲಿ ಸರೂರ ಹಾಲುಮತ ಸಂಪ್ರದಾಯ ಗುರುಒಡೆಯರ ಪರಂಪರೆಗೆ ಸಂಬಂಧಿಸಿದ ಲಿಖಿತ ಸಾಹಿತ್ಯ, ದಾಖಲು ಸಾಹಿತ್ಯ ಹಾಗೂ ಕುರುಬರ ಗುರುಒಡೆಯರೆಲ್ಲ ಸೇರಿ ನಿರ್ಣಯಿಸಿದ ಕರಾರು ಪತ್ರಗಳು ಜೊತೆಗೆ ಗುರುವರ್ಗದ ಮಹನೀಯರ ಸಮ್ಮುಖದಲ್ಲಿ ನಡೆದ ಸಭೆಗಳು, ಸಂಘ-ಸಂಸ್ಥೆಗಳಲ್ಲಿ ನಡೆದ ಭಾಷಣ ಮತ್ತು ವರದಿಗಳು ಹೀಗೆ ಈ ಎಲ್ಲ ಆಕರಗಳನ್ನು ಇಟ್ಟುಕೊಂಡು ಸರೂರ ಹಾಲುಮತ ಸಂಪ್ರದಾಯದ ಪರಂಪರೆಯನ್ನು ಚರ್ಚಿಸಲಾಗಿದೆ.

ಅಡಿಟಿಪ್ಪಣಿಗಳು

೧. ತಗರ ಪವಾಡ ಸಂಧಿ, ೦೨ ಪದ್ಯ-೫೦, ಪು-೨೦.

೨. ಅದೇ ಸಂ-೦೨, ಪದ್ಯ-೮೬, ಪು. ೨೫.

೩. ಅದೇ ಸಂ–೦೩, ಪದ್ಯ–೩೨, ಪು. ೩೪

೪. ಅದೇ ಸಂ–೦೩, ಪದ್ಯ–೪೩, ಪು. ೩೬.

೫. ಅದೇ ಸಂ–೦೩, ಪದ್ಯ–೬೬, ಪು. ೩೯.

೬. ಅದೇ ಸಂ–೦೩, ಪದ್ಯ–೮೧, ಪು. ೪೧

೭. ಅದೇ ಸಂ–೦೬, ಪದ್ಯ–೧೭, ಪು. ೬೮.

೮. ಅದೇ ಸಂ–೦೬, ಪದ್ಯ–೨೫, ಪು. ೬೯.

೯. ಅದೇ ಸಂ–೦೬, ಪದ್ಯ–೪೯,೪೦, ಪು. ೭೨.

೧೦. ಅದೇ ಸಂ–೦೬, ಪದ್ಯ–೬೮, ಪು. ೭೫.

೧೧. ಅದೇ ಸಂ–೦೬, ಪದ್ಯ–೭೦, ಪು. ೭೫.

೧೨. ಅದೇ ಸಂ–೦೭, ಪದ್ಯ–೩೩, ಪು. ೮೩.

೧೩. ಅದೇ ಸಂ–೦೭, ಪದ್ಯ–೩೮, ಪು. ೮೪.

೧೪. ಅದೇ ಸಂ–೦೭, ಪದ್ಯ–೪೭, ಪು. ೮೫.

೧೫. ಅದೇ ಸಂ–೦೭, ಪದ್ಯ–೬೫, ಪು. ೮೮.

೧೬. ಅದೇ ಸಂ–೦೮, ಪದ್ಯ–೬೧, ಪು. ೯೭.

೧೭. ಸಿದ್ಧಮಂಕ ಚರಿತೆ, ಸಂಧಿ–೦೧, ಪದ್ಯ–೪೧, ಪು. ೦೮.

೧೮. ಅದೇ ಸಂ–೦೧, ಪದ್ಯ–೬೯, ಪು. ೧೨.

೧೯. ಅದೇ ಸಂ–೦೧, ಪದ್ಯ–೧೫೨–೧೫೩, ಪು. ೨೫, ೨೬.

೨೦. ಅದೇ ಸಂ–೦೨, ಪದ್ಯ–೩೫, ಪು. ೩೨.

೨೧. ಅದೇ ಸಂ–೦೨, ಪದ್ಯ–೬೮, ಪು. ೩೮.

೨೨. ಅದೇ ಸಂ–೦೨, ಪದ್ಯ–೬೯, ಪು. ೩೮.

೨೩. ಅದೇ ಸಂ–೦೩, ಪದ್ಯ–೫೧, ಪು. ೪೮.

೨೪. ಅದೇ ಸಂ–೦೩, ಪದ್ಯ–೭೮, ಪು. ೫೩.

೨೫. ಅದೇ ಸಂ–೦೩, ಪದ್ಯ–೧೩೬, ಪು. ೬೨.

೨೬. ಅದೇ ಸಂ–೦೩, ಪದ್ಯ–೧೪೨, ಪು. ೬೩.

೨೭. ಭೀಮ ಕವಿಯ ಹಾಲುಮತೊತ್ತೇಜಕ ಪುರಾಣ, ಸಂಧಿ–೦೨, ಪದ್ಯ–೧೩, ಪು. ೭

೨೮. ಅದೇ ಸಂ–೦೨, ಪದ್ಯ–೧೬, ಪು. ೮.

೨೯. ಅದೇ ಸಂ–೦೨, ಪದ್ಯ–೪೬, ಪು. ೧೪.

೩೦. ಹಾಲುಮತ ಪುರಾಣ (೧೯೧೦) ಸಂಧಿ–೦೧, ಪದ್ಯ–೦೩, ಪು. ೦೧.

೩೧. ಅದೇ ಸಂ–೦೩, ಪದ್ಯ–೧೨, ಪು. ೨೮.

೩೨. ಅದೇ ಸಂ–೦೩, ಪದ್ಯ–೧೨, ಪು. ೨೮.

೩೩. ಅದೇ ಸಂ–೦೪, ಪದ್ಯ–೫೫, ಪು. ೫೩.

೩೪. ಚನ್ನಬಸವ ಕವಿಯ ಹಾಲುಮತ ಪುರಾಣ, ಸಂಧಿ–೦೨, ಪದ್ಯ–೧೦, ಪು. ೪೨

೩೫. ಅದೇ ಸಂ–೦೭, ಪದ್ಯ–೩೮, ಪು. ೮೬

೩೬. ಹಾಲುಮತ ಸಂಸ್ಕೃತಿ–೧, ಪು. ೮

೩೭. ತಗರ ಪವಾಡ(ಸಂ) ಅನುಭಂಧ, ಪು. ೧೦೨–೧೦೪.

೩೮. ಮಾರ್ಗ–ಸಂಪುಟ–೦೪, ಪು. ೩೮೧.

ಅಧ್ಯಾಯ ಏಳು

ಸರೂರ ಹಾಲುಮತ ಸಂಪ್ರದಾಯ: ದೇವಾಲಯಗಳ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳು

ಅಧ್ಯಾಯ ಏಳು

ಸರೂರು ಹಾಲುಮತ ಸಂಪ್ರದಾಯ: ದೇವಾಲಯಗಳ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳು

ಸರೂರ ಹಾಲುಮತ ಸಂಪ್ರದಾಯದ ಗುರುಒಡೆಯರಿಗೆ ಸಂಬಂಧಿಸಿದಂತೆ ಕರ್ನಾಟಕ ಮತ್ತು ಆಂಧ್ರದಲ್ಲಿ ಅನೇಕ ರೇವಣಸಿದ್ಧನ ದೇವಾಲಯಗಳು ಕಂಡುಬರುತ್ತವೆ. ಅವುಗಳನ್ನು ಕ್ಷೇತ್ರಕಾರ್ಯದ ಮೂಲಕ ಗುರುತಿಸಿ, ಮಾಹಿತಿ ಸಂಗ್ರಹಿಸಿ ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ೧೨ನೇ ಶತಮಾನದ ಶರಣರ ಚಳವಳಿಯ ಕಾಲಘಟ್ಟದಲ್ಲಿ ರೇವಣಸಿದ್ಧ ಹಾಗೂ ಸಿದ್ಧರಾಮರ ನೇತೃತ್ವದಲ್ಲಿ ರೂಪುಗೊಂಡ ಗುರುಪರಂಪರೆಗಳು ಸಾಂಸ್ಕೃತಿಕವಾಗಿ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ರೇವಣಸಿದ್ಧರು ನಾಡಿನಾದ್ಯಂತ ಸಂಚರಿಸಿದರು ಎಂದು ಹೇಳುವುದಕ್ಕೆ ರೇವಣಸಿದ್ಧನ ಸಾಕಷ್ಟು ನೆಲೆಗಳು ಕರ್ನಾಟಕದಲ್ಲಿ ಕಂಡುಬರುತ್ತವೆ. ಆದರೆ ಹಾಲುಮತ ಸಮುದಾಯದಲ್ಲಿ ರೇವಣಸಿದ್ಧ, ಸಿದ್ಧರಾಮರನ್ನು ಆರಾಧ್ಯದೈವ ಪುರುಷರನ್ನಾಗಿ ಮಾಡಿಕೊಂಡು, ಆರಾಧಿಸಿಕೊಂಡು ಬರುತ್ತಿರುವುದು ಕಂಡುಬರುತ್ತದೆ. ಇವರಲ್ಲಿ ಹೆಚ್ಚು ಪ್ರಚಲಿತನಾಗಿ ಬೆಳಕಿಗೆ ಬಂದವರು ರೇವಣಸಿದ್ಧರು. ಈತನು ಕುರುಬ ಸಮಾಜದ ಪೂಜ್ಯ ಗುರುವಾಗಿ ಮತ್ತು ದೈವವಾಗಿ ಲಿಂಗಾಯಿತ ಸಮಾಜದ ಆರಾಧ್ಯ ಪುರುಷನಾಗಿ ಹೊರಹೊಮ್ಮಿದ್ದಾನೆ.

ಸುಮಾರು ೧೨-೧೩ನೇ ಶತಮಾನದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಕ್ರಾಂತಿ ಪುರುಷರಲ್ಲಿ ರೇವಣಸಿದ್ಧರಿಗೆ ವಿಶೇಷ ಸ್ಥಾನವನ್ನು ನೀಡಿ, ಪ್ರಸ್ತುತದವರೆಗೂ ಪೂಜಿಸಿಕೊಂಡು ಬರುತ್ತಿದ್ದಾರೆ. ಇಂತಹ ದೈವಾರಾಧಕರ ಹೆಸರಿನಲ್ಲಿ ರೇವಣಸಿದ್ಧ ದೇವಾಲಯಗಳನ್ನು ನಿರ್ಮಿಸಿಕೊಂಡು ಬಂದಿರುವುದು ಗಮನಾರ್ಹವಾಗಿದೆ. ಸಾಮಾನ್ಯವಾಗಿ ದೇವಾಲಯಗಳು ಅಂದಿನ ಜನಜೀವನದಲ್ಲಿ ಪ್ರಮುಖ ಪಾತ್ರ ವಹಿಸಿದವುಗಳಾಗಿವೆ. ಇವು ಕೇವಲ ಭಕ್ತಿ ಕೇಂದ್ರಗಳಾಗಿರದೆ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಲಾಪಗಳನ್ನು ನಿಭಾಯಿಸುವಂತಹ ಸಂಸ್ಥೆಗಳಾಗಿವೆ. ಇವು

ಜನರಿಗೆ ಜ್ಞಾನ, ಐಕ್ಯತೆ ಮತ್ತು ಪಾವಿತ್ರ್ಯವನ್ನು ಪ್ರತಿಬಿಂಬಿಸುತ್ತವೆ. ಇಂತಹ ಶಿಷ್ಟವಾದ ಸಂಗತಿಗಳನ್ನು ತಿಳಿಸಿಕೊಡುವ ದೇವಾಲಯಗಳ ವಾಸ್ತುಶಿಲ್ಪವನ್ನು ಹಾಗೂ ರೇವಣಸಿದ್ಧನ ಮೂರ್ತಿ ಶಿಲ್ಪಗಳನ್ನು ಕುರಿತು ಚರ್ಚಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಹಾಲುಮತ ಸಮುದಾಯವು ಎಲ್ಲಿ ಹೆಚ್ಚಾಗಿ ಕಂಡುಬರುತ್ತದೆಯೋ ಅಲ್ಲೆಲ್ಲ ಒಂದೊಂದು ರೇವಣಸಿದ್ಧನ ದೇವಾಲಯವು ಇರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಸರೂರಿನ ಗುರುಪರಂಪರೆಯನ್ನು ಮೂಲವಾಗಿಟ್ಟುಕೊಂಡು, ಈ ಪರಂಪರೆಯ ಅನುಯಾಯಿಗಳು ಬೇರೆ ಬೇರೆ ಪ್ರದೇಶ ಹಾಗೂ ರಾಜ್ಯಗಳಲ್ಲಿ ನೆಲೆಸಿದ್ದಾರೆ.

ಹಾಲುಮತ ಸಮುದಾಯದವರು ನೆಲೆಸಿರುವ ಸ್ಥಳಗಳಲ್ಲಿ ಕಂಡುಬರುವ ರೇವಣಸಿದ್ಧನ ದೇವಾಲಯಗಳನ್ನು ನೋಡಿದಾಗ ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡುಗಳಲ್ಲಿ ಇವರ ದೇವಾಲಯಗಳು ಕಂಡುಬರುತ್ತವೆ. ಆದರೆ ಪ್ರಸ್ತುತ ಅಧ್ಯಯನ ದೃಷ್ಟಿಯಿಂದ ಕರ್ನಾಟಕ ಮತ್ತು ಆಂಧ್ರದ ಗಡಿನಾಡು ಪರಿಸರದಲ್ಲಿ ದೊರೆತ ರೇವಣಸಿದ್ಧನ ದೇವಾಲಯಗಳು, ಅವುಗಳ ವಾಸ್ತುಶಿಲ್ಪ ಹಾಗೂ ಆತನ ಮೂಲ ಮೂರ್ತಿಶಿಲ್ಪಗಳನ್ನು ಇಲ್ಲಿ ಚರ್ಚಿಸಲಾಗಿದೆ. ರೇವಣಸಿದ್ಧನನ್ನು ಪೂಜೆ ಮಾಡುವ ಭಕ್ತ ಪರಂಪರೆಯ ಒಡೆಯರು ಕರ್ನಾಟಕದಾದ್ಯಂತ ಕಂಡುಬರುತ್ತಾರೆ. ಪ್ರಮುಖವಾಗಿ ಇವರು ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ, ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇವುಗಳಲ್ಲಿ ಪ್ರಮುಖವಾದ ರೇವಣಸಿದ್ಧನ ದೇವಾಲಯ–ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳನ್ನು ಈ ಮುಂದಿನಂತೆ ಅಧ್ಯಯನಕ್ಕೆ ಒಳಪಡಿಸಲಾಗುವುದು.

ಸರೂರ ರೇವಣಸಿದ್ಧನ ದೇವಾಲಯ

ಈ ಊರಲ್ಲಿ ಎರಡು ರೇವಣಸಿದ್ಧನ ದೇವಾಲಯಗಳಿವೆ. ಒಂದು ಊರಿನಿಂದ ಹೊರಗಡೆ ಇದೆ. ಇನ್ನೊಂದು ಊರಿನ ಮಧ್ಯದಲ್ಲಿದೆ. ಮೂಲತಃ ಒಂದೇ ಇದ್ದು ಕಾಲಾಂತರದಲ್ಲಿ ಎರಡಾಗಿವೆ. ಈ ಗ್ರಾಮವು ಬಹು ಸಂಸ್ಕೃತಿಯ ಸಂಗಮ ಸ್ಥಾನವಾಗಿದ್ದು, ಕುರುಬರ ಗುರುಒಡೆಯರ ಮೂಲ ಸಾಂಸ್ಕೃತಿಕ ನೆಲೆಯಾಗಿದೆ. ಈ ಸ್ಥಳದಿಂದ ಸುಮಾರು ಎರಡು ಫರ್ಲಾಂಗ ದೂರದಲ್ಲಿ ಪ್ರಾಚೀನ ಕಾಲದ ರೇವಣಸಿದ್ಧೇಶ್ವರನ ದೇವಾಲಯವಿದೆ. ಇದನ್ನು 'ಏಳುಗುಡಿ' ಎಂದು ಕರೆಯುತ್ತಾರೆ. ಏಕೆಂದರೆ ಇದು ಏಳುಶಿಖರಗಳನ್ನು ಒಳಗೊಂಡಿದ್ದು, ಪ್ರತಿಯೊಂದಕ್ಕೂ ಒಂದೊಂದು ಕಳಸವನ್ನು ಇಟ್ಟಿರುವುದರಿಂದ ಜನಪದರ ರೂಢಿಯಲ್ಲಿ ಇದು 'ಏಳುಗುಡಿ' ಎಂದಾಗಿದೆ. ಕಲಚೂರಿ ಅರಸರ ಕಾಲದಲ್ಲಿ ನಿರ್ಮಿಸಿರಬಹುದಾದ ಈ ದೇವಾಲಯವು ಪ್ರಮುಖವಾಗಿ ಪಂಚಶಿಖರಗಳನ್ನು ಹೊಂದಿದೆ. ಆದರೆ ಅದರ ಹಿಂದಕ್ಕೆ ಮತ್ತೆರಡು ಶಿಖರಗಳು ಅಂಟಿಕೊಂಡಿರುವುದರಿಂದ ಅದನ್ನು ಏಳುಗುಡಿ ಎಂದು ಕರೆಯುತ್ತಾರೆ. ಆದರೆ ಅದೇ ದೇವಾಲಯದ ಮುಂದೆ ಎಡಭಾಗಕ್ಕೆ ಪ್ರಾಚೀನ ಕಾಲದಿಂದಲೂ ಪೂರ್ಣಗೊಳ್ಳದ ಎರಡು ಗೋಪುರಗಳ ಅರ್ಧ ಆಕೃತಿಯಿದ್ದು, ಅದನ್ನು ಇತ್ತೀಚೆಗೆ ಸರಕಾರವು

ಮುಜರಾಯಿ ಇಲಾಖೆಯಿಂದ ಪುನರುಜ್ಜೀವನಗೊಳಿಸಿ ಏಳುಗುಡಿಗೆ ಮತ್ತೆರಡು ಗುಡಿಗಳನ್ನು ಸೇರಿಸಿದೆ. ಈಗ ಅದು ನವಶಿಖರಗಳುಳ್ಳ ದೇವಾಲಯವಾಗಿದೆ.

ಈ ದೇವಾಲಯದ ಹಿಂದೆ ಚಿಕ್ಕದಾದ ಒಂದು ಛಾಯಾಭಗವತಿಯ ಗುಡಿಯಿದೆ. ಇವು ಎಲ್ಲಾ ಒಂದೇ ಆವರಣದಲ್ಲಿದ್ದು, ಪಂಚಕೂಟ ದೇವಾಲಯಕ್ಕೆ ಅಂಟಿಕೊಂಡಿವೆ. ಹಾಗಾಗಿ ಇದು ಒಂಬತ್ತು ಗೋಪುರಗಳನ್ನು ಒಳಗೊಂಡಿದೆ. ಇದಕ್ಕೆ ಪೂರಕವಾಗಿ ಅಲ್ಲಿನ ಹಿರಿಯರು ಹೇಳುವಂತೆ, ಈ ರೇವಣಸಿದ್ಧನ ದೇವಾಲಯವನ್ನು ಕಟ್ಟುವಾಗ ನವ ಶಿಖರಗಳ ಕಟ್ಟಡವಾಗಿದ್ದು, ಅದನ್ನು ಪೂರ್ಣಗೊಳಿಸುವಾಗ ಎರಡನ್ನು ಹಾಗೆಯೇ ಬಿಟ್ಟಿದ್ದಾರೆ. ಅದು ಯಾಕೆಂಬುದು ಇದುವರೆಗೂ ತಿಳಿದಿಲ್ಲ. ಆದರೆ ಇದಕ್ಕೆ ಸಾಕ್ಷಿಯಾಗುವಂತೆ ಶಾಂತಮುತ್ತಯ್ಯ ನವಗ್ರಹಗಳ ಸಂಚಾರಗಳನ್ನು ತಿಳಿದಿದ್ದರು. ಜೊತೆಗೆ ಅವುಗಳನ್ನು ಒಂದೊಂದು ಸಮಸ್ಥರಗಳ ಫಲವಾಗಿ ಗುರುತಿಸುತ್ತಿದ್ದರು ಎಂಬುದಾಗಿ ಹೇಳುತ್ತಾರೆ.

ಈ ದೇವರ ನಿಜವಾದ ಹೆಸರು 'ಮಲ್ಲಿಕಾರ್ಜುನ' ಎಂದು ಹೇಳುತ್ತಾರೆ. ಏಕೆಂದರೆ ಈ ಪರಿಸರದಲ್ಲಿ ದೊರೆತ ಕ್ರಿ.ಶ. ೧೨೧೦ ಶಾಸನದ ಪ್ರಕಾರ "ಅರಸನಹಳ್ಳಿಯ ವೀರನಗೌಡರ ಹೊನಗುಂದದ ಬೀಚಗುರು ತನ್ನ ಮಗ ವೆಂಕಯ್ಯನ ಕಾಲದ ಗುರುವಿಗೆ ಮಲ್ಲಿನಾಥ ದೇವರ ಸ್ತಾನವಧಾರಾಪೂರ್ವಕ ಮಾಡಿಕೊಟ್ಟರು"[೭] ಎಂಬ ಉಲ್ಲೇಖಗಳು ಸಿಗುತ್ತವೆ.

ಈ ದೇವಾಲಯವು ಐದು ಗರ್ಭಗೃಹಗಳನ್ನು ಒಳಗೊಂಡಿದ್ದು, ಒಂಬತ್ತು ಬಾಗಿಲುಗಳನ್ನು ಹೊಂದಿದೆ. ಒಳನವರಂಗ ಮತ್ತು ಹೊರನವರಂಗವನ್ನು ಹೊಂದಿದೆ. ಅದೇ ರೀತಿ ಎರಡು ಸಭಾ ಮಂಟಪಗಳಿಂದ ಕೂಡಿದೆ. ಮೊದಲ ಸಭಾಮಂಟಪವು ನಾಲ್ಕು ಕಂಬಗಳಿಂದ ರೂಪಗೊಂಡಿದೆ. ಅಲ್ಲಿ ನಂದಿ, ಪ್ರಾಣಾರ್ಪಣೆ ಮಾಡಿಕೊಳ್ಳುವ ಭಕ್ತನ ಶಿಲ್ಪಗಳಿವೆ. ಅದೇ ರೀತಿ ಎರಡನೇ ಸಭಾಮಂಟಪವು ಸ್ವಲ್ಪ ಉದ್ದವಿದ್ದು, ಮಧ್ಯದಲ್ಲಿ ನಾಲ್ಕು ಕಂಬಗಳಿಂದ ಕೂಡಿದೆ. ಈ ದೇವಾಲಯದ ಮುಖ್ಯ ಗರ್ಭಗುಡಿಯಲ್ಲಿ ಮಲ್ಲಿಕಾರ್ಜುನ, ರೇವಣಸಿದ್ಧನ ಮೂರ್ತಿಗಳಿವೆ. ಅಂದರೆ ಗುಡಿಯ ಒಳಗಡೆ ಪಶ್ಚಿಮ ಗರ್ಭಗೃಹದಲ್ಲಿ ಐದು ಶಿವಲಿಂಗಗಳನ್ನು ಒಂದೇ ಪೀಠದಲ್ಲಿ ನಿಲ್ಲಿಸಿದ್ದಾರೆ. ಅದಕ್ಕೆ ಮಲ್ಲಿಕಾರ್ಜುನ ಎಂದು ಕರೆಯುತ್ತಾರೆ. ಅದರ ದಕ್ಷಿಣ ಗರ್ಭಗುಡಿಯಲ್ಲಿ ಶಿವಲಿಂಗದಿಂದ ಉದ್ಭವವಾದ ರೇವಣಸಿದ್ಧನ ಮೂರ್ತಿ ಇದೆ. ಮತ್ತೊಂದು ಗರ್ಭಗುಡಿಯಲ್ಲಿ ಚಿಕ್ಕದಾದ ಶಿವಲಿಂಗವಿದೆ. ಅದರ ಜೊತೆಗೆ ಚಚ್ಚೌಕದ ಫಲಕದ ಮೇಲೆ ಪದ್ಮ ಮತ್ತು ರಾಶಿಗಳ ಚಿತ್ರವನ್ನು ತೋರಿಸಲಾಗಿದೆ. ರಾಶಿಯ ಚಿತ್ರಗಳಾದ ಚೇಳು, ಮಕರ, ಮೀನು, ಏಡಿ, ತುಲಾ, ಕುರಿ, ಎತ್ತು, ಸಿಂಹ, ಧನಸ್ಸು, ಮಿಥುನ, ಕನ್ಯ ಇವುಗಳನ್ನು ಕಮಲದ ಸುತ್ತಲೂ ಚಿತ್ರಬಿಡಿಸಲಾಗಿದೆ. ಈ ದೇವಾಲಯದಲ್ಲಿ ಮುನಿ, ಭಕ್ತರ ಸಮೂಹದ ಶಿಲ್ಪಗಳನ್ನು ನೋಡಬಹುದು. ಸಾಮಾನ್ಯವಾಗಿ ಅಲ್ಲಿ ಭಕ್ತನೊಬ್ಬನು ಪದ್ಮಾಸನದಲ್ಲಿ

ಕುಳಿತು ಅಂಜಲಿ ಮುದ್ರೆಯಲ್ಲಿದ್ದಾನೆ. ಅದೇ ರೀತಿ ಮಹಿಳೆಯೊಬ್ಬಳು ಪದ್ಮಾಸನದಲ್ಲಿ ಕುಳಿತು ಅಂಜಲಿ ಮುದ್ರೆಯಲ್ಲಿದ್ದಾಳೆ. ಕೂದಲನ್ನು ತುರುಬಿನಾಕಾರವಾಗಿ ಕಟ್ಟಲಾಗಿದೆ. ಕಿವಿ, ಕೊರಳು, ಕೈಕಾಲು ಮತ್ತು ಸೊಂಟದಲ್ಲಿ ಆಭರಣಗಳನ್ನು ಧರಿಸಿದ್ದಾಳೆ. ಅದೇ ರೀತಿ ಭಕ್ತನೊಬ್ಬನು ಸ್ವಂತ ತಾನೇ ಪ್ರಾಣಾರ್ಪಣೆ ಮಾಡಿಕೊಳ್ಳುವ ಶಿಲ್ಪವಿದೆ. ಇದೇ ಭಂಗಿಯಲ್ಲಿ ಮಹಿಳೆಯೊಬ್ಬಳು ತನ್ನ ಶಿರವನ್ನು ಚೂರಿಯಿಂದ ತಿವಿದುಕೊಳ್ಳುವ ಶಿಲ್ಪವನ್ನು ನೋಡಬಹುದಾಗಿದೆ.

ಹಾಗೆಯೇ ಗಡ್ಡದಾರಿಯ ಮುನಿಯನೊಬ್ಬ ಪದ್ಮಾಸನದಲ್ಲಿ ಕುಳಿತಿದ್ದು ಕೂದಲನ್ನು ಹಿಂದಕ್ಕೆ ಎಳೆದು ಸಿಂಬೆಯಾಕಾರದಲ್ಲಿ ಕಟ್ಟಲಾಗಿದೆ. ಇನ್ನೊಂದು ಕಡೆಗೆ ದಂಪತಿಗಳಿಬ್ಬರು ಪದ್ಮಾಸನದಲ್ಲಿ ಕುಳಿತಿರುವ ಚಿತ್ರಗಳಿವೆ. ಒಟ್ಟಾರೇ ಭಕ್ತರ/ಭಕ್ತಳ ಐದು ಶಿಲ್ಪಗಳಿವೆ. ಅವು ಒಂದು ಭಕ್ತಿಯಿಂದ ಕೈಮುಗಿದು ಕುಳುತಿರುವುದು ಕಂಡರೆ, ಮತ್ತೊಂದೆಡೆ ಪ್ರಾಣಾರ್ಪಣೆ ಮಾಡಿಕೊಳ್ಳುವ ಚಿತ್ರವನ್ನು ತೋರಿಸಲಾಗಿದೆ. ಅವುಗಳಲ್ಲಿ ಕೈಮುಗಿದು ಕುಳಿತಿರುವ ಭಕ್ತರ ಎರಡು ಮತ್ತು ಭಕ್ತಳ ಒಂದು ಶಿಲ್ಪವಿದೆ. ಅದೇ ರೀತಿ ಪ್ರಾಣಾರ್ಪಣೆ ಮಾಡಿಕೊಳ್ಳುವ ಭಕ್ತ, ಭಕ್ತಳ ಒಂದೊಂದು ಶಿಲ್ಪಗಳಿವೆ. ಈ ಎಲ್ಲಾ ಶಿಲ್ಪಗಳನ್ನು ರೇವಣಸಿದ್ಧರ ದೇವಾಲಯದ ಗರ್ಭಗುಡಿಯಲ್ಲಿ ಇಡಲಾಗಿದೆ. ಅವು ಶೈಲಿಯ ದೃಷ್ಟಿಯಿಂದ ಸುಮಾರು ಕ್ರಿ.ಶ. ೧೩ನೆಯ ಶತಮಾನದವುಗಳಾಗಿವೆ. ಈ ದೇವಾಲಯದ ಪಕ್ಕದಲ್ಲಿ ಪಾಕ ಶಾಲೆಯೆಂದು ಕರೆಯುವ ಪಕ್ಕದ ಜಿರ್ಣೋದ್ಧಾರ ಆಗಿರುವ ಶಿವಲಿಂಗಗಳನ್ನು ಹೊಂದಿದ ಎರಡು ಗರ್ಭಗೃಹಗಳು ಉತ್ತರ-ದಕ್ಷಿಣಾಭಿಮುಖವಾಗಿವೆ. ಇವು ಈ ದೇವಸ್ಥಾನಕ್ಕೆ ಪೂರ್ವಾಭಿಮುಖ ವಾಗಿವೆ. ಈ ಎರಡೂ ಗರ್ಭಗೃಹಗಳ ಮೇಲೂ ಕದಂಬನಾಗರ ಶೈಲಿಯ ಶಿಖರಗಳಿವೆ. ಇನ್ನೂ ಉಳಿದ ಐದು ಗರ್ಭಗುಡಿಗಳ ಮೇಲೆಯೂ ಕದಂಬನಾಗರ ಶೈಲಿಯ ಶಿಖರಗಳಿವೆ. ಇತ್ತೀಚೆಗೆ ಸರಕಾರವು ಮುಜರಾಯಿ ಇಲಾಖೆಯಿಂದ ಮತ್ತೆರಡು ಗುಡಿಗಳನ್ನು ಪುನರುಜ್ಜೀವನಗೊಳಿಸಿದೆ. ಇವುಗಳಿಗೆ ಇನ್ನೂ ಕಳಸಗಳನ್ನು ಇಟ್ಟಿರುವುದಿಲ್ಲ. ಒಟ್ಟಾರೆ ಈ ದೇವಾಲಯದ ಹೊರಗೋಡೆಯು ಸರಳವಾಗಿದೆ. ಸುಮಾರು ೧೨-೧೩ನೆಯ ಶತಮಾನದ ಕಂಬಗಳು ಅಲ್ಲಿವೆ.

ಹಾಗೆಯೇ ಈ ದೇವಸ್ಥಾನದ ಸುತ್ತಲು ಕಟ್ಟಡವಿದ್ದು, ಇದರ ಒಳಗಡೆ ನೂರಾರು ಚಿಕ್ಕ ಪುಟ್ಟನಾಗರ ಶಿಲ್ಪಗಳಿವೆ. ಜೊತೆಗೆ ನಾಗ, ವಿಷ್ಣು, ನಂದಿವಿಗ್ರಹಗಳಿವೆ. ಅದೇ ರೀತಿ ಶೈವ ಯತಿಗಳ ಭಕ್ತ/ಭಕ್ತಳು, ದಂಪತಿಗಳು, ರಾಶಿ-ಚಕ್ರಫಲಕ ಇನ್ನು ಬೇರೆ ಬೇರೆ ಶಿಲ್ಪಗಳು ಅಲ್ಲಿ ಕಂಡುಬರುತ್ತವೆ. ಈ ರೇವಣಸಿದ್ಧ ಗುಡಿಯ ಉತ್ತರಕ್ಕಿರುವ ಗುಡ್ಡದ ಪೂರ್ವದಿಕ್ಕಿನ ಅಂಚಿನಲ್ಲಿ ಶಾಂತಮುತ್ತಯ್ಯನ ಗದ್ದುಗೆ ಇದೆ. ಅದನ್ನು ಶಾಂತಗಿರಿ, ಚಂದ್ರಗಿರಿ ಅಥವಾ ಶಾಂತಮುತ್ತಯ್ಯ ಐಕ್ಯನಾದ ಸ್ಥಳ ಎಂದು ಕರೆಯುತ್ತಾರೆ. ಇಲ್ಲಿ ಪ್ರತಿ ವರ್ಷ ರೇವಣಸಿದ್ಧನ ಜಾತ್ರೆಯ ಸಂದರ್ಭದಲ್ಲಿ ಭಕ್ತಾದಿಗಳೆಲ್ಲ ಸೇರಿ ತೈಲಾಭಿಷೇಕವನ್ನು ಮಾಡುವುದು ಇಲ್ಲಿಯ ವಿಶೇಷವಾಗಿದೆ. ಅದರ ಪಕ್ಕದಲ್ಲಿ ಅದಕ್ಕೆ ಸಂಬಂಧಿಸಿದ ಒಂದು ಚಿಕ್ಕ

ರೇವಣಸಿದ್ಧನ ಗುಡಿಯಿದೆ. ಇನ್ನೆರಡು ಗುಡಿಗಳು ಈ ಗುಡ್ಡದ ದಕ್ಷಿಣಕ್ಕೆ ಮತ್ತು ಪೂರ್ವಕ್ಕಿವೆ. ಅದೇ ರೀತಿ ಗುರುಒಡೆಯರ ಪರಂಪರೆಯಲ್ಲಿ ಸತ್ತಂತ ಒಡೆಯರ ಶವಗಳನ್ನು ಸಾಮಾನ್ಯವಾಗಿ ರೇವಣಸಿದ್ಧ ದೇವಸ್ಥಾನದ ಆಜುಬಾಜುಗಳಲ್ಲಿ ಹೂಳಿರುತ್ತಾರೆ. ಇಲ್ಲಿಯೂ ರೇವಣಸಿದ್ಧನ ಗುಡಿಯ ದಕ್ಷಿಣಕ್ಕೆ ಒಡೆಯರ ನೂರಾರು ಗದ್ದುಗೆಗಳಿವೆ. ಈ ದೇವಾಲಯದ ಮುಂದೆ ೧೦ ಎಕರೆ ಭೂಮಿಯಿದೆ. ಇದನ್ನು ಒಡೆಯರು ಪಾರಂಪರಿಕವಾದದ್ದೆಂದು ಹಂಚಿಕೆ ಮಾಡಿಕೊಂಡಿದ್ದಾರೆ. ಈ ದೇವಾಲಯದ ಶಿಲ್ಪ ಮತ್ತು ವಿಗ್ರಹಗಳನ್ನು ಗಮನಿಸಿದಾಗ ಕಾಲಕಾಲಕ್ಕೆ ಬದಲಾವಣೆಗೊಂಡಿರುವುದು ತಿಳಿದುಬರುತ್ತದೆ. ಅಂದರೆ ಆಯಾ ಕಾಲದ ರಾಜರ ಆಳ್ವಿಕೆಗೆ ಸಿಲುಕಿಕೊಂಡಿರಬಹುದು. ಏಕೆಂದರೆ ಅಲ್ಲಿನ ಹಿರಿಯರು ಹೇಳುವಂತೆ "ಈ ದೇವಾಲಯದಲ್ಲಿ ಬುದ್ಧ–ಜೈನ–ಶೈವ ಈ ಮೂರು ಧರ್ಮಗಳು ಇಲ್ಲಿ ಆಳ್ವಿಕೆ ನಡೆಸಿರುವುದು ತಿಳಿದುಬರುತ್ತದೆ."[೪] ಕಾಲಾನುಕ್ರಮದಲ್ಲಿ ಈ ದೇವಸ್ಥಾನವನ್ನು ಏಕೀಕರಣ ಮಾಡಿಕೊಂಡಿರುವುದೆಂದು ಹೇಳುತ್ತಾರೆ.

ಈ ಗುಡಿಯಲ್ಲಿ ೧೫೬೫ರಲ್ಲಿ ತ್ರೈಲೋಕಮಲ್ಲನು ಬುದ್ಧನ ಮೂರ್ತಿಯನ್ನು ಇಟ್ಟು ಅದನ್ನು ಬುದ್ಧ ವಿಹಾರವನ್ನಾಗಿ ಮಾಡಿದ. ಆನಂತರ, ಕಲ್ಯಾಣದ ಚಾಲುಕ್ಯರಾದ ಜೈನ ಅರಸರು ತ್ರೈಲೋಕ ಮಲ್ಲನನ್ನು ಸೋಲಿಸಿ ಅಲ್ಲಿರುವ ಬುದ್ಧನ ಮೂರ್ತಿಗಳನ್ನೆಲ್ಲ ಹೊಡೆದು ತಮ್ಮ ಜೈನ ಮೂರ್ತಿಗಳನ್ನು ಇಟ್ಟರು. ಆದರೆ ಜೈನರ ಕಣ್ಣಿಗೆ ಸಿಗದೇ ಇರುವ ಒಂದು ಬುದ್ಧನ ಮೂರ್ತಿ ಇದೆ. ಅದು ಪದ್ಮಾಸನದಲ್ಲಿ ಕುಳಿತಿರುವಂತಹ ಮೂರ್ತಿಯಿದೆ. ಈ ಮೂರ್ತಿಯು ದೇವಾಲಯದ ಒಳಗಡೆ ಮತ್ತು ಹೊರಗಡೆ ಬರುವಾಗಲೂ ಕಾಣುವುದಿಲ್ಲ. ಅದು ಗರ್ಭಗುಡಿಯಲ್ಲಿ ಜ್ಯೋತಿರ್ಲಿಂಗದ ಪಕ್ಕದಲ್ಲಿದೆ. ಇದನ್ನು ಈಗಲೂ ನೋಡಬಹುದು. ಹೀಗೆ ಕಲ್ಯಾಣ ಚಾಲುಕ್ಯರ ಅರಸನಾದ ಬಿಟ್ಟಿದೇವನು ಕಲ್ಯಾಣದಿಂದ ಈ ಕಡೆ ಆನೆಯ ಮೇಲೆ ಮೆರವಣಿಗೆಯಲ್ಲಿ ಬಂದಾಗ ಒಂದು ಸುಂದರವಾದ ಕನ್ಯೆ(ಶಾಂಕುಂತಲೆ)ಯನ್ನು ನೋಡಿ ಮೋಹಿಸಿದ ಹಾಗೂ ಅವಳನ್ನು ವಿವಾಹ ಮಾಡಿಕೊಳ್ಳಲು ನಿರ್ಧರಿಸಿದ. ಆದರೆ ಆ ಕನ್ಯೆ ಶೈವ ಅರಸನ ಮಗಳಾಗಿರುವುದರಿಂದ ಅವಳು ಲಿಂಗವಂತವಳಾಗಿದ್ದಳು. ಆಕೆಯನ್ನು ವಿವಾಹಕ್ಕೆ ಒಪ್ಪಿಸಲು ಪ್ರಯತ್ನಿಸಿದರು. ಆಗ ಅವಳು ಒಪ್ಪದೇ ಒಂದು ಮಾತು ಹೇಳಿದಳು. ನೀನು ಜೈನಧರ್ಮದವನು, ನಾನು ಶೈವಧರ್ಮದವಳು. ಹಾಗಾಗಿ ವಿವಾಹ ನಡೆಯುವುದಿಲ್ಲ. ಒಂದು ವೇಳೆ ನಾನು ವಿವಾಹ ಮಾಡಿಕೊಳ್ಳಬೇಕೆಂದರೆ ನೀನು ಜೈನಧರ್ಮವನ್ನು ಬಿಟ್ಟು ಶೈವಧರ್ಮವನ್ನು ಸ್ವೀಕಾರ ಮಾಡಬೇಕು. ಆಗ ಮಾತ್ರ ನಾನು ವಿವಾಹ ಆಗಲು ಒಪ್ಪಿಕೊಳ್ಳುತ್ತೇನೆ ಎಂದು ಹೇಳುತ್ತಾಳಂತೆ. ಆಗ ಬಿಟ್ಟಿದೇವ ಜೈನಧರ್ಮವನ್ನು ಬಿಟ್ಟು ಶೈವಧರ್ಮವನ್ನು ಸ್ವೀಕರಿಸಿದನು ಎಂಬ ಸಂಗತಿಗಳನ್ನು ಹೇಳುತ್ತಾರೆ. ಆದ್ದರಿಂದ ಈ ಏಳುಗುಡಿಯಲ್ಲಿ ಈ ಮೂರು ಧರ್ಮಗಳ ಮೂರ್ತಿಗಳು ಸಿಗುತ್ತವೆ. ಹೀಗೆ ಅನೇಕ ವಿಚಾರಗಳು ಇದರ ಪೂರಕವಾಗಿ ಸಿಗುತ್ತವೆ.

ಅದೇ ರೀತಿ ಈ ಊರಿನ ಪಶ್ಚಿಮ ದಿಕ್ಕಿನ ಬಲಭಾಗಕ್ಕೆ ಸುಮಾರು ೩-೪ ಕಿ.ಮಿ. ದೂರದಲ್ಲಿ ತೂಗುಡ್ಡವಿದೆ. ಇದು ಮರುಳಮಂಕನು ತಪಸ್ಸು ಮಾಡಿದ ಸ್ಥಳವಾಗಿದೆ. ಕಲ್ಲುಬಂಡೆಗಳಿಂದ ಆವೃತ್ತವಾದ ಈ ಗುಡ್ಡದ ಮಧ್ಯಭಾಗದಲ್ಲಿ ಮಲ್ಲಿಕಾರ್ಜುನನ ದೇವಾಲಯವಿದೆ. ಇದರ ಎದುರಿಗೆ ರೇವಣಸಿದ್ಧನ ಮಠವಿದೆ. ಈ ಸ್ಥಳದಿಂದ ಸ್ವಲ್ಪ ಮುಂದೆ ಕೆಳಭಾಗದಲ್ಲಿ ಸಣ್ಣದಾದ ಗವಿ ಇದೆ. ಇದಕ್ಕೆ 'ರೇವಣಸಿದ್ಧನ ಗವಿ' ಎಂದು ಕರೆಯುತ್ತಾರೆ. ಯಾವಾಗಲು ಈ ಗವಿಯಲ್ಲಿ ಸ್ವಲ್ಪವಾದರೂ ನೀರು ಇದ್ದೇ ಇರುತ್ತವೆ. ಗವಿಯ ಒಳಗಡೆ ಚಿಕ್ಕ ಚಿಕ್ಕ ಮೂರ್ತಿಗಳು ಕಂಡುಬರುತ್ತವೆ. ಅವುಗಳನ್ನು ರೇವಣಸಿದ್ದನ ಮೂರ್ತಿಗಳೆಂದು ಊಹಿಸಲಾಗಿದೆ. ಈ ಮಠದ ಬಲಗಡೆಗೆ ಮರುಳಮಂಕ ತಲೆಕೆಳಗೆ ಮಾಡಿ ತಪಸ್ಸು ಮಾಡಿದ ಸ್ಥಳ ಇಲ್ಲೇ ಎನ್ನುವ ರೀತಿಯಲ್ಲಿ ಒಂದು ದೊಡ್ಡ ಕಲ್ಲು ಇದೆ. ಅದಕ್ಕೆ ಎಣ್ಣೆ ಮತ್ತು ಕಪ್ಪು ಮೇಣವನ್ನು ಮೆತ್ತಲಾಗಿದೆ ಅಥವಾ ಹಚ್ಚಲಾಗಿದೆ. ಈ ಗುಡ್ಡದ ಹಿಂದೆ ಅಂದರೆ ಮರುಳಸಿದ್ಧನು ತಪಸ್ಸ ಮಾಡಿದನೆನ್ನುವ ಸ್ಥಳದ ಹಿಂಭಾಗದ ಬಂಡೆಯ ಮೇಲೆ ಚಿಕ್ಕ ಗುಡಿಯಿದೆ. ಇದಕ್ಕೆ ಹಸುವಿನ ಗುಂಡಿ ಎಂದು ಹೆಸರು. ಗುಂಡಿಯ ಮೇಲ್ಭಾಗದಲ್ಲಿ ಕೆಲವು ಹಸುವಿನ ಪಾದಗಳ ಆಕಾರದ ಚಿತ್ರಗಳಿವೆ. ಗುಂಡಿಯ ಮೇಲ್ಭಾಗದಲ್ಲಿ ಕೆಂಪು ಬಣ್ಣದ ಬಂಡೆ ಇದೆ. ಇಲ್ಲಿ ಎತ್ತುಗಳು ನೀರಿಗಾಗಿ ಬಂದು ಕಾದಾಡಿದಾಗ ರಕ್ತಸುರಿಯಿತು. ಆ ರಕ್ತವೇ ಇದು ಎಂದು ಹೇಳುವ ಕಥನಗಳನ್ನು ಹೇಳುತ್ತಾರೆ(ಮಲ್ಲಿಕಾರ್ಜುನ ಒಡೆಯರು ಸರೂರು). ವಿಶೇಷವಾಗಿ ಈ ತೂಗುಡ್ಡದಲ್ಲಿ ಧಾರ್ಮಿಕ ಆಚರಣೆಗಳನ್ನು ಮಾಡುವ ಸಂದರ್ಭದಲ್ಲಿ ಏಳುಕಂಟಿ ಗಿಡವನ್ನು ಏರಿ ಅದರ ಮೇಲೆ ನಿಂತುಕೊಂಡು ಹೇಳಿಕೆಯನ್ನು ಹೇಳುವ ಪದ್ಧತಿ ಇದೆ. ಈ ಏಳುಕಂಟಿ ಗಿಡವನ್ನು ಪೂಜೆ ಮಾಡುತ್ತಾರೆ. ಏಕೆಂದರೆ ಏಳುಕಂಟಿ ಎಂಬುದು ಏಳು ತರಹದ ಗಿಡಗಳಿಂದ ಕೂಡಿದ ವೃಕ್ಷ ಸಮೂಹವಾಗಿದೆ. ಅದೇ ರೀತಿ ಈ ಊರಿನ ಮಧ್ಯದಲ್ಲಿ ರೇವಣಸಿದ್ಧೇಶ್ವರ ದೇವಾಲಯವಿದೆ. ಇದು ಗರ್ಭಗುಡಿ, ತೆರೆದ ನವರಂಗವನ್ನು ಒಳಗೊಂಡಿದೆ. ಈ ಕಂಬಗಳು ಗರ್ಭಗುಡಿಯಲ್ಲಿ ರೇವಣಸಿದ್ಧೇಶ್ವರನ ಮೂರ್ತಿ ಮತ್ತು ಬೆಳ್ಳಿಯ ಮುಖ ಇದೆ. ಇದರ ನವರಂಗವು ೧೮ ಕಂಬಗಳನ್ನು ಒಳಗೊಂಡಿದೆ. ಪುಷ್ಪ, ಬಳ್ಳಿಯ ಚಿತ್ರಗಳನ್ನು ಒಳಗೊಂಡಿವೆ. ಗರ್ಭಗುಡಿಯ ಎದುರಿಗೆ ನಂದಿಯ ವಿಗ್ರಹವನ್ನು ಕೂರಿಸಲಾಗಿದೆ. ಅದೇ ರೀತಿ ದೇವಾಲಯದ ಹೊರಗಡೆ ಎಡಬಲಕ್ಕೆ ದ್ವಾರಪಾಲಕರನ್ನು ನಿಲ್ಲಿಸಲಾಗಿದೆ. ಇದಕ್ಕೂ ಮುಂಚೆ ಈ ಜಾಗದಲ್ಲಿ ಹಳೆಯದಾಗಿ ಚಿಕ್ಕದಾದ ರೇವಣಸಿದ್ಧನ ಗುಡಿಯಿದ್ದು, ಅದನ್ನು ತೆಗೆದುಹಾಕಿ ಹೊಸದಾಗಿ ಬೃಹದಾಕಾರವಾದ ರೇವಣಸಿದ್ಧನ ದೇವಸ್ಥಾನವನ್ನು ಕಟ್ಟಿಸಲಾಗಿದೆ. ಇದು ಹೊಸದಾಗಿ ನಿರ್ಮಾಣವಾಗಿರುವುದರಿಂದ ಯಾವುದೇ ಪ್ರಾಚೀನ ಕುರುಹುಗಳು ಈ ದೇವಾಲಯದಲ್ಲಿ ಸಿಗುವುದಿಲ್ಲ. ಇಲ್ಲಿಯೂ ಪ್ರತಿದಿನ ಎರಡು ಬಾರಿ ಪೂಜೆ ನಡೆಯುತ್ತದೆ.

ಈ ಎಲ್ಲಾ ದೇವಾಲಯಗಳನ್ನು ಗಮನಿಸಿದಾಗ ಈ ಊರು ಕ್ರಿಶ. ೧೨-೧೩ನೆಯ ಶತಮಾನದಲ್ಲಿ ಬಹುಶಃ ಸಿದ್ಧರಾಮನ ಅನುಯಾಯಿಗಳ ಒಂದು ಕೇಂದ್ರವಾಗಿರಬೇಕೆಂದೂ ಮತ್ತು ಮುನಿ ಭಕ್ತ

ವೃಂದದವರ ಬೀಡಾಗಿತ್ತೆಂದು ಹೇಳಬಹುದು. ಇದನ್ನು ಸರೂರಿನ ಶಿಲ್ಪಗಳನ್ನು ಶಾಸನಗಳ ಆಧಾರದಿಂದ ಗುರುತಿಸಿ ಹೇಳಬಹುದಾಗಿದೆ. ಆದರೆ ಒಡೆಯರ ಗುರುಪರಂಪರೆಯಲ್ಲಿ ರೇವಣಸಿದ್ಧನ ಅನುಯಾಯಿಗಳು ಹೆಚ್ಚಾಗಿರುವುದರಿಂದ ಈತನ ಪರಂಪರೆಯು ತುಂಬಾ ವಿಸ್ತಾರವಾಗಿ ಹರಡಿಕೊಂಡಿದೆ. ಜೊತೆಗೆ ಪ್ರತಿಯೊಬ್ಬರೂ ಸರೂರೇ ನಮಗೆ ಮೂಲ ನೆಲೆ ಎಂದು ಹೇಳಿಕೊಳ್ಳುತ್ತಾರೆ. ರೇವಣಸಿದ್ಧ ಕಾಲಾನುಕ್ರಮದಲ್ಲಿ ದೈವ ಪುರುಷನಾಗಿ ಪೂಜೆಗೊಂಡಿರುವುದನ್ನು ಕಾಣಬಹುದು. ಹೀಗಾಗಿ ಪ್ರತಿಯೊಬ್ಬರಿಗೂ ರೇವಣಸಿದ್ಧರು ಗುರುವಾಗಿರುವುದರಿಂದ ಈತನ ಅನುಯಾಯಿಗಳು ಎಲ್ಲೆಡೆ ನೆಲೆಸಿದ್ದಾರೆ. ಈ ಹಿನ್ನೆಲೆಯಲ್ಲಿ ಇತರೆ ಭಾಗಗಳಲ್ಲಿ ಕಂಡುಬರುವ ರೇವಣಸಿದ್ಧನ ದೇವಾಲಯಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಸಿಂದ್ವಾಳ ರೇವಣಸಿದ್ಧನ ದೇವಾಲಯ

ಸಿಂದ್ವಾಳವು ಬಳ್ಳಾರಿ ಜಿಲ್ಲೆಯ ಗಡಿಭಾಗದಲ್ಲಿ ಬರುವಂತಹ ಗ್ರಾಮವಾಗಿದೆ. ಇದು ಸ್ವಾತಂತ್ರ್ಯಪೂರ್ವದಲ್ಲಿ ಸಿಂಧ್ಯರ ಆಳ್ವಿಕೆಗೆ ಒಳಪಟ್ಟಿದ್ದರಿಂದ 'ಸಿಂಧು ಪೊಳಂ' ಎಂದು ಕರೆಯಲಾಗುತ್ತಿತ್ತು. ಆದರೆ ನಂತರದ ದಿನಗಳಲ್ಲಿ ಇದನ್ನು ಸಿಂದ್ವಾಳ ಎಂದು ಕರೆಯುತ್ತಾರೆ. ಈ ಊರಿನ ಹೊರಗಿನ ಬೆಟ್ಟದಲ್ಲಿ ಪುರಾತನ ಕಾಲದಲ್ಲಿ ಕಟ್ಟಿಸಿರುವ ರೇವಣಸಿದ್ಧನ ದೇವಾಲಯವಿದೆ. ಇದು ಎತ್ತರವಾದ ಬೆಟ್ಟದ ಮೇಲಿರುವುದರಿಂದ, ಸುಮಾರು ಐದು ವರ್ಷಗಳ ಹಿಂದೆ ರೇವಣಸಿದ್ಧೇಶ್ವರ ದೇವಾಲಯದ ಮೇಲಿರುವ ಕಳಸವನ್ನು ಕಳ್ಳರು ಕದ್ದುಕೊಂಡು ಹೋಗಿದ್ದರು. ಆದರೆ ಈಗ ಅದೇ ಜಾಗದಲ್ಲಿ ಹೊಸದಾಗಿ ದೇವಾಲಯವನ್ನು ಕಟ್ಟಲಾಗಿದೆ. ಈ ದೇವಾಲಯದ ಗರ್ಭಗೃಹವು ಉತ್ತರಾಭಿಮುಖಿವಾಗಿದೆ. ಈ ಗರ್ಭಗೃಹದಲ್ಲಿ ಶಿವಲಿಂಗ ಮತ್ತು ರೇವಣಸಿದ್ಧನ ಮೂರ್ತಿ ಇದೆ. ಇದರ ಎದುರಿಗೆ ನಂದಿಯಿದೆ. ಪುರಾತನ ದೇವಾಲಯವನ್ನು ಕೆಡವಿದ ಕಂಬಗಳ ಮೇಲಿನ ಶಿಲ್ಪಗಳನ್ನು ಗಮನಿಸಿದರೆ, ಇದು ವಿಜಯನಗರ ಕಾಲದಲ್ಲಿ ಕಟ್ಟಿದ ದೇವಾಲಯವೆಂದು ಹೇಳಬಹುದು. ಈ "ದೇವಾಲಯಕ್ಕೂ ಹಂಪಿಗೂ ನೇರ ಸಂಬಂಧವಿದೆಯೆಂದು ಬೆಟ್ಟದ ಮೇಲಿರುವ ಪುರಾತನ ಅವಶೇಷ ಮತ್ತು ಹೆಜ್ಜೆಯ ಗುರುತುಗಳನ್ನು ತೋರಿಸಿ ಹೇಳುತ್ತಾರೆ."[೨] ಇಲ್ಲಿ ಪ್ರತಿ ಗುರುವಾರ, ಸೋಮವಾರದಂದು ಪೂಜೆ ನಡೆಯುತ್ತದೆ. ಹುಣ್ಣಿಮೆ, ಅಮವಾಸ್ಯೆಗೆ ವಿಶೇಷ ಪೂಜೆ ನಡೆಯುತ್ತದೆ.

ಗೋಸ್ಬಾಳ ರೇವಣಸಿದ್ಧನ ದೇವಾಲಯ

ಇದು ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲೂಕಿನಲ್ಲಿ ಕಂಡುಬರುತ್ತದೆ. ಇಲ್ಲಿರುವ ರೇವಣಸಿದ್ಧನ ದೇವಾಲಯವು ಸುಮಾರು ಒಂದು ಶತಮಾನವನ್ನು ಮೀರಿದ ಪ್ರಾಚೀನ ದೇವಾಲಯವಾಗಿದೆ. ಇದು ಪೂರ್ವಾಭಿಮುಖವಾಗಿದ್ದು, ಗರ್ಭಗುಡಿಯಲ್ಲಿ ಎತ್ತರವಾದ ಗದ್ದುಗೆಯಿದೆ. ಗದ್ದುಗೆಯ ಮೇಲೆ ಶಿವಲಿಂಗ ಮತ್ತು ಶಿವನ ಬೆಳ್ಳಿಯ ಪ್ರತಿಮೆಯಿದೆ. ಅದರ ಗರ್ಭಗುಡಿಯ ಮೇಲೆ ಕುಂಭ

ಮಾದರಿಯ ಶಿಖರವಿದೆ. ಇದು ನವರಂಗ ಮತ್ತು ತೆರೆದ ಸಭಾ ಮಂಟಪವನ್ನು ಒಳಗೊಂಡಿದೆ. ನವರಂಗವು ವಿಶಾಲವಾಗಿದ್ದು ಒಂದೆಡೆ ಗದ್ದುಗೆಯ ಮೇಲೆ ಶಿವ–ಪಾರ್ವತಿಯರ ಚಿತ್ರಪಟವಿದೆ. ಅದರ ಸುತ್ತಲೂ ಸಾಲುದೀಪಗಳನ್ನು ಜೋಡಿಸಲಾಗಿದೆ. ಮತ್ತೊಂದೆಡೆ ತೂಗುಮಂಚದಲ್ಲಿ ಶಿವಪಾರ್ವತಿಯರು ಒಟ್ಟಾಗಿರುವ ಬೆಳ್ಳಿ ಪ್ರತಿಮೆಯಿದೆ. ಅದರ ಪಕ್ಕದಲ್ಲಿ ವಿಭೂತಿ ಕಟ್ಟುಗಳನ್ನು ಇಡಲಾಗಿದೆ.

ಈ ದೇವಾಲಯದ ಸಭಾಮಂಟಪವು ನಾಲ್ಕು ಕಲ್ಲಿನ ಕಂಬಗಳಿಂದ ಕೂಡಿದೆ. ಅವು ಚೌಕ, ಅಷ್ಟಮುಖ, ದಿಂಡು, ಚೌಕ ಬೋದಿಗೆಯ ಆಕಾರದಲ್ಲಿವೆ. ದೇವಾಲಯದ ಎದುರುಗಡೆ ಗಣಪತಿಯ ಮತ್ತು ನವಗ್ರಹಗಳ ಗುಡಿಯಿದೆ. ಇದರ ಪಕ್ಕದಲ್ಲಿಯೇ ಮಠದ ಮೊದಲ ಗುರುವಾಗಿದ್ದ ಸಿದ್ಧಲಿಂಗಯ್ಯ ತಾತನ ಸಮಾಧಿಯಿದೆ. ಇಲ್ಲಿಯ ರೇವಣಸಿದ್ಧನಿಗೆ ಪ್ರತಿದಿನ ಎರಡು ಸಾರಿ ಪೂಜೆ ಜರುಗುತ್ತದೆ. ಜೊತೆಗೆ ಸೋಮವಾರ ವಾರದ ಪೂಜೆ, ಹುಣ್ಣಿಮೆ ಅಮವಾಸ್ಯೆಗೆ ವಿಶೇಷ ಪೂಜೆಯನ್ನು ಮಾಡುತ್ತಾರೆ. ಈ "ದೇವಾಲಯಕ್ಕೆ ಗೋಸ್ಬಾಳದ ಸುತ್ತಮುತ್ತಲಿನ ಊರುಗಳ ಜನ ಜಾತ್ರೆಯ ಸಂದರ್ಭದಲ್ಲಿ ಬಂದು ಸೇರುತ್ತಾರೆ. ಗೋಸ್ಬಾಳಕ್ಕೂ ಮತ್ತು ಆಂಧ್ರದ ಚಿಂತಕುಂಟಕ್ಕೂ ನಿಕಟವಾದ ಸಂಬಂಧವಿದೆ ಎಂದು ಹೇಳುತ್ತಾರೆ."[೩] ಹೀಗೆ ಅನೇಕ ಸಂಗತಿಗಳನ್ನು ಈ ದೇವಾಲಯವು ಒಳಗೊಂಡಿದೆ.

ವಿಠಲಾಪುರ ರೇವಣಸಿದ್ಧೇಶ್ವರ ದೇವಾಲಯ

ವಿಠಲಾಪುರವು ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನಲ್ಲಿ ಕಂಡುಬರುತ್ತದೆ. ಈ ಊರಲ್ಲಿ ರೇವಣಸಿದ್ಧನ ಹಳೆಯ ದೇವಾಲಯವಿದ್ದು, ಅದನ್ನು ಕೆಡವಿ ಹೊಸದಾಗಿ ಗುಡಿಯನ್ನು ಕಟ್ಟಿಸಿದ್ದಾರೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗುಡಿ ಮತ್ತು ತೆರೆದ ಸಭಾ ಮಂಟಪವನ್ನು ಒಳಗೊಂಡಿದೆ. ದೇವಾಲಯದ ಗರ್ಭಗೃಹದಲ್ಲಿ ಎತ್ತರವಾದ ಗದ್ದುಗೆಯಿದೆ. ಅದರ ಮೇಲೆ ಶಿವಲಿಂಗ ಮತ್ತು ರೇವಣಸಿದ್ಧನ ಮೂರ್ತಿಯನ್ನು ಇಟ್ಟು ಆರಾಧಿಸಲಾಗುತ್ತದೆ. ಇದರ ತೆರೆದ ಸಭಾಮಂಟಪವು ಚೌಕಾಕಾರದ ನಾಲ್ಕು ಕಂಬಗಳನ್ನು ಒಳಗೊಂಡಿದೆ. ಈ ದೇವಾಲಯದ ಪಕ್ಕದಲ್ಲಿ ಹಿಂದಿನ ಒಡೆಯರ ಮೂರು ಸಮಾಧಿಗಳಿವೆ. ಇಲ್ಲಿ ಪ್ರತಿದಿನ ಎರಡು ಸಲ ಪೂಜೆ, ಸೋಮವಾರ ವಾರದ ಪೂಜೆ, ಪ್ರತಿ ಹುಣ್ಣಿಮೆ, ಅಮವಾಸ್ಯೆಗೆ, ಶಿವರಾತ್ರಿ ಮತ್ತು ವಿಜಯದಶಮಿಗಳಂಥ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಮಾಡುತ್ತಾರೆ. ರಾಮನವಮಿ ದಿನದಂದು ರೇವಣಸಿದ್ಧನ ಪ್ರತಿಮೆಯನ್ನು ತೇರಿನ ಮೇಲೆ ಇಟ್ಟುಕೊಂಡು ಆ ಊರಿನ ಬಸವಣ್ಣನ ಪಾದಗಟ್ಟೆಯವರೆಗೆ ತೇರನ್ನು ಎಳೆಯಲಾಗುತ್ತದೆ. ಅಲ್ಲಿ ಪೂಜೆ ಸಲ್ಲಿಸಿದ ನಂತರ ತೇರು ರೇವಣಸಿದ್ಧೇಶ್ವರ ಗುಡಿಗೆ ಹಿಂತಿರುಗಿ ಬರುತ್ತದೆ. ಇದು ಈ ಊರಿನ ರೇವಣಸಿದ್ಧನ ವಿಶೇಷತೆಯಾಗಿದೆ. ಈ ದೇವಾಲಯವು ವಿಜಯನಗರದ ನಂತರ ಕಾಲಾವಧಿಯಲ್ಲಿ ನಿರ್ಮಿಸಲಾಗಿದೆ. ಏಕೆಂದರೆ ಹಳೆಯ ಗುಡಿಯ ಯಾವುದೆ ಅವಶೇಷಗಳು ಸಿಗುವುದಿಲ್ಲ. ಆದ್ದರಿಂದ ಇದು ಇತ್ತೀಚಿನದ್ದಾಗಿದೆ ಎಂದು ಗುರುತಿಸಬಹುದಾಗಿದೆ.

ದೊಡ್ಡೇರಿಯ ರೇವಣಸಿದ್ಧೇಶ್ವರ ದೇವಾಲಯ

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನಲ್ಲಿ ದೊಡ್ಡೇರಿ ಬರುತ್ತದೆ. ಇದು ರೇವಣಸಿದ್ಧನ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿರುವ ಚಾರಿತ್ರಿಕ ಗ್ರಾಮವಾಗಿದೆ. ಈ ಗ್ರಾಮವು ಚಿತ್ರದುರ್ಗ ಪಾಳೆಗಾರರ ಕಾಲದಿಂದಲೂ ಹೆಸರುವಾಸಿಯಾಗಿದೆ. ಊರ ಮಧ್ಯಭಾಗದಲ್ಲಿ ಮೂರು ಶತಮಾನಕ್ಕಿಂತಲೂ ಪ್ರಾಚೀನ ಇತಿಹಾಸವನ್ನು ಹೊಂದಿರುವ ರೇವಣಸಿದ್ಧನ ದೇವಾಲಯ(ಮಠ)ವಿದೆ. ಪಶ್ಚಿಮಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ಸಭಾಮಂಟಪಗಳನ್ನು ಒಳಗೊಂಡಿದೆ. ಗರ್ಭಗೃಹದ ಎತ್ತರದ ಗದ್ದುಗೆಯ ಮೇಲೆ ರೇವಣಸಿದ್ಧನ ಮುಖಚಿತ್ರದ ಬೆಳ್ಳಿಯ ಮುಖವಾಡವನ್ನು ಇಟ್ಟು ಪೂಜೆ ಮಾಡುತ್ತಿದ್ದಾರೆ.

ಈ ಮುಖ ಚಿತ್ರದಲ್ಲಿ ಮೀಸೆ, ರುಮಾಲು ಹಾಗೂ ಹಣೆಯಲ್ಲಿ ವಿಭೂತಿ ಭಸ್ಮಗಳಿವೆ. ಕೆಳಭಾಗದಲ್ಲಿ ಪಾದುಕೆಗಳಿವೆ. ಅದರ ಅಕ್ಕ ಪಕ್ಕದಲ್ಲಿ ನಂದಿ, ಶಿವಲಿಂಗ ಇನ್ನೂ ಬೇರೆ ಬೇರೆ ಚಿಕ್ಕ ಪುಟ್ಟ ಮೂರ್ತಿಗಳಿವೆ. ಗರ್ಭಗೃಹದ ಬಾಗಿಲುವಾಡವನ್ನು ಮರದಿಂದ ಮಾಡಿದ್ದು, ಇದನ್ನು ಹೂ ಬಳ್ಳಿಗಳಿಂದ ಸುಂದರವಾಗಿ ಅಲಂಕಾರಿಕವಾಗಿ ಚಿತ್ರಿಸಲಾಗಿದೆ. ಗರ್ಭಗೃಹದ ಮೇಲೆ ಪಿರಮಿಡ್ಡಿನಾಕಾರದ ಗೋಪುರವಿದ್ದು ಕಳಸವನ್ನು ಇಡಲಾಗಿದೆ. ನವರಂಗವು ಎರಡು ಕಲ್ಲಿನ ಕಂಬಗಳನ್ನು ಒಳಗೊಂಡಿದೆ. ಅದರ ಎಡಭಾಗದ ಗೋಡೆಯ ಮೇಲೆ ನಾಗರಶಿಲ್ಪಗಳನ್ನು ನೋಡಬಹುದು. ಮೇಲ್ಭಾಗದಲ್ಲಿ ಹಿರಿಯ ಒಡೆಯರ ಪೋಟೋಗಳಿವೆ. ಈ ದೇವಾಲಯದ ಸಭಾಮಂಟಪವು ಎಂಟು ಕಲ್ಲಿನ ಕಂಬಗಳನ್ನು ಒಳಗೊಂಡಿದೆ. ಈ ದೇವಾಲಯದ ಧಾರ್ಮಿಕ ಆಚರಣೆಗಳು ಒಡೆಯರ ಸಮ್ಮುಖದಲ್ಲಿ ನಡೆಯುತ್ತವೆ. ಇತರ ಶಾಖಾ ದೇವಾಲಯ ಪ್ರಾರಂಭ, ದೇವರಿಗೆ ಪಟ್ಟ ಕಟ್ಟುವುದು, ಹೊಳೆಪೂಜೆ ಇನ್ನೂ ಮುಂತಾದ ಧಾರ್ಮಿಕ ಆಚರಣೆಗಳು ಇಲ್ಲಿ ನಡೆಯುತ್ತವೆ. ಈ ದೇವಾಲಯದಲ್ಲಿ ವಿಶೇಷವಾಗಿ ಪ್ರತಿದಿನ ಎರಡು ಸಲ ಪೂಜೆ ನಡೆಯುತ್ತದೆ. ದಸರದಲ್ಲಿ ಬನ್ನಿಮುಡಿಯುವುದು ಹಾಗೂ ಮಹಾನವಮಿ ಹಬ್ಬದಂದು ಪಲ್ಲಕ್ಕಿ ಉತ್ಸವ ನಡೆಯುತ್ತದೆ.

ಹರ್ತಿಕೋಟೆಯ ರೇವಣಸಿದ್ಧೇಶ್ವರ ದೇವಾಲಯ

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನಲ್ಲಿ ಕಂಡುಬರುವ ಹರ್ತಿಕೋಟೆಯು ಚಾರಿತ್ರಿಕ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಪ್ರಾಚೀನವಾದ ರೇವಣಸಿದ್ಧನ ದೇವಾಲಯವಿದೆ. ಇದು ಹರತಿನಾಯಕ ಅರಸರ ಕಾಲದಿಂದಲೂ ರೇವಣಸಿದ್ಧನ ಪರಂಪರೆ ಹೊಂದಿರುವುದಾಗಿ ತಿಳಿದುಬರುತ್ತದೆ. ಈ ದೇವಾಲಯದ ಜೊತೆಗೆ ಈ ಊರಲ್ಲಿ ವೀರಭದ್ರ, ಇಟ್ಟಿಗೆ ಕಲ್ಲೇಶ್ವರ, ಕಾಲಭೈರವ, ಆಂಜನೇಯ ದೇವಾಲಯಗಳು ಇರುವುದನ್ನು ನೋಡಬಹುದು. ಈ ದೇವಾಲಯವು ದಕ್ಷಿಣಾಭಿಮುಖವಾಗಿದ್ದು ಗರ್ಭಗೃಹ, ನವರಂಗ ಮತ್ತು ಸಭಾ ಮಂಟಪವನ್ನು ಹೊಂದಿದೆ. ಈ ದೇವಾಲಯದ ಗರ್ಭಗೃಹದಲ್ಲಿ

ಕಪ್ಪುಶಿಲೆಯ ಲಿಂಗೋದ್ಭವ ರೇವಣಸಿದ್ಧನ ಮೂರ್ತಿಯನ್ನು ಇಡಲಾಗಿದೆ. ಹಾಗೆಯೇ ಗದ್ದುಗೆಯ ಮೇಲಿರುವ ರೇವಣಸಿದ್ಧನ ಬೆಳ್ಳಿ ಪ್ರತಿಮೆಯನ್ನು ಛತ್ರಿ–ಚಾಮರಗಳಿಂದ ಅಲಂಕರಿಸಲಾಗಿದೆ. ಗರ್ಭಗೃಹದ ಮೇಲೆ ಪಿರಮಿಡ್ಡಿನ ಆಕಾರದ ರೀತಿಯಲ್ಲಿ ಶಿಖರವಿದ್ದು ಅದರ ಮೇಲ್ಭಾಗದಲ್ಲಿ ಲೋಹದ ಕಳಸವನ್ನು ಇಡಲಾಗಿದೆ. ಇದರ ನವರಂಗವು ಮರದ ನಾಲ್ಕು ಚೌಕಾಕಾರದ ಕಂಬಗಳನ್ನು ಒಳಗೊಂಡಿದೆ. ಅದೇ ರೀತಿ ತೆರೆದ ಸಭಾ ಮಂಟಪವನ್ನು ಹೊಂದಿದೆ. "ಬಿ.ಜಿ. ಬಿರಾದಾರ ಅವರು ಈ ದೇವಾಲಯವನ್ನು ೧೯೩೨ರಲ್ಲಿ ಕಟ್ಟಿಸಿದೆ ಎಂದು ಹೇಳಿದ್ದಾರೆ."[೪] ಈ ದೇವಾಲಯದಲ್ಲಿ ಪ್ರತಿದಿನ ಎರಡು ಬಾರಿ ಪೂಜೆ ನಡೆಯುತ್ತದೆ. ಸೋಮವಾರ ವಾರದ ಪೂಜೆ ಇರುತ್ತದೆ. ಹುಣ್ಣಿಮೆ–ಅಮವಾಸ್ಯೆಗೆ ವಿಶೇಷ ಪೂಜೆಗಳು ನಡೆಯುತ್ತವೆ. ದಸರದಲ್ಲಿ ರೇವಣಸಿದ್ಧನ ಪಲ್ಲಕ್ಕಿ ಉತ್ಸವವು ಮೆರವಣಿಗೆಯ ಮೂಲಕ ಬನ್ನಿ ಮುಡಿಯುವುದು. ಈ ಎಲ್ಲಾ ಧಾರ್ಮಿಕ ಆಚರಣೆಗಳು ಕುರುಬರ ಗುರುಒಡೆಯರ ಮುಖಂಡತ್ವದಲ್ಲಿ ನಡೆಯುತ್ತವೆ. ಆದರೆ ಇತ್ತೀಚೆಗೆ ಈ ದೇವಾಲಯ ಕೆಡವಿ ಹೊಸದಾಗಿ ಕಟ್ಟಿಸಲು ಆರಂಭಿಸಿದ್ದಾರೆ.

೭. ಹುಲ್ಲೂರಿನ ಸಿದ್ಧಪ್ಪ(ರೇವಣಸಿದ್ಧ) ದೇವಾಲಯ

ಹುಲ್ಲೂರು ಚಿತ್ರದುರ್ಗ ತಾಲೂಕಿನಲ್ಲಿ ಕಂಡುಬರುವ ಪ್ರಾಚೀನ ಗ್ರಾಮಗಳಲ್ಲಿ ಒಂದಾಗಿದೆ. ಈ ಊರಲ್ಲಿ ಮಲ್ಲೇಶ್ವರ, ಗಣೇಶ, ವೀರಭದ್ರ, ಕಾಳಮ್ಮ, ಆಂಜನೇಯ ದೇವಾಲಯಗಳಿವೆ. ಇದರ ಜೊತೆಗೆ ಕುರುಬರ ಗುರುಒಡೆಯರಿಗೆ ಸಂಬಂಧಿಸಿದ ಸಿದ್ಧಪ್ಪ(ರೇವಣಸಿದ್ಧ) ದೇವಾಲಯ ಮತ್ತು ಮರುಳಸಿದ್ಧೇಶ್ವರ ದೇವಾಲಯಗಳಿವೆ. ಆದರೆ ಚಿತ್ರದುರ್ಗದ ಪಾಳೆಗಾರರ ಕಾಲದಲ್ಲಿ ನಿರ್ಮಾಣವಾದ ಸಿದ್ಧಪ್ಪನ ದೇವಾಲಯವನ್ನು ಸಿದ್ಧಲಿಂಗೇಶ್ವರ ಎಂತಲೂ ಕರೆಯುತ್ತಾರೆ. ಇದನ್ನು "ಕ್ರಿ.ಶ. ೧೬೬೯ರ ಶಿಲಾಶಾಸನದಲ್ಲಿ 'ಸಿದ್ಧದೇವರು' ಎಂದು ಕರೆಯಲಾಗಿದೆ."[೫]

ಈ ದೇವಾಲಯವು ವಿಶಾಲವಾಗಿದ್ದು ಅದರ ಗೋಡೆ, ವಿವಿಧ ಮಂಟಪಗಳು, ಶಿಲ್ಪಗಳು ಶಿಥಿಲಾವಸ್ಥೆಯಲ್ಲಿವೆ. ಇದು ಗರ್ಭಗೃಹ, ಅಂತರಾಳ, ಅರ್ಧಮಂಟಪ, ನವರಂಗ ಮತ್ತು ತೆರೆದ ಸಭಾಮಂಟಪಗಳನ್ನು ಹೊಂದಿದೆ. ಈ ರೇವಣಸಿದ್ಧನ ದೇವಾಲಯದ ಮುಂದೆ ಎರಡು ದೀಪಸ್ತಂಭಗಳಿವೆ. ಇವುಗಳ ಮುಂಭಾಗದಲ್ಲಿ ಸುಮಾರು ಇಪ್ಪತ್ತೈದು ಅಡಿಗಳಷ್ಟು ಎತ್ತರದ ಉಯ್ಯಾಲೆ ಕಂಬವನ್ನು ಕಾಣಬಹುದು. ದೇವಾಲಯದ ಎಡಬದಿಯಲ್ಲಿ ಚಿಕ್ಕ ಮಂಟಪವಿದ್ದು, ಒಂದು ಬಾವಿಯಿದೆ. ಇದರ ಮುಂದೆ ಐದುವರೆ ಅಡಿಗಳಷ್ಟು ಎತ್ತರವಾದ ಏಳು ಹೆಡೆಯ ಸರ್ಪಗಳನ್ನು ಕಲ್ಲಿನ ಮೇಲೆ ಕೆತ್ತಿ ನಿಲ್ಲಿಸಲಾಗಿದೆ. ಈ ಸರ್ಪಗಳ ಪಕ್ಕದಲ್ಲಿ ಯತಿದಂಪತಿ ಹಾಗೂ ವಾದ್ಯಗಾರರ ಶಿಲ್ಪಗಳಿವೆ. ದೇವಾಲಯದ ಗರ್ಭಗುಡಿಯಲ್ಲಿ ಸಿದ್ಧಪ್ಪನ ಮೂರ್ತಿಶಿಲ್ಪವಿದೆ. ಇದರ ಎಡಕ್ಕೆ ದಕ್ಷಿಣಾಭಿಮುಖವಾಗಿ ಗೌರಮ್ಮನ ಶಿಲ್ಪವನ್ನು ನೋಡಬಹುದು. ಸಿದ್ಧಪ್ಪನು ಪದ್ಮಾಸನದಲ್ಲಿ ಕುಳಿತಿದ್ದು,

ನಾಲ್ಕು ಕೈಗಳನ್ನು ಹೊಂದಿದ್ದಾನೆ. ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ದಂಡವಿದೆ. ಕೆಳಗಿನ ಬಲಗೈಯಲ್ಲಿ ಅಭಯ ಮುದ್ರೆ ಮತ್ತು ಜಪಮಾಲೆಯಿದ್ದು, ಎಡಗೈಯಲ್ಲಿ ಸ್ಥಾವರ ಲಿಂಗವನ್ನು ಹಿಡಿದಿದ್ದಾನೆ. ಕೋರೆಮೀಸೆ, ಸ್ಥಾವರಲಿಂಗಗಳನ್ನು ಹೊಂದಿರುವ ಕಿರೀಟವನ್ನು ಧರಿಸಿದ್ದಾನೆ. ದೇವಾಲಯದ ಗರ್ಭಗೃಹದ ಮುಂದೆ ಅಂತರಾಳದಲ್ಲಿ ಮುಖ್ಯ ಶಿಲ್ಪಕ್ಕೆ ಎದುರಾಗಿ ಸಿದ್ಧಪ್ಪನ ವಾಹನವಾದ ನಂದಿಯ ಶಿಲ್ಪವಿದೆ. ಅಂತರಾಳದ ಎಡಬಲಗಳಲ್ಲಿ ಶಿವನ ಮತ್ತೊಂದು ರೂಪವಾದ ಎರಡು ಶಿಲ್ಪಗಳಿವೆ. ಅಂತರಾಳದ ಮುಂದೆ ಎರಡು ಕುಂಬಗಳುಳ್ಳ ಅರ್ಧ ಮಂಟಪವಿದೆ. ಕಂಬಗಳು ಚಚ್ಚೌಕ ಹಾಗೂ ಬಹುಮುಖಗಳನ್ನು ಹೊಂದಿವೆ. ಈ ಮಂಟಪದ ಎಡಭಾಗದಲ್ಲಿ ನಾಗಶೃತಿ ಶಿಲ್ಪಗಳಿವೆ. ದೇವಾಲಯದ ನವರಂಗವು ನಾಲ್ಕು ಚಚೌಕಾಕಾರದ ಕಂಬಗಳನ್ನು ಹೊಂದಿದೆ. ಈ ಕಂಬಗಳ ಮೇಲೆ ಟಗರು, ಆನೆ ಸವಾರರು, ನಂದಿ, ಆಂಜನೆಯ, ಶಿವಲಿಂಗ ಇನ್ನೂ ಮೊದಲಾದ ಚಿತ್ರಗಳನ್ನು ಚಿತ್ರಿಸಲಾಗಿದೆ. ನವರಂಗದ ಬಲಭಾಗದಲ್ಲಿ ಸರ್ಪವು ಸುತ್ತುವರಿದ ಶಿವಲಿಂಗವನ್ನು ನೋಡಬಹುದು. ಈ ದೇವಾಲಯದಲ್ಲಿ ತೆರೆದ ಮಂಟಪವಿದ್ದು, ಒಂದೇ ಸಾಲಿನಲ್ಲಿ ನಾಲ್ಕು ಕಂಬಗಳನ್ನು ಹೊಂದಿದೆ. ಈ ಕಂಬಗಳಲ್ಲಿ ವಿವಿಧ ಚಿತ್ರಗಳ ಕೆತ್ತನೆಯನ್ನು ನೋಡಬಹುದು. ಇಲ್ಲಿ ಪ್ರತಿದಿನ ಪೂಜೆ ನಡೆಯುತ್ತಿದ್ದು ವಿಶೇಷವಾಗಿ ಶ್ರಾವಣ ಮಾಸದಲ್ಲಿ ಪೂಜೆಗಳು ನಡೆಯುತ್ತವೆ.

ಶಿರಾದ ರೇವಣಸಿದ್ಧೇಶ್ವರ ದೇವಾಲಯ

ತುಮಕೂರು ಜಿಲ್ಲೆಯಲ್ಲಿ ಕಂಡುಬರುವ ಶಿರಾದ ರೇವಣಸಿದ್ಧೇಶ್ವರ ದೇವಾಯವು ಐತಿಹಾಸಿಕ ಹಿನ್ನೆಲೆಯಲ್ಲಿ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಈ ದೇವಾಲಯವು ಶಿರಾದ ಕಾಳಿದಾಸ ನಗರದಲ್ಲಿದೆ. ಇದು ಗರ್ಭಗೃಹ ಮತ್ತು ಸಭಾ ಮಂಟಪಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ರೇವಣಸಿದ್ಧೇಶ್ವರನ ಒಂದೂವರೆ ಅಡಿ ಎತ್ತರದ ಲೋಹದ ವಿಗ್ರಹ ಸುಂದರವಾಗಿದ್ದು, ಗಾರೆಗಚ್ಚಿನ ಮಂಟಪದಲ್ಲಿ ನಿರ್ಮಿಸಿದ್ದಾರೆ. ಇಲ್ಲಿರುವ ರೇವಣಸಿದ್ಧೇಶ್ವರನ ಮೂರ್ತಿಯು ನಾಲ್ಕು ಕೈಗಳನ್ನು ಒಳಗೊಂಡಿದೆ. ಮೇಲಿನ ಕೈಗಳಲ್ಲಿ ಬಲಗೈಯಲ್ಲಿ ಚಕ್ರ ಮತ್ತು ಎಡಗೈಯಲ್ಲಿ ಜಿಂಕೆಯನ್ನು ಹಿಡಿದುಕೊಂಡಿದ್ದಾರೆ. ಅದೇ ರೀತಿ ಕೆಳಗಿನ ಕೈಗಳಲ್ಲಿ ಬಲಗೈ ಅಭಯ ಮುದ್ರೆಯಲ್ಲಿದ್ದರೆ, ಎಡಗೈಯಲ್ಲಿ ಬಟ್ಟಲಿನಂತಿರುವ ವಸ್ತುವನ್ನು ಹಿಡಿದಿರುವುದು ಕಂಡುಬರುತ್ತದೆ. ಈ ಮಂಟಪದ ದ್ವಾರಬಾಗಿಲಿನಲ್ಲಿ ಕೆಂಪು, ಹಸಿರು, ಹಳದಿ, ಬಿಳಿ ಮತ್ತು ಕಪ್ಪು ಬಣ್ಣಗಳಿಂದ ಅಲಂಕರಿಸಿದ ಸುಂದರವಾದ 'ಹೂ' ಬಳ್ಳಿಗಳಿವೆ. ಜೊತೆಗೆ ಲಲಾಟದಲ್ಲಿ ಪದ್ಮ ಹಾಗೂ ಗಿಳಿಗಳ ಚಿತ್ರಗಳಿವೆ.

ಈ ದೇವಾಲಯದ ಸಭಾಮಂಟಪವು ಎರಡು ವೃತ್ತಾಕಾರದ ಕಂಬಗಳಿಂದ ಕೂಡಿದೆ. ಈ ಸಭಾಮಂಟಪದ ಗೋಡೆಯ ಮೇಲೆ ಅನೇಕ ರೀತಿಯಲ್ಲಿ ವರ್ಣಚಿತ್ರಗಳನ್ನು ಚಿತ್ರಿಸಲಾಗಿದೆ. ಸಾಮಾನ್ಯವಾಗಿ ವಿಷ್ಣುವಿನ ದಶಾವತಾರ ಚಿತ್ರಗಳು, ನರ್ತಕಿಯರು, ನೃತ್ಯ, ಗೋಪಿಕಾಸ್ತ್ರೀಯರ

ವಸ್ತ್ರಾಪಹರಣ, ಮುಸ್ಲಿಂ ನವಾಬರು ಮತ್ತು ಅವರ ಅರಮನೆ ರಾಣಿಯರ ಚಿತ್ರಗಳು, ಯೋಧರು, ಕುದರೆಯಲ್ಲಿರುವ ಯೋಧರು, ಗಿಡ, ಮರ, ಹುತ್ತಗಳು, ಅದರ ಮೇಲೆ ಸರ್ಪಗಳು, ಹೆಡೆ ಬಿಚ್ಚಿಕೊಂಡಿರುವ ನಾಗರ ಚಿತ್ರಗಳು, ವಿವಿಧ ಪಕ್ಷಿಗಳ ಚಿತ್ರಗಳು ಹಾಗೂ ಕಾಡಿನಲ್ಲಿ ಕುರುಬರ ದಂಪತಿಗಳು ಕುರಿಗಳನ್ನು ಮೇಯಿಸುತ್ತಿರುವ ಸಂದರ್ಭದ ಚಿತ್ರಗಳನ್ನು ಬಿಡಿಸಲಾಗಿದೆ. ದಂಪತಿಗಳ ಹೆಸರುಗಳನ್ನು ಬರೆಯಲಾಗಿದೆ. ಕುರುಬನನ್ನು ಉಂಡಾಡೊ ಪದ್ಮಪ್ಪನೆಂದೂ ಆತನ ಹೆಂಡತಿಯನ್ನು ಮಾಳಮ್ಮ ಎಂದು ಬರೆಯಲಾಗಿದೆ. ಕುರುಬನಾದ ಉಂಡಾಡೊ ಪದ್ಮಪ್ಪ ತನ್ನ ಕೈಯಲ್ಲಿ ಕೊಡಲಿ, ಹೆಗಲ ಮೇಲೆ ಕಂಬಳಿ, ತಲೆಗೆ ರುಮಾಲು, ಹಣೆಯಲ್ಲಿ ವಿಭೂತಿ, ಮುಖದಲ್ಲಿ ಕೊರೆ ಮೀಸೆ, ಕೊರಳಲ್ಲಿ ಕಂಠಹಾರಗಳನ್ನು ಹೊಂದಿದ್ದಾನೆ. ಅದೇ ರೀತಿ ಆತನ ಹೆಂಡತಿಯಾದ ಮಾಳಮ್ಮ ವಿವಿಧ ಆಭರಣಗಳನ್ನು ಧರಿಸಿದ್ದು ತಲೆಯ ಮೇಲೆ ಆಹಾರದ ಬುಟ್ಟಿಯನ್ನು ಹೊತ್ತುಕೊಂಡು ಹೋಗುತ್ತಿರುವುದು, ಜೊತೆಗೆ ಇವರ ಮುಂದೆ ಕುರಿಗಳು ಮೇಯುವ ಮತ್ತು ಟಗರು ಕಾಳಗ ನಡೆಯುವ ಚಿತ್ರಗಳಿರುವುದು ಕಂಡುಬರುತ್ತದೆ. ಒಟ್ಟಾರೇ ಈ ದೇವಾಲಯದ ಕಲೆ, ವಾಸ್ತುಶಿಲ್ಪವನ್ನು ಗಮನಿಸಿದಾಗ ರತ್ನಗಿರಿ ಪಾಳೆಗಾರರು ಮತ್ತು ಶಿರಾದ ನವಾಬರ ಆಡಳಿತಕ್ಕೆ ಒಳಪಟ್ಟಿರುವಂತಹದ್ದಾಗಿದೆ. ಆದ್ದರಿಂದ ಈ "ದೇವಾಲಯವನ್ನು ಸುಮಾರು ೧೮ನೆಯ ಶತಮಾನದ್ದೂ ಎಂದು ಎಸ್.ವೈ. ಸೋಮಶೇಖರ್ ಅವರು ತಮ್ಮ ಲೇಖನದಲ್ಲಿ ಗುರುತಿಸಿದ್ದಾರೆ."[೬] ಹೀಗಾಗಿ ಇಂತಹ ಉಲ್ಲೇಖಗಳಿಂದ ದೇವಾಲಯದ ಇತಿಹಾಸವನ್ನು ತಿಳಿಯಲು ಸಾಧ್ಯವಾಗುತ್ತದೆ.

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಬರುವ ಚಿಕ್ಕನಾಯಕನಹಳ್ಳಿ, ಯಳನಾಡು, ಕಂದಿಕೆರೆ ಮತ್ತು ಹುಳಿಯಾರು ಇವುಗಳಲ್ಲದೇ ಬೇರೆ ಬೇರೆ ಊರುಗಳಲ್ಲಿ ರೇವಣಸಿದ್ಧನ ದೇವಾಲಯಗಳಿವೆ. ಇವು ಪ್ರಾಚೀನ ದೇವಾಲಯಗಳಾಗಿವೆ. ಈ ಭಾಗದಲ್ಲಿ ಆಳ್ವಿಕೆ ನಡೆಸಿದಂತಹ ರಾಜಮನೆತನಗಳಾದ ಚೋಳರು, ಹೊಯ್ಸಳರು ಆ ನಂತರ ಪಾಳೆಗಾರರ ಆಳ್ವಿಕೆಯಲ್ಲಿ ರಚನೆಯಾದ ದೇವಾಲಯಗಳಿವೆ. ಇಲ್ಲಿ ಹೆಚ್ಚಾಗಿ ಶಿರಾದ ಪಾಳೆಗಾರರ ಆಳ್ವಿಕೆಯ ಕಾಲದಲ್ಲಿ ಕಟ್ಟಿಸಿರುವಂತಹ ದೇವಾಲಯಗಳು ಹೆಚ್ಚಾಗಿವೆ.

ಚಿಕ್ಕನಾಯಕನಹಳ್ಳಿಯ ದೇವಾಲಯಗಳು

ಈ ಊರಲ್ಲಿ ಪ್ರಾಚೀನವಾದ ಮೂರು ದೇವಾಲಯಗಳಿವೆ. ಅವು

* ಗುರುಸಿದ್ಧೇಶ್ವರ ದೇವಾಲಯ
* ಗುರು ರೇವಣಸಿದ್ಧೇಶ್ವರ ದೇವಾಲಯ
* ಗುರು ಸಿದ್ಧರಾಮೇಶ್ವರ ದೇವಾಲಯ

ಗುರುಸಿದ್ಧೇಶ್ವರ ದೇವಾಲಯ

ಇದು ಚಿಕ್ಕನಾಯಕನಹಳ್ಳಿಯಲ್ಲಿ ಇರುವ ದೇವಾಲಯವಾಗಿದೆ. ಇದಕ್ಕೆ ಸುಮಾರು ನಾಲ್ಕರಿಂದ ಐದನೂರು ವರ್ಷಗಳ ಇತಿಹಾಸವಿದೆ ಎಂದು ಅಲ್ಲಿನ ಒಡೆಯರು ಹೇಳುತ್ತಾರೆ. ಇದು ಪೂರ್ವ ಪಶ್ಚಿಮ ೪೦ ಅಡಿ, ಉತ್ತರ-ದಕ್ಷಿಣ ೬೦ ಅಡಿಗಳಷ್ಟು ಅಗಲವಾದ ಕಟ್ಟಡದಿಂದ ಕೂಡಿದೆ. ಈ ದೇವಾಲಯ ಗರ್ಭಗುಡಿ ಗುರು ಮಂಟಪ ಹಾಗೂ ಸಭಾ ಮಂಟಪಗಳನ್ನು ಒಳಗೊಂಡಿದೆ. ಗರ್ಭಗುಡಿಯಲ್ಲಿ ಒಂದರಿಂದ ಎರಡು ಅಡಿಯಷ್ಟು ಎತ್ತರವಾದ ಗದ್ದುಗೆಯಿದೆ. ಅದರ ಮೇಲೆ ಲಿಂಗದಿಂದ ಉದ್ಭವವಾದ ರೇವಣಸಿದ್ಧನ ಮೂರ್ತಿ ಇದೆ. ಇದರ ಪಕ್ಕದಲ್ಲಿ ಉಗ್ರಾಣವಿದೆ. ಗರ್ಭಗುಡಿಯು ಏರಿಕೆಯ ಬಾಗಿಲನ್ನು ಒಳಗೊಂಡಿದ್ದು, ಪ್ರಥಮ ಹಂತ ರುದ್ರಾಕ್ಷಿ ಮಾಲೆ ಜೊತೆಗೆ ಹೂ ಬಳ್ಳಿಯ ಕೆತ್ತನೆಯಿಂದ ಕೂಡಿದ್ದು, ವಿನಾಯಕ ಮೂರ್ತಿ ಮಧ್ಯೆ ಇದೆ. ಎರಡೂ ಕಡೆ ಆಯುಧಗಳನ್ನು ಹಿಡಿದ ದ್ವಾರಪಾಲಕರಿದ್ದಾರೆ. ಇದರ ಸಭಾಮಂಟಪವೂ ಪ್ರತಿಯೊಂದು ಮಂಟಪಗಳು ಐದು ಅಂಕಗಳಿಂದ ಕೂಡಿದ್ದು, ಆರು ಕಂಬಗಳ ನಾಲ್ಕು ಸಾಲುಗಳನ್ನು ಒಳಗೊಂಡಿದೆ. ಇದರ ಪ್ರತಿಯೊಂದು ಕಂಬವೂ ಕಲ್ಲು ಪಾದಕಂಬ, ಬೋದಿಗೆಯ ನಾಲ್ಕು ದಿಕ್ಕಿಗೂ ಬಾಳೆಮಾತೆಗಳನ್ನು ಹೊಂದಿದ್ದು ಮೇಲೆ ತೊಲೆಗಳಿದ್ದು ಜವಿ, ಪಟ್ಟಿ ಹಲಗೆಗಳಿಂದ ಕೂಡಿದೆ. ಈ ದೇವಾಲಯದಲ್ಲಿ ಕಾರ್ತಿಕ ಮಾಸದ ಇಡೀ ತಿಂಗಳ ಪ್ರತಿ ದಿನವೂ ಸಿದ್ಧೇಶ್ವರನಿಗೆ ತಳಿಗೆ ಸೇವೆ ನಡೆಯುವುದು. ಈ ಮಠವು ಮೊದಲಿನಿಂದಲೂ ರೂಢಿಸಿಕೊಂಡು ಬಂದಿರುವ ಪದ್ಧತಿಯಾಗಿದೆ.

ಗುರು ರೇವಣಸಿದ್ಧೇಶ್ವರ ದೇವಾಲಯ

ಚಿಕ್ಕನಾಯಕನಹಳ್ಳಿಯಲ್ಲಿ ಬರುವ ದೇವಾಲಯ ಅಥವಾ ಮಠಗಳಲ್ಲಿ ಇದು ಅಧಿಕ ಜನ ಸಮುದಾಯವನ್ನು ಒಳಗೊಂಡಿರುವ ದೇವಾಲಯವಾಗಿದೆ. ಇದು ಪೂರ್ವ, ಪಶ್ಚಿಮಕ್ಕೆ ೫೦ ಅಡಿ ಇದೆ. ಅದೇ ರೀತಿ ಉತ್ತರ ದಕ್ಷಿಣಕ್ಕೆ ೧೨೦ ಅಡಿ ವಿಸ್ತೀರ್ಣವನ್ನು ಹೊಂದಿದೆ. ಈ ದೇವಾಲಯವು ಗರ್ಭಗುಡಿ, ಸಭಾಮಂಟಪ ಮತ್ತು ಗುರುಮಂಟಪಗಳನ್ನು ಒಳಗೊಂಡಿದೆ. ಈ ದೇವಾಲಯವು ಗರ್ಭಗುಡಿಯನ್ನು ಹೊಂದಿದ್ದು, ಗದ್ದುಗೆ ಪೀಠದ ಕೋಣೆಯ ಮಧ್ಯದಲ್ಲಿ ಲಿಂಗದಿಂದ ಉದ್ಭವವಾದ ರೇವಣಸಿದ್ಧೇಶ್ವರನ ಮೂರ್ತಿ ಇದೆ. ಆದರೆ ಗದ್ದುಗೆ ಪೀಠದಲ್ಲಿರುವ ರೇವಣಸಿದ್ಧೇಶ್ವರನಿಗೆ ಕಂಥೆಯನ್ನು ಧರಿಸಲಾಗುತ್ತದೆ. ಇಲ್ಲಿ ನಾಗರಕಲ್ಲು, ಎರಡು ತ್ರಿಶೂಲ, ಶಿವ ಪಾರ್ವತಿಯರು, ಗಣಪತಿ, ನಂದಿ, ಶಂಬು, ಅಕ್ಷಯ ಪಾತ್ರೆಗಳಿವೆ. ಇದರ ಗರ್ಭಗುಡಿಯ ದ್ವಾರಬಾಗಿಲು ಐದು ಹಂತಗಳ ಏರಿಕೆಯ ಬಾಗಿಲಾಗಿದೆ. ಮೊದಲನೇ ಹಂತದಲ್ಲಿ ಮಧ್ಯ ಗಣಪತಿ ಇರುವ ಎರಡು ಹಂಸಗಳನ್ನೊಳಗೊಂಡ ತೋಮಾಲೆಹಾರದ ಜೊತೆಗೆ ಮುಖ ತೋರಣಗಳ ನವಿಲು ಸಾಲು, ನಂದಿ, ಗಿಳಿಗಳು ಎರಡನೇ

ಹಂಸದಲ್ಲಿ ಪಾರ್ವತಿಯರ ಒಡ್ಡೋಲಗರೂಪಿಯಾಗಿ ಸಖಿಯರ ಸೇವೆ, ನವಿಲುಗಳ ನರ್ತನ, ಕಬ್ಬಿಣದ ಸರಪಳಿಗಳು ಹಾಗೂ ಕುಸುರಿ ಕೆತ್ತನೆಗಳ ಸಂಗಮ, ಮೂರನೇ ಹಂತದಲ್ಲಿ ರುದ್ರಾಕ್ಷಿಗಳ ಮಾಲೆ, ಹೂಬಳ್ಳಿಗಳ ಸಾಲುಗಳ ಹೊಯ್ಸಳ ಶಿಲ್ಪಕಲೆಯನ್ನೇ ತುಂಬಿಕೊಂಡು ಮಧ್ಯೆ ಶಿವಲಿಂಗವಿದೆ.

ಎರಡೂ ಕಡೆ ಲತಾಂಗಿಯರ ಚಾಲ ಸೇವೆ ಇದೆ. ನಾಲ್ಕನೇ ಹಂತದಲ್ಲಿನ ಮಧ್ಯೆ ಸಿಂಹಲಾಟು, ಎರಡೂ ಕಡೆ ಬಾಳೆ ಮೊತಿಗಳನ್ನು ಬಾಯಲ್ಲಿ ಹಿಡಿದಿರುವ ಸಿಂಹಗಳ ಮುಖ, ಕೆಳಗೆ ಒಂದೆಡೆ ಭಕ್ತವೃಂದ ಕೈ ಮುಗಿದು ನಿಂತಿದ್ದರೆ, ಇನ್ನೊಂದೆಡೆ ದಂಡ ಸಹಿತ ಭಕ್ತರ ನಿಲುವಿಕೆ ಇದೆ. ಈ ದೇವಾಲಯದ ಬಾಗಿಲಿನ ಕದವು ದಪ್ಪ ಮರದಿಂದ ರಚನೆಯಾಗಿದ್ದು, ಎಂಟು ಅಂಕಣಗಳ ಗಂಧಟ್ಟಿಗೆಗಳ ಚೌಕಾಕಾರದ ಇಪ್ಪತ್ತು ಕಳಸಗಳು ಕೂಡಿ ವಜ್ರಾಕೃತಿಯ ಕೆತ್ತನೆಯಿಂದ ಕೂಡಿದೆ. ಗುರು ಮಂಟಪ ಮತ್ತು ಸಭಾಮಂಟಪಗಳು ಐದು ಅಂಕಣಗಳಿಂದ ಕೂಡಿದ್ದು, ಆರು ಕಂಬಗಳ ಮೂರು ಸಾಲುಗಳಿವೆ. ಈ ಕಂಬಗಳು ಚೌಕಾಕಾರದಿಂದ ಕೂಡಿದ್ದು, ಪ್ರತಿ ಕಂಬದಲ್ಲಿ ವಿಭಿನ್ನವಾದ ಚಿತ್ರಾಕೃತಿಗಳನ್ನು ಒಳಗೊಂಡಿದೆ. ಸಾಮಾನ್ಯವಾಗಿ ಕಂಬಗಳಲ್ಲಿ ಮೇಕೆ, ನಂದಿ, ಆನೆ, ಈಶ್ವರ, ಹಂಸ, ಕುದುರೆ ಇನ್ನು ಮುಂತಾದ ಕಲಾಕೃತಿಗಳನ್ನು ಕೆತ್ತಲಾಗಿದೆ. ಸಭಾಮಂಟಪದ ಮುಂದಿನ ಸಾಲಿನ ಆರೂ ಕಂಬಗಳು ಅರಮನೆಯಲ್ಲಿನ ದರ್ಬಾರ್ ಹಾಲ್‌ನ ಕಂಬಗಳ ಮಾದರಿಯಲ್ಲಿಯೇ ರಚನೆಗೊಂಡಿವೆ. ಹೀಗೆ ಈ ದೇವಾಲಯದಲ್ಲಿ ಪ್ರತಿದಿನ ಪೂಜೆ ನಡೆಯುತ್ತದೆ.

ಗುರು ಸಿದ್ಧರಾಮೇಶ್ವರ ದೇವಾಲಯ

ಇದು ಸಹ ಗುರುಪರಂಪರೆಯ ಅಡಿಯಲ್ಲಿ ಬರುವ ಒಂದು ದೇವಾಲಯವಾಗಿದೆ. ಇದು ಗರ್ಭಗುಡಿ, ಗುರುಮಂಟಪ, ಸಭಾಮಂಟಪಗಳನ್ನು ಹೊಂದಿದೆ. ಗರ್ಭಗುಡಿಯ ತೂಗೂ ಮಂಚದಲ್ಲಿಯೇ ಸಿದ್ಧರಾಮೇಶ್ವರನನ್ನು ಕೂರಿಸಲಾಗಿದೆ. ಈ ಗರ್ಭಗುಡಿಯ ಎಡಗಡೆ ಉಗ್ರಾಣ ಬಲಗಡೆ ಎಡೆ–ಪನಿವಾರದ ಕೊಂಡಿಗಳಿವೆ. ಇದು ಕಲ್ಲು ಬಾಗಿಲನ್ನು ಒಳಗೊಂಡಿದೆ. ಇದರ ಎಡಬಲಗಳಲ್ಲಿ ಗದೆ, ತ್ರಿಶೂಲ, ಡಮರುಗ, ಕಿರೀಟಧಾರಿಗಳಾದ ದ್ವಾರಪಾಲಕರಿದ್ದಾರೆ. ಹೀಗೆ ಈ ಮೂರು ದೇವಾಲಯಗಳು ಚಿಕ್ಕನಾಯಕನಹಳ್ಳಿಯ ಗುರುಒಡೆಯರ ಧಾರ್ಮಿಕ ಆಚರಣೆಗಳನ್ನು ಪ್ರತಿನಿಧಿಸುತ್ತವೆ ಎಂಬುದು ಅಲ್ಲಿನ ಒಡೆಯರ ಮಾತಾಗಿದೆ."[2] ಹೀಗಾಗಿ ಆ ಪ್ರದೇಶದಲ್ಲಿ ಈ ಮಠವು ಉನ್ನತ ಸ್ಥಾನವನ್ನು ಪಡೆದುಕೊಂಡಿದೆ.

ಯಳನಾಡು ರೇವಣಸಿದ್ಧೇಶ್ವರ ದೇವಾಲಯ

ಇದು ಸಹ ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಬರುವ ಒಂದು ಗ್ರಾಮವಾಗಿದೆ. ಇಲ್ಲಿ ಪ್ರಾಚೀನವಾದ ರೇವಣಸಿದ್ಧೇಶ್ವರ ಮತ್ತು ಸಿದ್ಧರಾಮೇಶ್ವರ ದೇವಾಲಯಗಳು ಕಂಡುಬರುತ್ತವೆ. ಪ್ರಮುಖವಾಗಿ

ರೇವಣಸಿದ್ಧೇಶ್ವರ ದೇವಾಲಯವು ಸುಮಾರು ಮೂರುನೂರು ವರ್ಷಗಳ ಇತಿಹಾಸವನ್ನು ಒಳಗೊಂಡಿದೆ. ಈ ದೇವಾಲಯವು ಗರ್ಭಗುಡಿ, ಅಂತರಾಳ, ಸಭಾಮಂಟಪವನ್ನು ಒಳಗೊಂಡಿದೆ. ಇದರ ಗರ್ಭಗುಡಿಯಲ್ಲಿ ಎರಡು ಅಡಿ ಎತ್ತರದ ಗದ್ದುಗೆಯಿದೆ. ಅದರ ಮೇಲೆ ರೇವಣಸಿದ್ಧನ ಎರಡು ಬೆಳ್ಳಿಯ ಮುಖವಾಡಗಳಿವೆ. ಈ ಬೆಳ್ಳಿಯ ಮುಖಗಳು ಲಿಂಗದಾಕಾರವಿದ್ದು, ಅದರಲ್ಲಿ ಉದ್ಭವ ರೇವಣಸಿದ್ಧನನ್ನು ಕೆತ್ತಿಸಲಾಗಿದೆ. ಆ ಲಿಂಗದ ಮೇಲೆ ಐದು ತಲೆಯ ಹೆಡೆಬಿಚ್ಚಿದ ನಾಗರ ಸರ್ಪವನ್ನು ನೋಡಬಹುದು. ಹಾಗೆಯೇ ಗರ್ಭಗುಡಿಯ ಗದ್ದುಗೆಯ ಮುಂಭಾಗದಲ್ಲಿ ಎರಡು ನಂದಿಯ ಚಿತ್ರಗಳನ್ನು ಬಿಡಿಸಲಾಗಿದೆ. ಗರ್ಭಗುಡಿಯ ಬಾಗಿಲು ಎರಡು ಹಂತಗಳಿಂದ ಕೂಡಿದೆ. ಮೊದಲನೇಯ ಹಂತದಲ್ಲಿ ಬಾಗಿಲಿನ ಕಲ್ಲಿನ ಮೇಲೆ ಶಿವಲಿಂಗವನ್ನು ಕೆತ್ತಿಸಲಾಗಿದೆ.

ಅದೇ ಎರಡನೇ ಹಂತದಲ್ಲಿ ಲಿಂಗದಿಂದ ಉದ್ಭವವಾದ ರೇವಣಸಿದ್ಧನನ್ನು ಕೆತ್ತಿಸಲಾಗಿದೆ. ಅದರ ಕೆಳಗಡೆ ಬಾಗಿಲಿನ ಎಡಬಲಕ್ಕೆ ಎರಡು ಪುಷ್ಪಗಳನ್ನು ಬಿಡಿಸಲಾಗಿದೆ. ಗರ್ಭಗುಡಿಯ ಮುಂದೆ ನವರಂಗದಲ್ಲಿ ರೇವಣಸಿದ್ಧನ ಬೆಳ್ಳಿಯ ಪಲ್ಲಕ್ಕಿ ಇದೆ. ಅದರಲ್ಲಿಯೂ ರೇವಣಸಿದ್ಧೇಶ್ವರನ ಬೆಳ್ಳಿಯ ಮುಖವಿದೆ. ಅದು ಶಿವಲಿಂಗದಲ್ಲಿ ಉದ್ಭವವಾದ ಮೂರ್ತಿಯನ್ನು ಹೊಂದಿದೆ. ಹಾಗೆಯೇ ನವರಂಗದಲ್ಲಿ ಆರು ಕಲ್ಲಿನ ಕಂಬಗಳನ್ನು ಒಳಗೊಂಡಿದೆ. ಹೋರಗಡೆ ಬಾಗಿನಲ್ಲಿ ಎಡಬಲಕ್ಕೆ ದ್ವಾರಪಾಲಕರು ನಿಂತಿರುವುದನ್ನು ನೋಡಬಹುದು. ಅದೇ ರೀತಿ ತೆರೆದ ಮಂಟಪವನ್ನು ಹೊಂದಿದೆ. ಈಗ ಹೊಸದಾಗಿ ಗರ್ಭಗುಡಿಯ ಮೇಲಿನ ಶಿಖರವನ್ನು ಕಟ್ಟಿಸಲು ಆರಂಭಿಸಿದ್ದಾರೆ. ಪ್ರಸ್ತುತ ಈ ದೇವಾಲಯವನ್ನು ವೈ.ಎಸ್. ಶ್ರೀನಿವಾಸಸ್ವಾಮಿ ಒಡೆಯರು ಪೂಜೆ ಮಾಡಿಕೊಂಡು ಬರುತ್ತಿದ್ದಾರೆ. ಇವರ ತಂದೆ ಶಿವರಾಮ ಒಡೆಯರು, ತಾತಾ ಕರಿಯಣ್ಣ ಒಡೆಯರು ಹೀಗೆ ಇವರ ಗುರುಒಡೆಯರ ಪರಂಪರೆ ಬೆಳೆದುಕೊಂಡು ಬಂದಿರುವುದನ್ನು ತಿಳಿಯಬಹುದು. ಇಲ್ಲಿ ಪ್ರತಿ ರೇಣುಕಾ ಜಯಂತಿಯಂದು ಜಾತ್ರೆ ಮಾಡಲಾಗುತ್ತದೆ. ವಿಶೇಷವಾಗಿ ೧೨ ವರ್ಷಗಳಿಗೊಮ್ಮೆ ಕಂಬಳ ಸೇವೆ ಮಾಡುತ್ತಾರೆ.

ಹುಲಿಯೂರು ರೇವಣಸಿದ್ಧೇಶ್ವರ ದೇವಾಲಯ

ಇದು ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಬರುವ ಗ್ರಾಮವಾಗಿದೆ. ಈ ಊರಲ್ಲಿ ಪ್ರಾಚೀನ ಕಾಲದಲ್ಲಿ ಇದ್ದ ರೇವಣಸಿದ್ಧನ ಗುಡಿಯನ್ನು ಕೆಡವಿ, ಈಗ ಇರುವ ದೇವಾಲಯವು ಸುಮಾರು ೪೦ ವರ್ಷಗಳ ಹಿಂದೆ ಕಟ್ಟಿಸಿರುವ ದೇವಾಲಯವಾಗಿದೆ. ಈ ದೇವಾಲಯವು ಗರ್ಭಗುಡಿ, ನವರಂಗ, ತೆರೆದ ಮಂಟಪವನ್ನು ಒಳಗೊಂಡಿದೆ. ಇದರ ಗರ್ಭಗುಡಿಯಲ್ಲಿ ಗದ್ದುಗೆಯಿದ್ದು, ಅದರ ಮೇಲೆ ರೇವಣಸಿದ್ಧನ ಬೆಳ್ಳಿಯ ಲಿಂಗವಿದೆ. ಲಿಂಗದ ಮೇಲೆ ಒಂಬತ್ತು ತಲೆಗಳುಳ್ಳ ಹೆಡೆಬಿಚ್ಚಿದ ನಾಗ ಸರ್ಪವಿದೆ.

ಲಿಂಗದ ಮಧ್ಯದಲ್ಲಿ ಉದ್ಭವ ರೇವಣಸಿದ್ಧನನ್ನು ಬಿಡಿಸಲಾಗಿದೆ. ಇದರ ಹಿಂದೆ ಎರಡು ಸಿಂಹಗಳನ್ನು ಒಳಗೊಂಡ ಕೀರ್ತಿ ಮುಖವನ್ನು ಒಳಗೊಂಡಿದೆ. ಇದು ವಿಜಯನಗರ ಕಾಲದಲ್ಲಿ

ನಿರ್ಮಿಸಿದ ಶಿಲ್ಪಗಳ ಕಲಾಕೃತಿಯನ್ನು ಹೊಂದಿದೆ. ತೆರೆದ ಮಂಟಪವು ನಾಲ್ಕು ಕಲ್ಲಿನ ಕಂಬಗಳನ್ನು ಒಳಗೊಂಡಿದೆ. ದೇವಾಲಯದ ಮೇಲ್ಭಾಗದ ಮಧ್ಯದಲ್ಲಿ ರೇವಣಸಿದ್ಧನ ಮೂರ್ತಿಯನ್ನು ನಿಲ್ಲಿಸಲಾಗಿದೆ. ಗುಡಿಯ ಎಡಬಲಕ್ಕೆ ಎರಡು ನಂದಿಯ ವಿಗ್ರಹಗಳನ್ನು ಕೂರಿಸಲಾಗಿದೆ. ಇಲ್ಲಿ ಯಾವುದೇ ರೀತಿಯಿಂದ ಜಾತ್ರೆಯನ್ನು ಪ್ರತೀ ವರ್ಷ ಮಾಡುವುದಿಲ್ಲ. ೧೨, ೧೫, ವರ್ಷಗಳಿಗೊಮ್ಮೆ ಕಂಥಾಧಾರಣೆ ಮಾಡುತ್ತಾರೆ. ಅಂದು ಈ ರೇವಣಸಿದ್ಧನ ಜಾತ್ರೆ ಮಾಡುತ್ತಾರೆ. ಪ್ರತಿದಿನ ಎರಡು ಸಾರಿ ಪೂಜೆ ಮತ್ತು ವಾರದ ಪೂಜೆ ಮಾಡುತ್ತಾರೆ. ಅಲ್ಲಿನ ಕೆಲವು ಊರುಗಳ ಜನರು ಈ ಮಠಕ್ಕೆ ಬರುತ್ತಾರೆ. ಕೆ.ಸಿ. ಪಾಳ್ಯಾ, ಬಳಗಪಾಳ್ಯಾ, ಬಳ್ಳಕಟ್ಟೆ, ಹುಳಿಯೂರು ಇನ್ನೂ ಬೇರೆ ಬೇರೆ ಊರುಗಳಿಂದ ಬರುತ್ತಾರೆ. ದೇವಾಲಯವನ್ನು ಪ್ರಸ್ತುತ ಬಸವರಾಜ ಒಡೆಯರು ಪೂಜೆ ಮಾಡಿಕೊಂಡು ಹೋಗುತ್ತಿದ್ದಾರೆ. ಅಲ್ಲಿನ ಹಿರಿಯ ಒಡೆಯರು ದೀಕ್ಷೆ ನೀಡಿ ಪಟ್ಟಕಟ್ಟಿ ಪೂಜೆ ಮಾಡಲು ನೇಮಿಸಿದ್ದಾರೆ.

ಕಳಲೆ ರೇವಣಸಿದ್ಧೇಶ್ವರ ದೇವಾಲಯ

ಕಳಲೆ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನಲ್ಲಿ ಬರುವ ಗ್ರಾಮವಾಗಿದೆ. ಇಲ್ಲಿ ರೇವಣಸಿದ್ಧನ ಐತಿಹಾಸಿಕ ದೇವಾಲಯವಿದೆ. ಈ ದೇವಾಲಯವು ಇಲ್ಲಿನ ಪ್ರದೇಶದಲ್ಲಿ ಅತ್ಯಂತ ಪ್ರಸಿದ್ಧವಾದದ್ದು. ಇದು ೧೫ನೆಯ ಶತಮಾನದಲ್ಲಿ ನಿರ್ಮಾಣಗೊಂಡ ದೇವಾಲಯವಾಗಿದೆ. ಎರಡು ಅಡಿ ಎತ್ತರವಾದ ಗದ್ದುಗೆಯ ಮೇಲೆ ನಿರ್ಮಾಣವಾದ ಇದು ದ್ರಾವಿಡ ಶೈಲಿಯಲ್ಲಿ ಕಟ್ಟಲ್ಪಟ್ಟಿದೆ. ಗರ್ಭಗುಡಿಯ ಮೇಲೆ ಇಪ್ಪತ್ತು ಅಡಿ ಎತ್ತರದ ಗೋಪುರವು ನೋಡಲಿಕ್ಕೆ ಚಿತ್ತಾಕರ್ಷಕವಾಗಿದೆ. ಮೇಲ್ಛಾವಣಿಯ ಸುತ್ತಲೂ ವಿವಿಧ ನಮೂನೆಯ ಶಿಲ್ಪಗಳನ್ನು ಕಾಣಬಹುದು. ಈ ದೇವಾಲಯವನ್ನು ಇಟ್ಟಿಗೆ ಮತ್ತು ಗಾರೆಯನ್ನು ಬಳಸಿಕೊಂಡು ಕಟ್ಟಲಾಗಿದೆ. ಇದರ ಆವರಣದಲ್ಲಿ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು ಅಲ್ಲಲ್ಲಿ ನಿಲ್ಲಿಸಲಾಗಿದೆ. ಕೆಲವು ವೀರಗಲ್ಲುಗಳ ಮೇಲೆ ಜೋಡಿವೀರರ ಮರಣವನ್ನು ಮತ್ತು ಅಪ್ಸರೆಯರನ್ನು ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಿರುವ ಉಬ್ಬು ಚಿತ್ರಗಳಿವೆ. ಇದನ್ನು ಇತ್ತೀಚೆಗೆ ಸರಕಾರದ ಮುಜರಾಯಿ ಇಲಾಖೆಯವರ ನೆರವಿನಿಂದ ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಟ್ರಸ್ಟ್‌ನವರು ಸಂಪೂರ್ಣವಾಗಿ ಈ ದೇವಾಲಯವನ್ನು ಜೀರ್ಣೋದ್ಧಾರ ಕೈಗೊಂಡು ನವೀಕರಿಸಿದ್ದಾರೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಕಳವೆಯ ಸುತ್ತಮುತ್ತಲಿರುವ ಶಿಷ್ಯರ ಊರುಗಳನ್ನು ಎಫ್.ಟಿ. ಹಳ್ಳಿಕೇರಿ ಅವರು ತಮ್ಮ ಲೇಖನದಲ್ಲಿ ಪಟ್ಟಿಮಾಡಿರುವಂತೆ ಆ ಗ್ರಾಮಗಳ ಹೆಸರುಗಳು ಇಂತಿವೆ. "ಏಚಗೊಂಡ, ಅರತಲೆ, ಹುಲಿಗೇರಿ, ಕಳಲೆ, ಕಸುವಿನಹಳ್ಳಿ ಕೃಷ್ಣಾಪುರ, ಎಲಬೇರೆ, ಎಲಚಿಗೆರೆ, ಹುಣಸನಾಳ್, ಸಿಂದೊಳ್ಳಿಪುರ, ಕುರಿಹಟ್ಟಿ, ಹೊಸೂರು, ಕಲ್ಲಳ್ಳಿ, ಮುದ್ದೇಹಳ್ಳಿ, ದೇವೀರಮ್ಮನಹಳ್ಳಿ, ಹುಂಡಿ, ಉಪ್ಪಿನಹಳ್ಳಿ, ಕತ್ವವಾಡಿಪುರ, ಬೆಳರಹುಂಡಿ"[೮] ಪ್ರತಿವರ್ಷ ನಡೆಯುವ ರೇವಣಸಿದ್ಧನ ಜಾತ್ರೆ–ಉತ್ಸವಗಳ ಸಂದರ್ಭದಲ್ಲಿ ಈ ಊರುಗಳ ಹಾಲುಮತ ಜನಾಂಗವು ತಪ್ಪದೇ ಭಾಗವಹಿಸಿ ತಮ್ಮ ಸೇವೆಯನ್ನು ಸಲ್ಲಿಸುತ್ತಾರೆ.

ತರೀಕೆರೆಯ ರೇವಣಸಿದ್ಧೇಶ್ವರ ದೇವಾಲಯ

ತರೀಕೆರೆಯು ಚಿಕ್ಕಮಗಳೂರು ಜಿಲ್ಲೆಯಲ್ಲಿ ಬರುವ ಒಂದು ತಾಲೂಕಾಗಿದೆ. ಇಲ್ಲಿ ಹಾಲುಮತ ಸಮುದಾಯದವರು ಹೆಚ್ಚಾಗಿ ವಾಸವಾಗಿರುವುದು ತಿಳಿದುಬರುತ್ತದೆ. ಈ ಪ್ರಾಂತ್ಯದಲ್ಲಿರುವ ರೇವಣಸಿದ್ಧೇಶ್ವರ ಮಠಗಳಲ್ಲಿ ತರೀಕೆರೆಯ ರೇವಣಸಿದ್ಧೇಶ್ವರ ದೇವಾಲಯ ಪ್ರಮುಖ ಪಾತ್ರವಹಿಸುತ್ತದೆ. ಈ ದೇವಾಲಯವನ್ನು ತರೀಕೆರೆ ಪಾಳೆಯಗಾರರ ಆಳ್ವಿಕೆಯ ನಂತರದಲ್ಲಿ ಕಟ್ಟಿಸಿರಬಹುದು. ಈ ರೇವಣಸಿದ್ಧೇಶ್ವರ ದೇವಾಲಯವನ್ನು ಆಧುನಿಕ ಶೈಲಿಯಲ್ಲಿ ಕಟ್ಟಿಸಲಾಗಿದೆ. ಇದು ಎತ್ತರವಾದ ಶಿಖರವನ್ನು ಹೊಂದಿದ್ದು, ಪೂರ್ವಾಭಿಮುಖವಾಗಿ ಮೂರು ಗರ್ಭಗೃಹಗಳನ್ನು ಒಳಗೊಂಡಿದೆ. ಇವುಗಳ ಮಧ್ಯದ ಗರ್ಭಗೃಹದ ಲಿಂಗದಲ್ಲಿ ಉದ್ಭವವಾದ ಲಿಂಗೋದ್ಭವ ರೇವಣಸಿದ್ಧೇಶ್ವರನ ವಿಗ್ರಹವಿದೆ. ಅದೇ ರೀತಿ ಬಲಗಡೆಯ ಗರ್ಭಗೃಹದಲ್ಲಿ ಸೀತಾರಾಮಾಂಜನೆಯ ವಿಗ್ರಹವಿದೆ. ಅದೇ ಎಡಗಡೆಯ ಗರ್ಭಗೃಹದಲ್ಲಿ ಅಕ್ಕಿಬಾಜಿ ನಿಂಗಪ್ಪೊಡೆಯರ ಗದ್ದುಗೆಯಿದೆ. ಈ ನಿಂಗಪ್ಪೊಡೆಯರೇ ಇಲ್ಲಿಗೆ ಬಂದು ಸುಮಾರು ಎರಡು ನೂರು ವರ್ಷಗಳ ಹಿಂದೆ ಬಂದು ಇಲ್ಲಿ "ಹಗೆವು ಪವಾಡ" ಮಾಡಿದರೆಂದು ಇಲ್ಲಿಯ ಒಡೆಯರಾದ ಶ್ರೀ ನಿಂಗಪ್ಪ ರೇವಣ್ಣ ಒಡೆಯರು ಹೇಳುತ್ತಾರೆ. ಇವರು ಇಲ್ಲಿಗೆ ಬಂದು ಸುಮಾರು ೨೧ ದಿವಸ ಹಗೆವುದಲ್ಲಿ ಲಿಂಗಪೂಜೆಯನ್ನು ಮಾಡಿದರು ಎಂದೂ ಹಗೆವುದರ ಮೇಲೆ ಸೊಪ್ಪಿನ ಗಿಡ ಬೆಳೆದಿತ್ತೆಂದೂ ಇವರ ಪವಾಡಕ್ಕೆ ಮೆಚ್ಚಿ ಮೈಸೂರಿನ ದೊರೆ ಕೃಷ್ಣರಾಜ ಒಡೆಯರು ಕಂಚಿನ ಪತ್ರವನ್ನು ನೀಡಿದರುವುದಾಗಿ ಹೇಳುತ್ತಾರೆ. ಇಲ್ಲಿ ರೇವಣಸಿದ್ಧೇಶ್ವರನಿಗೆ ಪ್ರತಿದಿನ ಎರಡು ಬಾರಿ ಪೂಜೆಯನ್ನು ಮಾಡುತ್ತಾರೆ. ವಿಶೇಷವಾಗಿ ಪ್ರತಿವರ್ಷ ಸಂಕ್ರಾಂತಿ ಹಬ್ಬದಂದು ರೇವಣಸಿದ್ಧೇಶ್ವರನ ಪಲ್ಲಕ್ಕಿ ಉತ್ಸವ ನಡೆಯುತ್ತದೆ.

ಕಂದಿಕೆರೆಯ ರೇವಣಸಿದ್ಧೇಶ್ವರ ದೇವಾಲಯ

ಕಂದಿಕೆರೆಯು, ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಬರುವ ಒಂದು ಗ್ರಾಮವಾಗಿದೆ. ಈ ಊರಲ್ಲಿ ಪ್ರಾಚೀನವಾದ ರೇವಣಸಿದ್ಧೇಶ್ವರನ ದೇವಾಲಯವಿದೆ. ಅದೇ ರೀತಿ ಜಡೆಸಿದ್ಧೇಶ್ವರ ಮತ್ತು ಶಾಂತವೀರ ಸ್ವಾಮಿಯ ದೇವಾಲಯಗಳಿವೆ. ಪ್ರಮುಖವಾಗಿ ರೇವಣಸಿದ್ಧೇಶ್ವರನ ದೇವಾಲಯವು ಪ್ರಾಚೀನ ದೇವಾಲಯವಾಗಿದೆ. ಉತ್ತರ ಮತ್ತು ದಕ್ಷಿಣಾಭಿಮುಖವಾಗಿದ್ದು, ಇದು ಗರ್ಭಗುಡಿ ಮತ್ತು ನವರಂಗವನ್ನು ಹೊಂದಿದೆ. ಗರ್ಭಗುಡಿಯಲ್ಲಿ ಸುಮಾರು ಮೂರು ಅಡಿಯಷ್ಟು ಎತ್ತರವಾದ ರೇವಣಸಿದ್ಧೇಶ್ವರನ ಮೂರ್ತಿ ಇದೆ. ಇದು ಲಿಂಗದಿಂದ ಉದ್ಭವವಾದ ರೀತಿಯಲ್ಲಿದೆ. ಈ ದೇವಾಲಯದ ನವರಂಗವು ಎಂಟು ಕಂಬಗಳನ್ನು ಒಳಗೊಂಡಿದೆ. ಗುಡಿಯ ಸುತ್ತಲು ವಿಶಾಲವಾದ ಕಟ್ಟಡವನ್ನು ಕಟ್ಟಿಸಲಾಗಿದೆ. ಈ ಕಟ್ಟಡದ ಬಾಗಿಲಿನ ಮೇಲೆ ನಂದಿಯ ವಿಗ್ರಹವನ್ನು ಕೂರಿಸಲಾಗಿದೆ. ಗುಡಿಯ ಹಿಂಭಾಗಕ್ಕೆ ಎರಡು ನಂದಿ ವಿಗ್ರಹಗಳನ್ನು ಕೂರಿಸಿ ಅವುಗಳ ನಡುವೆ ಶಿವಲಿಂಗವನ್ನು ನಿಲ್ಲಿಸಲಾಗಿದೆ.

ಒಟ್ಟಾರೆ ಸರೂರಿನ ಹಾಲುಮತ ಸಂಪ್ರದಾಯದ ಗುರುಒಡೆಯರ ಪರಂಪರೆಯ ದೇವಾಲಯಗಳು ಕರ್ನಾಟಕದಾದ್ಯಂತ ಸಿಗುತ್ತವೆ. ಅವುಗಳಲ್ಲಿ ಪ್ರಮುಖವಾದ ಕೆಲವು ದೇವಾಲಯಗಳನ್ನು ಮಾತ್ರ ಇಲ್ಲಿ ಚರ್ಚಿಸಲಾಗಿದೆ. ಹೀಗೆ ಮುಂದುವರೆದು ಈ ಸಂಪ್ರದಾಯದ ಗುರುಒಡೆಯರು ಆಂಧ್ರದಲ್ಲಿ ನೆಲೆಸಿದ್ದು, ಅಲ್ಲಿಯೂ ಈ ಪರಂಪರೆಯಾದ ದೇವಾಲಯಗಳು ಕಂಡುಬರುತ್ತವೆ.

ಆಂಧ್ರದಲ್ಲಿ ರೇವಣಸಿದ್ಧೇಶ್ವರ ದೇವಾಲಯಗಳು

ಸರೂರಿನ ಹಾಲುಮತ ಸಂಪ್ರದಾಯದ ಗುರುಒಡೆಯರಿಗೆ ಸಂಬಂಧಿಸಿದಂತೆ ಕರ್ನಾಟಕವನ್ನು ಮೀರಿ ಆಂಧ್ರದಲ್ಲಿಯೂ ಈ ಪರಂಪರೆಯವರು ನೆಲೆಸಿರುವುದು ತಿಳಿದು ಬರುತ್ತದೆ. ಇವರು ಪೂಜಿಸಿಕೊಂಡು ಆರಾಧಿಸುತ್ತಿರುವ ದೈವವಾದ ರೇವಣಸಿದ್ಧನ ದೇವಾಲಯಗಳು ಇಲ್ಲಿಯೂ ಕಂಡುಬರುತ್ತವೆ. ಅದರಲ್ಲೂ ಪ್ರಮುಖವಾಗಿ ಕರ್ನಾಟಕ ಆಂಧ್ರ ಗಡಿನಾಡು ಪರಿಸರದಲ್ಲಿ ದೊರೆತಂತಹ ರೇವಣಸಿದ್ಧನ ದೇವಾಲಯಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಅವುಗಳಲ್ಲಿ ಈ ಪ್ರಮುಖವಾದ ದೇವಾಲಯಗಳು ಈ ಮುಂದಿನಂತಿವೆ.

ಸೀರ್ಪಿ ಕೊಟ್ಟಾಲು ರೇವಣಸಿದ್ಧನ ದೇವಾಲಯ

ಇದು ಅನಂತಪುರಂ ಜಿಲ್ಲೆಯ ಬೆಳಗುಪ್ಪ ಮಂಡಲಕ್ಕೆ ಸೇರಿದ ಪ್ರಾಚೀನ ಗ್ರಾಮವಾಗಿದೆ. ಇದು ಕಲ್ಯಾಣದುರ್ಗದಿಂದ ೩೫ ಕಿ.ಮೀ. ದೂರದಲ್ಲಿದೆ. ಇಲ್ಲಿ ಪ್ರಾಚೀನವಾದ ರೇವಣಸಿದ್ಧನ ದೇವಾಲಯವಿದೆ. ಈ ದೇವಾಲಯವು ಊರಿಂದ ಹೊರಗಿನ ವಿಶಾಲವಾದ ಆವರಣದಲ್ಲಿದೆ. ಇದು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ನವರಂಗ, ಸಭಾಮಂಟಪವನ್ನು ಹೊಂದಿದೆ. ಸುತ್ತಲೂ ಚೌಕಾಕಾರದಲ್ಲಿ ಕಾಂಪೌಂಡು ಕಟ್ಟಲಾಗಿದೆ. ಈ ದೇವಾಲಯದ ಎದುರಿಗೆ ಐದು ಅಡಿಯಷ್ಟು ಎತ್ತರದ ದೀಪಸ್ತಂಭವಿದೆ. ಇದರ ಪಕ್ಕದಲ್ಲಿ ಇತ್ತೀಚೆಗೆ ೧೫ ಅಡಿ ಎತ್ತರದ ದೀಪಸ್ತಂಭವನ್ನು ನಿರ್ಮಿಸಲಾಗಿದೆ. ೨೦೦೬ರಲ್ಲಿ ಈ ದೇವಾಲಯವನ್ನು ನವೀಕರಿಸಲಾಗಿದೆ. ಹೊಸದಾಗಿ ತಂದ ಶಿವಲಿಂಗ ಮತ್ತು ನಂದಿ ವಿಗ್ರಹಗಳನ್ನು ಗರ್ಭಗೃಹದಲ್ಲಿ ನಾಗರ ಹಾವಿನ ಶಿಲ್ಪ, ಎಡಭಾಗದಲ್ಲಿ ಟಗರಿನ ಶಿಲ್ಪವನ್ನು ಗೋಡೆಯಲ್ಲಿ ಕೆತ್ತಲಾಗಿದೆ. ಇದರ ತೆರೆದ ಸಭಾಮಂಟಪವು ಎರಡು ಕಲ್ಲುಕಂಬಗಳನ್ನು ಒಳಗೊಂಡಿದೆ. ಈ ದೇವಾಲಯದ ಜೊತೆಗೆ ಈ ಊರಲ್ಲಿ ಐತಿಹಾಸಿಕವಾಗಿ ವೀರಭದ್ರಸ್ವಾಮಿ ದೇವಾಲಯವಿದೆ. ಇಲ್ಲಿ ಕುರುಬರ ವೀರಮಾಳಮ್ಮನ ಕಲ್ಲಿನ ಗುಡಿಯಿದ್ದು ಬಿದ್ದು ಹೋಗಿದೆ. ವೀರಮಾಳಮ್ಮನ ಶಿಲ್ಪದ ಎದುರಿಗೆ ದೀಪಸ್ತಂಭವಿದೆ. ಅದೇ ರೀತಿ ಈ ದೇವಿ ಕಟ್ಟಿಸಿದ ಕೆರೆಯಿಂದ ಅದಕ್ಕೆ ಕುರುಬೋಳ ಚೆರವು ಎಂದು ಕರೆಯುತ್ತಾರೆ. ಕುರುಬ ಜಂಗಮರು ೧೯೬೦ರಲ್ಲಿ ಬರೆದಿಟ್ಟ ದಾಖಲೆ ಪತ್ರದಲ್ಲಿ ಬರೆದಿರುವಂತೆ "ಸದರಿ ದೇವಾಲಯವನ್ನು ಕಟ್ಟಿಸಿ ಎಂಟು ನೂರು ವರ್ಷಗಳಾಗಿದೆ" ಎಂದು ಅದರಲ್ಲಿ ಉಲ್ಲೇಖದ ದಾಖಲೆ ಸಿಗುತ್ತದೆ.

ಲಕ್ಷ್ಮಂಪಲ್ಲಿಯ ರೇವಣಸಿದ್ಧನ ದೇವಾಲಯ

ಇದು ಅನಂತಪುರ ಜಿಲ್ಲೆಯ ಶೆಟ್ಟೂರು ಮಂಡಲದಿಂದ ೩೦ ಕಿ.ಮೀ. ದೂರವಿದ್ದು, ಕುಂದುರ್ಪಿ ಮಂಡಲಂ(ತಾಲೂಕಿ)ಗೆ ಸೇರಿದೆ. ಇಲ್ಲಿ ಶತಮಾನದಷ್ಟು ಹಳೆಯದಾದ ರೇವಣಸಿದ್ಧನ ದೇವಾಲಯವಿದೆ. ಈ ದೇವಾಲಯವು ಪಶ್ಚಿಮಾಭಿಮುಖವಾಗಿದ್ದು, ಗರ್ಭಗೃಹವನ್ನು ಒಳಗೊಂಡಿದೆ. ಇದರ ಗರ್ಭಗೃಹದಲ್ಲಿ ಉದ್ಭವ ಲಿಂಗವಿದೆ. ಇತ್ತೀಚೆಗೆ ಲಿಂಗದ ಮೇಲೆ ಹುತ್ತ ಬೆಳೆದು ಲಿಂಗವನ್ನು ಕಾಣದಂತೆ ಮುಚ್ಚಿಕೊಂಡಿದೆ. ಆದ್ದರಿಂದ ಗರ್ಭಗೃಹದಿಂದ ಹೊರಗಡೆ ನಿಂತು ಪೂಜೆ ಮಾಡುತ್ತಾರೆ. ಇದು ಹಳೆಯ ದೇವಾಲಯವಾಗಿರುವುದರಿಂದ ಶಿಥಿಲಾವಸ್ಥೆಯಲ್ಲಿದೆ. ಈ ಗುಡಿಯ ಎಡಗಡೆಗೆ ಹಿಂದಿನ ಒಡೆಯರ ಮೂರು ಸಮಾಧಿಗಳಿವೆ. ಈ ದೇವಾಲಯದಲ್ಲಿ ಪ್ರತಿದಿನ ಎರಡು ಬಾರಿ ಪೂಜೆ ಮಾಡುತ್ತಾರೆ. ಶಿವರಾತ್ರಿಯಂದು ವಿಶೇಷ ಪೂಜೆಯನ್ನು ಮಾಡುತ್ತಾರೆ. ಪ್ರತಿಯೊಂದು ಧಾರ್ಮಿಕ ಕಾರ್ಯಗಳು ಒಡೆಯರ ಸಮ್ಮುಖದಲ್ಲಿ ನಡೆಯುತ್ತವೆ.

ರಾಯದುರ್ಗದ ರೇವಣಸಿದ್ಧ ದೇವಾಲಯ

ಇದು ಅನಂತಪುರ ಜಿಲ್ಲೆಗೆ ಸೇರಿದ ಐತಿಹಾಸಿಕ ಮಂಡಲವಿದ್ದು ಇಲ್ಲಿ ಪ್ರಾಚೀನವಾದ ರೇವಣಸಿದ್ಧನ ದೇವಾಲಯವಿದೆ. ಈ ದೇವಾಲಯವು ಊರ ಮಧ್ಯದಲ್ಲಿದೆ. ಮತ್ತೊಂದು ಈ ಹಾಲುಮತಕ್ಕೆ ಸಂಬಂಧಿಸಿದ ಬೀರಪ್ಪನ ದೇವಾಲಯವಿದೆ. ರೇವಣಸಿದ್ಧನ ದೇವಾಲಯವು ಪೂರ್ವಾಭಿಮುಖವಾಗಿದೆ. ಇದು ಗರ್ಭಗೃಹ, ನವರಂಗವನ್ನು ಒಳಗೊಂಡಿದೆ. ಇದರ ಗರ್ಭಗೃಹದಲ್ಲಿ ರೇವಣಸಿದ್ಧನ ಪುರಾತನವಾದ ಮೂರ್ತಿಶಿಲ್ಪವಿದೆ. ಇದರ ಎದುರಿಗೆ ನವರಂಗದಲ್ಲಿ ನಂದಿ ವಿಗ್ರಹವಿದೆ. ಗುಡಿಯ ಹೊರಗಡೆ ಮುಂದೆ ೨೦ ಅಡಿಯಷ್ಟು ಉದ್ದವಾದ ಗರುಡ ಗಂಬವಿದೆ. ಈ ದೇವಾಲಯದ ಸುತ್ತಲೂ ಕಾಂಪೌಂಡು ಕಟ್ಟಲಾಗಿದೆ. ಇಲ್ಲಿ ಪ್ರತಿ ದಿನ ಎರಡು ಸಲ ಪೂಜೆಯನ್ನು ಮಾಡುತ್ತಾರೆ.

ಓಬಳಾಪುರದ ರೇವಣಸಿದ್ಧನ ದೇವಾಲಯ

ಇದು ಡಿ. ಹಿರೇಹಾಳ ಮಂಡಲಕ್ಕೆ ಸೇರಿದ ಗ್ರಾಮವಾಗಿದೆ. ಈ ಊರಲ್ಲಿ ರೇವಣಸಿದ್ಧನ ದೇವಾಲಯವಿದೆ. ಇದನ್ನು ಹತ್ತು ವರ್ಷಗಳ ಹಿಂದೆ ಕಟ್ಟಿಸಲಾಗಿದೆ. ಈ ರೇವಣಸಿದ್ಧೇಶ್ವರ ದೇವಾಲಯವು ದಕ್ಷಿಣಾಭಿಮುಖವಾಗಿದೆ. ಈ ದೇವಾಲಯವು ಗರ್ಭಗೃಹವನ್ನು ಒಳಗೊಂಡಿದ್ದು, ಕೆಳಭಾಗದಲ್ಲಿ ಲಿಂಗಾಕಾರವಾಗಿ ಮೇಲೆ ರೇವಣಿಸಿದ್ಧನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ಗುಡಿಯ ಎದುರಿಗೆ ನಂದಿಯಿದೆ. ಇದರ ಪಕ್ಕದಲ್ಲಿ ಶಿವಲಿಂಗವನ್ನು ಇಡಲಾಗಿದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಅಲ್ಲಿನ ಸುತ್ತಮುತ್ತಲಿರುವ ಹಾಲುಮತ ಸಮುದಾಯದವರು ಭಾಗವಹಿಸಿ ಹಬ್ಬ-ಹರಿದಿನಗಳನ್ನು ಮಾಡುತ್ತಾರೆ. ಕುರುಬರ ಗುರುಒಡೆಯರ ಪರಂಪರೆಯಲ್ಲಿ ಅನುಯಾಯಿಗಳಾದ ಒಡೆಯರ ಸಮ್ಮುಖದಲ್ಲಿ ಪ್ರತಿಯೊಂದು ಧಾರ್ಮಿಕ ಆಚರಣೆಗಳನ್ನು ನೆರವೇರಿಸಿಕೊಡುತ್ತಾರೆ. ಪ್ರತಿದಿನ ಇಲ್ಲಿ ಪೂಜೆ ನಡೆಯುತ್ತಿರುತ್ತದೆ.

ಗೋವಿಂದವಾಡ ರೇವಣಸಿದ್ಧನ ದೇವಾಲಯ

ಗೋವಿಂದವಾಡವು ಬೊಮ್ಮನಹಾಳ್ ಮಂಡಲದಲ್ಲಿ ಬರುವ ಒಂದು ಗ್ರಾಮವಾಗಿದೆ. ಈ ಊರಲ್ಲಿ ಪ್ರಾಚೀನ ಕಾಲದಿಂದಲೂ ಆಚರಣೆಗಳನ್ನು ಮಾಡಿಕೊಂಡು ದೈವಾರಾಧನೆಯನ್ನು ಬೆಳೆಸಿಕೊಂಡು ಬಂದಿರುವ ರೇವಣಸಿದ್ಧನ ದೇವಾಲಯ ಅಥವಾ ಮಠವಿದೆ. ಈ ದೇವಾಲಯವು ಗರ್ಭಗೃಹ ಮತ್ತು ಅಂತರಾಳವನ್ನು ಒಳಗೊಂಡಿದೆ. ಇದರ ಗರ್ಭಗೃಹದಲ್ಲಿ ಇತ್ತೀಚೆಗೆ ಪ್ರತಿಷ್ಠಾಪಿಸಿದ ಶಿವಲಿಂಗ ಅದರ ಮೇಲೆ ಉದ್ಭವವಾದ ರೇವಣಸಿದ್ಧನ ಮೂರ್ತಿಯನ್ನು ನೋಡಬಹುದು. ಇದರ ಎದುರಿಗೆ ನಂದಿ ವಿಗ್ರಹವಿದೆ. ಅಂತರಾಳದ ಬಲಭಾಗದಲ್ಲಿ ಗಣಪತಿಯ ಶಿಲ್ಪ, ಎಡಕ್ಕೆ ನಾಗರ ಶಿಲ್ಪವನ್ನು ಪ್ರತಿಷ್ಠಾಪಿಸಿರುವುದನ್ನು ನೋಡಬಹುದು. ಇದರ ಜೊತೆಗೆ ಒಳಗಡೆ ಮುಳ್ಳಿನ ಪಾದುಕೆಗಳು, ವಿಭೂತಿ ಕಟ್ಟುಗಳನ್ನು ಇಡಲಾಗಿದೆ. ಈ ದೇವಾಲಯದಲ್ಲಿ, ತೆರೆದ ಅಂತರಾಳವಿದ್ದು ನಾಲ್ಕು ಕಂಬಗಳಿಂದ ಕೂಡಿದೆ. ಇದನ್ನು ಪ್ರಸ್ತುತ ಪಂಪಾಪತಿ ಸ್ವಾಮಿಗಳು ಪೂಜೆ ಮಾಡುತ್ತಾರೆ. ಇವರ ಒಡೆಯರ ಸಂತತಿ ಇದ್ದು, ಇದನ್ನು ಅವರ ಅಧೀನದಲ್ಲಿ ಈಗಲೂ ನಡೆಯುತ್ತಿರುವುದು ತಿಳಿದುಬರುತ್ತದೆ. ಈ ಒಡೆಯರ ಮನೆ ಗುಡಿಯ ಪಕ್ಕದಲ್ಲೇ ಇದೆ. ಅವರು ಅದರಲೇ ವಾಸವಾಗಿದ್ದಾರೆ.

ರೇವಣಸಿದ್ಧೇಶ್ವರನ ದೇವಾಲಯಕ್ಕೆ ಬೊಮ್ಮನಹಾಳ ಮಂಡಲದಲ್ಲಿ ವಾಸವಾಗಿರುವ ಹಾಲುಮತ ಸಮುದಾಯದವರು ಬಂದು ಪೂಜೆ ಮಾಡಿಕೊಂಡು ಹೋಗುತ್ತಾರೆ. ಇಲ್ಲಿ ಯಾವುದೇ ರೀತಿಯಲ್ಲಿ ಜಾತ್ರೆಯನ್ನು ಮಾಡುವುದಿಲ್ಲ. ಮುಂಚೆ ಮಾಡುತ್ತಿದ್ದರಂತೆ. ಈಗ ಇಲ್ಲ. ಆದರೆ ಪ್ರತಿದಿನ ಪೂಜೆಯನ್ನು ಪಂಪಾಪತಿ ಒಡೆಯರು ಮಾಡಿಕೊಂಡು ಬರುತ್ತಿದ್ದಾರೆ.

ಚಿಂತಕುಂಟ ರೇವಣಸಿದ್ಧನ ದೇವಾಲಯ

ಇದು ಕರ್ನೂಲ್ ಜಿಲ್ಲೆಯ ಹಾಲಹರವಿ ಮಂಡಲಕ್ಕೆ ಸೇರಿದ ಗ್ರಾಮವಾಗಿದೆ. ಇಲ್ಲಿ ಶತಮಾನಗಳಷ್ಟು ಹಳೆಯದಾದ ಸಿದ್ಧಲಿಂಗಸ್ವಾಮಿಯ ದೇವಾಲಯವಿದ್ದು, ಈಗ ಅದನ್ನು ಕೆಡವಿ ೨೫ ವರ್ಷಗಳ ಹಿಂದೆ ಹೊಸದಾಗಿ ರೇವಣಸಿದ್ಧೇಶ್ವರನ ದೇವಾಲಯವನ್ನು ಕಟ್ಟಿಸಲಾಗಿದೆ. ಈ ದೇವಾಲಯವು ಗರ್ಭಗೃಹ ಮತ್ತು ತೆರೆದ ಸಭಾಮಂಟಪವನ್ನು ಒಳಗೊಂಡಿದೆ.

ಈ ದೇವಾಲಯದ ಗರ್ಭಗೃಹದಲ್ಲಿ ಶಿವಲಿಂಗವಿದೆ. ಅದಕ್ಕೆ ಶಿವಪ್ರತಿಮೆ ಮತ್ತು ನಾಗರ ಎಡೆಯನ್ನು ಜೋಡಿಸಲಾಗಿದೆ. ಅದರ ಜೊತೆಗೆ ಮುಂದೆ ಚಿಕ್ಕ ಗದ್ದುಗೆಯ ಮೇಲೆ ಪಾದುಕೆಗಳಿವೆ. ಬಾಗಿಲ ಮೇಲಿನ ಲಲಾಟದ ಮಧ್ಯೆ ಶಿವಪಾರ್ವತಿಯರು ಸಿಂಹಾಸನದಲ್ಲಿ ಕುಳಿತುಕೊಂಡಿದ್ದಾರೆ. ಎಡಬಲದಲ್ಲಿ ಕುದುರೆಯ ಮೇಲೆ ಕುಳಿತ ವೀರರ ಚಿತ್ರಗಳನ್ನು, ಆರು ಕಂಬಗಳನ್ನು ಒಳಗೊಂಡ ತೆರೆದ ಸಭಾಮಂಟಪವಿದೆ. ಕ್ರಮವಾಗಿ ಚೌಕ, ಅಷ್ಟಮುಖ, ದಿಂಡು ಚೌಕ ಬೋಧಿಗೆಗಳನ್ನು ಒಳಗೊಂಡಿದ್ದ ಈ ದೇವಾಲಯವನ್ನು ಕಾರಣ್ಣನ ದೇವಾಲಯ ಎಂತಲೂ ಕರೆಯುತ್ತಾರೆ.

ಹೀಗೆ ಈ ಪರಂಪರೆಗೆ ಸಂಬಂಧಿಸಿದಂತೆ ಕರ್ನಾಟಕ ಮತ್ತು ಆಂಧ್ರದ ಗಡಿನಾಡು ಪರಿಸರದಲ್ಲಿ ದೊರೆತ ಕೆಲವು ರೇವಣಸಿದ್ಧನ ದೇವಾಲಯಗಳ ವಾಸ್ತುಶಿಲ್ಪವನ್ನು ಗಮನಿಸಲಾಗಿದೆ. ಹಾಗೆಯೇ ಮುಂದುವರೆದು ಈ ರೇವಣಸಿದ್ಧನ ಮೂರ್ತಿಶಿಲ್ಪಗಳನ್ನು ಚರ್ಚಿಸಲಾಗಿದೆ.

ರೇವಣಸಿದ್ಧನ ಮೂರ್ತಿಶಿಲ್ಪಗಳು

ರೇವಣಸಿದ್ಧನ ದೇವಾಲಯ ಕಲೆ ಮತ್ತು ವಾಸ್ತುಶಿಲ್ಪಗಳನ್ನು ಚರ್ಚಿಸುವಾಗ ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರಗಳಲ್ಲಿ ಈತನ ದೇವಾಲಯ ಅಥವಾ ಮಠಗಳು ಕಂಡುಬರುತ್ತವೆ. ಆದರೆ ಈ ರೇವಣಸಿದ್ಧನ ದೇವಾಲಯ ಅಥವಾ ಮಠಗಳಲ್ಲಿ ಉದ್ಭವ ರೇವಣಸಿದ್ಧನ ಮೂರ್ತಿಗಳು ಹೆಚ್ಚಾಗಿ ಕಂಡುಬರುತ್ತವೆ. ಹೀಗಾಗಿ ರೇವಣಸಿದ್ಧನ ನಿಜವಾದ ಮೂರ್ತಿಶಿಲ್ಪಗಳು ಯಾವುವು, ಅವು ಎಲ್ಲೆಲ್ಲಿ ಕಂಡುಬರುತ್ತವೆ ಮತ್ತು ಈ ಮೂರ್ತಿಶಿಲ್ಪಗಳು ಉದ್ಭವ ಶಿಲ್ಪಗಳಾಗಿ ಹುಟ್ಟಿಕೊಂಡಿದ್ದು ಯಾವಾಗ, ಅದರ ಉದ್ದೇಶವೇನು ಎಂಬ ಇತ್ಯಾದಿ ವಿಚಾರಗಳನ್ನು ಕೂಲಂಕುಶವಾಗಿ ಅವಲೋಕಿಸಲಾಗಿದೆ. ರೇವಣಸಿದ್ಧನ ನಿಜ ಮೂರ್ತಿಶಿಲ್ಪಗಳ ನೆಲೆಗಳನ್ನು ಕುರಿತು ಎಫ್.ಟಿ. ಹಳ್ಳಿಕೇರಿ ಅವರು ತಮ್ಮ ಲೇಖನದಲ್ಲಿ ಉಲ್ಲೇಖಿಸಿರುವಂತೆ "ಇಂಗಳೇಶ್ವರ(ಬಿಜಾಪುರ ಜಿಲ್ಲೆ ಬಸವನ ಬಾಗೇವಾಡಿ ತಾಲೂಕು), ಕನ್ಹೇರಿ(ಮಹಾರಾಷ್ಟ್ರ ರಾಜ್ಯದ ಕೊಲ್ಲಾಪುರ ಜಿಲ್ಲೆ), ರೇಣಾವಿ(ಮಹಾರಾಷ್ಟ್ರ ಸಾಂಗಲಿ ಜಿಲ್ಲೆಯ ಖಾನಾಪುರ ತಾಲೂಕು), ಮಂಗಳವೇಢೆ(ಮಹಾರಾಷ್ಟ್ರದ ಸೊಲ್ಲಾಪುರ ತಾಲೂಕು), ಮೇಲಣಗವಿ ಶಿವಗಂಗೆ ಬೆಟ್ಟ(ಬೆಂಗಳೂರು ಗ್ರಾಮಂತರ ಜಿಲ್ಲೆ, ನೆಲಮಂಗಲ ತಾಲೂಕು), ಹುಲಿಬೆಟ್ಟ (ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕು), ಕಾಮಧೇನು(ಧಾರವಾಡ ಜಿಲ್ಲೆ ಕಲಘಟಗಿ ತಾಲೂಕು), ಹುಲ್ಲೂರು(ಚಿತ್ರದುರ್ಗ ಜಿಲ್ಲೆ ಮತ್ತು ತಾಲೂಕು) ಮೊದಲಾದ ಸ್ಥಳಗಳಲ್ಲಿ ವಿಶಿಷ್ಟವಾದ ರೇವಣಸಿದ್ಧೇಶ್ವರ ಮೂರ್ತಿಶಿಲ್ಪಗಳಿವೆ" ಎಂದು ಹೇಳುತ್ತಾರೆ. ಈ ಎಲ್ಲ ರೇವಣಸಿದ್ಧನ ಶಿಲ್ಪಗಳು ೧೩ನೆಯ ಶತಮಾನದಷ್ಟು ಪ್ರಾಚೀನವಾಗಿವೆ. ಏಕೆಂದರೆ ಈ ಶತಮಾನದ ಆಜು-ಬಾಜಲ್ಲಿ ಸಿಕ್ಕಿರುವಂತಹ ರೇವಣಸಿದ್ಧನ ಶಿಲ್ಪಗಳನ್ನು, ನಿಜವಾದ ಮೂರ್ತಿಶಿಲ್ಪಗಳೆಂದು ಕರೆದಿರಬಹುದು. ಏಕೆಂದರೆ ಸಾಮಾನ್ಯವಾಗಿ ಈ ಮೂರ್ತಿಶಿಲ್ಪಗಳ ಲಕ್ಷಣಗಳು ರೇವಣಸಿದ್ಧನು ಧ್ಯಾನಸ್ಥನಾಗಿ ಕುಳಿತಿರುವ ಭಂಗಿಯಲ್ಲಿರುತ್ತಾನೆ. ಕೋರೆ ಮೀಸೆ, ಗಡ್ಡದಾರಿ, ಕೊರಳಿಗೆ ರುದ್ರಾಕ್ಷಿ ಮಾಲೆ ಧರಿಸಿರುತ್ತಾನೆ. ಕೈಗೆ ಕಗಡಗ, ಕಾಲಿಗೆ ಕಾಲ್ಗಡಗಗಳನ್ನು ಹಾಕಿರುತ್ತಾನೆ. ಮೈಮೇಲೆ ಯಾವುದೇ ಬಟ್ಟೆಯನ್ನು ಹಾಕಿರುವುದಿಲ್ಲ. ಇದು ನಿಜ ರೇವಣಸಿದ್ಧನ ಮೂರ್ತಿಶಿಲ್ಪದ ಲಕ್ಷಣವಾಗಿದೆ. ಆದರೆ ಈ ಸಂದರ್ಭದಲ್ಲಿ ಯಾವುದೇ ರೀತಿಯಲ್ಲೂ ರೇವಣಸಿದ್ಧನ ಉದ್ಭವಲಿಂಗದ ಮೂರ್ತಿಗಳು ಕಂಡುಬರುವುದಿಲ್ಲ. ಇವು ಇತ್ತೀಚಿನ ಸುಮಾರು ೧೯ನೇ ಶತಮಾನದ ನಂತರದ ಶಿಲ್ಪಗಳಾಗಿವೆ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.

ಈ ಹಿನ್ನೆಲೆಯಲ್ಲಿ ಎಂ.ಎಂ. ಕಲಬುರ್ಗಿ ಅವರು ಹೇಳುವಂತೆ "ನಿಜರೇವಣಸಿದ್ಧನ ಶಿಲ್ಪಗಳು ಸುಮಾರು ೧೩ನೇ ಶತಮಾನದಿಂದಲೂ ಸಿಗುತ್ತವೆ. ಆದರೆ ಕೊಲ್ಲಿಪಾಕಿ ಶಿವಲಿಂಗದಲ್ಲಿ

ಉದ್ಭವವಾದಂತೆ ವಿನ್ಯಾಸಗೊಂಡಿರುವ ಕೃತಕ ರೇವಣಾಚಾರ್ಯನ ಪ್ರಾಚೀನ ಶಿಲ್ಪ ಒಂದೂ ಸಿಗುವುದಿಲ್ಲ. ಬಹುಶಃ ಪಂಚಾಚಾರ್ಯರೂ, ಅವರ ಅನುಯಾಯಿಗಳು ೧೯ನೆಯ ಶತಮಾನದಲ್ಲಿ ಮುದ್ರಿತ ಪುಸ್ತಕಗಳ ಮೂಲಕ ಈ ಚಿತ್ರವನ್ನು ಪ್ರಚಾರಕ್ಕೆ ತಂದು ೨೦ನೆಯ ಶತಮಾನದಲ್ಲಿ ಇಂಡಿ, ಸರೂರು ಮೊದಲಾದ ಗ್ರಾಮಗಳಲ್ಲಿಯ ಹಳೆಯ ದೇವಾಲಯಗಳಲ್ಲಿ ಹೊಸ ಬಿಳಿಯ ಕಲ್ಲಿನ ಶಿಲ್ಪವನ್ನು ಸ್ಥಾಪಿಸುತ್ತ ನಡೆದಿದ್ದಾರೆ. ಹೀಗಾಗಿ ನಿಜ ರೇವಣಸಿದ್ಧನ ಶಿಲ್ಪ ೧೩ನೆಯ ಶತಮಾನದಷ್ಟು ಪ್ರಾಚೀನ, ಕೃತಕ ರೇವಣಾಚಾರ್ಯನ ಶಿಲ್ಪ ೧೯–೨೦ನೆಯ ಶತಮಾನದಷ್ಟು ಆಧುನಿಕವೆಂದು ಹೇಳಬಹುದು"[೧೦] ಎಂಬುದಾಗಿ ತಿಳಿಸಿದ್ದಾರೆ.

ಹೀಗೆ ನಿಜ ರೇವಣಸಿದ್ಧನ ಮೂರ್ತಿಶಿಲ್ಪಗಳನ್ನು ಹೊಂದಿರುವ ದೇವಾಲಯ ಅಥವಾ ಮಠಗಳು ಸಾಕಷ್ಟು ಕರ್ನಾಟಕದಲ್ಲಿ ಕಂಡುಬರುತ್ತವೆ. ಅವುಗಳನ್ನು ಈ ಮುಂದಿನಂತೆ ಗುರುತಿಸಲಾಗಿದೆ.

ಇಂಗಳೇಶ್ವರ: ಇದು ರೇವಣಸಿದ್ಧನ ನಿಜ ಮೂರ್ತಿಶಿಲ್ಪಗಳ ನೆಲೆಗಳಲ್ಲಿ ಒಂದಾಗಿದೆ. ಇದು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನಲ್ಲಿ ಬರುತ್ತದೆ. ಇಲ್ಲಿ ದೊರೆಯುವ ರೇವಣಸಿದ್ಧನ ಗುಹಾಂತರ ದೇವಾಲಯದಲ್ಲಿ ಗುಹೆಯ ಒಳಗಡೆ ಕರೆ ಕಲ್ಲಿನ ಬಂಡೆಯ ಮೇಲಿನ ರೇವಣಸಿದ್ಧನನ್ನು ಕಾಣಬಹುದು. ಕೋರೆಮೀಸೆ, ಗಡ್ಡಧಾರಿ, ಜಟಾಧಾರಿ, ರೇವಣಸಿದ್ಧರ ಮೂರ್ತಿ ಇಲ್ಲಿದೆ. "ಪದ್ಮಾಸನದಲ್ಲಿ ಕುಳಿತ, ನಾಲ್ಕು ಅಡಿ ಎತ್ತರದ ಮತ್ತು ಮೂರಡಿ ಕಪ್ಪು ಶಿಲೆಯ ಬೃಹತ್ ಮೂರ್ತಿಯಿದ್ದೂ, ತಲೆಗೆ ಕಿರೀಟವಿದ್ದು, ಮೂರ್ತಿಯ ಮೇಲೆ ಏಳು ಹೆಡೆಯ ಸರ್ಪ ರಕ್ಷಣೆಗಿದೆ. ಎರಡು ಹಸ್ತಗಳು ಮೊಳಕಾಲ ಮೇಲೆ ಇದ್ದು, ಜಪ ಭಂಗಿಯಲ್ಲಿದೆ. ಕೈಗೆ ಕೈಕಡಗ ಕಾಲಿಗೆ ಕಾಲ್ಗಡಗಗಳಿವೆ. ಮೈಮೇಲೆ ಯಾವುದೇ ಬಟ್ಟೆಗಳಿಲ್ಲ. ಕೊರಳಿಗೆ ಆಧುನಿಕ ಕರಡಿಗೆ ಇದೆ."[೧೧] ಹೀಗೆ ಇದೇ ಲಕ್ಷಣಗಳನ್ನು ಹೊಂದಿದ ರೇವಣಸಿದ್ಧನ ಪ್ರಾಚೀನ ಮೂರ್ತಿ ಶಿಲ್ಪವು ಹುಲ್ಲೂರಿನಲ್ಲಿದೆ.

ಹುಲ್ಲೂರು: ಇದು ಚಿತ್ರದುರ್ಗ ಜಿಲ್ಲೆ ಮತ್ತು ತಾಲೂಕಿನಲ್ಲಿ ಕಂಡು ಬರುತ್ತದೆ. ಈ ದೇವಾಲಯದ ಗರ್ಭಗೃಹದಲ್ಲಿ ಕಣಶಿಲೆಯಲ್ಲಿ ಕಡೆಯಲಾದ ಸಿದ್ಧಪ್ಪನ ಮೂರ್ತಿಶಿಲ್ಪವಿದೆ. ಕರಂಡ ಮುಕುಟಧಾರಿಯಾದ ಸಿದ್ಧಪ್ಪನು ಪದ್ಮಾಸನದಲ್ಲಿ ಕುಳಿತಿದ್ದಾನೆ. ನಾಲ್ಕು ಕೈಗಳನ್ನು ಹೊಂದಿದ್ದು, ಮೇಲಿನ ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಉದ್ದನೆಯ ದಂಡವಿದೆ. ಕೆಳಗಿನ ಬಲಗೈಯು ಅಭಯಮುದ್ರೆ ಮತ್ತು ಜಪಮಾಲೆಯಿದ್ದು, ಎಡಗೈಯಲ್ಲಿ ಸ್ಥಾವರ ಲಿಂಗವನ್ನು ಹಿಡಿದಿದ್ದಾನೆ. ತಲೆಯ ಮೇಲೆ ಕಿರೀಟಧರಿಸಿದ್ದಾನೆ. ಕೊರಳು ಮತ್ತು ಕೈಗಳಲ್ಲಿ ರುದ್ರಾಕ್ಷಿ ಮಾಲೆಯನ್ನು ಧರಿಸಿದ್ದಾನೆ. ಭುಜದಲ್ಲಿ ಭುಜಕೀರ್ತಿಗಲಿವೆ. ಹೀಗೆ ಈ ಎಲ್ಲ ಲಕ್ಷಣಗಳನ್ನು ಹೊಂದಿದ ಸುಮಾರು ೧೩ನೆಯ ಶತಮಾನದಲ್ಲಿ ದೊರೆಯುವ ರೇವಣಸಿದ್ಧನ ಮೂರ್ತಿಶಿಲ್ಪವೇ ಪ್ರಾಚೀನವಾದದ್ದು ಎಂದು ಕರೆಯಲು ಸಾಧ್ಯವಾಗಿದೆ. ಏಕೆಂದರೆ ರೇವಣಸಿದ್ಧನ ಲಿಂಗೋದ್ಭವದ ಶಿಲ್ಪಗಳು ಕಂಡುಬರುವುದು ಇತ್ತೀಚೆಗೆ.

ಅಂದರೆ ಹರಿಹರನಿಂದ ಆರಂಭವಾಗುತ್ತದೆ. ಇದಕ್ಕೂ ಮೊದಲು ವಚನಕಾರ್ತಿಯಾದ ಅಕ್ಕನಾಗಮ್ಮನ ಒಂದು ವಚನದಲ್ಲಿ 'ಲಿಂಗದಿಂದುದಯವಾದಾತ ರೇವಣಸಿದ್ಧಯ್ಯ' ಎಂಬ ಸಾಲಿದೆ. ಈ ವಚನ ನಿಜವಾದುದಾದರೆ, ಹರಿಹರನಿಗಿಂತ ಮೊದಲೇ ರೇವಣಸಿದ್ಧನ ಬಗೆಗೆ ಉಲ್ಲೇಖ ಮಾಡಿದವಳು ಅಕ್ಕನಾಗಮ್ಮನೇ ಆಗುತ್ತಾಳೆ. ಹಾಗೆಯೇ ಈ ವಚನಕಾರರ ಕಾಲಕ್ಕೆ ರೇವಣಸಿದ್ಧರು ಪ್ರಸಿದ್ಧವಾಗಿರುವ ಸಾಧ್ಯತೆಯೂ ಇದೆ. ಆದರೆ ಲಿಂಗೋದ್ಭವದ ರೇವಣಸಿದ್ಧನ ಮೂರ್ತಿಯು ಇತ್ತೀಚಿನ ದಿನಮಾನಗಳಲ್ಲಿ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಅಕ್ಕನಾಗಮ್ಮಳನ್ನು ರೇವಣಸಿದ್ಧನೊಂದಿಗೆ ತಳಕು ಹಾಕುವುದು ಕಷ್ಟಸಾಧ್ಯ.

ಅಡಿಟಿಪ್ಪಣಿಗಳು

೧. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಸನ್ಸ್, ಸಂಪುಟ ೧೫, ಪು. ೨೦೨

೨. ಸಿದ್ಧಲಿಂಗಯ್ಯಸ್ವಾಮಿ –೫೨, ಸಿಂದ್ವಾಳ.

೩. ಚನ್ನಯ್ಯ ಗುರುವಿನ –೫೦, ಗೋಸ್ಬಾಳ.

೪. ಕುರುಬರ ಗುರುಒಡೆಯರು: ಸಾಂಸ್ಕೃತಿಕ ಅಧ್ಯಯನ, ಪು. ೧೧೬

೫. ಕರ್ನಾಟಕ ಪಾಳೆಯಗಾರರ ನ್ಯಾಯಾಡಳಿತ, ಪು. ೧೩೪

೬. ರೇವಣಸಿದ್ಧ ಪರಂಪರೆ, ಪು. ೭೪

೭. ಶಾಂತಪ್ಪ ಒಡೆಯರು –೬೫, ಚಿಕ್ಕನಾಯಕನಹಳ್ಳಿ.

೮. ರೇವಣಸಿದ್ಧ ಪರಂಪರೆ, ಪು. ೨೧೪.

೯. ಹಾಲುಮತ ಸಂಸ್ಕೃತಿ–೧, ಪು. ೪೦

೧೦. ರೇವಣಸಿದ್ಧನ ಚರಿತ್ರೆ: ಎರಡು ಸಂಪ್ರದಾಯಗಳು, ಲಿಂಗಾಯತ–೩–೧೨, ಪು. ೭

೧೧. ಕುರುಬರ ಗುರು ರೇವಣಸಿದ್ಧ, ಪು. ೧೦೭

ಅಧ್ಯಾಯ ಎಂಟು

ಸಮಾರೋಪ

ಅಧ್ಯಾಯ ಎಂಟು

ಸಮಾರೋಪ

ಭಾರತದ ಮೂಲನಿವಾಸಿಗಳಲ್ಲಿ ಕುರುಬ ಸಮುದಾಯವು ಒಂದಾಗಿದೆ. ಆದಿಮ ಕಾಲದಿಂದಲೂ ಇವರು ಕುರಿ ಸಾಕಣಿಕೆಯನ್ನು ತಮ್ಮ ಕುಲಕಸುಬನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಜೊತೆಗೆ ಕಂಬಳಿನೇಯ್ಗೆ ಮತ್ತು ಕೃಷಿಯನ್ನು ಉಪವೃತ್ತಿಯಾಗಿ ಮಾಡಿಕೊಂಡಿದ್ದಾರೆ. ಈ ಸಮುದಾಯವು ಜಾನಪದೀಯವಾಗಿ ವೈವಿಧ್ಯಮಯವಾದ ಸಂಸ್ಕೃತಿಯನ್ನು ಹೊಂದಿದ್ದು, ತನ್ನದೇ ಆದ ನಂಬಿಕೆ, ಆಚರಣೆ ಮತ್ತು ಸಂಪ್ರದಾಯಗಳನ್ನು ಹೊಂದಿದ್ದು, ಇತರೆ ಸಮುದಾಯಗಳಿಗಿಂತ ಭಿನ್ನತೆಯನ್ನು ಹೊಂದಿದೆ. ಹೀಗೆ ಸಾಂಸ್ಕೃತಿಕ ಪರಂಪರೆ ಇರುವ ಈ ಸಮುದಾಯವನ್ನು ಕುರಿತು ಈಗಾಗಲೇ ಹಲವು ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಅಧ್ಯಯನದಲ್ಲಿ ಕಂಡುಬಂದಂತೆ ಕುರುಬ ಸಮುದಾಯವು ಕುಲ, ಬಳ್ಳಿ ಮತ್ತು ಬೆಡಗುಗಳ ವಿಚಾರದಲ್ಲಿ ಸಾಂಸ್ಕೃತಿಕ ಬದುಕು ಅನಾವರಣ ಗೊಂಡಿರುವುದನ್ನು ತಿಳಿಯಬಹುದು.

ಗುರುಒಡೆಯರ ಪರಂಪರೆಯು ಕುರುಬ ಸಮುದಾಯದಲ್ಲಿ ವಿಶಿಷ್ಟವಾಗಿ ಕಂಡುಬರುತ್ತದೆ. ಭಾರತದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕಂಡುಬರುವ ಗುರುಮನೆ ಮತ್ತು ಕುಲಗುರುಗಳಂತೆ ಹಾಲುಮತ ಸಮುದಾಯದಲ್ಲಿ ಗುರುಒಡೆಯರ ಪರಂಪರೆಯು ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ. ರೇವಣಸಿದ್ಧೇಶ್ವರ ಕುಲಗುರುಪರಂಪರೆಯು ಕುರುಬ ಸಮುದಾಯದಲ್ಲಿ ತುಂಬಾ ಮಹತ್ವವಾದದ್ದು. ೧೨ನೇ ಶತಮಾನದ ಧಾರ್ಮಿಕ, ಸಾಮಾಜಿಕ ಸಂಘರ್ಷದ ಸಂದರ್ಭದಲ್ಲಿ ರೇವಣಸಿದ್ಧೇಶ್ವರ ಕುಲಗುರುಪರಂಪರೆಯು ಹುಟ್ಟಿಕೊಂಡಿತು ಎನ್ನಲಾಗುತ್ತದೆ. ರೇವಣಸಿದ್ಧೇಶ್ವರನು ಮೂಲತಃ ಸರೂರಿನಲ್ಲಿನ ಕುರುಬರ ಶಾಂತಮುತ್ತಯ್ಯನಿಗೆ ಲಿಂಗದೀಕ್ಷೆಯನ್ನು ನೀಡುವುದರ ಮುಖಾಂತರ 'ಒಡೆಯ' ಎಂಬ ಪರಂಪರೆಯನ್ನು ಹುಟ್ಟಿಹಾಕಿ ಮತ್ತು ಕುರುಬ ಕುಲಕ್ಕೆ ಗುರುವರ್ಗವನ್ನು ನೇಮಿಸಿ ಈ ಸಮುದಾಯದ ಧಾರ್ಮಿಕ ಪರಂಪರೆಗೆ ತಳಪಾಯವನ್ನು ಹಾಕಿಕೊಟ್ಟಿದ್ದಾನೆ. ಈ

[illegible]

[illegible]

[illegible]

ಹಿನ್ನೆಲೆಯಲ್ಲಿ ಸರೂರು ಶಾಂತಮುತ್ತಯ್ಯನೇ ಕುರುಬರ ಮೂಲ ಕುಲಗುರುಗಳಾಗಿ ಕಂಡುಬರುತ್ತಾರೆ. ಈ ಗುರುಗಳ ಹಾದಿಯಲ್ಲೇ ಸಮುದಾಯದ ಗುರುಒಡೆಯರ ಪರಂಪರೆ ಬೆಳೆದುಬಂದಿದೆ ಎನ್ನುವುದನ್ನು ಎಂ.ಎಂ. ಕಲಬುರ್ಗಿ, ಸಿ.ಕೆ. ಪರಶುರಾಮಯ್ಯ, ವೈ.ಸಿ. ಭಾನುಮತಿ ಹಾಗೂ ಎಫ್.ಟಿ. ಹಳ್ಳಿಕೇರಿ ಮೊದಲಾದವರು ಗುರುತಿಸಿದ್ದಾರೆ. ಈ ದೃಷ್ಟಿಯಲ್ಲಿ ಸರೂರ ಸಂಪ್ರದಾಯದ ಗುರುಒಡೆಯರ ಪರಂಪರೆಯನ್ನು ಗುರುತಿಸಿ ಅವರ ಒಟ್ಟಾರೆ ಸಾಂಸ್ಕೃತಿಕ ಬದುಕಿನ ಕ್ರಮವನ್ನು ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಲು ಸಾಧ್ಯವಾಗಿದೆ. ಈಗಾಗಲೇ ಈ ಗುರುಪರಂಪರೆಯ ಬಗ್ಗೆ ಕೆಲವು ಅಧ್ಯಯನಗಳು ನಡೆದಿವೆ. ಆದರೆ ಸರೂರ ಸಂಪ್ರದಾಯದ ಗುರುಒಡೆಯರ ಬಗ್ಗೆ ಹೆಚ್ಚಾಗಿ ಅಧ್ಯಯನಗಳು ನಡೆದಿರುವುದಿಲ್ಲ. ಏಕೆಂದರೆ ಈ ಸಂಪ್ರದಾಯದವರು ಕರ್ನಾಟಕವೂ ಸೇರಿದಂತೆ ಮಹಾರಾಷ್ಟ್ರ, ತಮಿಳುನಾಡು ಹಾಗೂ ಆಂಧ್ರಪ್ರದೇಶಗಳಲ್ಲಿ ಹರಡಿಕೊಂಡಿರುವುದು ಮಹತ್ವದ ಸಂಗತಿಯಾಗಿದೆ. ಹೀಗಾಗಿ ಪ್ರಸ್ತುತ ಸರೂರ ಹಾಲುಮತ ಸಂಪ್ರದಾಯ ಸಾಂಸ್ಕೃತಿಕ ಅಧ್ಯಯನ ಎಂಬ ಶೀರ್ಷಿಕೆಯನ್ನು ಇಟ್ಟುಕೊಂಡು ಈ ಮಹಾಪ್ರಬಂಧವನ್ನು ಸಿದ್ಧಗೊಳಿಸಲಾಗಿದೆ.

ಸರೂರ ಸಂಪ್ರದಾಯವೆಂದೇ ಹೇಳಿಕೊಂಡು ಕರ್ನಾಟಕ, ಆಂಧ್ರದಲ್ಲಿ ಇವರ ನೆಲೆಗಳನ್ನು ಭೌಗೋಳಿಕವಾಗಿ ಗುರುತಿಸಲಾಗುತ್ತದೆ. ಅವರು ಪಾರಂಪರಿಕವಾಗಿ ಆಚರಿಸಿಕೊಂಡು ಬರುತ್ತಿರುವ ಹಬ್ಬ, ಉತ್ಸವ, ಜಾತ್ರೆ, ಹೇಳಿಕೆಗಳು ಹೀಗೆ ಈ ಎಲ್ಲಾ ಸಾಂಪ್ರದಾಯಿಕ ಆಚರಣೆಗಳಲ್ಲಿ ಗುರುಒಡೆಯರ ಪಾತ್ರವು ಪ್ರಮುಖವಾಗಿರುತ್ತದೆ. ಅವರ ಜೀವನ ಕ್ರಮ ಹಾಗೂ ಆಚಾರ ವಿಚಾರಗಳಲ್ಲಿ ಒಡೇರಮ್ಮನಿಗೆ ನೀಡಿದ ಸ್ಥಾನಮಾನವೇನು ಎಂಬುದನ್ನು ಮೌಖಿಕ ಪರಂಪರೆಯನ್ನು ಒಳಗೊಂಡಂತೆ ಈ ಎಲ್ಲ ವಿಚಾರಗಳನ್ನು ಆಧುನಿಕ ಸಂದರ್ಭದಲ್ಲಿಟ್ಟು ವಿವರಿಸಿಕೊಳ್ಳುವ ಅವಕಾಶವಿದೆ. ಹೀಗಾಗಿ ಈ ಪ್ರದೇಶದಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡು ಮಾಹಿತಿ ಸಂಗ್ರಹಿಸಿ, ಪ್ರಾಥಮಿಕ ಆಕರಗಳನ್ನು ಮತ್ತು ಪೂರಕ ಆಕರಗಳನ್ನು ಬಳಸಿಕೊಂಡು ವಿವರಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹೀಗೆ ಕುರುಬರಲ್ಲಿ ವಿಶಿಷ್ಟವಾಗಿ ಗುರುತಿಸಿಕೊಂಡು ಬಂದಿರುವ ಗುರುಒಡೆಯರ ಪರಂಪರೆಯನ್ನು ಕರ್ನಾಟಕದಾದ್ಯಂತ ಮತ್ತು ಆಂಧ್ರದ ಗಡಿಭಾಗಗಳಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡು ಸಂಗ್ರಹಿಸಿದ ಮಾಹಿತಿಯನ್ನು ಮತ್ತು ಆನುಷಂಗಿಕ ಮಾಹಿತಿಯೊಂದಿಗೆ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೮.೧ ಫಲಿತಗಳು

"ಸರೂರ ಹಾಲುಮತ ಸಂಪ್ರದಾಯ: ಸಾಂಸ್ಕೃತಿಕ ಅಧ್ಯಯನ" ಎಂಬ ವಿಷಯವನ್ನು ಕುರಿತು ಸಂಶೋಧನೆಗೆ ಆಯ್ಕೆ ಮಾಡಿಕೊಂಡಿದ್ದು, ಪ್ರಸ್ತುತ ಸಂಶೋಧನ ವಿಷಯದಲ್ಲಿ ಕಂಡುಕೊಂಡ ಫಲಿತಗಳನ್ನು ಹೀಗೆ ಸಂಗ್ರಹಿಸಿ ಕೊಡಲಾಗಿದೆ.

* ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಕಂಡುಬರುವ ಸರೂರು ಗ್ರಾಮವು ರೇವಣಸಿದ್ಧನ ಮೂಲ ಗುರುಪೀಠ ಅಥವಾ ಸಾಂಸ್ಕೃತಿಕ ಕೇಂದ್ರವಾಗಿದೆ. ಈ ಸರೂರು ಗ್ರಾಮದಲ್ಲಿ ರೇವಣಸಿದ್ಧರು ಶಿವಭಕ್ತನಾದ ಕುರುಬ ಸಮುದಾಯದ ಶಾಂತಮುತ್ತಯ್ಯನಿಗೆ ದೀಕ್ಷೆಯನ್ನು ನೀಡಿ, ಈತನಿಗೆ ಗುರುಕಂಕಣವನ್ನು ಕಟ್ಟಿ ಕುರುಬ ಕುಲಕ್ಕೆ ಒಡೆಯನನ್ನಾಗಿ ಮಾಡಿರುವುದು ಈ ಗ್ರಾಮದ ಚಾರಿತ್ರಿಕ ವೈಶಿಷ್ಟ್ಯತೆಯಾಗಿ ಕಂಡುಬರುತ್ತದೆ.
* ಪ್ರಸ್ತುತ ಅಧ್ಯಯನದ ಕೇಂದ್ರ ಸ್ಥಾನವಾಗಿರುವ ಸರೂರು ಗ್ರಾಮದ ಸ್ಥಳನಾಮವು ತನ್ನದೆ ಆದ ಚಾರಿತ್ರಿಕ ಹಾಗೂ ಪೌರಾಣಿಕ ಹಿನ್ನೆಲೆಯನ್ನು ಒಳಗೊಂಡಿದೆ. ಈ ಗ್ರಾಮಕ್ಕೆ ಮೊದಲು ಕಲ್ಲಿನಕೆರೆ ಎಂಬ ಹೆಸರಿದ್ದು, ಅನಂತರದಲ್ಲಿ ರೇವಣಸಿದ್ಧರು ಶಾಂತಮುತ್ತಯ್ಯನಿಗೆ ದೀಕ್ಷೆಯನ್ನು ಕೊಡುವ ಸಂದರ್ಭದಲ್ಲಿ ಕೈಲಾಸದಿಂದ ಕರಿಮಲ್ಲಿಗೆಯ ಸರ ಸುರಿದಿರುವುದರಿಂದ 'ಸರವೂರು' ಎಂಬ ಹೆಸರು ಬರಲು ಕಾರಣವಾಯಿತು ಎಂದು ಅಲ್ಲಿನ ಸ್ಥಳ ಪುರಾಣಗಳು ಹೇಳುತ್ತವೆ. ಆದರೆ ಅಲ್ಲಿನ ಕುರುಹುಗಳ ಆಧಾರದಿಂದ ಗಮನಿಸುವುದಾದರೆ ಸರೋವರ ಇರುವ ಊರು ಸರವೂರು>ಸರೂರು ಎಂದಾಗಿದೆ. ಈ ಗ್ರಾಮದ ಸಮೀಪದಲ್ಲಿಯೇ ದೊಡ್ಡ ಹಳ್ಳವಿದೆ. ಅದು ಬಹುಕಾಲದ ಹಿಂದೆ ಕೃಷ್ಣಾ ನದಿಯ ಚಿಕ್ಕ ಶಾಖೆಯಾಗಿತ್ತೆಂದು, ಊರ ಪಕ್ಕದಲ್ಲಿರುವ ಗುಡ್ಡವು ನೀರಿನಲ್ಲಿ ನಿಂತಿರುವುದರಿಂದ ಅದಕ್ಕೆ ತೊಯ್ದುಗುಡ್ಡವೆಂಬ ಹೆಸರು ಬಂದಿತೆಂದು ಇತಿಹಾಸದ ಕುರುಹುಗಳುಂಟು. ಈ ಹಳ್ಳಕ್ಕೆ ಕಟ್ಟಿದ ಅಗಳೀಕೆರೆಯಿಂದ ನೀರಾವರಿ ನಡೆಯುತ್ತಿದೆಯೆಂದು ಸರೂರ ಶಾಸನ(೧೨೫೫) ಹೇಳುತ್ತದೆ. ಇಲ್ಲಿ ಕಂಡುಬರುವ ಐತಿಹ್ಯ, ಪುರಾಣ, ಶಾಸನ ಹಾಗೂ ಚಾರಿತ್ರಿಕ ದಾಖಲೆಗಳನ್ನು ಗಮನಿಸಿದಾಗ ಇಲ್ಲಿ ಹರಿಯುತ್ತಿರುವ ಹಳ್ಳವನ್ನು ಸರೋವರ ಎಂಬುದಾಗಿ ಕರೆಯಲಾಗಿದ್ದು, ಇದರ ಅನ್ವರ್ಥ ರೂಪವಾಗಿ ಈ ಗ್ರಾಮವನ್ನು ಸರೂರು ಎಂದು ಕರೆದಿರುವ ಸಾಧ್ಯತೆಗಳಿವೆ. ನೀರಾವರಿಯ ಉಪಯೋಗಕ್ಕೆಂದೆ ಕಲ್ಲಿನಿಂದ ಕಟ್ಟಿರುವ ಕೆರೆಯ ಕಾರಣದಿಂದ ಕಲ್ಲಿನಕೆರೆ ಎಂಬ ಗ್ರಾಮವು ನಂತರದಲ್ಲಿ ಸರೋವರವನ್ನು ಪ್ರತಿನಿಧಿಸುವ ಸರೂರಾಗಿ ರೂಪಾಂತರ ಹೊಂದಿರುವ ಸಾಧ್ಯತೆ ಇದೆ.
* ಸರೂರು ಹಾಲುಮತ ಸಂಪ್ರದಾಯದ ಗುರುಒಡೆಯರ ಪ್ರಾಚೀನತೆ ಮತ್ತು ವೈಶಿಷ್ಟ್ಯತೆಯನ್ನು ತಿಳಿಯಲು ಪ್ರಮುಖವಾಗಿ 'ತಗರ ಪವಾಡ ಹಾಗೂ ಸಿದ್ಧಮಂಕ ಚರಿತೆ' ಎಂಬ ಎರಡು ಕಾವ್ಯಗಳು ದೊರೆಯುತ್ತವೆ. ಇವು ಒಂದೇ ಕಾಲಘಟ್ಟದಲ್ಲಿದ್ದು, ಒಂದೇ ವಸ್ತುವನ್ನು ಆಧಾರವಾಗಿಟ್ಟುಕೊಂಡು ವಿಭಿನ್ನವಾದ ಸನ್ನಿವೇಶಗಳ ಮೂಲಕ ಗುರುತಿಸಿಕೊಂಡಿವೆ. ಅದು ಕಲ್ಯಾಣ ಪಟ್ಟಣದಲ್ಲಿರುವ ಕುರುಬರು ಹಾಲಕಂಬಿಯ ಮೇಲೆ ಸತ್ತ ಕುರಿ ಮಾಂಸವನ್ನು ಊರೊಳಗೆ ತಂದು ಮಾರಿದ ಪರಿಣಾಮದಿಂದ ಅಲ್ಲಿನ ಶರಣರು ಕುರುಬರನ್ನು ರಟ್ಟಮತದವರೆಂದು

ಪರಿಗಣಿಸಿ ಕಲ್ಯಾಣದಿಂದ ಏಳುಕೇರಿಗಳ(ಬೇಲಿಯಿಂದ) ಆಚೆ ಹಾಕಿ ಅಸ್ಪೃಶ್ಯರಂತೆ ಕನಿಷ್ಠರಾಗಿ ಬಾಳುವಂತೆ ಮಾಡಿದರು. ಈ ವಿಚಾರವನ್ನು ವಿರೋಧಿಸುವ ನೆಲೆಯಲ್ಲಿ ಈ ಕಾವ್ಯಗಳು ಚರ್ಚಿಸುತ್ತವೆ. ತಗರ ಪವಾಡ ಕಾವ್ಯದ ನಾಯಕ ಶಾಂತಮುತ್ತಯ್ಯನಾಗಿದ್ದು, ಕುರುಬರ ಉದ್ಧಾರಕ್ಕಾಗಿ ಅಂದಿನ ಬಸವಾದಿ ಪ್ರಮಥರು ಹಾಗೂ ಶಿವಶರಣರ ಸಮ್ಮುಖದಲ್ಲಿ ಸತ್ತ ತಗರನ್ನು ಬದುಕಿಸಿ ಪವಾಡವನ್ನು ಮೆರೆದು ಕುರುಬ ಕುಲಕ್ಕೆ ಸಾಂಸ್ಕೃತಿಕ ವೀರನಾಗುತ್ತಾನೆ. ಹಾಗೆಯೇ ಸಿದ್ಧಮಂಕ ಚರಿತೆಯ ನಾಯಕನಾಗಿ ಮರುಳಮಂಕನು ತಮ್ಮ ಕುಲಬಾಂಧವರನ್ನು ಅಸ್ಪೃಶ್ಯರೆಂಬ ಕಳಂಕದಿಂದ ವಿಮುಕ್ತರನ್ನಾಗಿ ಮಾಡಬೇಕೆಂಬ ಛಲದಿಂದ ಉಗ್ರತಪಸ್ಸು ಮಾಡಿ, ಸಿದ್ಧರಾಮನ ಅನುಗ್ರಹದಿಂದ ಎಲ್ಲಾ ಕುರುಬರಿಗೂ ಕಲ್ಯಾಣ ನಗರಕ್ಕೆ ಪ್ರವೇಶ ಕಲ್ಪಿಸುವಂತೆ ಕೋರಿಕೊಳ್ಳುತ್ತಾನೆ. ಹೀಗೆ ಇವರಿಬ್ಬರು ಕುರುಬ ಕುಲದಲ್ಲಿ ಜನಿಸಿ, ತಮ್ಮವರ ಉದ್ದಾರಕ್ಕಾಗಿ ವಿಭಿನ್ನ ರೂಪದಲ್ಲಿ ಹೋರಾಟ ನಡೆಸುತ್ತಾರೆ. ಶಾಂತಮುತ್ತಯ್ಯ ಮತ್ತು ಮರುಳಮಂಕಯ್ಯ ಇವರಿಬ್ಬರೂ ಕುರುಬ ಸಮುದಾಯದವರಾಗಿದ್ದರೂ ತಮ್ಮ ಆಶಯವನ್ನು ಹಾಗೂ ಹೋರಾಟದ ನೆಲೆಗಳನ್ನು ಮಾತ್ರ ಭಿನ್ನ ನೆಲೆಯಲ್ಲಿ ವ್ಯಕ್ತಪಡಿಸಿರುವುದು ಕಂಡುಬರುತ್ತದೆ.

* 'ತಗರ ಪವಾಡ ಹಾಗೂ ಸಿದ್ಧಮಂಕ ಚರಿತೆ' ಈ ಎರಡು ಕಾವ್ಯಗಳು ಸರೂರು ಪ್ರದೇಶವನ್ನು ಕೇಂದ್ರವಾಗಿಟ್ಟುಕೊಂಡು ರಚನೆಯಾಗಿದ್ದು, ಈ ಗ್ರಾಮದ ಗುರುಒಡೆಯರು ತಮ್ಮದೆ ಆದ ಸಾಂಸ್ಕೃತಿಕ ಅನನ್ಯತೆಯನ್ನು ಇವುಗಳ ಅಡಿಯಲ್ಲಿ ಕಾಪಾಡಿಕೊಂಡು ಬಂದಿದ್ದಾರೆ. ಸರೂರು ಗುರುಪರಂಪರೆಗೆ ಮೂಲ ನೆಲೆಯಾಗಿದ್ದು, ಈ ಗ್ರಾಮವು ಎರಡು ಗುರುಪರಂಪರೆಯನ್ನು ಹೊಂದಿದೆ. ಆದ್ದರಿಂದ ಈ ಎರಡು ಪರಂಪರೆಯವರು ತಮ್ಮ ತಮ್ಮ ಗುರುಪರಂಪರೆಯ ವೈಶಿಷ್ಟ್ಯತೆಯನ್ನು ಮುಂದುವರೆಸಿಕೊಂಡು ಬಂದಿರುವುದನ್ನು ಗುರುತಿಸಲಾಗಿದೆ.
* ಕುರುಬರ ಗುರುಪರಂಪರೆಯನ್ನು ಪ್ರತಿನಿಧಿಸುವ ಈ ಎರಡು ಕಾವ್ಯಗಳು ಸರೂರು ಸಂಪ್ರದಾಯದ ಗುರುಪರಂಪರೆಯನ್ನು ಚಾರಿತ್ರಿಕವಾಗಿ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿವೆ. ಇವುಗಳ ಮುಂದುವರಿಕೆಯಾಗಿ ಪ್ರಸ್ತುತ ಶಾಂತಮುತ್ತಯ್ಯನ ಸಂಪ್ರದಾಯದವರನ್ನು ಶಾಂತೊಡೆಯರೆಂದು ಕರೆದರೆ, ಸಿದ್ಧಮಂಕ ಸಂಪ್ರದಾಯದವರನ್ನು ಮುಂದೆ ಮಂಕೊಡೆಯರೆಂದು ಕರೆಯಲಾಗಿದೆ. ಮಂಕೊಡೆಯರು ಸಾಧಕುರುಬರಿಗೆ ಗುರುಗಳಾಗಿದ್ದಾರೆ. ಹೀಗಾಗಿ ಅವರು ಸಾಧ ಲಿಂಗಾಯತರಾಗಿ, ಲಿಂಗಾಯತರ ಪ್ರಭಾವಕ್ಕೆ ಒಳಗಾಗಿದ್ದಾರೆ. ಆದ್ದರಿಂದ ಅವರ ಸಂಖ್ಯೆ ಶಾಂತೊಡೆಯರಿಗಿಂಥ ಕಡಿಮೆಯಾಗಿದೆ. ಶಾಂತೊಡೆಯರಿಗೆ ಪರಮಗುರು ರೇವಣಸಿದ್ಧನಾದರೆ, ಮಂಕೊಡೆಯರಿಗೆ ಪರಮಗುರು ಸಿದ್ಧರಾಮೇಶ್ವರರಾಗಿದ್ದಾರೆ. ಹೀಗೆ ಈ ಗುರುಪರಂಪರೆಗಳ ಅಡಿಯಲ್ಲಿ ಅವರ ಅನುಯಾಯಿಗಳು ತಮ್ಮ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

* ಪ್ರಸ್ತುತ ಹಾಲುಮತ ಸಂಪ್ರದಾಯದ ಗುರುಒಡೆಯರ ಚರಿತ್ರೆಯನ್ನು ಪ್ರತಿಪಾದಿಸುವಂತಹ ಹಾಗೂ ಈ ಪರಂಪರೆಯ ಮುಂದುವರಿಕೆಯಾಗಿ ಕೆಲವು ಕಾವ್ಯ, ಪುರಾಣಗಳು ದೊರೆತಿವೆ. ಅವುಗಳಲ್ಲಿ ಬಸವಣಪ್ಪ ನೀಲಪ್ಪ ಹಳವಳ್ಳಿ ಅವರ 'ಹಾಲುಮತ ಪುರಾಣ'ವು ಸಿದ್ಧಮಂಕ ಚರಿತೆಯ ಪ್ರತಿಕೃತಿಯಾಗಿದ್ದು, ಮಂಕೊಡೆಯರ ಪರಂಪರೆಯನ್ನು ಪುಷ್ಟೀಕರಿಸುತ್ತದೆ. ಇದು ಸಿದ್ಧರಾಮನ ಶಿಷ್ಯನಾದ ಮರುಳಸಿದ್ಧನ ಇತಿವೃತ್ತವನ್ನು ಸ್ಥೂಲವಾಗಿ ನಿರೂಪಿಸುತ್ತದೆ. ಸಿದ್ಧಮಂಕ, ಮರುಳಮಂಕ, ಮಂಕಯ್ಯ ಎಂಬ ವಿವಿಧ ಹೆಸರುಗಳಿಂದ ಕರೆದರೂ ಅದು ಮಂಕಸಿದ್ಧನಿಗೆ ಮಾತ್ರ ಎಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ ರಸ್ತಾಪುರ ಭೀಮಕವಿಯ ಹಾಲುಮತೊತ್ತೇಜಕ ಪುರಾಣವು ಶಾಂತೊಡೆಯರ ಪರಂಪರೆಯನ್ನು ಮುಂದುವರೆಸುತ್ತದೆ. ಏಕೆಂದರೆ ತಗರ ಪವಾಡದಲ್ಲಿ ಶಾಂತಮುತ್ತಯ್ಯನ ಮಕ್ಕಳ ಪ್ರಸ್ತಾಪ ಬರುವುದಿಲ್ಲ. ಆದರೆ ಈ ಕೃತಿಯಲ್ಲಿ ಅವರ ವಿವರಗಳು ಕಂಡುಬರುತ್ತವೆ. ಹೀಗೆ ಈ ಎಲ್ಲಾ ಕಾವ್ಯ-ಪುರಾಣಗಳು ಒಂದಲ್ಲ ಒಂದು ರೀತಿಯಲ್ಲಿ ಸರೂರಿನ ಕುರುಬರ ಗುರುಒಡೆಯರ ಪರಂಪರೆಯನ್ನು ಗುರುತಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.
* ಗುರುಒಡೆಯರ ಪರಂಪರೆಯನ್ನು ಕುರಿತು ಕೆಲವು ಶಾಸನಗಳು ದೊರೆತಿವೆ. ಅವುಗಳಲ್ಲಿ ತುರುವೇಕೆರೆ ಶಾಸನವೂ(೧೪೮೦) ಒಂದು. ಇದರಲ್ಲಿ ಹಾಲುಮತ ಕುರುಬರಿಗೆ ಗುರುಗಳು ಯಾರು ಎಂಬ ವಾದ-ವಿವಾದವನ್ನು ಪರಿಗಣಿಸಿ ಶಾಂತಮುತ್ತಯ್ಯನು ಮಂಕಸಿದ್ಧಯ್ಯನನ್ನು ಗೆದ್ದು ಸೆರೆ ಹಾಕಿಸಿದ ವಿಚಾರವು ಇದರಿಂದ ತಿಳಿದುಬರುತ್ತದೆ. ಹಾಗೆಯೇ ಶಿರವಾಳ ಶಾಸನ(೧೧೭೦) ಶಾಂತಿಮಯ್ಯ ಹಾಗೂ ಅವನ ಮಗ ರೇವಣದೇವಯ್ಯನ ಪವಾಡಗಳನ್ನು ತಿಳಿಸುತ್ತದೆ. ಆದರೆ ಸರೂರಿನ ಎರಡು ಶಾಸನಗಳಲ್ಲಿ ಮಂಕಯ್ಯನ ತಂದೆ ಸಿದ್ಧರಾಮನು ಮಲ್ಲಿಕಾರ್ಜುನ ದೇವಸ್ಥಾನವನ್ನು ಸ್ಥಾಪಿಸಿ, ಗುರುವಾದ ಬೀಚನಿಗೆ ಆ ದೇವಸ್ಥಾನವನ್ನು ಕೊಟ್ಟಿರುವ ಉಲ್ಲೇಖವಿದೆ. ಹಾಗೆಯೇ ಮತ್ತೊಂದು ಶಾಸನದಲ್ಲಿ ಮಲ್ಲಿನಾಥ ರಾಮನೆಂಬುವನು ಮಂಕಯ್ಯನಿಗೆ ಭೂಮಿ, ಬಂಗಾರ, ಮನೆ ಕೊಟ್ಟಿರುವ ವಿಚಾರಗಳು ಸಿಗುತ್ತವೆ. ಈ ಎರಡು ಶಾಸನಗಳಲ್ಲಿ ಮಂಕಯ್ಯನೆಂಬುವನ ಉಲ್ಲೇಖವಿರುವುದರಿಂದ ಮೂಲತಃ ಈ ಗ್ರಾಮವು ಮಂಕಸಿದ್ಧ ಪರಂಪರೆಗೆ ಒಳಪಟ್ಟಿರಬಹುದು ಎಂದು ಗುರುತಿಸಲಾಗಿದೆ.
* ಪ್ರಸ್ತುತ ಸರೂರು ಗುರುಪರಂಪರೆಯನ್ನು ಗುರುತಿಸಲು ಕೆಲವು ದಾಖಲೆ ಪತ್ರಗಳು ದೊರೆತಿವೆ. ಅವು ಹೆಚ್ಚಾಗಿ ಸರೂರಿನ ಗುರುಪೀಠದಿಂದ ಮಾನ್ಯತೆ ಪಡೆದ ಶಾಖಾಮಠಗಳ ಬಗ್ಗೆ, ಶಿಕ್ಷಣ, ನಡಾವಳಿಯ ಬಗ್ಗೆ, ಒಡೆಯರ ಗುರುಪರಂಪರೆಯಲ್ಲಿ ಹೇಗೆ ಇರಬೇಕು, ಹೇಗೆ ಇರಬಾರದು, ಅವರ ಮತಧರ್ಮದ ಚೌಕಟ್ಟನ್ನು ಮೀರಿ ನಿಂತವರಿಗೆ ದಂಡನೆ ವಿಧಿಸುವಂತಹದ್ದು ಹಾಗೂ ಈ ಪರಂಪರೆಯ ಒಡೆಯರು ಸಮುದಾಯದ ಅಭಿವೃದ್ಧಿಗಾಗಿ ಮತ್ತು ಜನ ಜಾಗೃತಿಗಾಗಿ ಸಭೆ,

ಸಮಾರಂಭಗಳ ಮೂಲಕ ಭಾಷಣಗಳನ್ನು ಮಾಡುತ್ತಿದ್ದರು. ಇವುಗಳ ವೈಶಿಷ್ಟ್ಯತೆಯನ್ನು ಗುರುತಿಸುವ ಮೂಲಕ ಸರೂರಿನ ಗುರುಒಡೆಯರ ವಿಶಿಷ್ಟತೆಯನ್ನು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

* ಹಾಲುಮತ ಪರಂಪರೆಯಲ್ಲಿ ರೇವಣಸಿದ್ಧ ಮತ್ತು ಶಾಂತಮುತ್ತಯ್ಯನವರು ಪ್ರಬಲವಾದ ಅಸ್ತಿತ್ವವನ್ನು ಉಳಿಸಿಕೊಂಡವರು. ಇವರು ಕುರುಬ ಜನಾಂಗಕ್ಕೆ ಗುರುಗಳಾಗಿ, ಒಡೆಯರಾಗಿ ತಮ್ಮ ಕಾರ್ಯವನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇಲ್ಲಿ ರೇವಣಸಿದ್ಧ ಹಾಗೂ ಶಾಂತಮುತ್ತಯ್ಯರ ನಡುವೆ ಹಲವು ಜಿಜ್ಞಾಸೆಗಳಿವೆ. ಜನಪದ ಕಥೆ, ಹಾಡುಗಳಲ್ಲಿ ರೇವಣಸಿದ್ಧ ಶಾಂತಮುತ್ತಯ್ಯನ ಗುರು ಎಂಬುದಾಗಿ ತಿಳಿದುಬಂದರೆ, ಶಾಸನಗಳಲ್ಲಿ ಶಾಂತಮುತ್ತಯ್ಯನು ರೇವಣಸಿದ್ದನ ತಂದೆ ಎಂಬ ಉಲ್ಲೇಖಗಳು ಸಿಗುತ್ತವೆ. ಆದ್ದರಿಂದ ಇವರಲ್ಲಿ ತಂದೆ ಯಾರು, ಮಗನು ಯಾರು ಎಂಬ ವೈರುಧ್ಯಗಳಿರುವುದು ಕಂಡುಬರುತ್ತದೆ. ಲಭ್ಯವಿರುವ ಲಿಖಿತ ಮತ್ತು ಮೌಖಿಕ ಆಕರಗಳನ್ನು ಆಧಾರವಾಗಿಟ್ಟುಕೊಂಡು, ಕೆಲವು ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ರೇವಣಸಿದ್ಧನು ಶಾಂತಮುತ್ತಯ್ಯನಿಗೆ ದೀಕ್ಷೆ ನೀಡಿ ಕುರುಬ ಸಮಾಜಕ್ಕೆ ಗುರು ಎಂದು ಕರೆದಿರುವ ಸಾಧ್ಯತೆಗಳಿವೆ ಎಂಬುದಾಗಿ ತಿಳಿದುಬರುತ್ತದೆ.

* ಸರೂರ ಸಂಪ್ರದಾಯದ ಗುರುಒಡೆಯರ ಪರಂಪರೆಯ ನೆಲೆಗಳನ್ನು ಕ್ಷೇತ್ರಕಾರ್ಯದ ಮೂಲಕ ಗಮನಿಸಿದಾಗ, ಇಲ್ಲಿ ಹೆಚ್ಚಾಗಿ ರೇವಣಸಿದ್ಧ ಪರಂಪರೆಯ ಅನುಯಾಯಿಗಳಾದ ಶಾಂತೊಡೆಯರ ಪರಂಪರೆಯವರು ಕಂಡುಬರುತ್ತಾರೆ. ಕರ್ನಾಟಕದ ಕೆಲವೇ ಭಾಗಗಳಲ್ಲಿ ಮಾತ್ರ ಮಂಕೊಡೆಯ ಪರಂಪರೆಯ ಅನುಯಾಯಿಗಳು ಕಂಡುಬರುತ್ತಾರೆ. ಈ ಪರಂಪರೆಯ ಅನುಯಾಯಿಗಳು ಕರ್ನಾಟಕದಲ್ಲಿ ಸರೂರನ್ನು ಹೊರತುಪಡಿಸಿದರೆ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಸೊಲ್ಲಾಪುರ; ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಹೊನ್ನವಳ್ಳಿ ಹಾಗೆಯೇ ಚಿಕ್ಕನಾಯಕನಹಳ್ಳಿಯ ಸಮೀಪದ ಯಳನಾಡು ಗ್ರಾಮದಲ್ಲಿ ಮಾತ್ರ ಕಂಡುಬರುತ್ತಾರೆ. ಆದರೆ ಆಂಧ್ರದ ಗಡಿಭಾಗದ ಪ್ರದೇಶದಲ್ಲಿ ಎಲ್ಲಿಯೂ ಮಂಕೊಡೆಯ ಪರಂಪರೆಯ ಅನುಯಾಯಿಗಳು ಕಂಡುಬರುವುದಿಲ್ಲ.

* ಕ್ರಿ.ಶ ೧೨-೧೩ನೆಯ ಶತಮಾನದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಪುರುಷರಲ್ಲಿ ರೇವಣಸಿದ್ಧನಿಗೆ ವಿಶೇಷ ಸ್ಥಾನವನ್ನು ನೀಡಿ ಪ್ರಸ್ತುತದವರೆಗೂ ಪೂಜಿಸಿಕೊಂಡು ಬರುತ್ತಿದ್ದಾರೆ. ಇಂತಹ ದೈವಾರಾಧಕ ಹೆಸರಿನಲ್ಲಿ ರೇವಣಸಿದ್ಧನ ದೇವಾಲಯಗಳನ್ನು ನಿರ್ಮಿಸಿಕೊಂಡು ಬಂದಿರುವುದು ಗಮನಾರ್ಹ ವಾಗಿದೆ. ಇಲ್ಲಿನ ದೇವಾಲಯದ ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ರೇವಣಸಿದ್ಧನನ್ನು ದೈವಪುರುಷನನ್ನಾಗಿ ಮಾಡಿದ್ದು ಕ್ರಿ.ಶ. ೧೮ನೆಯ ಶತಮಾನದಿಂದ ಎಂಬುದು ಸ್ಪಷ್ಟವಾಗುತ್ತದೆ.

* ಸರೂರು ಹಾಲಮತ ಪರಂಪರೆಯ ಆಚರಣೆಗಳಲ್ಲಿ ಪ್ರತಿವರ್ಷ ಗುರುಒಡೆಯರು ಸಂಪ್ರದಾಯ ಬದ್ಧವಾಗಿ ಜಾತ್ರೆ, ಪಲ್ಲಕ್ಕಿ-ಉತ್ಸವ ಹಾಗೂ ಹೇಳಿಕೆಗಳನ್ನು ಹೇಳುವ ಸಂಪ್ರದಾಯವನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಈ ಹೇಳಿಕೆಗಳು ಸಾಮಾಜಿಕ ಜನಜೀವನಕ್ಕೆ ಪೂರಕವಾದ ಭವಿಷ್ಯವನ್ನು ಸೂಚಿಸುವ ನೆಲೆಯಲ್ಲಿದ್ದು, ಈ ಪ್ರಾಂತ್ಯದ ಮಳೆ, ಬೆಳೆಗೆ ಸಂಬಧಿಸಿರುತ್ತವೆ. ಈ ಹೇಳಿಕೆಗಳನ್ನು ಕುರುಬ ಜನಾಂಗವು ದೈವವಾಣಿ ಎಂಬ ಭಾವದಿಂದ ಸ್ವೀಕರಿಸಿಕೊಂಡು ಮುನ್ನಡೆಯುತ್ತಿರುವುದಾಗಿ ತಿಳಿದುಬರುತ್ತದೆ.
* ಸರೂರು ಸಂಪ್ರದಾಯದ ಅಡಿಯಲ್ಲಿ ಕಂಡುಬರುವ ಆಚರಣೆ, ಉತ್ಸವ ಹಾಗೂ ಸಮಾರಂಭಗಳು ದೈವಿಕ ನೆಲೆಯಿಂದ ಕೂಡಿದ್ದು, ತಮ್ಮ ಮೂಲ ಪರಂಪರೆಯನ್ನು ಎತ್ತಿಹಿಡಿಯುವ ನೆಲೆಯಲ್ಲಿವೆ. ಇವುಗಳು ಆಧುನಿಕ ಯುಗದಲ್ಲಿ ಮನುಷ್ಯನ ಬದುಕಿನ ಅವಿಭಾಜ್ಯ ಅಂಗವಾಗಿ ಕಾರ್ಯ ಪ್ರವೃತ್ತವಾಗಿರುವುದು ಕಂಡುಬರುತ್ತವೆ.
* ಕುರುಬರಿಗೆ ಒಡೆಯರು ಕುಲಗುರುಗಳಾಗಿದ್ದು, ಅವರಲ್ಲಿ ಜರುಗುವ ಎಲ್ಲಾ ಸಾಮಾಜಿಕ ಕಾರ್ಯ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಇವರಿಗೆ ಮಹತ್ವದ ಸ್ಥಾನವನ್ನು ನೀಡಲಾಗಿದೆ. ಈ ಗುರುಒಡೆಯರು ಸಮುದಾಯವನ್ನು ಪ್ರಗತಿಯ ಹಾದಿಯಲ್ಲಿ ಕೊಂಡೊಯ್ಯುವ ಜವಬ್ದಾರಿಯನ್ನು ಹೊತ್ತಿದ್ದು, ಅವರ ಶ್ರೇಯೋಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿಕೊಂಡು ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕಿಯವಾಗಿ, ಶೈಕ್ಷಣಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಮುನ್ನಡೆಸುವ ಜವಾಬ್ದಾರಿಯನ್ನು ಹೊತ್ತು ಮುನ್ನಡೆಸುತ್ತಿದ್ದಾರೆ.
* ಸರೂರು ಗುರುಒಡೆಯ ಪರಂಪರೆಯಲ್ಲಿ ಗುರುಒಡೆಯರಿಗೆ ನೀಡಿರುವಷ್ಟೇ ಸಮಾನವಾದ ಸ್ಥಾನಮಾನವನ್ನು ಇಲ್ಲಿನ ಮಹಿಳೆಗೂ ಕಲ್ಪಿಸಲಾಗಿದೆ. ಈ ಪರಂಪರೆಯ ಮಹಿಳೆಯನ್ನು ಒಡೇರಮ್ಮ ಎಂಬುದಾಗಿ ಕರೆಯಲಾಗುತ್ತದೆ. ಇಲ್ಲಿನ ಒಡೇರಮ್ಮನು ಗಂಡ ಸತ್ತರೂ ಇವಳನ್ನು ವಿಧವೆ ಎಂದು ಕಾಣದೆ, ಮುತ್ತೈದೆಯಂತೆ ಮಾಂಗಲ್ಯವನ್ನು ಧರಿಸಿಕೊಂಡು ಸಮುದಾಯವನ್ನು ಮುನ್ನಡೆಸುವ ಪವಿತ್ರ ಸ್ಥಾನಮಾನವನ್ನು ಪಡೆದುಕೊಂಡಿರುತ್ತಾಳೆ.

ಅನುಬಂಧಗಳು

ಶಾಸನ ಪಠ್ಯಗಳು

ವಕ್ತೃಗಳ ವಿವರ

ಪರಾಮರ್ಶನ ಗ್ರಂಥಗಳು

ಛಾಯಾಚಿತ್ರಗಳು

ಶಾಸನ ಪಠ್ಯಗಳು

ಶಾಸನ ೧, ಸರೂರು

ಗ್ರಾಮದ ಬಸವೇಶ್ವರ ದೇವಾಲಯದ ಮುಂದೆ ನಿಲ್ಲಿಸಿರುವ ಒಂದು ಕಲ್ಲಿನ ಮೇಲೆ ತ್ರುಟಿತ. ಶಾಸನದ ಕಾಲವು ಸಿಂಘಣದೇವ ವರ್ಷ ೧೧, ಪ್ರಮೋದೂತ ಸಂವತ್ಸರ, ಆಷಾಡ, ಪುಣ್ಯಮಿ, ಸೋಮವಾರವೆಂದಿದ್ದು, ಇದು ಕ್ರಿ.ಶ. ೮.೭.೧೨೧೦ಕ್ಕೆ ಸಮವಾಗುತ್ತದೆ. ವಾರವು ಸೋಮವಾರ ವಾಗಿರದೆ ಗುರುವಾರವಾಗಿದೆ.

ಸರೂರ ಅರಳಿಗೆರೆಯ ಸಿದ್ಧರಾಮ ತಂದೆಯು ಪ್ರತಿಷ್ಠೆ ಮಾಡಿದ ಕೋಡಿಯ ಮಲ್ಲಿಕಾರ್ಜುನದೇವರಿಗೆ ಭೂಮಿ ಮತ್ತು ಮನೆಯನ್ನು, ಶಿವಗೌಡನಿಂದ ಹೊನ್ನ ಕೊಟ್ಟು ಕೊಂಡು ದಾನವಾಗಿ ಕೊಡಲಾಗಿದೆ. ಇದೇ ಅಲ್ಲದೆ ಅರಸನಹಳ್ಳಿಯ ವೀರನಗೌಡನಿಂದ ಹೊನ್ನ ಕೊಟ್ಟು ಕೊಂಡು ಕೊಂಡ ಭೂಮಿಯನ್ನು ಮಂಕಯ್ಯನು ಸರವೂರ ಮಲ್ಲಿನಾಥ ದೇವರಿಗೆ ದಾನವಾಗಿ ಕೊಟ್ಟಿದ್ದಾನೆ. ಮಂಕಯ್ಯನು ಗುರುವೊಬ್ಬನಿಗೆ(ಹೆಸರು ಹಾಳಾಗಿದೆ) ಮಲ್ಲಿನಾಥ ದೇವರ ಸ್ಥಾನವನ್ನು ಧಾರಾಪೂರ್ವಕವಾಗಿ ಕೊಟ್ಟ ಉಲ್ಲೇಖವಿದೆ.

೧. ಸ್ವಸ್ತಿ ಶ್ರೀಮತು

೨. ಯಾದೋನರಾಯಣ ಪ್ರ

೩. ತಾಹ ಚಕ್ರವರ್ತಿ ಸಿಂಹಣದೇ

೪. ವ ವರಿಸದ ೧೧ನೆಯ ಪ್ರಮೋ

೫. ದೋತ ಸೌವತ್ಸರದ ಆಸಡ ಸುಧ

೬. ಪುಣಮಿ ಸೋಮವಾರದಂದು ಸರ

೭. ಊರ ಅರಳಿಗೆಱೆಯ ಕೋಡಿಯ ಮ

೮. ಲ್ಲಿಕಾರ್ಜ್ಜುನದೇವರ ಸಿಧರಾಮ[ತಂದೆ] ಪ್ರತಿ

೯. ಷ್ಪೆ ಮಾಡಿದ ಸಿವಗೌಡನ ಕಯಲು ಮ[ನ್ನೆ]

೧೦. ಯನು ಹೊಂನ ಕೊಟು ಕೊಂಡ ಕೆಯಿ ಊರಿಂದ ತೆಂಕ

೧೧. ಅರಳಿಗೆಜೆ್ಯ ಕೆಯಿಂ ಪಡುವಲು ಮಲ್ಲಿನಾ

೧೨. ಥದೇವರ ಕೆಯಿ ಮತರು ೧ ಗಳತಿಗ ಮನೆಯ

೧೩. ಹಿಂ[ದೆ] ದೇವರ ಮ(ನೆ) ಎ[ರ್ದು] ॥ ಅರಸನ ಹಳಿಯ[ವೀರ] ಗ[ವು]

೧೪. ಡನ ಕಯಲು ಮಂಕಯನು ಹೊಂನ ಕೊಟ್ಟು ಆ ಹೊಲದಲು ನ

೧೫. . . . . . ಕೆಜೆ್[ಯಿಂ] ಬಡಗ ಸರಊರ ಸೀಮೆಯಲು ಅರಸನ ಹಳಿಯ

೧೬. ಹೊಲದಲು ಸರಊರ ಮಲ್ಲಿನಾಥದೇವರಿಗೆ ಮತರು ನಾಲ್ವುತು

೧೭. ರದ ಸ್ತಳ . . . . ವಾಗಿನೆರೆದು ಆಯ್ದುಮಜೆ[ಅಳವರಿ ತೊಳಿತಾಯಿ]

೧೮. ಗಳು ಸಿಧರಾಮ . . . ಮಕ್ಕಳ . . . ಹಣದಲವರ ಹೆಸರ

೧೯. . . ಹಾಗಮ ಬಿಠ . . ಕೆಯ ಮಲಿನಾಥ ನಡೆವ ಹೊನುಗು[ಂ]ದ

೨೦. ದ ಬೀಚಗುರು ತಂನ ಮಗ . . . . ಗುರುವಿಗೆ ಮಂಕಯನ

೨೧. ಮಲ್ಲಿನಾಥದೇವರ ಸ್ತಾನವ ಧಾರಾಪೂರ್ವ್ವಕ ಮಾಡಿಕೊಟ್ಟರು

೨೨. ಹಾಗ ಹನ್ನೆರಡು ಹಾಗದ ಫಲವಕ್ಕು ॥ ಇಧ

೨೩. ರ್ಮ್ಮವ ಪ್ರತಿಪಾಳಿಸಿದವರು ದೇವಗತಿ ಇ ಧರ್ಮ್ಮಕೆ ವಕ್ತವಾದ ನಾ

೨೪. ಯ[ಕ] ನರಕ ॥ ಬೀಚಗುರುವಿನ ಮಕ್ಕಳು . . . ಸಿವಲೋಕ ಒಡೆಯರು

ಶಾಸನ ೨

ಗ್ರಾಮದ ರೇವಣಸಿದ್ಧೇಶ್ವರ ದೇವಾಲಯದ ಆವರಣದಲ್ಲಿನ ಒಂದು ಕಲ್ಲಿನ ಮೇಲೆ ಶಾಸನೋಕ್ತ ಕಾಲವು ಸಿಂಘಣದೇವ ವರ್ಷ ೫ ಇ[ಶ್ವ], ಭಾದ್ರಪದ ಶು. ಪುಣ್ಣಮಿ, ಸೋಮವಾರ, ಸೋಮಗ್ರಹಣವೆಂದಿದ್ದು. ಇದು ಕ್ರಿ.ಶ. ೧೭.೯.೧೨೧೫ರ ಸೋಮವಾರಕ್ಕೆ ಸರಿಹೊಂದುತ್ತದೆ.

ಅರಳಿಗೆರಗೆಲ ನಾಡಿನಲ್ಲಿ ಕೊಂಡಿದೇವನ ಕೋಲಮತ್ತರಿನಲ್ಲಿ ಎರಡು ಮತ್ತರು ಭೂಮಿಯನ್ನು ಮನೆಯ ನಿವೇಶನವನ್ನು ಮಲಿನಾಥ ರಾಮ ತಂದಿಯ ಸನ್ನಿಧಾನದಲ್ಲಿ ಮಂಕಯ್ಯನಿಗೆ ಸರ್ವನಮಶ್ಯವಾಗಿ ಧಾರೆಯನ್ನು ಎರೆದು ದಾನ ಕೊಟ್ಟಿದ್ದನ್ನು ಶಾಸನ ಉಲ್ಲೇಖಿಸುತ್ತದೆ.

೧. ಸ್ವಸ್ತಿ ಶ್ರೀಮತು ಯಾದವ

೨. . . ಣ ಪ್ರತಾಪ ಚಕ್ರವರ್ತಿ ಸಿಂ

೩. ಹಣ ದೇವ ವರಿಸದ ೫ನೆಯ ಇ

೪. . ರ ಸಂವಛರದ ಭಾದ್ರಪದ ಸು

೫. ಧ ಪುಂಣ್ಣಮಿ ಸೋಮವಾರ ಸೋಮ

೬. ಗ್ರಹಣದಲು ಅರಳಿಗೆಱಗೆಲನಾಡಿ

೭. ಯಲು ಕೊಂಡಿ(ದೇ)ವನ ಕೊಲ ಮತ್ತ ೨ ದಮ

೮. ಗಿದಂ ಹಂದಿಗೆಡಕಲ ಯಿಂತೀ ಮುವರು

೯. ಸಹಿರಣ್ಯವಂ ಕೂಟಂ ೭ ಕ ಮನೆಯ ನಿವೇ

೧೦. . ಣ ಸಹಿತಂ ದರ್ಮ್ಮವಂ ಪ್ರತಿಪಾಳಿಸು

೧೧. ವಂತಾಗಿ ಮಂಕಯಂಗಳಿಗೆ ಮಲಿನಾತ

೧೨. ರಾಮ ತಂದಿಯ ಸಂನಿದಾನದಲಿ ಸ(ರ್ವ್ವ)

೧೩. ನಮಸ್ಯವಾಗಿ ಧಾರಪೂರ್ವ್ವಕವಾಗಿ

೧೪. ಕೂಟರು ॥ ಸ್ವದತ್ತ ಪರದ

೧೫. ತ್ತಂ ವಾ । ಯೋ ಹರೇತಿ[ವ]

೩. ಶಿರವಾಳ ಶಾಸನ

ಶಾಸನದ ಕೊನೆಯಲ್ಲಿ ಕಲ್ಯಾಣ ಚಾಲುಕ್ಯ ಚಕ್ರವರ್ತಿ ವೀರಸೋಮೇಶ್ವರ ದೇವನನ್ನು ಉಲ್ಲೇಖಿಸುವುದರಿಂದ ಕ್ರಿ.ಶ. ೧೧೭೦ರ ಸುಮಾರಿಗೆ ಶಾಸನ ರಚನೆಗೊಂಡಿದೆಯೆಂದು ಅಂದಾಜಿಸಬಹುದಾಗಿದೆ. ಲಭ್ಯವಿರುವ ಶಾಸನದ ಪಾಠ ಇಂತಿದೆ.

೧. xxxxxxxxxxxxxxxxxxxxxxxxxxxxx

೨. xxxxಸೆಟ್ಟಿಯುಂ ಕೆಂಬಾವಿಯ ಜೋಗಿಸೆಟ್ಟಿಯುಂಸಮಸ್ತ xxxxxxxxxxxxx xxxxxx

೩. xxxxಕಂನಡ ನಾಲ್ಸಾಸಿರಮುಂ ನೆರೆದು ತಂಮೊಳೇಕಸ್ತರಾಗಿರ್ದ್ದು @ ಸ್ವಸ್ತಿ ಶ್ರೀಮತು ಸರ್ಬ್ಬಜೀವ xxxx

೪. xxxxxx ಗಳ ಪುತ್ರಂ ಸ್ವಸ್ತಿ ಶ್ರೀಮದಣಿಮಾದ್ಯಷ್ಟಗುಣ ಸಂಪಂನರುಂ ತತ್ವಜ್ಞಾನ ಪ್ರಸಂನರುಂ ದೀನಾನಾಥ xxxx

೫. xxxx ರು ಅದರ ಸಮಯಭಯಂಕರರುಂ ನಿಜಸಮಯಕಿಂಕರರುಮಪ್ಪ ಶ್ರೀಮತು ಸಿದ್ಧರೇವಣದೇವ

೬. xxxx ದೇವಕಾರ್ಯ್ಯಮಂ ನೋಡಿ ಸಾತೇಶ್ವರದೇವರ ಪೂಜೆ ಪುನಸ್ಕಾರ ನಂದಾದೀವಿಗೆ ನಡವಂತಾಗಿ ಐನೂರ್ಬ್ಬರುಂ ಸದ್ಭಕ್ತಯಿಂ ಕೂರ್ತ್ತು ದೇವರಿಗೆ ಎತ್ತು

೭. xxxx ಚೈತ್ರವೊಳಗಾಗಿ ಅಱುವತ್ತೆತ್ತಿನ ನೆಱವೊಕ್ಕಲೊದಕ್ಕಂ ಹೇಱಿದಡೆ ಸುಂಕವಿಲ್ಲ ಇಱಿದಡೆ ದಂಡವಿಲ್ಲ ಅಳದಾಡಯವಿಲ್ಲ

೮. xxxx ಯಾಯದಾಯ ಕಿಱುಕುಳ ಬೀರವಣ ಒಕ್ಕಲುದೆಱೆ ಇನಿತುಮಂ ಸರ್ಬ್ಬ ಮಾನ್ಯವಾಗಿ ಬಿಟ್ಟಿರು ಆದಿತ್ಯನ ಕಿರಣ ಉಪ್ಪು ಸಂಜೆ ಹುಲ್ಲು

೯. xxxx ರು ಈ ಧರ್ಮ್ಮಕ್ಕಾವನಡ್ಡ ಬಂದಡಂ ಸಮಯದ್ರೋಹನು ಚಕ್ರವರ್ತ್ತಿಯಾಣೆ ಐನೂರ್ಬ್ಬರಾಣೆ ಮೀಱಿದ

೧೦. xxxx ನರು @ ಮತ್ತಂ ದೋರನಹಳ್ಳಿಯ ತೋರಣದಲಿಪ್ಪ ಮಹಾನಾಡುಗಳು ಮೂವತ್ತಾಱು ಬೀಡು ಮುಂಮುರಿದಂಡ ಉಭಯ

೧೧. xxx ವಾಡಿ ಗೊಬ್ಬೂರ ಸ್ಥಳದ ಗೋಣ್ನಿಸೆಟ್ಟಿಯರುಂ ಚೀಲಿಸೆಟ್ಟಿಯ ದೇವಣಸೆಟ್ಟಿಯರುಂ ಮಾಗನೂರ

೧೨. xxx ಸೆಟ್ಟಿ ಬೆನಕಿಸೆಟ್ಟಿಯರುಂ ಮೊಸಳಿಕಲ್ಲ ಮಿಂಡಗುದ್ದಲಿ ದಾಸಿಸೆಟ್ಟಿಯರುಂ ಸಿರಿವೊಳ–

೧೩. xxx ಡವೊಂಬಮ ಸದ್ಭಕ್ತಿಯಿಂ ಕೊರ್ತ್ತು ದೇವರಿಗೆ ಎತು ಕತ್ತೆ ಕೋಣ ಬಂಡಿ ಚೈತ್ರವೊಳಗಾಗಿ ಅಱುವತ್ತೆ–

೧೪. xxx ಗೆ ಸುಂಕವಿಲ್ಲ ಅಳದಡಾಯವಿಲ್ಲ ಗ್ರಾಸ ಕಾಣಿಕೆ ಸಮಸ್ತಾಯವೆಲ್ಲವಂ ಸರ್ಬ್ಬಮಾನ್ಯವಾಗಿ ಆದಿತ್ಯನ ಕಿ -

೧೫. xxxx ಲವರಂ ಬಿಟ್ಟರು ಈ ಧರ್ಮ್ಮಕ್ಕಾವನಡ್ಡ ಬಂದಡಂ ನಾಡಿಂಗಂ ಚಕ್ರವರ್ತ್ತಿ ಗವೂರ ಹೇಳ್ದಾಳ ಕಯ್ಯಲು ಸಾ

೧೬. xxxxx ತ ಪಂಚಶತವೀರ ಶಾಸನ ಲಬ್ಧಾನೇಕ ಗುಣಗಣಾಳಂಕ್ರಿತ ವೀರ ಲಕ್ಷ್ಮೀನಿವಾಸ ವಕ್ಷಸ್ಥಳ

೧೭. xxxxxx ತಂ ಬಾಲಸ್ರೀ ಬ್ರಾಹ್ಮಣಯಿತ್ಯನಾದಾಕ್ಲೋಶ ಪರಿರಕ್ಷರುಮಷ್ಟ ಶ್ರೀಮದಯ್ಯಾ –

೧೮. xxxxxx ಮುಂ ನಾಡಪ್ರಭು ಸಮಯ ಚಕ್ರವರ್ತ್ತಿ ಕಲಿ ದೇವಯ್ಯಸೆಟ್ಟಿಯರುಂ

೧೯. xxxxxxxxxx ಸಾಸಿರಮುಂ ಕೊಂಡಿ ಮೂಱುಸಾಸಿರಮುಂ ಬೆಳುವಲ ಹುಲಿಗೆಱೆ ಎರಡಱುನೂಱು

೨೦. xxxxxxxxxxxx ರಾಗಿರ್ದ್ದು ಸಂದತಿ ಸಿರಿವೊಳ ಸಾತೇಶ್ವರದೇವರ ದಶಕಾರ್ಯ್ಯಕ್ಕೆ ಮೆಚ್ಚಿ ಕೊಟ್ಟ ಎಲೆ

೨೧. xxxxxxxxxxxxx ಲು ಕೋಡೆಬಳ್ಳಿ ಬಾಳೆಕುಳಿಯ ಸುಂಕವಂ ರಾಯಹಡಪ ಸ

೨೨. xxxxxxxxxxxxxx ಬೀರವಣ ಸೆಟ್ಟಿಗಳು ಸೌಧರೆಗಟ್ಟು ಮಿಂಡಗುದ್ದಲಿಗಟ್ಟು ಮಾಱೆದಡೆ

೨೩. xxxxxxxxxxxxxxx ಸಮಸ್ತ ಪನ್ನಾಯವೆಲ್ಲವಂ ಪರಿಹಾರವಾಗಿ ಉಪ್ಪು ಸ–

೨೪. xxxxxxxxxxxxxxxx ಹಾರಕ್ಕವನಡ್ಡ ಬಂದಡಂ ಗಲಕಿಗಂ ಬಣಂಜಿಗರುಳಾತನಾ

೨೫. xxxxxxxxxxxxxxxxx ಗವಿದಿರು ಈ ಶಾಸನಮಂ ರಕ್ಷಿಸಿದವಗೆ ಗಂಗೆ ಗಯೆ

೨೬. xxxxxxxxxxxxxxxxxx ವಕತರಂ ಬಂದಾತನಾ ತೀರ್ತ್ಥಂಗಳೊಳು ಸಹಸ್ರ ಕವಿಲೆಯಂ

೨೭. xxxxxxxxxxxxxxxxxxx ಚಕ್ರವರ್ತ್ತಿ ತ್ರಿಭುವನಮಲ್ಲ ವೀರಸೋಮೇಶ್ವರ ವ

–

೨೮. xxxxxxxxxxxxxxxxxx ಮಣ ನಿಮಿತ್ತವಾಗಿ ತಿಂತಿಣಿ ಸಿರಿವೂರಂ ತಾ

೨೯. xxxxxxxxxxxxxxxxxxx ಮುರಿದಂಡಂಗಳು ಉಭಯ ನಾನಾದೇ

ಸಿಯುಂ*

*ಅನುಶಾಸನ, ಸಂಪುಟ ೧, ಸಂಪಾದಕರು ಹನುಮಾಕ್ಷಿ ಗೋಗಿ, ಪುಟ – ೩೪೨–೩೪೪

೪. ತುರುಕೆರೆ ತಾಮ್ರ ಶಾಸನ ೧

ಪತ್ರ ೧

ಮುಂಭಾಗ

೧. ಶುಭವಸ್ತು । ನಮಂಸ್ತುಂಗ ಶಿರಚ್ಚುಂಬಿ ಚಂದ್ರಚಾಮರಚಾರವೇ । ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾ

೨. ಯ ಶಭುವೇ । ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಕವರ್ಷ ೧೪೮೦ನೆಯ ಆನಂದಸಂವತ್ಸರದ ಮಾರ್ಗ

೩. ಶಿರ ಬ । ೭ಲು । ನ್ಯಯವಾಡಿದ ವಿವರಾ । ಶ್ರೀಮನ್ಮಂಡಲೇಶ್ವರ ರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪರತಾಪ

೪. ಶ್ರೀವೀರಸದಸಿವ ಮಹಾರಾಯರು ಶ್ರೀಮನ್ಮಂಡಲೇಶ್ವರ । ಶ್ರೀರಾಮರಾಜೈಯದೇವರೂ ಮಹಾ ಅರಸಗಳು ಸಮ್ಮುಖದಲ್ಲಿ ಶಾಂತಮುತ್ತೈ

೫. ಯ್ಯನವರಿಗೆ । ಗುರುತನದಯ್ಯ ಉಂಟೆಂದು । ಬಿಂನಹ ಮಾಡಲಾಗಿ ಅರಸುಗಳೂ । ಬಿಂನಹ ಕೇಳಿ ಯಿ

೬. ಅರಸುಗಳ ಮುದ್ರೆ ಮನುಷ್ಯರು ದಳವಾಯಿ ಜಂಗಮಯ್ಯನ ಮುದ್ರೆ ಮನುಷ್ಯರಾ । ತಳವರಾ ತಿರುಮಲೈಯನು

೭. ಶಾಂತಮುತ್ತೈಯನವರಿಗೆ । ಮಂಕನವರಿಗೆ । ನ್ಯಯವ ಕೇಳುವುದಕ್ಕೆ । ರಾಯರ ಹಜರದಲ್ಲಿ ಕುಳಿತು । ಸಧಚ

೮. ರದವರು । ವಪ್ಪದವರು । ದೊರೆಮಠದ ಶಾಂತದೇವರು । ವಂಟೆತ್ತಿನಮಠದ ವಿರೂಪಾಕ್ಷದೇವರೂ । ಪೂಜೆ

೯. ಸ್ತಳದ ಚಿಕವಿರಣವಡೆರು । ಯಲ್ಲಪಂಣನಮಠದ ಸಂಗನಬಸವಜಾಜದೇವರ್ರು । ಪಟಸ್ರಾಂದಯೆಲೆ ಅಂಗ

೧೦. ಡಿಯ । ಮಠದ ಕುರುಡಸಂಗದೇವರು । ದಣಾಯಕರ ಅಂಗಡಿಯ ಮಠದ ಪರುಟಳದ ದೇವರು । ಬುಕ್ಕಸಾಗರದ

೧೧. ಮಠದ ಕರಿಸಿದ್ದೇದೇವರು । ಪಂಚಮಠಕ್ಕೆ ವಳಗಾದಂತಾ । ಹಿರಿಯರುಗಳು ಪುರ್‍ರಾಣದ । ನಮಶಿವಾಯದವ

೧೨. ರೂ ಪುರಾಣದ ತಂಮಪಂಣದೇವರು । ಪುರಾಣದ ಬವಾನಿದೇವರು । ಪುರಾಣದ

೧೩. ಚೌಉಲ್ಲಿದೇವರು । ಪಟಣದ ಗಣಾಚಾರಿ ರಾಜ್ಯೆಯವಡೆರು । ಅರಕೆರೆಯ ಅಮೋಗಿ । ಮಲ್ಲಂಣವಡೆರು । ಅರಸುಗ

೧೪. ಳ ಕೆಲಸಿ ತಿಂಮೊಜನು । ಸಟೆಪಟಸ್ವಾಮಿಗಳು ವರದ ರಾಜ್ಯೆಯಂ ಪುನ ಹೊರಪೆಟೆಯ ಸೆಟ ಪಟ್ಟಣ

೧೫. ಸ್ವಾಮಿಗಳು । ರಾಮಚಂದ್ರಪುರದಗೆ । ಬಿರುದನು ಸ್ವಾಮಿಗಳು । ತಿರುಮಲ ದೇವಿಪೆಟೆ ಸೆಟಿಪಟ್ಟಣ

ಹಿಂಭಾಗ

೧೬. ಸ್ವಾಮಿಗಳು ಕೃಷ್ಣಪುರದಸೆಟಿ ಪಟ್ಟಣಸ್ವಾಮಿಗಳು । ಮಲೆವಂತಪೆಟೆಯ ಸೆಟಿಪಟ್ಟಣ ಸ್ವಾಮಿಗಳು ಸಂಣಕಿಪೆಟೆಸೆಟಿ ಪಟ್ಟಣ

೧೭. ಸ್ವಾಮಿಗಳು । ಅಚ್ಯುತಪುರದಪೆಟೆ ಸೆಟಿಪಟ್ಟಣಸ್ವಾಮಿಗಳು । ಯಿವರೆಲ್ಲರು ಸಹವಾಗಿ । ಸಮಸ್ತ ಸಭೆಗಳು ಸಮ

೧೮. ಸ್ತರ ಸದಛರದಲ್ಲಿ ಕುಳಿತು ಧರ್ಮಧರ್ಮದಲ್ಲಿ ನ್ಯಯವಾಗಿಸಿ ವಿವರ । ಉಬೆಯವಾದಿಗಳ ಮಥ ಕೇಳಿದ ವಿವರ ।

೧೯. ಮಂಕನವರು ಅಡಿದಮಾತು । ತಂಮ ಗುರು ಸೊಂನಲಾಪುರದ ಸಿಥರಾಮದೇವರು । ನಿಂಮ ಕುಲವವದುಯಂದು ಕೇಳಿದರೆ ।

೨೦. ಮಂಕನವರು ಆಡಿದಮಾತು । ಕೋಡುಗಲ್ಲಿನ ಮೇಲೆ । ಹಂನೆರಡು ಸೂಜಿನಿಲಿಸಿ । ಅದರ ಮೇಲೆ ಹಂನೆರಡು ಅಡಿಕೆ ನಿಲಿಸಿ

೨೧. ಆ ಸೂಜಿಯ ಬಟ್ಟಲ ಮೇಲೆ ತಪಸು ಮಾಡಿದೆಉ । ಮಂಕನವರಿಗೆ ಕುಲವಿಲ್ಲಯಂದು ಮಂಕನವರು ಆಡಿದ

೨೨. ಮಾತು । ಆಮೇಲೆ ಸಭೆಸಮಸ್ತರು ಶಾಂತಮುತ್ತೈಯನವರು ಕೇಳಿದ ಮಾತು । ನಿಂಮ ಗುರು ಆರುಯಂದು ಕೇಳಲಾಗಿ । ಶಾಂ

೨೩. ತಮುತ್ತ್ಯೆಯನವರು ಅಡಿದ ಮಾತು । ನಂಮ ಗುರು ರೆವಣಸಿಧೆಶ್ವರ ದೆವರೂ ನಿಂಮ ಕುಲವಾವುದುಯಂದು ಕೇಳಲಾಗಿ । ತಂ

೨೪. ಮ ಕುಡಿವೊಕಲ ಮಕ್ಕಳು । ಯಂದು ಶಾಂತಮುತ್ತ್ಯೆಯನವರ । ಆದಲಗಿ । ನಿಂಮ ಕುಲವೆಂತು ಕುಡಿವಕ್ಕಲಿಗರುವೆಂ

೨೫. ದಿರಿ ನಿಂಮ ಗುರು ರೆವಣಸಿಧೆಶ್ವರ ದೆವರು ಹೆಗಾದರು । ನಮಗೆ ಲ್ಲಿಂಗದೀಕ್ಷೆ । ಹೆಗೆ ಆಯಿತುಯಂದು ಕೆಳಲಾಗಿ ಶಾಂತ ಮುತ್ತ್ಯೆ

೨೬. ಯ್ಯನವರು ಆಡಿದ ಮಾತು । ನಂಮ ಗುರು ರೇವಣಸಿಧೆಶ್ವರ ದೆವರು । ಕಂಚಿಪಟ್ಟಣದಿಂದ ಕಾವಿಕಾಶಾಂಬುದಿದ । ಕಲಕೆ

೨೭. ರೆಯಂಬ ಹಟ್ಟಿಗೆ ಬಂದರು । ನಾ ಉಟ್ಟಿದ ಕಂಬಳಿಯ ಕುಳಿರ ಹಾಕಿದೆವು । ಸ್ವಾಮಿಯಲ್ಲಿಂದ ಚಿತ್ತ್ಯೆಯಸಿದಿರಿಯಂದು ಕೆಳ

೨೮. ಲಾಗಿ । ಕಾಂಚಿ ಪಟ್ಟಣದಿಂದ ಬಂದೆಲು ಯನಲಾಗಿ । ಯೆನು । ನಿಮಿತ್ತವಾಗಿ ಬಂದಿರಿಯಂದು ಕೆಳಲಾಗಿ ಆ ರೆವಣಸಿಧೆಶ್ವರ ದೇವ

೨೯. ರು ಆಡಿದ ಮಾತು । ನೀನ ಉ ಚಂಬೆರಡು ಕಂಬಿಹಾಲ । ನಾಗರಿಗೆ ನಿದುತಯಿಧೆ । ನಲು ಹಾಲುಳವ ಮಗನೆಂದು ಸಲ್ಲಿಸೆ

೩೦. ಉಯಂದು । ಬಂದೆಪೆಯಂದು ಯನಲಾಗಿ । ಹಾಗೆಲೆಗಲ್ಲಿ । ಸಲಿಸಿಯಂದು । ಬಿಂನಹಂ ಮಾಡಿ ಮನೆಗೆ । ಬಂದೆಲು ಮನೆಗೆ ಬಂದ ಮ

೩೧. ಲೆವಾಲ ಸಲಿಸಿಯಂದು ಬಿಂನಹ ಮಾಡಲಾಗಿ । ನಿನಗೆ ಲಿಂಗಯಿಲ್ಲ । ನಾಉ ಲಿಂಗಾಂಗಿಯಲ್ಲದ ಬರಿಯ ಹಾಲ ಸಲಿಸಲಾಗದು

೩೨. ಯಂದು ಯಂನಲಾಗಿ । ಸ್ವಾಮಿ ಹಾಲ ಸಲಿಸಿದರೆ ಸಾಕು ಯಂನಲಾಗಿ ಹಾಗೆ ನಿಂಮ ಪಾದವ ಕರಣದಲ್ಲಿ ಲಿಂಗಧಾರಣೆ

೩೩. ಆದವುಯಂದು ಯಂನಲಾಗಿ । ನಂಮ ಸ್ತ್ರೀ ಪುರುಷರಿಗೆ ಲಿಂಗದೀಕ್ಷೆಕೊಡಿಯಂದು ಯಂನಲಾಗಿ

ಪತ್ರ ೨

ಮುಂಭಾಗ

೩೪. ಪಾದಪೂಜೆಗೆ । ಪುಷ್ಪವ ತಾ ಹೋಗುಯಂದು । ಯಂನಲಾಗಿ ಗಿಡಕೊಂದು ಪತ್ರೆಪುಷ್ಪ ತಂದೆನುಯಂದು ಯನಲಾಗಿ ।

೩೫. ಯಿನ್ನೊಂದು ಪುಷ್ಪವ ತಂದಲ್ಲದೆ ವಪ್ಪನು । ಯೆಂದು ಯಂನಲಾಗಿ । ಯಿನ್ನೊಂದು ಪುಷ್ಪವಾವುದು ಯಂನಲಾಗಿ । ಕರಿಮಲ್ಲಿಗೆಯ ಪುಷ್ಪ

೩೬. ವ ತಂದಲ್ಲದೆ ವೊಪ್ಪೆನುಯೆಂದು ಯೆನಲಾಗಿ । ಕರಿಮಲ್ಲಿಗೆ ಪುಷ್ಪ ಆಗಬೇಕುಯೆಂದು ಯನಲಾಗಿ । ಯಿಂಡೆ ಶಾಂತ್ರೈಯನು ರೆವಣಸಿ

೩೭. ದ್ದೇಸ್ವರ ದೇವರ ಪಾದಪೂಜೆ ತಡದಿಯೆಂದು । ಸಾಂತಯ್ಯನಗ ಸ್ವಾಮಿ ವಿಭೂತಿಯ ಧರಿಸಿದರೆ । ಸ್ವಾಮಿಪಾದ ವಿಡರು । ತಂದನು । ಯಂದು

೩೮. ಯನಲಾಗಿ । ಹೋಗುಯಂದು ವಿಭೂತಿಯ ಧರಿಸಿದರು । ಆಮಾವ ಕರಿಮಲ್ಲಿಗೆಯ ಪುಷ್ಪವವಿಲ್ಲದೆ ರೆವೆಣಸಿದ್ದೇಸ್ವರ ದೇವರ ಪಾ

೩೯. ದ ಪೂಜೆ ತಡದಿದೆಯಂದು । ಯಿಂಡೆ ಶಾಂತ್ಯೆಯ ಕೊರಳಿಗೆ ಕಡ್ಗದನೊಲೆ ಕೊಂದು ಕೂಗಲಾಗಿ । ಆ ದೇವಲೋಕದಿಂದ ಕರಿಯ

೪೦. ಮಲ್ಲಿಗೆಯ ಪುಷ್ಪದ ಸರಸರಗಳು ಯಳಿಯಲಾಗಿ । ಆ ಪುಷ್ಪದಿಂದ ರೆವಣಸಿಧೆಸ್ವರದೇವರ ಪಾದಪೂಜೆಯಂ ಮಾ

೪೧. ಡಿ । ಸ್ವಾಮಿಯನು ಹಾಲಸಲಿಸಿಯಂದು ಬಿಂನಹವ ಮಾಡಿದರೆ । ಸರ್ವಗಣಗಳಲಿ ಸಲಿಸಿದೆಯನುತ ಅವರು । ಬಂದರು

೪೨. ಯಂದರು । ಯಂದು ಯನಲಾಗಿ । ಆ ಸಾಂತ್ಯೆಯ್ಯನು ಬಿಂನಹ ಮಾಡಲಾಗಿ ನಂಮ ಸ್ತ್ರೀ ಪುರುಷರಿಗೆ ಯಿ ಬರಿ ಲಿಂಗದೀಕ್ಷೆ

೪೩. ಕೊಡರು । ಸ್ತ್ರೀಯಹ ದೆವಿಯ ಮಡಕೆಯಲಿ । ಕೊಡಪಾಲ ನಿಡಿಸಿಕೊಂಡು ಸಲಿಸಿದರು ಅಂದು ಮೊದಲು ನಂಮ ಗುರು

೪೪. ರೆವಣಸಿದೆಸ್ವರ ದೆವರು ಯಂದು ಶಾಂತಮುತ್ತೈಯ್ಯನವರು ಆಡಿದರು । ಆಡಲಾಗಿ ಸಭೆ ನಿವು ಕುರುಬರಿಗೆ ನಿವು ಗುರು

೪೫. ವಾದುದು ಹೇಗೆಯಂದು । ನಿಮಗೆ ಮುರುಹು । ಮುದ್ರೆ ಮೂರಡಿಯ ಕಂತೆ ಬಂದುದು ಹೆಗೆಯಂದು ಸಭೆ ಕೆಳಲಾಗಿ

೪೬. ಸಾಂತಮುತ್ತೈಯ್ಯನವರು ಆಡಿದ ಮಾತು । ಆ ಕಲ್ಯಾಣ ಪಟ್ಟದಲ್ಲಿ ಸತ್ತ ಕುರಿಯನು । ಹೆರ್ತ್ತ ಮೊಸರನು ಯರ

೪೭. ಕುರಿಯನು ಹೆರ್ತ್ತ ಮೊಸರನು । ಹೀಗೆ ಕುರುಬರು ಮಾರಬಹುದೆಯಂದು ಕುರುಬರೆಯಳು ಬೆಲಯಿಂದ್ರ ಹೊರಹಾಲಾಗಿ

೪೮. ಆ ಕುರುಬರು ಬಂದು । ನಮಗೆದುರಾಗಿ ನಂಮ ಕ{ಕಲ್ಯಾಣ} ಪಟ್ಟಣದೊಳಗೆ । ಕಿನ್ನರಿ ಬ್ರಹ್ಮಯ್ಯನವರ ಲಿಂಗ ಮುದ್ರೆಯ ತಗರು ಸಾಯಲಾಗಿ

೪೯. ಸತ್ತ ತಗರ ಕಲ್ಯಾಣಕೆ ಹಿಡಿಸಿಕೊಂಡು ಹೋಗಿ । ಪುಷ್ಪಕದಲ್ಲಿ ಕೊಂಡು ಹೋಗಿ ನಂಮ ಗುರು ರೆವನಸಿಧೆಸ್ವರ ದೆವರು

೫೦. ಸ್ತುತಿಸಿ ಬಂದು ತೀರ್ಥ ಪ್ರಸಾದವನು ತಳಿದು । ಆ ಸತ್ತ ತಗರಿನ ಪ್ರಾಣವನು ಪಡೆವೆಉ ಆ ಕಲ್ಯಾಣದಲ್ಲಿ ಪುರದ ಬ

೫೧. ಸವಂಣನು । ಮಹಾಮಹಂತು ಸರಣರು ಮೆಚಿ ಮುರುಹ ಮುದ್ರೆ ಮೂರಡಿಯ ಕಂತೆಯನು ಕೊಟ್ಟು ಹೊರ ಹಾ

೫೨. ಕಿದ ಕುರುಬರನು ಕುಲವನು ವಳಿಯಕೆ ತೆಗೆದುಕೊಂಡು ಕುರಬರೆಲ್ಲರಿಗೂ ಗುರು ವಾಗಿರಿಯಂದು

ಹಿಂಭಾಗ

೫೫. ಆ ಕುರುಬರಿಗೆ ವಿಭುತಿ ಧರಿಸಿಕೊಂಡುಯಿರಿಯಂದರು । ಆ ಬಸಣವಂನು ಮಹಾಶರಣನು ಅರಭ್ಯ ಮೊದಲು ಕಂತೆ ಬಂ

೫೬. ದದು ಗುರುವಾದ ವಿವರ ಬುದಿಗ । ಯಂದು ಶಾಂತಮುತ್ತೈಯ್ಯನವರು ಆಡಿದರು ಮಹಾಮಹಂತು ಮಂಕನವರ ಕ

೫೭. ರದು । ನಿಮಗೆ ಮುರುಹು ಮುದ್ರೆ ಮೂರಡಿ ಕಂತೆ ಬಂದುದು ಹೀಗೆ । ಕುರುಬರಿಗೆ ಗುರುವಾದುದು ಹಿಗೆಯಂದು ಕೇಳಲಾಗಿ । ಮಂಕನವರು ಆ

೫೮. ಆಡಿದ ಮಾತು । ಕೊಡುಗಲ್ಲಿನ ಮೇಲೆ ಹಂನೆರಡು ಸೂಜಿನಿಲಿಸಿ । ಅದರ ಮೇಲೆ ಹಂನೆರಡು ಬಟ್ಟಲಿರಿಸಿ । ಆ ಸೂಜಿ ಬಟ್ಟಲ ಮೇಲೆ ಹಂನೆರಡು

೫೯. ವರುಷ ತಪಸ ಮಾಡಲಾಗಿ । ಈಶ್ವರನು ಮೆಚ್ಚಿ ಪ್ರಸಂನವಾಗಿ ನಮಗೆ ಮುರುಹ ಮುಂದ್ರೆ ಮೂರಡಿಯ ಕಂತೆಯನು ಕೊಟ್ಟು ಕುರ್ರುಬ

೬೦. ಗುಲಕೆ ಗುರುವಾಗಿರಿಯಂದು । ಮಂಕನವರು ಆಡಲಾಗಿ ಸಭೆ ಸಮಸ್ತರು । ನಿನು ಯಿಂಥಾ ಪ್ರಸಂಗ ಸ ಆ ಯುಗದಲ್ಲಿ ನಡಿದೆಯಂದು ಸಬೆ ಕೆಳಲಾ

೬೧. ಗಿ ಯಿ ಕಲಿಯುಗದಲ್ಲಿ ಯಿಂದ್ರ ಉಗ್ರ ತಪಸ ಆರು ಮಾಡಿದವರುಯಿಲ್ಲ । ಪೂರ್ವದಲ್ಲಿ ಬಸವ ಬಿಜ್ಜಣನ ಕಾಲದಲ್ಲಿ ತಪಸ ಮಾಡಿದೆಉ । ಎಂದು ಮಂಕ

೬೨. ನವರು ಆಡಲಾಗಿ । ಆ ಮಾತ ಕೆಳಿಸಿದಂತ ಹಿರಿಯರುಗಳು ಸಮಸ್ತ ಪ್ರಜೆಗಳು ಸರ್ವರೆಲ್ಲ ಕೇಳಿ । ಆಗಮುಗಳ ನೋಡಿ ಯಿ ಕಲಿಯುಗದಲಿ

೬೩. ಯಿಂತಾ ಉಗ್ರ ತಪಸನಾರು ಮಾಡಿದವರುಯಿಲ್ಲ ಪೂರ್ವದಲ್ಲಿ । ಪಾರ್ವತಿದೇವಿಯರು । ಯಂದೆಂದುಗೂ ಜನನ ಮರಣವಿಲ್ಲದಂತಾ ಪುರುಷ

೬೪. ನಾಗಬೇಕೆಂದು ಪರಮೇಶ್ವರನ ಕುಕ್ಕುಟ ತಪಸ ಮಾಡಿದಳು । ಯಿ ಕಲಿಯುಗದಲ್ಲಿ ಹೀಗೆ ಆರು ತಪಸ ಮಾಡಿದವರುಯಿಲ್ಲ । ಮಂಕನವರ

೬೫. ಮಾತು ಬಿಳುಸೋಲವೆಂದು ಕಟಕಿಯ ಮಾಡಿದರು । ನಿಂನ ಗುರು ಸೊಂನಲಾಪುರದ ಸಿದ್ಧರಾಮದೇವರಿಗೆ ತಂದೆತಾಯಿ ಉಂಟು ಫಲ ಉಂ

೬೬. ಟು ನಿನಗೆ ತಂದೆತಾಯಿಯಿಲ್ಲ । ಕುಲವಿಲ್ಲ । ಯಿ ಯರಡು ಬಗೆಯಲ್ಲಿ ನಂನ ಮಾತು ಸೊಲಯಂದು ಸಭೆಯಂ ನಲಗಿ । ಮಂಕನವರು ಆ

೬೭. ಡಿದ ಮಾತು ತಂಮ ಕುಲ ಸೆನೆ ಕುಲವೆಂದು ಆಡಲಾಗಿ । ಸೆನೆ ಕುಲಯಂದರೆ ಹಾಲು ಕುಲವಾಯಿತ್ತು । ಮೊದಲು ಕುಲವಿಲ್ಲವೆಂದೆಗ ಯಂ

೬೮. ಗ ಕುಲವ ಹೇಳಿದೆ । ಯಿದರಿಂದ ಮರುಮಾತಿನಲು ನಂನ ಮಾತು ಸೊಲ । ನನಗೆ ಗುರುತನಕೆ ಕೆಲಸವಿಲ್ಲಯಂದು । ಸಭೆ ಯಂನಲಾಗಿ

೬೯. ಹಾಲಮತದ ಕುರುಬ ಕುಲಕೆ ಶಾಂತಮುತ್ತೈಯ್ಯನವರೆ ಗುರುಗಳು । ಮಂಕನಾದರೆ ಗುರುತನಕೆ ಕಾರಣವಿಲ್ಲ ಎಂದು । ಸಭೆಯಲು

೭೦. ಕೂಡಿ ಸಮಸ್ತರು ಮಠಮನೆಯ ಹಿರಿಯರುಗಳು ಮಹಾಮಹಾಂತು ಸಮಸ್ತೆರೆಲ್ಲರು । ಯಿ ಅರ್ಥಕೆ ವಂದು ವೊಲೆ ಬರಸಿ

೭೧. ಮುದ್ರೆ ಮುನುಷ್ಯರ ಕೂಡೆ ಹೇಳಿ ಆ ವೊಲೆಯನು ಮುದ್ರೆಮನುಷ್ಯರ ಕೈಯ್ಯ ಕೊಡಲಾಗಿ । ಆ ಮುದ್ರೆ ಮನುಷ್ಯರು ತಳವರು ಜಂಗ

೭೨. ಮಯ್ಯನ ಮುಂದೆ ಯೆಕವಾಗಿ । ಆ ವೊಲೆ ವೊದಿಸಿಕೊಂಡು ತಿರುಮಲರಾಜ್ಯೆಯ್ಯನವರ ಮುಂದೆ ಆ ಸಭೆ ಕಳುಹಿದ ವೊಲೆ

೭೩. ವೊದಿಸಿ ತೊರ್‍ಸಿ ಬಿಂನಹಂ ಮಾಡಿ । ಆ ತಿರುಮಲ್ರಾಜ್ಯೆಯ್ಯನವರು ರಾಮರಾಜ್ಯೆಯ್ಯನವರು । ವೆಂಕಟಾದ್ರಿರಾಜ್ಯೆಯನವರು

೭೪. ಯಿವರು ಅರಸುಗಳು ನ್ಯಾಯದಲ್ಲಿ । ಗೆದ್ದ ಶಾಂತಮುತ್ತೈಯ್ಯನವರಿಗೆ ವಿರೂಪಾಕ್ಷದೆವರ ಸೊಮವಾರದ ಬಾಗಿಲಲ್ಲಿ ಕುರುಬ

೭೫. ರೆಂಬ ಜಾತಿಗೆ ಮಂಕನವರಿಗೆ ಕಾರಣವಿಲ್ಲ । ಶಾಂತಮುತ್ತೈಯ್ಯನವರ ಗುರುಉಗಳೆಂದು । ಹೊಯಿಸಿಕೊಟ್ಟ ಸ್ತಿರಶಾಸನವು ಯಿದು

೭೬. ಅಲ್ಲಯೆಂದವರಿಗೆರವರವ ನರಕ ತಪ್ಪದು । ನ್ಯಾಯದಲಿ ಗೆದ್ದ ಶಾಂತಮುತ್ತೈಯ್ಯನವರಿಗೆ ಉಡುಗೊರೆಯ ಕೊಟ್ಟು ಕಳುಹಿಸಿದರು । ನ್ಯಾಯದ

೭೭. ಲಿ ಸೋತ ಮಂಕನವರ ಕಟ್ಟಿ ಸೆರೆ ಹಾಕಿ ಅಪರಾಜಿತಕೊಂಡಿರು । ಸೋತ ಕಟ್ಟಿ ಸೆರೆಯ ಬಿದ್ದ ಮಂಕನವರ ಹೆಸರು ಬೆಳಮಂಕ । ಪುರಾಣದ ಮಂಕ ।

೭೮. ಗಾಯದ ಮಂಕ । ಕಣ್ಣೂರ ಮಂಕ । ಬಿಳಿಚೆಡ ಮಂಕ । ಹೆಗ್ಗೆರೆ ಮಂಕ । ಕಿಜ್ಜು ಮಂಕ ।..... ಉ....... ಮಂಕ । ಅಸುಂಡಿ ಮಂಕ । ಅಂತು ೧೧

ತಾಮ್ರಪತ್ರ ೩

ಮುಂಭಾಗ

೭೯. ಅಂತು ಸೆರೆಗೆ ಬಿಧವರು । ಅಪರಾಧವ ತತ ಹಂನೊಂದು ಮಂದಿ ಮಂಕನವರು । ಯಿ ಮಂಕನ

೮೦. ವರ ಸೋಲಿಸಿ ಗುರುತನಕೆ ಕಾರಣವಿಲ್ಲಯೆನಿಸಿ ಕಟ ಸೆರೆಗೆ ಹಾಕಿಸಿದ । ಸಾಂತಮುತ್ತೈಯನವರ ಹೆ

೮೧. ಸರು ಸಿರ್ಪೆಯದೊಡತಮಿದೆ ವಡೆರು । ಕೊಳಲದ ತಮಿದೆ ವಡೆರು । ಹಿರಿಉರಸಿಯಪ್ರ

೮೨. ವಡೆರು ಕ। ಂದಿಕೆರೆ ಮಯಾದೊಸಿಧ ವಡೆರು । ರೆವಣ ವಡೆರು । ಅಗಳಿಗುರುವಪ ವಡೆರು

೮೩. ಬಸಪವಡೆರು । ನಂದಿಪ ವಡೆರು । ಬುಧವಡೆರು । ಕೊಟೂರ ನಗಿದವಡೆರು । ಕಂಚವಡೆರು ಯಿ

೮೪. ವರು ಸಾಂತಮುತ್ತೈಯ್ಯನವರು । ಹಾಲುಮತದ ಕುರುಬರೆಂಬ ಜಾತಿಗೆ ಸಾಂತಮುತ್ತೈಯನೊರೆ ಮು

೮೫. ತೈಯನವರೆ ಗುರುಗಳು । ಯಂದು ರಾಯರು ಸಿಂಹ್ವಾಸನಪತಿಗಳು । ಹೊಯಿಸಿಕೊಟ್ಟ ಸ್ತಿರ

೮೬. ಶಾಸನಾಲು । ಯಿದನು ಅಲ್ಲಯಂದವರಿಗೆ ರವರವ ನರಕ ತಪ್ಪದು । ಯಿಂತಿ ಸಾಸ

೮೭. ನದ ವಿವಲು ಸಮಾಪ್ತ ಮಂಗಳ ಮಹಾಶ್ರೀಶ್ರೀಶ್ರೀ*

* ತಗರಪವಾಡ[ಸಂ] ಎಂ.ಎಂ. ಕಲಬುರ್ಗಿ, ಸಿ.ಕೆ. ಪರಶುರಾಮಯ್ಯ, ಎಫ್.ಟಿ. ಹಳ್ಳಿಕೇರಿ. ಪು, ೯೯-೧೦೫.

ವಕ್ತೃಗಳ ವಿವರ

ಹೆಸರು	ವಯಸ್ಸು	ವೃತ್ತಿ	ಗ್ರಾಮ	ತಾಲ್ಲೂಕು	ಜಿಲ್ಲೆ
ಔಟಿ ಎಚ್.ಕೆ	೬೬	ನಿವೃತ್ತಿ ಅರಣ್ಯಾಧಿಕಾರಿಗಳು	ಬಾಗಲಕೋಟೆ	ಬಾಗಲಕೋಟೆ	ಬಾಗಲಕೋಟೆ
ಗಂಗಾಧರ	೫೫	ಪೂಜಾರಿ	ಪೆದ್ದಹೊತೂರು	ಆಲೂರುಮಂಡಲಂ	ಕರ್ನೂಲು
ಗಂಗಾಧರ	೪೦	ಉಪನ್ಯಾಸಕರು	ಯಳನಾಡು	ಚಿಕ್ಕನಾಯಕನಹಳ್ಳಿ	ತುಮಕುರು
ಗಂಗಾಧರಸ್ವಾಮಿ	೫೬	ಒಡೆಯರು	ಗೋವಿಂದವಾಡ	ಬೊಮ್ಮನಹಾಳ್	ಅನಂತಪುರ
ಚನ್ನಯ್ಯ ಗುರುವಿನ	೫೨	ಒಡೆಯರು	ಗೋಸ್ಬಾಳ	ಸಿರಗುಪ್ಪ	ಬಳ್ಳಾರಿ
ಚಂದ್ರಶೇಖರಯ್ಯ	೫೬	ಒಡೆಯರು	ಕುಂದುರ್ಪಿ	ಕುಂದುರ್ಪಿಮಂಡಲ	ಅನಂತಪುರ
ಚಿಕ್ಕಣ್ಣ ಒಡೆಯರ್	೫೮	ಒಡೆಯರು	ಲಕ್ಷ್ಮಂಪಲ್ಲಿ	ಕುಂದುರ್ಪಿಮಂಡಲ	ಅನಂತಪುರ
ದೊಡ್ಡ ಬಸಪ್ಪ	೭೦	ಪೂಜಾರಿ	ಮುದೇನೂರು	ಹಾಲಹರವಿ ಮಂಡಲ	ಕರ್ನೂಲು
ನಾಗಪ್ಪ	೫೦	ಕೃಷಿಕ	ಬಸಾಪುರ	ಸಂಡೂರು	ಬಳ್ಳಾರಿ
ನಾಗರಾಜ	೩೩	ಉಪನ್ಯಾಸಕರು	ಕೆಂಕೆರೆ	ಅರಸಿಕೆರೆ	ಹಾಸನ
ನಾದಗುರುಮೂರ್ತಿ	೪೫	ಪೂಜಾರಿ	ಕದರಂಪಲ್ಲಿ	ರಾಯದುರ್ಗಂ	ಅನಂತಪುರ
ಪಂಪಾಪತಿಸ್ವಾಮಿ	೮೦	ಒಡೆಯರು	ಗೋವಿಂದವಾಡ	ಬೊಮ್ಮನಹಾಳ	ಅನಂತಪುರ
ಪ್ರಕಾಶ ಒಡೆಯರು	೬೦	ಒಡೆಯರು	ದೊಡ್ಡೇರಿ	ಚಳ್ಳಕೆರೆ	ಚಿತ್ರದುರ್ಗ
ಬಸಯ್ಯ ಕರಿಸಿದ್ಧಯ್ಯ	೫೦	ಶಿಕ್ಷಕರು	ಸರೂರು	ಮುದ್ದೇಬಿಹಾಳ	ವಿಜಯಪುರ

ಬಸಯ್ಯ	೫೦	ಕೃಷಿಕ	ಉಡೆಗೊಳ	ರಾಯದುರ್ಗಂ	ಅನಂತಪುರ
ಬಸವರಾಜಒಡೆಯ	೫೨	ಪೂಜಾರಿ	ಹುಳಿಯಾರು	ಚಿಕ್ಕನಾಯಕನಹಳ್ಳಿ	ತುಮಕೂರು
ಮಲ್ಲಿಕಾರ್ಜುನ ಒಡೆಯರು	೫೦	ಒಡೆಯರು	ಸರೂರು	ಮದ್ದೇಬಿಹಾಳ	ವಿಜಯಪುರ
ರಾಮಣ್ಣ	೭೦	ಕೃಷಿಕ	ಚಿಂತಕುಂಟ	ಹಾಲಹರವಿಮಂಡಲ	ಕರ್ನೂಲು
ರಾಮಸ್ವಾಮಿ ಒಡೆಯರು	೪೭	ಒಡೆಯರು	ಹುಲ್ಲೂರು	ಚಿತ್ರದುರ್ಗ	ಚಿತ್ರದುರ್ಗ
ರೇವಣಸಿದ್ಧಪ್ಪ	೫೦	ಒಡೆಯರು	ಚಿಂತಕುಂಟ	ಹಾಲಹರವಿ ಮಂಡಲ	ಕರ್ನೂಲು
ರೇವಣ್ಣ ಒಡೆಯರು	೭೦	ಒಡೆಯರು	ಕಂದಿಕೆರೆ	ಚಿಕ್ಕನಾಯಕನಹಳ್ಳಿ	ತುಮಕೂರು
ರೇವಪ್ಪ ಜೋಗಿ	೬೯	ಕೃಷಿಕ	ಸರೂರು	ಮುದ್ದೇಬಿಹಾಳ	ವಿಜಯಪುರ
ಲಕ್ಷ್ಮಣಗೌಡ	೫೭	ಕೃಷಿಕ	ಕಂದಿಕೆರೆ	ಚಿಕ್ಕನಾಯಕನಹಳ್ಳಿ	ತುಮಕೂರು
ಶಾಂತಪ್ಪ ಒಡೆಯರ	೬೫	ಪೂಜಾರಿ	ಚಿಕ್ಕನಾಯಕನಹಳ್ಳಿ	ಚಿಕ್ಕನಾಯಕನಹಳಿ	ತುಮಕೂರು
ಶಾಂತಯ್ಯ ಹೂವಯ್ಯ ಗುರುವಿನ	೩೩	ಒಡೆಯರು	ಸರೂರು	ಮುದ್ದೇಬಿಹಾಳ	ವಿಜಯಪುರ
ಶಾಂತಮುತ್ತಯ	೬೦	ಒಡೆಯರು	ಸೀರ್ಪಿಕೊಟ್ಟಾಲ	ಬೆಳಗುಪ್ಪ ಮಂಡಲ	ಅನಂತಪುರ
ಶಿವಪ್ಪಯ್ಯ ಒಡೆಯರ	೭೫	ಪೂಜಾರಿ	ಹರ್ತಿಕೋಟೆ	ಹಿರಿಯೂರು	ಚಿತ್ರದುರ್ಗ
ಶ್ರೀನಿವಾಸಸ್ವಾಮಿ ಒಡೆಯರ	೫೪	ಪೂಜಾರಿ	ಯಳನಾಡು	ಚಿಕ್ಕನಾಯಕನಹಳ್ಳಿ	ತುಮಕೂರು
ಶ್ರೀನಿವಾಸ	೬೨	ಕೃಷಿಕ	ಕಲ್ಲದೇವನಹಳ್ಳಿ	ರಾಯದುರ್ಗಂ	ಅನಂತಪುರ
ರೇವಣ್ಣಯ್ಯ ಶಿವಪ್ಪಯ್ಯ ಒಡೆಯರು	೫೫	ಒಡೆಯರು	ಶ್ರೀರಾಮಪುರ	ಹೊಸದುರ್ಗ	ಚಿತ್ರದುರ್ಗ
ಶಿವಾನಂದಸ್ವಾಮಿ	೬೬	ಪೂಜಾರಿ	ರೇಕಲಗುಂಟ	ರಾಯದುರ್ಗಮಂಡಲ	ಅನಂತಪುರ

ಸಣ್ಣಕಾರ ಮಂಜಪ್ಪ	೬೦	ಕೃಷಿಕ	ಪೆದ್ದುಲ್ತಿ	ಪತ್ತಿಗೊಂಡಮಂಡಲು	ಕರ್ನೂಲು
ಸಣ್ಣಕಾರ ಬಸಪ್ಪ	೫೦	ಪೂಜಾರಿ	ಪೆದ್ದುಲ್ತಿ	ಪತ್ತಿಗೊಂಡಮಂಡಲು	ಕರ್ನೂಲು
ಸಣ್ಣಪ್ಪಯ್ಯ ತಂದೆ ಸಿದ್ಧಯ್ಯ	೭೫	ಒಡೆಯರು	ಸರೂರು	ಮುದ್ದೇಬಿಹಾಳ	ವಿಜಯಪುರ
ಸಿದ್ಧಪ್ಪ	೬೭	ಪೂಜಾರಿ	ಚಿನ್ನಹೊತೂರು	ಆಲೂರುಮಂಡಲು	ಕರ್ನೂಲು
ಸಿದ್ಧಯ್ಯ ಒಡೆಯರು	೭೧	ಒಡೆಯರು	ಕಡದರಹಳ್ಳಿ	ಚಳ್ಳಕೆರೆ	ಚಿತ್ರದುರ್ಗ
ಸಿದ್ಧಯ್ಯ ಒಡೆಯರ್	೫೦	ಒಡೆಯರು	ಕರ್ತನಪರ್ತಿ	ಕಲ್ಯಾಣದುರ್ಗಂ	ಅನಂತಪುರ
ಸಿದ್ಧಯ್ಯ ಒಡೆಯರ್	೭೫	ಒಡೆಯರು	ಕಡದರಹಳ್ಳಿ	ಚಳ್ಳಕೆರೆ	ಚಿತ್ರದುರ್ಗ
ಸಿದ್ಧಯ್ಯಸ್ವಾಮಿ	೫೫	ಪೂಜಾರಿ	ವಿಠಲಾಪುರ	ಸಂಡೂರು	ಬಳ್ಳಾರಿ
ಸಿದ್ಧಲಿಂಗಯ್ಯಸ್ವಾಮಿ	೫೨	ಒಡೆಯರು	ಸಿಂದ್ವಾಳ	ಬಳ್ಳಾರಿ	ಬಳ್ಳಾರಿ
ಸಿದ್ಧಲಿಂಗಯ್ಯಸ್ವಾಮಿ	೭೦	ಒಡೆಯರು	ವೇಪಲಪರ್ತಿ	ಬ್ರಹ್ಮಸಮುದ್ರಂ	ಅನಂತಪುರ
ಸಿದ್ಧಲಿಂಗಯ್ಯಸ್ವಾಮಿ	೪೦	ಒಡೆಯರು	ಹಂದನಕೆರೆ	ಚಿಕ್ಕನಾಯಕನಹಳ್ಳಿ	ತುಮಕೂರು
ಸಿದ್ಧಯ್ಯ ಸ. ಗುರುವಿನ	೫೮	ಒಡೆಯರು	ಸರೂರು	ಮುದ್ದೇಬಿಹಾಳ	ವಿಜಯಪುರ
ಸಿದ್ಧಯ್ಯ ಸಿದ್ರಾಮಯ್ಯ ಗುರುವಿನ	೬೦	ಒಡೆಯರು	ಸರೂರು	ಮುದ್ದೇಬಿಹಾಳ	ವಿಜಯಪುರ
ಸಿದ್ಧಯ್ಯ ಹುಚ್ಚಯ್ಯ ಗುರುವಿನ	೩೦	ಒಡೆಯರು	ಸರೂರು	ಮುದ್ದೇಬಿಹಾಳ	ವಿಜಯಪುರ
ಹನುಮಂತಪ್ಪ ಕೆ.	೬೦	ಕೃಷಿಕ	ರಾಯದುರ್ಗಂ	ರಾಯದುರ್ಗಮಂಡಲ	ಅನಂತಪುರ
ಹನುಮಂತ ಜೋಗಿ	೮೧	ನಿವೃತ್ತ ಶಿಕ್ಷಕರು	ಸರೂರು	ಮುದ್ದೇಬಿಹಾಳ	ವಿಜಯಪುರ
ಹುಚ್ಚಯ್ಯ ಸಾಂತಯ್ಯ ಗುರುವಿನ	೫೧	ಪೂಜಾರ	ಸರೂರು	ಮುದ್ದೇಬಿಹಾಳ	ವಿಜಯಪುರ

ಪರಾಮರ್ಶನ ಗ್ರಂಥಗಳು

ಅಣ್ಣಪ್ಪ ವಾಸುದೇವರಾಯ ಮುತ್ತೂರ, ಹಾಲ್ಮತದ ಶ್ರೀ ಕರಿಸಿದ್ಧೇಶ್ವರ ಪುರಾಣ, ವಿದ್ಯಾನಿಧಿ ಪ್ರಕಾಶನ, ಗದಗ, ೧೯೭೧

ಅನ್ನಪೂರ್ಣ ಗೋಸ್ಬಾಳ, ಹಾಲುಮತ ಚರಿತ್ರೆ: ಯಲ್ಲನಗೌಡ. ಫ. ಅತ್ತಿಕೊಳ್ಳ (ಸಂ) ಹಾಲುಮತ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನ, ಎಂ.ಪಿ. ಪ್ರಕಾಶ ನಗರ, ಹೊಸಪೇಟೆ, ೨೦೧೨

ಅನ್ನಪೂರ್ಣ ಗೋಸ್ಬಾಳ, ಹಾಲುಮತ ಅಧ್ಯಯನದ ಆಕರಗಳು ಸ್ವರೂಪ ಮತ್ತು ವಿಶ್ಲೇಷಣೆ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೨

ಅನ್ನಪೂರ್ಣ ಗೋಸ್ಬಾಳ, ಹಾಲುಮತ ಕಿರಣ, ಹಾಲುಮತ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಎಂ.ಪಿ. ಪ್ರಕಾಶನಗರ, ಹೊಸಪೇಟೆ ೨೦೧೪

ಆಂಧ್ರ-ಕರ್ನಾಟಕದ ಗಡಿನಾಡ ಸ್ಥಳನಾಮಗಳು: ಭಾಷಿಕ ಅಧ್ಯಯನ, ೨೦೦೫

ಇತಿಹಾಸ ದರ್ಶನ(ಸಂ ೪), ಕರ್ನಾಟಕ ಇತಿಹಾಸ ಅಕಾಡಮಿ(ರಿ) ಬೆಂಗಳೂರು, ೧೯೮೯

ಉಮೇಶ ಹ. ಹೊಸ್ಕೇರಿ, ಶಾಂತಮುತ್ತಯ್ಯ ಮತ್ತು ಸಿದ್ಧರ ಪವಾಡಗಳು, ಶ್ರೀಸಿದ್ಧಯ್ಯ ಗುರುವಿನ ಹಾಲುಮತ ಗುರು ಪೀಠಾಧಿಪತಿಗಳು, ಸರೂರು ಪೂಜಾ ಪ್ರಿಂಟರ್ಸ್, ಬಿಜಾಪುರ, ೨೦೦೮

ಒಡೆಯರ್ ಎಸ್.ಎಸ್., ಸಿದ್ಧರಾಮ ಸಾಹಿತ್ಯ ಸಮೀಕ್ಷೆ: ಐದು ಉಪನ್ಯಾಸಗಳು, ವಿಶೇಷ ವಾಙ್ಮಯ ಪ್ರಸಾರ ಪುಸ್ತಕ ಮಾಲೆ-೧೦, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೨

ಒಡೆಯರ್ ಡಿ. ಹೆಗ್ಗಡೆ, ಕವಲುದಾರಿಯಲ್ಲಿ ಕರ್ನಾಟಕದ ಕುರುಬ ಜನಾಂಗ, ಮಾನವಾಭಿವೃದ್ಧಿ ಅಧ್ಯಯನ ಕೇಂದ್ರ, ಮೈಸೂರು, ೨೦೦೩

ಒಡೆಯರ್ ಡಿ. ಹೆಗ್ಗಡೆ, ಕುರುಬ ಜನಾಂಗದ ಪ್ರಸಿದ್ಧ ಸಾಹಿತಿಗಳು ಮತ್ತು ಕಲಾವಿದರು, ಅಖಿಲಾ ಏಜೆನ್ಸಿಸ್, ಅಂಜನಾದ್ರಿ ರೇಣುಕಾಚಾರ್ಯ ದೇವಸ್ಥಾನ ರಸ್ತೆ, ಮೈಸೂರು, ೨೦೦೫

ಒಡೆಯರ್ ಡಿ. ಹೆಗ್ಗಡೆ, ಶ್ರೀ ಮೈಲಾರಲಿಂಗ, ಅಖಿಲಾ ಏಜೆನ್ಸೀಸ್, ಅಂಜನಾದ್ರಿ, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಮೈಸೂರು, ೨೦೦೫

ಒಡೆಯರ್ ಡಿ. ಹೆಗ್ಗಡೆ, ಶ್ರೀ ರೇವಣಸಿದ್ಧೇಶ್ವರ ಮತ್ತು ಶ್ರೀ ಬೀರೇಶ್ವರರು, ಅಖಿಲಾ ಏಜೆನ್ಸಿಸ್, ಮೈಸೂರು, ೨೦೦೫

ಒಡೆಯರ್ ಡಿ. ಹೆಗ್ಗಡೆ, ವಚನಕಾರ ಶಿವಯೋಗಿ ಸಿದ್ಧರಾಮ, ಅಂಜನಾದ್ರಿ ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಮೈಸೂರು, ಪ್ರ. ಚೇತನ ಬುಕ್‌ಹೌಸ್

ಕರಿಯಪ್ಪ ಎಂ., ಹಾಲುತೊರೆ, (ಸಂ) ನಗರೇಶ್ವರ ಕುರುಬರ ಸಂಘ (ರಿ), ದಾವಣಗೆರೆ, ೨೦೦೩

ಕಲಬುರ್ಗಿ ಎಂ.ಎಂ., ಶಾಸನ ವ್ಯಾಸಂಗ ಸಂಪುಟ–೨, ಕನ್ನಡ ಅಧ್ಯಯನ ಪೀಠ ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫

ಕಲಬುರ್ಗಿ ಎಂ.ಎಂ., ಹರಿಹರನ ರಗಳೆಗಳು, (ಸಂ) ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ, ೧೯೯೯

ಕಲಬುರ್ಗಿ ಎಂ.ಎಂ., ಮಾರ್ಗ(ಸಂ ೪), ಸಂಶೋಧನ(ಪ್ರಬಂಧಗಳ ಸಂಕಲನ), ಸ್ವಪ್ನ ಬುಕ್ ಹೌಸ್, ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ, ಬೆಂಗಳೂರು, ೨೦೦೪

ಕಲಬುರ್ಗಿ ಎಂ.ಎಂ., ಸಿ.ಕೆ. ಪರಶುರಾಮಯ್ಯ, ಎಫ್.ಟಿ. ಹಳ್ಳಿಕೇರಿ, ತಗರು ಪವಾಡ (ಸಂ), ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪

ಕೃಷ್ಣಮೂರ್ತಿ ಮ.ಸಿ., ಸಿದ್ಧಸಾಹಿತ್ಯ, ಪ್ರಸಾರಾಂಗ ಕ.ವಿ.ವಿ. ಹಂಪಿ, ೨೦೧೦

ಕೊಡವಳ್ಳಿ ಕೆ.ಇ., ಹಾಲುಮತದ ಮೂಲ ಡೊಳ್ಳಿನ ಹಾಡುಗಳು, ವಿಜೇತ್ ಪ್ರಕಾಶನ, ಗದಗ, ೨೦೧೩

ಗಂಗಾಧರ ದೈವಜ್ಞ, ಮಾಳಿಂಗರಾಯನ ಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

ಗುರುಮೂರ್ತಿ ಸಿ. ಕೊಟಿಗೆಮನೆ, ಹಾಲುಮತ ಕಂಥಾಧಾರಣೆ(ಒಂದು ಆಚರಣೆ), (ಸಂ) ಕಣ್ಣಯ್ಯ, ಶ್ರೀಮದ್ ಜಗದ್ಗುರು ರೇವಣ್ಣಸಿದ್ಧೇಶ್ವರ ಸಿಂಹಾಸನ, ಬೆಂಗಳೂರು ವಿಭಾಗ ಶಾಖಾಮಠ, ಹೊಸದುರ್ಗ, ೨೦೧೪

ಗುರುವಂದನ(ಸಂ), ಶ್ರೀ ಚನ್ನಯ್ಯ ಒಡೆಯರ್ ಅಭಿನಂದನ ಗ್ರಂಥ, ಸಂಪಾದಕ ಮಂಡಳಿ, ಶ್ರೀ ಚನ್ನಯ್ಯ ಒಡೆಯರ್ ಅಭಿನಂದನ ಸಮಿತಿ, ದಾವಣಗೆರೆ, ೨೦೦೭

ಗೂಡಕರ್ಜಿಗಿ ವೈ.ಕೆ., ಹಾಲುಮತ ಚರಿತ್ರೆ, (ಸಂ), ವಿಜೇತ ಪ್ರಕಾಶನ, ಗದಗ, ೨೦೦೫

ಚಂದ್ರಕಾಂತ ಪ್ರಭುರಾವ್ ಬಿರಾದಾರ್, ಶ್ರೀ ಅಮೋಘಸಿದ್ಧೇಶ್ವರ ಚರಿತ್ರೆ, ಮಡ್ಯಾಳ ಆಳಂದ ಜಿ. ಕಲಬುರ್ಗಿ, ೧೯೮೨

ಚಂದ್ರಕಾಂತ ಬಿಜ್ಜರಗಿ, ಕುರುಬರ ದರ್ಪಣ, ಶೈಲಚಂದ್ರ ಪ್ರಕಾಶನ, ವಿಜಾಪುರ, ೨೦೦೪

ಚಂದ್ರಕಾಂತ ಬಿಜ್ಜರಗಿ, ಕುರುಬರ ಹೆಜ್ಜೆಗಳು ಒಂದು ಅಧ್ಯಯನ, ಚಂದ್ರ ಪ್ರಕಾಶನ, ದರ್ಗಾ, ಕೇಂದ್ರ ಕಾರಾಗೃಹದ ಹತ್ತಿರ, ವಿಜಾಪುರ, ೫೮೬೧೦೩, ೨೦೦೬

ಚಂದ್ರಕಾಂತ ಬಿಜ್ಜರಗಿ, ಕುರುಬರ ಕುಲಗುರು ರೇವಣಸಿದ್ಧ, ಶೈಲಚಂದ್ರ ಪ್ರಕಾಶನ, ವಿಜಾಪುರ, ೨೦೦೯

ಚಂದ್ರಕಾಂತ ಬಿಜ್ಜರಗಿ, ಹಾಲುಮತ ರತ್ನಗಳು, ಶೈಲಚಂದ್ರ ಪ್ರಕಾಶನ, ವಿಜಾಪುರ, ೨೦೧೨

ಚಂದ್ರಪ್ಪ ಹೆಚ್. ಅಜ್ಜಂಪುರ, ಕುರುಬರ ಕರುಹುಗಳು ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೦

ಚಂದ್ರಪ್ಪ ಹೆಚ್. ಅಜ್ಜಂಪುರ, ಟಗರು ಪವಾಡ ಸಂಗೀತ ನಾಟಕ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೦

ಚಂದ್ರಪ್ಪ ಸೂಬಟ್ಟಿ, ಹಾಲುಮತ ಸಾಂಸ್ಕೃತಿಕ ಕತನ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೩

ಚನ್ನಪ್ಪಕಟ್ಟಿ ವೈ., ಆರ್.ಎಸ್. ವಾಡೇದ, ಕುರುಬರ ಜನಪದ(ಸಂ), ಕನಕ ಜಯಂತ್ಯುತ್ಸವ ಸಮಿತಿ, ಸಿಂದಗಿ, ಜಿ. ವಿಜಾಪುರ, ೧೯೯೭

ಚನ್ನಪ್ಪಕಟ್ಟಿ, ಅಮೋಘಸಿದ್ಧ ಪರಂಪರೆ, ವಚನ ಪಿತಾಮಹ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ, ಬಿ.ಎಲ್.ಡಿ. ಶಿಕ್ಷಣ ಸಂಸ್ಥೆ, ವಿಜಾಪುರ, ೨೦೧೨

ಚಿದಾನಂದಮೂರ್ತಿ ಎಂ., ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕ್ರಿ.ಶ. ೪೫೦, ಕ್ರಿ.ಶ. ೧೧೫೦, ಪ್ರಸಾರಾಂಗ, ಮೈಸೂರು, ವಿಶ್ವವಿದ್ಯಾನಿಲಯ, ೧೯೭೯

ಚಿದಾನಂದಮೂರ್ತಿ ಎಂ., ಪಗರಣ ಮತ್ತು ಇತರ ಸಂಪ್ರಬಂಧಗಳು, ಪುಸ್ತಕ ಚಿಲುಮೆ, ೧೮೬೦ ರಫಿನ್‌ಸಿಂಗ್, ಮೊದಲನೇ ಮುಖ್ಯರಸ್ತೆ, ಮೋತಿ ಮೊಹಲ್ಲಾ, ಮೈಸೂರು, ೨೧, ೧೯೮೪

ಜಕಬಾಳ ಎಸ್.ಎಸ್., ಕುರುಬರ ರಟ್ಟಿಮತಶಾಸ್ತ್ರ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪

ಜಗದ್ಗುರು ಪಂಚಾಚಾರ್ಯರು, ಪ್ರಾಚೀನ ನಾಗನೂರು ಬೃಹಸ್ಮಠಾಧ್ಯಕ್ಷ ಪಂಡಿತ ಶ್ರೀ ಕಾಶಿನಾಥ ಶಾಸ್ತ್ರಿ, ಮಹಾಚಾರ್ಯ ತತ್ವಪ್ರಕಾಶನ, ೧೯೭೪

ಜಗನ್ನಾಥ ಹೆಬ್ಬಾಳೆ, ಹೈದರಾಬಾದ್ ಕರ್ನಾಟಕದ ಜಾತ್ರೆಗಳು: ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮

ಜಾಜಿ ದೇವೇಂದ್ರಪ್ಪ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೪

ಜೈಕುಮಾರ್ ಎಂ., ಚಲುವು ಚಪ್ಪರ, ಹಾಲುಮತ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಹೊಸಪೇಟೆ, ೨೦೧೨

ತೋಂಟಾಪುರ ಎನ್.ಬಿ., (ಅನು) ರಸ್ತಾಪುರ ಭೀಮಕವಿ ವಿರಚಿತ ಹಾಲ್ಮತೋತ್ತೇಜಕ ಪುರಾಣ, ೧೯೧೬

ದೊಡ್ಡಣ್ಣ ಗದ್ದನಕೇರಿ, ಬೀರದೇವರ ಸಂಪ್ರದಾಯ ಮತ್ತು ಆಚರಣೆಗಳು, ಕಮಲ ಪ್ರಕಾಶನ, ಚಿತ್ತವಾಡಗಿ, ತಾ. ಹುನಗುಂದ, ಜಿ. ಬಾಗಲಕೋಟೆ, ೨೦೦೩

ನರಸಿಂಹಾಚಾರ್ಯ ಎಲ್., ರಾಘವಾಂಕ ವಿರಚಿತ ಸಿದ್ಧರಾಮ ಚರಿತ್ರೆ, (ಸಂಗ್ರಹ) (ಸಂ) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೬೭೩

ನಾಗರಾಜ ಎಂ.ಜಿ., ಪಿ.ವಿ. ಕೃಷ್ಣಮೂರ್ತಿ, ಇತಿಹಾಸ ದರ್ಶನ, (ಸಂ ೨೧)(ಸಂ) ಕರ್ನಾಟಕ ಇತಿಹಾಸ ಅಕಾಡಮಿ, ಬೆಂಗಳೂರು, ೨೦೦೬

ನಾಯ್ಕರ ಬ.ಪ., ಹಾಲುಮತಸ್ಥರು, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೩

ನಿಂಗಣ್ಣ ಸಣ್ಣಕ್ಕಿ, ಎ.ಬಿ. ಹಿರೇಮಠ, ಕಾಯಕಯೋಗಿ(ಸಂಸ್ಕರಣ ಗ್ರಂಥ)(ಪ.ಸಂ.), ವಿದ್ಯಾನಿಧಿ ಪ್ರಕಾಶನದ ರಜತ ಮಹೋತ್ಸವ ಸಮಿತಿ, ಗದಗ, ೨೦೦೨

ಪಡಶೆಟ್ಟಿ ಎಂ.ಎಂ., ಹೇಳಿಕೆ ಮಾಡ್ಯಾರ ಒಡೆಯರು(ಸಂ) ನೆಲೆ ಪ್ರಕಾಶನ, ಸಿಂದಗಿ, ೧೯೯೩

ಬಸವರಾಜ್ ಎನ್., ಡೊಳ್ಳಿನ ಹಾಡು(ಸಂ), ಯಕ್ಷ ಪ್ರಕಾಶನ, ಮೈಸೂರು, ೧೯೭೮

ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ, ಹಾಲುಮತದ ಪುರಾಣವು, ಸಾ. ಬಂಕಾಪುರ, ಜಿ. ಧಾರವಾಡ ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೯

ಬಾಳಪ್ಪ ಎ.ಬಿ., ಕರ್ನಾಟಕ ಕುರುಬರ ಒಳಪಂಗಡಗಳು ಸಾಂಸ್ಕೃತಿಕ ಅಧ್ಯಯನ(ಅಪ್ರಕಟಿತ ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨

ಬಿರಾದಾರ ಬಿ.ಜಿ., ಕುರುಬರ ಗುರುಒಡೆಯರು ಸಾಂಸ್ಕೃತಿಕ ಅಧ್ಯಯನ, ವಿಕಾಸ ಪ್ರಕಾಶನ, ಎಂ.ಪಿ. ಪ್ರಕಾಶನಗರ, ಹೊಸಪೇಟೆ, ೨೦೧೦

ಬೋನಾ ಬಸವರಾಜ, ಹಾಲುಮತದ ಹುಚ್ಚು, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೦

ಭಾನುಮತಿ ವೈ.ಸಿ., ಸಿದ್ಧಮಂಕ ಚರಿತೆ, (ಸಂ) ಎಂ.ಎಂ. ಕಲಬುರ್ಗಿ, ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಮಠ, ಗದಗ, ೨೦೦೪

ಭಾಸ್ಕರ ಟಿ.ಎಂ., ಸುಡುಗಾಡು ಸಿದ್ಧರು: ಒಂದು ಸಾಂಸ್ಕೃತಿಕ ಅಧ್ಯಯನ, ಮುರುಗ ಪ್ರಕಾಶನ, ಗುಲಬರ್ಗಾ, ೨೦೦೦

ಭೈರವನ ಹಟ್ಟಿ ಎಂ.ಎಸ್., ಜಗದ್ಗುರು ಶ್ರೀ ರೇವಣಸಿದ್ಧರು, ಭಾರ್ಗವ ಮುದ್ರಣಾಲಯ, ಬೆಂಗಳೂರು, ೧೯೯೧

ಮಲ್ಲೇಪುರಂ. ಜಿ. ವೆಂಕಟೇಶ್, (ಸಂ) ಶಂಭಾ ಕೃತಿ ಸಂಪುಟ ಕರ್ಣಾಟಕ ಸಂಸ್ಕೃತಿ–೩,ಕನ್ನಡ ಪುಸ್ತಕ ಪ್ರಾದಿಕಾರ ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು, ೧೯೯೯

ಮೇಲಕಾರ ಎಸ್.ಕೆ., ಎಸ್.ಜಿ. ಚಲವಾದಿ, ಮುದ್ದೇಬಿಹಾಳ ತಾಲೂಕಿನ ಇತಿಹಾಸ ದರ್ಶನ (ಡೋಣಿಸಿರಿ) ಭಾರತ ಸಿಂಧುರಶ್ಮಿ ಪ್ರಕಾಶನ, ಧಾರವಾಡ, ೨೦೧೨

ಮೋಹನ್ ಜಿ.ಎಸ್., ಕನ್ನಡ–ತೆಲುಗು ಭಾಷಾ ಸಾಹಿತ್ಯ ಬಾಂಧವ್ಯ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೦೭

ಯರ್ರಪ್ಪ ಡಿ., ಅಲೆಮಾರಿ ಕುರುಬ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮

ರವೀಂದ್ರನಾಥ ಕೆ., ಕನ್ನಡ ದಾಖಲು ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ರಸ್ತಾಪುರ ಭೀಮಕವಿ ವಿರಚಿತ ಶ್ರೀ ರೇವಣಸಿದ್ಧೇಶ್ವರ ಲೀಲಾ, ಸಂಯುಕ್ತ ಹಾಲ್ಮತೋತ್ತೇಜಕ ಪುರಾಣವು(ಸಂ) ಭಾಗೂತನಯನವಿಲ್ಲ, ಶಶಿಕಲಾ ಪ್ರಕಾಶನ, ಗಾಂಧಿನಗರ, ಬೆಂಗಳೂರು, ೧೯೮೨

ರಾಜಶ್ರೀ ಪಾಟೀಲ, ಹಾಲುಮತ ಗುರು ಸರೂರು ಶಾಂತಮುತ್ತಯ್ಯ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೧೧

ರಾಮಣ್ಣ ಹೆಗ್ಗಡೆ ಎಂ., ಹಾಲುಮತ ಆರ್ಯ ಹೆಗ್ಗಡೆಗಳು, ಇಂದಿರಾ ಚಂದಿರಾ ಪ್ರಕಾಶನ, ಮೈಸೂರು, ೧೯೯೦

ರೇಖಾ ಎಸ್.ಟಿ., ಪಂಚ ಗಣಾಧೀಶ್ವರರ ಪವಾಡಗಳು: ಸಾಂಸ್ಕೃತಿಕ ಸಂಕಥನ, ತನುಮನ ಪ್ರಕಾಶನ, ಶ್ರೀರಾಂಪುರ ಬಡಾವಣೆ, ಮೈಸೂರು, ೨೦೧೪

ಲಕ್ಷ್ಮಣ್ ತೆಲಗಾವಿ, ಕರ್ನಾಟಕ ಪಾಳೇಗಾರರ ನ್ಯಾಯಾಡಳಿತ(ಸಂ) ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೦೮

ವೀರಣ್ಣ ದಂಡೆ, ಜನಪದ ಹಾಲುಮತ ಮಹಾಕಾವ್ಯ, (ಸಂ) ಕನ್ನಡ ಪುಸ್ತಕ ಪ್ರಾಧಿಕಾರ, ಪಂಪ ಮಹಾ ಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು, ೨೦೦೦

ವೃಷಬೇಂದ್ರಸ್ವಾಮಿ, ಎಸ್.ಎಂ., ಸೋಮಶೇಖರ ಇಮ್ರಾಪುರ(ಸಂ), ಜಾನಪದ ಸಾಹಿತ್ಯ ದರ್ಶನ: ಭಾಗ ೧೫(ಪುರಾಣ ಐತಿಹ್ಯ ಪವಾಡ ದಂತಕಥೆ), (ಸಂ) ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪

ಶಂಕರ ಶಿವಲಿಂಗ ಕುಂಬಾರ, ಹಾಲುಮತ ಪುರಾಣಗಳ ಭಿನ್ನಾಭಿಪ್ರಾಯಗಳು, (ಸಂ) ಬಸವಯೋಗಾಶ್ರಮ ಕಬ್ಬೂರು, ವಿದ್ಯಾನಿದಿ ಪ್ರಕಾಶನ, ಗದಗ ೨೦೦೬

ಶಂಕರ ಶಿವಲಿಂಗ ಕುಂಬಾರ, ಹಾಲುಮತದ ಸಿದ್ಧರಾಮ, (ಸಂ) ಬಸವಯೋಗಾಶ್ರಮ, ಕಬ್ಬೂರು, ತಾ. ಚಿಕ್ಕೋಡಿ, ಜಿ. ಬೆಳಗಾಂವ ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೬

ಶಂಕರ ಶಿವಲಿಂಗ ಕುಂಬಾರ, ಹಾಲುಮತದ ಮೂಲಗುರು ರೇವಣಸಿದ್ಧರು (ಸಂ) ಬಸವಯೋಗಾಶ್ರಮ, ಕಬ್ಬೂರ ತಾ. ಚಿಕ್ಕೋಡಿ, ಜಿ. ಬೆಳಗಾಂವ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೬-೦೭

ಶಂಕರ ಶಿ. ಕುಂಬಾರ, ಹಾಲುಮತದ ಶರಣರ ಚರಿತ್ರೆ ಹಾಗೂ ವಚನಗಳು, ವಿಜೇತ್ ಪ್ರಕಾಶನ, ಗದಗ, ೨೦೦೮

ಶಕುಂತಲಾ ಗೋಪಶೆಟ್ಟಿ, ರೇವಣಸಿದ್ಧರು ಒಂದು ಅಧ್ಯಯನ, ಅಪೂರ್ವ ಪ್ರಕಾಶನ, ರಾಯಚೂರು, ೨೦೦೬

ಶಿವಾನಂದ ಗುಬ್ಬಣ್ಣನವರ, ಕರ್ನಾಟಕದ ಕುರುಬರು, ಅಕ್ಷಯ ಪ್ರಕಾಶನ, ಧಾರವಾಡ, ೧೯೯೩

ಶ್ರೀ ಚನ್ನಬಸವ ಕವಿಯ ಹಾಲುಮತ ಪುರಾಣವು, ಪ್ರಕಾಶಕರು, ದಾವಣಗೆರೆ ತಾಲೂಕು, ಚಿಕ್ಕಬೂದಿಹಾಳ ಗ್ರಾಮದಲ್ಲಿರುವ ಶ್ರೀಮರಭಿನವ ರೇಣುಕ ಗುರುಕುಲ ಆಶ್ರಮದ ಸದ್ಭಕ್ತರು, ೧೮೮೧

ಶ್ರೀ ರೇವಣಸಿದ್ಧೇಶ್ವರ ಲೀಲಾ ಸಂಯುಕ್ತ ಹಾಲ್ಮತೋತ್ತೇಜಕ ಪುರಾಣ, ರಸ್ತಾಪುರ ಭೀಮಕವಿ, ಅಂಬಿಕಾ ಪ್ರಿಂಟರ್ಸ್, ಬೆಂಗಳೂರು, ೧೯೧೬

ಶ್ರೀರಾಮ ಇಟ್ಟಣ್ಣನವರ, ಬಿ.ಟಿ. ವಸ್ತ್ರದ, ಚನ್ನಪ್ಪ ಕಟ್ಟಿ, (ಸಂ), ಹಾಲುಕೆನೆ, ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ, ಬಿಜಾಪುರ, ೨೦೦೨

ಶ್ರೀರಾಮ ಇಟ್ಟಣ್ಣನವರ, ಹಾಲಹರವಿ, ಹಾಲುಮತ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನ, ಹೊಸಪೇಟೆ, ೨೦೧೫

ಸತ್ಯಾನಾಯಕ ಎಂ.ಎಂ., ಉತ್ತರ ಕರ್ನಾಟಕದ ಮದುವೆ ಸಂಪ್ರದಾಯಗಳು, ಚಂದ್ರಪ್ರಭಾ ಪ್ರಕಾಶನ, ಬಾಗಲಕೋಟೆ, ೨೦೦೦

ಸೂರ್ಯನಾಥ ಕಾಮತ್, ಭಾರತದ ಗ್ಯಾಸೆಟೆಯರ್ ಕರ್ನಾಟಕ ರಾಜ್ಯ, ವಿಜಾಪುರ ಜಿಲ್ಲೆ(ಪರಿಷ್ಕೃತ ಆವೃತ್ತಿ) ಪು(ಸಂ)

ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಶನ್ಸ್ ಸಂಪುಟ ೧೫, (ಸಂ) ಜಿ.ಎಸ್. ಗಾಮಿ ಅರ್ಕ್ಯಾಲಾಜಿಕಲ್ ಸರ್ವೇ ಆಫ್ ಇಂಡಿಯಾ, ೧೯೮೭

ಹನುಮಂತಯ್ಯ ವಿ.ಆರ್. (ಸಂ), ಕುರುಬರ ಚರಿತ್ರೆ, ಸುಧಾಕರ ಪ್ರತಿಭಾ ಪ್ರಕಾಶನ, ಎಚ್.ಐ.ಜಿ. ೨೨, ಎ ಅಂಡ್ ಬಿ ಬ್ಲಾಕ್, ಅಂದೋಲನವೃತ, ರಾಮಕೃಷ್ಣನಗರ, ಮೈಸೂರು, ೧೯೬೬

ಹಳ್ಳಿಕೇರಿ ಎಫ್.ಟಿ., (ಸಂ) ರಸ್ತಾಪುರ ಭೀಮಕವಿಯ ಹಾಲ್ಮತ್ತೋತ್ತೇಜಕ ಪುರಾಣ, ಪ್ರಸಾರಾಂಗ ಕ.ವಿ.ವಿ. ಹಂಪಿ, ೨೦೦೮

ಹಳ್ಳಿಕೇರಿ ಎಫ್.ಟಿ., ಹಾಲುಮತ ವ್ಯಾಸಂಗ-೧, (ಸಂ) ಪ್ರಸಾರಾಂಗ, ಕ.ವಿ.ವಿ. ಹಂಪಿ, ೨೦೦೯

ಹಳ್ಳಿಕೇರಿ ಎಫ್.ಟಿ., ಹಾಲುಮತ ವ್ಯಾಸಂಗ-೨, (ಸಂ) ಪ್ರಸಾರಾಂಗ, ಕ.ವಿ.ವಿ. ಹಂಪಿ, ೨೦೧೦

ಹಳ್ಳಿಕೇರಿ ಎಫ್.ಟಿ., ಹಾಲುಮತ ಅಧ್ಯಯನ-೧, ಪ್ರಸಾರಾಂಗ, ಕ.ವಿ.ವಿ. ಹಂಪಿ, ೨೦೧೦

ಹಳ್ಳಿಕೇರಿ ಎಫ್.ಟಿ., ಹಾಲುಮತದ ಅಧ್ಯಯನಗಳು(ಎಂ.ಎಂ. ಕಲಬುರ್ಗಿ ಅವರ ಲೇಖನಗಳ ಸಂಗ್ರಹ), (ಸಂ) ವಿಕಾಸ ಪ್ರಕಾಶನ, ಹೊಸಪೇಟೆ, ೨೦೧೦

ಹಳ್ಳಿಕೇರಿ ಎಫ್.ಟಿ., ಹಾಲುಮತ ವ್ಯಾಸಂಗ-೩, (ಸಂ) ಪ್ರಸಾರಾಂಗ, ಕ.ವಿ.ವಿ. ಹಂಪಿ, ೨೦೧೧

ಹಳ್ಳಿಕೇರಿ ಎಫ್.ಟಿ., ಹಾಲುಮತ ಸಂಸ್ಕೃತಿ-೧, ವಿಕಾಸ ಪ್ರಕಾಶನ, ಹೊಸಪೇಟೆ, ೨೦೧೧

ಹಳ್ಳಿಕೇರಿ ಎಫ್.ಟಿ., ಹಾಲುಮತ ವ್ಯಾಸಂಗ-೪ (ಸಂ) ಪ್ರಸಾರಾಂಗ ಕ.ವಿ.ವಿ. ಹಂಪಿ, ೨೦೧೨

ಹಳ್ಳಿಕೇರಿ ಎಫ್.ಟಿ. ರೇವಣಸಿದ್ಧ ಪರಂಪರೆ ಹಾಲುಮತ ವ್ಯಾಸಂಗ ೫, (ಸಂ) ಪ್ರಸಾರಾಂಗ ಕ.ವಿ.ವಿ. ಹಂಪಿ, ೨೦೧೪

ಹಳ್ಳಿಕೇರಿ ಎಫ್.ಟಿ., ಹಾಲುಮತ ಮಹಿಳಾ ಸಾಧಕರು(ಸಂ), ವಿಶ್ವಪಥ ಹಾಲುಮತ ಸಂಸ್ಕೃತಿ ಭಂಡಾರ ಮಾಲಿಕ, ಶ್ರೀ ಕಾಗಿನೆಲೆ ಕನಕಗುರು ಪೀಠ, ಕಲಬುರ್ಗಿ ವಿಭಾಗ, ರಾಯಚೂರು, ೨೦೧೫



ಸರೂರಿನ ಶಾಸನ



ರೇವಣಸಿದ್ಧೇಶ್ವರ(ಮಲ್ಲಿಕಾರ್ಜುನ)ನ ದೇವಾಲಯ, ಸರೂರು



ಸರೂರ ಶಾಂತಮುತ್ತಯ್ಯನ ಗದ್ದುಗೆ



ರೇವಣಸಿದ್ಧೇಶ್ವರನ ದೇವಾಲಯ, ಸರೂರು



ಶ್ರೀ ಗುರು ಸಿದ್ಧಲಿಂಗೇಶ್ವರಸ್ವಾಮಿ ಮಠ, ಚಿಂತಕುಂಟ, ಹಾಲೂರು ಮಂಡಲ



ರೇವಣಸಿದ್ಧನ ಮೂರ್ತಿ ಶಿಲ್ಪ, ಹುಲ್ಲೂರು, ಚಿತ್ರದುರ್ಗ ತಾಲೂಕು



ರೇವಣಸಿದ್ಧ, ಹುಳಿಯಾರು, ಚಿಕ್ಕನಾಯಕನಹಳ್ಳಿ ತಾಲೂಕು



ರೇವಣಸಿದ್ಧೇಶ್ವರನ ಮಠ, ಹಂದನಕೆರೆ, ಚಿಕ್ಕನಾಯಕನಹಳ್ಳಿ ತಾಲೂಕು



ಸಿದ್ಧಲಿಂಗೇಶ್ವರಸ್ವಾಮಿ ಮಠ, ಹುಲ್ಲೂರು, ಚಿತ್ರದುರ್ಗ ತಾಲೂಕು



ರೇವಣಸಿದ್ಧ, ಗೋವಿಂದವಾಡ



ರೇವಣಸಿದ್ಧನ ಮಠ, ಚಿಕ್ಕನಾಯಕನಹಳ್ಳಿ



ಕಳಸಗಳ ಮೆರವಣಿಗೆ, ಸರೂರು



ಕುಂಬಗಳ ಮೆರವಣಿಗೆ, ಸರೂರು



ರೇವಣಸಿದ್ದ ಮಠ, ಸೀರ್ಪಿ, ಬೆಳಗುಪ್ಪ ಮಂಡಲ



ರೇವಣಸಿದ್ಧ ಮಠ, ದೊಡ್ಡೇರಿ, ಚಳ್ಳಕೆರೆ ತಾಲ್ಲೂಕು



ರೇವಣಸಿದ್ಧ ಮಠ, ಹರ್ತಿಕೋಟೆ, ಹಿರಿಯೂರು ತಾಲ್ಲೂಕು



ರೇವಣಸಿದ್ಧ ಮಠ, ಚಿಂತಕುಂಟ



ರೇವಣಸಿದ್ಧ ಮಠ, ಲಕ್ಷ್ಮಂಪಲ್ಲಿ



ರೇವಣಸಿದ್ಧ ಮಠ, ಗೋವಿಂದವಾಡ